ಮಹಿಳಾ ಅಭಿವೃದ್ಧಿಯನ್ನು ಕುರಿತ ಸರ್ಕಾರಿ ಕಾರ್ಯಕ್ರಮಗಳು

ಒಂದು ಸ್ತ್ರೀವಾದಿ ಅವಲೋಕನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಮಹಿಳಾ ಅಧ್ಯಯನ ವಿಭಾಗಕ್ಕೆ ಸಾದರಪಡಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಕಾಂಚನಾ ವಿ.ಗೌಡರ್

ಮಾರ್ಗದರ್ಶಕರು
ಡಾ.ಎಚ್.ಎಸ್.ಶ್ರೀಮತಿ
ಪ್ರಾಧ್ಯಾಪಕರು(ನಿ)

ಮಹಿಳಾ ಅಧ್ಯಯನ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ೫೮೩ ೨೭೬
೨೦೧೪



ಮಹಿಳಾ ಅಭಿವೃದ್ಧಿಯನ್ನು ಕುರಿತ ಸರ್ಕಾರಿ ಕಾರ್ಯಕ್ರಮಗಳು
ಒಂದು ಸ್ತ್ರೀವಾದಿ ಅವಲೋಕನ

(ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಾದರಪಡಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಕಾಂಚನಾ ವಿ.ಗೌಡರ್

ಮಾರ್ಗದರ್ಶಕರು
ಡಾ.ಎಚ್.ಎಸ್.ಶ್ರೀಮತಿ
ಪ್ರಾಧ್ಯಾಪಕರು(ನಿ)

ಮಹಿಳಾ ಅಧ್ಯಯನ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೪

ಘೋಷಣಾ ಪತ್ರ

ಡಾ.ಎಚ್.ಎಸ್.ಶ್ರೀಮತಿ ಅವರ ಮಾರ್ಗದರ್ಶನದಲ್ಲಿ **ಮಹಿಳಾ ಅಭಿವೃದ್ಧಿಯನ್ನು ಕುರಿತ ಸರ್ಕಾರಿ ಕಾರ್ಯಕ್ರಮಗಳು: ಒಂದು ಸ್ತ್ರೀವಾದಿ ಅವಲೋಕನ** ಎಂಬ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ **ಮಹಿಳಾ ಅಧ್ಯಯನ ವಿಭಾಗಕ್ಕೆ** ಸಾದರಪಡಿಸುತ್ತಿದ್ದೇನೆ. ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲ. ಇದು ನನ್ನ ಸ್ವತಂತ್ರವಾದ ಸಂಶೋಧನಾ ಅಧ್ಯಯನವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ
ದಿನಾಂಕ: 19-04-2014

ಕಾಂಚನಾ ವಿ.ಗೌಡರ್
ಸಂಶೋಧಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮಾರ್ಗದರ್ಶಕರ ಪ್ರಮಾಣ ಪತ್ರ

ಕಾಂಚನಾ ವಿ.ಗೌಡರ್ ಅವರು ನನ್ನ ಮಾರ್ಗದರ್ಶನದಲ್ಲಿ **ಮಹಿಳಾ ಅಭಿವೃದ್ಧಿಯನ್ನು ಕುರಿತ ಸರ್ಕಾರಿ ಕಾರ್ಯಕ್ರಮಗಳು: ಒಂದು ಸ್ತ್ರೀವಾದಿ ಅವಲೋಕನ** ಎಂಬ ಸಂಶೋಧನಾ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಮಹಿಳಾ ಅಧ್ಯಯನ ವಿಭಾಗಕ್ಕೆ** ಪಿಎಚ್.ಡಿ.ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ, ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ಎಚ್.ಎಸ್.ಶ್ರೀಮತಿ
ಮಾರ್ಗದರ್ಶಕರು ಹಾಗೂ ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: 19-04-2014.

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಗುರಿ, ಮಹತ್ವ ಮತ್ತು ವೈಧಾನಿಕತೆ

೧.೧. ಪ್ರಸ್ತಾವನೆ

೧.೨. ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳು, ಸಮಸ್ಯೆಗಳು ಮತ್ತು ಸವಾಲುಗಳು

೧.೩. ಅಧ್ಯಯನದ ಸಮೀಕ್ಷಾ ವರದಿ

೧.೪. ಅಧ್ಯಯನದ ಉದ್ದೇಶಗಳು

೧.೫. ಅಧ್ಯಯನದ ಗುರಿ

೧.೬. ಅಧ್ಯಯನದ ವ್ಯಾಪ್ತಿ

೧.೭. ಸಂಶೋಧನಾ ವೈಧಾನಿಕತೆ

೧.೮. ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯ ಅತ್ಯವಶ್ಯಕತೆ

೧.೯. ಅಧ್ಯಯನ ವಿಭಾಗೀಕರಣ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಗುರಿ, ಮಹತ್ವ ಮತ್ತು ವೈಧಾನಿಕತೆ

೧.೧. ಪ್ರಸ್ತಾವನೆ

ಭಾರತದಲ್ಲಿ ಮಹಿಳಾ ಅಭಿವೃದ್ಧಿಗೆ ಸಂಬಂದಿಸಿದ ಹೋರಾಟಗಳು, ಕಾರ್ಯಯೋಜನೆಗಳು, ನೀತಿ ಸಂಹಿತೆಗಳು ಚಿಂತನೆಗಳು ಇಂದು ನಿನ್ನೆಯದಲ್ಲ. ಹಲವು ದಶಕಗಳಿಂದಲೇ ಮಹಿಳಾ ಅಭಿವೃದ್ಧಿ ಯೋಜನೆಗಲ್ಲಿ ಹಲವಾರು ಬದಲಾವಣೆಗಳನ್ನು ಅಳವಡಿಸುತ್ತಿರುವುದನ್ನು ನಾವು ಕಾಣುತ್ತಲಿದ್ದೇವೆ. ಪ್ರಸ್ತುತವಾಗಿ ಮಹಿಳಾ ಅಭಿವೃದ್ಧಿಗಾಗಿ ಸರ್ಕಾರ ರೂಪಿಸುವ ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಅಧ್ಯಯನದ ವಿಷಯವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಸರ್ಕಾರದ ಮಹಿಳಾ ಸಂಬಂಧಿತ ಅಭಿವೃದ್ದಿ ಯೋಜನೆಗಳ ಸೈದ್ಧಾಂತಿಕತೆ, ಕಾರ್ಯವಿಧಾನ ಹಾಗೂ ಮೌಲ್ಯಮಾಪನ ವನ್ನು ಗಂಭಿರವಾಗಿ ಗುರುತಿಸಿ, ಮಹಿಳಾ ಅಭಿವೃಧ್ಧಿಗೆ ಉಂಟಾಗುತ್ತಿರುವ ಲಿಂಗಸಂಬಂಧಿ ಸಮಸ್ಯೆಗಳನ್ನು ಗುರುತಿಸುವುದು, ಅವಲೋಕಿಸಿ ಅಧ್ಯಯನಕ್ಕೆ ಒಳಪಡಿಸುವುದೇ ಮುಖ್ಯ ಸಾರಾಂಶವಾಗಿದೆ. ಸಂಪೂರ್ಣ ಅಧ್ಯಯನವು ಸ್ತ್ರೀವಾದಿ ದೃಷ್ಟಿಕೋನದಿಂದ ವಿಶ್ಲೇಷಿಸಿ ಅಧ್ಯಯನ ಮಾಡಲಾಗುತ್ತಿದೆ. ಸರ್ಕಾರದ ಯೋಜನಾ ವಿಧಾನ ಮಹಿಳಾ ಗುಂಪನ್ನು ಗಂಭೀರವಾಗಿ ಗ್ರಹಿಸಿರುವಂತದ್ದೆನೋ ನಿಜ ಸಂಗತಿ ಆದರೂ ಇಂದಿಗೂ ಮಹಿಳಾ ಬದುಕಿನ ಮೇಲೆ ಲಿಂಗ ಅಸಮಾನತೆಯ ಛಾಯೆಗಳು ಬೆಂಬಿಡದೆ ಕಾಡುತ್ತಿರುವ ಸಂಗತಿಯೂ ಅಷ್ಟೇ ನಿಜ. ಜೊತೆಗೆ ನಿರೀಕ್ಷಿತ ಮಟ್ಟದಲ್ಲಿಯೂ ಮಹಿಳಾ ಸಬಲೀಕರಣವನ್ನು ಸಾಧಿಸಲಾಗದೆ ಸೋಲಿನ ಸೂತಕದಲ್ಲಿ ಇರುವಂತ ಪರಿಸ್ಥಿತಿಯಾಗಿದೆ. ಈ ಎಲ್ಲಾ ಸಮಸ್ಯೆಗಳಿಗೆ ಪೂರಕವಾಗಿ ಇಲ್ಲಿ ಹಲವಾರುಪ್ರಶ್ನೆಗಳು ನಮ್ಮ ಮುಂದೆ ಕಾಡುತ್ತಿವೆ. ಯಾಕೆ ಇಂದಿಗೂ ಮಹಿಳಾ ಸಮಸ್ಯೆಗಳನ್ನು ನಿವಾರಿಸಲು ಸಾಧ್ಯವಾಗುತ್ತಿಲ್ಲ? ಯಾವ ಸಮಸ್ಯೆಗಳನ್ನು ಇಲ್ಲಿ ನಿರ್ಲಕ್ಷಿಸಲಾಗುತ್ತಿದೆ? ಯಾವ ಹಂತದಲ್ಲಿ ಮಹಿಳಾ ಸೂಕ್ಷ್ಮಾತಿ ಸೂಕ್ಷ್ಮ ಸಂಗತಿಗಳು ಮೌನವಾಗಿ ಅಗೋಚರವಾಗುತ್ತಿವೆ? ಇಂತಹ ಹಲವಾರು ಪ್ರಶ್ನೆಗಳನ್ನು

ಹೊತ್ತು ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಒಂದು ಸ್ತ್ರೀವಾದಿ ಅವಲೋಕನವನು ಇಲ್ಲಿ ಅಧ್ಯಯನದ ವಿಷಯವಾಗಿ ಗುರುತಿಸಿಕೊಂಡಿದ್ದೇವೆ.

ಸಾಮಾಜದಲ್ಲಿ ಯಾವುದೆ ಕ್ಷೇತ್ರದಲ್ಲಿ ನೋಡಿದರು ಮಹಿಳೆಯರು ಇಂದಿಗೂ ಸಬಲತೆಯ ದಿಟ್ಟ ಪರಧಿಯನ್ನು ಸಮರ್ಥವಾಗಿ ತಲುಪಲು ಸಾಧ್ಯವಾಗುತ್ತಿಲ್ಲ. ಇವುಗಳಿಗೆ ಕಾರಣ ಅಭಿವೃದ್ಧಿ ಯೋಜನಾ ವಿಧಾನ, ಕಾರ್ಯವಿಧಾನ ಮತ್ತು ಮೌಲ್ಯಮಾಪನದಲ್ಲಿ ಇರುವಂತಹ ಲಿಂಗ ತಾರತಮ್ಯ ಮೌಲ್ಯಗಳು,ಲಿಂಗ ಪೂರ್ವಗ್ರಹಗಳು ಒಂದಲ್ಲ ಒಂದು ವಿಧದಲ್ಲಿ ಮಹಿಳಾ ಬದುಕಿನ ಚಹರೆಯನ್ನು ಮತ್ತು ಮಹಿಳಾ ಅಭಿವೃದ್ಧಿಯನ್ನು ಮೊಟಕುಗೊಳಿಸುತ್ತವೆ. ಇವುಗಳಿಗೆ ಪ್ರತಿಬಿಂಬವಾಗಿ ಸರಿಸಾಟಿ ಎಂಬಂತೆ ಇಂದಿಗೂ ಪ್ರಪಂಚದಾದ್ಯಂತ ಕಂಡುಬರುತ್ತಿರುವ ಮಹಿಳಾ ದೌರ್ಜನ್ಯ, ಕೌಟುಂಬಿಕ ಹಿಂಸೆಗಳು, ಆರ್ಥಿಕ ಅಭಿವೃದ್ಧಿಯಲ್ಲಿನ ಅಸಮಾನತೆಗಳು, ಶೈಕ್ಷಣಿಕ ಅಡೆತಡೆಗಳು, ಮಹಿಳಾ ಆರೋಗ್ಯಿಕ ಸಮಸ್ಯೆಗಳು ಇತರೆ ಮುಂತಾದವುಗಳನ್ನು ಕಾಣಬಹುದಾಗಿದೆ. ಸಮಾಜದಲ್ಲಿನ ಲಿಂಗ ಅಸಮಾನತೆಗೆ ಕಾರಣ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪಿತೃಮೌಲ್ಯಗಳೇ ಆಗಿವೆ.

೧.೨. ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳಲ್ಲಿ ಪ್ರಸ್ತುತ ಸಂದರ್ಭದಲ್ಲಿ ಕಂಡುಬರುವ ಸಮಸ್ಯೆಗಳು ಮತ್ತು ಸವಾಲುಗಳು

ಹಲವಾರು ವರ್ಷಗಳಿಂದಲೇ ಸೈದ್ಧಾಂತಿಕವಾಗಿಯೆವಾಗಿ ಸರ್ಕಾರಿ ಮಹಿಳಾ ಅಭಿವೃದ್ಧಿ ಯೊಜನೆಗಳು ಬದಲಾವಣೆಗೊಳ್ಳಬೆಕು ಎಂಬುವ ಚಿಂತನೆ ಬೆಳೆದು ಬರುತ್ತಿದೆ. ಆದರೂ ಇಂದಿಗೂ ಮಹಿಳೆಯರು ಸಮಸ್ಯೆಗಳಿಂದ ಹೊರಬರದಿರುವುದು ವಿಪರ್ಯಾಸವೇ ಸರಿ. ಹಳೆಯ ಮುಖವಾಡವನ್ನು ಹೊಸ ಲೇಪನದೊಂದಿಗೆ ಧರಿಸುವಂತೆ ಮಹಿಳಾ ಲಿಂಗಸಂಬಂಧಿ ಸಮಸ್ಯೆಗಳು ಸಾಮಾಜಿಕ ಜನ ಜೀವನದಲ್ಲಿ ಕಂಡುಬರುತ್ತಿದೆ. ಈ ನಿಟ್ಟಿನಲ್ಲಿ ಸಾಮಾಜಿಕ ಜೀವನದ ಪ್ರತಿ ಹಂತದಲ್ಲಿಯೂ ಪುರುಷಾದಿಕಾರತ್ವ ಬೇರೂರಿದೆ.[೨] ಇದನ್ನು ಹಲವಾರು ನಿದರ್ಶನಗಳನ್ನು ನೋಡುವುದರ ಮುಖಾಂತರ ನಾವು ತಿಳಿಯಬಹುದಾಗಿದೆ.

ಸರ್ಕಾರ ಮಹಿಳಾ ಅಭಿವೃದ್ಧಿಯನ್ನು ಪ್ರತಿ ಕ್ಷೇತ್ರದಲ್ಲಿಯೂ ವಿಷಶವಾಗಿ ಗುರುತಿಸಿ ವಿಂಗಡಿಸಿ ಯೋಜನೆಗಳನ್ನು ರೂಪಿಸುತ್ತಿದೆ. ಮಹಿಳಾ ಅಭಿವೃದ್ಧಿಗೆ ಸಂಬಂಧಿಸಿದಂತೆ ನೋಡುವುದಾದರೆ

ಮಹಿಳಾ ಅಭಿವೃದಿ ಮತ್ತು ಶಿಕ್ಷಣ

ಮಹಿಳಾ ಶೈಕ್ಷಣಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರಿ ಯೋಜನೆಗಳನ್ನು ನೋಡಿದಾಗ ಹೆಣ್ಣು ಮಕ್ಕಳಿಗೆ ಸರ್ಕಾರವು ೧ ರಿಂದ ೧೦ನೇ ತರಗತಿಯವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವುದರ ಜೊತೆಗೆ ಉಚಿತ ಶಾಲಾ ಸಮವಸ್ತ್ರ, ಸೈಕಲ್ಲು, ವಿದ್ಯಾರ್ಥಿವೇತನಗಳನ್ನು ಕೊಟ್ಟು ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತದೆ. ಇದರ ಜೊತೆಗೆ ಮಹಿಳೆಯರನ್ನು ಔದ್ಯೋಗಿಕವಾಗಿ

ಅಭಿವೃದ್ಧಿ ಪಡಿಸಲು ಶಿಕ್ಷಣದಲ್ಲಿ ಔದ್ಯೋಗಿಕ ತರಬೇತಿ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದೆ. ಶಿಕ್ಷಣ ಕ್ಷೇತ್ರಕ್ಕೆ ಮಹಿಳೆಯರನ್ನು ಹೆಚ್ಚಾಗಿ ಆಕರ್ಷಿಸಲು ಸರ್ಕಾರವು ಹಲವಾರು ತಂತ್ರಗಳನ್ನು ಕೈಗೊಳ್ಳುತ್ತಿದೆಯಾದರೂ ಇಂದಿನ ಸಾಕ್ಷರತಾ ಪ್ರಮಾಣದಲ್ಲಿ ಗಂಡು-ಹೆಣ್ಣು ಮಕ್ಕಳ ಶೈಕ್ಷಣಿಕ ಅಂಕಿ-ಅಂಶಗಳಲ್ಲಿ ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಗಂಡು ಮಕ್ಕಳ ಶೈಕ್ಷಣಿಕ ಸರಾಸರಿಯು ಹೆಣ್ಣು ಮಕ್ಕಳ ಶೈಕ್ಷಣಿಕ ಸರಾಸರಿಗಿಂತ ಹೆಚ್ಚಾಗಿದೆ. ಒಂದು ಅಂದಾಜಿನ ಪ್ರಕಾರ ಒಟ್ಟು ೨೪೦ ಮಿಲಿಯನ್ ಭಾರತೀಯ ಮಹಿಳೆಯರಲ್ಲಿ ೧೮% ಪ್ರತಿಶತ ಮಹಿಳೆಯರಿಗೆ ಮಾತ್ರ ಓದು ಬರಹ ಬರುತ್ತದೆ. ಹದಿನೈದು ವರ್ಷದ ಮೇಲ್ಪಟ್ಟ ಹೆಣ್ಣು ಮಕ್ಕಳಲ್ಲಿ ೪೮% ಪ್ರತಿಶತ ಹೆಣ್ಣು ಮಕ್ಕಳು ಶಿಕ್ಷಣಕ್ಕೆ ಮುಖಮಾಡುತ್ತಿದ್ದಾರೆ.[೩]

ಭಾರತ ಸಂವಿಧಾನದಲ್ಲಿ ಪ್ರತಿಯೊಬ್ಬ ನಾಗರೀಕರೂ ೧೪ ವರ್ಷದವರೆಗೆ ಕಡ್ಡಾಯ ಶಿಕ್ಷಣವನ್ನು ಪಡೆಯಬೇಕೆಂದು ಉಲ್ಲೇಖಿಸಲಾಗಿದೆ. ಆದರೆ ಇಂದು ಎಲ್ಲಾ ನಾಗರೀಕರಿಗೂ ಕಡ್ಡಾಯ ಮತ್ತು ಉಚಿತ ಶಿಕ್ಷಣದ ಸೌಲಭ್ಯಗಳು ದೊರೆಯುತ್ತಿಲ್ಲ. ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಶಾಲೆಬಿಡುತ್ತಾರೆ. ಶಾಲೆ ಬಿಡುವ ಹೆಣ್ಣು ಮಕ್ಕಳ ಸಂಖ್ಯೆ ಇಂದು ಹೆಚ್ಚುತ್ತಿದೆ. ಹೆಣ್ಣು ಮಕ್ಕಳು ಶಾಲೆ ಬಿಡುವುದನ್ನು ಅವರ ಪೋಷಕರು ಸಮರ್ಥಿಸಿಕೊಂಡು ಹಲವಾರು ಸಮಸ್ಯೆಗಳ ಕಾರಣದಿಂದ ಶಾಲೆಯನ್ನು ಬಿಡಿಸಿರುವುದಾಗಿ ಹೇಳುತ್ತಾರೆ. ಸರ್ಕಾರವು ಈ ಎಲ್ಲಾ ಸಮಸ್ಯೆಗಳಿಗೆ ಸ್ಪಂದಿಸಿ ಹೆಣ್ಣು ಮಕ್ಕಳನ್ನು ಪುನಃ ಶಾಲೆಗೆ ದಾಖಲಾಗುವಂತೆ ಮಾಡಲು ಸರ್ವಶಿಕ್ಷಣ ಅಭಿಯಾನದ ಮೂಲಕ ಉಚಿತ ಶಿಕ್ಷಣ, ಉಚಿತ ಪುಸ್ತಕ-ಬ್ಯಾಗ್, ವಿದ್ಯಾರ್ಥಿ ವೇತನ, ಉಚಿತ ಸಮವಸ್ತ್ರ ಮತ್ತು ಸೈಕಲ್ಲುಗಳನ್ನು ನೀಡುವುದರ ಜೊತೆಗೆ ಮಧ್ಯಾಹ್ನ ಬಿಸಿಯೂಟ ವ್ಯವಸ್ಥೆಯನ್ನು ಮಾಡಿದೆ. ಆದರೆ ಈ ಯೋಜನೆಯ ಉತ್ತಮ ಗುಣಮಟ್ಟ ಕಾಯ್ದುಕೊಳ್ಳುವಲ್ಲಿ ವಿಫಲವಾಗಿದೆ. ಜೊತೆಗೆ ಈ ಸೌಲಭ್ಯಗಳು ಯಶಸ್ವಿಯಾಗಿ ಎಲ್ಲೂ ಲಭ್ಯವಾಗುತ್ತಿಲ್ಲ. ಹೀಗಾಗಿ ಸರ್ಕಾರದ ಈ ಯೋಜನೆಯು ವಿಫಲವಾಗಿದೆ. ಇನ್ನೊಂದೆಡೆ ಶಾಲೆಗಳು ಸರಿಯಾದ ಕಟ್ಟಡ ಮತ್ತು ಕೊಠಡಿಗಳ ಸಮಸ್ಯೆಗಳನ್ನು ಎದುರಿಸುತ್ತಿದೆ. ಜೊತೆಗೆ ಶಾಲೆಗಳು ಮಕ್ಕಳ ಮನೆಯಿಂದ ದೂರವಿರುವುದರಿಂದಾಗಿ ತಂದೆ-ತಾಯಿಗಳು ತಮ್ಮ ಹೆಣ್ಣು ಮಕ್ಕಳನ್ನು ದೂರದ ಶಾಲೆಗೆ ಕಳುಹಿಸಲು ಹಿಂಜರಿಯುತ್ತಾರೆ. ಅಲ್ಲದೇ ಮಾಧ್ಯಮಿಕ ಶಿಕ್ಷಣದ ಹಂತದಲ್ಲಿ ಮಹಿಳಾ ಶಿಕ್ಷಕಿಯರು ಇಲ್ಲದಿರುವುದರಿಂದಾಗಿಯೂ ಸಹ ಪೋಷಕರು ತಮ್ಮ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಲು ಒಪ್ಪುವುದಿಲ್ಲ. ಈ ಎಲ್ಲಾ ಸಮಸ್ಯೆಗಳಿಗೆ ಸರ್ಕಾರವು ಸೂಕ್ತ ಪರಿಹಾರ ಕಂಡುಹಿಡಿಯುವಲ್ಲಿ ಯಶಸ್ವಿಯಾದರೂ ಸಹ ಅದು ಜಾರಿಗೊಳ್ಳುವಲ್ಲಿ ವಿಫಲವಾಗುತ್ತಿದೆ.

ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ, ಸಮವಸ್ತ್ರ, ಸೈಕಲ್ಲುಗಳು, ಉನ್ನತ ಶಿಕ್ಷಣದ ಅವಕಾಶಗಳನ್ನು ಸರ್ಕಾರ ಮಹಿಳೆಯರಿಗೆ ಒದಗಿಸಿಕೊಟ್ಟಿದೆ, ಕೊಡುತ್ತಿದೆ. ಉದ್ಯೋಗವನ್ನು ಪ್ರಮುಖವಾಗಿ ಗುರುತಿಸಿಕೊಂಡು ಶೈಕ್ಷಣಿಕ ತರಬೇತಿಗಳನ್ನು ನೀಡಲಾಗುತ್ತಿದೆ. ಹೆಣ್ಣು ಮಕ್ಕಳನ್ನು ಶಿಕ್ಷಣ ಕ್ಷೇತ್ರಕ್ಕೆ

ಆಕರ್ಷಿಸಲು ಹಲವಾರು ಕಾರ್ಯತಂತ್ರಗಳನ್ನು ಕೈಗೊಳ್ಳಲಾಗಿದೆ. ಆದರೂ ಇಂದಿನ ಹೆಣ್ಣು ಮಕ್ಕಳ ಸಾಕ್ಷರತಾ ಪ್ರಮಾಣದಲ್ಲಿ ವ್ಯತ್ಯಾಸವಿದೆ. ಹೆಣ್ಣು-ಗಂಡಿನ ಶಿಕ್ಷಣದ ಪ್ರಮಾಣಗಳಲ್ಲಿ ವ್ಯತ್ಯಾಸಗಳನ್ನು ನೋಡಬಹುದಾಗಿದೆ. ಇದೆಲ್ಲದರ ಹಿಂದಿನ ಕಾರಣಗಳು ಎಂದರೆ ಸಮುದಾಯದಲ್ಲಿನ ಪ್ರಧಾನ ಮೌಲ್ಯಗಳು, ಮದುವೆ, ಕುಟುಂಬ ಎನ್ನುವ ಅಂಶಗಳು ಬಂದಾಗ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಿರ್ಧಾರಗಳು ಬದಲಾಗುತ್ತವೆ. ಇದಕ್ಕೆ ಕಾರಣ ಇಂದಿಗೂ ಸಮುದಾಯದಲ್ಲಿರುವ ಪಿತೃ ಪ್ರಧಾನ ಮೌಲ್ಯಗಳು, ಮಹಿಳೆಯರ ಶಿಕ್ಷಣವನ್ನು ನಿಯಂತ್ರಿಸುತ್ತಿವೆ ಮತ್ತು ನಿರ್ಧರಿಸುತ್ತಿವೆ. ಇಂತಹ ಸಂಗತಿಗಳನ್ನು ಪ್ರಮುಖವಾಗಿ ಗುರುತಿಸಿ ರೂಪಿತವಾದ ಯೋಜನೆಗಳು, ಕಾರ್ಯನೀತಿಗಳು ಇಂದಿನ ದಿನಗಳಲ್ಲಿ ಮಹಿಳಾ ಶಿಕ್ಷಣಕ್ಕೆ ಇರುವ ಅವಕಾಶಗಳಿಗೆ ಭಿನ್ನ ತಿರುವುಗಳನ್ನು ತಂದುಕೊಡುತ್ತಿವೆ. ಶಿಕ್ಷಣ ಪಡೆದ ಹುಡುಗಿಯೊಂದಿಗೆ ಮದುವೆ, ಉದ್ಯೋಗಸ್ಥ ಹೆಂಡತಿ, ಕುಟುಂಬಕ್ಕೆ ಹಣಕಾಸಿನ ನೆರವನ್ನು ಒದಗಿಸಲು ಹಾಗೂ ಉದ್ಯೋಗದ ಕ್ಷೇತ್ರದಲ್ಲಿ ಯಾವುದೇ ತಕರಾರುಗಳನ್ನು ತೆಗೆಯದೆ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಾರೆ ಎನ್ನುವ ಹಿನ್ನಲೆಯಲ್ಲಿ ದೊರಕುತ್ತಿರುವ ಉದ್ಯೋಗದ ಅವಕಾಶಗಳು, ಇವೆಲ್ಲವೂ ಪುನಃ ಮಹಿಳಾ ಶಿಕ್ಷಣದಲ್ಲಿ ಮೂಡಿರುವ ಅಸಮಾನತೆಯ ಎಳೆಗಳೇ ಆಗಿವೆ. ಈ ನಿಟ್ಟಿನಲ್ಲಿ ಸರ್ಕಾರ ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಪರಿಶೀಲಿಸ ಬೇಕಾಗಿದೆ. ಇಂತಹ ಹಲವಾರು ಸಮಸ್ಯೆಗಳು ಲಿಂಗ ಅಸಮಾನತೆಯ ನೆಲೆಯಲ್ಲಿರುವಂತಹವುಗಳನ್ನು ಸಮಾಜದಲ್ಲಿ ಕಾಣಬಹುದು. ಅವುಗಳನ್ನು ಗಂಭೀರವಾಗಿ ಗುರುತಿಸಿ ಲಿಂಗ ನೀರಪೇಕ್ಷ ನೆಲೆಯಲ್ಲಿ ಯೋಜನೆಗಳು ರೂಪುಗೊಳ್ಳಬೇಕು. ಸರ್ಕಾರವುಈ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕಾರ್ಯಯೋಜನೆಗಳನ್ನು ಅಳವಡಿಸಬೇಕು.

ಇಂದು ಹೆಣ್ಣು ಮಕ್ಕಳು ಉನ್ನತ ಶಿಕ್ಷಣವನ್ನು ಪಡೆಯುವುದು ಕಡಿಮೆ. ಅದರಲ್ಲೂ ವಿಜ್ಞಾನ, ತಂತ್ರಜ್ಞಾನ, ಎಂಜಿನೀಯರಿಂಗ್, ವೈದ್ಯಕೀಯ ರಂಗಗಳಿಗೆ ಮಹಿಳೆಯರ ಸೇರ್ಪಡೆ ಕಡಿಮೆ. ಏಕೆಂದರೆ ಹೆಣ್ಣು ಮಕ್ಕಳಿಗೆ ವಿಜ್ಞಾನ, ತಂತ್ರಜ್ಞಾನ ಕಷ್ಟದ ವಿಷಯಗಳು. ಅವರಿಗೆ ಅದನ್ನು ಓದಲು ಸಾಧ್ಯವಿಲ್ಲ ಎಂಬ ಮನೋಭಾವ ನಮ್ಮಲ್ಲಿದೆ. ಆದರೆ ಹೆಣ್ಣು ಮಕ್ಕಳಿಗೆ ಈ ಕ್ಷೇತ್ರಗಳ ಬಗ್ಗೆ ಮಾಹಿತಿ ನೀಡಿ ಸೂಕ್ತ ಅವಕಾಶ ಕಲ್ಪಿಸಿದರೆ ಅವರೂ ಸಹ ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಾಧನೆ ಮಾಡಬಲ್ಲರು. ಆದರೆ ಸರ್ಕಾರವು ಅವರಿಗೆ ಸರಿಯಾದ ಪ್ರೋತ್ಸಾಹ, ಸಹಾಯ ಮತ್ತು ಅಗತ್ಯ ತರಬೇತಿಗಳನ್ನು ನೀಡದೇ ಇರುವುದರಿಂದಾಗಿ ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕೆ ಹಿನ್ನಡೆಯಾಗಿದೆ. ಹೀಗಾಗಿ ಮಹಿಳೆಯರು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆಯನ್ನು ಮಾಡಲಾಗುತ್ತಿಲ್ಲ. ಸಂವಿಧಾನದಲ್ಲಿರುವ ಸಮಾನ ಶಿಕ್ಷಣದ ಹಕ್ಕುಗಳನ್ನು ಮಹಿಳೆಯರು ಪಡೆದುಕೊಂಡಾಗ ಮಾತ್ರ ಅವರ ಉನ್ನತ ಶಿಕ್ಷಣ ಕನಸು ನನಸಾಗುತ್ತದೆ. ಇದಕ್ಕಾಗಿ ಸರ್ಕಾರವು ಸೂಕ್ತ ರೀತಿಯ ಯೋಜನೆಗಳನ್ನು ಜಾರಿಗೆ ತರುವ ಅವಶ್ಯಕತೆ ಇದೆ.

ಹೆಣ್ಣು ಮಕ್ಕಳ ಭವಿಷ್ಯಕ್ಕೆ ಉಪಯೋಗವಾಗಲೆಂದು ಸರ್ಕಾರವು ಭಾಗ್ಯಲಕ್ಷ್ಮಿ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯ ಮೂಲಕ ಹೆಣ್ಣು ಮಕ್ಕಳಿಗೆ ಒಂದು ಲಕ್ಷ ರೂಪಾಯಿ ಠೇವಣಿ ಹಣವನ್ನು ನೀಡುವುದರ ಮೂಲಕ ಹೆಣ್ಣು ಮಕ್ಕಳ ಜನನವನ್ನು ಪ್ರೋತ್ಸಾಹಿಸುವುದು. ಇದರಿಂದಾಗಿ ಹೆಣ್ಣು ಮಕ್ಕಳು ಹೊರೆ ಮತ್ತು ಅನವಶ್ಯಕ ಖರ್ಚು ಎನ್ನುವ ಮನೋಭಾವವನ್ನು ಹೋಗಲಾಡಿಸುವುದಾಗಿದೆ. ಆದರೆ ಇಂದು ಈ ಯೋಜನೆಯು ಘೋರ ವೈಫಲ್ಯವನ್ನು ಹೊಂದಿದೆ. ಏಕೆಂದರೆ ಹೆಣ್ಣು ಮಕ್ಕಳಿಗಾಗಿ ಮೀಸಲಿಟ್ಟ ಹಣ ಅವರಿಗೆ ಸಿಗದೇ ಅಧಿಕಾರಿಗಳಿಂದ ದುರುಪಯೋಗಗೊಳ್ಳುತ್ತಿದೆ. ಹೆಣ್ಣು ಮಕ್ಕಳ ಶಿಕ್ಷಣ, ಆರೋಗ್ಯ ಮತ್ತು ಮದುವೆಯ ಸಂದರ್ಭಗಳಿಗೆ ಈ ಹಣದ ಅಗತ್ಯ ಇರುವುದರಿಂದ ಹೆಣ್ಣು ಮಕ್ಕಳು ೧೮ ವರ್ಷದವರಾದ ನಂತರ ಈ ಹಣವನ್ನು ಬಳಸಬಹುದಾಗಿದೆ. ಆದರೆ ಅದಕ್ಕೂ ಮೊದಲೇ ಈ ಯೋಜನೆಯ ಅಧಿಕಾರಿಗಳು ಈ ಹಣವನ್ನು ದೋಚಿಕೊಳ್ಳುತ್ತಿರುವುದು. ದುಃಖಕರ ವಿಚಾರವಾಗಿದೆ. ಹೆಣ್ಣು ಮಕ್ಕಳ ಭವಿಷ್ಯಕ್ಕಾಗಿ ಉಪಯೋಗಕ್ಕೆ ಬರಬೇಕಾದ ಹಣವು ಈ ರೀತಿ ಪೋಲಾಗುತ್ತಿರುವುದಕ್ಕೆ ಸರ್ಕಾರದ ನಿರ್ಲಕ್ಷ್ಯ ಮತ್ತು ಯೋಜನೆಗಳಲ್ಲಿನ ದೋಷಪೂರಿತ ವಿಧಾನಗಳೇ ಕಾರಣವಾಗಿದೆ.

ಇದೆಲ್ಲದರ ಹಿಂದಿರುವ ಮುಖ್ಯ ಕಾರಣ ಎಂದರೆ ಸಮುದಾಯದಲ್ಲಿ ಜಾಲ್ತಿಯಲ್ಲಿರುವ ಪ್ರಧಾನ ಮೌಲ್ಯಗಳು, ಮದುವೆ, ಕುಟುಂಬ ಎನ್ನುವ ಅಂಶಗಳು ಬಂದಾಗ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ನಿರ್ಧಾರಗಳು ಬದಲಾಗುತ್ತವೆ. ಏಕೆಂದರೆ ಇಂದಿಗೂ ಪಿತೃ ಪ್ರಧಾನ ಮೌಲ್ಯಗಳು ಮಹಿಳಾ ಶಿಕ್ಷಣವನ್ನು ನಿಯಂತ್ರಿಸುತ್ತಿದೆ. ಮಹಿಳೆಯರ ಮೂಲ ಕುಟುಂಬ ಸಮಸ್ಯೆಗಳನ್ನು ಗುರುತಿಸಲಾಗದೆ ರೂಪಿತವಾದ ಯೋಜನೆಗಳು, ಕಾರ್ಯನೀತಿಗಳು ಇಂದಿನ ದಿನಗಳಲ್ಲಿ ಮಹಿಳಾ ಶಿಕ್ಷಣಕ್ಕೆ ಇರುವ ಅವಕಾಶಗಳಿಗೆ ಭಿನ್ನ ತಿರುವುಗಳನ್ನು ತಂದುಕೊಡುತ್ತಿವೆ. ಮದುವೆ, ಉದ್ಯೋಗಸ್ಥ ಹೆಂಡತಿ, ಕುಟುಂಬಕ್ಕೆ ಹಣಕಾಸಿನ ನೆರವನ್ನು ಒದಗಿಸಲು ಉದ್ಯೋಗ ಕ್ಷೇತ್ರದಲ್ಲಿ ಯಾವುದೇ ತಕರಾರುಗಳನ್ನು ತೆಗೆಯದೆ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಾರೆ ಎನ್ನುವ ಹಿನ್ನೆಲೆಯಲ್ಲಿ ದೊರಕುತ್ತಿರುವ ಉದ್ಯೋಗದ ಅವಕಾಶಗಳೆಲ್ಲ ಪುನಃ ಮಹಿಳಾ ಶಿಕ್ಷಣದಲ್ಲಿ ಅಸಮಾನತೆಯ ಎಳೆಗಳೇ ಆಗಿವೆ. ಈ ನಿಟ್ಟಿನಲ್ಲಿ ಸರ್ಕಾರ ಹೊಸ ಮಾದರಿಯ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕಿದೆ. ಇಂತಹ ಹಲವಾರು ಸಮಸ್ಯೆಗಳು ಲಿಂಗ ಅಸಮಾನತೆಯ ನೆಲೆಯಲ್ಲಿರುವಂತವು. ಅವುಗಳನ್ನು ಗಂಭೀರವಾಗಿ ಪರಿಗಣಿಸಿ ಯೋಜನೆಗಳು ರೂಪುಗೊಳ್ಳಬೇಕಾದ ಅವಶ್ಯಕತೆ ಇದೆ. ಮುಖ್ಯವಾಗಿ ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡಿ, ಇನ್ನೂ ವಿಶೇಷ ಸೌಲಭ್ಯಗಳನ್ನು ನೀಡುವುದರ ಜೊತೆಗೆ ಸ್ತ್ರೀ ಶಿಕ್ಷಣವನ್ನು ಹೆಚ್ಚು ಪ್ರೋತ್ಸಾಹಿಸಬೇಕು.

ಮಹಿಳಾ ಅಭಿವೃದಿ ಮತ್ತು ಆರ್ಥಿಕತೆ

ಆರ್ಥಿಕ ಅಭಿವೃದ್ಧಿ ಯೋಜನೆಗಳ ಬಗೆಗೆ ಹೇಳುವುದಾದರೆ, ಇಂದಿನ ದಿನಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಹಲವಾರು ಸರ್ಕಾರಿ ತರಬೇತಿ ಕಾರ್ಯಕ್ರಮಗಳು, ಮಹಿಳಾ ಅಭಿವೃದ್ಧಿ ಯೋಜನೆಗಳು, ವರಮಾನಗಳಿಸುವ, ಆರ್ಥಿಕ ಸವಲತ್ತನ್ನು ಒದಗಿಸುವ ಕಾರ್ಯಕ್ರಮಗಳನ್ನು ಆಯೋಜಿಸುತ್ತಿವೆ. ಮಹಿಳೆಯರೂ ಅಭಿವೃದ್ಧಿ ವಾಹಕರೆಂದು ಪರಿಗಣಿಸಿ ಸರ್ಕಾರ ಯೋಜನೆಗಳನ್ನು ರಚಿಸುತ್ತದೆ. ಆದರೆ ಇಂದಿಗೂ ಮಹಿಳೆಯರೂ ಉದ್ಯೋಗ ಹೊಂದುವ, ಅವರ ವರಮಾನವನ್ನು ಅನುಭವಿಸುವ, ಯಾವ ಉದ್ಯೋಗ ನಿರ್ವಹಿಸಬೇಕು ಎನ್ನುವ, ಎಲ್ಲಾ ನಿರ್ಧಾರಗಳು ಪುರುಷನದ್ದೇ ಆಗಿದೆ. ಹೀಗಾಗಿ ಹೆಚ್ಚಿನ ಸಂದರ್ಭದಲ್ಲಿ ಎಷ್ಟೇ ಮಹಿಳಾ ಪರ ಅಭಿವೃದ್ಧಿ ಯೋಜನೆಗಳು ಯಶಸ್ವಿಯಾಗುತ್ತಿಲ್ಲ. ಸರ್ಕಾರ ಎಂತಹ ಕಾರ್ಯ ತಂತ್ರಗಳ ತಳಹದಿಯಲ್ಲಿ ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರೂ ಅವು ಯಶಸ್ವಿ ಯಾಗುತ್ತಿಲ್ಲ. ಮಹಿಳೆಯರ ಬಗೆಗಿನ ಸಾಂಪ್ರದಾಯಿಕ ಮೌಲ್ಯಗಳು, ಕಲ್ಪನೆಗಳು, ಮಹಿಳೆಯರನ್ನು ದೈಹಿಕ ಮತ್ತು ಮಾನಸಿಕ ತೊಂದರೆಗೊಳಪಡಿಸುತ್ತಿವೆ. ಈ ಎಲ್ಲಾ ಕಾರಣಗಳು ಪ್ರಧಾನಧಾರೆಯ ಮೌಲ್ಯಗಳ ಚಹರೆಗಳೇ ಆಗಿವೆ. ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸಮರ್ಪಕವಾಗಿ ಯೋಜನೆಗಳನ್ನು ರೂಪಿಸುವಲ್ಲಿ, ಅವುಗಳ ಕಾರ್ಯನೀತಿಗಳನ್ನು ಜಾರಿಗೊಳಿಸುವಲ್ಲಿ ಯೋಜನಾ ಕ್ರಮಗಳನ್ನು ನಿರ್ಧರಿಸುವಲ್ಲಿ ಇರುವ ನ್ಯೂನ್ಯತೆಗಳು ಹಾಗೂ ಅವುಗಳ ಮೌಲ್ಯಮಾಪನ ಮಾಡುವಲ್ಲಿಯೂ ಲಿಂಗ ಸಂಬಂಧ ಸಂವೇದನೆ ಸ್ತ್ರೀವಾದಿ ದೃಷ್ಟಿಕೋನದ ಕೊರತೆ ಇರುವುದನ್ನು ಗುರುತಿಸಲಾಗುತ್ತದೆ. ಪ್ರತಿಶತ ೬೭% ಮಹಿಳೆಯರು ಹೆಚ್ಚು ಹೊತ್ತು ಕೆಲಸ ನಿರ್ವಹಿಸುತ್ತದೆ. ಆದರೆ ೧೦% ಪ್ರತಿಶತ ಮಹಿಳೆಯರು ವರಮಾನ ಹೊಂದುತ್ತಿದ್ದಾರೆ. ಹಾಗೂ ಪ್ರತಿಶತ ೧% ಮಹಿಳೆಯರು ಆಸ್ತಿಯನ್ನು ಹೊಂದುತ್ತಿದ್ದಾರೆ. ಮಹಿಳಾ ಗುಂಪಿನ ಕೆಲಸ ೮೦% ರಷ್ಟು ಶ್ರಮ ಅಗೋಚರವಾಗಿಯೇ ಕಳೆದು ಹೋಗುತ್ತಿದೆ.

ಸರ್ಕಾರಿ ಯೋಜನೆಗಳ ಮೂಲಕ ಮಹಿಳಾ ಉದ್ಯಮಿಗಳಿಗೆ ಹಣಕಾಸು ಸಾಲದ ಸೌಲಭ್ಯಗಳನ್ನು ಒದಗಿಸಲಾಗಿದೆ. ಆದರೆ ಮಹಿಳೆಯರಿಗೆ ಬ್ಯಾಂಕುಗಳಿಂದ ಹಣಕಾಸಿನ ಸಾಲ ಪಡೆಯಲು ಬೇಕಾದ ಯಾವುದೇ ರೀತಿಯ ಆಸ್ತಿ-ಪಾಸ್ತಿಗಳು ಮಹಿಳೆಯರಿಗಿರುವುದಿಲ್ಲ ಹಾಗೂ ಯಾವುದೇ ಸರ್ಕಾರಿ ಉದ್ಯೋಗಿಗಳೂ ಮಹಿಳೆಯರಿಗೆ ಶೂರಿಟಿ ನೀಡಲು ಒಂದು ಕ್ಷಣ ಯೋಚಿಸುತ್ತಾರೆ. ಸಾಲ ಮರುಪಾವತಿಸುವ ಶಕ್ತಿ ಮಹಿಳೆಯರಿಗೆ ಇದೆಯೇ ಎಂಬು ಅನುಮಾನಿಸುತ್ತಾರೆ. ಇಲ್ಲಿ ಸರ್ಕಾರವು ಮಹಿಳಾ ಉದ್ಯಮಿಗಳ ಅಭಿವೃದ್ಧಿಗಾಗಿ ಯೋಜನೆ ರೂಪಿಸುವಾಗ ಇಂತಹ ಅಂಶಗಳನ್ನು ಗುರುತಿಸಿಕೊಂಡಿಲ್ಲ. ಹೀಗಾಗಿ ಮಹಿಳಾ ಉದ್ಯಮಿಗಳು

ಆರ್ಥಿಕ ತೊಂದರೆಗಳಿಗೆ ಸಿಲುಕುತ್ತಾರೆ. ಈ ರೀತಿ ಮಹಿಳಾ ಆರ್ಥಿಕ ಸಬಲೀಕರಣಕ್ಕೆ ಯೋಜನೆಗಳನ್ನು ರೂಪಿಸುವಾಗ ಸರ್ಕಾರವು ಮಹಿಳೆಯರಿಗೆ ಎಲ್ಲಿ ಅಡೆತಡೆಗಳಾಗುತ್ತಿವೆ. ಯಾವ ಅಂಶಗಳನ್ನು ಇಲ್ಲಿ ಪ್ರಮುಖವಾಗಿ ಕಾರ್ಯ ನಿರ್ವಹಿಸುತ್ತಿವೆ ಎಂಬ ಅಂಶಗಳನ್ನು ಗಮನಿಸಬೇಕಾಗಿದೆ. ಇಂತಹ ಹಲವಾರು ಸಮಸ್ಯೆಗಳನ್ನು ಆರ್ಥಿಕ ಯೋಜನೆಗಳಲ್ಲಿ ಕಾಣುತ್ತೇವೆ. ಈ ಎಲ್ಲಾ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ಬಗೆಹರಿಸುವ ದಿಶೆಯಲ್ಲಿ ಈ ಅಧ್ಯಯನವನ್ನು ಮಾಡಲಾಗುತ್ತಿದೆ.(ಪ್ರಕರಣ -೨)

ಮಹಿಳಾ ಅಭಿವೃದ್ಧಿ ಮತ್ತು ರಾಜಕೀಯ

ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರು ಸಬಲೀಕರಣ ಸಾಧಿಸಲು ಸರ್ಕಾರ ಹಲವಾರು ಯೋಜನೆಗಳನ್ನು ಕೈಗೊಂಡಿದೆ. ಆದರೆ ಯೋಜನೆಗಳು ಮಹಿಳಾ ಪರವಾಗಿದ್ದರೂ ಕೂಡ ಸಬಲೀಕರಣ ಸಾಧಿಸಲಾಗುತ್ತಿಲ್ಲ. ಕಾರಣ ಇಲ್ಲಿನ ಲಿಂಗ ಅಸಮಾನತೆಯ ಅಂಶಗಳು, ಪ್ರಧಾನ ಧಾರೆಯ ಮೌಲ್ಯಗಳು ತುಂಬಾ ಜಾಣತನದಿಂದ ಕಾರ್ಯನಿರ್ವಹಿಸುತ್ತಿರುವುದನ್ನು ಕಾಣಬಹುದು. ಒಂದು ಸಣ್ಣ ಅಂಶವನ್ನು ಇಲ್ಲಿ ಚರ್ಚಿಸಬಹುದರೆ ಸರ್ಕಾರ ಪಂಚಾಯತ್ ಕ್ಷೇತ್ರದಲ್ಲಿ ಶೇ.೩೩ ರಷ್ಟು ಮೀಸಲಾತಿಯನ್ನು ಜಾರಿಗೊಳಿಸಿ ಮಹಿಳೆಯರು ಈ ಅವಕಾಶವನ್ನು ಸಮರ್ಥವಾಗಿ ನಿರ್ವಹಿಸುವ ಸಲುವಾಗಿ ಅವರಿಗೆ ನಿರ್ಧಾರಗಳನ್ನು ತೆಗೆದುಕೊಳ್ಳುವ ಮತ್ತು ಅವರ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಲು ಮತ್ತು ಇತರೆ ಅಂಶಗಳಿಗೆ ಸಂಬಂಧಪಟ್ಟಂತೆ ತರಬೇತಿ ಕಾರ್ಯಕ್ರಮಗಳನ್ನು ಆಯೊಜಿಸಿದೆ, ಆಯೋಜಿಸುತ್ತದೆ. ಆದರೂ ಸಹ ಮಹಿಳೆಯರಲ್ಲಿ ಪಂಚಾಯತ್ ಚುನಾವಣೆಯಲ್ಲಿ ತಾವೇ ಸ್ವತಃ ಭಾಗವಹಿಸಬೇಕು, ಆಡಳಿತ ಕ್ಷೇತ್ರದಲ್ಲಿ ತಾವು ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸಬೇಕು ಎನ್ನುವ ಮನೋಭಾವ ಕಾಣುತ್ತಿಲ್ಲ. ಮಹಿಳೆಯರಿಗೆ ಪಂಚಾಯತ್ ಕ್ಷೇತ್ರದ ಬಗ್ಗೆ ಒಲವಿದ್ದರೂ ಸಹ ಕಡಿಮೆ ಪ್ರಮಾಣದಲ್ಲಿದೆ. ಪಂಚಾಯತ್ ಕ್ಷೇತ್ರದಲ್ಲಿ ಭಾಗವಹಿಸುವ ಮಹಿಳಾ ಅಭ್ಯರ್ಥಿಗಳು ತಮ್ಮ ಗಂಡಂದಿರ ನಿರ್ಧಾರ ಮತ್ತು ಆದೇಶಗಳ ಮೇರೆಗೆ ಅಥವಾ ಪುರುಷ ಸದಸ್ಯ ವರ್ಗಗಳ ನಿರ್ಧಾರಗಳ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನು ಪಂಚಾಯತ್ ಕ್ಷೇತ್ರದ ಚುನಾವಣೆಯಲ್ಲಿ ಮಹಿಳಾ ಅಭ್ಯರ್ಥಿಗಳು ಗೆದ್ದು ಬಂದರೂ ಅವರ ಗಂಡಂದಿರು ಅಥವಾ ಇತರ ಪುರುಷರು (ಸಂಬಂಧಿಕರ ಆಪ್ತರು) ಅಲ್ಲಿ ಅವರನ್ನು ಪ್ರತಿನಿಧಿಸುತ್ತಿದ್ದಾರೆ. ಇನ್ನು ರಾಜ್ಯ-ಕೇಂದ್ರೀಯ ಮಟ್ಟದಲ್ಲಿಯೂ ಪುರುಷ ಕೇಂದ್ರಿತ ಮೌಲ್ಯಗಳು ಪ್ರಧಾನವಾಗಿ ಗೋಚರವಾಗುತ್ತಿವೆ. ಇದರಿಂದಾಗಿ ಮಹಿಳಾ ಪರ ಕಾಳಜಿಗಳು ಕಂಡುಬರುತ್ತಿದ್ದರೂ, ಅವಕಾಶಗಳು ಲಭಿಸುತ್ತಿದ್ದರೂ ಯೋಜನೆಗಳು ಜಾರಿಗೊಳ್ಳುತ್ತಿದ್ದರೂ ಸಹ ಇಂದಿಗೂ ಮಹಿಳೆಯರು ರಾಜಕೀಯ ಸಬಲೀಕರಣದ ಮೇರೆಯನ್ನು ತಲುಪಲಾಗುತ್ತಿಲ್ಲ.(ಪ್ರಕರಣ -೩)

ಮಹಿಳಾ ಅಭಿವೃದಿ ಮತ್ತು ಮಹಿಳೆಯ ಆರೋಗ್ಯ

೨೦೦೦ ನೇ ಇಸವಿಯಲ್ಲಿ ಜಗತ್ತಿನದ್ಯಂತ ವಾಸಿಸುತ್ತಿರುವ ಜನಸಂಖ್ಯೆಯಲ್ಲಿ ಶೇ ೫೦ ರಷ್ಟು ಮಹಿಳೆಯರು ಹೆಚ್.ಐ.ವಿ/ ಏಡ್ಸ್ ನಿಂದ ಬಳಲುತ್ತಿದ್ದಾರೆ. ಅದರಲ್ಲಿ ೮೦ ಮಿಲಿಯನ್ ಬೇಡವಾದ ಬಸಿರು, ೨೦ ಮಿಲಿಯನ್ ಅಸುರಕ್ಷಿತ ಗರ್ಭಪಾತ, ೫ ಲಕ್ಷ ಹೆರಿಗೆಯ ಸಮಯದಲ್ಲಿ ಸಾವುಗಳು ಸಂಭವಿಸುತ್ತಿವೆ. ಅಭಿವೃದ್ಧಿಶೀಲ ದೇಶಗಳಲ್ಲಿ ಈ ರೀತಿಯಲ್ಲಿ ಪ್ರಕರಣಗಳು ಶೇ ೯೯ ರಷ್ಟಿದೆ.[೪]

ಸಾಮಾನ್ಯವಾಗಿ ಮಹಿಳೆಯರನ್ನು ಅವರ ಸೂಕ್ಷ್ಮವಾದ ದೈಹಿಕ ರಚನೆ, ನೈಸರ್ಗಿಕವಾದಂತಹ ಪ್ರಜನನ ಕ್ರಿಯೆ, ಋತುಚಕ್ರ ಮತ್ತು ತಾಯಿ-ಮಗುವಿನ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ತಕ್ಕಂತ ಅಗತ್ಯ ಸೇವೆಗಳನ್ನು ಸರ್ಕಾರ ಒದಗಿಸುತ್ತಿದೆ. ಆದರೆ ಈ ಸೌಲಭ್ಯಗಳು ಉನ್ನತ ಗುಣಮಟ್ಟದ ಸೇವೆಗಳನ್ನು ನೀಡುವಲ್ಲಿ ವಿಫಲವಾಗುತ್ತಿದೆ ಮತ್ತು ಈ ಸೌಲಭ್ಯಗಳು ಹೆಚ್ಚಿನ ಸಂಖ್ಯೆಯ ಮಹಿಳೆಯರಿಗೆ ಸಿಗುತ್ತಿಲ್ಲ.

ಮಹಿಳೆಯರ ದೇಹವು ಬಹಳ ಬೇಗ ಸೋಂಕು ರೋಗಗಳಿಗೆ ತುತ್ತಾಗಿ ಬಿಡುತ್ತದೆ. ಹಾಗಾಗಿ ಅನೇಕ ಅರೋಗ್ಯ ಸಮಸ್ಯೆಗಳನ್ನು ಮಹಿಳೆಯರು ಎದುರಿಸುತ್ತಾರೆ. ಮಹಿಳೆಯರ ಆರೋಗ್ಯ ಸಮಸ್ಯೆಗಳು ಉಂಟಾಗುವುದು ಶುಚಿತ್ವದ ಕೊರತೆಯಿಂದ. ಮುಖ್ಯವಾಗಿ ಋತುಸ್ರಾವದ ಸಮಯದಲ್ಲಿ ಮಹಿಳೆಯರು ಶುಭ್ರತೆಯನ್ನು, ಶುಚಿತ್ವವನ್ನು ಪಾಲಿಸದೇ ಇರುವುದರಿಂದಾಗಿ ಸೋಂಕು ರೋಗಗಳಿಗೆ ಬೇಗ ತುತ್ತಾಗುತ್ತಾರೆ. ಅದರಲ್ಲೂ ಪ್ರಮುಖವಾಗಿ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಋತು ಸ್ರಾವದ ಸಂದರ್ಭದಲ್ಲಿ ಶುಚಿತ್ವವನ್ನು ಪಾಲಿಸುವುದಿಲ್ಲ. ಈ ಸಂದರ್ಭದಲ್ಲಿ ಆಗುವ ಕಲೆಯನ್ನು ತಡೆಯಲು ಅವರು ಹೊಟ್ಟು, ಬೂದಿ ಮತ್ತು ಶುಚಿ ಇಲ್ಲದ ಹಳೆಯ ಬಟ್ಟೆಗಳನ್ನು ಬಳಸುತ್ತಾರೆ. ಅಲ್ಲದೇ ಗ್ರಾಮೀಣ ಭಾಗದಲ್ಲಿ ಸರಿಯಾಗಿ ಶೌಚಾಲಯಗಳು ಇರುವುದಿಲ್ಲ ಮತ್ತು ಶುಚಿ ನೀರಿನ ಕೊರತೆ ಇರುತ್ತದೆ. ಹೀಗಾಗಿ ಮಹಿಳೆಯರು ಬಹಳ ಬೇಗ ಜನನೇಂದ್ರಿಯ ಸೋಂಕುಗಳಿಗೆ ಒಳಗಾಗುತ್ತಿದ್ದಾರೆ. ಈ ರೀತಿಯ ಸಮಸ್ಯೆಗಳನ್ನು ತಡೆಯಲು ಸರ್ಕಾರವು ಗ್ರಾಮೀಣ ಭಾಗದ ಹೆಣ್ಣು ಮಕ್ಕಳಿಗೆ ಅತೀ ಕಡಿಮೆ ದರದಲ್ಲಿ ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಿಸುವ ಯೋಜನೆಯನ್ನು ರೂಪಿಸಿತ್ತು. ಆದರೆ ಅದು ಜಾರಿಯಾಗಲೇ ಇಲ್ಲ. ಮನೆ-ಮನೆಗೆ ಪ್ರತ್ಯೇಕ ಶೌಚಾಲಯ ಮತ್ತು ನೀರಿನ ಸೌಲಭ್ಯವನ್ನು ಒದಗಿಸುವ ಯೋಜನೆಯೂ ಸಹ ವಿಫಲವಾಗಿದೆ. ಹೀಗಾಗಿ ಮಹಿಳೆಯರ ಸಮಸ್ಯೆಗಳು ಹೆಚ್ಚಾಗುತ್ತಿವೆಯೇ ವಿನಾ ಕಡಿಮೆಯಾಗುತ್ತಿಲ್ಲ.

ಮಹಿಳೆಯರಿಗೆ ಪ್ರಜನನ ಕ್ರಿಯೆಯು ಅತ್ಯಂತ ಪ್ರಮುಖವಾದುದು. ತಾಯಿ ಮತ್ತು ಮಗುವಿನ ರಕ್ಷಣೆಗಾಗಿ ಸರ್ಕಾರವು ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ಅವರ ಸುರಕ್ಷತೆಗಾಗಿ ಅನೇಕ

ಕಾರ್ಯಕ್ರಮಗಳನ್ನು ರೂಪಿಸಿದೆ. ಈ ಯೋಜನೆಗಳಡಿಯಲ್ಲಿ ಗರ್ಭಿಣಿ ಸ್ತ್ರೀ ಮತ್ತು ತಾಯಿ-ಮಗುವಿನ ಆರೋಗ್ಯವನ್ನು ಕಾಪಾಡಲು ಉಚಿತ ಚಿಕಿತ್ಸೆಯನ್ನು ನೀಡಿ, ಕಬ್ಬಿಣಾಂಶವುಳ್ಳ ಮಾತ್ರೆಗಳನ್ನು, ಚುಚ್ಚು ಮದ್ದುಗಳನ್ನು ಕೊಡಲಾಯಿತು. ಜೊತೆಗೆ ತಾಯಿ-ಮಗುವಿನ ರಕ್ಷಣೆಗಾಗಿ ಸರ್ಕಾರವು 'ಪ್ರಾಥಮಿಕ ಆರೋಗ್ಯ ಕೇಂದ್ರ' ಮತ್ತು 'ಸಮುದಾಯ ಆರೋಗ್ಯ ಕೇಂದ್ರ'ಗಳನ್ನು ಸ್ಥಾಪಿಸಿದೆ. ಈ ಆರೋಗ್ಯ ಕೇಂದ್ರಗಳಲ್ಲಿ ಗರ್ಭಿಣಿ ಸ್ತ್ರೀಯರ ಚಿಕಿತ್ಸೆಗಾಗಿ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞರು, ಶಿಶು ತಜ್ಞರು ಮತ್ತು ಒಬ್ಬ ದಾದಿಯನ್ನು ನೇಮಿಸಲಾಗಿದೆ. ಇಲ್ಲಿ ಗರ್ಭಿಣಿ ಸ್ತ್ರೀಯರಿಗೆ, ತಾಯಿ-ಮಗುವಿನ ಆರೋಗ್ಯದ ಬಗ್ಗೆ ಕಾಳಜಿವಹಿಸಿ ಅವರನ್ನು ಸೋಂಕು ರೋಗಗಳಿಂದ ರಕ್ಷಿಸಲು ಮಾತ್ರೆಗಳು ಹಾಗೂ ಇದರ ಜೊತೆಗೆ ಮಹಿಳೆಯರನ್ನು ಹೆಚ್ಚಾಗಿ ಕಾಡುವ ಅನೀಮಿಯಾ ರೋಗಕ್ಕೆ ಸೂಕ್ತ ಚಿಕಿತ್ಸೆ ನೀಡುವುದು ಮತ್ತು ಗರ್ಭಿಣಿ ಸ್ತ್ರೀಯರು ಮತ್ತು ಮಕ್ಕಳು ಅಪೌಷ್ಠಿಕತೆಯಿಂದ ತೊಂದರೆಗೊಳಗಾಗುವುದನ್ನು ತಪ್ಪಿಸಲಾಗಿದೆ. ಈ ಮೂಲಕ ಪ್ರಸವ ಪೂರ್ವ ಮತ್ತು ಪ್ರಸವ ನಂತ ಉಂಟಾಗುವ ತಾಯಿ ಮತ್ತು ಶಿಶು ಮರಣ ಪ್ರಮಾಣವನ್ನು ಕಡಿಮೆಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಮಹಿಳಾ ಜನಸಂಖ್ಯೆಯಲ್ಲಿ ೮೦% ರಷ್ಟು ಮಹಿಳೆಯರು ಬಯಸದೇ ಗರ್ಭಿಣಿಯಾಗುತ್ತಿದ್ದಾರೆ.[೫೫]

ಸರ್ಕಾರವು ಮಹಿಳೆಯರಿಗಾಗಿ ಅನೇಕ ಸೌಲಭ್ಯಗಳನ್ನು ಒದಗಿಸುತ್ತಿದ್ದರೂ ಸಹ ಮಹಿಳೆ ಪರ ಆರೋಗ್ಯ ಯೋಜನೆಗಳು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುವಲ್ಲಿ ವಿಫಲವಾಗಿದೆ. ಆರೋಗ್ಯ ಕೇಂದ್ರಗಳು ಸರಿಯಾದ ಮೂಲ ಸೌಕರ್ಯಗಳನ್ನು ಮತ್ತು ಸೂಕ್ತ ವೈದ್ಯರ ಕೊರತೆಯನ್ನು ಎದುರಿಸುತ್ತಿವೆ. ಇಂದಿಗೂ ಸಹ ಹಲವಾರು ಆರೋಗ್ಯ ಕೇಂದ್ರಗಳಿಗೆ ಸರಿಯಾದ ಕೊಠಡಿಗಳು, ಅಪರೇಷನ್ ಥಿಯೇಟರ್‌ಗಳು, ಉತ್ತಮ ರೀತಿಯ ಶಸ್ತ್ರ ಚಿಕಿತ್ಸಾ ಸಲಕರಣೆಗಳು ಮತ್ತು ಸೂಕ್ತ ಆಸ್ಪತ್ರೆ ಕಟ್ಟಡವಿಲ್ಲದಿರುವುದನ್ನು ನೋಡಬಹುದು. ಅಲ್ಲದೇ ವೈದ್ಯರ ಗೈರು ಹಾಜರಿ ಮತ್ತು ನಿರ್ಲಕ್ಷ್ಯತೆಗಳಿಂದಾಗಿ ಇಂದಿಗೂ ಸಹ ಸರ್ಕಾರಿ ಆಸ್ಪತ್ರೆಗಳಲ್ಲಿ ಗರ್ಭಿಣಿ ಸ್ತ್ರೀ ಮತ್ತು ಮಕ್ಕಳ ಸಾವುಂಟಾಗುತ್ತಿದೆ. ಈ ರೀತಿಯ ತೊಂದರೆಗಳಿಂದಾಗಿ ಗ್ರಾಮೀಣ ಪ್ರದೇಶದ ಜನರು ಗರ್ಭಿಣಿ ಸ್ತ್ರೀಯರಿಗೆ ಮನೆಯಲ್ಲಿಯೇ ಹೆರಿಗೆ ಮಾಡಿಸುತ್ತಾರೆ. ಈ ರೀತಿಯ ಮನೆಯ ಹೆರಿಗೆಯಲ್ಲಿ ಉಪಯೋಗಿಸುವ ವಸ್ತುಗಳು ಶುಚಿಯಾಗಿರುವುದಿಲ್ಲ ಮತ್ತು ಅವೈಜ್ಞಾನಿಕ ಪದ್ಧತಿಯಿಂದ ಹೆರಿಗೆ ಮಾಡುವುದರಿಂದಾಗಿ ತಾಯಿ ಮತ್ತು ಮಗು ಸೋಂಕು ರೋಗಗಳಿಗೆ ತುತ್ತಾಗುತ್ತಾರೆ. ಹೀಗಾಗಿ ತಾಯಿ ಮತ್ತು ಮಗು ಸಾವನ್ನಪ್ಪುತ್ತಾರೆ. ಈ ರೀತಿಯ ಕಾರಣಗಳಿಂದಾಗ ಗ್ರಾಮೀಣ ಪ್ರದೇಶಗಳಲ್ಲಿ ಗರ್ಭಿಣಿ ಸ್ತ್ರೀಯರು ಮತ್ತು ನವಜಾತ ಶಿಶುಗಳ ಮರಣದರ ಹೆಚ್ಚಾಗುತ್ತಲೇ ಇದೆ. ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಅಂಗನವಾಡಿ ಕಾರ್ಯಕರ್ತೆಯರನ್ನು ನೇಮಿಸಿ ಅವರ ಮೂಲಕ ಜನರಿಗೆ ಅರಿವು ಮೂಡಿಸಿ ಆಸ್ಪತ್ರೆಯಲ್ಲಿ ವೈಜ್ಞಾನಿಕ ಪದ್ಧತಿಯ ಪ್ರಕಾರ ಹೆರಿಗೆ ಮಾಡಿಸುವಂತೆ

ತಿಳಿ ಹೇಳಲಾಯಿತು. ಆದರೆ ದುರದೃಷ್ಟದ ಸಂಗತಿ ಎಂದರೆ ಸರ್ಕಾರವು ನೇಮಿಸಿರುವ ಅಂಗನವಾಡಿ ಕಾರ್ಯಕರ್ತೆಯರಿಗೆ ಯಾವುದೇ ರಿತಿಯ ತರಬೇತಿ ನೀಡದೆ, ಸೂಕ್ತ ಮಾಹಿತಿಯ ಕೊರತೆಯಿಂದಾಗಿ ಅವರು ಜನರಿಗೆ ಮಾಹಿತಿ ನೀಡಿ ಎಚ್ಚರಿಸುವಲ್ಲಿ ವಿಫಲರಾಗಿದ್ದಾರೆ.

ಆಧುನಿಕತೆಯು ಬೆಳೆದಂತೆಲ್ಲಾ ನಮ್ಮಲ್ಲಿರುವ ಮೌಢ್ಯತೆಗಳೂ ಸಹ ಬೆಳೆಯುತ್ತಲೇ ಇದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಹೆಣ್ಣು ಭ್ರೂಣ ಮತ್ತು ಶಿಶುಹತ್ಯೆ. ತಂತ್ರಜ್ಞಾನಗಳು, ವಿಜ್ಞಾನಗಳು ಅಭಿವೃದ್ಧಿಯಾದಂತೆಲ್ಲಾ ನಮ್ಮಲ್ಲಿನ ಮೌಢ್ಯತೆಗಳನ್ನು ವಿಜ್ಞಾನ ನಿವಾರಿಸಬೇಕು. ಆದರೆ ಇಂದಿಗೂ ಸಹ ವಿಶ್ವದ ನಾನಾ ದೇಶಗಳಲ್ಲಿ ಮುಖ್ಯವಾಗಿ ಭಾರತದಲ್ಲಿ ಗಂಡು ಮಕ್ಕಳಿಗೆ ಹೆಚ್ಚು ಪ್ರಧಾನತೆಯನ್ನು ನೀಡುವುದರಿಂದಾಗಿ ಹೆಣ್ಣು ಮಕ್ಕಳನ್ನು ಕಡೆಗಣಿಸಲಾಗುತ್ತಿದೆ. ಆದ್ದರಿಂದಾಗಿಯೇ ಇಂದು ಹೆಣ್ಣು ಭ್ರೂಣ ಹತ್ಯೆ ಮತ್ತು ಶಿಶು ಹತ್ಯೆಗಳೂ ನಡೆಯುತ್ತಿವೆ. ಪ್ರಸವ ಪೂರ್ವ ಭ್ರೂಣದ ಲಿಂಗವನ್ನು ಪತ್ತೆ ಮಾಡುವುದನ್ನು ಸರ್ಕಾರ ನಿಷೇಧಿಸಿದ್ದರೂ ಸಹ ಅನೇಕ ಆಸ್ಪತ್ರೆಗಳಲ್ಲಿ ಭ್ರೂಣದ ಲಿಂಗವನ್ನು ಪತ್ತೆ ಮಾಡಿ ಹತ್ಯೆ ಮಾಡಲಾಗುತ್ತಿದೆ. ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಹೆಣ್ಣು ಶಿಶುಗಳ ಹತ್ಯೆಗಳು ನಡೆಯುತ್ತಲೇ ಇದೆ. ಗ್ರಾಮೀಣ ಭಾಗದಲ್ಲಷ್ಟೇ ಅಲ್ಲ ಮಹಾನಗರಗಳೆನಿಸಿಕೊಂಡ ದೆಹಲಿ, ಬೆಂಗಳೂರಿನಲ್ಲಿ. ಮೈಸೂರಿನಂತಹ ಮುಂದುವರೆದ ನಗರಗಳಲ್ಲಿಯೂ ಸಹ ಹೆಣ್ಣು ಮಗುವಿನ ಹತ್ಯೆ ನಡೆಯುತ್ತಿದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಬೆಂಗಳೂರಿನಲ್ಲಿ ವ್ಯಕ್ತಿಯೊಬ್ಬ ಹೆಣ್ಣು ಮಗು ಹುಟ್ಟಿತೆಂಬ ಕಾರಣಕ್ಕಾಗಿ ತನ್ನ ಮೂರು ತಿಂಗಳ ಹೆಣ್ಣು ಮಗುವನ್ನು ಕ್ರೂರವಾಗಿ ಹಿಂಸಿಸಿದ್ದ ನಂತರ ಮಗು ಆಸ್ಪತ್ರೆಯಲ್ಲಿ ಅಸುನೀಗಿತು. ಹೆಣ್ಣು ಮಕ್ಕಳ ಬಗ್ಗೆ ಇಂದಿಗೂ ನಮ್ಮಲ್ಲಿ ನಿರ್ಲಕ್ಷ್ಯತನವಿದೆ ಎಂಬುದಕ್ಕೆ ಈ ಉದಾಹರಣೆ ಸಾಕ್ಷಿಯಾಗಿದೆ. ಇಂದು ಹೆಣ್ಣು ಮಗು ಮತ್ತು ಹೆಣ್ಣು ಭ್ರೂಣ ಹತ್ಯೆಗಳು ಸದ್ದಿಲ್ಲದೇ ನಡೆದು ಹೋಗುತ್ತಿವೆ. ಎಷ್ಟೋ ಪ್ರಕರಣಗಳು ಬೆಳಕಿಗೆ ಬರುವುದೇ ಇಲ್ಲ. ಈ ಪ್ರಮಾಣವನ್ನು ಅಂಕಿ-ಅಂಶಗಳ ಮೂಲಕ ನೋಡಿದರೆ ೨೦೦೧ನೇ ಇಸವಿಯಲ್ಲಿ ಶೇ.೪೯ರಷ್ಟಿದ್ದ ಭ್ರೂಣ ಹತ್ಯೆಯ ಪ್ರಮಾಣ ೨೦೦೭ರಲ್ಲಿ ಶೇ.೫೩ರಷ್ಟಕ್ಕೇರಿತ್ತು. ದಿನೇ ದಿನೇ ಹೆಣ್ಣು ಮಕ್ಕಳ ಪ್ರಮಾಣ ಗಣನೀಯವಾಗಿ ಇಳಿಮುಖವಾಗುತ್ತಾ ಹೋಗುತ್ತಿದೆ. ೨೦೦೧ರ ವರದಿಯ ಪ್ರಕಾರ ೧೦೦೦ ಪುರುಷರಿಗೆ '೯೨೭' ಸ್ತ್ರೀಯರಿದ್ದರು. ಆದರೆ ೨೦೦೮ರ ವೇಳೆಗೆ ೧೦೦೦ ಪುರುಷರಿಗೆ '೯೦೭' ಸ್ತ್ರೀಯರಿದ್ದರು. ಇದಕ್ಕೆ ಪೂರಕವೆಂಬಂತೆ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳ ಸಾವಿನ ಪ್ರಮಾಣ ಶೇ.೨೨ರಷ್ಟಿದೆ. ಇಂದು ಜಗತ್ತಿನಲ್ಲಿ ೫೦ ಮಿಲಿಯನ್ ಹೆಣ್ಣು ಮಕ್ಕಳಿ ಮತ್ತು ಮಹಿಳೆಯರು ಕಾಣೆಯಾಗುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಹೆಣ್ಣು ಮಕ್ಕಳ ಬಗೆಗಿನ ಉದಾಸೀನತೆ, ಸೂಕ್ತ ಆರೈಕೆಯ ಕೊರತೆ ಮತ್ತು ಲಿಂಗ ತಾರತಮ್ಯ. ಈ ಕಾರಣಗಳಿಂದಾಗಿ ಇಂದಿಗೂ ಹೆಣ್ಣು ಮಕ್ಕಳ ಹತ್ಯೆ ದಿನೇ ದಿನೇ ಸದ್ದಿಲ್ಲದೇ ನಡೆದು ಹೋಗುತ್ತಿದೆ. ಆದರೆ ಸರ್ಕಾರದ ಯೋಜನೆಗಳು ಮಾತ್ರ ಕೈಕಟ್ಟಿ ಕುಳಿತಿದೆ.

ಇಂದು ಹೆಚ್‌ಐವಿ/ಏಡ್ಸ್ ಎಂಬ ಮಾರಕ ರೋಗವು ಇಡೀ ವಿಶ್ವವನ್ನೇ ತಲ್ಲಣಗೊಳಿಸಿದೆ. ಏಕೆಂದರೆ ಇದಕ್ಕೆ ಯಾವುದೇ ಸೂಕ್ತ ಔಷಧಿ ಮತ್ತು ಚಿಕಿತ್ಸೆ ಇಲ್ಲದಿರುವುದು. ಪ್ರಪಂಚದ ಇತರೆ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತವು ಹೆಚ್‌ಐವಿ/ಏಡ್ ರೋಗಿಗಳ ಸಂಖ್ಯೆಯಲ್ಲಿ ದ್ವಿತೀಯ ಸ್ಥಾನದಲ್ಲಿದೆ. ವಿಶೇಷವಾಗಿ ಮಹಿಳೆಯರೇ ಹೆಚ್ಚಾಗಿ ಈ ರೋಗಗಳಿಗೆ ಬಲಿಯಾಗುತ್ತಿರುವುದು ಆತಂಕಕಾರಿ ವಿಚಾರವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರವು ಹೆಚ್‌ಐವಿ/ಏಡ್ಸ್ ನಿವಾರಣೆಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ ಸಹ ಇವು ಯಾವುದೂ ನಿರೀಕ್ಷಿತ ಫಲಿತಾಂಶಗಳನ್ನು ನೀಡುತ್ತಿಲ್ಲ. ಹೆಚ್‌ಐವಿ/ಏಡ್ಸ್ ಪೀಡಿತ ಮಹಿಳೆಯರಿಗೆ ಆರ್ಥಿಕ ಸಹಾಯ, ಚಿಕಿತ್ಸೆ, ಶಿಕ್ಷಣ, ಪುನರ್ವಸತಿ ಕೇಂದ್ರಗಳ ಅಗತ್ಯವಿದೆ. ಆದರೆ ಸರ್ಕಾರವು ಈ ಯಾವುದೇ ಅಗತ್ಯಗಳನ್ನು ಪೂರೈಸುತ್ತಿಲ್ಲ. ಜೊತೆಗೆ ಹೆಚ್‌ಐವಿ/ಏಡ್ಸ್ ಪೀಡಿತ ಮಹಿಳೆಯರು ಸಮಾಜದಿಂದ ಅವಮಾನ ಮತ್ತು ಶೋಷಣೆಗೊಳಗಾಗುತ್ತಿದ್ದಾರೆ. ಸರ್ಕಾರಿ ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಪೀಡಿತ ಮಹಿಳೆಯನ್ನು ಕೆಲಸದಿಂದ ತೆಗೆದುಹಾಕಿದ ಘಟನೆಯೊಂದು ಇತ್ತೀಚೆಗೆ ಬೆಳಕಿಗೆ ಬಂದಿದೆ. ಸರ್ಕಾರಿ ಶಾಲೆಯಲ್ಲಿಯೇ ತಾರತಮ್ಯ ತೋರುತ್ತಿರುವಾಗ ಸರ್ಕಾರ ಇದನ್ನು ವಿರೋಧಿಸದೇ ಸುಮ್ಮನಿರುವುದು ನಿಜಕ್ಕೂ ದುಃಖಕರ ಸಂಗತಿಯಾಗಿದೆ. ಹೀಗೆ ಹೆಚ್‌ಐವಿ/ಏಡ್ಸ್ ಪೀಡಿತ ಮಹಿಳೆಯರು ಎಲ್ಲರಿಂದ ಶೋಷಣೆಗೊಳಗಾಗುತ್ತಿದ್ದಾರೆ. ಅವರಿಗೆ ಸೂಕ್ತ ರೀತಿಯ ಸೌಲಭ್ಯಗಳನ್ನು ಒದಗಿಸಿ ಅವರೂ ಸಮಾಜದಲ್ಲಿ ಎಲ್ಲರಂತೆ ಗೌರವಯುತವಾಗಿ ಜೀವನ ನಡೆಸುವಂತೆ ಸರ್ಕಾರವು ಸಹಾಯ ಹಸ್ತ ನೀಡಬೇಕು. ಇಲ್ಲದೇ ಹೋದರೆ ಹೆಚ್‌ಐವಿ/ಏಡ್ಸ್ ಪೀಡಿತ ಮಹಿಳೆಯರ ಸ್ಥಿತಿ ಮತ್ತಷ್ಟು ಶೋಚನೀಯವಾಗಿಬಿಡುತ್ತದೆ.

ಮಹಿಳಾ ಅಭಿವೃದ್ಧಿ ಮತ್ತು ಪಂಚವಾರ್ಷಿಕ ಯೋಜನೆಗಳ

ಪಂಚವಾರ್ಷಿಕ ಯೋಜನೆಗಳ ಮೂಲಕ ಮಹಿಳಾ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸುತ್ತಿದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಆರಂಭದಿಂದ ಇಂದಿನವರೆಗೂ ಹಲವಾರು ಪ್ರಮುಖ ಉದ್ದೇಶಗಳನ್ನು ಆಯ್ದುಕೊಂಡು ಅದರಲ್ಲೂ ಪ್ರಮುಖವಾಗಿ ಮಹಿಳೆಯರಿಗೆ ಸಂಬಂಧಿಸಿದಂತೆ ವಿಶಿಷ್ಟ ಮತ್ತು ಅತ್ಯವಶ್ಯಕ ಉದ್ದೇಶಗಳನ್ನು ಗುರುತಿಸಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಭಾರತದಲ್ಲಿ ೧೯೫೧ರಲ್ಲಿ ಮೊದಲ ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತರಲಾಯಿತು. ಇದರಲ್ಲಿ ತಾಯಿ ಮತ್ತು ಮಗುವಿನ ಆರೋಗ್ಯವನ್ನು ಪ್ರಮುಖವಾಗಿ ಗುರುತಿಸಲಾಯಿತು. ಅಂದಿನಿಂದ ಇಂದಿನವರೆಗೂ ಸರ್ಕಾರ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸಿ ಆ ಮೂಲಕ ತಾಯಿ-ಮಗುವಿನ ಆರೋಗ್ಯವನ್ನು ಸುಧಾರಿಸಲು ಪ್ರಯತ್ನಿಸಿತು. ಆದರೆ ಇಂದಿಗೂ ಸಹ ಹಳ್ಳಿಗಳಲ್ಲಿ ತಾಯಿ ಮತ್ತು ಮಗುವಿಗೆ

ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳನ್ನು ನಾವು ಕಾಣುತ್ತಲೇ ಇದ್ದೇವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಳ್ಳಿಗಳಿಂದ ದೂರವಿರುವುದು, ಆಧುನಿಕ ಸಲಕರಣೆಗಳ ಕೊರತೆ, ಆರೋಗ್ಯ ಕಾರ್ಯ ಕರ್ತೆಯರ ಕೊರತೆ, ಅವರಿಗೆ ನೀಡಿರುವ ಸರ್ಕಾರಿ ನಿವಾಸದಲ್ಲಿ ವಾಸಿಸದೇ ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವುದು, ಸಾರಿಗೆ ಸೌಲಭ್ಯಗಳ ಕೊರತೆ, ಕಬ್ಬಿಣಾಂಶ ಮಾತ್ರೆಗಳನ್ನು ಸೇವಿಸದಂತೆ ತಡೆಹಿಡಿಯುತ್ತಿರುವ ಮೂಢನಂಬಿಕೆಗಳು, ಬಡತನದಿಂದಾಗಿ ಸೂಕ್ತ ಚಿಕಿತ್ಸೆ ಪಡೆಯಲಾಗದೇ ಇಂದಿಗೂ ಹೆರಿಗೆ ಸಂದರ್ಭದಲ್ಲಿ ತಾಯಿ ಮತ್ತು ಮಗುವಿನ ಸಾವನ್ನು ಕಾಣುತ್ತಿದ್ದೇವೆ. ಮೇಲಿನ ಈ ಎಲ್ಲಾ ಸಮಸ್ಯೆಗಳ ಜೊತೆಗೆ ಮಹಿಳೆಯರಿಗೆ ಇರುವ ಮಾಹಿತಿಯ ಕೊರತೆ, ಕೌಟುಂಬಿಕ ನೀತಿ, ಸಂಪ್ರದಾಯಗಳು ಮತ್ತು ಪ್ರಧಾನಧಾರೆಯ ಮೌಲ್ಯಗಳನ್ನು ನಾವು ಹಲವೆಡೆ ಇಂದಿಗೂ ಕಾಣುತ್ತಿರುವುದು ಶೋಚನೀಯ ಸಂಗತಿಯಾಗಿದೆ. ಮುಂದುವರೆದು ಸರ್ಕಾರ ಮಹಿಳಾ ಅಭಿವೃದ್ದಿ ಒಜಜನೆಗಳನ್ನು ಯಶಸ್ವಿಗೊಳಿಸಲು ಜಾಗೃತಿ ತರಬೇತಿ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ದುರಂತವೆಂದರೆ ಇಂದಿಗೂ ಮಹಿಳೆಯರು ಈ ಸಮಸ್ಯೆಗಳಿಂದ ಬಳಲುತ್ತಿರುವುದು ಸತ್ಯ ಸಂಗತಿ. ಮಹಿಳೆಯರಿಗೆ ತರಬೇತಿ ನೀಡಬೇಕಾದ ಅಭಿವೃದ್ಧಿ ಕಾರ್ಯಕ್ರಮಗಳು ಕೇವಲ ತರಬೇತಿ ಮಾತ್ರ ಮಾಡಬೇಕು ಎನ್ನುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಹಾಗಾಗಿ ಅಲ್ಲಿನ ಫಲಾನುಭವಿಗಳನ್ನು ಸರಿಯಾಗಿ ಗುರುತಿಸುತ್ತಿಲ್ಲ. ಇಂದಿಗೂ ವಿದ್ಯಾವಂತ ಅನುಭವಿ ಹೆಣ್ಣು ಮಕ್ಕಳಲ್ಲೂ ಸಹ ಅಸ್ಥಿರತೆ, ಆತ್ಮವಿಶ್ವಾಸದ ಕೊರತೆ ಕಾಣುತ್ತಿದೆ. ಈ ಅಸ್ಥಿರತೆ, ಅತ್ಮವಿಶ್ವಾಸದ ಕೊರತೆ, ಸಾಮರ್ಥ್ಯದ ಕೊರತೆಯ ಹಿಂದೆ ಪ್ರಧಾನ ಧಾರೆಯ ಮೌಲ್ಯಗಳು ತಾಂಡವವಾಡುತ್ತಿವೆ. ಇವುಗಳನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಸರ್ಕಾರದ ತರಬೇತಿ ಕಾರ್ಯಕ್ರಮಗಳು ರೂಪುಗೊಳ್ಳಬೇಕಿದೆ. ಆದರೆ ಅದು ಇನ್ನೂ ಕಾರ್ಯಗತಗೊಳ್ಳುತ್ತಿಲ್ಲ ಏಕೆ?

ಪಂಚವಾರ್ಷಿಕ ಯೋಜನೆಗಳ ಮೂಲಕ ಮಹಿಳೆಯರ ಅಭಿವೃದ್ಧಿಯನ್ನು ಸಾಧಿಸುವುದರ ಜೊತೆಗೆ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟಲು ಸರ್ಕಾರವು ವಿಶೇಷ ಯೋಜನೆಗಳನ್ನು ಪಂಚವಾರ್ಷಿಕ ಯೋಜನೆಗಳ ಮೂಲಕ ಜಾರಿಗೊಳಿಸಿದೆ. ಇದರ ಮೂಲಕ ಸ್ತ್ರೀಯರಿಗೆ ಸಮಾಜದಲ್ಲಿ ಎದುರಾಗುತ್ತಿರುವ ಸಮಸ್ಯೆಗಳು ಮತ್ತು ದೌರ್ಜನ್ಯಗಳನ್ನು ತಡೆಗಟ್ಟಿ, ಸ್ತ್ರೀಯರಿಗೆ ರಕ್ಷಣೆ ನೀಡುವ ಕೆಲಸವನ್ನು ಈ ಯೋಜನೆಗಳು ಮಾಡುತ್ತವೆ. ಆದರೆ ಈ ಯೋಜನೆಗಳಾವುವೂ ಮಹಿಳೆಯರಿಗೆ ಸೂಕ್ತ ರಕ್ಷಣೆಯನ್ನು ನೀಡುತ್ತಿಲ್ಲ. ಇದರ ಪರಿಣಾಮದಿಂದಾಗಿ ಮಹಿಳೆಯರ ಮೇಲೆ ಅನೇಕ ದೌರ್ಜನ್ಯಗಳು ನಡೆಯುತ್ತಲೇ ಇದೆ. ಸರ್ಕಾರವು ಒಂದು ನಿರ್ದಿಷ್ಟ ಸಂಶೋಧನಾವಿಧಾನದ ಮೇಲೆ ಪ್ರತಿಯೊಂದು ಯೋಜನೆಯನ್ನು ರೂಪಿಸಬೇಕು. ಮಹಿಳಾ ಪರ ಯೋಜನೆಗಳಿಗೆ ವಿಶೇಷವಾಗಿ ಸ್ತ್ರೀವಾದಿ ಸಂಶೋಧನಾ ವಿಧಾನವನ್ನು ಅಳವಡಿಸಿ

ಯೋಜನೆಗಳನ್ನು ಜಾರಿಗೊಳಿಸಬೇಕು. ಆಗ ಮಾತ್ರ ಮಹಿಳಾ ಯೋಜನೆಗಳಿಗೆ ನ್ಯಾಯ ಸಿಗುತ್ತದೆ. ಆದರೆ ಇಂದು ಜಾರಿಯಲ್ಲಿರುವ ಯೋಜನೆಗಳು ಪುರುಷ ಪ್ರಧಾನ ಮೌಲ್ಯಗಳಿಂದ ಕೂಡಿದ್ದು ಪುರುಷರಿಗೇ ಹೆಚ್ಚು ಮಹತ್ವ ನೀಡಿ ಸ್ತ್ರೀಯರನ್ನು ಕಡೆಗಣಿಸುತ್ತಿದೆ. ಹೀಗಾಗಿ ಮಹಿಳಾ ಪರ ಯೋಜನೆಗಳಿದ್ದರೂ ಸಹ ಮಹಿಳೆಯರ ಅಭಿವೃದ್ಧಿಯಾಗದೆ ಮತ್ತಷ್ಟು ದೌರ್ಜನ್ಯಕ್ಕೊಳಗಾಗುತ್ತಿರುವುದು ವಿಷಾದನೀಯ ಸಂಗತಿಯಾಗಿದೆ.

ಸಮಾಜದಲ್ಲಿ ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸರ್ಕಾರವು ಮಹಿಳೆಯರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ರೂಪಿಸಿದ್ದರೂ ಅಲ್ಲಿ ಪ್ರಧಾನಧಾರೆಯ ಮೌಲ್ಯಗಳು ತುಂಬಾ ಜಾಗರೂಕತೆಯಿಂದ ಕಾರ್ಯನಿರ್ವಹಿಸುತ್ತಿವೆ. ಇದರಿಂದಾಗಿ ಮಹಿಳಾ ಅಭಿವೃದ್ಧಿಯನ್ನು ಸಮರ್ಪಕವಾಗಿ ಸಾಧಿಸಲಾಗುತ್ತಿಲ್ಲ. ಇದಕ್ಕೆಲ್ಲಾ ಕೇವಲ ಯೋಜನೆಗಳ ಅಸಮರ್ಪಕತೆ ಒಂದೇ ಕಾರಣವಲ್ಲ. ಸರ್ಕಾರ, ಸರ್ಕಾರದ ಯೋಜನಾ ನೀತಿಗಳು, ಅವುಗಳ ಸೈದ್ಧಾಂತಿಕ ಹಿನ್ನೆಲೆಗಳು, ವಿಚಾರ ಧಾರೆಗಳು, ಕಾರ್ಯತಂತ್ರಗಳು, ಮೌಲ್ಯಮಾಪನ, ಮೌಲ್ಯಮಾಪನದಲ್ಲಿನ ಸೈದ್ಧಾಂತಿಕತೆ, ವೈಚಾರಿಕ ಹಿನ್ನಲೆ ಎಲ್ಲವೂ ಸಂಬಂಧಪಡುತ್ತದೆ. ಈ ನಿಟ್ಟಿನಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಸರ್ಕಾರಿ ಕಾರ್ಯಕ್ರಮಗಳನ್ನು ಅವಲೋಕನ ಮಾಡಲೇಬೇಕಾಗಿದೆ. ಅದರಲ್ಲೂ ಪ್ರಮುಖವಾಗಿ ಸ್ತ್ರೀವಾದಿ ದೃಷ್ಟಿಕೋನದಿಂದ ಪ್ರಜ್ಞಾಪೂರ್ವಕವಾಗಿ ಅಧ್ಯಯನಗಳು ಸಾಗಬೇಕಾಗಿವೆ. ಈ ಅಂಶವನ್ನು ಪ್ರಮುಖವಾಗಿ ಪರಿಗಣಿಸಿ ಅಧ್ಯಯನ ಮಾಡಲಾಗುತ್ತಿದೆ.

ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಧ್ಯಯನ ಮಾಡುವಲ್ಲಿ ನೇರವಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಧ್ಯಯನ ಮಾಡಿದರೆ, ಮರು ಮೌಲ್ಯಮಾಪನಕ್ಕೊಳಪಡಿಸಿದರೆ ಸಮಸ್ಯೆಗೆ ಸೂಕ್ತ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ. ಅಲ್ಲಿ ತಾತ್ಪೂರಿಕ ಸಮಸ್ಯೆ ಪರಿಹಾರವಾಗಬಹುದು. ಈ ಸಮಸ್ಯೆಯ ಮೂಲ, ಅಭಿವೃದ್ಧಿ ಸರ್ಕಾರದ ಕಾರ್ಯಾಂಗಗಳ ವಿಧಾನಗಳು, ಇವೆಲ್ಲಕ್ಕೂ ಮೊದಲು ಅಭಿವೃದ್ಧಿ ಸಿದ್ಧಾಂತಗಳು, ಇವೆಲ್ಲವುಗಳನ್ನು ಸ್ತ್ರೀವಾದ ದೃಷ್ಟಿಕೋನದಿಂದ ಅಧ್ಯಯನ ಮಾಡಬೇಕು.

* ಇದಲ್ಲದೇ ಅತ್ಯಾಚಾರ, ಕೌಟುಂಬಿಕ ದೌರ್ಜನ್ಯ, ಲೈಂಗಿಕ ದೌರ್ಜನ್ಯ, ಲಿಂಗಾನುಪಾತದಲ್ಲಿ ಅಸಮಾನತೆಗಳಂತಹ ಗಂಭೀರ ಸ್ವರೂಪದ ಸಮಸ್ಯೆಗಳನ್ನು ಗುರುತಿಸಿ ಪಂಚವಾರ್ಷಿಕ ಯೋಜನೆಯಡಿ ಪರಿಹಾರ ಸೂಚಿಸಲು ಸರ್ಕಾರ ಹಲವಾರು ಶಾಸನಾತ್ಮಕ ಸವಲತ್ತುಗಳನ್ನು ಒದಗಿಸಿದೆ. ಆದರೂ ಸಹ ಇಂದಿಗೂ ಈ ಮೇಲ್ಕಂಡ ಸಮಸ್ಯೆಗಳ ತೀವ್ರತೆ ಹೆಚ್ಚುತ್ತಲೇ ಇದೆ. ಅಂಕಿ-ಅಂಶಗಳ ಪ್ರಕಾರ ಭಾರತದಲ್ಲಿ ೨೦೦೮ರಲ್ಲಿ ಶೇ.೧೭.೩೭೩ರಷ್ಟು ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗಿದ್ದರು. ೩೨ ರಿಂದ ೩೫ ನಿಮಿಷಕ್ಕೆ ಒಬ್ಬ ಮಹಿಳೆ ಮೇಲೆ ಅತ್ಯಾಚಾರ ನಡೆದರೆ, ೪೫

ರಿಂದ ೪೮ ಮಂದಿ ಹೆಣ್ಣು ಮಕ್ಕಳ ಮೇಲೆ ಪ್ರತಿದಿನ ಅತ್ಯಾಚಾರ ನಡೆಯುತ್ತಿದೆ. ಈ ಸಂಖ್ಯೆ ದಿನದಿಂದ ದಿನಕ್ಕೆ ಶೇ.೬-೮ರಷ್ಟು ಹೆಚ್ಚಾಗುತ್ತಿದೆ.

* ಭಾರತದಂತಹ ಪಿತೃ ಪ್ರಧಾನ ಸಮಾಜದಲ್ಲಿ ಹೆಣ್ಣು ಮಕ್ಕಳ ಭ್ರೂಣ ಹತ್ಯೆ ಹೆಚ್ಚಾಗುತ್ತಲಿದೆ. ೨೦೦೧ರ ಅಂಕಿ-ಅಂಶಗಳ ಪ್ರಕಾರ ಶೇ.೪೯ ರಷ್ಟು ಹೆಣ್ಣು ಭ್ರೂಣ ಹತ್ಯೆ ನಡೆದರೆ, ೨೦೦೭ರಲ್ಲಿ ಶೇ.೫೩ರಷ್ಟು ಹೆಣ್ಣು ಭ್ರೂಣ ಹತ್ಯೆಗಳು ನಡೆದಿವೆ. ರಾಜಸ್ಥಾನ, ತಮಿಳುನಾಡು, ಆಂಧ್ರ ಪ್ರದೇಶಗಳಲ್ಲಿ ಇಂದಿಗೂ ಹೆಣ್ಣು ಭ್ರೂಣಹತ್ಯೆ ನಡೆಯುತ್ತಲೇ ಇವೆ.

* ಇಂದು ಮಹಿಳೆಯರು ಕೌಟುಂಬಿಕ ದೌರ್ಜನ್ಯಗಳಿಗೆ ಬಲಿಯಾಗುತ್ತಿರುವುದು ಹೆಚ್ಚುತ್ತಿದೆ. ಪ್ರತಿ ಇಬ್ಬರು ಮಹಿಳೆಯರಲ್ಲಿ ಒಬ್ಬ ಮಹಿಳೆ ಕೌಟುಂಬಿಕ ದೌರ್ಜನ್ಯಕ್ಕೊಳಗಾದರೆ ಶೇ.೪೦ರಷ್ಟು ಮಹಿಳೆಯರು ತಮ್ಮ ಗಂಡಂದಿರಿಂದಲೇ ದೈಹಿಕವಾಗಿ ದೌರ್ಜನ್ಯಕ್ಕೆ ಒಳಪಡುತ್ತಿದ್ದಾರೆ.

* ೬೦೦ ಮಹಿಳೆಯರಲ್ಲಿ ಶೇ.೭೬ರಷ್ಟು ಮಹಿಳೆಯರು ತಮ್ಮ ಬಾಲ್ಯ ಮತ್ತು ಯೌವನಾವಸ್ಥೆಯಲ್ಲಿ ಲೈಂಗಿಕ ದೌರ್ಜನ್ಯಗಳಿಗೆ ಒಳಗಾಗಿದ್ದಾರೆ. ಇವರಲ್ಲಿ ಶೇ.೪೨ರಷ್ಟು ಮಹಿಳೆಯರು ತಮ್ಮ ಚಿಕ್ಕಪ್ಪ, ಮಾವ ಮತ್ತು ಇತರ ಸಂಬಂಧಿಗಳಿಂದ ದೌರ್ಜನ್ಯಕ್ಕೊಳಗಾದರೆ, ಶೇ.೪ ರಷ್ಟು ಮಹಿಳೆಯರು ಅವರ ತಂದೆ ಮತ್ತು ಅಣ್ಣನಿಂದಲೇ ದೌರ್ಜನ್ಯಕ್ಕೊಳಗಾಗಿದ್ದಾರೆ.

* ಸರ್ಕಾರವು ಅನೇಕ ಯೋಜನೆಗಳ ಮೂಲಕ ಸುಧಾರಣಾ ಕಾರ್ಯಕ್ರಮಗಳನ್ನು ಕೈಗೊಂಡಿದೆ ಯಾದರೂ ಸಹ ಮಹಿಳೆಯರು ಇಂದಿಗೂ ಮೇಲ್ಕಂಡ ಗಂಭೀರ ಸ್ವರೂಪದ ಸಮಸ್ಯೆಗಳಿಂದ ಬಳಲುತ್ತಿರುವುದು ಸತ್ಯ. ಸರ್ಕಾರವು ಜಾರಿಗೊಳಿಸಿರುವ ತರಬೇತಿ ಕಾರ್ಯಕ್ರಮಗಳು ಸುಧಾರಣೆಯ ನಿಟ್ಟಿನಲ್ಲಿ ಕೆಲಸ ಮಾಡದೆ ಕೇವಲ ತರಬೇತಿ ಮಾತ್ರ ನೀಡಬೇಕು ಎನ್ನುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಹಾಗಾಗಿ ಅಲ್ಲಿನ ಫಲಾನುಭವಿಗಳನ್ನು ಸರಿಯಾಗಿ ಗುರುತಿಸುತ್ತಿಲ್ಲ. ವಿದ್ಯಾವಂತ ಹೆಣ್ಣು ಮಕ್ಕಳಲ್ಲಿಯೂ ಸಹ ಅಸ್ಥಿರತೆ, ಆತ್ಮ ವಿಶ್ವಾಸದ ಕೊರತೆ ಕಾಡುತ್ತಿದೆ. ಈ ಕೊರತೆಗಳ ಹಿಂದೆ ಪ್ರಧಾನ ಧಾರೆಯ ಮೌಲ್ಯಗಳು ತಾಂಡವವಾಡುತ್ತಿದೆ. ಇವುಗಳನ್ನು ನಿರ್ಮೂಲನ ಮಾಡುವ ನಿಟ್ಟಿನಲ್ಲಿ ಸರ್ಕಾರದ ತರಬೇತಿ ಕಾರ್ಯಕ್ರಮಗಳು ಕಟ್ಟುನಿಟ್ಟಾಗಿ ಜಾರಿಗೊಳ್ಳದಿರುವುದು ವಿಪರ್ಯಾಸದ ಸಂಗತಿಯಾಗಿದೆ. ಆದ್ದರಿಂದಾಗಿ ಸರ್ಕಾರವು ಇಂತಹ ಗಂಭೀರ ಸ್ವರೂಪದ ಸಮಸ್ಯೆಗಳನ್ನು ಗಮನದಲ್ಲಿರಿಸಿಕೊಂಡು ಮಹಿಳೆಯರಲ್ಲಿ ಜಾಗೃತಿ ಮೂಡಿಸಬೇಕು. ಜೊತೆಗೆ ತರಬೇತಿ ಕೇಂದ್ರಗಳ ಮೂಲಕ ಅವರಲ್ಲಿ ಅರಿವು ಮೂಡಿಸಬೇಕು. ಅವರ ವಿರುದ್ಧದ ಈ ರೀತಿಯ ದೌರ್ಜನ್ಯಗಳನ್ನು ವಿರೋಧಿಸಿ ತಪ್ಪಿತಸ್ಥರ ವಿರುದ್ಧ ದೂರು ದಾಖಲಿಸಲು ಸುಲಭ ಸಾಧ್ಯವಾಗುವಂತೆ ಅವರಿಗೆ ಅವರ ಕಾನೂನಿನ ಹಕ್ಕುಗಳನ್ನು ತಿಳಿಸಿ ತಕ್ಷಣ ನ್ಯಾಯ ಸಿಗುವಂತೆ ಅವರಿಗೆ ಅವಕಾಶ ಕಲ್ಪಿಸಿಕೊಡಬೇಕು.

ಕಾನೂನಿನ ಮೇಲಿರುವ ಹಿಂಜರಿಕೆ, ಅಪನಂಬಿಕೆಗಳನ್ನು ಹೋಗಲಾಡಿಸಿ ಅವರಿಗೂ ಸೂಕ್ತ ನ್ಯಾಯ ದೊರಕಿಸಿಕೊಡುವಂತೆ ಮಹಿಳೆಯರಿಗೆ ವಿಶೇಷವಾದ ಕಾನೂನನ್ನು ರೂಪಿಸಬೇಕು. ಅಲ್ಲದೇ ಮಹಿಳೆಯರ ವಿರುದ್ಧದ ಈ ರೀತಿಯ ದೌರ್ಜನ್ಯಗಳನ್ನು ಹೋಗಲಾಡಿಸಲು ಇರುವ ಕಾಯ್ದೆಗಳನ್ನು ಹೆಚ್ಚು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಆರೋಪಿಗಳಿಗೆ ಉಗ್ರ ಶಿಕ್ಷೆಯನ್ನು ನೀಡುವುದರ ಮೂಲಕ ಇಂತಹ ತಪ್ಪುಗಳನ್ನು ಯಾರೂ ಮಾಡದಂತೆ ಎಚ್ಚರಿಕೆ ನೀಡಬೇಕಿದೆ. ಅಲ್ಲದೆ ಈ ರೀತಿಯ ಸಮಸ್ಯೆಗಳು ಮತ್ತೆ ಉದ್ಭವಿಸದಂತೆ ಸಂಪೂರ್ಣ ನಿರ್ಮೂಲನ ಮಾಡಲು ಸರ್ಕಾರ ಶ್ರಮಿಸಬೇಕಿದೆ.

ಇದೆಲ್ಲದರ ಹಿಂದಿರುವ ಮುಖ್ಯ ಕಾರಣ ಎಂದರೆ ಸಮುದಾಯದಲ್ಲಿ ಜಾಲ್ತಿಯಲ್ಲಿರುವ ಪ್ರಧಾನ ಮೌಲ್ಯಗಳು, ಮದುವೆ, ಕುಟುಂಬ ಎನ್ನುವ ಅಂಶಗಳು ಬಂದಾಗ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ನಿರ್ಧಾರಗಳು ಬದಲಾಗುತ್ತವೆ. ಏಕೆಂದರೆ ಇಂದಿಗೂ ಪಿತೃ ಪ್ರಧಾನ ಮೌಲ್ಯಗಳು ಮಹಿಳಾ ಶಿಕ್ಷಣವನ್ನು ನಿಯಂತ್ರಿಸುತ್ತಿದೆ. ಮಹಿಳೆಯರ ಮೂಲ ಕುಟುಂಬ ಸಮಸ್ಯೆಗಳನ್ನು ಗುರುತಿಸಲಾಗದೆ ರೂಪಿತವಾದ ಯೋಜನೆಗಳು, ಕಾರ್ಯನೀತಿಗಳು ಇಂದಿನ ದಿನಗಳಲ್ಲಿ ಮಹಿಳಾ ಶಿಕ್ಷಣಕ್ಕೆ ಇರುವ ಅವಕಾಶಗಳಿಗೆ ಭಿನ್ನ ತಿರುವುಗಳನ್ನು ತಂದುಕೊಡುತ್ತಿವೆ. ಮದುವೆ, ಉದ್ಯೋಗಸ್ಥ ಹೆಂಡತಿ, ಕುಟುಂಬಕ್ಕೆ ಹಣಕಾಸಿನ ನೆರವನ್ನು ಒದಗಿಸಲು ಉದ್ಯೋಗ ಕ್ಷೇತ್ರದಲ್ಲಿ ಯಾವುದೇ ತಕರಾರುಗಳನ್ನು ತೆಗೆಯದೆ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಾರೆ ಎನ್ನುವ ಹಿನ್ನೆಲೆಯಲ್ಲಿ ದೊರಕುತ್ತಿರುವ ಉದ್ಯೋಗದ ಅವಕಾಶಗಳೆಲ್ಲ ಪುನಃ ಮಹಿಳಾ ಶಿಕ್ಷಣದಲ್ಲಿ ಅಸಮಾನತೆಯ ಎಳೆಗಳೇ ಆಗಿವೆ. ಈ ನಿಟ್ಟಿನಲ್ಲಿ ಸರ್ಕಾರ ಹೊಸ ಮಾದರಿಯ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕಿದೆ. ಇಂತಹ ಹಲವಾರು ಸಮಸ್ಯೆಗಳು ಲಿಂಗ ಅಸಮಾನತೆಯ ನೆಲೆಯಲ್ಲಿರುವಂತವು. ಅವುಗಳನ್ನು ಗಂಭೀರವಾಗಿ ಪರಿಗಣಿಸಿ ಯೋಜನೆಗಳು ರೂಪುಗೊಳ್ಳಬೇಕಾದ ಅವಶ್ಯಕತೆ ಇದೆ. ಮುಖ್ಯವಾಗಿ ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡಿ, ಇನ್ನೂ ವಿಶೇಷ ಸೌಲಭ್ಯಗಳನ್ನು ನೀಡುವುದರ ಜೊತೆಗೆ ಸ್ತ್ರೀ ಶಿಕ್ಷಣವನ್ನು ಹೆಚ್ಚು ಪ್ರೋತ್ಸಾಹಿಸಬೇಕು.

ಈ ಮೇಲ್ಕಂಡ ಯೋಜನೆಗಳಲ್ಲದೇ ಸರ್ಕಾರವು ರಾಜಕೀಯ, ಆರ್ಥಿಕ, ಅಭಿವೃದ್ಧಿ ಮತ್ತಿತರ ಕ್ಷೇತ್ರಗಳಲ್ಲಿ ಮಹಿಳೆಯರನ್ನು ಸಬಲೀಕರಣಗೊಳಿಸಲು ಪ್ರಯತ್ನಿಸುತ್ತಿದೆ. ಆದರೆ ಯೋಜನೆಗಳು ಜಾರಿಗೊಂಡರೂ ಸಹ ಮಹಿಳೆಯರ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ. ಏಕೆಂದರೆ ಅಭಿವೃದ್ಧಿ ಯೋಜನೆಗಳು ಪುರುಷ ಪ್ರಧಾನ ಮೌಲ್ಯಗಳ ಆಧಾರದ ಮೇಲೆ ರಚನೆಗೊಂಡಿರುವುದರಿಂದಾಗಿ ಮಹಿಳೆಯರ ಅಭಿವೃದ್ಧಿಯಲ್ಲಿ ಪುರುಷರ ಹಸ್ತಕ್ಷೇಪವನ್ನು ಅಭಿವೃದ್ಧಿ ಯೋಜನೆಗಳು ತಿರಸ್ಕರಿಸುವುದಿಲ್ಲ. ಹಾಗಾಗಿಯೇ ಮಹಿಳೆಯರಿಗೆಂದು ರೂಪುಗೊಂಡ ಯೋಜನೆಗಳಿಂದ ಪುರುಷರು

ಲಾಭ ಪಡೆಯುತ್ತಿದ್ದಾರೆ. ಉದಾ : ಪಂಚಾಯತ್ ರಾಜ್‌ನಲ್ಲಿ ಮಹಿಳೆಯರಿಗೆಂದು ಶೇ.೩೩ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಇದರಿಂದಾಗಿ ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಬಲೀಕರಣಗೊಳ್ಳಲು ಅವಕಾಶ ಸಿಕ್ಕಂತಾಗುತ್ತದೆ. ಆದರೆ ಮಹಿಳೆಯರು ಚುನಾವಣೆಯಲ್ಲಿ ಗೆದ್ದ ನಂತರ ಅವರ ಅಧಿಕಾರವನ್ನು ಆಕೆಯ ಗಂಡ, ತಂದೆ, ಅಣ್ಣ ಇತ್ಯಾದಿ ಕುಟುಂಬದ ಪುರುಷ ಸದಸ್ಯರು ನಿಭಾಯಿಸುತ್ತಾರೆ. ಆದರೆ ಇದನ್ನು ಯಾರೊಬ್ಬರೂ ಪ್ರಶ್ನಿಸುವುದಿಲ್ಲ. ಹೀಗಾಗಿ ಮಹಿಳೆಯರು ಕೇವಲ ರಬ್ಬರ್ ಸ್ಟ್ಯಾಂಪ್ ಗಳಾಗುತ್ತಿದ್ದಾರೆ.

ಮಹಿಳೆಯರು ಸಬಲೀಕರಣಗೊಳ್ಳಲು ಸರ್ಕಾರವು ಅವರಿಗೆಂದೇ ಹಲವಾರು ವಿಶೇಷ ಯೋಜನೆಗಳನ್ನು ಜಾರಿಗೊಳಿಸಿದೆ. ಆರ್ಥಿಕ ಸಹಾಯ ನೀಡುವುದರ ಮೂಲಕ ಮಹಿಳೆಯರು ಸ್ವಯಂ ಉದ್ಯೋಗವನ್ನು ಹೊಂದುವುದರ ಮೂಲಕ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಸರ್ಕಾರ ಭಾವಿಸಿದೆ. ಆದರೆ ಪುರುಷರು ತಮ್ಮ ಕುಟುಂಬದ ಮಹಿಳಾ ಸದಸ್ಯರಿಂದ ಆ ಹಣವನ್ನು ಪಡೆದು ಅವರು ಬಳಸಿಕೊಳ್ಳುತ್ತಿದ್ದಾರೆ. ಇದರಿಂದ ಮಹಿಳೆಯರು ಆರ್ಥಿಕವಾಗಿ ಹಿಂದುಳಿಯುತ್ತಲೇ ಇದ್ದಾರೆ.ಮೇಲ್ಕಂಡ ಎಲ್ಲಾ ಸರ್ಕಾರಿ ಯೋಜನೆಗಳನ್ನು ಗಮನಿಸಿದಾಗ ಈ ಯೋಜನೆಗಳು ಎಷ್ಟರ ಮಟ್ಟಿಗೆ ಮಹಿಳೆಯರ ಅಭಿವೃದ್ಧಿಗೆ ಶ್ರಮಿಸುತ್ತಿದೆ ಎಂಬುದನ್ನು ತಿಳಿಯಬಹುದಾಗಿದೆ. ಸರ್ಕಾರವು ರೂಪಿಸಿದ ಈ ಯೋಜನೆಗಳು ಯಾವುದೇ ಸರಿಯಾದ ನಿರ್ದಿಷ್ಟ ಸಿದ್ಧಾಂತವನ್ನಿಟ್ಟು ಕೊಳ್ಳದೇ ಮಹಿಳೆಯರ ಅಗತ್ಯಗಳ ಬಗ್ಗೆ ಚಿಂತಿಸದೇ ಪಿತೃ ಪ್ರಧಾನ ಮೌಲ್ಯಗಳ ಆಧಾರದ ಮೇಲೆ ಪೂರ್ವಾಗ್ರಹ ಪೀಡಿತವಾಗಿ ರೂಪಿಸಿದವುಗಳಾಗಿವೆ. ಈ ಯೋಜನೆಗಳನ್ನು ರೂಪಿಸುವಾಗ ಮಹಿಳೆಯರ ಹಿತದೃಷ್ಟಿ-ಕಾಳಜಿಗಳನ್ನು ನಿರ್ಲಕ್ಷಿಸಿ ಕೇವಲ ಪುರುಷರ ಹಿತದೃಷ್ಟಿಯನ್ನು ಮಾತ್ರ ಗಮನದಲ್ಲಿರಿಸಿಕೊಂಡಿದೆ. ಸ್ತ್ರೀಯರ ಅಭಿವೃದ್ಧಿಯನ್ನು ಕಡೆಗಣಿಸಲಾಗಿದೆ ಎಂಬುದಕ್ಕೆ ಈ ಯೋಜನೆಗಳ ಫಲಿತಾಂಶಗಳೇ ಸಾಕ್ಷಿಯಾಗಿವೆ. ಹಲವಾರು ಮಹಿಳಾ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ರೂಪಿಸಿರುವ ಯೋಜನೆಗಳು ಇಂದಿಗೂ ಸಮಾಜದ ಪ್ರಮುಖ ಸಮಸ್ಯೆಗಳಿಗೆ ಸ್ಪಂದಿಸದೇ ಇರುವುದರಿಂದಾಗಿ ಮಹಿಳೆಯರ ಸಾವು, ದಬ್ಬಾಳಿಕೆ, ದೌರ್ಜನ್ಯ, ಹಿಂಸಾತ್ಮಕ ಚಟುವಟಿಕೆಗಳು ಮಹಿಳೆಯರ ಮೇಲೆ ನಡೆಯುತ್ತಲೇ ಇವೆ. ಈ ರೀತಿಯ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ವಿಫಲವಾಗಿರುವುದು ನಿಜಕ್ಕೂ ವಿಷಾಧನೀಯ. ಅಲ್ಲದೇ ಮಹಿಳೆಯರ ಸಮಸ್ಯೆಗಳನ್ನು ಪ್ರಮುಖ ಸಮಸ್ಯೆಗಳೆಂದು ಗುರ್ತಿಸದೆ ಕೇವಲ ಪುರುಷರಿಗೆ ಸಂಬಂಧಿಸಿದ ಆರ್ಥಿಕ, ತಾಂತ್ರಿಕ ಸಮಸ್ಯೆಗಳಣ್ನು ಮುಖ್ಯವೆಂದು ಪರಿಗಣಿಸಿ ಅದಕ್ಕೆ ಸೂಕ್ತ ಪರಿಹಾರವನ್ನು ಹುಡುಕಲು ಪ್ರಯತ್ನಿಸುವ ಸಮಾಜದ ಮುಖ್ಯವಾಹಿನಿಯ ಗಣ್ಯವ್ಯಕ್ತಿಗಳು ಮತ್ತು ಕೇವಲ ಆರ್ಥಿಕತೆಯಿಂದ ಮತ್ತು ತಾಂತ್ರಿಕತೆಯಿಂದ ದೇಶದ ಅಭಿವೃದ್ಧಿ ಸಾಧ್ಯವೆಂದು ಬಿಂಬಿಸುತ್ತಿರುವ ಮಾಧ್ಯಮಗಳ ನಡೆಯು ಮುರ್ಖತನದಂತೆ ಭಾಸವಾಗುತ್ತದೆ.

ಮುಖ್ಯವಾಹಿನಿಯ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಮಹಿಳೆಯರ ಸಮಸ್ಯೆಗಳನ್ನು ನಿರ್ಲಕ್ಷಿಸುವುದು ಸರಿಯಲ್ಲ. ದೇಶದ ಅಭಿವೃದ್ಧಿಗೆ ಮಹಿಳೆಯರ ಕೊಡುಗೆಯೂ ಅಪಾರವಾದುದೆಂದು ಭಾವಿಸಿ ಮಹಿಳೆಯರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರಕಿಸಿಕೊಡಬೇಕು. ಮುಖ್ಯವಾಗಿ ಮಹಿಳೆಯರ ಯೋಜನೆಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ರಚಿಸಿ ಅದು ಕಟ್ಟುನಿಟ್ಟಾಗಿ ಜಾರಿಗೊಳ್ಳುವಂತೆ ಸರ್ಕಾರವು ಶ್ರಮವಹಿಸಬೇಕು. ತಪ್ಪಿತಸ್ಥರಿಗೆ ಮತ್ತು ಈ ಯೋಜನೆಗಳನ್ನು ನಿರ್ಲಕ್ಷಿಸುವ ಅಧಿಕಾರಿಗಳಿಗೆ ಕಠಿಣ ಶಿಕ್ಷೆಯಾಗುವಂತೆ ಮಾಡುವುದರ ಮೂಲಕ ಮಹಿಳಾ ಪರ ಯೋಜನೆಗಳು ಸರಿಯಾಗಿ ಜಾರಿಗೊಂಡು ಮಹಿಳೆಯರ ಅಭಿವೃದ್ಧಿಗೆ ಶ್ರಮಿಸುವಂತೆ ಮಾಡಬಹುದು.

ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಅಭಿವೃದ್ಧಿ ಪರಿಕಲ್ಪನೆ, ಅಭಿವೃದ್ಧಿ ಸಿದ್ಧಾಂತಗಳನ್ನು ಮರುಮೌಲ್ಯಮಾಪನ ಮಾಡುವುದು ಅತ್ಯವಶ್ಯಕವಾಗಿದೆ. ಸಾಮಾನ್ಯವಾಗಿ ಅಭಿವೃದ್ಧಿ ಆಗಲು ಮಾನವ ಸಮುದಾಯ ಭೌತಿಕವಾಗಿ, ಬೌದ್ಧಿಕವಾಗಿ, ಮಾನಸಿಕವಾಗಿ ಆರೋಗ್ಯವಂತರಾಗಿರಬೇಕು. ಆಗ ಮಾತ್ರ ಸಮಗ್ರ ಮಾನವ ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ. ಮಹಿಳೆಯರು ಈ ಎಲ್ಲ ಹಂತದಲ್ಲೂ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬೇಕು. ಸಬಲತೆಗೆ ಬೇಕಾಗಿರುವುದು ಪೂರಕವಾದ ಭೌತಿಕ ವಾತಾವರಣದಂತಹ ಉತ್ತಮ ವಾತಾವರಣ. ಮಾನಸಿಕ ಸ್ಥಿರತೆ ತಂದು ಕೊಡುವ ನಿಟ್ಟಿನಲ್ಲಿ ಸಮಾಜ ರೂಪುಗೊಳ್ಳಬೇಕು. ಈ ನಿಟ್ಟಿನಲ್ಲಿ ಅಭಿವೃದ್ಧಿ ನಿರ್ವಚನ ಗೊಳ್ಳಬೇಕು.

ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಸರ್ಕಾರ ಈ ಎಲ್ಲಾ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಯಾವ ಸೈದ್ಧಾಂತಿಕ ಚೌಕಟ್ಟನ್ನು ಅಳವಡಿಸಿಕೊಂಡಿದೆ? ಯಾವ ರೀತಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುತ್ತಿದೆ? ಫಲಾನುಭವಿಗಳು ಯಾರು? ಎರಡನೆಯದಾಗಿ ಸರ್ಕಾರದ ಯೋಜನೆ ರೂಪಿಸುವವರ ವೈಚಾರಿಕೆ ಹಿನ್ನೆಲೆ, ಅವರ ಚಿಂತನಾಕ್ರಮಗಳು ಈ ಎಲ್ಲಾ ಅಂಶಗಳನ್ನು ಒಳಗೊಂಡು ಮಹಿಳಾಪರ ಸರ್ಕಾರಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅವಲೋಕಿಸಲಾಗುತ್ತಿದೆ. ಇಲ್ಲಿ ಸರ್ಕಾರೇತರ ಕಾರ್ಯಕ್ರಮಗಳನ್ನು ಸಂದರ್ಭಕ್ಕನುಗುಣವಾಗಿ ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗುತ್ತಿದೆ.

ಮಹಿಳೆಯರ ಅಭಿವೃದ್ಧಿ ಕುರಿತು ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಈಗಾಗಲೇ ಸಮುದಾಯದಲ್ಲಿ ಕಾಣುತ್ತಿದ್ದೇವೆ. ಸರ್ಕಾರವೂ ಪ್ರತಿ ಯೋಜನೆಗಳನ್ನು ಸೀಮಿತ ಅವಧಿಯ ನಂತರ ಮೌಲ್ಯಮಾಪನಕ್ಕೊಳಪಡಿಸುತ್ತದೆ. ಏಕೆಂದರೆ ಆ ಯೋಜನೆಗಳು ಫಲಾನುಭವಿಗಳಿಗೆ ತಲುಪಿರುವುದರ ಬಗ್ಗೆ ಖಚಿತ ಮಾಹಿತಿ ದೊರೆಯುತ್ತದೆ. ಇದರಿಂದಾಗಿ ಯೋಜನೆಗಳಿಂದ ಸಾಂಪ್ರದಾಯಿಕ ಮೌಲ್ಯಗಳ ನೆಲೆಯಲ್ಲಿ ಬದಲಾವಣೆಗಳು ಆಗಿವೆಯೋ ಅಥವಾ ಇಲ್ಲವೋ ಎಂಬುದನ್ನು ತಿಳಿಯಬಹುದು. ಸಾಮಾಜಿಕ ಅಭಿವೃದ್ಧಿಗೆ ಈ ಬದಲಾವಣೆ ಪೂರಕವಾಗಿದೆಯೇ ಎಂಬುದನ್ನು ಮೌಲ್ಯಮಾಪನ ಮಾಡಲಾಗುತ್ತದೆ.

ಲಾಭ ಪಡೆಯುತ್ತಿದ್ದಾರೆ. ಉದಾ : ಪಂಚಾಯತ್ ರಾಜ್‌ನಲ್ಲಿ ಮಹಿಳೆಯರಿಗೆಂದು ಶೇ.೩೩ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಇದರಿಂದಾಗಿ ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಬಲೀಕರಣಗೊಳ್ಳಲು ಅವಕಾಶ ಸಿಕ್ಕಂತಾಗುತ್ತದೆ. ಆದರೆ ಮಹಿಳೆಯರು ಚುನಾವಣೆಯಲ್ಲಿ ಗೆದ್ದ ನಂತರ ಅವರ ಅಧಿಕಾರವನ್ನು ಆಕೆಯ ಗಂಡ, ತಂದೆ, ಅಣ್ಣ ಇತ್ಯಾದಿ ಕುಟುಂಬದ ಪುರುಷ ಸದಸ್ಯರು ನಿಭಾಯಿಸುತ್ತಾರೆ. ಆದರೆ ಇದನ್ನು ಯಾರೊಬ್ಬರೂ ಪ್ರಶ್ನಿಸುವುದಿಲ್ಲ. ಹೀಗಾಗಿ ಮಹಿಳೆಯರು ಕೇವಲ ರಬ್ಬರ್ ಸ್ಟ್ಯಾಂಪ್ ಗಳಾಗುತ್ತಿದ್ದಾರೆ.

ಮಹಿಳೆಯರು ಸಬಲೀಕರಣಗೊಳ್ಳಲು ಸರ್ಕಾರವು ಅವರಿಗೆಂದೇ ಹಲವಾರು ವಿಶೇಷ ಯೋಜನೆಗಳನ್ನು ಜಾರಿಗೊಳಿಸಿದೆ. ಆರ್ಥಿಕ ಸಹಾಯ ನೀಡುವುದರ ಮೂಲಕ ಮಹಿಳೆಯರು ಸ್ವಯಂ ಉದ್ಯೋಗವನ್ನು ಹೊಂದುವುದರ ಮೂಲಕ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಸರ್ಕಾರ ಭಾವಿಸಿದೆ. ಆದರೆ ಪುರುಷರು ತಮ್ಮ ಕುಟುಂಬದ ಮಹಿಳಾ ಸದಸ್ಯರಿಂದ ಆ ಹಣವನ್ನು ಪಡೆದು ಅವರು ಬಳಸಿಕೊಳ್ಳುತ್ತಿದ್ದಾರೆ. ಇದರಿಂದ ಮಹಿಳೆಯರು ಆರ್ಥಿಕವಾಗಿ ಹಿಂದುಳಿಯುತ್ತಲೇ ಇದ್ದಾರೆ.ಮೇಲ್ಕಂಡ ಎಲ್ಲಾ ಸರ್ಕಾರಿ ಯೋಜನೆಗಳನ್ನು ಗಮನಿಸಿದಾಗ ಈ ಯೋಜನೆಗಳು ಎಷ್ಟರ ಮಟ್ಟಿಗೆ ಮಹಿಳೆಯರ ಅಭಿವೃದ್ಧಿಗೆ ಶ್ರಮಿಸುತ್ತಿದೆ ಎಂಬುದನ್ನು ತಿಳಿಯಬಹುದಾಗಿದೆ. ಸರ್ಕಾರವು ರೂಪಿಸಿದ ಈ ಯೋಜನೆಗಳು ಯಾವುದೇ ಸರಿಯಾದ ನಿರ್ದಿಷ್ಟ ಸಿದ್ಧಾಂತವನ್ನಿಟ್ಟು ಕೊಳ್ಳದೇ ಮಹಿಳೆಯರ ಅಗತ್ಯಗಳ ಬಗ್ಗೆ ಚಿಂತಿಸದೇ ಪಿತೃ ಪ್ರಧಾನ ಮೌಲ್ಯಗಳ ಆಧಾರದ ಮೇಲೆ ಪೂರ್ವಾಗ್ರಹ ಪೀಡಿತವಾಗಿ ರೂಪಿಸಿದವುಗಳಾಗಿವೆ. ಈ ಯೋಜನೆಗಳನ್ನು ರೂಪಿಸುವಾಗ ಮಹಿಳೆಯರ ಹಿತದೃಷ್ಟಿ-ಕಾಳಜಿಗಳನ್ನು ನಿರ್ಲಕ್ಷಿಸಿ ಕೇವಲ ಪುರುಷರ ಹಿತದೃಷ್ಟಿಯನ್ನು ಮಾತ್ರ ಗಮನದಲ್ಲಿರಿಸಿಕೊಂಡಿದೆ. ಸ್ತ್ರೀಯರ ಅಭಿವೃದ್ಧಿಯನ್ನು ಕಡೆಗಣಿಸಲಾಗಿದೆ ಎಂಬುದಕ್ಕೆ ಈ ಯೋಜನೆಗಳ ಫಲಿತಾಂಶಗಳೇ ಸಾಕ್ಷಿಯಾಗಿವೆ. ಹಲವಾರು ಮಹಿಳಾ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ರೂಪಿಸಿರುವ ಯೋಜನೆಗಳು ಇಂದಿಗೂ ಸಮಾಜದ ಪ್ರಮುಖ ಸಮಸ್ಯೆಗಳಿಗೆ ಸ್ಪಂದಿಸದೇ ಇರುವುದರಿಂದಾಗಿ ಮಹಿಳೆಯರ ಸಾವು, ದಬ್ಬಾಳಿಕೆ, ದೌರ್ಜನ್ಯ, ಹಿಂಸಾತ್ಮಕ ಚಟುವಟಿಕೆಗಳು ಮಹಿಳೆಯರ ಮೇಲೆ ನಡೆಯುತ್ತಲೇ ಇವೆ. ಈ ರೀತಿಯ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ವಿಫಲವಾಗಿರುವುದು ನಿಜಕ್ಕೂ ವಿಷಾಧನೀಯ. ಅಲ್ಲದೇ ಮಹಿಳೆಯರ ಸಮಸ್ಯೆಗಳನ್ನು ಪ್ರಮುಖ ಸಮಸ್ಯೆಗಳೆಂದು ಗುರ್ತಿಸದೆ ಕೇವಲ ಪುರುಷರಿಗೆ ಸಂಬಂಧಿಸಿದ ಆರ್ಥಿಕ, ತಾಂತ್ರಿಕ ಸಮಸ್ಯೆಗಳಣ್ನು ಮುಖ್ಯವೆಂದು ಪರಿಗಣಿಸಿ ಅದಕ್ಕೆ ಸೂಕ್ತ ಪರಿಹಾರವನ್ನು ಹುಡುಕಲು ಪ್ರಯತ್ನಿಸುವ ಸಮಾಜದ ಮುಖ್ಯವಾಹಿನಿಯ ಗಣ್ಯಾವ್ಯಕ್ತಿಗಳು ಮತ್ತು ಕೇವಲ ಆರ್ಥಿಕತೆಯಿಂದ ಮತ್ತು ತಾಂತ್ರಿಕತೆಯಿಂದ ದೇಶದ ಅಭಿವೃದ್ಧಿ ಸಾಧ್ಯವೆಂದು ಬಿಂಬಿಸುತ್ತಿರುವ ಮಾಧ್ಯಮಗಳ ನಡೆಯು ಮುರ್ಖತನದಂತೆ ಭಾಸವಾಗುತ್ತದೆ.

ಮುಖ್ಯವಾಹಿನಿಯ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಮಹಿಳೆಯರ ಸಮಸ್ಯೆಗಳನ್ನು ನಿರ್ಲಕ್ಷಿಸುವುದು ಸರಿಯಲ್ಲ. ದೇಶದ ಅಭಿವೃದ್ಧಿಗೆ ಮಹಿಳೆಯರ ಕೊಡುಗೆಯೂ ಅಪಾರವಾದುದೆಂದು ಭಾವಿಸಿ ಮಹಿಳೆಯರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರಕಿಸಿಕೊಡಬೇಕು. ಮುಖ್ಯವಾಗಿ ಮಹಿಳೆಯರ ಯೋಜನೆಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ರಚಿಸಿ ಅದು ಕಟ್ಟುನಿಟ್ಟಾಗಿ ಜಾರಿಗೊಳ್ಳುವಂತೆ ಸರ್ಕಾರವು ಶ್ರಮವಹಿಸಬೇಕು. ತಪ್ಪಿತಸ್ಥರಿಗೆ ಮತ್ತು ಈ ಯೋಜನೆಗಳನ್ನು ನಿರ್ಲಕ್ಷಿಸುವ ಅಧಿಕಾರಿಗಳಿಗೆ ಕಠಿಣ ಶಿಕ್ಷೆಯಾಗುವಂತೆ ಮಾಡುವುದರ ಮೂಲಕ ಮಹಿಳಾ ಪರ ಯೋಜನೆಗಳು ಸರಿಯಾಗಿ ಜಾರಿಗೊಂಡು ಮಹಿಳೆಯರ ಅಭಿವೃದ್ಧಿಗೆ ಶ್ರಮಿಸುವಂತೆ ಮಾಡಬಹುದು.

ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಅಭಿವೃದ್ಧಿ ಪರಿಕಲ್ಪನೆ, ಅಭಿವೃದ್ಧಿ ಸಿದ್ಧಾಂತಗಳನ್ನು ಮರುಮೌಲ್ಯಮಾಪನ ಮಾಡುವುದು ಅತ್ಯವಶ್ಯಕವಾಗಿದೆ. ಸಾಮಾನ್ಯವಾಗಿ ಅಭಿವೃದ್ಧಿ ಆಗಲು ಮಾನವ ಸಮುದಾಯ ಭೌತಿಕವಾಗಿ, ಬೌದ್ಧಿಕವಾಗಿ, ಮಾನಸಿಕವಾಗಿ ಆರೋಗ್ಯವಂತರಾಗಿರಬೇಕು. ಆಗ ಮಾತ್ರ ಸಮಗ್ರ ಮಾನವ ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ. ಮಹಿಳೆಯರು ಈ ಎಲ್ಲ ಹಂತದಲ್ಲೂ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬೇಕು. ಸಬಲತೆಗೆ ಬೇಕಾಗಿರುವುದು ಪೂರಕವಾದ ಭೌತಿಕ ವಾತಾವರಣದಂತಹ ಉತ್ತಮ ವಾತಾವರಣ. ಮಾನಸಿಕ ಸ್ಥಿರತೆ ತಂದು ಕೊಡುವ ನಿಟ್ಟಿನಲ್ಲಿ ಸಮಾಜ ರೂಪುಗೊಳ್ಳಬೇಕು. ಈ ನಿಟ್ಟಿನಲ್ಲಿ ಅಭಿವೃದ್ಧಿ ನಿರ್ವಚನ ಗೊಳ್ಳಬೇಕು.

ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಸರ್ಕಾರ ಈ ಎಲ್ಲಾ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಯಾವ ಸೈದ್ಧಾಂತಿಕ ಚೌಕಟ್ಟನ್ನು ಅಳವಡಿಸಿಕೊಂಡಿದೆ? ಯಾವ ರೀತಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುತ್ತಿದೆ? ಫಲಾನುಭವಿಗಳು ಯಾರು? ಎರಡನೆಯದಾಗಿ ಸರ್ಕಾರದ ಯೋಜನೆ ರೂಪಿಸುವವರ ವೈಚಾರಿಕೆ ಹಿನ್ನೆಲೆ, ಅವರ ಚಿಂತನಾಕ್ರಮಗಳು ಈ ಎಲ್ಲಾ ಅಂಶಗಳನ್ನು ಒಳಗೊಂಡು ಮಹಿಳಾಪರ ಸರ್ಕಾರಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅವಲೋಕಿಸಲಾಗುತ್ತಿದೆ. ಇಲ್ಲಿ ಸರ್ಕಾರೇತರ ಕಾರ್ಯಕ್ರಮಗಳನ್ನು ಸಂದರ್ಭಕ್ಕನುಗುಣವಾಗಿ ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗುತ್ತಿದೆ.

ಮಹಿಳೆಯರ ಅಭಿವೃದ್ಧಿ ಕುರಿತು ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಈಗಾಗಲೇ ಸಮುದಾಯದಲ್ಲಿ ಕಾಣುತ್ತಿದ್ದೇವೆ. ಸರ್ಕಾರವೂ ಪ್ರತಿ ಯೋಜನೆಗಳನ್ನು ಸೀಮಿತ ಅವಧಿಯ ನಂತರ ಮೌಲ್ಯಮಾಪನಕ್ಕೊಳಪಡಿಸುತ್ತದೆ. ಏಕೆಂದರೆ ಆ ಯೋಜನೆಗಳು ಫಲಾನುಭವಿಗಳಿಗೆ ತಲುಪಿರುವುದರ ಬಗ್ಗೆ ಖಚಿತ ಮಾಹಿತಿ ದೊರೆಯುತ್ತದೆ. ಇದರಿಂದಾಗಿ ಯೋಜನೆಗಳಿಂದ ಸಾಂಪ್ರದಾಯಿಕ ಮೌಲ್ಯಗಳ ನೆಲೆಯಲ್ಲಿ ಬದಲಾವಣೆಗಳು ಆಗಿವೆಯೋ ಅಥವಾ ಇಲ್ಲವೋ ಎಂಬುದನ್ನು ತಿಳಿಯಬಹುದು. ಸಾಮಾಜಿಕ ಅಭಿವೃದ್ಧಿಗೆ ಈ ಬದಲಾವಣೆ ಪೂರಕವಾಗಿಬೆಯೇ ಎಂಬುದನ್ನು ಮೌಲ್ಯಮಾಪನ ಮಾಡಲಾಗುತ್ತದೆ.

ಈ ತಳಹದಿಯ ಅಡಿಯಲ್ಲಿ ಮೂಡಿಬಂದಿರುವ ಕಾರ್ಯಕ್ರಮಗಳಲ್ಲಿ ಯಾವ ತರಹದ ಕಾರ್ಯಕ್ರಮಗಳು ಸಮುದಾಯಕ್ಕೆ ತಲುಪುತ್ತಿವೆ? ಎಂತಹ ಬದಲಾವಣೆಗಳನ್ನು ತರಲಾಗುತ್ತಿದೆ? ನಿಜವಾಗಿಯೂ ಕಾರ್ಯಕ್ರಮದ ಫಲಿತಾಂಶಗಳಿಂದ ಅಭಿವೃದ್ಧಿಯ ಮಟ್ಟವನ್ನು ಸಾಧಿಸಲಾಗುತ್ತಿದೆಯೋ? ಎಂದಾಗ ಅಲ್ಲಿ ಮೌಲ್ಯಮಾಪನಗಾರರು ಪಾತ್ರವಹಿಸುತ್ತಾರೆ. ಮೌಲ್ಯಮಾಪನ ಮಾಡುವವರು ನಿಜವಾಗಲೂ ಲಿಂಗ ಸಂಬಂಧಿ ನೆಲೆಯಲ್ಲಿ ಸಮವೇದನಾತ್ಮಕ ದೃಷ್ಟಿಕೋನವನ್ನು ಹೊಂದಿರಬೇಕು. ಆದರೆ ಕಾಕತಾಳೀಯ ಎಂಬಂತೆ ಮೌಲ್ಯಮಾಪನ ಮಾಡುವವರು ಮಹಿಳೆಯರೇ ಆಗಿದ್ದರೂ ಕೂಡ ಅವರ ವೈಚಾರಿಕ ಹಿನ್ನೆಲೆ ಪುರುಷ ಪ್ರಧಾನತೆಯನ್ನು ಪ್ರತಿಬಿಂಬಿಸುತ್ತಿರುತ್ತದೆ.

ಈ ರೀತಿಯ ಸೂಕ್ಷ್ಮತೆಗಳನ್ನು ಸರ್ಕಾರ ಪ್ರಮುಖವಾಗಿ ಪರಿಗಣಿಸುತ್ತಿದೆಯೇ? ಅಥವಾ ಇಲ್ಲವೆ? ಎಂಬುದನ್ನು ಇಲ್ಲಿ ಅವಲೋಕನ ಮಾಡಲಾಗುತ್ತದೆ. ಹಾಗಾಗಿ ಕೆಲವೊಮ್ಮೆ ಮೌಲ್ಯಮಾಪನ ಮಾಡಿದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮರುಮೌಲ್ಯಮಾಪನ ಮಾಡಲಾಗುತ್ತದೆ. ಅದರ ಫಲಿತಾಂಶಗಳನ್ನು ವಿವಾರಣಾತ್ಮಕವಾಗಿ ಸ್ತ್ರೀವಾದಿ ದೃಷ್ಟಿಕೋನದಿಂದ ವಿಶ್ಲೇಷಣೆ ಮಾಡಲಾಗುತ್ತದೆ. ಹಲವಾರು ಸರ್ಕಾರಿ(ಮಹಿಳಾ ಪರ) ಅಭಿವೃದ್ಧಿ ಕಾರ್ಯಕ್ರಮಗಳು ಮಹಿಳೆಯರ ಪರವಾಗಿದ್ದರೂ ಕೂಡ ಮಹಿಳೆಯರಿಗೆ ತಲುಪುತ್ತಿಲ್ಲ. ಮಹಿಳೆಯರಿಗೆ ತಲುಪಿದರೂ ಅವರು ಆ ಯೋಜನೆಗಳ ಲಾಭವನ್ನು ಅನುಭೋಗಿಸಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಇದಕ್ಕೆ ಪುರುಷ ಪ್ರಧಾನ ಮೌಲ್ಯಗಳು ಅಡ್ಡಿಯಾಗುತ್ತಿವೆ. ಉದಾ: ಮೊದಲನೆಯದಾಗಿ ಬಡ ಮಹಿಳಾ ಕುಟುಂಬಗಳಿಗೆ ಅವಶ್ಯಕ ಎಂದು ನಿವೇಶನಗಳನ್ನು ನೀಡುತ್ತಿದ್ದರೂ ಪುರುಷರು ತಮ್ಮ ಹಣಕಾಸಿನ ಒತ್ತಡಕ್ಕಾಗಿ ಈ ನಿವೇಶನಗಳನ್ನು ಮಾರಾಟ ಮಾಡುತ್ತಿದ್ದಾರೆ.

೧.೩ ಅಧ್ಯಯನದ ಸಮೀಕ್ಷಾ ವರದಿ

ಸರ್ಕಾರಿ ಮಹಿಳಾ ಅಭಿವೃದ್ಧಿ ಯೊಜನೆಗಳ ಬಗೆಗೆ ಮಾತನಡುವಲ್ಲಿ ನಾವು ಮೊದಲು ಅಭಿವೃದ್ದಿ ಯೊಜನೆಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಅವಲೋಕಿಸಿದಾಗ ಅಲ್ಲಿ ಲಿಂಗತ್ವ ಯೋಜನೆಯ ಕೊರತೆ *೬(ಭರೆಯಬೇಕು) ಕಂಡು ಬರುತ್ತದೆ. ಕೊಲಕುಂಶವಾಗಿ ಪರಿಶೀಲಿಸಿದಾಗ ಮೂರು ಹಂತದಲ್ಲಿ ಸಮಸ್ಯೆಗಳನ್ನು ಕಾಣಬಹುದಾಗಿದೆ. ಲಿಂಗತ್ವ ಕುರುಡುತನ: ಯೋಜನೆಗಳ ವೈದಾನಿಕತೆಯಲ್ಲಿ ಲಿಂಗಸಾಮಾನತೆಯ ಎಳೆಗಳನ್ನು ಸೂಕ್ಷ್ಮವಾಗಿ ಗುರುತಿಸಲಾಗಿಲ್ಲ. ಎರಡನೆ ಹಂತದಲ್ಲಿ ಅವಲೋಕಿಸಿದಾಗ ಲಿಂಗತ್ವದ ಸಂಗತಿಗಳು ಸಾಮಾಜಿಕ ಹಾಗೂ ಸ್ವಾಭಾವಿಕ ಸಂಗತಿಗಳಾಗಿ ಅನುಷ್ಠಾನಗೊಳ್ಳುತ್ತಿವೆ. ಮೂರನೆ ಹಂತದಲ್ಲಿ ಲಿಂಗತ್ವ ಅಂಶಗಳನ್ನು ಚಿಂತಿಸಿದರು, ಅನುಷ್ಠಾನಗೊಳಿಸಿದರು ಕೂಡ ಅವುಗಳನ್ನು ಫಲಿತವನ್ನು ಗುರುತಿಸುವಲ್ಲಿ ಅಶಕ್ತವಾಗಿದೆ. ಎಲ್ಲ ಫಲಿತಗಳನ್ನು ಪುರುಷರಿಗೆ ಮತ್ತು ಮಹಿಳೆಯರಿಗೆ ಸಮನಾಗಿ ಗುರುತಿಸಿ ಪಡೆಯಲಾಗುತ್ತಿದೆ.

ಲಿಂಗತ್ವ ಎನ್ನುವಂತದ್ದು ಸಾಮಾನ್ಯವಾಗಿದೆ. ಲಿಂಗ ತಾರತಮ್ಯ ಎನ್ನುವಂತದ್ದು ಕೇವಲ ಮಹಿಳೆಯರಿಗೆ ಎಂಬುದನ್ನು ಕಾಣಬಹುದು. ಯಾಕೆಂದರೆ ,ಇದಕ್ಕೆ ಮುಖ್ಯ ಉದಾಹರಣೆಯೆಂದರೆ ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರು ಇದ್ದರೂ ಕೂಡ ಸಾರ್ವಜನಿಕ ಕ್ಷೇತ್ರದಲ್ಲಿ ಭಾಗವಹಿಸುವಿಕೆಯಲ್ಲಿ ಮಹಿಳಾ ಪ್ರತಿನಿಧಿಕರಣ ತುಂಬಾ ಕಡಿಮೆ.ಮಹಿಳಾ ಹಕ್ಕುಗಳನ್ನು ಗುರುತಿಸುವುದು ಮಹಿಳಾ ಸಾಮರ್ಥ್ಯವನ್ನು ಗುರುತಿಸುವಲ್ಲಿ ಸಮಕಾಲಿನ ಪ್ರಭಾವ ಅಭಿವೃದ್ಧಿಗೆ ತುಂಬಾ ಅತ್ಯವಶ್ಯಕವಾಗಿದೆ.ಪ್ರಸ್ತುತ ಅಧ್ಯಯನವು ಲಿಂಗ ತಾರತಮ್ಯವನ್ನು ಹುಡುಕುವಲ್ಲಿ ಮುಖ್ಯ ಪಾತ್ರ ವಹಿಸುತ್ತಿವೆ. ಮಹಿಳಾ ಅಭಿವೃದ್ದಿಗೆ,ಸಂಬಂಧಿಸಿದಂತೆ ಇರುವ ಹಲವಾರು ಅಡೆತಡೆಗಳೇನು,ಅದಕ್ಕೆ ಬೇಕಾಗಿರುವ ಪರಿಹಾರಗಳೇನು ಎಂಬುದುನ್ನು ಈ ಅಧ್ಯಯನದಲ್ಲಿ ಚರ್ಚೆ ಮಾಡಲಾಗುತ್ತಿದೆ.

Souolde Desai (೧೯೯೪)ಅವರ ಅವಲೋಕನದ ಪ್ರಕಾರ ಪ್ರಸ್ತುತ ಭಾರತದಲ್ಲಿ ಮಹಿಳಾ ಸಂತಾನಾರೋಗ್ಯ ಹಾಗೂ ಕುಟುಂಬ ಯೋಜನೆಗಳಿಂದ ಹಲವಾರು ತೊಂದರೆಗಳನ್ನು ಎದುರಿಸುತ್ತಿದ್ದಾರೆ.ಇವುಗಳಿಗೆ ಸರ್ಕಾರ ತುಂಬಾ ಸೂಕ್ಷ್ಮವಾಗಿ ಲಿಂಗಸಮಾನತೆಯ ನೆಲೆಯಲ್ಲಿ ಪರಿಹಾರಗಳನ್ನು ನೀಡಬೇಕು ಎಂಬುದನ್ನು ವಿವರಿಸುತ್ತಾರೆ.

Kolyani Meeuo Sen & A.K.Shivakesar(೨೦೦೧)ಅವರ ಪ್ರಕಾರ ಭಾರತದಲ್ಲಿ ಲಿಂಗತಾರತಮ್ಯದಿಂದಾಗಿಯೇ ಹೆಣ್ಣು ಮಕ್ಕಳು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅತ್ಯಾಧುನಿಕ ವೈದ್ಯಕೀಯ ಔಷಧಿಗಳು ಸಂತಾನಾರೋಗ್ಯದ ಬೆಳವಣಿಗೆಯನ್ನು ಅವರ ದೇಹದ ಮೇಲೆ ತೊಂದರೆಗಳನ್ನು ತಂದೊಡ್ಡುತ್ತಿವೆ.ಇವುಗಳಿಗೆ ಪೂರಕವಾಗಿ ಮಹಿಳೆಯರಲ್ಲಿ,ಮಕ್ಕಳಲ್ಲಿ ಅಪೌಷ್ಠಿಕತೆ,ಜ್ವರ,ಕೇವಲ ಕಡಿಮೆ ಅವಧಿಯಲ್ಲಿ ಎದೆಹಾಲುಣಿಸುವಿಕೆ, ತಂದೆತಾಯಿಗಳ ಆರೈಕೆಯ ಕೊರತೆ ಇವೆಲ್ಲವುಗಳು ಮಹಿಳೆಯರ ಅನಾರೋಗ್ಯದಿಂದ ಬಳಲಲು ದಾರಿಮಾಡಿಕೊಡುತ್ತಿವೆ.ಹೀಗಾಗಿ ಮುಂದಿನ ಜೀವನದಲ್ಲಿ ಹಲವಾರು ದೈಹಿಕ ತೊಂದರೆಗಳನ್ನು ಮಹಿಳೆಯರು ಎದುರಿಸಬೇಕಾಗಿದೆ. ಜೀವನಾವಧಿಯೂ ತುಂಬಾ ಕಡಿಮೆಯಾಗುತ್ತಿದೆ.ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳಾ ಬದುಕಿಗೆ ಲಿಂಗ ತಾರತಮ್ಯ ಹಲವಾರು ಸಮಸ್ಯೆಗಳನ್ನು ತಂದೊಡ್ಡುತ್ತಿದೆ.ಸರ್ಕಾರ ಮಹಿಳಾ ಅಭಿವೃದ್ಧಿಯಲ್ಲಿ ಈ ಸಂಗತಿಗಳನ್ನು ಗಂಭೀರವಾಗಿ ಗುರುತಿಸಬೇಕು ಎಂದಿದ್ದಾರೆ.

Berto Esteve Volort(೨೦೦೪)ರವರು ವಿವರಿಸುವಂತೆ ಲಿಂಗತಾರತಮ್ಯ ಎನ್ನುವಂತದ್ದು ಮಹಿಳಾ ಜ್ಞಾನವನ್ನು,ಮಹಿಳಾ ಶ್ರಮವನ್ನು ಆರ್ಥಿಕ ಅಭಿವೃದ್ದಿಯಿಂದ ದೂರಉಳಿಸಿದೆ. ಇದರಿಂದ ಸಾಮಾಜಿಕ ಅಭಿವೃದ್ದಿಗೆ ಋಣಾತ್ಮಕ ಆರ್ಥಿಕ ಸಂಕಷ್ಟಗಳನ್ನು ತಂದೊಡ್ಡುತ್ತಿದೆ.ಲಿಂಗತಾರತಮ್ಯ ಎನ್ನುವಂತದ್ದು, ತನ್ನದೆ ಆದಂತ ಪರವನ್ನು ಛಾಪಿಸಿಕೊಂಡಿದೆ.ಹಲವಾರು ಸಾಮಾಜಿಕ ಅನುಸರಣೆಗಳು, ಪ್ರಧಾನಧಾರೆಯ

ಮೌಲ್ಯಗಳು,ಸಾಮಾನ್ಯವಾಗಿ ಸಾಂಸ್ಕೃತಿಕ ಮತ್ತು ಸಾಂಪ್ರದಾಯಿಕ ನಿಯತಗಳಾಗಿ ಬೆಳೆದು ಬರುತ್ತಿವೆ (ಅತಿ ಆಳವಾದಂತಹ ಚಾರಿತ್ರಿಕ ಸಂಪ್ರದಾಯಗಳಾಗಿ), ಇದರಿಂದಾಗಿ ಮಹಿಳೆಯರು ಸಾರ್ವಜನಿಕ ವಲಯದಿಂದ ದೂರಉಳಿದಿದ್ದಾರೆ.ಹಾಗೆಯೇ ಪ್ರಧಾನಧಾರೆಯ ಮೌಲ್ಯಗಳನ್ನು ಅಂಧತೆಯಲ್ಲಿ ಪಾಲಿಸಿಕೊಂಡು ಬರುತ್ತಿದ್ದಾರೆ.ಇದರಿಂದಾಗಿ ಸರ್ಕಾರಿ ಯೋಜನೆಗಳು ಎಷ್ಟು ಲಿಂಗಸಮಾನತೆಯಿಂದ ಮೂಡಿ ಬಂದರು ಇಂತಹ ಸಮಸ್ಯೆಗಳನ್ನು ಗುರುತಿಸುವಲ್ಲಿ ವಿಫಲವಾಗಿದೆ.ಯೋಜನೆಗಳು ಈ ನೆಲೆಗಟ್ಟಿನಲ್ಲಿ ಮೂಡಿ ಬರಬೇಕಾಗಿದೆ.

Annai Mario hind (೨೦೦೬)ಭಾರತದ ಹಲವಾರು ಹಳ್ಳಿಗಳಲ್ಲಿ ಇಂದಿಗೂ ಸಾಂಪ್ರದಾಯಿಕ ಮೌಲ್ಯಗಳು ಬದುಕುಳಿದಿವೆ. ಪಿತೃ ಪ್ರಧಾನ ನೀತಿ ಹಂತಹಂತಗಳಾಗಿ, ಸಮಾಜದಲ್ಲಿ ಕಾರ್ಯ ನಿರ್ವಹಿಸುತ್ತಿವೆ.ಅದರಲ್ಲೂ ಮುಖ್ಯವಾಗಿ ಮಹಿಳಾ ಬದುಕಿನ ಸುತ್ತ ಆವರಿಸಿಯೇ ಕಾರ್ಯನಿರ್ವಹಿಸುತ್ತಿವೆ. ಇವುಗಳ ಬಗೆಗೆ ಸರ್ಕಾರ ಚಿಂತಿಸಬೇಕು.

GDI Planning Commission(೨೦೦೮)ರವರ ಪ್ರಕಾರ ಅಭಿವೃದ್ಧಿ ಪ್ರಪಂಚ ಎನ್ನುವಂತದ್ದು ಬಡತನದಿಂದ ಕೂಡಿರುವುದಾಗಿದೆ.ಕಾರಣ ಕುಟುಂಬಗಳಲ್ಲಿ ಮಹಿಳೆಯರು ಅನಾರೋಗ್ಯ ಅಪೌಷ್ಟಿಕತೆಯಿಂದ ಬಳಲುತ್ತಿರುವುದು,ಆರ್ಥಿಕ ಅಭದ್ರತೆಯಿಂದ ಬದುಕುತ್ತಿರುವುದು,ಇವೆಲ್ಲವುಗಳು ಮಹಿಳಾ ಬದುಕಿನ ಚಿತ್ರಣವನ್ನು ವಿವರಿಸುತ್ತದೆ.ಇನ್ನು ಮುಂದುವರೆದು ಮಹಿಳೆಯರು ಹಾಲುಣಿಸುತ್ತಿದ್ದರೂ ಅದನ್ನು ನಿಲ್ಲಿಸಿ ಬಹು ಬೇಗನೆ ಗರ್ಭಧರಿಸುತ್ತಿರುವುದು, ಇದ್ದೇ ಇದೆ. ಇದರಿಂದ ಮಕ್ಕಳು ಮತ್ತು ಮಹಿಳೆಯರ ಜೀವನಾವಧಿಗೆ ಬೇಕಾದಂತ ಆರೋಗ್ಯವಂತ ವಾತಾವರಣದ ಕೊರತೆ,ಅತ್ಯಾಧುನಿಕ ಔಷಧೋಪಚಾರಗಳು ಮಹಿಳಾ ಬದುಕನ್ನು,ಆರೋಗ್ಯವನ್ನು ತುಂಬಾ ಸಂದಿಗ್ದತೆಗೆ ತಂದು ಒಡ್ಡುತ್ತಿದೆ. ಅತಿಯಾದಂತ ತಾಯಿ ಮರಣ ಸಂಖ್ಯಾ ಪ್ರಮಾಣ,ಶಿಶು ಮರಣ ಸಂಖ್ಯಾ ಪ್ರಮಾಣ,ಅಪೌಷ್ಟಿಕತೆ,ಕುಪೋಷಣೆ,ಹೆಚ್.ಐ.ವಿ/ಏಡ್ಸ್ ಇವೆಲ್ಲವುಗಳಿಗೆ ಮಹಿಳೆ ತುತ್ತಾಗುತ್ತಿದ್ದಾರೆ.ಇವುಗಳ ಬಗೆಗಿನ ಅಧ್ಯಯನ ಅತ್ಯವಶ್ಯಕವಾಗಿದೆ.

೧.೪ ಅಧ್ಯಯನದ ಉದ್ದೇಶಗಳು

ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳ ಬಗೆಗೆ ನಡೆದ ಅಧ್ಯಯನಗಳ ಸಮೀಕ್ಷೆಯನ್ನು ಅವಲೋಕಿಸಿದಾಗ ಈ ಹಿಂದಿನ ಹಲವಾರು ಅಧ್ಯಯನಗಳು ಕೇವಲ ಮಹಿಳಾ ಅಭಿವೃದ್ಧಿ ಪ್ರಕ್ರಿಯೆ ನಡೆಯುತ್ತಿದೆ.ಕೆಲವೊಂದು ವೈಫಲ್ಯಗಳಿವೆ ಎಂದು ತಿಳಿದು ಬರುತ್ತಿವೆ.ಇನ್ನೂ ಮುಂದುವರೆದು ನೋಡಿದಾಗ "ಕ್ಯಾರಲಿನ ಮೊಸರ್ ಹಾರವರ್ಡ್"ರಂತವರು,"ವಂದನಾ ಶಿವ","ಅಮರ್ತ್ಯಸೇನ್" ರಂತಹ ತಜ್ಞರು, ಲಿಂಗಸಮಾನತೆಯ ಚೌಕಟ್ಟಿನಲ್ಲಿ ಹೇಗೆ ಯೋಜನೆಗಳು,ಅಭಿವೃದ್ಧಿ ಚಿಂತನೆಗಳು ಮೂಡಿಬರಬೇಕು ಎಂಬುದನ್ನು ತಿಳಿಸಿದರು.ಹಾಗೂ ಮಹಿಳಾ ಅಭಿವೃದ್ಧಿಗೆ ಇರುವ

ಲಿಂಗಅಸಮಾನತೆಯ ಸಂಗತಿಗಳು ಯಾವುವು ಎಂಬುದನ್ನು ತಿಳಿಸಿಕೊಟ್ಟರು.ಮಹಿಳಾ ಅಭಿವೃದ್ಧಿಗೆ ಬೇಕಾದ ಸಲಕರಣೆಗಳನ್ನು,ಹಂತಗಳನ್ನು ಅಳವಡಿಸಬೇಕಾದ ತಂತ್ರಗಳನ್ನು ತಿಳಿಸಿಕೊಟ್ಟರು. ಆದರೂ ಇಂದಿಗೂ ಮಹಿಳಾ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ನ್ಯೂನ್ಯತೆಗಳು ಎದ್ದು ಕಾಣುತ್ತಿವೆ.ಪ್ರಧಾನಧಾರೆಯ ಮೌಲ್ಯಗಳು, ಬೇರುಗಳು ಹೊಸ ಮುಖವಾಡಗಳ ಮೂಲಕ,ತಂತ್ರಗಳ ಮೂಲಕ ಹೊರಬರುತ್ತಿವೆ.ಈ ಕಾರಣದಿಂದಾಗಿ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳು ನೀರಿಕ್ಷಿತ ಮಟ್ಟದಲ್ಲಿ ಸಾಧನೆಗಳನ್ನು ಸಾಧಿಸಲಾಗುತ್ತಿಲ್ಲ.ಇವುಗಳಿಗೆ ಇರುವ ಮೂಲ ಕಾರಣವೇನು?ಸಮಸ್ಯೆ ಯಾವ ತಳಹದಿಯಲ್ಲಿದೆ? ಎಂಬುದನ್ನು ಅವಲೋಕಿಸುವುದು ಅಧ್ಯಯನದ ಉದ್ದೇಶವಾಗಿದೆ.

ಮಹಿಳಾ ಸಂಬಂಧಿತ ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳ ಸೈದ್ಧಾಂತಿಕ ಚೌಕಟ್ಟು,ಅನುಸಂಧಾನದ ತಂತ್ರಗಳು(ಕಾರ್ಯವಿಧಾನ) ಹಾಗೂ ಮೌಲ್ಯಮಾಪನಾ ವಿಧಾನಗಳಲ್ಲಿ ಪಿತೃಪ್ರಧಾನ ಮೌಲ್ಯಗಳು ಕಾರ್ಯನಿರ್ವಹಿಸುತ್ತಿವೆ.ಸಂಸ್ಕೃತಿ,ರೂಢಿ ಸಂಪ್ರದಾಯಗಳು ಹಾಗೂ ಇತರೆ ಸಂಗತಿಗಳ ತಳಹದಿಯಲ್ಲಿ ಅವುಗಳು ಮಹಿಳಾ ಅಭಿವೃದ್ಧಿಯನ್ನು ವಿಫಲಗೊಳಿಸುತ್ತಿವೆ ಎಂಬುದು ಈ ಮಹಾಪ್ರಬಂಧದ ಉದ್ದೇಶವಾಗಿದೆ.ಈ ನಿಟ್ಟಿನಲ್ಲಿ ಇಲ್ಲಿನ ಅಧ್ಯಯನ ಸಾಗುತ್ತಿದೆ.

ಮಹಿಳೆ ಮತ್ತು ಬಡತನದ ಬಗೆಗೆ ನಾವು ಪ್ರತಿ ಹಂತದಲ್ಲಿಯೂ,ಸಮಾಜದ ಪ್ರತಿ ಕ್ಷೇತ್ರದಲ್ಲಿ ಮಾತನಾಡುತ್ತೇವೆ.ಮಹಿಳಾ ಅಧೀನತೆ,ಲಿಂಗಸಮಾನತೆಗಳ ಬಗೆಗೆ ವಿಶೇಷವಾಗಿ ಅಧ್ಯಯನಗಳು ಸಾಗಬೇಕು ಎಂಬ ಒತ್ತಡಗಳನ್ನು ಕಾಣುತ್ತೇವೆ.ಆದರೆ ಮಹಿಳೆ,ಸಮಾಜ ಸಂಸ್ಕೃತಿ,ರೂಢಿ ಸಂಪ್ರದಾಯಗಳು ಎಂದಾಗ ಬದಲಾವಣೆಯ ಸಂಕೇತಗಳು, ನೀತಿಗಳು ಹಿಂದೆ ಸರಿಯುತ್ತವೆ. ಪ್ರಧಾನಧಾರೆಯ ಮೌಲ್ಯಗಳು ನುಸುಳಿ ಮುಂದೆ ಬರುತ್ತಿವೆ.ಸರ್ಕಾರಿ ಮಹಿಳಾ ಅಭಿವೃದ್ಧಿಗಳ ಪ್ರಕ್ರಿಯಲ್ಲಿಯೂ ಇಂತಹ ಪ್ರಕ್ರಿಯೆ ನಡೆಯುತ್ತಿದೆ.ಲಿಂಗ ಪಾತ್ರಗಳ ಮೂಲಕ ಸಾಂಪ್ರದಾಯಿಕ ಮೌಲ್ಯಗಳ ಹೆಸರಿನಲ್ಲಿ ಮಹಿಳಾ ಸ್ಥಾನಮಾನ,ಅಸ್ಥಿತ್ವವನ್ನು ಪ್ರಧಾನಧಾರೆಗಳು ಇನ್ನೂ ಕುಬ್ಜರನ್ನಾಗಿಸುತ್ತಿದೆ.ಆಧುನಿಕತೆ,ತಂತ್ರಜ್ಞಾನ ಎನ್ನುವ ಸಂಗತಿಗಳು ಮಹಿಳಾ ದೈಹಿಕತೆ,ಆರೋಗ್ಯ ಸಂತಾನಾರೋಗ್ಯವನ್ನು ಹತ್ತಿಕ್ಕುತ್ತಿವೆ. ತಮ್ಮ ಅನಕೂಲಕ್ಕೆ ತಕ್ಕಂತೆ ಬದಲಾವಣೆಗೆ ಒತ್ತುಕೊಡುತ್ತಿವೆ. ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳಲ್ಲಿಯೂ ಇಂತಹ ಅಸಮಾನತೆಯ ಕುರುಹುಗಳು ಇಂದಿಗೂ ಇರುವುದರಿಂದ ಮಹಿಳಾ ಅಭಿವೃದ್ಧಿಯನ್ನು ಸಾಧಿಸಲು ಆಗುತ್ತಿಲ್ಲ ಎಂಬುದನ್ನು ಅವಲೋಕಿಸುವುದು ಅಧ್ಯಯನದ ಉದ್ದೇಶವಾಗಿದೆ.

ಈ ಮಹಾಪ್ರಬಂಧದಲ್ಲಿ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳ ಬಗೆಗೆ ಸ್ತ್ರೀವಾದಿ ಅವಲೋಕನ ಮಾಡಲು ಮೊದಲ ಹೆಜ್ಜೆಯಾಗಿ 'ಅಭಿವೃದ್ಧಿ' ತಾತ್ವಿಕತೆಯ ಅಧ್ಯಯನವನ್ನು ಮಾಡಬೇಕಾಗಿದೆ.ಈ ಮೂಲಕ 'ಅಭಿವೃದ್ಧಿ' ಪರಿಕಲ್ಪನೆಯ ತಾತ್ವಿಕ ಹರವು,ಸೈದ್ಧಾಂತಿಕ ಚೌಕಟ್ಟನ್ನು

ವಿಶ್ಲೇಷಿಸಲು ತಿಳಿಯಲು ಹೆಚ್ಚು ಅನುಕೂಲವಾಗುತ್ತದೆ.ಈ ಮೂಲಕ 'ಅಭಿವೃದ್ಧಿ' ಯೋಜನೆಗಳ ಸೈದ್ಧಾಂತಿಕ ಚೌಕಟ್ಟಿನಲ್ಲಿ ಹೇಗೆ ಪ್ರಧಾನಧಾರೆಯ ಮೌಲ್ಯಗಳು ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ತಿಳಿಯಲು ಪ್ರಯತ್ನಿಸಲಾಗುತ್ತಿದೆ ಹಾಗೂ ಅದಕ್ಕೆ ಬೇಕಾಗಿರುವಂತ ಪರಿಹಾರೋಪಾಯಗಳನ್ನು ಹುಡುಕಲು ಅನುಕೂಲವಾಗುತ್ತಿದೆ.

ಸರ್ಕಾರಿ ಅಭಿವೃದ್ಧಿ, ಅಭಿವೃದ್ಧಿ ಯೋಜನೆಗಳು ಎನ್ನುವಂತದ್ದು ತುಂಬಾ ವಿಶಾಲವಾದಂತದ್ದು. ಲಿಂಗಸಮಾನತೆಯ ತಳಹದಿಯಲ್ಲಿ 'ಜೆಂಡರ್ ಪ್ಲಾನಿಂಗ್' ಎಂಬುದನ್ನು ಅಳವಡಿಸಿ ಲಿಂಗಸೂಕ್ಷ್ಮತೆಗೆ ಹೆಚ್ಚು ಒತ್ತು ಕೊಟ್ಟು ಸರ್ಕಾರಿ ಮಹಿಳಾ ಯೋಜನೆಗಳನ್ನು ರೂಪಿಸಬೇಕು ಎಂಬುದು ಸ್ತ್ರೀವಾದಿ ತಜ್ಞರ ಸಲಹೆ, ಹಾಗೆಯೇ ಯೋಜನೆಗಳು ಅನುಸಂಧಾನಗೊಳ್ಳಬೇಕು ಹಾಗೂ ಮೌಲ್ಯಮಾಪನಗೊಳ್ಳಬೇಕು ಅಂದಾಗಲೆ ಲಿಂಗತಾರತಮ್ಯವನ್ನು ಹೋಗಲಾಡಿಸಲು ಸಾಧ್ಯ.ಹಾಗಾಗಿ ಇಲ್ಲಿ ಸರ್ಕಾರಿ ಅಭಿವೃದ್ಧಿ ಯೋಜನೆಗಳಲ್ಲಿ ಆರೋಗ್ಯದ ವಲಯವನ್ನು ಅದರಲ್ಲೂ ಮಹಿಳಾ ಕುಟುಂಬ ಯೋಜನೆಗಳ ವಲಯವನ್ನು ಗುರುತಿಸಿಕೊಂಡು ಅಲ್ಲಿನ ವಿಫಲತೆಗೆ ಕಾರಣಗಳೇನು ಎಂಬುದನ್ನು ಗ್ರಹಿಸುವುದರ ಮೂಲಕ ಅಲ್ಲಿ ಹೇಗೆ ಯೋಜನಾವಿಧಾನ, ಕಾರ್ಯವಿಧಾನ, ಮೌಲ್ಯಮಾಪನದಲ್ಲಿನ ಲೋಪದೋಷಗಳೇನು ಎಂಬುದನ್ನು ಅವಲೋಕಿಸಿ, ಅವುಗಳಿಗೆ ಬೇಕಾದಂತ ಪರಿಹಾರೋಪಾಯಗಳನ್ನು ಕಂಡುಹಿಡಿಯಬೇಕಾಗಿದೆ.

ಸಮಾಜ, ಸಾಮಾಜಿಕ ಸಂಸ್ಥೆಗಳು, ಅಲ್ಲಿನ ಸಾಮಾಜಿಕ ಸಂಬಂಧಗಳು ಇವುಗಳ ಮೂಲಕ ಪ್ರಧಾನಧಾರೆಯ ಮೌಲ್ಯಗಳು ಮಹಿಳೆಯನ್ನು ಅವಳ ಅಸ್ತಿತ್ವವನ್ನು ಕುಂಠಿತಗೊಳಿಸುತ್ತಿವೆ.ಹಾಗೆಯೇ ಈ ಸಂಗತಿಗಳು ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳಲ್ಲಿ ಬಲವಾಗಿ ತಮ್ಮ ಪ್ರಭಾವವನ್ನು ಬೀರುತ್ತಿವೆ.ಮಹಿಳಾ ಸಮುದಾಯಕ್ಕೆಂದೇ ಹುಟ್ಟಿಕೊಂಡ ಅಭಿವೃದ್ಧಿ ಯೋಜನೆಗಳು,ಆದರೆ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳು ಎಷ್ಟು ಲಿಂಗಸೂಕ್ಷ್ಮವಾಗಿ ಮೂಡಿಬರುತ್ತಿವೆ. ಜಾರಿ ಗೊಳ್ಳುತ್ತಿವೆ.ಲಿಂಗ ಸಮಾನತೆಯ ಸಂಗತಿಗಳಲ್ಲಿ ಜಾರಿಗೆಗೊಂಡ ಎಷ್ಟೋ ಯೋಜನೆಗಳು ಒಂದೆಡೆಯಾದರೆ,ಸಾಂಪ್ರದಾಯಿಕ ಮೌಲ್ಯಗಳಡಿಯಲ್ಲಿಯೇ ರೂಪುಗೊಳ್ಳುತ್ತಿರುವ ಯೋಜನೆಗಳು ಇನ್ನೊಂದೆಡೆ.ಈ ಸಂಗತಿಗಳನ್ನ ಈ ಮಹಾಪ್ರಬಂಧದಲ್ಲಿ ಅವಲೋಕನ ಅಧ್ಯಯನ ಮಾಡುವುದು ಮುಖ್ಯ ಉದ್ದೇಶವಾಗಿದೆ.

ಮಹಿಳಾ ಬದುಕಿಗೆ ಸಮಾಜ ವ್ಯವಸ್ಥೆಯು ಅವಳ ತಾಯ್ತನಕ್ಕೆ ಹೆಚ್ಚು ಒತ್ತು ಕೊಟ್ಟಿದೆ.ಪ್ರತಿ ಹೆಣ್ಣಿಗೂ ಕೂಡ ಹೆಣ್ಣು ಮತ್ತು ಅವಳ ತಾಯ್ತನವನ್ನು ವೈಭವೀಕರಿಸುತ್ತ ಅವಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸುತ್ತದೆ. ಇನ್ನೂ ಮುಂದುವರೆದು ಅದೇ ತಾಯ್ತನದ ಪೂರಕವಾಗಿ ಕುಟುಂಬ ಯೋಜನೆಗಳು ಕೂಡ ಇವೆ.ಅವುಗಳು ಕೂಡ ಹೆಚ್ಚು ಒತ್ತು ಮಹಿಳೆಗೆ ನೀಡಿದೆ.ಸಂಪೂರ್ಣ

ಮಹಿಳಾ ಅಸ್ತಿತ್ವವನ್ನು ಲೈಂಗಿಕತೆ,ತಾಯ್ತನ ಎನ್ನುವ ಮೌಲ್ಯಗಳಡಿಯಲ್ಲಿ ದಮನತರನ್ನಾಗಿಸಿದ ಪ್ರಧಾನಧಾರೆ ಮಹಿಳಾ ಬದುಕನ್ನೇ ಬರಡನ್ನಾಗಿಸುತ್ತಿದೆ. ಇದಕ್ಕೆ ಮುಖ್ಯ ಕಾರಣ ಲಿಂಗಶ್ರೇಣಿಕೃತ ವ್ಯವಸ್ಥೆ.ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳಲ್ಲಿ ಈ ಲಿಂಗ ಶ್ರೇಣಿಕೃತ ವ್ಯವಸ್ಥೆ ಹೇಗೆ ಕಾರ್ಯನಿರ್ವಹಿಸುತ್ತಿದೆ. ಇವುಗಳು ಹೇಗೆ ಸಾಮಾನ್ಯ ಸಂಗತಿಗಳಾಗಿ ಸಮಾಜದಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು ಅವಲೋಕಿಸಿ ಅಧ್ಯಯನಕ್ಕೆ ಒಳಪಡಿಸುವುದು.ಅವುಗಳ ಪರಿಣಾಮಗಳೇನು,ಇವುಗಳಿಗೆ ಬೇಕಾದ ಪರಿಹಾರೋಪಾಯಗಳನ್ನು ತಿಳಿಯುವುದು ಅಧ್ಯಯನದ ಉದ್ದೇಶವಾಗಿದೆ.

ಪುರುಷ ಪ್ರಧಾನ ವ್ಯವಸ್ಥೆಯು ನಿರಂತರವಾಗಿ ಮಹಿಳೆಯನ್ನು ಅದೀನದರ್ಜೆಯಲ್ಲಿಯೇ ಪರಿಗಣಿಸುತ್ತಿರುವ ನಿಟ್ಟಿನಲ್ಲಿ ಸಾಮಾಜಿಕ ವ್ಯವಸ್ಥೆಯ ಹಲವು ಸಂಗತಿಗಳು ಸಹ ಪುರುಷ ಪರವಾಗಿ ಮಹಿಳಾ ವಿರೋಧಿಯಾಗಿ ರೂಪಿತವಾಗಿದೆ ಬಳಕೆಯಲ್ಲಿದೆ.ಪುರುಷತ್ವ ಮತ್ತು ಸ್ತ್ರೀತ್ವದ ಅಂಶಗಳ ಅಡಿಯಲ್ಲಿ ಅವುಗಳು ಇಂದು ಸಮಾಜದಲ್ಲಿ ಕಾರ್ಯನಿರ್ವಹಿಸುತ್ತಿವೆ.ಅಂತೆಯೇ ಸರ್ಕಾರಿ ಮಹಿಳಾ ಯೋಜನೆಗಳ ಯೋಜನಾ ವಿಧಾನ, ಯೋಜನೆಗಳ ಅನುಸಂಧಾನದ ವಿಧಾನ, ಯೋಜನೆಗಳ ಮೌಲ್ಯಮಾಪನಾ ವಿಧಾನಗಳಲ್ಲಿಯೂ ಕಾರ್ಯನಿರ್ವಹಿಸುತ್ತಿವೆ. ಮಹಿಳೆಯರೂ ಇದನ್ನು ಒಪ್ಪಿ ನಡೆಯುವಂತೆ ಸಮಾಜ ಅದನ್ನು ಇಂದಿಗೂ ರೂಪಿಸುತ್ತಿದೆ ಎಂಬುದನ್ನು ಪರಾಮರ್ಶಿಸುವ ಉದ್ದೇಶ ಇಲ್ಲಿನದಾಗಿದೆ.

೧.೫ ಅಧ್ಯಯನದ ಗುರಿ

ಎಲ್ಲಾ ಸ್ತ್ರೀವಾದಿಗಳು ಮಹಿಳಾ ಪರ ಸಮಾನತೆ ಮಹಿಳೆ ಸಮಾಜದ ಪ್ರತಿ ಕ್ಷೇತ್ರದಲ್ಲಿಯೂ ಸಮಾನ ವ್ಯಕ್ತಿಯಾಗಿ ಪರಿಗಣಿತವಾಗಬೇಕು. ಮಹಿಳಾ ಬದುಕಿನಲ್ಲಿ ಇರುವ ಲಿಂಗ ತಾರತಮ್ಯ, ದೂರವಾಗಬೇಕು. ಒಂದು ಆರೋಗ್ಯವಂತ ಸಮಾಜದ ರೂಪಿಕೆಗೆ ಇದು ಅತ್ಯವಶ್ಯಕ. ಇದಕ್ಕೆ ಯೋಜನೆಗಳ ಪಾತ್ರ ಬಹುಮುಖ್ಯವಾಗಿವೆ. ಇದನ್ನು ತಿಳಿದು ಮಹಿಳಾ ಅಭಿವೃದ್ಧಿಗೆ ವಿಶೇಷವಾಗಿ ಅನ್ವಯಿಸಿ ಜಾರಿಗೆಗೊಳ್ಳುತ್ತಿರುವ ಸರ್ಕಾರಿ ಯೋಜನೆಗಳು ಕೂಡ ಲಿಂಗನಿರಪೇಕ್ಷಿತ ನೆಲೆಯಲ್ಲಿ ಗಟ್ಟಿಗೊಂಡು ಜಾರಿಗೊಳ್ಳಬೇಕು.ಲಿಂಗತಾರತಮ್ಯವನ್ನು ಹೋಗಲಾಡಿಸಬೇಕು.

ಈ ಮೇಲಿನ ಸಂಗತಿಗಳನ್ನು ಗಂಭೀರವಾಗಿ ಗುರುತಿಸಿ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳಲ್ಲಿ ಇಂದಿಗೂ ತಾಂಡವವಾಡುತ್ತಿರುವ ಪಿತೃಮೌಲ್ಯಗಳನ್ನು ಅರಿತು ಅವುಗಳಿಂದ ಉಂಟಾಗುತ್ತಿರುವ ಸಮಸ್ಯೆಗಳು ಎಂದು ಮನಗಾಣುವುದಾಗಿದೆ.ಈ ಮೂಲಕ ಮಹಿಳಾ ಅಭಿವೃದ್ಧಿಗೆ ಬೇಕಾದಂತ ಲಿಂಗ ಸೂಕ್ಷ್ಮತೆಯ ಸಂಗತಿಗಳನ್ನು ಅರಿಯುವುದು, ಮಹಿಳಾ ಅಭಿವೃದ್ಧಿಗೆ ಬೇಕಾದ

ಮುಖ್ಯ ಸಂಗತಿಗಳು ಯಾವುವು ಎಂಬುದನ್ನು ಕಂಡುಹಿಡಿಯುವುದು. ಈ ಮೂಲಕ ಸಮಾಜವನ್ನು ಲಿಂಗಸಮಾನತೆಯಿಂದ ಮುಕ್ತಗೊಳಿಸುವ ಪ್ರಯತ್ನ ಇದಾಗಬಹುದು ಎಂಬ ಆಶಯವಾಗಿದೆ.

೧.೬ ಅಧ್ಯಯನದ ವ್ಯಾಪ್ತಿ

ಅತ್ಯಾಧುನಿಕ ಜಗತ್ತಿನಲ್ಲಿ ಮಹಿಳಾ ಸಮುದಾಯ ಪ್ರತಿ ರಂಗದಲ್ಲಿಯೂ ಸಕ್ರಿಯವಾಗಿ ಭಾಗವಹಿಸುತ್ತಿದ್ದಾಳೆ.ಅದಕ್ಕೆ ಪ್ರತಿಯಾಗಿ ತಂತ್ರಜ್ಞಾನವನ್ನು ಹುಟ್ಟು ಹಾಕುತ್ತಲೇ ಇದೆ.ಆದರೆ ಅಲ್ಲಿಯೂ ಮಹಿಳಾ ಬದುಕಿನಲ್ಲಿ ಸ್ತ್ರೀತ್ವ ಮತ್ತು ಪುರುಷತ್ವದ ಛಾಯೆಗಳು ಕಾರ್ಯನಿರ್ವಹಿಸುತ್ತಿವೆ. ಮಹಿಳಾ ಅಭಿವೃದ್ಧಿಯಲ್ಲಿಯೂ ಸಹ ಈ ಸಂಗತಿಗಳನ್ನು ಗಂಭೀರವಾಗಿ ಗುರುತಿಸಿಕೊಂಡು ಪ್ರಸ್ತುತವಾಗಿ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಅಧ್ಯಯನದ ಮುಖ್ಯ ವಲಯವನ್ನಾಗಿ ಗುರುತಿಸಿಕೊಳ್ಳಲಾಗಿದೆ. ಈ ವಲಯದಲ್ಲಿ ಪಿತೃಮೌಲ್ಯಗಳು ಅವಳನ್ನು ಹೇಗೆ ನಿಯಂತ್ರಣಕ್ಕೊಳಪಡಿಸುತ್ತಿದೆ. ಅವಳ ಸಾಧನೆಯ ಬದುಕನ್ನು ಯಾವ ತಂತ್ರಗಳಿಂದ ತಡೆಹಿಡಿಯುತ್ತಿದೆ?ಮುಖ್ಯವಾಗಿ ಇಂದಿಗೂ ಪ್ರಧಾನಧಾರೆಯ ಮೌಲ್ಯಗಳು ಅವಳನ್ನು ಸ್ತ್ರೀತ್ವದ ಅಂಶಗಳಿಂದಲೇ ಶ್ರೇಣಿಕೃತ ತಳಹದಿಯಲ್ಲಿ ರೂಪುಗೊಂಡಂತ ಯೋಜನೆಗಳನ್ನು ಅಧೀನದಲ್ಲಿರುವಂತೆ ಮಾಡುತ್ತಿದೆ ಎಂಬುದನ್ನು ಗುರುತಿಸಲಾಗುತ್ತಿದೆ.ಮಹಿಳಾ ಬದುಕಿನ ಅಭದ್ರತೆ-ಅತಂತ್ರತೆಯ ಜೊತೆಗೆ ಅವಳ ಬದುಕಿನಲ್ಲಿ ಉಂಟಾಗುವ ಮಾನಸಿಕ,ದೈಹಿಕ ತೊಂದರೆಗಳನ್ನು ಗುರುತಿಸುವಲ್ಲಿಯೂ ವಿಫಲವಾಗಿದೆ ಎಂಬುದನ್ನು ಪರಿಗಣಿಸಬೇಕು.ಈ ನಿಟ್ಟಿನಲ್ಲಿ ಸರ್ಕಾರಿ ಮಹಿಳಾ ಅಭಿವೃದ್ಧಿಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಅಧ್ಯಯನ ಮಾಡುವುದರ ಮೂಲಕ ಅಲ್ಲಿನ ಪುರುಷತ್ವ ಮತ್ತು ಸ್ತ್ರೀತ್ವದ ಅಂಶಗಳು,ಪ್ರಧಾನಧಾರೆಯ ಮೌಲ್ಯಗಳು ಹೇಗೆ ಕಾರ್ಯನಿರ್ವಹಿಸುತ್ತಿವೆ ಎನ್ನುವ ವಿವರವನ್ನು ತಿಳಿಯಲು ಅಧ್ಯಯನದ ವ್ಯಾಪ್ತಿಯನ್ನು ಸೀಮಿತಗೊಳಿಸಲಾಗಿದೆ.

ಸಮಾಜದಲ್ಲಿ ಯಾವುದೇ ವರ್ಗ,ಜಾತಿ ತೆಗೆದುಕೊಂಡರೂ ಪ್ರತಿ ವ್ಯವಸ್ಥೆಯಲ್ಲಿ ಮಹಿಳೆಯರ ಒಟ್ಟು ಬದುಕನ್ನು ಅವಳ ತಾಯ್ತನಕ್ಕೆ ಆಧರಿಸಿದೆ.ಅವುಗಳ ದೇಹ ಲೈಂಗಿಕತೆಯ ಅಂಶಗಳು ಕೂಡ ಅವಳನ್ನು ಸೇವಾ ಮನೋಭಾವವನ್ನೆ ಆಧರಿಸಿದೆ.ಅದಕ್ಕೆ ಮುಂದುವರೆದು ನೋಡಿದಾಗ 'ತಾಯ್ತನ'ದಿಂದ ಜನಸಂಖ್ಯೆಯನ್ನು ನಿಯಂತ್ರಿಸುವ ಉದ್ದೇಶದಿಂದ 'ಕುಟುಂಬ ಯೋಜನೆ'ಯೂ ಕೂಡ ಮಹಿಳೆಯರನ್ನೇ ಕೇಂದ್ರವನ್ನಾಗಿಸಿಕೊಂಡಿದೆ.ಲಿಂಗ ಶ್ರೇಣಿಕೃತ ವ್ಯವಸ್ಥೆಯ ಜೈವಿಕ ಭಿನ್ನತೆಯನ್ನೇ ಆಧರಿಸಿಯೇ ಈ ಯೋಜನೆಗಳು ಕೂಡ ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ಅರಿತು ಮಹಿಳಾ ಸಂತಾನ ಆರೋಗ್ಯವನ್ನು ಮತ್ತು ಕುಟುಂಬಯೋಜನೆಯನ್ನು ಮುಖ್ಯವಾಗಿ ಗುರುತಿಸಿಕೊಳ್ಳಲಾಗುತ್ತಿದೆ. ಸರ್ಕಾರವು ಮಹಿಳೆಯನ್ನು ಅವಳ 'ಸಂತಾನಾರೋಗ್ಯದ' ಸಂಗತಿಗಳನ್ನು ಗಂಭೀರವಾಗಿ ಗುರುತಿಸಿಕೊಂಡು ಮೊದಲನೆ(೧೯೫೦) ರಲ್ಲಿ ಪಂಚವಾರ್ಷಿಕ ಯೋಜನೆಯಲ್ಲಿ ಗುರುತಿಸಿ

ಕೊಂಡಿದೆ.ಅಂದಿನಿಂದ ಇಂದಿಗೂ ಸರ್ಕಾರಿ ಮಹಿಳಾ ಅಭಿವೃದ್ಧಿಗೆ ಯೋಜನೆಗಳಲ್ಲಿ ಹಲವಾರು ಅಧ್ಯಯನಗಳು,ತಜ್ಞರ, ಸಲಹೆಗಳು,ಅವರ ದೃಷ್ಟಿಕೋನ ಮಹಿಳೆಯರನ್ನೇ ಗಂಭೀರವಾಗಿ ಗುರುತಿಸಿಕೊಂಡಿದ್ದಾರೆ/ಗುರುತಿಸಿಕೊಳ್ಳುತ್ತಾರೆ. ಮಹಿಳಾ ದೇಹ ತಾಯ್ತನವನ್ನು ಲಿಂಗಸೂಕ್ಷ್ಮವಾಗಿ ಗಂಭೀರವಾಗಿ ಗುರುತಿಸುವಲ್ಲಿ ವಿಫಲರಾಗಿದ್ದಾರೆ.ಇದೂ ಕೂಡ ಯೋಜನೆಯ ವೈಧಾನಿಕತೆ,ಅಲ್ಲಿನ ಚಿಂತನೆಗಳು ವೈಫಲ್ಯಗಳೇ ಆಗಿವೆ.ಈ ಸಂಗತಿಯನ್ನು ಇಲ್ಲಿ ಗಂಭೀರವಾಗಿ ಗುರುತಿಸಿಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಸಮಾಜ ವ್ಯವಸ್ಥೆಯ ಒಳಗೆ ಹೆಣ್ಣು ಹೇಗೆ ಶ್ರೇಣಿಕೃತ ವ್ಯವಸ್ಥೆಯು ಪುರುಷ ಪ್ರಧಾನಧಾರೆಯ ಮೌಲ್ಯಗಳನ್ನು ಅಳವಡಿಸಿ,ಅನುಸರಿಸಿ ಬರುವ ಅಂಶವನ್ನು ಸರ್ಕಾರಿ ಮಹಿಳಾ ಯೋಜನೆಗಳು ಕೂಡ ಪ್ರಚೋದಿಸುತ್ತದೆ.ಇಂತಹ ಸಂಗತಿಗಳನ್ನು ಅರ್ಥಮಾಡಿಕೊಳ್ಳುವ,ಇದರಿಂದ ಮಹಿಳಾ ಸಮುದಾಯಕ್ಕೆ ಉಂಟಾಗುತ್ತಿರುವ ತೊಂದರೆಗಳೇನು ಎಂಬುದನ್ನು ತಿಳಿಯುವ ಚೌಕಟ್ಟನ್ನು ಈ ಅಧ್ಯಯನದಲ್ಲಿ ಕಟ್ಟಿಕೊಳ್ಳಲಾಗಿದೆ.

ಸರ್ಕಾರ ಜನಸಂಖ್ಯಾ ನಿಯಂತ್ರಣಕ್ಕೆಂದು ಹಲವಾರು ಯೋಜನೆಗಳನ್ನು ರೂಪಿಸಿದೆ. ಜಾರಿಗೊಳಿಸಿದೆ. ಅವುಗಳು ಮಹಿಳೆಯರನ್ನೇ ಕೇಂದ್ರವನ್ನಾಗಿಸಿದೆ ಎಂಬುದಕ್ಕೆ ಪುರಾವೆಗಳೇ ಬೇಡ.ಮಹಿಳಾ ಬದುಕಿನಲ್ಲಿ ಕುಟುಂಬ ಯೋಜನೆಗಳ ಸಂಗತಿಗಳು ನೇರವಾಗಿ ಮಹಿಳಾ ಬದುಕಿನ ಮೇಲೆ ಪರಿಣಾಮಗಳನ್ನು ಬೀರುತ್ತಿವೆ.ಇದನ್ನು ಗಂಭೀರವಾಗಿ ಗುರುತಿಸಿದ ಸರ್ಕಾರ ಇನ್ನೂ ಹೆಚ್ಚಿನ ಗರ್ಭನಿರೋಧಕ ಅಂಶಗಳನ್ನು ಹೊರತರುತ್ತಿದೆ.ಆದರೆ ಮಹಿಳಾ ದೇಹದ ಮೇಲೆ ಹೇಗೆ ಪರಿಣಾಮಕಾರಿಯಾಗುತ್ತಿದೆ ಎಂಬುದು ತಿಳಿದರೂ ಅದನ್ನು ಬದಲಾವಣೆಗೊಳಿಸದಂತಹ ಸಂಗತಿ ಒಂದೆಡೆ.ಇನ್ನೊಂದೆಡೆ ಸಮಾಜದಲ್ಲಿ ಪುರುಷರಿಗೆಂದೆ ಅವರ ಅನುಕೂಲಕರ ಸಮಾಜ.ಇನ್ನೊಂದೆಡೆ ಮಹಿಳಾ ಬದುಕು ಪುರುಷರ ಅನುಕೂಲಕರ ವ್ಯವಸ್ಥೆಯಲ್ಲಿ ಕಟ್ಟಿಕೊಂಡು ಬರುತ್ತಿರುವುದನ್ನು ನೋಡಬಹುದಾಗಿದೆ.

ಪ್ರಸ್ತುತವಾಗಿ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳ ವಲಯವನ್ನು ಅಧ್ಯಯನ ವಿಷಯವಾಗಿ ತೆಗೆದುಕೊಂಡಿದ್ದರೂ,ಅಲ್ಲಿನ ಸಮಸ್ಯೆಯನ್ನು ಗುರುತಿಸಲು ಮಹಿಳಾ ಮತ್ತು ಕುಟುಂಬ ಯೋಜನೆಗಳನ್ನು ವಲಯದ ಆಕರವಾಗಿ ಪರಿಗಣಿಸಿಕೊಳ್ಳಲಾಗಿದೆ.ಅಭಿವೃದ್ಧಿ,ಮಹಿಳಾ ಅಭಿವೃದ್ಧಿ ಯೋಜನೆಗಳ ಸಂಗತಿಗಳನ್ನು ವಿಸ್ತ್ರುತವಾಗಿ ಚರ್ಚೆಗೊಳಪಡಿಸುವುದರ ಮೂಲಕ ಅಲ್ಲಿ ಕುಟುಂಬ ಯೋಜನೆಗಳಲ್ಲಿಯೂ ಹೇಗೆ ಸಾಂಪ್ರದಾಯಿಕ ರೂಢಿಗತ ಸಂಗತಿಗಳು ಮಹಿಳಾ ಮತ್ತು ಪುರುಷರ ಸಂಬಂಧಿತ ಯೋಜನೆಗಳನ್ನು ಹೇಗೆ ವಿಭಜಿಸಿದೆ.ನೇರವಾಗಿ ಮಹಿಳೆಯರನ್ನು ಗುರಿಯನ್ನಾಗಿಸಿ ಕೊಂಡಿದೆ.ಅದನ್ನು ಸರ್ಕಾರ ಮಹಿಳೆಯರು ಸಮಾಜ ಒಪ್ಪಿ ನಡೆಯುತ್ತಿದೆ.ಇಲ್ಲಿನ ಜಾಣ ಕುರುಡುತನವನ್ನು ಮಾತ್ರ ಪರಿಗಣಿಸುವ ನಿಟ್ಟಿನಲ್ಲಿ ಅವಲೋಕನ ಅಧ್ಯಯನ ಸೀಮಿತಗೊಂಡಿದೆ.

ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳು ಕೇವಲ ಮಹಿಳೆಯರನ್ನು ಮಾತ್ರ ಪರಿಗಣಿಸಿದೆ.ಆದರೆ ಅದರ ಹಿಂದೆ ಕಾರ್ಯನಿರ್ವಹಿಸುತ್ತಿರುವ ಸಾಂಪ್ರದಾಯಿಕ ಸಮಾಜದ ಶ್ರೇಣಿಕೃತ ಸಂಸ್ಥೆಗಳನ್ನು ಗಂಭೀರವಾಗಿ ಗುರುತಿಸಿಲ್ಲ.ಜೊತೆಗೆ ಸಾಂದರ್ಭಿಕವಾಗಿ ಅಭಿವೃದ್ಧಿ ಪ್ರಕ್ರಿಯೆ ಮಧ್ಯದಲ್ಲಿ ಮಹಿಳಾ ಅಭಿವೃದ್ಧಿ ಪ್ರಕ್ರಿಯೆ ಹುಟ್ಟಿ ಬಂದಿದೆ.ಹಾಗಾಗಿ ಅಭಿವೃದ್ಧಿ ಸೈದ್ಧಾಂತಿಕತೆಯಲ್ಲಿ ತುಂಬಾ ಹಿಂದಿನಿಂದಲೂ ಬೆಳೆದು ಬಂದಿರುವ ಪ್ರಧಾನಧಾರೆಯ ಮೌಲ್ಯಗಳು ಇಂದಿಗೂ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಗುರುತಿಸಿ 'ಅಭಿವೃದ್ಧಿ' ಪರಿಕಲ್ಪನೆಯನ್ನು ಅದರ ತಾತ್ವಿಕತೆಯನ್ನು ಚಾರಿತ್ರಿಕವಾಗಿ,ವಿಸ್ತೃತವಾಗಿ ಚರ್ಚೆಗೊಳಪಡಿಸುವುದು ಅತ್ಯವಶ್ಯಕ.ಅಭಿವೃದ್ಧಿ ಪರಿಕಲ್ಪನೆಯಿಂದ ಇಂದಿನ ಮಹಿಳಾ ಅಭಿವೃದ್ಧಿ ಸಿದ್ಧಾಂತಗಳವರೆಗೆ ಅಧ್ಯಯನವನ್ನು ಮಿತಿಗೊಳಿಸಲಾಗುತ್ತಿದೆ.

ಈ ನಿಟ್ಟಿನಲ್ಲಿ ಮುಂದುವರೆದು ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳಲ್ಲಿ ಪ್ರಧಾನಧಾರೆಯ ಮೌಲ್ಯಗಳು ಕೇವಲ ಸೈದ್ಧಾಂತಿಕತೆಯಲ್ಲಿ ಅಲ್ಲ.ಮುಂದುವರೆದು ಯೋಜನೆಗಳ ಅನುಸಂಧಾನದಲ್ಲಿಯೂ ಇದೆ.ಇದರಿಂದಲೂ ಮಹಿಳಾ ಅಭಿವೃದ್ಧಿಗೆ ಅಡೆತಡೆ ಉಂಟಾಗುತ್ತಿದೆ.ಇದನ್ನು ಅರಿಯಲು ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಅದರ ತಂತ್ರಗಳನ್ನು ತಿಳಿಯುವುದು ಮುಖ್ಯ.ಸರ್ಕಾರಿ ಮಹಿಳಾ ಅಭಿವೃದ್ಧಿ ಎಂಬ ವಿಶಾಲ ವ್ಯಾಪ್ತಿಯಲ್ಲಿ ಪಂಚವಾರ್ಷಿಕ ಯೋಜನೆಗಳ ಮೂಲಕ ಹೇಗೆ ಜಾರಿಯಾಗುತ್ತಿವೆ ಎಂಬುದನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸುವ ಮಾಹಿತಿಯನ್ನು ಅಳವಡಿಸಲಾಗಿದೆ.ಇಲ್ಲಿ ಪಂಚವಾರ್ಷಿಕ ಯೋಜನೆಗಳೇ ಮಹಿಳಾ ಸಂಗತಿಗಳಲ್ಲಿ ಕೇವಲ ಒಂದು ವಲಯದಲ್ಲಿ ಎಷ್ಟರಮಟ್ಟಿಗೆ ಮಹಿಳಾ ಯೋಜನೆಗಳು ಜಾರಿಗೆಗೊಂಡಿವೆ ಎಂಬುದನ್ನು ಅವಲೋಕಿಸುವುದು ಮಾತ್ರ.

ಪ್ರಸ್ತುತ ಮಹಾಪ್ರಬಂಧದಲ್ಲಿ ಅಧ್ಯಯನದ ಕೇಂದ್ರಬಿಂದುವಾಗಿ ಮಹಿಳಾ ಆರೋಗ್ಯದ ವಲಯವನ್ನು ಗುರುತಿಸಿಕೊಳ್ಳಲಾಗಿದೆ.ಮಹಿಳಾ ಆರೋಗ್ಯ ಹಾಗೂ ಇಂದಿನ ಕುಟುಂಬ ಯೋಜನೆಯ ನೀತಿಗಳು ಮಹಿಳಾ ಬದುಕಿನ ಮೇಲೆ,ಅವಳ ದೇಹದ ಮೇಲೆ ಕುಟುಂಬ ಯೋಜನಾ ವಿಧಾನಗಳು ನೇರವಾಗಿ ಪರಿಣಾಮಗಳು ಬೀರುತ್ತಿದ್ದರೂ ಕೂಡ ಅದನ್ನು ಗುರುತಿಸಿ ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರಿ ಮಹಿಳಾ ಯೋಜನೆಗಳು ಮೂಡಿ ಬರಬೇಕು.ಅವುಗಳು ಬಂದಿವೆ ಎಂತಾದರು ಅವುಗಳನ್ನು ತುಂಬಾ ಗಂಭೀರವಾಗಿ ಅನುಷ್ಠಾನಗೊಳ್ಳುವಲ್ಲಿಗೊಳಪಟ್ಟರೆ ಫಲಿತಗಳಾಗಿಲ್ಲ ಎಂಬುದನ್ನು ತಿಳಿಯುವ ಸಲುವಾಗಿ.ಈ ಮೂಲಕ ಯೋಜನಾ ಸೈದ್ಧಾಂತಿಕತೆ,ಅನುಷ್ಠಾನ ವಿಧಾನ,ಮೌಲ್ಯಮಾಪನದಲ್ಲಿ– ಈ ಮೂರು ಹಂತದಲ್ಲಿ ಸಮಸ್ಯೆಗಳಿವೆ ಎಂಬುದನ್ನು ಅರಿಯುವುದಾಗಿದೆ.'ಅಭಿವೃದ್ಧಿ' ಪ್ರಕ್ರಿಯೆ ತುಂಬಾ ವಿಶಾಲವಾದದ್ದು.ಅದರಲ್ಲಿ ಮಹಿಳಾ ಅಭಿವೃದ್ಧಿ ಎಂಬ ವಿಭಜನೆಯಲ್ಲಿ ಮಹಿಳಾ ಸಂತಾರೋಗ್ಯ ಮತ್ತು ಕುಟುಂಬ ಯೋಜನೆಗೆ ಈ ಅಧ್ಯಯನವನ್ನು ಮಿತಿಗೊಳಿಸಲಾಗಿದೆ.ಈ

ಮೂಲಕ ಮಹಿಳಾ ಅಭಿವೃದ್ಧಿಯಲ್ಲಿ ಹೇಗೆ ಇಂದಿಗೂ ಲಿಂಗ ಶ್ರೇಣಿಕೃತ ವ್ಯವಸ್ಥೆ ಸಾಮಾಜಿಕ ಸಂಬಂಧಗಳ .ಮೂಲಕ ಲಿಂಗ ಪಾತ್ರಗಳ ಮೂಲಕ ಮಹಿಳಾ ಬದುಕಿನ ಮೇಲೆ ಪರಿಣಾಮ ಬೀರುತ್ತಿದೆ ಎಂಬುದನ್ನು ತಿಳಿಯುವುದಾಗಿದೆ.

ಕ್ಷೇತ್ರಕಾರ್ಯದ ವ್ಯಾಪ್ತಿ

ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಿತೃಮೌಲ್ಯಗಳು ಇಂದಿಗೂ ಕಾರ್ಯ ನಿರ್ವಹಿಸುತ್ತಿವೆ ಎಂಬುದು ತಿಳಿದ ಸಂಗತಿ. ಆದರೆ ಮಹಿಳಾ ಅಭಿವೃದ್ಧಿ ಯೋಜನೆಗಳು ಎಂಬುದು ತುಂಬಾ ವಿಶಾಲವಾಗಿರುವಂತದ್ದು.ಪ್ರತಿ ಕ್ಷೇತ್ರದಲ್ಲಿಯೂ ಕೂಡ 'ಲಿಂಗ ತಾರತಮ್ಯತೆ' ಎಂಬುದು ಸಾಮಾನ್ಯವಾಗಿದೆ.ಪ್ರಸ್ತುತವಾಗಿ ಮಹಿಳಾ ಆರೋಗ್ಯ ಮತ್ತು ಕುಟುಂಬ ಯೋಜನೆಯನ್ನು ವಿಸ್ತ್ರುತವಾಗಿ ಚರ್ಚೆಗೆ ಒಳಪಡಿಸಲಾಗುತ್ತದೆ.ಈ ಸಂಗತಿಗಳನ್ನು ಅರಿಯಲು.ಅಧ್ಯಯನಕ್ಕೆ ಒಳಪಡಿಸಲು ಕೊಪ್ಪಳ ಜಿಲ್ಲೆಯನ್ನು ಅಲ್ಲಿನ ಮಹಿಳೆ ಮತ್ತು ಪುರುಷರನ್ನು,ಅಂಗನವಾಡಿ ಕಾರ್ಯಕರ್ತೆಯರನ್ನು,ಪಂಚಾಯಿತಿ ಸದಸ್ಯರನ್ನು ಹಾಗೂ ಅಲ್ಲಿನ ಸರ್ಕಾರಿ, ಸರ್ಕಾರೇತರ ವೈದ್ಯರುಗಳನ್ನು ಪರಿಗಣಿಸಲಾಗಿದೆ.ಈ ಮೂಲಕ ಮಹಿಳಾ ಆರೋಗ್ಯವು ಪಿತೃಮೌಲ್ಯಗಳಿಂದ ಯಾವ ರೀತಿ ತೊಂದರೆಗಳನ್ನು ಅನುಭವಿಸುತ್ತಿವೆ,ಯೋಜನೆಗಳ ಮೂಲಕ ಹೇಗೆ ಪಿತೃಮೌಲ್ಯಗಳು ಅನುಷ್ಠಾನಗೊಳ್ಳುತ್ತಿವೆ,ಸಾಮಾಜಿಕ ಸಂಬಂಧಗಳಿಂದ ಹೇಗೆ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳ ವಿಫಲತೆಗೆ ಕಾರಣವಾಗುತ್ತಿವೆ ಎಂಬುದನ್ನು ಅರಿಯುವುದಾಗಿದೆ.ಕ್ಷೇತ್ರಕಾರ್ಯದ ಸಂಧರ್ಬದಲ್ಲಿ ದೊರೆತ ಹಲವು ಮಾದರಿಗಳ ವಿಭಿನ್ನ ಅನುಭವಗಳನ್ನು, ತೊಂದರೆಗಳನ್ನು ಪ್ರಕರಣ ಅಧ್ಯಯನಗಳಲ್ಲಿ ಬಳಸಲಾಗಿದೆ. ಸಂದರ್ಶನ, ಪ್ರಶ್ನಾವಳಿ ರಚಿತ-ಅರಚಿತ ಪ್ರಶ್ನಾವಳಿಗಳನ್ನು ಬಳಸಲಾಗಿದೆ.ಹಾಗೂ ಸಾಮಾನ್ಯ ಜನ ಸಮುದಾಯದಲ್ಲಿ ಮಹಿಳಾ ಅಭಿವೃದ್ಧಿ,ಅಭಿವೃದ್ಧಿ ಯೋಜನೆಗಳ ಬಗೆಗೆ ಇರುವ ಮಾಹಿತಿಯಿಂದ ಕುಟುಂಬ ಯೋಜನೆಗಳ ಮೂಲಕ ಮಹಿಳಾ ಬದುಕಿಗೆ ಯಾವ ತೊಂದರೆಗಳಾಗುತ್ತಿವೆ.ಅವುಗಳಿಗೆ ಈ ಪಿತೃಮೌಲ್ಯಗಳು ಹೇಗೆ ಕಾರಣವಾಗುತ್ತಿವೆ ಎಂಬುದನ್ನು ಅರಿಯಲು ಪ್ರಯತ್ನಿಸಲಾಗಿದೆ. ಪಂಚಾಯತ್ ಸದಸ್ಯರುಗಳನ್ನು ಸಂದರ್ಶನಕ್ಕೆ ಒಳಪಡಿಸುವುದರ ಮೂಲಕ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳ ವೈಫಲ್ಯಕ್ಕೆ,ಅನುಷ್ಠಾನದ ವೈಫಲ್ಯಕ್ಕೆ ಕಾರಣಗಳೇನು ಎಂಬುದನ್ನು ತಿಳಿಯಲು ಪ್ರಯತ್ನಿಸಲಾಗುತ್ತಿದೆ.ವೈದ್ಯರುಗಳನ್ನು ಅಧ್ಯಯನದ ಭಾಗವಾಗಿ ಪರಿಗಣಿಸಿ ಇಂದಿಗೂ ಸ್ತ್ರೀತ್ವ ಮತ್ತು ಪುರುಷತ್ವದ ಮೌಲ್ಯಗಳಿಂದ ಯಾವ ತರಹದ ಅಪನಂಬಿಕೆಗಳು ಸಮಾಜದಲ್ಲಿ ತಾಂಡವವಾಡುತ್ತಿವೆ. ಯೋಜನೆಗಳಲ್ಲಿ ಇವುಗಳು ಹೇಗೆ ದೂರ ಉಳಿದಿವೆ? ಅಲ್ಲಿ ಲಿಂಗ ಸೂಕ್ಷ್ಮತೆಯ ಅವಶ್ಯಕತೆ ಎಷ್ಟು ಅತ್ಯವಶ್ಯಕ ಎಂಬುದನ್ನು ಅರಿಯುವುದು ಇಲ್ಲಿನ ಮುಖ್ಯ ಧ್ಯೇಯವಾಗಿದೆ.

೧.೭ ಸಂಶೋಧನಾ ವೈಧಾನಿಕತೆ

ಪ್ರತಿಯೊಂದು ಸಂಶೋಧನೆಗೂ ತನ್ನದೇ ಆದ ಅಧ್ಯಯನ ಮಾದರಿ, ವಿಧಾನ, ಚೌಕಟ್ಟು, ತಾತ್ವಿಕತೆ, ಸ್ವರೂಪಗಳು ಇರುತ್ತವೆ. ಅವುಗಳ ಆಧಾರದ ಮೇಲೆ ಪರಿಕರಗಳನ್ನು ಬಳಸಲಾಗುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಸ್ತ್ರೀವಾದಿ ಸಂಶೋಧನಾ ವಿಧಾನದ ಅಡಿಯಲ್ಲಿ ಅಧ್ಯಯನದ ದಿಕ್ಕನ್ನು ಗುರುತಿಸಿಕೊಂಡಿದೆ. ಅಧ್ಯಯನದ ಅನುಕೂಲಕ್ಕಾಗಿ, ಸಂಶೋಧನಾ ಪರಿಕರಗಳಲ್ಲಿ ಸಲಹಾತ್ಮಕ ಸಂಶೋಧನಾ ವಿಧಾನವನ್ನು ಪ್ರಮುಖವಾಗಿ ಬಳಸಲಾಗುತ್ತಿದೆ. ಕ್ಷೇತ್ರಕಾರ್ಯ ವಿಧಾನ, ವಿಶ್ಲೇಷಣಾತ್ಮಕ ವಿಧಾನವನ್ನು ಬಳಸಲಾಗುತ್ತಿದೆ. ಸಂಶೋಧನಾ ವೈಧಾನಿಕತೆಯೂ ಪ್ರತಿ ಸಂಶೋಧನೆಯ ಭದ್ರ ಬುನಾದಿಯಾಗಿದೆ. ಪ್ರಸ್ತುತ ಸಂಶೋಧನೆಯಲ್ಲಿ ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯನ್ನು ಮುಖ್ಯವಾಗಿ ಗುರುತಿಸಿ ಕೊಳ್ಳಲಾಗಿದೆ. ಸ್ತ್ರೀವಾದಿ ಸಂಶೋಧನೆ ಎಂದರೆ, ಮಹಿಳೆಯರ ಅನುಭವದ ನೆಲೆಯಲ್ಲಿ ಸ್ತ್ರೀವಾದಿ ದೃಷ್ಟಿಕೋನದ ಮೂಲಕ ಅಧ್ಯಯನ ಮಾಡುವುದಾಗಿದೆ. ಸ್ತ್ರೀವಾದಿ ಸಂಶೋಧನೆ ''Consists of no single seet of agreed upon research guidliner or methods. Nor have feminists agreed upon one definition of feminist research''(Magur-1987

೧. ಸಾಮಾಜಿಕ ಸಂಶೋಧನಾ ವಿಧಾನದಿಂದ ಮಹಿಳಾ ಸಂಬಂಧಿತ ವಿಷಯಗಳನ್ನು ಅಧ್ಯಯನ ಮಾಡಲು ಸಾಧ್ಯವಿದೆಯೇ?

ಖಚಿತವಾಗಿ ಹೇಳುವುದಾದರೆ 'ಸಾಮಾಜಿಕ ಸಂಶೋಧನಾ' ವಿಧಾನದಿಂದ ಮಹಿಳಾ ಸಂಬಂಧಿತ ವಿಷಯಗಳನ್ನು ಅಧ್ಯಯನ ಮಾಡಲು ಸಾಧ್ಯವಿಲ್ಲ. ಏಕೆಂದರೆ ಸಾಮಾಜಿಕ ಸಂಶೋಧನಾ ವಿಧಾನವು ಪುರುಷ ಪಕ್ಷಪಾತಿಯಾಗಿದೆ. ಹಾಗಾಗಿ ಮಹಿಳಾ ಸಮಸ್ಯೆಗಳಿಗೆ ನ್ಯಾಯ ಸಮ್ಮತವಾದಂತಹ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಅಂಶವನ್ನು ಪ್ರಮುಖವಾಗಿ ಪರಿಗಣಿಸಿ ಪ್ರಸ್ತುತ ಅಧ್ಯಯನವನ್ನು ಮಾಡಲಾಗುತ್ತಿದೆ. ಇದರಿಂದಾಗಿ ಮಹಿಳೆಯರ ಬದುಕಿಗೆ ಅರ್ಥಪೂರ್ಣವಾದಂತಹ ನ್ಯಾಯವನ್ನು ಒದಗಿಸಲಾಗುತ್ತಿಲ್ಲ.

ಸ್ತ್ರೀವಾದಿ ಸಂಶೋಧನಾ ವೈದ್ಧಾನಿಕತೆ ಎಂದರೆ ಸಾಮಾಜಿಕ ಪ್ರಪಂಚದಲ್ಲಿ ಲಿಂಗ ಅಸಮಾನತೆಗೆ ಪುರುಷ ಪ್ರಧಾನ ಮೌಲ್ಯಗಳಿಗೆ ಸಮನಾಗಿ, ಸವಾಲಾಗಿ ಕಾರ್ಯನಿರ್ವಹಿಸುವ ಒಂದು ಪ್ರಮುಖ ಅಸ್ತ್ರವಾಗಿದೆ. ಇಲ್ಲಿ ತನ್ನದೇ ಆದ ಸೈದ್ಧಾಂತಿಕ ಚೌಕಟ್ಟು, ಸಂಶೋಧನಾ ವಿಧಾನಗಳ ಬಳಕೆ, ದೃಷ್ಟಿಕೋನ ಮತ್ತು ರಾಜಕಾರಣಗಳೂ ಇರುತ್ತದೆ. ಈ ತತ್ವಗಳಲ್ಲಿಯೇ ಈ ವೈದಾನಿಕತೆ ಸಾಗುತ್ತಿದೆ. ಈ ಎಲ್ಲಾ ಅಂಶಗಳ ತಳಹದಿಯಲ್ಲಿಯೇ ಸಾಮಾಜಿಕ ಅಸ್ಥಿರತೆ. ಲಿಂಗ ಅಸಮಾನತೆಯ ಅಂಶಗಳನ್ನು ಗುರ್ತಿಸಿ ಶಾಶ್ವತವಾಗಿ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಸ್ತ್ರೀವಾದಿ ಸಂಶೋಧನಾ ಅಧ್ಯಯನ ಸಾಗುತ್ತಿದೆ. ಈ ಅಂಶವನ್ನು ಪ್ರಮುಖವಾಗಿ ಗುರುತಿಸಿಕೊಂಡು

ಪ್ರಸ್ತುತ ಅಧ್ಯಯನದಲ್ಲಿ ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯನ್ನು ಅನುಸರಿಸಲಾಗುತ್ತಿದೆ. ಇದರ ಮೂಲಕ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿನ ಸಮಸ್ಯೆಗಳನ್ನು ಶಾಶ್ವತವಾಗಿ ನಿರ್ಮೂಲನೆ ಮಾಡಬಹುದಾದ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು. ಮಹಿಳಾ ಚಳುವಳಿಗಾರರಿಗೆ, ಸ್ತ್ರೀ ಕಾಳಜಿ ಇರುವ ಗುಂಪುಗಳಿಗೆ, ಮಹಿಳಾ ಸಮುದಾಯಕ್ಕೆ ಉತ್ತಮ ದಾರಿಯನ್ನು ಮಾಡಿಕೊಡುವುದಾಗಿದೆ. ಒಟ್ಟಾರೆಯಾಗಿ ಪರಿಪೂರ್ಣ ಸಮಾಜ ನಿರ್ಮಾಣ ಮಾಡಬಹುದಾಗಿದೆ.

ಸ್ತ್ರೀವಾದಿ ಸಂಶೋಧನಾ ಪ್ರಭಾವವು ಸಮಾಜದ ಮೇಲೆ ಬಹಳಷ್ಟು ಸಕಾರಾತ್ಮಕ ಪರಿಣಾಮವನ್ನು ಬೀರಿದೆ. ಹಲವಾರು ಕ್ಷೇತ್ರಗಳಲ್ಲಿ ಸ್ತ್ರೀವಾದಿ ಸಂಶೋಧನೆಯು ತನ್ನದೇ ಆದ ಸೈದ್ಧಾಂತಿಕತೆಯ ಮೂಲಕ ಸಮಾಜದಲ್ಲಿನ ಸಮಸ್ಯೆಗಳನ್ನು ಅದರಲ್ಲೂ ಮಹಿಳಾ ಸಮಸ್ಯೆಗಳನ್ನು ಪರಿಹರಿಸಿ ಆ ಮೂಲಕ ಸಮಾಜದಲ್ಲಿನ ಪಿತೃಪ್ರಧಾನ ಮೌಲ್ಯಗಳನ್ನು ಹೊಡೆದೂಡಿಸುತ್ತಿದೆ. ಮಹಿಳೆಯರ ಮೇಲೆ ನಡೆಸುತ್ತಿರುವ ದೌರ್ಜನ್ಯಗಳನ್ನು ನಿವಾರಿಸಲು ಪ್ರಯತ್ನಿಸುತ್ತಿದೆ.

ಸ್ತ್ರೀವಾದಿ ಸಂಶೋಧನಾ ವಿಧಾನವು ಉಳಿದೆಲ್ಲಾ ಸಂಶೋಧನಾ ವಿಧಾನಗಳಿಂದ ತುಂಬಾ ವಿಭಿನ್ನವಾಗಿದೆ. ಸ್ತ್ರೀವಾದಿ ಸಂಶೋಧನೆಯು ''ಅನುಭವಾತ್ಮಕತೆ''ಯ ಮೇಲೆ ತನ್ನ ಸಿದ್ಧಾಂತಗಳನ್ನು ಮಂಡಿಸುವುದರಿಂದ ಎಲ್ಲಾ ಸಂಶೋಧನಾ ವಿಧಾನಗಳಿಗಿಂತ ಇದು ವಿಭಿನ್ನವಾಗಿ ನಿಲ್ಲುತ್ತದೆ. ಮಹಿಳೆಯರ ಅನುಭವಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಅವರ ಸಮಸ್ಯೆಗಳನ್ನು, ಆಲೋಚನಾ ಧೋರಣೆಗಳನ್ನು ಅರಿತು ಸಂಶೋಧನೆ ಮಾಡುವುದರಿಂದ ಕಲ್ಪನಾತ್ಮಕ ಸಮಸ್ಯೆಗಳ ಬದಲಾಗಿ ನೈಜ ಸಮಸ್ಯೆಗಳು ಮತ್ತು ಅದಕ್ಕೆ ಸೂಕ್ತ ಪರಿಹಾರಗಳನ್ನು ಕಂಡು ಹಿಡಿಯಲು ಸಹಾಯವಾಗುತ್ತದೆ. ಆದ್ದರಿಂದಾಗಿ ಸ್ತ್ರೀವಾದಿ ಸಂಶೋಧನಾ ವಿಧಾನದಲ್ಲಿ ಅನುಭವಾತ್ಮಕತೆಗೆ ಹೆಚ್ಚು ಒತ್ತು ಕೊಡಲಾಗಿದೆ. ಈ ಅನುಭವಾತ್ಮಕತೆಯನ್ನು ವಿಶ್ಲೇಷಿಸಿದಾಗ ಈ ಕೆಳಕಂಡ ಅಂಶಗಳು ಪ್ರಮುಖವಾಗಿ ಕಾಣುತ್ತವೆ.

ಒಂದು ನಿರ್ದಿಷ್ಟ/ಪ್ರತ್ಯೇಕ ಜ್ಞಾನವನ್ನು ಹುಟ್ಟು ಹಾಕುವಾಗ ವಸ್ತುನಿಷ್ಠ ತತ್ವಗಳನ್ನು ಒಪ್ಪಿಕೊಳ್ಳುತ್ತದೆ. ಎಂದರೆ ಒಬ್ಬ ಮಹಿಳೆಯ ವೈಯಕ್ತಿಕ ಸಮಸ್ಯೆಯನ್ನು ಜಾಗತಿಕ ಸಮಸ್ಯೆಯೆಂದು ಗುರುತಿಸಿ, ಅದನ್ನು ವ್ಯಕ್ತಿ ನಿಷ್ಠೆಯಿಂದ ವಸ್ತು ನಿಷ್ಠತೆಗೆ ವರ್ಗಾಯಿಸಿ, ಎರಡೂ ಕಡೆಯಿಂದಲೂ ಸಮಸ್ಯೆಯನ್ನು ಅಧ್ಯಯನ ಮಾಡುವುದರ ಮೂಲಕ ಮಹಿಳೆಯರ ಸಮಸ್ಯೆಗಳನ್ನು ತಿಳಿಯಲು ಸಹಾಯವಾಗುತ್ತದೆ. ಎಂದರೆ ವ್ಯಕ್ತಿ ನಿಷ್ಠೆಯಲ್ಲಿ ಕೇವಲ ಒಬ್ಬ ವ್ಯಕ್ತಿಯನ್ನು ಮಾತ್ರ ಪರಿಗಣಿಸಲಾಗುತ್ತದೆ. ಆದರೆ ವಸ್ತು ನಿಷ್ಠೆಯಲ್ಲಿ ಸುತ್ತಲಿನ ಪರಿಸರವನ್ನು ಅಧ್ಯಯನ ಮಾಡಿ ಸಮಾಜದಲ್ಲಿರುವ ಸಂಗತಿಗಳು ಹೇಗೆ ಮಹಿಳೆಯರ ಉನ್ನತಿಗೆ ತೊಡಕಾಗುತ್ತಿದೆ ಎಂಬುದನ್ನು ಅಧ್ಯಯನ ಮಾಡಲು

ಸಾಧ್ಯವಾಗುತ್ತದೆ. ಈ ಮೂಲಕ ಮಹಿಳೆಯರ ಸಮಸ್ಯೆಗಳ ಮೂಲವನ್ನು ಕಂಡುಹಿಡಿದು ಸೂಕ್ತ ಪರಿಹಾರ ಹುಡುಕಲು ಸಾಧ್ಯವಾಗುತ್ತದೆ.

ಲಿಂಗ ಸಂವೇದನೆಯನ್ನು ಹುಟ್ಟುಹಾಕುವ ವಿಧಾನ : ಸ್ತ್ರೀವಾದಿ ಸಂಶೋಧನಾ ವಿಧಾನವು ಲಿಂಗ ಸಂವೇದನೆಯನ್ನು ಹುಟ್ಟುಹಾಕುತ್ತದೆ. ಸಮಾಜದಲ್ಲಿ ಚಾಲ್ತಿಯಲ್ಲಿರುವ ಲಿಂಗ ತಾರತಮ್ಯ ಮತ್ತು ಮಹಿಳೆಯರ ಮೇಲಿನ ಅಸಮಾನತೆಗಳನ್ನು ನಿವಾರಿಸಲೂ ಲಿಂಗ ಸಂವೇದನಾ ವಿಧಾನದ ಮೂಲಕ ಪಿತೃಪ್ರಧಾನ ಮೌಲ್ಯಗಳನ್ನು ಗುರುತಿಸಿ ಅದರ ದುಷ್ಪರಿಣಾಮಗಳು ಮತ್ತು ನಿರಂಕುಶತ್ವವನ್ನು ತೊಡೆದು ಹಾಕಲು ಪ್ರಯತ್ನಿಸಲಾಗುತ್ತಿದೆ. ಈ ಮೂಕ ಸ್ತ್ರೀ-ಪುರುಷರಿಬ್ಬರಿಗೂ 'ಲಿಂಗ ಸಂವೇದನೆ'ಯ ಬಗ್ಗೆ ಜಾಗೃತಿ ಮೂಡಿಸುವುದರಿಂದಾಗಿ ಸಮಾಜದಲ್ಲಿ ಸ್ತ್ರೀ-ಪುರುಷರ ಸಮಾನತೆಯನ್ನು ಸಾಧಿಸಬಹುದಾಗಿದೆ. ಅನುಭವಾತ್ಮಕತೆಯ ನೆಲೆಯಲ್ಲಿ ಸಾಗುವ ಈ ಸಂಶೋಧನೆ ಮಹಿಳಾ ಬದುಕಿನ ಪ್ರತಿ ಅನುಭವಗಳನ್ನು ಪರಿಗಣಿಸಿ ಅವರ ಅನುಭವದ ನೆಲೆಯಲ್ಲಿ ಯೋಜನೆಗಳನ್ನು ರೂಪಿಸಲು ದಾರಿ ಮಾಡಿಕೊಡುತ್ತದೆ. ಮಹಿಳಾ ಅಭಿವೃದ್ಧಿಗೆ ಬೇಕಾದ ಯೋಜನಾ ವೈಧಾನಿಕತೆಯನ್ನು ಸಂರಚಿಸಲು ಸಾಧ್ಯವಾಗುತ್ತದೆ.

ಚರ್ಚೆ ಮತ್ತು ಸಂಭಾಷಣೆ : ಚರ್ಚೆ ಮತ್ತು ಸಂಭಾಷಣೆಗಳನ್ನು ನಡೆಸುವುದರ ಮೂಲಕ ಮಹಿಳಾ ಮಾಹಿತಿದಾರರ ಅಭಿಪ್ರಾಯಗಳನ್ನು ಸಂಗ್ರಹಿಸಿ/ಪರಿಗಣಿಸಿ ಸಂಶೋಧನೆಯಲ್ಲಿ ಬಳಸಲಾಗುತ್ತದೆ. ಈ ಮೂಲಕ ಮಹಿಳೆಯರ ಅನುಭವವನ್ನು ನೈಜವಾಗಿ ಗುರುತಿಸಲಾಗುತ್ತದೆ.

ಸ್ತ್ರೀವಾದಿ ಸಂಶೋಧನೆಯ ಮೂಲಕ 'ಸಲಹಾತ್ಮಕ ಸಂಶೋಧನಾ ಸಿದ್ಧಾಂತ'ವನ್ನು/ ವಿಧಾನವನ್ನು ಪ್ರಮುಖವಾಗಿಸಲಾಗುತ್ತದೆ. ಸಮಾಜದಲ್ಲಿ ಸ್ತ್ರೀಯರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರಕಿಸಿ ಪುರುಷರಂತೆ ಸ್ತ್ರೀಯರಿಗೂ ಸಹ ಸಮನ್ವಯ ಕೊಡಿಸುವುದರಿಂದಾಗಿ ಮಹಿಳೆಯರು ಪಿತೃಪ್ರಧಾನ ವ್ಯವಸ್ಥೆಯಿಂದ ಬಿಡುಗಡೆ ಹೊಂದುವಂತಾಗುತ್ತದೆ.

ಸ್ತ್ರೀವಾದಿ ಸಂಶೋಧನಾ ಸಿದ್ಧಾಂತವು ಸ್ತ್ರೀಯರ ಪರ ಕಾಳಜಿ ವಹಿಸಿ ಅವರ ಸಮಸ್ಯೆ ಗಳಿಗೆ ಶಾಶ್ವತ ಪರಿಹಾರವನ್ನು ದೊರಕಿಸಿಕೊಟ್ಟು ಮಹಿಳೆಯರನ್ನು ಅಭಿವೃದ್ಧಿಪಡಿಸುವುದರ ಮೂಲಕ ಮಹಿಳೆಯರನ್ನು ಪುರುಷರಿಗೆ ಸಮಾನವಾಗಿ ಗುರ್ತಿಸುವುದು ಮತ್ತು ಪ್ರಸ್ತುತ ಚಾಲ್ತಿಯಲ್ಲಿರುವ ಹಳೆಯ ಸಾಂಪ್ರದಾಯಿಕ ಮೌಲ್ಯಗಳನ್ನು ಬದಲಾಯಿಸುವುದಾಗಿದೆ. ಇದರಿಂದಾಗಿ ಸಮಾಜದಲ್ಲಿ ಬದಲಾವಣೆ ಮತ್ತು ಸ್ತ್ರೀಯರ ಅಭಿವೃದ್ಧಿಯನ್ನು ಸಾಧಿಸುವುದೇ ಸ್ತ್ರೀವಾದಿ ಸಂಶೋಧನೆಯ ಮೂಲ ಉದ್ದೇಶ.

೧.೮ ಸ್ತ್ರೀವಾದಿ ಸಂಶೋಧನೆಯ ಅವಶ್ಯಕತೆ

ಮಹಿಳಾ ಸಮುದಾಯವು ಎದುರಿಸುತ್ತಿರುವ ಅಧೀನತೆಯ ಸ್ವರೂಪ. ಅದಕ್ಕೆ ಕಾರಣವಾಗುವ ಮುಖ್ಯ ಸಂಗತಿಗಳು. ಇದರಿಂದ ಪಾರಾಗಲು ಇರುವ ಉಪಾಯಗಳು. ಅಂತಿಮವಾಗಿ ಮಹಿಳೆಯರು ಮುಕ್ತವಾಗಿ ಬದುಕಲು ಇರುವ ಹಾದಿಗಳನ್ನು ಶೋಧಿಸುವಲ್ಲಿ ಸ್ತ್ರೀವಾದಿ ಸಿದ್ಧಾಂತವು ಅನುಸರಿಸಿರುವ ಹಲವು ಮಾದರಿಗಳನ್ನು ನಾವು ಗಮನಿಸಬಹುದು. ಅಧಿಕಾರದ ನೆಲೆಯಿಂದ ಚರಿತ್ರೆಯ ದಾಖಲೆಗಳಿಂದ ಮಾತ್ರವಲ್ಲದೆ ದಿನನಿತ್ಯದ ಮಾತುಕತೆಯಿಂದಲೇ ಹೆಣ್ಣನ್ನು ಗಡಿಯಾಚೆಗೆ ನಿಲ್ಲಿಸುವ ಸಾಮಾಜಿಕ ಕ್ರಮಗಳನ್ನು ಅಭ್ಯಾಸ ಮಾಡಿದರೆ ಮಹಿಳೆಯರ ಬದುಕಿನ ಅಧೀನತೆಯ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಬಹುದು ಎಂಬುದು ಸ್ತ್ರೀವಾದಿ ಚಿಂತಕರ ನಿಲುವು, ಪಿತೃಪ್ರಧಾನತೆಯ ಹುನ್ನಾರಗಳನ್ನು ಅರಿಯಲು ಇರುವ ಒಂದೇ ದಾರಿ ಎಂದರೆ ಈ ಹುನ್ನಾರಗಳಲ್ಲಿ ದಿನನಿತ್ಯವೂ ಸಿಲುಕಿ ತಮ್ಮ ಬದುಕನ್ನು ಸಾಗಿಸಬೇಕಿರುವ ಸ್ತ್ರೀಯರ ಅನುಭವಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವುದು. ಆದರೆ ಇಂದು ಸರ್ಕಾರಿ ಮಹಿಳಾ ಪರ ಯೋಜನೆಗಲಲ್ಲಿ ಸ್ತ್ರೀಯರ ಅನುಭವ ಮತ್ತು ಸಮಸ್ಯೆಗಳನ್ನು ಪರಿಗಣಿಸದೇ ಯೋಜನೆಗಳನ್ನು ಜಾರಿಗೊಳಿಸುತ್ತಿದ್ದಾರೆ. ಆದರೆ ಈ ಯೋಜನೆಗಳು ಪೂರ್ಣ ಪ್ರಮಾಣದಲ್ಲಿ ಮಹಿಳೆಯರಿಗೆ ಸೌಲಭ್ಯಗಳನ್ನು ಒದಗಿಸಿ ಅವರನ್ನು ಸಬಲೀಕರಣಗೊಳಿಸುವಲ್ಲಿ ವಿಫಲವಾಗುತ್ತಿದೆ. ಏಕೆಂದರೆ ಈ ಯೋಜನೆಗಳಲ್ಲಿ ಸ್ತ್ರೀಪರ ಚಿಂತನೆ, ಕಾಳಜಿಗಳಣ್ನು ಒಳಗೊಂಡ ಭದ್ರ ಬುನಾದಿ ಇಲ್ಲ/ರೂಪುರೇಷೆಗಳಿಲ್ಲ. ಆದ್ದರಿಂದಲೇ ಸ್ತ್ರೀವಾದಿ ಸಿದ್ಧಾಂತಗಳನ್ನು ಒಳಗೊಂಡು ಸ್ತ್ರೀಪರ ಯೋಜನೆಗಳನ್ನು ಜಾರಿಗೊಳಿಸಬೇಕಾದ ಅವಶ್ಯಕತೆ ಇದೆ. ಹೀಗಾಗಿ ಇಲ್ಲಿ ಸ್ತ್ರೀವಾದಿ ಸಂಶೋಧನೆಯ ಅಗತ್ಯವಿದೆ(ಉಲ್ಲೇಖ: ಎಚ್.ಎಸ್.ಶ್ರೀಮತಿ, ಸ್ತ್ರೀವಾದಿ ಸಂಶೋಧನೆ-ವಿಧಿ ವಿಧಾನಗಳು).

ಮಹಿಳಾ ಅನುಭವಗಳು ಮಹಿಳೆಯರ ನೆನಪುಗಳಿಂದಲೇ ಮಾಸುವಂತೆ ಪ್ರಭಾವ ಬೀರಿರುವಂತ ಪಿತೃ ಪ್ರಧಾನ ಮೌಲ್ಯಗಳನ್ನು ಹೊತ್ತಂತ ಈ ಸಮಾಜದಡಿಯಲ್ಲಿ ಮಹಿಳಾ ವಿಷಯಗಳನ್ನು, ಅನುಭವಗಳನ್ನು ಕೇವಲ ಒಂದು ವಿಷಯವಾಗಿ ಪರಿಗಣಿಸಿವೆ. ಸಮಸ್ಯೆಯ ಆಳವನ್ನು ಅರಿಯಲು ಅದನ್ನು ಸಮರ್ಥ ಸಲಹೆಯ ಸಲಕರಣೆಗಳ ಮೂಲಕ ಪರಿಹರಿಸಲು ಸ್ತ್ರೀವಾದಿ ಸಂಶೋಧನೆಯ ಅವಶ್ಯಕತೆಯು ಕೇವಲ ತಾತ್ಕಾಲಿಕ ಸಮಸ್ಯೆಯ ಪರಿಹಾರವನ್ನು ಪರಿಗಣಿಸಿದೆ. ಶಾಶ್ವತ ಪರಿಹಾರೋಪಾಯದ ಕಾರಣಕ್ಕಾಗಿ ಸ್ತ್ರೀವಾದಿ ಸಂಶೋಧನೆಯ ಅವಶ್ಯಕತೆ ಇದೆ. ಪುರುಷ ಕೇಂದ್ರಿತ ಸಮುದಾಯದಲ್ಲಿ ಮಹಿಳೆಯರ ಸಮಸ್ಯೆಗಳನ್ನು ಚಾರಿತ್ರಿಕವಾಗಿ ಹೊರತೆಗೆದು ಸಮಸ್ಯೆಯ ಮೂಲದಿಂದ ಪರಿಹಾರೋಪಾಯಗಳನ್ನು ಕಂಡು ಹಿಡಿಯಲು ಸ್ತ್ರೀವಾದಿ ಸಂಶೋಧನೆಯು ಅವಶ್ಯಕವಾಗಿದೆ. ಮಹಿಳಾ ಸಮುದಾಯದ ದಾಸ್ಯದ/ಅಧೀನತೆಯ ಜೀವನ

ಶೈಲಿ, ಅದರ ಕಾರಣಗಳು, ಅದರಿಂದ ಉಂಟಾಗುತ್ತಿರುವ ಪರಿಣಾಮಕಾರಿಯಾದಂತಹ ಸಮಸ್ಯೆಗಳನ್ನು ತಡೆಹಿಡಿಯಲು ಸ್ತ್ರೀವಾದಿ ಸಂಶೋಧನೆಯು ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಸ್ತ್ರೀವಾದಿ ಸಂಶೋಧನೆ ಎನ್ನುವಂತದ್ದು ಪ್ರತಿ ಅಧ್ಯಯನಕ್ಕೂ ವಿಶಿಷ್ಟವಾದ, ಸಮರ್ಥವಾದಂತಹ ತಿರುವನ್ನು ತಂದು ಕೊಡುವಂತಹ ಒಂದು ವ್ಯವಸ್ಥಿತ ಜ್ಞಾನಮೀಮಾಂಸೆ ಹಾಗೂ ಸಿದ್ಧಾಂತವಾಗಿದೆ. ಈ ನಿಟ್ಟಿನಲ್ಲಿ ಸ್ತ್ರೀವಾದಿ ಸಂಬಂಧಿತ ಪ್ರಸ್ತುತ ಅಧ್ಯಯನವು ಅವಶ್ಯಕವಾಗಿದೆ.

ಸಂಶೋಧನೆಯ ವಿನ್ಯಾಸಗಳು

ಗುಣಾತ್ಮಕ ಮತ್ತು ಪರಿಮಾಣಾತ್ಮಕ ವಿನ್ಯಾಸ: ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಗುಣಾತ್ಮಕ ಮತ್ತು ವಿವರಾತ್ಮಕ ವಿನ್ಯಾಸಗಳನ್ನು ಬಳಸಲಾಗುತ್ತಿದೆ. ಈ ವಿಧಾನಗಳು ತಾತ್ವಿಕ ಸಂಗತಿಯು ಪಾರಂಪರಿಕ ಸಂಶೋಧನಾ ವಿಧಾನಗಳೊಂದಿಗೆ ಮುಖಾಮುಖಿಯಾಗುತ್ತವೆ. ಮಾಹಿತಿಗಳಿರಲೀ, ದಾಖಲೆಗಳಿರಳಿ, ಸ್ತ್ರೀಕಥನಗಳ ಪ್ರಕರಣಗಳಿರಲಿ ಅವು ಸಂಶೋಧಕರಿಗೆ ಮೊದಲಿಗೆ ದಕ್ಕುವುದು ಪರಿಮಾಣಗಳಲ್ಲಿಯೇ, ಅಂದರೆ ಅಂಕಸಂಖ್ಯೆಗಳಲ್ಲಿಯೇ ಈ ಅಂಕಿ-ಸಂಖ್ಯೆಗಳನ್ನು ಸೂಕ್ಷ್ಮ ರೀತಿಯಲ್ಲಿ ತುಲನೆ ಮಾಡಿ ಮಹಿಳಾ ಬದುಕಿನ ಸಮಸ್ಯೆಗಳ ಬಗ್ಗೆ ಮಾಹಿತಿಯನ್ನು ಈ ಮೂಲಕ ಪಡೆಯಲಾಗುತ್ತದೆ ಮತ್ತು ಅವುಗಳನ್ನು ಗುಣಾತ್ಮಕವಾಗಿ ಪರೀಕ್ಷಿಸಲಾಗುತ್ತದೆ. ಪಾರಂಪರಿಕ ಚಿಂತನೆಯಂತೆ ಪರಿಮಾಣದ ಆಧಾರವು ವಸ್ತುನಿಷ್ಠವಾಗಿರುತ್ತದೆ. ಗುಣಾತ್ಮಕ ಆಧಾರವು ವ್ಯಕ್ತಿನಿಷ್ಠವಾಗಿರುತ್ತದೆ. ಸ್ತ್ರೀವಾದಿ ಸಂಶೋಧನೆಯು ವ್ಯಕ್ತಿನಿಷ್ಠತೆಗೆ ಹೆಚ್ಚು ಪ್ರಾಮುಖ್ಯತೆ ನೀಡಿ ಅಂಕಿ-ಅಂಶಗಳ ಪರಿಮಾಣಾತ್ಮಕ ಆಧಾರಗಳನ್ನು ವಿಶ್ಲೇಷಿಸಿ ಸಂಶೋಧನೆಗೆ ಬಳಸಿಕೊಳ್ಳುತ್ತದೆ. ಆದ್ದರಿಂದ ಈ ಅಧ್ಯಯನಕ್ಕೆ ಗುಣಾತ್ಮಕ ಮತ್ತು ಪರಿಮಾಣಾತ್ಮಕ ವಿನ್ಯಾಸವನ್ನು ಬಳಸಿಕೊಳ್ಳಲಾಗಿದೆ. ಈ ಮೂಲಕ ಸರ್ಕಾರಿ ಅಭಿವೃದ್ಧಿ ಯೋಜನೆಗಳಲ್ಲಿ ಮಹಿಳಾ ಬದುಕಿನ ಹಿನ್ನಲೆಗೆ ಕಾರಣಗಳನ್ನೇ ಹುಡುಕಲು ಸಹಾಯಕಾರಿಯಾಗುತ್ತದೆ.

ಮೌಲ್ಯಮಾಪನಾತ್ಮಕ ವಿನ್ಯಾಸ: ಕ್ರಿಯಾತ್ಮಕ ಹಾಗೂ ಸಲಹಾತ್ಮಕ ಉದ್ದೇಶಗಳಿಗಾಗಿ ಕಾರ್ಯ ಕ್ರಮಗಳ ಮೌಲ್ಯಮಾಪನ ಮಾಡುವ ವಿಧಾನವನ್ನು ಮೌಲ್ಯಮಾಪನಾತ್ಮಕ ವಿನ್ಯಾಸ ಎನ್ನುತ್ತಾರೆ ಪ್ರಭುತ್ವಗಳು ಅಥವಾ ವಿಶಾಲ ವ್ಯಾಪ್ತಿಯ ಸಂಘಸಂಸ್ಥೆಗಳು ಜನಸಮುದಾಯವನ್ನು ಗುರಿಯಾಗಿಸಿಕೊಂಡು ಹಲವು ಬಗೆಯ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ರೂಪಿಸುತ್ತಿರುತ್ತವೆ. ಈ ರೂಪಣೆಯ ಹಿಂದೆ ಹಲವು ವಲಯಗಳ ಚಿಂತಕರು, ಆಡಳಿತಗಾರರು ಇರಬಹುದು. ಇವು ಹಲವು ಬಗೆಯ ಸಾಮಾಜಿಕ ಚಿಂತನೆಗಳನ್ನು ಕಾರ್ಯಗತಗೊಳಿಸುವ ಉದ್ದೇಶವಾಗಿರಬಹುದು. ಸರ್ಕಾರವು ಜಾರಿಗೊಳಿಸಿದ ಮಹಿಳಾ ಅಭಿವೃದ್ಧಿ ಯೋಜನೆಗಳ ಮೌಲ್ಯಮಾಪನವನ್ನು ಮಾಡುವ ಸಲುವಾಗಿ ಈ ವಿನ್ಯಾಸವನ್ನು ಬಳಸಲಾಗಿದೆ. ನಿರೀಕ್ಷೆಗಳನ್ನು ಪೂರೈಸುತ್ತಿದೆ? ಮಹಿಳಾ ಸಮಸ್ಯೆಗಳಿಗೆ

ಪರಿಹಾರಗಳನ್ನು ಸೂಚಿಸುತ್ತಿದೆಯಾ? ಈ ಯೋಜನೆಗಳು ಯಶಸ್ವಿಯಾಗುತ್ತಿದೆಯಾ? ಎಂಬೆಲ್ಲ ಪ್ರಶ್ನೆಗಳಿಗೆ ಇಲ್ಲಿ ಉತ್ತರಗಳನ್ನು ಹುಡುಕಲಾಗುತ್ತದೆ. ಜೊತೆಗೆ ಈ ಯೋಜನೆಗಳಲ್ಲಿರುವ ಸಮಸ್ಯೆಗಳೇನು? ಇದಕ್ಕೆ ಪರಿಹಾರೋಪಾಯಗಳೇನು? ಬೇಕಾದಂತಹ ಅಂಶಗಳನ್ನು ಸೇರಿಸಿ ಪುನಃ ಯೋಜನೆಗಳನ್ನು ಹೊಸರೂಪು ರೇಷೆಯೊಂದಿಗೆ ಜಾರಿಗೆ ತಂದು ಮಹಿಳಾ ಅಭಿವೃದ್ಧಿಯಾಗುವಂತೆ ಮಾಡಲಾಗುತ್ತದೆ.

ಸ್ತ್ರೀವಾದಿ ಕ್ಷೇತ್ರಕಾರ್ಯ : ಪ್ರಸ್ತುತ ಸಂಶೋಧನೆಯಲ್ಲಿ ಸ್ತ್ರೀವಾದಿ ಕ್ಷೇತ್ರಕಾರ್ಯಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಸಾಂಪ್ರದಾಯಿಕ ಸಂಶೋಧನಾ ವಿಧಾನವನ್ನು ಪರಿಗಣಿಸಿದೆ. ಸಂಶೋಧನಾ ವಿನ್ಯಾಸ ಮಾದರಿಗಳ ನೆಲೆಯಲ್ಲಿ ಪುರುಷ ಕೇಂದ್ರಿತ ಮಾದಿರಗಳನ್ನು ಅಲ್ಲಗೆಳೆದು ಸ್ತ್ರೀವಾದಿ ಕ್ಷೇತ್ರಕಾರ್ಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಸಂಶೋಧನೆಯಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಾಮಾನ್ಯ ಜನರೊಂದಿಗೆ, ಉದ್ದೇಶಿತ ಗುಂಪು, ತಜ್ಞರು ಅಥವಾ ಇತರೆ ಸಂಬಂಧಪಟ್ಟ ವ್ಯಕ್ತಿಗಳಿಂದ ಪಡೆಯುವ ಮಾಹಿತಿ ಹಾಗೂ ಸಂಶೋಧನೆಯ ಗುರಿಗಳನ್ನು ಒಳಗೊಂಡು ನೈಜ ಮಾಹಿತಿಯನ್ನು ಪಡೆಯಲು ಸ್ತ್ರೀವಾದಿ ಕ್ಷೇತ್ರಕಾರ್ಯ ಅತ್ಯವಶ್ಯಕ. ಸಮಾಜದಲ್ಲಿ ಮಹಿಳಾ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಅರಿಯಲು, ಸಂಶೋಧಕರು, ಕ್ಷೇತ್ರದಲ್ಲಿನ ಸ್ತ್ರೀವಾದಿ ದೃಷ್ಟಿಕೋನದ ಅನುಸಂಧಾನ ಅತ್ಯವಶ್ಯಕವಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಮಹಿಳಾ ವಿಷಯಗಳನ್ನು ಬಿಡಿಸಲು ಅಲ್ಲಿನ ಗೊಂದಲಗಳನ್ನು, ಸಮಸ್ಯೆಗಳನ್ನು, ಶೋಧಿಸಲು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಮಹಿಳಾ ಬದುಕು ಸಾಕಾರಾತ್ಮಕವಾಗಿ ನಿರ್ಮಾಣಗೊಳ್ಳಲು ಸ್ತ್ರೀವಾದಿ ಕ್ಷೇತ್ರಕಾರ್ಯ ಅತ್ಯವಶ್ಯಕ.

ಸಂದರ್ಶನ : ಸಂಶೋಧಕರು ತಮ್ಮ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಆಕರ ಮಾಹಿತಿಗಳನ್ನು ಕಲೆಹಾಕಲು ತೊಡಗುವ ಮೊದಲ ಹಂತವೆಂಧರೆ ಸಂಬಂಧಿಸಿದ ಜನರೊಡನೆ ಮಾತುಕತೆಗೆ ತೊಡಗುವುದು. ಇಲ್ಲಿ ನಾವು ರೂಪಿಸಿಕೊಂಡ ಆಧಾರ ಕಲ್ಪನೆಯನ್ನು ಸಮರ್ಥಿಸುವ ಮಾಹಿತಿಗಳು ದೊರೆಯುವ ಸಾಧ್ಯತೆಗಳನ್ನು ಇಂಥ ಸಂದರ್ಶನಗಳಲ್ಲಿ ನಿರೀಕ್ಷಿಸುತ್ತೇವೆ. ಸರ್ಕಾರವು ಮಹಿಳೆಯರ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಈ ಯೋಜನೆಗಳ ಪ್ರತಿಫಲವನ್ನು ಮಹಿಳೆಯರು ಅನುಭವಿಸುತ್ತಿದ್ದಾರೆಯೇ ಎಂದು ಮಹಿಳೆಯರನ್ನು ಸಂದರ್ಶನದ ಮೂಲಕ ಅವರ ಅನಿಸಿಕೆ, ಅಭಿಪ್ರಾಯ ಮತ್ತು ಅನುಭವಗಳ ಬಗ್ಗೆ ಕೇಳಿ ಮಾಹಿತಿಯನ್ನು ಪಡೆಯಲಾಯಿತು. ಸಂದರ್ಶನದ ಮೂಲಕ ನೇರವಾಗಿ ಯೋಜನಾ ಫಲಾನುಭವಿಗಳನ್ನು ಸಂದರ್ಶಿಸಿ ಅವರಿಂದ ಪ್ರಸ್ತುತ ಅಧ್ಯಯನಕ್ಕೆ ನೆರವಾಗುವ ಮಾಹಿತಿಗಳನ್ನು ಪಡೆಯಲಾಯಿತು.

ಪ್ರಶ್ನಾವಳಿ : ವ್ಯಕ್ತಿ ಅಥವಾ ಸಮುದಾಯ ಸಂಬಂಧಿತ ಆಕರ ಮಾಹಿತಿಗಳನ್ನು ಪಡೆಯಲು ಆ ವ್ಯಕ್ತಿಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಸಂಪರ್ಕಿಸುವ ಒಂದು ವಿಧಾನ. ಪ್ರಸ್ತುತ

ಅಧ್ಯಯನಕ್ಕೆ ಪ್ರಶ್ನಾವಳಿ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಇಲ್ಲಿ ಸಂಬಂಧಪಟ್ಟ ವ್ಯಕ್ತಿಗಳಿಗೆ ಸರ್ಕಾರಿ ಮಹಿಳಾ ಯೋಜನೆಗಳಿಗೆ ಸಂಬಂಧಿಸಿದಂತೆ ಹಲವು ಪ್ರಶ್ನೆಗಳನ್ನು ಪ್ರಶ್ನಾವಳಿಗಳ ಸಹಾಯದಿಂದ ಕೇಳಿ ಮಾಹಿತಿಯನ್ನು ಪಡೆಯಲಾಯಿತು. ನಂತರ ಅವರು ನೀಡಿದ ಉತ್ತರವು ಈ ಅಧ್ಯಯನಕ್ಕೆ ಪೂರಕವಾಗಿದೆಯೇ ಎಂದು ವಿಶ್ಲೇಷಿಸಲಾಯಿತು. ಸಂದರ್ಭಕ್ಕೆ ತಕ್ಕಂತೆ ರಚಿತ-ಅರಚಿತ ಪ್ರಶ್ನಾವಳಿಯ ವಿಧಾನವನ್ನು ಬಳಸಲಾಗಿದೆ. ಈ ಮೂಲಕ ಧನಾತ್ಮಕವಾಗಿ ಸಮುದಾಯದ ಮೂಲಕ ನೈಜ ಮಾಹಿತಿಯನ್ನು ಪಡೆಯಲು ಪ್ರಯತ್ನಿಸಿದೆ. ಈ ಮೂಲಕ ಅಧ್ಯಯನಕ್ಕೆ ಬೇಕಾದ ಸತ್ಯ ಸಂಗತಿಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂಬುದು ಇಲ್ಲಿನ ಮುಖ್ಯ ಆಶಯವಾಗಿದೆ.

ಮೌಖಿಕ ಸಾಕ್ಷ್ಯ : ಜನರ/ಮಹಿಳೆಯರ ಅನುಭವಗಳನ್ನು ಅವರ ಬಾಯಿಂದಲೇ ಕೇಳಿಸಿಕೊಂಡು ಅದನ್ನು ತಮ್ಮ ತಾತ್ವಿಕ ಚಿಂತನೆಗಳನ್ನು ಕಟ್ಟುವ ಸಾಕ್ಷ್ಯಗಳಾಗಿ ಬಳಸುವ ಈ ವಿಧಾನವು ಸ್ತ್ರೀವಾದಿ ಸಂಶೋಧನೆಯಲ್ಲಿ ಮಹತ್ವದ ಮಾದರಿಯಾಗಿದೆ. ಸರ್ಕಾರಿ ಮಹಿಳಾ ಪರ ಅಭಿವೃದ್ಧಿ ಯೋಜನೆಗಳ ಬಗ್ಗೆ, ಅದರ ಲಾಭ-ನಷ್ಟಗಳ ಬಗ್ಗೆ ನೇರವಾಗಿ ಮಹಿಳೆಯರನ್ನು ಕೇಳಿ ಅವರ ಅನುಭವಗಳನ್ನು ದಾಖಲಿಸಿಕೊಳ್ಳಲಾಯಿತು. ಮಹಿಳಾ ಅಭಿವೃದ್ಧಿ ಯೋಜನೆಗಳ ಬಗ್ಗೆ ಮಾಹಿತಿ, ಅದರ ಕಾರ್ಯನಿರ್ವಹಣೆ, ಇದರಿಂದ ಸ್ತ್ರೀಯರು ಪಡೆದಿರುವ ಲಾಭಗಳು, ನಷ್ಟಗಳು, ಯೋಜನೆಯಲ್ಲಿರುವ ತೊಡಕುಗಳು, ಅಧಿಕಾರಿಗಳು ಮತ್ತು ರಾಜಕಾರಣಿಗಳ ನಿರ್ಲಕ್ಷ್ಯ, ಪುರುಷ ಪ್ರಧಾನತೆ, ದಬ್ಬಾಳಿಕೆಗಳ ಬಗ್ಗೆ ತಮ್ಮಗಾದ ಅನುಭವದ ಬಗ್ಗೆ ಮಾಹಿತಿಯರನ್ನು ಪ್ರಶ್ನಿಸಿ ಅವರ ಅನುಭವ ಮತ್ತು ಅನಿಸಿಕೆಗಳನ್ನು ಪಡೆಯಲಾಯಿತು. ಸರ್ಕಾರಿ ಮಹಿಳಾ ಯೋಜನೆಗಳ ಬಗ್ಗೆ ಮಹಿಳೆಯರಿಗಾದ ಅನುಭವಗಳನ್ನು ದಾಖಲಿಸಿಕೊಂಡು ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಚರ್ಚಿಸಲಾಗಿದೆ.

ಪ್ರಕರಣ ಅಧ್ಯಯನಗಳು : ಸಮಾಜದಲ್ಲಿ ನಿಜ ಜೀವನದಲ್ಲಿ ನಡೆದ ಘಟನೆಗಳನ್ನು ಕ್ರೂಢೀಕರಿಸಿ ಅದರ ಬಗ್ಗೆ ವಿಶ್ಲೇಷಣೆ ಮಾಡುವುದನ್ನು ಪ್ರಕರಣ ಅಧ್ಯಯನಗಳು ಎನ್ನುತ್ತೇವೆ. ಪ್ರಸ್ತುತ ಅಧ್ಯಯನಕ್ಕಾಗಿ 'ಸರ್ಕಾರಿ ಮಹಿಳಾ ಯೋಜನೆ'ಗಳಿಂದ ಲಾಭ ಪಡೆದ ಮತ್ತು ಅದರಿಂದ ಯಾವುದೇ ಲಾಭ ಪಡೆಯದೇ ಇರುವ ಮಹಿಳೆಯರ ಪ್ರಕರಣಗಳನ್ನು ಇಲ್ಲಿ ಶೇಖರಿಸಲಾಗಿದೆ. ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳೂ ಮಹಿಳೆಯರಿಗಾಗಿ ಜಾರಿಗೊಳಿಸಿದ ಹಲವಾರು ಯೋಜನೆಗಳನ್ನು ಮಹಿಳೆಯರು ಸರಿಯಾಗಿ ಪಡೆಯಲಾಗುತ್ತಿಲ್ಲ. ಏಕೆಂದರೆ ಈ ಯೋಜನೆಗಳಲ್ಲಿ ಪಿತೃ ಪ್ರಧಾನ ಮೌಲ್ಯಗಳನ್ನೊಳಗೊಂಡ ಹಲವಾರು ಸಮಸ್ಯೆಗಳಿಗೆ ಈ ಎಲ್ಲ ಪ್ರಕರಣಗಳನ್ನು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡು ಅಧ್ಯಯನ ಮಾಡಲಾಗಿದೆ.

ಸಲಹಾತ್ಮಕ ಸಂಶೋಧನಾ

ಈ ಅಧ್ಯಯನದಲ್ಲಿ ಸಂಶೋಧನೆಯ ಅನುಕೂಲಕ್ಕಾಗಿ ಸಲಹಾತ್ಮಕ ಸಂಶೋಧನಾ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಸಲಹಾತ್ಮಕ ಸಂಶೋಧನಾ ವಿಧಾನ ಎನ್ನುವಂತದ್ದು

ಸಮರ್ಥನೆಯ ತಳಹದಿಯಲ್ಲಿ ಸಾಗುತ್ತದೆ. ಲಿಂಗ ಸಮವೇದನೆಯನ್ನು ಹುಟ್ಟು ಹಾಕುತ್ತದೆ. ವಿವರಣಾತ್ಮಕ ನೆಲೆಯಲ್ಲಿ ಇದು ಸಾಗುವುದರಿಂದ ಸಮಸ್ಯೆಯ ಮೂಲವನ್ನು ಗುರುತಿಸಬಹುದಾಗಿದೆ. ಇದರಿಂದ ಸಮಸ್ಯೆಗೆ ತಕ್ಕ ಪರಿಹಾರಗಳನ್ನು ಕಂಡುಹಿಡಿಯಬಹುದಾಗಿದೆ. ಈ ಮೂಲಕ ಸಮಾಜದಲ್ಲಿ ಪೂರಕ ವಾತಾವರಣವನ್ನು ಮತ್ತು ಪ್ರೋತ್ಸಾಹದಾಯಕ ವಾತಾವರಣವನ್ನು ಹುಟ್ಟುಹಾಕಲಾಗುತ್ತದೆ. ಇದು ಸಾಮಾಜಿಕ ಸಂಸ್ಥೆಗಳಲ್ಲಿ, ರಾಜಕೀಯ ಕಾರ್ಯವಿಧಾನದಲ್ಲಿ, ನಿರ್ಧಾರಗಳಲ್ಲಿ ಸಾಮಾಜಿಕ ಬದಲಾವಣೆಯನ್ನು ಹುಟ್ಟುಹಾಕುವಂತಹ ಬದಲಾವಣೆಗಲನ್ನು ತರುವ ಹೋರಾಟವಾಗಿದೆ. ಅಂತಹ ಹೋರಾಟದಿಂದ ಸಮಾಜದಲ್ಲಿ ಸಮಾನತೆಯನ್ನು ಹುಟ್ಟುಹಾಕುವ ವಾತಾವರಣವನ್ನು ಸನ್ನದ್ಧಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಾ ಕಾನೂನು ಮತ್ತು ಅಭಿವೃದ್ಧಿ ಯೋಜನೆಗಳಲ್ಲಿ ಲಿಂಗ ಸಮಾನತೆಯ ದೃಷ್ಟಿಕೋನವನ್ನು ಹುಟ್ಟು ಹಾಕುವುದಾಗಿದೆ. ಈ ನಿಟ್ಟಿನಲ್ಲಿ ಸಲಹಾತ್ಮಕ ಸಂಶೋಧನಾ ವಿಧಾನದಿಂದ ಮಹಿಳಾ ಅಭಿವೃದ್ಧಿಯಲ್ಲಿನ ಸರ್ಕಾರಿ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಬಳಸಲಾಗುತ್ತಿರುವ ಸೈದ್ಧಾಂತಿಕ ಚೌಕಟ್ಟಿನಲ್ಲಿನ ದೃಷ್ಟಿಕೋನ, ತಾತ್ವಿಕ ಚೌಕಟ್ಟು, ಅಭಿವೃದ್ಧಿ ಕಾರ್ಯಕ್ರಮಗಳನ್ನು ಮೌಲ್ಯಮಾಪನ ಮಾಡುವಲ್ಲಿನ ನ್ಯೂನತೆಗಳೇನು? ಇವುಗಳೆಲ್ಲದರಿಂದ ಮಹಿಳಾ ಸಮುದಾಯಕ್ಕೆ ಯಾವ ರೀತಿಯ ಸಮಸ್ಯೆಗಳು ಎದುರಾಗುತ್ತವೆ? ಇದಕ್ಕೆ ಪರಿಹಾರಗಳೇನು ಎಂಬುದನ್ನು ಸ್ಪಷ್ಟವಾಗಿ ತಿಳಿಯಬಹುದಾಗಿದೆ. ಇದರಿಂದ ಸ್ಪಷ್ಟವಾದ ಬದಲಾವಣೆಯನ್ನು ತರಬಹುದಾಗಿದೆ.

೧.೯ ಅಧ್ಯಯನಗಳ ವಿಭಾಗೀಕರಣ

ಅಧ್ಯಾಯ ೨ ಅಭಿವೃದ್ಧಿ: ತಾತ್ವಿಕ ಅಧ್ಯಯನ

ಪ್ರತಿ ಸಂಶೋಧನೆಯಲ್ಲಿಯೂ ಕೂಡ ಅಧ್ಯಯನದ ವಸ್ತುವಿಷಯವಾಗಿ ತಾತ್ವಿಕ ಅಧ್ಯಯನದ ಅವಶ್ಯಕತೆ ಇದೆ. ಈ ಸಂಗತಿಯನ್ನು ಗಮನದಲ್ಲಿರಿಸಿಕೊಂಡು ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಅಭಿವೃದ್ಧಿಯ ಪರಿಕಲ್ಪನೆ ಮತ್ತು ಅಭಿವೃದ್ಧಿ ಸಿದ್ಧಾಂತಗಳ ತಾತ್ವಿಕ ಅಧ್ಯಯನವನ್ನು ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಅಭಿವೃದ್ದಿ ಪರಿಕಲ್ಪನೆಯಲ್ಲಿ ಸಿದ್ಧಾಂತಗಳಲ್ಲಿ ಚಾರಿತ್ರಿಕವಾಗಿ ಇಲ್ಲಿಯವರೆಗೂ ಮಹಿಳೆ ಯಾವ ರೀತಿ ಅಂಚಿಗೆ ದೂಡಲ್ಪಟ್ಟಿದ್ದಾಳೆ? ಈ ಸಂಗತಿಗಳಿಂದ ಇಂದಿಗೂ ಮಹಿಳಾ ಸಂಬಂಧಿತ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಮಹಿಳಾ ಅಸಮಾನತೆಯ ಎಳೆಗಳು, ಲೈಂಗಿಕತಾ ಸಿದ್ದಾಂತಗಳನ್ನು ರಾಚನಿಕ ನೆಲೆಯಲ್ಲಿ ಯಾವ ರೀತಿ ಯೋಜನೆಗಳಿಗೆ ಋಣಾತ್ಮಕ ಪರಿಣಾಮಗಳು ಬೀರುತ್ತಿವೆ. ಮಹಿಳಾ ಚಳುವಳಿಗಳು ಅಭಿವೃದ್ಧಿ ಪಥದ ಬಗ್ಗೆ ಏನು ಹೇಳುತ್ತದೆ? ಅಂತಿಮವಾಗಿ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಯಾವೆಲ್ಲಾ ಸಂಗತಿಗಳನ್ನು, ಅಂಶಗಳನ್ನು ನಿರ್ಲಕ್ಷಿಸಲಾಗಿದೆ ಎಂಬುದನ್ನು ಚರ್ಚೆ ಮಾಡಲಾಗುತ್ತದೆ. ಈ ಮೂಲಕ ಸರ್ಕಾರಿ ಅಭಿವೃದ್ಧಿ ಯೋಜನಾ ವಿಧಾನದಲ್ಲಿ, ಕಾರ್ಯವಿಧಾನದಲ್ಲಿ, ಮೌಲ್ಯಮಾಪನದಲ್ಲಿ ಎಂತಹ ತೊಂದರೆಗಳು ಎದುರಾಗುತ್ತಿದೆ? ಎಂಬುದನ್ನು ಚರ್ಚಿಸಲಾಗುತ್ತಿದೆ.

ಅಧ್ಯಾಯ ೩ ಮಹಿಳೆ ಮತ್ತು ಯೋಜನೆಗಳು : ವಿಶ್ಲೇಷಣಾತ್ಮಕ ಅಧ್ಯಯನ

ಈ ಅಧ್ಯಯನದಲ್ಲಿ ಪ್ರಮುಖವಾಗಿ ಸರ್ಕಾರಿ ಮಹಿಳಾ ಯೋಜನೆಗಳನ್ನು ಗುರುತಿಸಿಕೊಂಡಿರುವುದರಿಂದ ಇಲ್ಲಿ ಸ್ತ್ರೀವಾದಿ ದೃಷ್ಟಿಕೋನದಿಂದ ಮಹಿಳಾ ಯೋಜನೆಗಳನ್ನು ವಿಶ್ಲೇಷಿಸಲಾಗುತ್ತಿದೆ. ಈ ಹಿಂದೆಯೇ ಹೇಳಿದಂತೆ ಸರ್ಕಾರಿ ಮಹಿಳಾ ಯೋಜನೆಗಳು ದೊಡ್ಡ ಆಗರವೇ ಸರಿ. ಅವುಗಳೆಲ್ಲವನ್ನು ಇಲ್ಲಿ ಅಧ್ಯಯನ ಮಾಡುವುದು ಕಷ್ಟವೇ ಸರಿ. ಹಾಗಾಗಿ ಪಂಚವಾರ್ಷಿಕ ಯೋಜನೆಗಳನ್ನು ಪ್ರಮುಖವಾಗಿ ಗುರುತಿಸಿಕೊಳ್ಳಲಾಗಿದೆ. ಏಕೆಂದರೆ ಬಹುವಾಗಿ ಸರ್ಕಾರಿ ಮಹಿಳಾ ಯೋಜನೆಗಳು ಪಂಚವಾರ್ಷಿಕ ಯೋಜನೆಗಳ ಮೂಲಕವೇ ಜಾರಿಗೊಳ್ಳುತ್ತಿವೆ. ಹೀಗಾಗಿ ಸರ್ಕಾರಿ ಯೋಜನೆಗಳಲ್ಲಿ ಪಂಚವಾರ್ಷಿಕ ಯೋಜನೆಗಳೂ ಮುಖ್ಯ ಪಾತ್ರವಹಿಸಿವೆ. ಆದ್ದರಿಂದ ಪಂಚವಾರ್ಷಿಕ ಯೋಜನೆಗಳನ್ನು ಅಲ್ಲಿರುವ ಮಹಿಳಾ ಸಂಬಂಧಿತ ಕಾರ್ಯಕ್ರಮಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ವಿಶ್ಲೇಷಿಸಿ ಚರ್ಚೆ ಮಾಡಲಾಗುತ್ತದೆ. ಮೊದಲ ಅಧ್ಯಾಯದಲ್ಲಿ ಬೆಳಕಿಗೆ ಬಂದಂತ ಸೈದ್ಧಾಂತಿಕ

ತೊಂದರೆಗಳಿಂದ ಕಾರ್ಯವಿಧಾನದಲ್ಲಿ ತೊಂದರೆಗಳು ಹೇಗೆ ಬರುತ್ತಿವೆ ಎಂಬುದನ್ನು ಗಮನಿಸಿ ವಿಶ್ಲೇಷಿಸಲಾಗುತ್ತಿದೆ.

ಅಧ್ಯಾಯ ೪ ಕ್ಷೇತ್ರಕಾರ್ಯ ವಿಶ್ಲೇಷಣಾ ವರದಿ

ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು ಹೇರಳವಾಗಿದ್ದು, ಸೈದ್ಧಾಂತಿಕತೆಗೂ, ಕಾರ್ಯತಂತ್ರ ರೂಪುರೇಷೆಗಳಿಗೂ, ಕಾರ್ಯವಿಧಾನಕ್ಕೂ ತುಂಬಾ ಅಂತರಗಳಿವೆ. ಹೀಗಾಗಿ ಅವುಗಳ ಮೂಲಕ ಮಹಿಳೆಯರಿಗೆ ಸರ್ಕಾರಿ ಯೋಜನೆಗಳು ಇನ್ನೂ ತಲುಪಲಾಗುತ್ತಿಲ್ಲ. ತಲೂಪಿದರೂ ನಿರೀಕ್ಷಿತ ಮಟ್ಟದ ಫಲಿತಾಂಶವನ್ನು ಸಾಧಿಸಲಾಗುತ್ತಿಲ್ಲ. ಇದಕ್ಕೆ ಪೂರಕವಾಗಿ ಆರೋಗ್ಯ ಸಂಬಂಧಿತ ಯೋಜನೆಗಳನ್ನು, ಯೋಜನೆಗಳ ಗುರಿ-ಉದ್ದೇಶಗಳು, ಯಾವ ನೆಲೆಯಲ್ಲಿ, ತಂತ್ರಗಳ ಮೂಲಕ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಅಲ್ಲಿ ಫಲಾನುಭವಿ ಗಳಿಗೂ, ಯೋಜನೆಗಳಿಗೂ ಮಧ್ಯೆ ಇರುವ ಭಿನ್ನತೆಗಳೇನು? ಎಂಬುದನ್ನು ಕ್ಷೇತ್ರ ಕಾರ್ಯ ವರದಿಯ ಮೂಲಕ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ೫ ಉಪಸಂಹಾರ

ಈ ಸಂಶೋಧನಾ ಅಧ್ಯಯನದಲ್ಲಿ ಬರುವ ಮೂರು ಅಧ್ಯಾಯಗಳ ಅಂಶಗಳನ್ನು ಗುರ್ತಿಸಿ ಅಭಿವೃದ್ಧಿ ವಿಧಾನದಲ್ಲಿನ ತೊಂದರೆಗಳೇನು? ಪರಿಹಾರೋಪಾಯಗಳೇನು? ಯೋಜನಾ ಕಾರ್ಯತಂತ್ರಗಳಲ್ಲಿನ ಸಮಸ್ಯೆಗಳೇನು? ಇಲ್ಲಿನ ಕಾರ್ಯ ವಿಧಾನಗಳಾವುವು? ಮೌಲ್ಯಮಾಪನ

ದಲ್ಲಿರುವ ಸಮಸ್ಯೆಗಳೇನು? ಇದಕ್ಕೆ ಸೂಕ್ತ ಪರಿಹಾರಗಳೇನು? ಎಂಬುದನ್ನು ವಿವರವಾಗಿ ಅಧ್ಯಯನ ಮಾಡಲಾಗಿದೆ. ಇದರ ಆಧಾರದ ಮೇಲೆ ಉಪಸಂಹಾರವನ್ನು ಬರೆಯಲಾಗಿದೆ. ಈ ಅಂಶಗಳ ಹಾದಿಯಲ್ಲಿ ಪ್ರಸ್ತುತ ಸಂಶೋಧನಾ ಅಧ್ಯಯನವು ಸಾಗಿದೆ.

ಈ ನಿಟ್ಟಿನಲ್ಲಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕುರಿತು ಸರ್ಕಾರಿ ಕಾರ್ಯಕ್ರಮಗಳ ಸ್ತ್ರೀವಾದಿ ಅಧ್ಯಯನವು ಸಾಗುತ್ತದೆ.

ಅಡಿಟಿಪ್ಪಣಿಗಳು

೧. ಹೇಮಲತಾ ಹೆಚ್.ಎಂ., **ಮಹಿಳಾ ಅಧ್ಯಯನ-೨**, ೨೦೦೭, ಪು.೯೪

೨. ಸಮಾನತೆಯೆಡೆಗೆ ವರದಿ-೧೯೭೪, ಭಾರತ ಸರ್ಕಾರ

೩. ಚಂದ್ರಶೇಖರ ಟಿ.ಆರ್., **ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ**, ೨೦೦೧, ಪು.೧೭೪

೪. ರೆಡ್ಡಿ ಜಿ.ಬಿ., **ವುಮನ್ ಆಂಡ್ ದ ಲಾ**, ೨೦೦೭, ಪು.೧೬-೧೮

೫. Source:http/www.Swayam.info, P.4

೬. Source:http/www.women status.co.in

೭. Ibid

೮. Ibid

೯. Ibid

೧೦. Ibid

೧೧. Ibid

೧೨. ರೆಡ್ಡಿ ಜಿ.ಬಿ., **ವುಮನ್ ಆಂಡ್ ದ ಲಾ**, ೨೦೦೭, ಪು.೧೧೬-೧೨೪

೧೩. Source:http/www.statisticas on women in india 2010, P.18

ಅಧ್ಯಾಯ ಎರಡು

ಅಭಿವೃದ್ಧಿ ಒಂದು ತಾತ್ವಿಕ ಅಧ್ಯಯನ

ಅಧ್ಯಾಯ ಎರಡು

ಅಭಿವೃದ್ಧಿ ಪರಿಕಲ್ಪನೆ: ಸ್ತ್ರೀವಾದಿ ತಾತ್ವಿಕ ಅಧ್ಯಯನ

"[Development] is the progressive realisation of the capabilities, abilities and talents of each individual for his/her own satisfaction and enhancement of the social good..."

HE President Cheddi Jagan

೨.೧. ಅಭಿವೃದ್ಧಿಯ ಪರಿಕಲ್ಪನೆ

'ಅಭಿವೃದ್ಧಿ' ಎಂದರೆ ಸಾಮಾನ್ಯ ಅರ್ಥದಲ್ಲಿ ಪ್ರಗತಿ ಪಥದತ್ತ ಮುನ್ನಡೆಯುವುದು ಎಂದರ್ಥ. ಅಭಿವೃದ್ಧಿ ಎನ್ನುವುದು ಕೆಳಮಟ್ಟದಿಂದ ಮೇಲ್ಮಟ್ಟಕ್ಕೆ ಬದಲಾವಣೆಯಾಗುವಂಥ ಒಂದು ಕ್ರಿಯೆ. ಇಲ್ಲಿ ರಾಷ್ಟ್ರೀಯ ಆದಾಯ, ಕೃಷಿ, ಸಾರಿಗೆ, ವಾಣಿಜ್ಯ ಇತ್ಯಾದಿ ಕ್ಷೇತ್ರಗಳಲ್ಲಿ ಕ್ರಿಯಾತ್ಮಕವಾದ ಬದಲಾವಣೆಗಳು ಉಂಟಾಗಬೇಕಿದೆ. ಸಾಮಾನ್ಯವಾಗಿ ಬೆಳವಣಿಗೆ ಮತ್ತು ಅಭಿವೃದ್ಧಿ ಇವೆರಡೂ ಪದಗಳನ್ನು ಪರ್ಯಾಯವಾಗಿ ಬಳಸಲಾಗುತ್ತದೆ. ಇವೆರಡೂ ಪರಸ್ಪರ ಪೂರಕಗಳಾಗಿದ್ದು, ಅರ್ಥವ್ಯವಸ್ಥೆಯ ಬದಲಾಗುವ ಪರಿಸ್ಥಿತಿಗೆ ಹೊಂದಿಕೊಳ್ಳಲು ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೆ ಇವು ಪರ್ಯಾಯವಾಗಿ ಒಂದರೊಡನೊಂದು ಕೂಡಿಕೊಂಡು ಹೋಗುತ್ತಿರುತ್ತದೆ. ಬೆಳವಣಿಗೆ ಎಂದರೆ ಸದಾ ಕಾಲವೂ ಚಲಿಸುತ್ತಿರುವ ಪ್ರಕ್ರಿಯೆ. ಅಭಿವೃದ್ಧಿಗೆ ವಿಶಾಲವಾದ ಅರ್ಥವಿದ್ದು ಸಾಮಾಜಿಕ ಅಭಿವೃದ್ಧಿಯೇ ನಿಜವಾದ ಅಭಿವೃದ್ಧಿ ಎಂಬುದು ಬಹು ಮುಖ್ಯವಾದ ಅಂಶ. ಜೀವನ ಗುಣಮಟ್ಟದಲ್ಲಿ ಹೆಚ್ಚಿನ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವಂತಹ ಸಾಮಾಜಿಕ ವ್ಯವಸ್ಥೆಯ ನಿರ್ಮಾಣ, ಮೂಲಭೂತ ಅವಶ್ಯಕತೆಗಳನ್ನಾದರೂ ಪೂರೈಸಿಕೊಳ್ಳಬಹುದಾಗಿದೆ. ಇನ್ನೂ ಹತ್ತು ಹಲವು ಪರಿಸ್ಥಿತಿಗಳು ಆರ್ಥಿಕ ಬೆಳವಣಿಗೆಯ ಜೊತೆಜೊತೆಗೆ ನಿರ್ಮಾಣವಾದಾಗ ಮಾತ್ರ ಅಭಿವೃದ್ಧಿ ಎನ್ನುವುದು ಬಹು ಆಯಾಮಗಳನ್ನು ಹೊಂದಿರುವಂತಹ ಪರಿಕಲ್ಪನೆ. ಎರಡನೇ

ಮಹಾಯುದ್ಧದ ನಂತರ ಅಭಿವೃದ್ಧಿ ಆಯಾಮಗಳಲ್ಲಿ ಮಹತ್ತರ ಬದಲಾವಣೆಗಳುಂಟಾದವು. ಯುದ್ಧದ ನಂತರ ವಸಾಹತುಶಾಹಿಯಿಂದ ಮುಕ್ತಗೊಂಡ ಹಾಗೂ ಹೊಸದಾಗಿ ಹುಟ್ಟಿಕೊಂಡ ದೇಶಗಳು ತಮ್ಮ ಗಮನವನ್ನು ಅಭಿವೃದ್ಧಿಯ ಪಥದತ್ತ ಹರಿಸಿದವು. ಅಭಿವೃದ್ಧಿ ಎಂಬ ಪರಿಕಲ್ಪನೆಯು ಏನನ್ನು ಒಳಗೊಂಡಿರಬೇಕು ಎಂಬುದರ ಬಗ್ಗೆ ಕೂಡ ವಿಶೇಷವಾದ ಚಿಂತನಾ ಕ್ರಮವನ್ನು ಹುಟ್ಟುಹಾಕಲಾಯಿತು. ಈ ಮೂಲಕ ಅಭಿವೃದ್ಧಿ ಪರಿಕಲ್ಪನೆಯ ಅರ್ಥ ಕಾಲದಿಂದ ಕಾಲಕ್ಕೆ ಬದಲಾಗುತ್ತಿರುವುದನ್ನು ಕಾಣಬಹುದು. ಪ್ರಾರಂಭದಲ್ಲಿ ಕೇವಲ 'ಆರ್ಥಿಕ ಬೆಳವಣಿಗೆ' ಎಂಬ ಅರ್ಥದಲ್ಲಿ ಬಳಸಲಾಗುತ್ತಿತ್ತು. ಒಟ್ಟು 'ರಾಷ್ಟ್ರಿಯ ಉತ್ಪನ್ನ'ದ ಮೂಲಕ ಕ್ಷಿಪ್ರ ಆರ್ಥಿಕ ಬೆಳವಣಿಗೆಯನ್ನು ಅಳೆಯುವುದನ್ನೇ ಅಭಿವೃದ್ಧಿ ಎಂದು ಪರಿಗಣಿಸಲಾಗುತ್ತಿತ್ತು. ಜೊತೆಗೆ ಒಟ್ಟು ಆಂತರಿಕ ಉತ್ಪನ್ನ ಮತ್ತು ತಲಾದಾಯದ ಮೂಲಕ ಅಭಿವೃಧಿಯನ್ನು ಅಳೆಯಲಾಗುತ್ತಿತ್ತು. ರಾಷ್ಟ್ರೀಯ ಆದಾಯ, ಬಂಡವಾಳ ಹೂಡಿಕೆ, ಉತ್ಪನ್ನ ಮುಂತಾದವುಗಳನ್ನು ಹೆಚ್ಚಿಸುವುದನ್ನು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಗುರ್ತಿಸಲಾಗುತ್ತದೆ ಮತ್ತು ಇವುಗಳು ದೇಶದ ಅಭಿವೃದ್ಧಿಯ ಮಟ್ಟವನ್ನು ಅಳೆಯುವ ಸಾಧನಗಳಾಗಿ ಗುರ್ತಿಸಿಕೊಂಡಿದ್ದವು. ಇವುಗಳೆಲ್ಲವೂ ಹೆಚ್ಚಾದರೆ ದೇಶದ ಬೆಳವಣಿಗೆ/ಅಭಿವೃದ್ಧಿ ಸಜವಾಗಿ ಆಗುತ್ತದೆ. ಹಾಗೂ ಅಭಿವೃದ್ಧಿ ಕಾರ್ಯಗಳ ಪ್ರಯೋಜನವು ಎಲ್ಲಾ ವರ್ಗದ ಜನರಿಗೆ ಸಮಾನವಾಗಿ ಹಂಚಿಹೋಗುತ್ತದೆ ಎಂದು ನಂಬಲಾಯಿತು. ಈ ಚೌಕಟ್ಟಿನಲ್ಲಿ ಬೆಳೆದು ಬಂದ ಅಭಿವೃದ್ಧಿ ಮತ್ತು ಅಭಿವೃದ್ಧಿ ಸಿದ್ಧಾಂತಗಳೂ ಸಹ ಈ ಆರ್ಥಿಕ ಅಂಶಗಳನ್ನೇ ಎತ್ತಿ ಹಿಡಿದವು. 'ರೋಸ್ಟೋ'ನ ''ಬೆಳವಣಿಗೆ ಹಂತಗಳ ಸಿದ್ಧಾಂತ'', ''STRUCTURAL TRANSFORMATION'' ಮತ್ತು ''PATTERNS OF DEVELOPMENT THEORY'' ಮೊದಲಾದ ಸಿದ್ಧಾಂತಗಳು ಕ್ಷಿಪ್ರ ಆರ್ಥಿಕ ಬೆಳವಣಿಗೆಗೆ ಹೆಚ್ಚು ಒತ್ತು ನೀಡಿ ಅದನ್ನು ಹೇಗೆ ಸಾಧಿಸಬಹುದು ಎಂಬುದರ ಬಗ್ಗೆ ಮಾದರಿಗಳನ್ನು ಸಿದ್ಧಪಡಿಸಿದವು.[೧]

'ಅಭಿವೃದ್ಧಿ' ಎಂದರೆ ಆಧುನಿಕ ಅರ್ಥಶಾಸ್ತ್ರಜ್ಞರ ಪ್ರಕಾರ 'ಆರ್ಥಿಕ ಬೆಳವಣಿಗೆ' ಅಂದರೆ ತಲಾದಾಯದ ಹೆಚ್ಚಳ.

ಒಟ್ಟು ವರಮಾನ - ಕಾರ್ಮಿಕರು

ಉತ್ಪಾದನೆ - ಹೆಚ್ಚಿನ ಆದಾಯ

ತಲಾದಾಯದ ಒಟ್ಟು ರಾಷ್ಟ್ರೀಯ ಆದಾಯದ ಹಿನ್ನೆಲೆಯಲ್ಲಿ ಅಭಿವೃದ್ಧಿಯನ್ನು ಅಳೆಯಲಾಗುತ್ತದೆ.

'ಅಭಿವೃದ್ಧಿ' ಎಂದಾಕ್ಷಣ ಮೊದಲು ಆರ್ಥಿಕ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಗುರ್ತಿಸಲಾಗುತ್ತದೆ. ಆರ್ಥಿಕ ಕ್ಷೇತ್ರದಲ್ಲಿ ಪಾಲುದಾರರಾದ ಎಲ್ಲಾ ವ್ಯಕ್ತಿಗಲು, ಅವರ ಉತ್ಪಾದನೆಯನ್ನು ಇಲ್ಲಿ

ಪರಿಗಣಿಸಲಾಗುತ್ತದೆ. ಇಲ್ಲಿ ಪಾಲುದಾರರಾದ ಪ್ರತಿ ವ್ಯಕ್ತಿಗೂ ರಾಷ್ಟ್ರದ ಅಭಿವೃದ್ಧಿಯೊಂದಿಗೆ ನೇರ ಸಂಬಂಧವಿರುವುದನ್ನು ಕಾಣಬಹುದು. ಈ ಮೂಲಕ ಆದಾಯದ ಗಳಿಕೆ, ಅವರ ಮಹತ್ವ, ಆತ್ಮಗೌರವ, ಅಸ್ತಿತ್ವವನ್ನು ಗುರ್ತಿಸಲಾಗುತ್ತಿದೆ. ಇಲ್ಲಿ ಅಭಿವೃದ್ಧಿ ಎಂಬುದು ಸಮಾಜದಲ್ಲಿ ಆರ್ಥಿಕತೆಯ ತಳಹದಿಯಲ್ಲಿ ಗುರ್ತಿಸಿಕೊಂಡರೂ ಕೂಡ ಸಾಮಾಜಿಕ ಬಿಂಬತೆಗೆ ಪ್ರತಿಬಿಂಬಿಸುತ್ತಿದೆ. ಇಲ್ಲಿ ವ್ಯಕ್ತಿಯ ಭಾಗವಹಿಸುವಿಕೆ, ಅವರ ಶ್ರಮ, ಶ್ರಮಕ್ಕೆ ಪ್ರತಿಫಲ ನೇರವಾಗಿ ಪರಿಗಣನೆಗೆ ಬರುತ್ತಿದೆ. ಮೂಲಭೂತ ಅವಶ್ಯಕತೆಗಳ ಮೂಲ ಆದಾಯವೇ ಆದಾಗ ಅದರ ಪಾಲುದಾರಿಗಳಾಗಿ ಭಾಗವಹಿಸಿ ಪಡೆದು ಸಾಧಿಸುವುದು ಬಹು ಮುಖ್ಯ. ಆದಾಯದ ಮೂರು ಪಾಲುದಾರರು - ಅದರ ಅನುಭವಿಗಳಾಗುತ್ತಾರೆ ಹಾಗಾಗಿ ಶಿಕ್ಷಣ, ವಸತಿ, ಆರೋಗ್ಯ, ಆಹಾರಗಳು ಅವರ ಮೊದಲ ಮೂಲಭೂತ ಅವಶ್ಯಕತೆಗಳಾಗಿ ಪರಿಗಣಿಸ ಲಾಯಿತು. ಈ ರೀತಿಯಾಗಿ ಸಾಂಪ್ರದಾಯಿಕವಾಗಿ ಬಂದಂತಹ ಲಿಂಗ ಶ್ರೇಣೀಕೃತ ವ್ಯವಸ್ಥೆಯು ಬಳುವಳಿಯಾಗಿ ನವೀನ ಸಂಪ್ರದಾಯದಲ್ಲೂ ಮಹಿಳೆ ಗೌಣವಾಗಿ, ಅದೃಶ್ಯಳಾಗಿ ಗೋಚರಿಸುತ್ತಿದ್ದಾಳೆ.

ಈ ಮೂಲಕ 'ಅಭಿವೃದ್ಧಿ' ಮೂಲ ಪರಿಕಲ್ಪನೆಯ ಅರ್ಥದಲ್ಲಿಯೇ ಲಿಂಗ ಅಸಮಾನತೆಯು ಬೆಳೆದು ಬಂದಿದೆ ಎಂದು ಹೇಳಬಹುದು. ಒಟ್ಟಿನಲ್ಲಿ ಈ ಎಲ್ಲಾ ಅಂಶಗಳನ್ನು ಗಮನಿಸುತ್ತಾ ಅಭಿವೃದ್ಧಿ ಪ್ರಕ್ರಿಯೆಯನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ ಅಭಿವೃದ್ಧಿ ಎನ್ನುವಂತದ್ದು ಸಾಮಾನ್ಯವಾಗಿ ಪ್ರಗತಿ ಪಥದತ್ತ ಮುನ್ನಡೆಯುವುದು ಕೆಳಮಟ್ಟದಿಂದ ಮೇಲ್ಮಟ್ಟದಲ್ಲಿ ಬದಲಾವಣೆಯನ್ನು ತರುವ ಪ್ರಕ್ರಿಯೆಯೇ ಆಗಿದೆ. ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಕೃಷಿ, ಸಾರಿಗೆ ವ್ಯವಸ್ಥೆ, ವಾಣಿಜ್ಯ ಇತ್ಯಾದಿ ಕ್ಷೇತ್ರಗಳಲ್ಲಿ ಕ್ರಿಯಾತ್ಮಕ ಬದಲಾವಣೆಗಳನ್ನು ಹೊಂದುವುದರ ಮೂಲಕ ಮಾನವ ಅಭಿವೃದ್ಧಿಯನ್ನು ಸಾಧಿಸುವುದಾಗಿದೆ. 'ದೇಶದ ಜೊತೆಗೆ ಮಾನವ ಕುಲದ ಸಮಾನ ಸಂಕಥನದ ಸರ್ವತೋಮುಖ ಬೆಳವಣಿಗೆಯೇ ಅಭಿವೃದ್ಧಿ, ಸಾಮಾನ್ಯವಾಗಿ ಬೆಳವಣಿಗೆ ಮತ್ತು ಅಭಿವೃದ್ಧಿ ಪ್ರಕ್ರಿಯೆಯ ಎರಡು ಪರಿಕಲ್ಪನೆಗಳು ಒಂದಕ್ಕೊಂದು ಪರ್ಯಾಯ ಅರ್ಥವನ್ನು ಹೊಂದಿದ್ದು ಪರಸ್ಪರ ಪೂರಕವಾಗಿ ಅರ್ಥವ್ಯವಸ್ಥೆಯಲ್ಲಿ ಬಳಸಲಾಗುತ್ತದೆ. 'ಬೆಳವಣಿಗೆ' ಎಂದರೆ ಸದಾಕಾಲ ನಡೆಯುತ್ತಿರುವ ಒಂದು ಸಾಮಾನ್ಯ ಕ್ರಿಯೆ. ರಾಷ್ಟ್ರದ ಅರ್ಥವ್ಯವಸ್ಥೆಯಲ್ಲಿನ ಪ್ರತಿ ಬದಲಾವಣೆಯೂ ಕೂಡ ತನ್ನದೇ ಚಹರೆಯನ್ನು ಹೊತ್ತು ತರುತ್ತಿದ್ದರೂ ಕೂಡ ಅಲ್ಲಿನ ಬದಲಾವಣೆಯ ಮೇರನ್ನು ಅಭಿವೃದ್ಧಿಯ ಮೆಟ್ಟಿಲುಗಳಾಗಿ ಗುರ್ತಿಸಲಾಗುತ್ತದೆ.

ಅಭಿವೃದ್ಧಿ ಪರಿಕಲ್ಪನೆಗೆ ವಿಶಾಲವಾದಂತಹ ಅರ್ಥವಿದೆ. ಇಲ್ಲಿ ನಾವು ಗುರ್ತಿಸಬೇಕಾದದ್ದು ಸಾಮಾಜಿಕ ಸಂಸ್ಥೆಯ ಸರ್ವತೋಮುಖ ಬೆಳವಣಿಗೆಯೇ ಅಭಿವೃದ್ಧಿ ಎನ್ನುವಂತದ್ದು. ಕೇವಲ ಆರ್ಥಿಕ ಬೆಳವಣಿಗೆಯಲ್ಲಿ ಜೀವನ ಗುಣಮಟ್ಟದಲ್ಲಿ ಹೆಚ್ಚಳ. ಮಾನವೀಯ ಮೌಲ್ಯಗಳನ್ನು ಎತ್ತಿ

ಹಿಡಿದಂತಹ ಸಾಮಾಜಿಕ ವ್ಯವಸ್ಥೆಯ ನಿರ್ಮಾಣ, ಮೂಲಭೂತ ವ್ಯವಸ್ಥೆಗಳನ್ನು ಪೂರೈಸುವಂತ ಪರಿಸ್ಥಿತಿ, ಅಧೀನತೆ-ಶ್ರೇಷ್ಠತೆಯನ್ನು ತೆಗೆದು ಸಮಾನ ವಾತಾವರಣ ಸೃಷ್ಟಿಸುವ ಸುವ್ಯವಸ್ಥೆ ಇನ್ನೂ ಹಲವು ಸಂಗತಿಗಳನ್ನು ಹೊತ್ತ ಆರ್ಥಿಕ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯೇ ಅಭಿವೃದ್ಧಿ.

ಅಭಿವೃದ್ಧಿ ಎನ್ನುವಂತದ್ದು ಬಹುಮುಖ್ಯ ಆಯಾಮಗಳನ್ನು ಹೊಂದಿರುವಂತಹ ಪರಿಕಲ್ಪನೆ. ಎರಡನೇ ಮಹಾಯುದ್ಧದ ನಂತರ ಅದು ಒಂದು ಮಹತ್ವದ ಪರಿಕಲ್ಪನೆಯಾಗಿ ಬೆಳೆದು ಬಂದಿತು. ಯುದ್ಧದ ನಂತರ ವಸಾಹತುಶಾಹಿಯಿಂದ ಮುಕ್ತಗೊಂಡು ಸ್ವತಂತ್ರ ದೇಶಗಳಾಗಿ ಗುರ್ತಿಸಿಕೊಂಡು ತಮ್ಮ ಬೆಳೆವಣಿಗೆಯನ್ನು ಅಭಿವೃದ್ಧಿಯ ಪಥದತ್ತ ಸಾಗಿಸಿಕೊಂಡು ಬಂದವು. ಅಲ್ಲಿ ತಮ್ಮ ಸಂಪೂರ್ಣ ಗಮನವನ್ನು ಅಭಿವೃದ್ಧಿಯತ್ತ ಹರಿಸಿದವು. ಇಲ್ಲಿಯೂ ಕೂಡ ಪ್ರಾರಂಭದಲ್ಲಿ ಅಭಿವೃದ್ಧಿಯನ್ನು 'ಆರ್ಥಿಕ ಬೆಳವಣಿಗೆಯ ಅರ್ಥದಲ್ಲಿ ಬಳಸಲಾಗುತ್ತಿತ್ತು. ಒಟ್ಟು ರಾಷ್ಟ್ರೀಯ ಉತ್ಪನ್ನದ ಕ್ಷಿಪ್ರ ಆರ್ಥಿಕ ಬೆಳವಣಿಗೆಯನ್ನು ಅಳೆಯುವುದನ್ನು ಅಭಿವೃದ್ಧಿಯಲ್ಲಿ ಪರಿಗಣಿಸಲಾಯಿತು. ಒಟ್ಟು ಉತ್ಪನ್ನ ಮತ್ತು ತಲಾದಾಯದ ಮೂಲಕ ರಾಷ್ಟ್ರೀಯ ಆದಾಯವನ್ನು ಅಳೆಯಲಾಗುತ್ತಿತ್ತು. ರಾಷ್ಟ್ರೀಯ ಆದಾಯ, ಬಂಡವಾಳ ಹೂಡಿಕೆ, ಉತ್ಪನ್ನ ಮುಂತಾದವುಗಳನ್ನು ಹೆಚ್ಚಿಸುವುದು ಅಭಿವೃದ್ಧಿಯ ಉದ್ದೇಶವಾಗಿತ್ತು ಹಾಗೂ ಒಂದು ದೇಶದ ಅಭಿವೃದ್ಧಿ ಮಟ್ಟವನ್ನು ಅಳೆಯುವ ಸಾಧನವಾಗಿತ್ತು. ಇವುಗಳ ಬೆಳವಣಿಗೆಯೇ ದೇಶದ ಅಭಿವೃದ್ಧಿಯಾಗಿತ್ತು. ಇಲ್ಲಿ ಅಭಿವೃದ್ಧಿ ಪ್ರಯೋಜನವು ಎಲ್ಲ ಗುಂಪುಗಳಿಗೆ ಸಂಬಂಧಿಸಿದ್ದು ಇದು ಎಲ್ಲಾ ವರ್ಗದ ಜನರಿಗೆ ಹಂಚಿ ಹೋಗುತ್ತದೆಂದು ನಂಬಲಾಯಿತು. ಈ ಅಭಿವೃದ್ಧಿಯಲ್ಲಿ ರೂಪುಗೊಂಡ ಎಲ್ಲಾ ಆರ್ಥಿಕ ಸಿದ್ಧಾಂತಗಳನ್ನು ಈ ತಳಹದಿಯಲ್ಲಿ ಕಟ್ಟಲಾಯಿತು. W.W.ರೂಸೋ ನ ''ಬೆಳವಣಿಗೆಯ ಹಂತಗಳ ಸಿದ್ಧಾಂತ'', ''STRUCTURAL TRANSFORMATION'' ಮತ್ತು ''PATTERNS OF DEVELOPMENT THEORY'' ಮೊದಲಾದ ಸಿದ್ಧಾಂತಗಳು ಕ್ಷಿಪ್ರ ಬದಲಾವಣೆಗೆ ಅದರಲ್ಲೂ ಆರ್ಥಿಕ ಬದಲಾವಣೆಗೆ ಹೆಚ್ಚು ಒತ್ತು ನೀಡಿ ಹೇಗೆ ಅಭಿವೃದ್ಧಿ ಸಾಧಿಸಬೇಕೆಂಬುದು ನೆಲೆಯಲ್ಲಿ ಸಿದ್ಧಾಂತಗಳು ಸಿದ್ಧಗೊಂಡವು. ಈ ಎಲ್ಲಾ ಬೆಳವಣಿಗೆಯಲ್ಲಿ ಮಹಿಳೆ ಇದ್ದು ಅದೃಶ್ಯವಾಗಿರುವುದು ಕಣ್ಣ ಮುಂದಿನ ಸತ್ಯವಾಗಿದೆ. ಅಭಿವೃದ್ಧಿಯ ಎರಡನೇ ಹಂತದಲ್ಲಿಯೂ ಸಹ ಮಹಿಳೆಯು ಕಾಣೆಯಾಗಿದ್ದಾಳೆ.[೫]

ಅಭಿವೃದ್ಧಿ ಕುರಿತ ತತ್ವ ಸಿದ್ಧಾಂತ, ಆಚರಣೆಗಳಲ್ಲಿ ಮಹಿಳೆ-ಲಿಂಗ ಅಸಮಾನತೆಯ ಎಳೆಗಳ ಬಗೆಗೆ ಲಿಂಗ ತಾರತಮ್ಯ ಸಂಬಂಧಿತ ಚಿಂತನೆಗಳು ಪ್ರಸಕ್ತ ಶತಮಾನದ ಅಂತ್ಯದಿಂದ ಆರಂಭವಾಯಿತು ಎಂಬುದು ತಿಳಿದಿರುವ ಸಂಗತಿಯಾಗಿದೆ. ಏಕೆಂದರೆ ಅಭಿವೃದ್ಧಿಯನ್ನು ಕುರಿತ ಸಿದ್ಧಾಂತಗಳೆಲ್ಲವೂ ಲಿಂಗ ನಿರಪೇಕ್ಷ ನೆಲೆಯಲ್ಲಿ ರೂಪುಗೊಳ್ಳುತ್ತಾ ಬಂದಿವೆ. ಆಚರಣೆಯಲ್ಲಿಯೂ ಸಹ ಮಹಿಳೆಯರನ್ನು ಪ್ರತ್ಯೇಕ ಘಟಕ ಕ್ಷೇತ್ರವೆಂದು ಪರಿಗಣಿಸಿ ಅವರ ಅಗತ್ಯತೆಯನ್ನು ಗುರ್ತಿಸಿದ್ದು

ಇತ್ತೀಚೆಗೆ. ಪುರುಷಶಾಹಿಯ ಆಳ್ವಿಕೆಯ ಅಭಿವೃದ್ಧಿ ಕುರಿತ ಸಿದ್ಧಾಂತಗಳಲ್ಲಿ ಪ್ರ
ಮೆರೆಯುತ್ತಿರುವುದರಿಂದ ಮಹಿಳೆ ಅಲ್ಲಿ ಪ್ರವೇಶಿಸುವುದು ಸಾಹಸವೇ ಸರಿ. ಪುರು
ಸಿದ್ಧಾಂತಗಳಲ್ಲಿ ಅಭಿವೃದ್ಧಿ ಸಂಕಥನದಲ್ಲಿ ಮಹಿಳೆಯು ಗೋಚರವಾಗಿ ತುಂಬಾ ವಿಶಿಷ್ಟ ನೆಲೆಯಲ್ಲ ಕಾರಣ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಮಹಿಳೆಯರನ್ನು ದೂರವಿಡಲಾಗಿತ್ತು. ತದನಂತರ ಅಭಿವೃದ್ಧಿಯ ಸಾಧನವಾಗಿ ಮಹಿಳೆಯರನ್ನು ಗುರುತಿಸಲಾಯಿತು.

ಮಹೆಬೂಬ್-ಉಲ್-ಹಕ್ ಮತ್ತು ಅಮರ್ತ್ಯಸೇನ್‌ರವರ ಪ್ರಕಾರ ''ಅಭಿವೃದ್ಧಿ ಎಂದರೆ ಜೀವನ ಗುಣಮಟ್ಟ ಮತ್ತು ಮಾನವನ ಸಾಮರ್ಥ್ಯವನ್ನು ಹೆಚ್ಚಿಸುವುದು ಮಹಿಳೆಯರ ಜೀವನ ಮಟ್ಟದ ಸಾಮರ್ಥ್ಯವನ್ನು, ಸದೃಢತೆಯನ್ನು ಹೆಚ್ಚಿಸುವುದರ ಮೂಲಕ ಅಭಿವೃದ್ಧಿಗೆ ಒಂದು ಪರ್ಯಾಯ ದೃಷ್ಟಿಕೋನವನ್ನು ತಂದುಕೊಟ್ಟರು. ಇಲ್ಲಿ ಮನುಕುಲದ ಸರ್ವತೋಮುಖ ಅಭಿವೃದ್ಧಿ ಎಂದಾಗ ಮಹಿಳೆಯರ ಬದುಕಿನ ಬೆಳವಣಿಗೆಯೂ ಕೂಡ ಸೇರಿದ ಅಭಿವೃದ್ಧಿಯ ಪಥವು ಭಿನ್ನವಾಗಿ ಆರಂಭಗೊಂಡಿತು.

''ಲೆಷಸ್ಪರ ತ್ರೂ'' ಹಾಗೂ ''ರಾಬರ್ಟ್ ಬ್ಯಾಂಬರ್ಸ್''ರ ಚರ್ಚೆಯ ಪ್ರಕಾರ ''ಅಭಿವೃದ್ಧಿಯ ಸೈದ್ಧಾಂತಿಕ ಚೌಕಟ್ಟಿನಲ್ಲಿ ಸಾಮಾಜಿಕ ಸೈದ್ಧಾಂತಿಕ ಚೌಕಟ್ಟು ಅಭಿವೃದ್ಧಿಯಲ್ಲಿ ವ್ಯಕ್ತಿಗಳ ಜೀವನ ಗುಣಮಟ್ಟ ವಾತಾವರಣದ ಅವಶ್ಯಕತೆಗಳು, ಅನಾನುಕೂಲತೆಗಳು ವ್ಯಕ್ತಿಯ ಸಮಸ್ಯೆಗಳು, ವರಮಾನ-ಆದಾಯ, ಎಲ್ಲವುಗಳಲ್ಲಿ ಮಹಿಳೆಯರು ಬಡವರಾಗಿದ್ದಾರೆ'' ಎಂಬುದನ್ನು ತಿಳಿಸಿದರು.

ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಬಡತನದ ಮಟ್ಟ ಕಡಿಮೆ ಬರಲು ಮಹಿಳಾ ಬಡತನವೂ ಒಂದು ಕಾರಣ ಎಂಬುದು ತಿಳಿದುಬಂದಿತು. ಇಲ್ಲಿ ಮಹಿಳೆಯರನ್ನು ಪ್ರಜ್ಞಾಪೂರ್ವಕವಾಗಿ ಅಧ್ಯಯನ ಮಾಡಲು ಕೂಡ ದಾರಿ ಮೂಡಿಬಂದಿತು. ಮಹಿಳೆಯರನ್ನು ಫಲಾನುಭವಿಗಳಾಗಿ ಗುರ್ತಿಸಿಕೊಂಡು ಬಂದಿರುವಂತದ್ದು ಬಹಳ ಹಿಂದಿನಿಂದಲೂ ನಡೆದು ಬಂದಂತಾಗಿದೆ. ಲಿಂಗ ಸಂಬಂಧಿ ಸ್ಪಂದಿಯಾದ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು ೧೯೯೦ರ ದಶಕದಲ್ಲಿ ಪರಿಪೂರ್ಣ ರೂಪ ಪಡೆದುಕೊಂಡಿತು. ಇಲ್ಲಿ ಜ್ಞಾನ ಶಿಸ್ತುಗಳು ಸೈದ್ಧಾಂತಿಕ ಚೌಕಟ್ಟಿನಲ್ಲಿ ಮನ್ನಣೆ ನೀಡಿದವು.

ಎಸ್ತರ್ ಬೋಸೆರಪ್‌ರ ಪ್ರಕಾರ ''ವಿವಿಧ ಕ್ಷೇತ್ರಗಳ ಬೆಳವಣಿಗೆಯಿಂದ(ಅಭಿವೃದ್ಧಿಯಿಂದ) ಮಹಿಳೆಯರಿಗೆ ಹೆಚ್ಚಿನ ಹಾನಿಯಾಗಿದೆಯೇ ವಿನಾಃ ಅನುಕೂಲವಾಗಿಲ್ಲ ಎಂದು ಹೇಳುತ್ತಾರೆ. ೧೯೭೦ರ ದಶಕದಲ್ಲಿ ಆರಂಭಗೊಂಡ ಅಭಿವೃದ್ಧಿಯ ಸಂಕಥನ ಮಹಿಳೆಯರನ್ನು ಒಳಗೊಂಡತದ್ದು ಮಹಿಳೇ ಮತ್ತು ಅಭಿವೃದ್ಧಿ ಸಂಕಥನದ ಈ ಆರಂಭದ ಹಂತದಲ್ಲಿ ಮಹಿಳೆ ಅಭಿವೃದ್ಧಿ ಪುನಃ ಸಾಂಪ್ರದಾಯಿಕ ನೆಲೆಗಟ್ಟಿನಲ್ಲಿಯೇ ಬೆಳೆದು ಬರುತ್ತಿದೆ. ಸಮಾಜ ವಿಜ್ಞಾನ ಜ್ಞಾನ ಶಿಸ್ತುಗಳು ಇದನ್ನು ಸೌಹಾರ್ದಯುತ ಬೆಳವಣಿಗೆ ಎಂದರೆ ಮಹಿಳಾ ಅಧ್ಯಯನ ಇದನ್ನು ಸಂಘರ್ಷಣವಾದಿ

ಎಂದು ಪ್ರತಿಪಾದಿಸುತ್ತವೆ ಎಂದು ಹೇಳುತ್ತಾರೆ. ಮಹಿಳಾ ಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಬಹುದು ಎಂದಾದರೆ ಅದಕ್ಕೆ ಕಾರಣ ಸ್ತ್ರೀವಾದದ ಹೋರಾಟದ ಫಲಿತಾಂಶದ ಪ್ರಭಾವ. ಇಲ್ಲಿ ಸಂಘರ್ಷಣಾವಾದದ ಈ ಸಂಬಂಧದ ಬೆಳವಣಿಗೆಯಿಂದ ಮತ್ತು ಅಭಿವೃದ್ಧಿಯಲ್ಲಿನ ವಿಕಾಸವಾದದ ಸಿದ್ಧಾಂತ, ಜೈವಿಕವಾದದ ಸಿದ್ಧಾಂತವನ್ನು ಮಹಿಳಾ ಅಧ್ಯಯನ ತಿರಸ್ಕರಿಸುತ್ತದೆ. ಇಲ್ಲಿ ಮಹಿಳಾ ಅಧ್ಯಯನವು ಮಹಿಳೆಯರ ಅಭಿವೃದ್ಧಿಯನ್ನು ಚಾರಿತ್ರಿಕ ಸಾಂಸ್ಕೃತಿಕ, ಸಾಮಾಜಿಕ ನೆಲೆಯಲ್ಲಿ ಅನಾವರಣಗೊಳಿಸಲು ಬಯಸುತ್ತದೆ. ಇವೆರಡ ನಡುವಿನ ಸಂಬಂಧ ಜೈವಿಕವಲ್ಲ ಅದು ಸಾಮಾಜಿಕವೆಂದು ಮಹಿಳಾ ಅಧ್ಯಯನ ಮತ್ತು ಸ್ತ್ರೀವಾದ ತಿಳಿಸುತ್ತದೆ.

ಅಭಿವೃದ್ಧಿ ಕುರಿತ ತತ್ವ ಹಾಗೂ ಆಚರಣೆಗಳೆರಡರ ಮಟ್ಟದಲ್ಲಿ ಮಹಿಳೆ-ಲಿಂಗ ಸಂಬಂಧಗಳು ಪ್ರವೇಶಿಸಿದ್ದು ಪ್ರಸಕ್ತ ಶತಮಾನದ ಅಂತ್ಯ ಭಾಗದಲ್ಲಿ ಎಂಬುದು ಸರ್ವೇ ಸಾಮಾನ್ಯ ಸಂಗತಿಯಾಗಿದೆ. ಏಕೆಂದರೆ ಅಭಿವೃದ್ಧಿಯನ್ನು ಕುರಿತ ಸಿದ್ಧಾಂತಗಳೆಲ್ಲವೂ ಲಿಂಗ ನಿರಪೇಕ್ಷ ನೆಲೆಯಲ್ಲಿ ರೂಪುಗೊಳ್ಳುತ್ತಾ ಬಂದಿದೆ ಎಂದರೂ ಆಚರಣೆಯಲ್ಲಿಯೂ ಮಹಿಳೆಯರನ್ನು ಪ್ರತ್ಯೇಕ ಘಟಕ ಕ್ಷೇತ್ರವೆಂದು ಪರಿಗಣಿಸಲಾಯಿತು. ಪುರುಷಶಾಹಿಯ ಆಳ್ವಿಕೆಯು ಅಭಿವೃದ್ಧಿ ಕುರಿತ ಸಿದ್ಧಾಂತಗಳಲ್ಲಿ ಮತ್ತು ಆಚರಣೆಯಲ್ಲಿ ಮೆರೆಯುತ್ತಿರುವುದರಿಂದ ಮಹಿಳೆ ಅಲ್ಲಿ ಪ್ರವೇಶಿಸುವುದು ಸಾಹಸವೇ ಸರಿ. ಪುರುಷ ಪ್ರಧಾನ ಅಭಿವೃದ್ಧಿ ಸಂಕಥನದಲ್ಲಿ ಮಹಿಳೆಯರನ್ನು ಪರಿಗಣಿಸಿದ್ದರೂ ಅಲ್ಲಿ ಅವರು ಅಗೋಚರವಾಗಿರುವುದು ದುರಂತದ ಸಂಗತಿ. ಈ ನಿಟ್ಟಿನಲ್ಲಿ ಅವಳನ್ನು ಪ್ರತ್ಯೇಕವಾಗಿ ಪರಿಗಣಿಸುವುದು ಕೇವಲ ಕನಸಾಗಿತ್ತು. ಸೈದ್ಧಾಂತಿಕವಾಗಿಯೇ ಅಭಿವೃದ್ಧಿ ಸಂಕಥನದಿಂದ ಮಹಿಳೆಯರನ್ನು ದೂರವಿಡಲಾಗಿತ್ತು ಮತ್ತು ಆಚರಣೆಯಲ್ಲಿ ಅವಳನ್ನು ಮೂಲೆಗುಂಪು ಮಾಡಲಾಗಿತ್ತು. ಅಭಿವೃದ್ಧಿಯ ಸಾಧನವಾಗಿ ಮಹಿಳೆಯರನ್ನೂ ಗುರುತಿಸುತ್ತಾ ಬದಲಾಗಿದಯೇ ವಿನಃ ಅವರನ್ನು ಅಭಿವೃದ್ಧಿ ''ಸಾಧ್ಯ''ವೆಂದು ಗುರುತಿಸಿದ್ದು ಕಂಡುಬರುವುದಿಲ್ಲ. 'ಮೆಹಬೂಲ್ ಉಲ್ ಹಕ್' ಮತ್ತು 'ಅಮರ್ತ್ಯಸೇನ್' ಅವರುಗಳ ಪರಿಶ್ರಮದಿಂದ ಮತ್ತು ಚಿಂತನೆಯ ಮೂಸೆಯಿಂದ ಮೂಡಿಬಂದ ಮಾನವ ಅಭಿವೃದ್ಧಿ ವರದಿಗಳಲ್ಲಿ ಪ್ರಥಮ ಬಾರಿಗೆ ಮಹಿಳೆಯರನ್ನು ಅಭಿವೃದ್ಧಿಯ ಸಾಧ್ಯವನ್ನಾಗಿ ಸ್ಪಷ್ಟವಾಗಿ ಹಾಗೂ ಪ್ರಜ್ಞಾಪೂರ್ವಕವಾಗಿ ದಾಖಲಿಸಿರುವುದನ್ನು ಕಾಣಬಹುದು. ಉಳಿದಂತೆ ಮಹಿಳೆಯರನ್ನು ಅಭಿವೃದ್ಧಿಯ ಫಲಾನುಭವಿಗಳನ್ನಾಗಿ ಮಾಡುವ ಪ್ರಯತ್ನಗಳು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಲಿಂಗ ಸಂಬಂಧಿಗಳಿಗೆ ಸ್ಪಂದಿಯಾದ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು ೧೯೯೦ರ ದಶಕದಲ್ಲಿ ಪೂರ್ಣರೂಪ ಪಡೆದುಕೊಂಡಿತು ಹಾಗೂ ಜ್ಞಾನ ಶಿಸ್ತುಗಳ ಮನ್ನಣೆಗೂ ಒಳಗಾಗತೊಡಗಿತು.

ಅಭಿವೃದ್ಧಿ ಪ್ರಕ್ರಿಯೆಯಿಂದ ಮಹಿಳೆಯರಿಗೆ ಹೆಚ್ಚಿನ ಹಾನಿಯಾಗಿದೆಯೇ ವಿನಾ ಅನುಕೂಲವಾಗಿಲ್ಲವೆಂಬ ಚರ್ಚೆಯನ್ನು ಏಸ್ತರ್ ಬೋಸರಪ್ ೧೯೭೦ರ ದಶಕದ ಆರಂಭದ

ಚರ್ಚೆ ಮಾಡುತ್ತಾರೆ. ಅಲ್ಲಿಂದ ಎಸ್ತರ್ ಬೋಸರಪ್ ಹುಟ್ಟು ಹಾಕಿದ ಅಧ್ಯಯನ ಸಂಪ್ರದಾಯ ಮುಂದುವರೆಯಿತು. ಲಿಂಗ ಸಂಬಂಧಿ ಅಭಿವೃದ್ಧಿ ಸಂಕಥನವನ್ನು ಕಟ್ಟಿಕೊಂಡು ಬರಲಾಯಿತು. ಮಹಿಳೆಯರು ಮತ್ತು ಅಭಿವೃದ್ಧಿಗಳ ನಡುವಿನ ಸಂಬಂಧವನ್ನು ಸಾಂಪ್ರದಾಯಿಕ ಸಮಾಜ ವಿಜ್ಞಾನಗಳು ಸೌಹಾರ್ದಯುತವೆಂದು ಪ್ರತಿಪಾದಿಸಿಕೊಂಡು ಬಂದರೆ ಮಹಿಳಾ ಅಧ್ಯಯನವು ಅದನ್ನು ಸಂಘರ್ಷವಾದಿಯೆಂದು ಪ್ರತಿಪಾದಿಸುತ್ತದೆ. ಅಭಿವೃದ್ಧಿಯು ಎಲ್ಲೋ ಸ್ವಲ್ಪಮಟ್ಟಿಗೆ ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮಪಡಿಸಿರಬಹುದು. ಆದರೆ ಅದು ಏಕಾಂಗಿಯಾಗಿ ಮಹಿಳೆಯರ ಸ್ಥಾನ-ಮಾನವನ್ನು ಉತ್ತಮಪಡಿಸುವ ಸಂಗತಿಯಾಗಿ ಗೋಚರಿಸುತ್ತಿಲ್ಲ. ಮಹಿಳಾ ಅಧ್ಯಯನವು ಮಹಿಳೆ ಮತ್ತು ಅಭಿವೃದ್ಧಿಗಳ ನಡುವಿನ ಸಂಬಂಧವನ್ನು ಸಂಘರ್ಷವಾದಿ ನೆಲೆಯಲ್ಲಿ ಹಾಗೂ ಮಹಿಳೆಯರ ಸ್ಥಾನ-ಮನಾಗಳ ನೆಲೆಯಲ್ಲಿ ಗುರುತಿಸಲು ಬಯಸುತ್ತವೆ. ಅಭಿವೃದ್ಧಿಯ ವಿಕಾಸವಾದಿ ಜೈವಿಕವಾದಿ ನೆಲೆಗಳನ್ನು ಮಹಿಳಾ ಅಧ್ಯಯನವು ಖಂಡಿಸುತ್ತದೆ ಮತ್ತು ತಿರಸ್ಕರಿಸುತ್ತದೆ. ಮಹಿಳೆ ಮತ್ತು ಅಭಿವೃದ್ಧಿಗಳ ನಡುವಿನ ಸಂಬಂಧವನ್ನು ಮಹಿಳಾ ಅಧ್ಯಯನವು ಚಾರಿತ್ರಕ, ಸಾಂಸ್ಕೃತಿಕ, ಸಾಮಾಜಿಕ ನೆಲೆಯಲ್ಲಿ ಅನಾವರಣಗೊಳಿಸಲು ಬಯಸುತ್ತದೆ. ಇವೆರಡರ ನಡುವಿನ ಸಂಬಂಧ ಜೈವಿಕವಲ್ಲ ಅದು ಸಾಮಾಜಿಕ ಎಂದು ಮಹಿಳಾ ಅಧ್ಯಯನವು ನಂಬುತ್ತದೆ. ಸಾಮಾಜಿಕ ಬೆಳವಣಿಗೆಯಿಂದಲೇ ಮಹಿಳೆಯರ ದಾಸ್ಯ ಮತ್ತು ಅಸಮಾನತೆಯ ಅಂಚಿನಲ್ಲಿ ಗುರುತಿಸಿಕೊಳ್ಳುವಂತಹ ಸ್ಥಿತಿಯನ್ನು ಮಹಿಳೆಯರು ಎದುರಿಸಬೇಕಾಗಿದೆ.

ಅಭಿವೃದ್ಧಿಯ ಪರಿಕಲ್ಪನೆಯನ್ನು ಸಮಗ್ರ ಮಾನವ ಅಭಿವೃದ್ಧಿ ನೆಲೆಯಲ್ಲಿ ಲಿಂಗ ಸಮಾನತೆಯ ತಳಹದಿಯಲ್ಲಿ ನಿರ್ವಚಿಸಲು ಬೇಕಾದ ತಾತ್ವಿಕ ಚೌಕಟ್ಟಿನ ನೆಲೆಯಲ್ಲಿ ಈ ಅಧ್ಯಾಯ ರೂಪುಗೊಳ್ಳುತ್ತದೆ. ಜಾಗತಿಕ ಮಟ್ಟದಲ್ಲಿ ಸರ್ಕಾರಿ ನೆಲೆಗಟ್ಟಿನಲ್ಲಿ ವಿಭಿನ್ನ ಸೈದ್ಧಾಂತಿಕ ಆಯಾಮಗಳಲ್ಲಿನ ಪರಿಕಲ್ಪನೆ ಅಭಿವೃದ್ಧಿ ಸಿದ್ಧಾಂತಗಳನ್ನು ಭೌತಿಕವಾಗಿ, ಬೌದ್ಧಿವಾಗಿ, ಮಾನಸಿಕವಾಗಿ ಮಹಿಳೆಯರ ಬದುಕನ್ನು ಸೂಕ್ತವಾಗಿ ಕಟ್ಟಿಕೊಳ್ಳಲು ಬೇಕಾದ ತಾತ್ವಿಕ ಚೌಕಟ್ಟನ್ನು ಇಲ್ಲಿ ಗುರುತಿಸಲಾಗುತ್ತದೆ. ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಸರ್ಕಾರಿ ಕಾರ್ಯಕ್ರಮಗಳನ್ನು ಈ ಚೌಕಟ್ಟಿನಡಿಯಲ್ಲಿ ಯೋಜನೆಗಳನ್ನು ಹೇಗೆ ರೂಪಿಸಬೇಕು ಎಂಬುದನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗುತ್ತದೆ.

೨.೨ ಅಭಿವೃದ್ಧಿ ಕುರಿತ ವ್ಯಾಖ್ಯೆಗಳು

ವಂದನಾ ಶಿವ(೧೯೮೮), ನೈಲಾ ಕಬೀರ್ (೧೯೯೪), ಆಶೀಕ್ ನಂದಿ ಮುಂತಾದವರು ಸಮಾಜದಲ್ಲಿ ಅಂಚಿಗೆ ದೂಡಲ್ಪಟ್ಟ ವಂಚಿತರ-ನಿಕೃಷ್ಟರ ನೆಲೆಯಿಂದ ಅಭಿವೃದ್ಧಿಯನ್ನು

ನಿರ್ವಚಿಸಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತಾರೆ. ಈ ಕುರಿತಂತೆ 'ಅಶೀರ್ ನಂದಿ'ಯವರ ಹೇಳಿಕೆ ಹೀಗಿದೆ.

''One must choose the slave stand point not only because the slave in appressed but also because be represents a highe-order cognition which perforce includes the master as a human where as the masters cognition has to exclude the slave expect as a thing''.

ಆಶೀರ್ ನಂದಿಯವರ ವಾದವನ್ನು ಮುಂದುವರೆಸುವ ವಂದನಾ ಶಿವ 'ಬಿಡುಗಡೆ ಎನ್ನುವುದು ವಸಾಹತುಶಾಹಗಿ ತುತ್ತಾದವರಿಂದ ಪ್ರಾರಂಭವಾಗಬೇಕು ಮತ್ತು ವಸಾಹತುಶಾಹಿ ಸೂತ್ರದಾರಿಗಳಲ್ಲಿ 'ಕೊನೆಗೊಳ್ಳಬೇಕು' ಎಂದು ಹೇಳುತ್ತಾರೆ(ಉಲ್ಲೇಖ: ವಂದನಾ ಶಿವ ೧೯೮೮:೫೩).

ನೈಲಾ ಕಬೀರ್ ಅವರು 'ಜಾಗ್ಲರ್' ಎಂಬುವವರನ್ನು ಉಲ್ಲೇಖಿಸುತ್ತಾ ತುಳಿತಕ್ಕೆ ಒಳಗಾದವರ ಆಕ್ರಂದನವು ಒಡೆಯರಿಗೆ ಅತ್ಯಂತ ಕ್ಷೀಣವಾಗಿ ಕೇಳಿಸಿದರೆ ತುಳಿತಕ್ಕೆ ಒಳಗಾದವರಿಗೆ ತಮ್ಮ ಹಾಗೂ ಒಡೆಯರ ನಡುವಿನ ಸಂಬಂಧದ ಸ್ಪಷ್ಟ ಕಲ್ಪನೆ ಮತ್ತು ಗ್ರಹಿಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತಾರೆ.(೧೯೯೪:೮೦) ವರ್ಗ, ಜನಾಂಗ, ರಾಷ್ಟ್ರೀಯತೆಗಳ ಕೃಪಾಶ್ರಯದಿಂದ ವಂಚಿತರಾದ ಶೋಷಿತ ಮಹಿಳೆಯ ನೆಲೆಯಿಂದ-ದೃಷ್ಟಿಕೋನದಿಂದ ಮಾತ್ರ ನಿಕೃಷ್ಟರ(ಮಹಿಳೆಯರ) ಅಧೀನತೆಯ ಸಂಕೀರ್ಣ ಸ್ವರೂಪದ ಅರಿವುಸ ಅಧ್ಯ. ಈ ನಿಕೃಷ್ಟ ವರ್ಗ ಮಾತ್ರ ಅಭಿವೃದ್ಧಿಯಲ್ಲಿ ಅಸಮಾನತೆಯನ್ನು ಸಾಧಿಸಿಕೊಳ್ಳಲು ಅಗತ್ಯವಾದ ತಂತ್ರಗಳನ್ನು ರೂಪಿಸಬಲ್ಲದು. ಅಸಮಾನತೆಗಳಲ್ಲಿ ಅನೇಕ ಬಗೆಗಳಿದ್ದಾವೆ. ಈ ಎಲ್ಲಾ ಬಗೆಯ ಅಸಮಾನತೆಗಳೊಳಗೂ ಲಿಂಗ ಸಂಬಂಧಿ ಅಸಮಾನತೆಯ ಎಳೆಗಳೀರುತ್ತವೆ. ಅಂದ ಮೇಲೆ ಲಿಂಗ ಸಂಬಂಧಿ ಅಸಮಾನತೆಯನ್ನು ವಿರೋಧಿಸುವುದೆಂದರೆ ಇತರ ಬಗೆಯ ಅಸಮಾನತೆಗಳನ್ನು ವಿರೋಧಿಸುವುದೆಂದೇ ಅರ್ಥ. ಜನಾಂಗ ಸಂಬಂಧಿ, ವರ್ಗ ಸಂಬಂಧಿ, ಲಿಂಗ ಸಂಬಂಧಿ ಮತ್ತು ರಾಷ್ಟ್ರ ಸಂಬಂಧಿ ಅಧೀನತೆ, ಅಸಮಾನತೆಗಳು ವಿಶ್ವದ ಬಡ ಮಹಿಳೆಯರಲ್ಲಿ ಘನೀಭವಿಸಿರುವುದನ್ನು ಕಾಣಬಹುದು.

ಲಿಂಗ ಅಸಮಾನತೆ ಅಥವಾ ಲಿಂಗ ಸಂವೇದಿ ಅಭಿವೃದ್ಧಿ ಮೀಮಾಂಸೆ ಎನ್ನುವುದು ಕೇವಲ ಮಹಿಳೆಯರಿಗೆ ಮಾತ್ರ ಸಂಬಂಧಿಸಿದ್ದು ಎಂಬ ತಪ್ಪು ಅಭಿಪ್ರಾಯ ಮೂಡುವ ಸಾಧ್ಯತೆ ಇದೆ. ಆದರೆ ಇಂತಹ ಮಾತುಗಳಲ್ಲಿ ಹುರುಳಿಲ್ಲ.

'ಅಮರ್ತ್ಯಸೇನ್'ರು ಹೇಳುವ ಮಾತುಗಳಿವು.

''The Emancipation of women is an integral part of social progress. not just women issue.''

ಇದೇ ಸಂಗತಿಯನ್ನು ಕುರಿತಂತೆ 'ರಜಸಕೋಧಾರಿ' ಹೇಳುವ ಮಾತುಗಳಿವು.

''The feminist input serve not just women but also men. there is a limiting relationship between feminist values and being a women.''

೧೯೯೫ರ ಮಾನವ ಅಭಿವೃದ್ಧಿ ವರದಿಯು ಈ ವಿಷಯವನ್ನು ಕುರಿತಂತೆ ಎಚ್ಚರಿಕೆ ಮಾತೊಂದನ್ನು ಹೇಳಿದೆ.''''Development is not engender in endangesed''(ಉಲ್ಲೇಖ: HDI-1995)

೨.೩ ಅಭಿವೃದ್ಧಿ ಸಿದ್ಧಾಂತಗಳು ಮತ್ತು ಚಾರಿತ್ರಿಕ ಹಿನ್ನೆಲೆ

''ಎಲ್ಲಾ ಮಹಿಳೆಯರು ಬಡವರಲ್ಲ, ಅವಲಂಬಿಗಳಲ್ಲ, ಎಲ್ಲ ಅವಲಂಬಿತ ಗುಂಪುಗಳು ಮಹಿಳೆಯರಲ್ಲ ಆದರೆ ಎಲ್ಲಾ ಮಹಿಳಾ ಗುಂಪುಗಳು ಲಿಂಗ ತಾರತಮ್ಯಕ್ಕೊಳಗಾಗಿವೆ.'' ಜಗತ್ತಿನ ಒಟ್ಟು ಕಾರ್ಯಾವಧಿಯಲ್ಲಿ ಶೇ.೬೭ ಅವಧಿಯಷ್ಟು ಮಹಿಳೆಯರು ಕಾರ್ಯ ನಿರ್ವಹಿಸುತ್ತಿದ್ದಾರೆ.[೨] ದುರಂತವೆಂದರೆ ಮೂವರು ಮಹಿಳೆಯರಲ್ಲಿ ಒಬ್ಬ ಮಹಿಳೆಯ ಅನಕ್ಷರ ಸ್ಥಳಾಗಿದ್ದಾಳೆ. ಇದಕ್ಕೆ ಹಲವಾರು ನಿದರ್ಶನಗಳಿವೆ. ಒಟ್ಟಿನಲ್ಲಿ ಸಂಪೂರ್ಣ ಸಾಮಾಜಿಕ ಸಂರಚನೆ ಮತ್ತು ವ್ಯವಸ್ಥೆ ಸಂಪೂರ್ಣವಾಗಿ ಲಿಂಗ ಅಸಮಾನತೆಯ ಮೌಲ್ಯಗಳಿಂದ ಮುಚ್ಚಿ ಹೋಗಿದೆ. ಅದನ್ನು ಸ್ತ್ರೀವಾದ ಅಧ್ಯಯನವು ಸ್ವಲ್ಪ ಸಡಿಲಗೊಳಿಸುತ್ತಾ ಬಂದಿದೆ, ಬರುತ್ತಿದೆ. ಸಮಾಜದಲ್ಲಿ ಸ್ತ್ರೀವಾದವು ಮಹಿಳಾ ಗುಂಪುಗಳನ್ನು ಪ್ರಮುಖವಾಗಿ ಗುರ್ತಿಸಿ ಅವರಲ್ಲಿ ಇರುವ ಭಿನ್ನ ಅರ್ಥ, ನಂಬಿಕೆ, ಸಂಪ್ರದಾಯ, ರೂಢಿ, ಮೌಲ್ಯಗಳನ್ನು ಗುರ್ತಿಸಿ ಅಲ್ಲಿನ ನ್ಯೂನತೆಗಳನ್ನು ಸರಿಪಡಿಸಿ ಸಮೃದ್ಧ ಸಮಾಜ ಕಟ್ಟುವ ನೆಲೆಯಲ್ಲಿ ಸಾಗುತ್ತಿದೆ. ಇದಕ್ಕ ಮುಖ್ಯ ಕಾರಣವೆಂದರೆ ನ್ಯೂನತೆಗಳನ್ನು ಒಳಗೊಂಡಿರುವುದಕ್ಕಾಗಿಯೇ ಸಮಾಜದಲ್ಲಿನ ಇತರ ಮೌಲ್ಯಗಳು ಕೂಡ ರೂಪುಗೊಳ್ಳುವಂತಾಗಿದೆ. ಅವುಗಳಲ್ಲಿ ಸಾಮಾಜಿಕ ಅಭಿವೃದ್ಧಿಯ ಸೈದ್ಧಾಂತಿಕ ಚೌಕಟ್ಟು, ಶೈಕ್ಷಣಿಕ, ಸಾಮಾಜಿಕ ಸಂಸ್ಥೆಗಳು, ಯೋಜನೆಗಳು ಪ್ರಮುಖವಾಗಿವೆ. ಇಲ್ಲಿ ಸಮಾಜ, ಸಾಮಾಜಿಕ ಮೌಲ್ಯಗಳು, ಆಚರಣೆಗಳು ನ್ಯಾಯ-ಹಕ್ಕು ಬಾಧ್ಯತೆಗಳೆಲ್ಲವೂ ಕೂಡ ಲಿಂಗತ್ವ ನೆಲೆಯಲ್ಲಿ ಸಂರಚಿತಗೊಂಡಿರುವಂತದ್ದೆಂಬ ಅನುಭವಕ್ಕೆ ಬರುತ್ತದೆ. ಅದಕ್ಕೆ ನಿದರ್ಶನವೆಂಬಂತೆ ಸ್ತ್ರೀವಾದದ ಹುಟ್ಟು, ಹೋರಾಟ, ಫಲಿತಾಂಶಗಳೇ ಸಾಕು. ಈ ಎಲ್ಲಾ ಸಮಸ್ಯೆಗಳು ಕೇವಲ ಒಂದೇ ವ್ಯತ್ಯಾಸದ ಅಡಿಯಲ್ಲಿ ರೂಪು ತಳೆದು ಬೆಳೆದು ಬಂದಿರುವಂಥದ್ದು. 'ಲಿಂಗತ್ವ'ದ ದೆಸೆಯಿಂದ ಲಿಂಗ ಅಸಮಾನತೆ ಎನ್ನುವಂತದ್ದು ಇಂದು ಪ್ರತಿ ಹಂತದಲ್ಲೂ, ಪ್ರತಿ ಕ್ಷಣದಲ್ಲೂ ಮಹಿಳೆಯರನ್ನು ಗುರಿಮಾಡುತ್ತಿದೆ. ಅಸಮಾನತೆಯನ್ನು ಹುಟ್ಟು ಹಾಕುತ್ತಿದೆ. ಇದರ ಪರಿಣಾಮವಾಗಿ ಇಂದು ಲಿಂಗ ಅಸಮಾನತೆ ಎನ್ನುವುದು ಒಂದು ಸೋಂಕಿನಂತೆ ಹರಡುತ್ತಿದೆ. ಸರ್ಕಾರವು ಎಚ್ಚೆತ್ತುಕೊಂಡು ಇಂತಹ ಸಮಸ್ಯೆಗಳನ್ನು ಗಂಭೀರವಾಗಿ ಗುರ್ತಿಸಿ

ಯೋಜನೆಗಳಲ್ಲಿ ಕಾರ್ಯತಂತ್ರಗಳಲ್ಲಿ, ಅಭಿವೃದ್ಧಿ ಸಿದ್ಧಾಂತಗಳಲ್ಲಿ ಮಹಿಳಾ ಪರ ವಿಶೇಷ ಕಾಳಜಿ ವಹಿಸಿ ಅವರ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಇನ್ನೂ ಸೂಕ್ಷ್ಮವಾಗಿ ಸ್ತ್ರೀವಾದಿ ಸೈದ್ಧಾಂತಿಕತೆಯನ್ನು ಅಳವಡಿಸಿಕೊಂಡು ಲಿಂಗಸೂಕ್ಷ್ಮನೆಲೆಯಲ್ಲಿ ರೂಪಿಸಬೇಕಾಗಿದೆ.

''ಲಿಂಗ ಅಸಮಾನತೆ'' ಎಂದಾಕ್ಷಣ ಅಲ್ಲಿನ ಮೂಲ ವ್ಯಕ್ತಿ ''ಮಹಿಳೆ''ಯಾಗಿರುತ್ತಾಳೆ ಎಂದರೆ ಪುರುಷರ ಶೋಷಣೆ ಎಂದು ಯಾರೂ ತಿಳಿಯುವುದಿಲ್ಲ. ಅದು ''ಮಹಿಳಾ ಶೋಷಣೆ'' ಎಂದೇ ಪ್ರಚಲಿತವಾಗಿದೆ. ಅಷ್ಟರ ಮಟ್ಟಿಗೆ ಮಹಿಳೆಯರು ಶೋಷಣೆಗೆ ಒಳಗಾಗುತ್ತಿದ್ದಾರೆಂದು ಅರ್ಥ. ಮುಖ್ಯವಾಗಿ ಲಿಂಗ ಅಸಮಾನತೆ ಎನ್ನುವಂತದ್ದು ದೈಹಿಕ ಭಿನ್ನತೆಯಿಂದ ಬೆಳೆದು ಬಂದದ್ದಲ್ಲ, ದೈಹಿಕ ಬದಲಾವಣೆಯನ್ನು ಕಾರಣವನ್ನಾಗಿಟ್ಟುಕೊಂಡು ಸಾಮಾಜಿಕ ಭಿನ್ನತೆಯನ್ನು ಜಾರಿಗೆ ತಂದಿರುವುದರ ಮೂಲಕ ಬೆಳಕಿಗೆ ಬಂದಿದೆ. ಕೆಲವು ಪ್ರಮುಖ ಅಂಶಗಳನ್ನು ಜಾರಿಗೆ ತರುವುದರ ಮೂಲಕ ಇದನ್ನು ಬದಲಾಯಿಸಲು ಸಾಧ್ಯ. ಪರಿಪೂರ್ಣತೆಯ ನಿಟ್ಟಿನಲ್ಲಿ ನ್ಯಾಯ ಬದ್ಧವಾಗಿ, ಸಮಾಜ ಸ್ಥಾನ-ಮಾನ, ಸಮಾನ ನ್ಯಾಯ, ಸಮಾನ ಅವಕಾಶ, ಹಕ್ಕು ಬಾಧ್ಯತೆಗಳ ಬಳಕೆ ಇತ್ಯಾದಿಗಳನ್ನು ಸಮಾನವಾಗಿ ಸಮಾಜದಲ್ಲಿ ಸಮರ್ಥವಾಗಿ ಜಾರಿಗೆ ತರುವುದರ ಮೂಲಕ ಸಾಧ್ಯವಾಗುವುದು.

ಸೂಕ್ಷ್ಮಾತಿ ಸೂಕ್ಷ್ಮ ಸಮಸ್ಯೆಯಾದ ಲಿಂಗ ಅಸಮಾನತೆ ಎನ್ನುವುದು ತುಂಬಾ ಪರಿಣಾಮಕಾರಿಯಾದಂತಹ ಸಮಸ್ಯೆಗಳನ್ನು ಹುಟ್ಟು ಹಾಕುತ್ತಿದೆ. ಅದಕ್ಕೆ ನಿದರ್ಶನವೆಂದರೆ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದಾರೆ ಅವರಲ್ಲಿ ಶೇ.೨/೩ರಷ್ಟು ಮಂದಿ ಕೆಲಸವನ್ನು ನಿಭಾಯಿಸುತ್ತಿದ್ದಾರೆ. ಆದರೂ ಸಹ ರಾಷ್ಟ್ರೀಯ ಆದಾಯದಲ್ಲಿ ಶೇ.೧/೧೦ರಷ್ಟು ಮಾತ್ರ ಮಹಿಳೆಯರು ಗುರ್ತಿಸಿಕೊಳ್ಳುತ್ತಿದ್ದಾರೆ./ಜಗತ್ತಿನಲ್ಲಿ ಶೇ.೧/೪ ಭಾಗದಷ್ಟು ಕುಟುಂಬಗಳು ಮಹಿಳೆಯರ ಅಧಿಕಾರ/ ಒಡೆತನದಲ್ಲಿವೆ. ಭಾರತ ದೇಶವು ಪುರುಷ ಪ್ರಧಾನ ಸಮಾಜ ಆದ್ದರಿಂದಾಗಿ ಲಿಂಗ ಅಸಮಾನತೆಯನ್ನು ಅದಕ್ಕೆ ಪೂರಕವಾಗಿ ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ರೀತಿಯ ಅಸಮಾನತೆಗಳ ಮಧ್ಯೆ ಹೆಣ್ಣು ತನ್ನ ಹುಟ್ಟಿನಿಂದ ಸಾವಿನ ತನಕ ಹಲವಾರು ಅಸಮಾನತೆಗಳನ್ನು ಎದುರಿಸಬೇಕಾದ ಪರಿಸ್ಥಿತಿ ಉಂಟಾಗಿವೆ.

ಮಹಿಳೆಯರು ಸಾಮಾನ್ಯವಾಗಿ ಈ ಕೆಳಕಂಡ ಅಸಮಾನತೆಗಳನ್ನು ಎದುರಿಸುತ್ತಾರೆ.

* ಲಿಂಗ ಅಸಮಾನತೆ ಮತ್ತು ಲಿಂಗತಾರತಮ್ಯ
* ಲಿಂಗಾನುಪಾತ
* ಹೆಣ್ಣು ಶಿಶು ಹತ್ಯೆ ಮತ್ತು ಭ್ರೂಣ ಹತ್ಯೆ.

* ಅತ್ಯಾಚಾರ
* ಹೆಣ್ಣು ಮಕ್ಕಳ ಮಾರಾಟ
* ಪೌಷ್ಠಿಕಾಮಂಶದ ಕೊರತೆ
* ಅಕ್ಷರತೆ ಮತ್ತು ಉನ್ನತ ಶಿಕ್ಷಣಕ್ಕೆ ಆದ್ಯತೆ ನೀಡದಿರುವುದು.
* ಉದ್ಯೋಗ ಅವಕಾಶಗಳ ಬಳಕೆಗೆ ಅನಾನುಕೂಲತೆ
* ಸುರಕ್ಷತೆಯ ಕೊರತೆ
* ಹೆಚ್ಚಿನ ಒತ್ತಡದ/ಅವಧಿಯ ಕೆಲಸ
* ದ್ವಿವಿಧ ಜವಾಬ್ದಾರಿಗಳಲ್ಲಿನ ದ್ವಂದ್ವತೆ
* ವೇಶ್ಯಾವಾಟಿಕೆ
* ವರದಕ್ಷಿಣೆ ಕಿರುಕುಳ, ವರದಕ್ಷಿಣೆ ಸಾವು
* ವಿವಾಹ ವಿಚ್ಛೇದನ
* ಕೌಟುಂಬಿಕ ದೌರ್ಜನ್ಯ ಹಿಂಸೆ
* ಕಾರ್ಯಕ್ಷೇತ್ರದಲ್ಲಿನ ಹಿಂಸೆ, ಲೈಂಗಿಕ ಕಿರುಕುಳ, ಮಾನಸಿಕ ಒತ್ತಡ ಇತ್ಯಾದಿ.

ಮೇಲ್ಕಂಡ ಎಲ್ಲಾ ಸಮಸ್ಯೆಗಳು ಮಹಿಳೆಯರ ಶೋಷಣೆ ಮತ್ತು ಅಸಮಾನತೆಗಳ ಮೂಲ ಮತ್ತು ಮುಖ್ಯ ಸಮಸ್ಯೆಗಳಾಗಿವೆ. ಈ ಎಲ್ಲ ಸಮಸ್ಯೆಗಳ ಮೂಲ ಕಾರಣ ಲಿಂಗ ಅಸಮಾನತೆ. ಈ ಲಿಂಗ ಅಸಮಾನತೆಗಳನ್ನು ಹೋಗಲಾಡಿಸಲು ಸ್ತ್ರೀವಾದ, ಮಹಿಳಾ ಅಧ್ಯಯನ, ಮಹಿಳಾ ಸಂಬಂಧಿತ ಚಿಂತನೆಗಳು, ಸಾಮಾಜಿಕವಾಗಿ -ಶೈಕ್ಷಣಿಕವಾಗಿ ಸೈದ್ಧಾಂತಿಕ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತವೆ. ಸರ್ಕಾರವೂ ಕೂಡ ತನ್ನ ಯೋಜನೆಗಳ ಕಾರ್ಯಕ್ರಮಗಳ ಮೂಲಕ ಲಿಂಗ ಅಸಮಾನತೆಯ ವಿರುದ್ಧ ಹೋರಾಡುತ್ತಿವೆ. ಸರ್ಕಾರವೂ ಸಹ ತನ್ನ ಅಭಿವೃದ್ಧಿ ಮಂತ್ರದಲ್ಲಿ ಮಹಿಳೆಯರ ಅಭಿವೃದ್ಧಿಗಾಗಿ ಪ್ರತ್ಯೇಕ ಹಾಗೂ ವಿಭಿನ್ನ ಸಿದ್ಧಾಂತವನ್ನು ಅಳವಡಿಸಿಕೊಂಡಿದೆ. ಆದರೂ ಪಿತೃ ಪ್ರಧಾನ ಮೌಲ್ಯಗಳು ಇನ್ನೂ ಮಹಿಳೆಯರ ಅಭಿವೃದ್ಧಿಯನ್ನು ತಡೆಹಿಡಿಯುತ್ತಿವೆ.

ಭಾರತ ಸರ್ಕಾರವು ಮಹಿಳೆಯರ ಅಭಿವೃದ್ಧಿಗಾಗಿ ಲಿಂಗ ಅಸಮಾನತೆಯನ್ನು ಹೋಗಲಾಡಿಸಲು ವಿಶಿಷ್ಟ ಯೋಜನೆಗಳನ್ನು ಹಮ್ಮಿಕೊಂಡಿದೆ. ಆರನೇ ಪಂಚವಾರ್ಷಿಕ ಯೋಜನೆಯ ನಂತರ ಅಭಿವೃದ್ಧಿ ಪಥವು ತನ್ನ ಪಥವನ್ನು ವಿಭಿನ್ನವಾಗಿ ರೂಪಿಸಿ ಬೆಳೆಸಿಕೊಂಡು ಬಂದಿದೆ. ಮೇಲೆ ತಿಳಿಸಿದ ಸಾಮಾಜಿಕ ಲಿಂಗ ಅಸಮಾನತೆಯ ಸಮಸ್ಯೆಯ ಮೂಲ ಏನು? ಕಾರಣಗಳೇನು? ಎಂಬುದನ್ನು ಅರಿತು, ಅಭ್ಯಸಿಸಿ ನಂತರ ಅವರ ಪರಿಹಾರೋಪಾಯಕ್ಕೆ ಹಾಗೂ ಮಹಿಳಾ ಸಮಸ್ಯೆಗಳನ್ನು ಹೋಗಲಾಡಿಸಲು ಯೋಜನೆಗಳನ್ನು ಪ್ರಮುಖ ಅಸ್ತ್ರವಾಗಿ ಬಳಸಿ ಜಾರಿಗೊಳ್ಳುವಂತೆ ಮಾಡಿ ಯಶಸ್ವಿಯಾಗುವಂತೆ ಶ್ರಮಿಸಲಾಗುತ್ತದೆ.

ಚಾರಿತ್ರಿಕವಾಗಿ ಅಭಿವೃದ್ಧಿಯ ಸೈದ್ಧಾಂತಿಕತೆ ಬೆಳೆದು ಬಂದ ಬಗೆ

ಅಭಿವೃದ್ಧಿ ಸಿದ್ಧಾಂತಗಳನ್ನು ಚಾರಿತ್ರಿಕ ಹಿನ್ನಲೆಯಲ್ಲಿ ವಿಶ್ಲೇಷಿಸಿದಾಗ ಎರಡು ಪ್ರಮುಖ ಅಂಶಗಳು ತಿಳಿದುಬರುತ್ತವೆ. ಅಭಿವೃದ್ಧಿ ತತ್ವಗಳು ಎರಡು ವಿಧದಲ್ಲಿ ಬೆಳೆದು ಬಂದಿದೆ. ಅವುಗಳೆಂದರೆ-

೧. ಉದಾರವಾದಿ ಪ್ರಜಾಪ್ರಭುತ್ವವಾದಿ ಸಿದ್ಧಾಂತ

೨. ತೀವ್ರವಾದಿ ಪ್ರಜಾಪ್ರಭುತ್ವವಾದಿ ಸಿದ್ಧಾಂತ[೩]

ಈ ಎರಡು ವಿಧದ ಸಿದ್ಧಾಂತಗಳು ವಿಭಿನ್ನವಾದವನ್ನು ಮಂಡಿಸುತ್ತದೆ.

ಮೊದಲನೆಯದಾಗಿ ಉದಾರವಾದಿ ಸಿದ್ಧಾಂತದ ಪ್ರಕಾರ ಶೀಘ್ರ ಬಬದಲಾವಣೆಯ ಮೂಲಕ ಅಭಿವೃದ್ಧಿ ಸಾಧಿಸುವುದಾಗಿದೆ. ಇಲ್ಲಿ ಪ್ರಮುಖ ಸಾಧನೆಗಳೆಂದರೆ 'ಮಾನವ ಸಂಪನ್ಮೂಲ' ಸಮಾಜದ ಸರ್ವತೋಮುಖ ಅಭಿವೃದ್ಧಿಯನ್ನು ಮಾನವ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಶೀಘ್ರ ಬದಲಾವಣೆ ತರುವ ಪ್ರಮೇಯದಲ್ಲಿ ನಿರಂತರತೆಯನ್ನು ಕಳೆದುಕೊಳ್ಳುತ್ತವೆ. ಆದರೆ ಉದಾರವಾದಿ ಪ್ರಜಾಪ್ರಭುತ್ವ ಸಿದ್ಧಾಂತವು ಶೀಘ್ರ ಬದಲಾವಣೆಗಿಂತ ಅಖಂಡತೆಯನ್ನು ಅಭಿವೃದ್ಧಿಯ ಮೂಲ ಮಂತ್ರವಾಗಿಸಿದೆ. ಸಮಾಜದಲ್ಲಿನ ಬದಲಾವಣೆಯನ್ನು ನಿರಂತರವಾಗಿ ಬದಲಾಯಿಸಿ ಶಾಶ್ವತವಾಗಿ ಬೆಳೆಸುವುದರ ಮೂಲಕ ವಿಕಸನವಾದ ಸಿದ್ಧಾಂತ ಬೆಳೆದು ಬಂದಿತು. ಆರಂಭಿಕ ಅಭಿವೃದ್ಧಿ ಸಿದ್ಧಾಂತಗಳ ಚೌಕಟ್ಟಿನಲ್ಲಿ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸಿದ್ಧಾಂತಗಳು ಬೆಳೆದು ಬಂದವು. ಈ ಮೂಲಕ ಸಾಮಾಜಿಕ ಚೌಕಟ್ಟಿನಲ್ಲಿ ಬೆಳೆದು ಬಂದಂಥ ಅಭಿವೃದ್ಧಿ ಚೌಕಟ್ಟು, ಶೈಕ್ಷಣಿಕ ಚೌಕಟ್ಟಿನಲ್ಲಿಯೇ ಬೆಳೆದು ಬಂದಿತು. ಇದು ಹೊಸ ಕ್ರಾಂತಿಯನ್ನೇ ಹುಟ್ಟು ಹಾಕಿದವು. ಪೂರ್ವ ರಾಷ್ಟ್ರಗಳು ಅಭಿವೃದ್ಧಿ ಮಂತ್ರಗಳನ್ನು ಆರ್ಥಿಕ ಚೌಕಟ್ಟಿನಲ್ಲಿ ಬೆಳೆಸಲಾರಂಭಿಸಿದರು. ಇಲಿ ಮಾನವ ಸಂಪನ್ಮೂಲ, ಆರ್ಥಿಕ ವ್ಯವಹಾರ, ಇವುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಯಿತು. ಇಲ್ಲಿ ಆರ್ಥಿಕತೆಯೂ ಬೆಳೆದು ಬಂದಂತೆ ಅಧೀನತೆ, ಶ್ರೇಷ್ಟತೆಗಳ ವ್ಯತ್ಯಾಸಗಳು ಮೊಟಕುಗೊಂಡವು.

ಅಭಿವೃದ್ಧಿ ಸಿದ್ಧಾಂತಗಳು ಸಾಮಾಜಿಕ ಬದಲಾವಣೆಯ ಮೂಲದಿಂದ ಆರ್ಥಿಕ ಚೌಕಟ್ಟನ್ನು ಸಂರಚಿಸಿ ಬೆಳೆದು ಬಂದವು. ತದನಂತರ ಅವುಗಳು ನೇರವಾಗಿ ಆರ್ಥಿಕತೆಗೆ ಬೆಸೆದುಕೊಂಡರೂ ಕೂಡ ಸಾಮಾಜಿಕ ಕ್ಷೇತ್ರದಲ್ಲಿನ ಅಸಮಾನತೆಯ ಕುರುಹುಗಳನ್ನು ಪರಿಗಣಿಸಿಯೇ ಬದಲಾವಣೆಯನ್ನು ತರಲು ಪ್ರಯತ್ನಿಸುತ್ತಿದೆ. ಇಲ್ಲಿ ದುರಂತವೆಂದರೆ ಪಿತೃ ಪ್ರಧಾನ ಮೌಲ್ಯಗಳ ಪ್ರಭಾವ ಮೂಲದಿಂದಲೇ ಬೆಳೆದು ಬಂದಿರುವಂತದ್ದಾಗಿದೆ.

೧೮ನೇ ಶತಮಾನದ ಸಂದರ್ಭದಲ್ಲಿ ಅಭಿವೃದ್ಧಿ ಪಥವನ್ನು ಒಂದು ಬದಲಾವಣೆಯ ಹಂತವಾಗಿ ಗುರ್ತಿಸಲಾಗುತ್ತದೆ. ಶೈಕ್ಷಣಿಕವಾಗಿ, ಸೈದ್ಧಾಂತಿಕವಾಗಿ 'ಅಭಿವೃದ್ಧಿ'ಯನ್ನು ಮಾನವ

ಕುಲದ ಅನುಭವ, ಅವಲೋಕನ, ವಿಚಾರಧಾರೆ, ವೈಚಾರಿಕತೆಯ ನೆಲೆಯಲ್ಲಿ ಕಟ್ಟಲಾಯಿತು. ಅನುಭವವೆಂದರೆ ವೈಜ್ಞಾನಿಕ ತರ್ಕ, ಜ್ಞಾನ ಎಂದು ಗುರುತಿಸಿಕೊಳ್ಳಲಾಯಿತು.

'ಡೆಸ್ಕಾಟರ್ಸ್ '(Descaters)ರವರ ಪ್ರಕಾರ ''ಅಭಿವೃದ್ಧಿ ಎಂದರೆ ಮಾನವರ ಅನುಭವ, ತರ್ಕ, ಆಲೋಚನಾ ಶೀಲತೆಯ ಅನ್ವೇಷಣಾ ಶೀಲತೆಯ ಶಿಸ್ತು ಬದ್ದ ಸಿದ್ಧಾಂತ'' ಎಂದು ಹೇಳುತ್ತಾರೆ. ಈ ವ್ಯಕ್ತಿ ಮೊದಲ ಬಾರಿಗೆ ಶ್ರಮ ವಿಭಜನೆಯ ಅರ್ಥವನ್ನು ಮನುಕುಲದ ಮುಂದಿಡುತ್ತಾನೆ. ಅಧೀನತೆ-ಶ್ರೇಷ್ಟತೆಯ ಛಾಯೆ ಈ ಶ್ರಮ-ವಿಭಜನೆಯ ಮೂಲಕ ಬೆಳೆಯುತ್ತದೆ. ಇದರ ಅರಿವು-ತರ್ಕ ಜನರಲ್ಲಿ ಬೆಳೆಯುತ್ತಿಲ್ಲ, ಅನುಭವ ಗೌಣವಾಗುತ್ತಿದೆ ಎಂದು ತೋರಿಸಿಕೊಟ್ಟರು. ಇಲ್ಲಿ ಮಹಿಳೆಯರ ಅನುಭವವೂ ಗೌಣವಾಗಿಯೇ ಇತ್ತು.[೪]

೧೮ನೇ ಶತಮಾನದ ಮಧ್ಯಭಾಗದಲ್ಲಿ ಸಾಂಪ್ರದಾಯಿಕ ಮೂಢನಂಬಿಕೆಗಳು, ಮೌಲ್ಯಗಳನ್ನು ಮೀರಿ ಹೊಸ ಹೊಸ ಆವಿಷ್ಕಾರಗಳು ಹುಟ್ಟಲಾರಂಭಿಸಿದವು. ವೈಜ್ಞಾನಿಕ ಅವಿಷ್ಕಾರದ ಸಂದರ್ಭದಲ್ಲಿ ಬ್ರಿಟೀಷರ ಶ್ರೀಮಂತ ರಾಷ್ಟ್ರಗಳು ಆರ್ಥಿಕ ಅಭಿವೃದ್ಧಿಗೆ ಒತ್ತು ಕೊಟ್ಟವು. ಅದಕ್ಕೆ ಪೂರಕವಾಗಿ ಬ್ಯಾಂಕುಗಳು ಆರಂಭಗೊಂಡವು. ಇದರೊಂದಿಗೆ ಬಂಡವಾಳ ಶಾಹಿತ್ವವು ಆರಂಭಗೊಂಡಿತು. ಶ್ರೀಮಂತ ಕುಟುಂಬಗಳ ಬಂಡವಾಳ ಶಾಹಿಗಳಾದರೆ, ಮಧ್ಯಮ ವರ್ಗಗಳು ಅಧೀನತೆಗೆ ಗುರಿಯಾದವು. ಇಲ್ಲಿ ಮಧ್ಯಮ ವರ್ಗದ ಗುಂಪುಗಳು ದುರ್ಬಲತೆಯಿಂದಾಗಿ ಅಧಿಕಾರಿ ಶಾಹಿತ್ವದ ವಿರುದ್ಧ ಪ್ರಶ್ನೆಗಳು ಹುಟ್ಟಲಾರಂಭಿಸಿದವು. ಅಧಿಕಾರ ಶಾಹಿತ್ವ, ಬಂಡವಾಳ ಶಾಹಿತ್ವದ ಜೊತೆಯಲ್ಲಿ ಅಧೀನತೆಯ ಪ್ರಶ್ನೆಗಳು, ಅಧಿಕಾರ ಶಾಹಿತ್ವದ ಅಧಿಕಾರ ಶಕ್ತಿ-ದುರ್ಬಲತೆಯ ಗಂಟನ್ನು ಹುಟ್ಟು ಹಾಕಿದವು. ಇಲ್ಲಿ ವರ್ಗ ಅಸಮಾನತೆಯು ಬೆಳೆದು ಬಂದಿತು. ಈ ಮೂಲಕ ಸಮಾಜದಲ್ಲಿನ ಆರ್ಥಿಕ ಬದಲಾವಣೆ, ಮಾನವರ ನಡುವಿನ ಅಧಿಕಾರ ಶಕ್ತಿ ವ್ಯವಸ್ಥೆಗಳಲ್ಲಿ ಬದಲಾವಣೆಗಳನ್ನು ತಂದಿತು. ಇಲ್ಲಿನ ಅಸಮಾನತೆಯಲ್ಲಿಯೂ ಸಹ ಲಿಂಗ ಅಸಮಾನತೆ ಅದೃಶ್ಯತೆಯಿಂದ ಬೆಳೆದು ಬಂದಿದೆ. ಈ ಮೂಲಕ ಇಲ್ಲಿಯೂ ಮಹಿಳೆಯರ ಅಧೀನತೆ ಬೆಳೆದು ಬಂದಿತು.

ಅಧಿಕಾರ ಶಾಹಿತ್ವದ ಫಲವಾಗಿ ಸಮಾಜದಲ್ಲಿ ಆಳುವವರು-ದಬ್ಬಾಳಿಕೆಗೆ ಒಳಗಾಗುವವರ ಗುಂಪು ಬೆಳೆದು ಬಂದಿತು. ಈ ಅಭಿವೃದ್ಧಿ ಬದಲಾವಣೆಯು ರಾಜಕೀಯ ಬದಲಾವಣೆಯನ್ನು ತಂದೊಡ್ಡಿತು. ಸಾಮಾಜಿಕ ನೀತಿ-ನಿಯಮಾವಳಿಗಳು ಮೂಲಭೂತವಾಗಿ ಸಮುದಾಯವನ್ನು ಸಂರಕ್ಷಿಸುವ, ಬೆಳೆಸುವ ನೀತಿಯಲ್ಲಿ ರೂಪುಗೊಂಡರೂ ಸಹ ಅಸಮಾಧಾನ, ಅಸಮಾನತೆಯ ಗುಂಪುಗಳು ಹುಟ್ಟಿಕೊಂಡವು. ಇಲ್ಲಿ ಪ್ರಜಾಸತ್ತಾತ್ಮಕ ಗಣರಾಜ್ಯ ನಿಯಮದ ಪ್ರಕಾರ ನಾಗರೀಕ ಹಕ್ಕು ಮತ್ತು ಸಮಾನತೆಯನ್ನು ಕಟ್ಟುವುದು ಇಲ್ಲಿ ಪರಿಪೂರ್ಣವಾಗಲಿಲ್ಲ ಬದಲಾಗಿ ಇದು ಪ್ರೆಂಚ್ ಕ್ರಾಂತಿಗೆ ದಾರಿಮಾಡಿಕೊಟ್ಟಿತು. ಈ ಕ್ರಾಂತಿಗಳು ಮಹಿಳೆಯರ ಬದುಕಿನ ದಿಕ್ಕನ್ನೇ

ಬದಲಾಯಿಸಿದವು. ಈ ರೀತಿಯ ಅಸಮಾಧಾನ-ಅಸಮಾನತೆಗಳು ಅವರಲ್ಲಿಯೂ ಬೆಳೆಯುತ್ತಿದೆ ಎಂಬುದನ್ನು ಅರಿತ ಮಹಿಳೆಯರು ತಮ್ಮ ಅಸಮಾನತೆಯ ಬಿಂಬತೆಯನ್ನು ನಿಧಾನವಾಗಿ ಸಮಾಜದ ಮುಂದಿಡುತ್ತಾ ಹೋರಾಟಕ್ಕಿಳಿದರು. ಈ ಮೂಲಕ ಅಭಿವೃದ್ಧಿ ಪಥದಲ್ಲಿ ಶ್ರೇಷ್ಠತೆ-ಅಧೀನತೆ ಎನ್ನುವಂತದ್ದು ಶ್ರೇಣೀಕೃತ ವ್ಯವಸ್ಥೆಯಲ್ಲಿ ಬೆಳೆದು ಬಂದಿದೆ ಎಂಬುದನ್ನು ತಿಳಿಯಬಹುದು.

ಈ ಮೂಲಕ 'ಅಭಿವೃದ್ಧಿ' ಪರಿಕಲ್ಪನೆ ಚಾರಿತ್ರಿಕವಾಗಿ ಬೆಳೆದು ಬಂದಿದೆ. ಇಲ್ಲಿ ಶ್ರೇಣೀಕೃತ ವ್ಯವಸ್ಥೆ ಹುಟ್ಟಿದ ಅಂಶ ಹಾಗೂ ಅಲ್ಲಿನ ಅಸಮಾನತೆಗಳು ಯಾವ ರೀತಿ ಬೆಳೆದು ಬಂದಿದೆ ಎಂಬುದನ್ನು ತಿಳಿಯಬಹುದು. ಆರಂಭದಿಂದಲೂ ಲಿಂಗ ಅಸಮಾನತೆಯ ಕುರುಹನ್ನು ಹೊತ್ತು ತಂದ ಬದಲಾವಣೆಯ ಮಾರ್ಗ 'ಅಭಿವೃದ್ಧಿ' ಇಂದಿಗೂ ಮಹಿಳೆಯರ ಬದುಕಲ್ಲಿ ಅಸಮಾಧಾನವನ್ನುಂಟು ಮಾಡುತ್ತಿದೆ. ತಾತ್ವಿಕ ಚೌಕಟ್ಟಿನಲ್ಲಿ ಆಧುನಿಕ ಸಂದರ್ಭದಲ್ಲಿಯೂ ಸಹ ಸಂಪ್ರದಾಯಗಳ ಅಂಧಕಾರತ್ವದಲ್ಲಿ ಮಹಿಳೆಯರ ಬದುಕಿಗೆ ಶಕ್ತ, ಸಮಂಜಸವಾದ ಅರ್ಥವನ್ನು ತಂದುಕೊಡಲಾಗುತ್ತಿಲ್ಲ. ಆಧುನಿಕ, ಸೈದ್ಧಾಂತಿಕತೆಗಳಲ್ಲಿಯೂ ಸಹ ಮಹಿಳೆಯರು ಹೇಗೆ ಅದೃಶ್ಯರಾಗಿರುವರು ಎಂಬುದನ್ನು ಈ ಮುಂದೆ ನೋಡೋಣ.

೨.೪ ಆಧುನಿಕ ಆರ್ಥಿಕ ಅಬಿವೃದ್ದಿ ಸಿದ್ಧಾಂತಗಳು ಮತ್ತು ಮಹಿಳೆ

ಅಭಿವೃದ್ಧಿಯನ್ನು ಕುರಿತು ಸಿದ್ಧಾಂತಗಳು ಮಹಿಳೆಯರನ್ನು ಲಿಂಗ ಸಂಬಂಧಗಳನ್ನು ಹೇಗೆ ಪರಿಭಾವಿಸಿಕೊಂಡಿದೆ. ಹೇಗೆ ಅಂತರ್ಗತ ಮಾಡಿಕೊಂಡಿವೆ ಎಂಬ ಸಂಗತಿಗಳ ಅಧ್ಯಯನ ಅನುಸಂಧಾನದ ಒಂದು ಕುತೂಹಲಕಾರಿ ಪ್ರಯತ್ನವಾಗಿದೆ. ಮಹಿಳೆ ಮತ್ತು ಅಭಿವೃದ್ಧಿ ನಡುವಿನ ಸಂಬಂಧಗಳು ತುಂಬಾ ಸಂಕೀರ್ಣವಾಗಿದೆ. ಈ ಸಂಬಂಧ ಬಹುಮುಖಿಯಾಗಿದೆ. ಬಹು ಆಯಾಮಗಳನ್ನು ಹೊಂದಿದೆ. ಅಭಿವೃದ್ಧಿ ಕುರಿತ ಸಿದ್ಧಾಂತಗಳು 'ಲಿಂಗ ನಿರಪೇಕ್ಷ'ವೆಂದು ಹೇಳಲಾಗಿದೆ. ಇಂದು ಲಿಂಗ ನಿರ್ದಿಷ್ಟವೂ, ಲಿಂಗ ಸಂವೇದಿಯೂ ಆದ ಅಭಿವೃದ್ಧಿ ಸಿದ್ಧಾಂತಗಳು ರೂಪುಗೊಳ್ಳುತ್ತಿವೆ. ಪುರುಷಶಾಹಿ ಸ್ವರೂಪದಿಂದ ಕೂಡಿರುವ ಸಮಾಜವನ್ನು ಸುಧಾರಿಸಬೇಕು ಎಂಬ ನೆಲೆಯಿಂದ ಅದನ್ನು ಪರಿವರ್ತಿಸಬೇಕು ಎಂಬ ನೆಲೆಗೆ ಅಭಿವೃದ್ಧಿ ಕುರಿತ ಸಿದ್ಧಾಂತಗಳು ಸಾಗಿ ಬಂದಿವೆ. ಲಿಂಗ ಸಂಬಂಧಗಳ ವಿಷಯದಲ್ಲಿ 'ಸಹಕಾರಿ' ಧೋರಣೆಯ ನೆಲೆಯಿಂದ ಸಂಘರ್ಷವಾದಿ ನೆಲೆಗೆ ಅವು ಸಾಗಿ ಬಂದಿವೆ. ಬಂಡವಾಳ ಶಾಹಿಯನ್ನು ನಾಶಮಾಡಲು ಹುಟ್ಟಿಕೊಂಡ ಚಳುವಳಿ ಇಂದು ಅದರ ಜೊತೆಗೆ ಪುರುಷಶಾಹಿಯನ್ನು ನಾಶಮಾಡಬೇಕೆಂಬ ನೆಲೆಗೆ ಪಲ್ಲಟಗೊಂಡಿದೆ.

ಆಡಂ ಸ್ಮಿತ್(೧೭೭೬)ನ ಕಾಲದಿಂದ ಅಮರ್ತ್ಯಸೇನ್ ವರೆಗೆ ನಡೆದು ಬಂದ ಕಾಲಾವಧಿಯಲ್ಲಿ ಅಭಿವೃದ್ಧಿ ಕುರಿತ ಪರಿಭಾವನೆಯು ಅನೇಕ ಬಗೆಯ ಬದಲಾವಣೆಗಳಿಗೆ ಒಳಗಾಗಿದೆ. ಅಭಿವೃದ್ಧಿಯನ್ನು

ಮಾಪನ ಮಾಡಲು ಇರುವ ಏಕೈಕ ಸಾಧನ 'ಜಿ.ಡಿ.ಪಿ'. ಒಟ್ಟು ದೇಶೀಯ ಉತ್ಪನ್ನ ಎನ್ನುವ ಕಾಲ ಇಂದು ಉಳಿದಿಲ್ಲ. 'ಜಿಡಿಪಿ'ಗಿಂತ ವಿಶಾಲ ವ್ಯಾಪ್ತಿ ಭಿತ್ತಿಯುಳ್ಳ ಮಾನವ ಅಭಿವೃದ್ಧಿ ಸೂಚ್ಯಂಕ ಇಂದು ರೂಪುಗೊಂಡಿದೆ. ಮಹಿಳೆಯರನ್ನು ಒಳಗೂಡಿಸಿಕೊಂಡು ಅಭಿವೃದ್ಧಿಯನ್ನು ಮಾಪನ ಮಾಡುವ ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕವೆಂಬ ಸಾಧನವೊಂದು ರೂಪುಗೊಂಡಿದೆ. 'ವರಮಾನ'ವನ್ನು ಕೇಂದ್ರವಾಗಿಟ್ಟುಕೊಂಡಿದ್ದ ಅಭಿವೃದ್ಧಿ ಪರಿಭಾವನೆಗೆ ಪ್ರತಿಯಾಗಿ 'ಜನರನ್ನು' ಕೇಂದ್ರವನ್ನಾಗಿ ಮಾಡಿಕೊಂಡಿರುವ ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆ ಇಂದು ರೂಪುಗೊಂಡಿದೆ. ಅಭಿವೃದ್ಧಿಯಲ್ಲಿ ಮಹಿಳೆಯರು (WID) ಎಂಬ ನುಡಿಗಟ್ಟಿನ ಬದಲಾಗಿ ಮಹಿಳೆಯರ ನೆಲೆಯಿಂದ, ಅವರ ಸಂಘರ್ಷಣಾತ್ಮಕ ಹಿತಾಸಕ್ತಿಗಳ ನೆಲೆಯಿಂದ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳಬೇಕು ಎನ್ನುವ ಒತ್ತಡ ಇಂದು ನಿರ್ಮಾಣಗೊಂಡಿದೆ.

ಅಭಿವೃದ್ಧಿಯನ್ನು ಕುರಿತ ಸಿದ್ಧಾಂತಗಳನ್ನು ಸುಧಾರಣಾವಾದಿ ನೆಲೆಯಿಂದ ಆರಂಭದಲ್ಲಿ ಗುರ್ತಿಸಲಾಗುತ್ತಿತ್ತು. ಇಂದು ಅದು ಸಂಘರ್ಷವಾದಿ ಮುಖವನ್ನು ಪಡೆದುಕೊಂಡಿದೆ. ಮಹಿಳೆಯರ ಸಶಕ್ತೀಕರಣದ ಬಗ್ಗೆ ಮಾತನಾಡುವ ವಂದನಾ ಶಿವ(೧೯೮೮), ನೈಲಾ ಕಬೀರ್ (೧೯೯೭) ಮುಂತಾದವರು ಮಹಿಳೆಯರ ನೆಲೆಯಿಂದ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳಬೇಕು ಎಂಬ ವಿಚಾರವನ್ನು ಪ್ರಬಲವಾಗಿ ಮಂಡಿಸುತ್ತಿದ್ದಾರೆ. ಅಭಿವೃದ್ಧಿಯನ್ನು ಕುರಿತ ಸಿದ್ಧಾಂತಗಳಿಗೆ ಸಂಬಂಧಿಸಿದಂತೆ ಮಹಿಳೆಯರನ್ನು 'ಅಖಂಡ'ವಾಗಿ ಪರಿಭಾವಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಅವರನ್ನು ಜಾತಿ, ವರ್ಗ, ಪ್ರದೇಶ ಮುಂತಾದ ಖಂಡ ಸ್ವರೂಪ-ವಿಭಕ್ತಿ ಸ್ವರೂಪಿ ನೆಲೆಯಿಂದ ನೋಡಬೇಕು ಎಂಬುವಲ್ಲಿಗೆ ಇಂದು ಚರ್ಚೆ ಬೆಳೆದು ಬಂದಿದೆ. ''All women are women'' ಎನ್ನುವಲ್ಲಿಂದ ''A women is not only a women'' ಎನ್ನುವಲ್ಲಿಗೆ ಚರ್ಚೆ ಬೆಳೆದು ಬಂದಿದೆ.

ಅಭಿವೃದ್ಧಿ ಸಿದ್ಧಾಂತಗಳಲ್ಲಿ ''ಮಾರ್ಕ್ಸವಾದಿ ಅಭಿವೃದ್ಧಿ ಸಿದ್ಧಾಂತ'' ಮತ್ತು ''ಆಧುನಿಕ ಪಂಥದ ಅಭಿವೃದ್ಧಿ ಸಿದ್ಧಾಂತ''ಗಳು ಮುಖ್ಯವಾಗಿ ಗುರ್ತಿಸಿಕೊಂಡಿವೆ.[೬]

೨.೫ ಮಹಿಳಾ ಅಭಿವೃದ್ಧಿ ಸಿದ್ಧಾಂತಗಳು

೧೯೫೦-೬೦ರ ಸಂದರ್ಭದ ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಮಹಿಳೆಯರನ್ನು ಕಲ್ಯಾಣವಾದಿ ನೆಲೆಯಲ್ಲಿ ಗುರ್ತಿಸಲಾಗಿತ್ತು. ಈ ಸಂದರ್ಭದಲ್ಲಿ ಸ್ತ್ರೀವಾದ ಎನ್ನುವ ಪರಿಕಲ್ಪನೆ ಪರಿಚಿತವಾಗಿತ್ತು. ಮಹಿಳಾ ಹೋರಾಟಗಾರರು, ಸ್ತ್ರೀವಾದಿಗಳು, ಮಹಿಳಾ ಪರ ಚಿಂತಕರು ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಮಹಿಳಾ ಪರ ಚಿಂತನೆಗಳನ್ನು ಸೈದ್ಧಾಂತಿಕ ಚೌಕಟ್ಟಿನಲ್ಲಿ ರೂಪುಗೊಳ್ಳುವಂತೆ ಮಾಡಿದರು. ಇದಕ್ಕೆ ಪೂರಕವಾಗಿ ವಿಶ್ವಸಂಸ್ಥೆಯ ಸಲಹೆಯ ಮೇರೆಗೆ ಭಾರತ ಸರ್ಕಾರವು ''ಸಮಾನತೆಯೆಡೆಗೆ'' (Towards Equality) ಎಂಬ ವರದಿಯನ್ನು ಸಿದ್ಧಪಡಿಸಿತು.

ವಿಶ್ವದ ದೇಶಗಳಲ್ಲಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವ ಸೈದ್ಧಾಂತಿಕ ಚೌಕಟ್ಟು ರೂಪುಗೊಂಡಿತ್ತು. ಭಾರತದಲ್ಲಿಯೂ ೮೦ರ ಕಾಲದ ಹೊತ್ತಿಗೆ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಸೈದ್ಧಾಂತಿಕ ಚೌಕಟ್ಟಿನಲ್ಲಿ ಮಹಿಳಾ ವಿಶೇಷತೆಯನ್ನು ಅಳವಡಿಸಿಕೊಳ್ಳಲಾಗಿತ್ತು..

ಮಹಿಳಾ ಅಭಿವೃದ್ಧಿ ಪ್ರಕ್ರಿಯೆ

ಒಂದು ದೇಶ/ಪ್ರದೇಶದಲ್ಲಿ ಅಭಿವೃದ್ಧಿಯ ಮಹಿಳೆಯರಿಗೆ ಬದುಕಿನ ಸ್ಥಿತಿಗತಿಗಳನ್ನು ಉತ್ತಮಪಡಿಸಿದೆಯೋ ಅಥವಾ ಹಾನಿಗೊಳಪಡಿಸಿದೆಯೋ ಎಂಬುದರ ಬಗ್ಗೆ ಭಾರತದಲ್ಲಿ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ತೀವ್ರ ರೀತಿಯ ಚರ್ಚೆ ೧೯೭೦ರ ದಶಕದ ಪ್ರಾರಂಭದಲ್ಲಿ ನಡೆಯುತ್ತಾ ಬಂದಿದೆ. ಅಭಿವೃದ್ಧಿ ಪ್ರಕ್ರಿಯೆಯೂ ಮಹಿಳೆಯರ ಬದುಕಿನ ಸ್ಥಿತಿಗತಿಗಳನ್ನು ಹಾನಿಗೊಳಪಡಿಸಿದರೆ ಎಂಬ ಚರ್ಚೆಗೆ ಮೊದಲು ಚಾಲನೆ ನೀಡಿದವರು ಎಸ್ತರ್ ಬೋಸ್ ರಪ್ (೧೯೭೧) ಅಭಿವೃದ್ಧಿ ಪ್ರಕ್ರಿಯೆಯೂ ಮಹಿಳೆಯರ ಬದುಕಿನ ಸ್ಥಿತಿಗತಿಗಳ ಮೇಲೆ ಹಾನಿಕಾರ ಪರಿಣಾಮ ಉಂಟು ಮಾಡುತ್ತದೆ ಎಂಬುದಕ್ಕೆ ಅದರ ಲಿಂಗ ನಿರಪೇಕ್ಷ ಸ್ವರೂಪಕ್ಕಿಂತ ಬೇರಾವ ಪುರಾವೆಯೂ ಬೇಕಾಗಿಲ್ಲ. ಅಭಿವೃದ್ಧಿಯ ತತ್ವ ಹಾಗೂ ಆಚರಣೆ ಎರಡರ ನೆಲೆಯಲ್ಲಿ ಮಹಿಳೆಯರನ್ನು ಕೇವಲ ಜನಸಂಖ್ಯಾ ಘಟಕವೆಂದು ಪರಿಗಣಿಸುತ್ತಾ ಬಂದಿದೆ. ಮಹಿಳೆಯರನ್ನು ಸಾಮಾಜಿಕ ಘಟಕವೆಂದು ಅಭಿವೃದ್ಧಿಯ ನಿಯೋಗಿಗಳೆಂದು, ಅಭಿವೃದ್ಧಿಯ 'ಸಾಧ್ಯ'ವೆಂದೂ ಪರಿಗಣಿಸುವುದರಲ್ಲಿನ ವೈಫಲ್ಯವೇ ಅಭಿವೃದ್ಧಿಯನ್ನು ಮಹಿಳೆಯರ ವಿರೋಧಿ ಸಂಗಾತಿಯನ್ನಾಗಿ ಮೂಡಿಬಿಟ್ಟಿದೆ. ಅಭಿವೃದ್ಧಿಯು ಮಹಿಳೆಯರ ಬದುಕಿನ ಸ್ಥಿತಿಗತಿಗಳ ಮೇಲೆ ಹಾನಿಯುಂಟು ಮಾಡುವಲ್ಲಿ ಕಾರಣವಾಗಿರುವ ಮತ್ತೊಂದು ಬಹುಮುಖ್ಯ ಸಂಗತಿಯೆಂದರೆ ಅದರ ಪುರುಷಶಾಹಿ ಸ್ವರೂಪವಾಗಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಎಲ್ಲ ದೇಶಗಳಲ್ಲಿರುವಂತೆ ಭಾರತದಲ್ಲೂ ಮಹಿಳೆಯರನ್ನು ಸಮಾಜ ಕಲ್ಯಾಣ ಕಾರ್ಯಕ್ರಮದ ಅಂಗವನ್ನಾಗಿ ಮಾತ್ರ ಪರಿಗಣಿಸುತ್ತಾ ಬರಲಾಗಿದೆ. ಆದರೂ ಅಭಿವೃದ್ಧಿಯ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳುವ ಪ್ರಯತ್ನ ಇತ್ತೀಚೆಗೆ ಮಾತ್ರ ಪ್ರಾರಂಭವಾಗಿದೆ. ಮಹಿಳೆಯರನ್ನು ಕಲ್ಯಾಣವಾದಿ ಕಾರ್ಯಕ್ರಮಗಳ ಫಲಾನುಭವಿಗಳನ್ನಾಗಿ ಪರಿಗಣಿಸಿದ್ದರಲ್ಲಿ ಅಭಿವೃದ್ಧಿಯ ವೈಫಲ್ಯವನ್ನು ನಿರ್ಮಲಾ ಬ್ಯಾನರ್ಜಿಯವರು ಗುರುತಿಸುತ್ತಾರೆ. ಮಹಿಳೆಯರ ಪರಾವಲಂಬತನವನ್ನು ಗಟ್ಟಿಗೊಳಿಸುವಲ್ಲಿ ಅಭಿವೃದ್ಧಿ ಪ್ರಕ್ರಿಯೆಯು ಮಹಿಳೆಯರನ್ನು ಆದರ್ಶಗೃಹಿಣಿಯರನ್ನಾಗಿ, ಆದರ್ಶ ತಾಯಿಯರನ್ನಾಗಿ ಮಾಡುವಲ್ಲಿ ಹೆಚ್ಚಿನ ಆಸಕ್ತಿ ತಳೆದಿದೆಯೇ ವಿನಃ ಆಕೆಯನ್ನು ಒಂದು ಸಾಮಾಜಿಕ ಸ್ವಾಯತ್ತ ಘಟಕವನ್ನಾಗಿ ಪರಿಗಣಿಸಲಿಲ್ಲ.

ಭಾರತದಲ್ಲಿ ಅಭಿವೃದ್ಧಿ ಪ್ರಕ್ರಿಯೆಯು ಸೈದ್ಧಾಂತಿಕವಾಗಿ ಹಾಗೂ ಆಚರಣೆ ಹಂತದಲ್ಲಿ ಕುಟುಂಬ ಸಂಬಂಧಿ ನೆಲೆಯಲ್ಲಿ ಮಾತ್ರ ಪರಿಭಾವಿಸಿಕೊಂಡಿರುವುದನ್ನು ನಾವು ನೋಡಬಹುದಾಗಿದೆ.

ಸಾಂಪ್ರದಾಯಿಕವಾಗಿ ನಡೆದುಕೊಂಡು ಬರುತ್ತಿದ್ದ ಅನೇಕ ಲಿಂಗ ಸಂಬಂಧ ತಾರತಮ್ಯದ ಸಂಗತಿಗಳನ್ನು ಅಭಿವೃದ್ಧಿ ಪ್ರಕ್ರಿಯೆಯ ನಿರ್ಮೂಲನೆ ಮಾಡುವ ಬದಲಾಗಿ ಗಟ್ಟಿಗೊಳಿಸುತ್ತಾ ಬಂದಿರುವುದು ದುರಂತದ ವಿಷಯವಾಗಿದೆ. ಮಹಿಳೆಯರ ದುಡಿಮೆಯು ಕೇವಲ ಕುಟುಂಬ ಸಂಬಂಧಿಯಾದುದು. ಅದು ಜೈವಿಕವಾದುದು ಹಾಗೂ ಸಂತಾನೋತ್ಪತ್ತಿ ಸಂಬಂಧಿಯಾದುದು ಎಂಬ ತಪ್ಪು ನಂಬಿಕೆ ಭಾರತದ ಅಭಿವೃದ್ಧಿ ಯೋಜನೆಗಳ ಮೂಲದಲ್ಲಿ ಕ್ರಿಯಾಶೀಲವಾಗಿರುವುದು ಸ್ಪಷ್ಟವಾಗಿದೆ.

ಕಳೆದು ಹೋಗುತ್ತಿರುವ ಮಹಿಳೆಯರು

ಭಾರತದಲ್ಲಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರ ಬದುಕಿನ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಕ್ಕೆ ಸರ್ಕಾರವು ಮಹಿಳಾ ಪರ ಯೋಜನೆಗಳ ವೈಫಲ್ಯಗಳನ್ನು ಕಾಣಬಹುದು. ಮಹಿಳೆಯರ ಅಭಿವೃದ್ಧಿಯೆನ್ನುವುದು ಕಾರ್ಯಕ್ರಮ ಯೋಜನೆಗಳಲ್ಲಿ ಅನುಷಂಗಿಕ ಸಂಗತಿಯಾಗಿದೆಯೇ ವಿನಃ ಅದು ಆದ್ಯತೆಯ ಸಂಗತಿಯಾಗಿಲ್ಲ ಎಂಬುದನ್ನು ಅನೇಕ ಅಧ್ಯಯನಗಳು ಗುರುತಿಸಿವೆ(Towards Equality 1974, ಜೀನ್ ಪ್ರೀಜ್ ಮತ್ತು ಅಮರ್ತ್ಯಸೇನ್ ೧೯೯೫, ಗೆರಾಲ್ಡಿನ್ ಪೋರ್ ಬಿನ್ ೧೯೯೮, ಮೈತ್ರೇಯಿ ಕೃಷ್ಣರಾಜ್ ಮತ್ತು ಇತರರು-೧೯೯೮, ನಿರ್ಮಲಾ ಬ್ಯಾನರ್ಜಿ-೧೯೯೮, ಬೀನಾ ಅಗರ್ವಾಲ್ ೧೯೮೯). ಭಾರತದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಮಹಿಳೆಯರನ್ನು ಕೇವಲ 'ಜನಸಂಖ್ಯಾ ಘಟಕವಾಗಿ' ಸಂತಾನೋತ್ಪತ್ತಿ ಸಾಧನವಾಗಿ ಮತ್ತು 'ಜೈವಿಕ ಸಂಗತಿ'ಯಾಗಿ ಪರಿಭಾವಿಸಿಕೊಂಡಿವೆ. ಮಹಿಳೆಯರನ್ನು ಸಾಮಾಜಿಕ ಸಂಗತಿಯಾಗಿ ಅಭಿವೃದ್ಧಿಯ ನಿಯೋಗಿಗಳಾಗಿ, ದುಡಿಮೆಯ ಶಕ್ತಿಯಾಗಿ ಗುರ್ತಿಸಲು ಮನ್ನಿಸಲು ಅಭಿವೃದ್ಧಿಯನ್ನು ಕುರಿತ ಸಿದ್ಧಾಂತಗಳು, ಅಧ್ಯಾಯಗಳು ಸಿದ್ಧವಿಲ್ಲ. ಅಭಿವೃದ್ಧಿ ಸಿದ್ಧಾಂತ, ಅಧ್ಯಯನಗಳನ್ನು ಆಧರಿಸಿ ರೂಪಿಸಲಾಗಿರುವ ಅಭಿವೃದ್ಧಿ ಕಾರ್ಯಕ್ರಮಗಳು, ಯೋಜನೆಗಳು ಮಹಿಳೆಯರನ್ನು ಕೇವಲ 'ಪಾಪದವರು' ಎಂಬ ಕಾರುಣ್ಯ ದೃಷ್ಟಿಯಲ್ಲಿ ನೋಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಮಹಿಳೆಯರ ಸಾಮಾಜಿಕ ಸ್ಥಾನಮಾನವನ್ನು ಉತ್ತಮಪಡಿಸುವುದರಲ್ಲಿ, ಅದನ್ನು ಕಾಯ್ದುಕೊಳ್ಳುವುದರಲ್ಲಿ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳು ವಿಫಲವಾಗಿವೆ ಎಂದು ಬೊಬ್ಬೆ ಹಾಕುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಮಹಿಳೆಯರ ಬದುಕನ್ನು ಅವರ ಸಾಮಾಜಿಕ ಸ್ಥಾನ-ಮಾನವನ್ನು ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕೆಂಬುದು ಅಭಿವೃದ್ಧಿ ಕಾರ್ಯಕ್ರಮಗಳ ಉದ್ದೇಶ ಆಗಿದ್ದರೂ ಸಾಧ್ಯವಾಗುತ್ತಿಲ್ಲ. ಅಭಿವೃದ್ಧಿಗೆ ಕಾಣಿಕೆ ಕೊಡುಗೆ ನೀಡುವಲ್ಲಿ ಯಾವುದೇ ಅರ್ಹತೆ -ಸಾಮರ್ಥ್ಯವಿಲ್ಲದ ಮಹಿಳೆಯರಿಗೆ ಅಭಿವೃದ್ಧಿಯಲ್ಲಿ ಪಾಲುಕೇಳಲು ಯಾವುದೇ ಹಕ್ಕು ಇಲ್ಲ ಎಂಬ ವಿಕೃತ ನಂಬಿಕೆ ಸಮಾಜದಲ್ಲಿ ನೆಲೆಗೊಂಡು ಬಿಟ್ಟಿದೆ. ಹಾಗಾಗಿ ಲಿಂಗ ನಿರಪೇಕ್ಷತೆ ಲಿಂಗ ಸಂಬಂಧಗಳ ಬಗ್ಗೆ ಉದಾಸೀನ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಮೂಲ ಲಕ್ಷಣವಾಗಿದೆ.

ಕಲ್ಯಾಣವಾದಿ ಕಾರ್ಯಕ್ರಮಗಳು

ಅನೇಕ ಅಧ್ಯಯನಗಳು, ಗುರುತಿಸಿರುವಂತೆ ಮಹಿಳೆಯರನ್ನು ಕುರಿತಂತೆ ಭಾರತದಲ್ಲಿ ಆರ್ಥಿಕ ಯೋಜನೆಗಳು 'ಕಲ್ಯಾಣವಾದಿ' ಧೋರಣೆ ತಳೆದಿದೆ. ಮಹಿಳಾ ಕಲ್ಯಾಣ, ಮಕ್ಕಳ ಕಲ್ಯಾಣ, ಸಮಾಜ ಕಲ್ಯಾಣ, ಕುಟುಂಬ ಕಲ್ಯಾಣ ಎಂಬ ನುಡಿಗಳಲ್ಲಿ ಇದು ಸ್ಪಷ್ಟವಾಗಿದೆ. ಅಭಿವೃದ್ಧಿಯ ಮೇಲೆ ಮಹಿಳೆಯರಿಗೆ ಹಕ್ಕು-ದಾರಿಯಿದೆ ಎಂಬುದನ್ನು ಆರ್ಥಿಕ ನೀತಿ ಒಪ್ಪುವುದಿಲ್ಲ. ನಿರ್ಮಲಾ ಬುಚ್ ಹೇಳುವಂತೆ(೧೯೯೮: WS-೧೮) ಭಾರತದಲ್ಲಿ ಮಹಿಳೆಯರನ್ನು ಕೇವಲ ಸಮಾಜ ಕಲ್ಯಾಣ ಘಟಕವಾಗಿ ಪರಿಭಾವಿಸಿಕೊಳ್ಳಲಾಗಿದೆಯೇ ವಿನಃ 'ಅಭಿವೃದ್ಧಿಯ ಘಟಕ'ವಾಗಿಯಲ್ಲ. ಒಂದು ಮಾತು ನಿಜ ಮಹಿಳೆಯರ ಬದುಕು-ದುಡಿಮೆ ಕುರಿತಂತೆ ಆರ್ಥಿಕ ಕಾರ್ಯಕ್ರಮಗಳು, ಯೋಜನೆಗಳು 'ಕಲ್ಯಾಣ ವಾದಿ' ನೆಲೆಯಿಂದ ಪ್ರಾರಂಭಿಸಿ ಸಮಾನತೆ ನೆಲೆಯನ್ನು ಹಾದು ಇಂದು ಸಬಲೀಕರಣದ ಹಂತಕ್ಕೆ ಬಂದು ನಿಂತಿವೆ. ಆದರೆ ಸ್ವಾತಂತ್ರ್ಯ ನಂತರ ಭಾರತದ ಅಭಿವೃದ್ಧಿ ಕಾರ್ಯಕ್ರಮಗಳ ಮೂಲದಲ್ಲಿದ್ದ ಮಹಿಳೆಯರನ್ನು ಕುರಿತ ಧೋರಣೆಯು ಕಲ್ಯಾಣವಾದಿಯಾಗಿತ್ತು ಎಂಬುದು ಸ್ಪಷ್ಟ. ಭಾರತದಲ್ಲಿ ಮಹಿಳೆಯರನ್ನು ಕುರಿತ ಅಭಿವೃದ್ಧಿ ಕಾರ್ಯಕ್ರಮಗಳ 'ಕಲ್ಯಾಣವಾದಿ' ಧೋರಣೆ ತಿಳಿಯಲು ಒಂದು ಪ್ರಬಲವಾದ ಕಾರಣವಿತ್ತು. ಭಾರತದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಮಧ್ಯಮ ವರ್ಗದ ಜನ ಸಮೂಹವನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿವೆ. ಅಭಿವೃದ್ಧಿ ಕಾರ್ಯಕ್ರಮಗಳು ಮಹಿಳೆಯರನ್ನು ಕುಟುಂಬದ ನೆಲೆಯಲ್ಲಿ ಕೇವಲ ಗೃಹಿಣಿಯಾಗಿ ಮಾತ್ರ ಪರಿಭಾವಿಸಿಕೊಂಡಿವೆ.

ಕಲ್ಯಾಣವಾದಿ ಧೋರಣೆಯನ್ನು ತಳೆಯಲು ಕಾರಣವಾದ ಇನ್ನೊಂದು ಮುಖ್ಯ ಕಾರಣವೆಂದರೆ ಅಂತಹ ಧೋರಣೆಯುಳ್ಳ ಕಾರ್ಯಕ್ರಮಗಳು ಮಾತ್ರ ಪುರುಷಶಾಹಿಯನ್ನು ಎದುರಿಸದೇ ಪಿತೃಪ್ರಧಾನ ಮೌಲ್ಯಗಳನ್ನು ಧಿಕ್ಕರಿಸದೆ ಮಹಿಳೆಯರ ಅಭಿವೃದ್ಧಿ ಬಗ್ಗೆ ಮಾತನಾಡುವುದು. ಹೀಗಾಗಿ ಪುರುಷಶಾಹಿ ವ್ಯವಸ್ಥೆಗಳು ಮಹಿಳೆಯರಿಗೆ ಉಂಟು ಮಾಡಿರುವ ಹಾನಿಯನ್ನು ಸರ್ಕಾರದ ಪಾಲಸಿಗಳು ಗುರ್ತಿಸಿದಂತೆ ಕಾಣಲಿಲ್ಲ. 'ಸಾಮಂತವಾದಿ ಪುರುಷಶಾಹಿ' ಚೌಕಟ್ಟಿನಲ್ಲಿ ಮಹಿಳೆಯರ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಅದು ಕಲ್ಯಾಣವಾದಿ ಧೋರಣೆಯಿಂದ ಮಾತ್ರ ಸಾಧ್ಯ. ಈ ಕಾರಣದಿಂದಾಗಿಯೇ ಅಭಿವೃದ್ಧಿ ಕಾರ್ಯಕ್ರಮಗಳು ಭಾರತದಲ್ಲಿ ಮಹಿಳೆಯರ ದುಡಿಮೆಯ ಬಗ್ಗೆ, ಅವರ ನಿಯೋಗವಾದಿ ಪಾತ್ರದ ಬಗ್ಗೆ ಹೆಚ್ಚು ಆಸಕ್ತಿ ತೋರಲಿಲ್ಲ. ಏಕೆಂದರೆ ಮಹಿಳೆಯರ 'ಅಧಿಕೃತ ನ್ಯಾಯ ಸಮ್ಮತ', ಕಾರ್ಯಕ್ಷೇತ್ರ 'ಕುಟುಂಬ' ಎಂಬ ನಂಬಿಕೆ ಇಲ್ಲಿ ಕೆಲಸ ಮಾಡುತ್ತಿದೆ. ಆದ್ದರಿಂದಲೇ ಕುಟುಂಬ ಕಲ್ಯಾಣವನ್ನು ಘನ ಉದ್ದೇಶವನ್ನಾಗಿ ಮಾಡಿಕೊಂಡು ಮಹಿಳೆಯರ ಬದುಕನ್ನು ಉತ್ತಮಪಡಿಸುವ ಪ್ರಯತ್ನ ಭಾರತದಲ್ಲಿ ನಡೆಯುತ್ತಿದೆ. ಮಹಿಳೆಯರಿಗೆ

ಸಂಬಂಧಿಸಿದಂತೆ ಭಾರತದಲ್ಲಿ ಅಭಿವೃದ್ಧಿ ಯೋಜನೆಗಳು ಕಲ್ಯಾಣವಾದಿ ಧೋರಣೆ ತಳೆಯಲು ಇನ್ನೊಂದು ಪ್ರಬಲ ಕಾರಣವಿದೆ. ಅಭಿವೃದ್ಧಿ ಯೋಜನೆಗಳು ಭಾರತದಲ್ಲಿ ಸುಧಾರಣವಾದಿಯಾಗಿವೆ ವಿನಃ ಸಂಘರ್ಷವಾದಿಯಾಗಿಲ್ಲ. ೧೯೫೦ರಲ್ಲಿ ವಿದ್ಯಾರ್ಥಿನಿಯರನ್ನು ಸಂಬೋಧಿಸುತ್ತಾ 'ನೆಹರುರವರು' "ಮಹಿಳೆಯರ ಪ್ರಧಾನ ಜವಾಬ್ದಾರಿ ಎಂದರೆ ಕುಟುಂಬವನ್ನು ಸಮರ್ಥವಾಗಿ ಸಂಬಾಳಿಸಿಕೊಂಡು ಹೋಗುವುದು" ಎಂದು ಕರೆ ನೀಡಿದ್ದರು. ಇದೇ ದೋರಣೆಯು ಸರ್ಕಾರವು ರೂಪಿಸಿದ್ದ ಮಹಿಳೆಯರನ್ನು ಕುರಿತ ಅಭಿವೃದ್ಧಿ ಕಾರ್ಯಕ್ರಮಗಳ ಮೂಲದಲ್ಲಿತ್ತು. ಭಾರತದ ಅಭಿವೃದ್ಧಿ ಕಾರ್ಯಕ್ರಮಗಳ ಮಹಿಳೆಯರನ್ನು ಅಭಿವೃದ್ಧಿಯ ನಿಯೋಗಿಗಳೆಂದು 'ದುಡಿಮೆಗಾರರು' ಎಂಬುದನ್ನು ಅವು ಒಪ್ಪಲು ಸಿದ್ಧವಿರಲಿಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ ಭಾರತದ ಅಭಿವೃದ್ಧಿ ಯೋಜನೆಗಳ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಗುರುತಿಸಿದರೂ ಸಹ ಅವು ಮಹಿಳಾ ಸೈದ್ಧಾಂತಿಕ ಮೌಲ್ಯಗಳಿಂದ ದೂರ ಉಳಿದಿದೆ. ಅಲ್ಲದೇ ಅವು ಪುರುಷ ಪ್ರಧಾನ ನೆಲೆಯಿಂದ ರೂಪುಗೊಳ್ಳುವುದರಿಂದ ಪುರುಷ ಹಿತದೃಷ್ಟಿಯಿಂದ ಮಹಿಳೆಯರಿಗೆ ಯಾವುದು ಸೂಕ್ತ ಎಂದು ನಿರ್ಧರಿಸಲಾಗುತ್ತಿದೆ. ಇಲ್ಲಿ ಮಹಿಳೆಯರಿಗೆ ಯಾವುದೇ ಅವಕಾಶಗಳು ಇಲ್ಲದಂತಾಗಿದೆ. ಅಲ್ಲದೇ ಮಹಿಳಾ ಪರವಾದ ಯೋಜನೆಗಳನ್ನು ನಾಮಮಾತ್ರಕ್ಕೆ ಆಯೋಜಿಸಲಾಗುತ್ತಿದೆ. ಆದರೆ ಅದು ಜಾರಿಗೊಳ್ಳುವುದೇ ಇಲ್ಲ. ಒಂದು ವೇಳೆ ಜಾರಿಗೊಂಡರೂ ಅದು ಎಲ್ಲಾ ಮಹಿಳೆಯರಿಗೂ ಯಶಸ್ವಿಯಾಗಿ ಫಲ ನೀಡುವುದಿಲ್ಲ ವಿಫಲವಾಗಿದೆ. ಈ ರೀತಿಯ ಸಮಸ್ಯೆಗಳಿಗೆ ಮುಖ್ಯ ಕಾರಣವೆಂದರೆ ಮಹಿಳಾ ಅಭಿವೃದ್ಧಿಯ ಯೋಜನೆಗಳನ್ನು ದೇಶದ ಪ್ರಮುಖ ಇತರೆ ಅಭಿವೃದ್ಧಿ ಯೋಜನೆಗಳಂತೆ ಮಹತ್ವ ನೀಡದೇ ಕಡೆಗಣಿಸಿರುವುದೇ ಆಗಿದೆ. ಒಂದು ದೇಶದ ಪ್ರಗತಿಯು ಮುಂದುವರಿಯ ಬೇಕಾದರೆ ವಿವಿಧ ಕ್ಷೇತ್ರಗಳಾದ ಶಿಕ್ಷಣ, ಮೂಲಭೂತ ಸೌಕರ್ಯ, ತಂತ್ರಜ್ಞಾನ, ಆರ್ಥಿಕತೆ ಮುಂತಾದ ವಲಯಗಳಲ್ಲಿ ಅಭಿವೃದ್ಧಿ ಸಾಧಿಸಬೇಕು. ಈ ರೀತಿಯ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸ್ತ್ರೀ-ಪುರುಷರಿಬ್ಬರೂ ಸಮವಾಗಿ ಭಾಗವಹಿಸಬೇಕು. ಆದರೆ ಭಾರತದಲ್ಲಿ ಪುರುಷರಿಗೆ ಸಮವಾಗಿ ಸ್ತ್ರೀಯರು ಸಮಾನತೆ ಸಾಧಿಸಲು ಹಲವಾರು ಸಮಸ್ಯೆಗಳಿವೆ. ಈ ಸಮಸ್ಯೆಗಳನ್ನು ನಿವಾರಿಸುವ ಸಲುವಾಗಿ ಮಹಿಳೆಯರನ್ನೇ ಮೊದಲು ಶಿಕ್ಷಿತರನ್ನಾಗಿ ಮಾಡಿ ಮೂಲಭೂತ ಸೌಕರ್ಯಗಳನ್ನು ಒದಗಿಸಿ ವಿವಿಧ ಕ್ಷೇತ್ರಗಳ ಬಗ್ಗೆ ಮಾಹಿತಿ-ತರಬೇತಿ ನೀಡಿ ಅವರನ್ನು ಸುಶಿಕ್ಷಿತರನ್ನಾಗಿ ಮಾಡುವ ಸಲುವಾಗಿ ಒಂದು ಪ್ರಣಾಳಿಕೆಯ ಅವಶ್ಯಕತೆ ಇರುತ್ತದೆ. ಈ ಪ್ರಣಾಳಿಕೆಗಳು ಕಾರ್ಯರೂಪ ತಳೆದಾಗ ಯೋಜನೆಗಳೆನಿಸಿ ಕೊಳ್ಳುತ್ತದೆ. ಇಂತಹ ಯೋಜನೆಗಳು ಸಮರ್ಥವಾಗಿ ರೂಪಿಸಲ್ಪಟ್ಟು ಯಶಸ್ವಿಯಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಮಹಿಳಾ ಅಭಿವೃದ್ಧಿ ಯೋಜನೆಗಳಿಂದ ಮಹಿಳೆಯರು ಲಾಭ ಪಡೆದು ದೇಶದ ಅಭಿವೃದ್ಧಿಯಲ್ಲಿ ಯಶಸ್ವಿಯಾಗಿ ಪಾಲ್ಗೊಳ್ಳುತ್ತಾರೆ. ಆದರೆ ದುರದೃಷ್ಟಕರ

ಸಂಗತಿಯೆಂದರೆ ಇಂತಹ ಮಹಿಳಾ ಯೋಜನೆಗಳು ಸೂಕ್ತ ರೀತಿಯಲ್ಲಿ ರೂಪುಗೊಳ್ಳುತ್ತಿಲ್ಲ ಮತ್ತು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಏಕೆಂದರೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಕಡೆಗಣಿಸಿರುವುದೇ ಇದಕ್ಕೆ ಪ್ರಮುಖ ಕಾರಣವಾಗಿದೆ. ಈ ಮೇಲ್ಕಂಡ ಕಾರಣಗಳಿಂದಾಗಿ ಇಂದು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಶಶ್ವಿಯಾಗಲು ಬಿಡುತ್ತಿಲ್ಲ. ಪುರುಷಪ್ರಧಾನ ಮೌಲ್ಯಗಳನ್ನು ಬದಿಗಿಟ್ಟು ಸ್ತ್ರೀಪರ ಚಿಂತನೆಗಳನ್ನು ಅಳವಡಿಸಿಕೊಂಡು ಅಭಿವೃದ್ಧಿಯನ್ನು ನಿರ್ವಹಿಸಿದಾಗ ಮಾತ್ರವೇ ಮಹಿಳಾ ಅಭಿವೃದ್ಧಿ ಯೋಜನೆಗಳು ಯಶಸ್ವಿಯಾಗುತ್ತದೆ. ಇಲ್ಲದಿದ್ದರೆ ಅದು ಪುರುಷ ಪ್ರಧಾನ ಚಿಂತನೆಗಳನ್ನು ಮಾತ್ರ ಗಮನಿಸಿ ಸ್ತ್ರೀಯರಿಗೆ ಒಂದು ಇತಿ-ಮಿತಿಯ ಅಭಿವೃದ್ಧಿಯನ್ನು ಮಾತ್ರ ನೀಡಲು ಸಾಧ್ಯವಾಗುತ್ತದೆ. ಈ ರೀತಿಯಾಗಿ ಇಡೀ ಅಭಿವೃದ್ಧಿ ಪ್ರಕ್ರಿಯೆಯಿಂದ ಮಹಿಳೆಯರು ಸಂಪೂರ್ಣವಾಗಿ ಹೊರ ಬಿದ್ದಂತಾಗುತ್ತದೆ. ಆಗ ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚಾಗಿ ಆಕೆ ಮೂಲೆಗುಂಪಾಗುತ್ತಾಳೆ. ಈ ರೀತಿಯ ಅಪಾಯಗಳನ್ನು ತಡೆಗಟ್ಟಲು ಸರ್ಕಾರವು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಜೊತೆ ಜೊತೆಯಾಗಿ ಸಮರ್ಥವಾಗಿ ರೂಪಿಸಿ ಯಶಸ್ವಿಗೊಳಿಸಬೇಕಾದ ಅವಶ್ಯಕತೆ ಇದೆ. ಅಭಿವೃದ್ಧಿಯು ಕೇವಲ ಪುರುಷನಿಗಾಗಿ ಮಾತ್ರವಲ್ಲ ಸ್ತ್ರೀಯರಿಗೂ ಅದರಲ್ಲಿ ಸಮಪಾಲಿದೆ ಎಂದು ತಿಳಿಸಬೇಕಾಗಿದೆ. ಇದಕ್ಕಾಗಿ ಸರ್ಕಾರವು ಸೂಕ್ತ ಯೋಜನೆಗಳನ್ನು ಹಮ್ಮಿಕೊಳ್ಳುವ ಅವಶ್ಯಕತೆ ಇದೆ.

ಮಹಿಳಾ ಅಭಿವೃದ್ಧಿ ಮತ್ತು ಸೈದ್ಧಾಂತಿಕ ಚಿಂತನೆಗಳು

೧೯೫೦-೬೦ರ ಸಂದರ್ಭದ ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಮಹಿಳೆಯರನ್ನು ಕಲ್ಯಾಣವಾದಿ ನೆಲೆಯಲ್ಲಿ ಗುರುತಿಸಲಾಗಿತ್ತು. ಈ ಸಂದರ್ಭದಲ್ಲಿ ಸ್ತ್ರೀವಾದ ಎನ್ನುವ ಕಲ್ಪನೆ ಪರಿಚಿತವಾಗಿತ್ತು. ಮಹಿಳಾ ಹೋರಾಟಗಾರರು, ಸ್ತ್ರೀವಾದಿಗಳು, ಮಹಿಳಾಪರ ಚಿಂತಕರು ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಮಹಿಳಾಪರ ಚಿಂತನೆಗಳನ್ನು ಸೈದ್ಧಾಂತಿಕ ಚೌಕಟ್ಟಿನಲ್ಲಿ ರೂಪುಗೊಳ್ಳುವಂತೆ ಮಾಡಿದರು. ಇದಕ್ಕೆ ಪೂರಕವಾಗಿ ವಿಶ್ವಸಂಸ್ಥೆಯ ಸಲಹೆಯ ಮೇರೆಗೆ ಭಾರತ ಸರ್ಕಾರವು 'ಸಮಾನತೆಯೆಡೆಗೆ'(Towards Equality) ಎಂಬ ವರದಿಯನ್ನು ಸಿದ್ಧಪಡಿಸಿತು. ವಿಶ್ವದ ದೇಶಗಳಲ್ಲಿ ಅಭಿವೃದ್ಧಿಯಲ್ಲಿ ಮಹಿಳಾ ಕಾರ್ಯಕ್ರಮಗಳನ್ನು ರೂಪಿಸುವ ಸೈದ್ಧಾಂತಿಕ ಚೌಕಟ್ಟು ರೂಪುಗೊಂಡಿತು. ಭಾರತದಲ್ಲಿಯೂ ೮೦ರ ದಶಕದ ಹೊತ್ತಿಗೆ ಅಭಿವೃದ್ಧಿ ಸಿದ್ದಾಂತಗಳ ಸೈದ್ಧಾಂತಿಕ ಚೌಕಟ್ಟಿನಲ್ಲಿ ಮಹಿಳಾ ವಿಶೇಷತೆಯನ್ನು ಅಳವಡಿಸಿಕೊಳ್ಳಲಾಯಿತು.[೨]

ಮಹಿಳಾ ಅಭಿವೃದ್ಧಿ ಸಂಕಥನವನ್ನು ಮೂರು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಗುರುತಿಸಲಾಗುತ್ತದೆ.

WID - ಅಭಿವೃದ್ಧಿಯಲ್ಲಿ ಮಹಿಳೆ

WAD- ಅಭಿವೃದ್ಧಿ ಮತ್ತು ಮಹಿಳೆ

GAD - ಜೆಂಡರ್ ಮತ್ತು ಅಭಿವೃದ್ಧಿ

ಅಭಿವೃದ್ಧಿಯಲ್ಲಿ ಮಹಿಳೆ(WID)

ಅಭಿವೃದ್ಧಿಯಲ್ಲಿ ಮಹಿಳೆ ಎಂದರೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯು ತನ್ನನ್ನು ತಾನು ಹೇಗೆ ತೊಡಗಿಸಿಕೊಂಡಿದ್ದಾಳೆಂಬುದನ್ನು ಕಾಣಬಹುದಾಗಿದೆ. ಆರ್ಥಿಕ ಬೆಳವಣಿಗೆ ಮತ್ತು ಆಧುನಿಕತೆಯ ಸಿದ್ಧಾಂತಗಳಂತೆ 'ಅಭಿವೃದ್ಧಿಯಲ್ಲಿ ಮಹಿಳೆ' ದೃಷ್ಟಿಕೋನವು ಮಹಿಳೆಯರಿಗೆ ಉತ್ತಮ ಶಿಕ್ಷಣ, ಸಮಾನ ವೇತನ, ಒಳ್ಳೆಯ ಜೀವನ ಮಟ್ಟ ಸಿಗುವಂತಾದರೆ ಸಾಂಪ್ರದಾಯಿಕ ಪುರುಷ ಪ್ರಧಾನ ನಂಬಿಕೆಗಳು ತಾವಾಗಿಯೇ ಅಳಿಸಿ ಹೋಗುತ್ತವೆಂದು ನಂಬುತ್ತದೆ. ಇದು ಮಹಿಳಾ ವಿಷಯಗಳಿಗೆ ಐತಿಹಾಸಿಕ ದೃಷ್ಟಿಕೋನವನ್ನಾಗಲೀ ಮಹಿಳೆಯರಲ್ಲಿ ಕಂಡುಬರುವ ಜಾತಿ, ವರ್ಗ ಹಾಗೂ ಜನಾಂಗೀಯ ವಿಂಗಡಣೆಗಳಾಗಲೀ ಪ್ರಾಮುಖ್ಯತೆಯನ್ನು ನೀಡುವುದಿಲ್ಲ. ಈ ಚಿಂತನೆ ಮಹಿಳೆಯರ ಅನುಭವ ಮತ್ತು ವ್ಯಕ್ತಿಗಳಾಗಿ ಅವರಲ್ಲಿರುವ ಸಾಮರ್ಥ್ಯಕ್ಕೆ ಹೆಚ್ಚು ಒತ್ತು ನೀಡುತ್ತದೆ. ಆದುದರಿಂದ ಇದು 'ಮಾದರಿ ಪಾತ್ರಗಳಿಗೆ' ಅಥವಾ ಸಾರ್ವಜನಿಕವಾಗಿ ಗುರುತಿಸಲ್ಪಟ್ಟ ಮಹಿಳೆಯರಿಗೆ 'ಹೆಚ್ಚಿನ ಪ್ರಾಶಸ್ತ್ಯ' ನೀಡುತ್ತದೆ ಎಂಬುದು ಗಮನಾರ್ಹ ಸಂಗತಿ.

೧೯೭೬-೮೫ರಲ್ಲಿ ಬಂದಂತಹ ಅಂತರಾಷ್ಟ್ರೀಯ ಮಹಿಳಾ ಸಮಾವೇಶದ ಫಲವಾಗಿ ಪ್ರಪಂಚದಲ್ಲಿ ಮಹಿಳೆಯರಿಗೆ ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಅವಕಾಶಗಳು ದೊರೆಯುವಂತಾಯಿತು. ರಾಜಕೀಯವಾಗಿ ಸಾಮಾಜಿಕವಾಗಿ ಮಹಿಳೆಯರಿಗೆ ಸಮಾನತೆ ಮತ್ತು ಸಮಾನ ಭಾಗವಹಿಸುವಿಕೆ ಸಾಮಾಜಿಕ ನ್ಯಾಯ ಲಭ್ಯವಾಯಿತು. ಇದರಲ್ಲಿ ನಾವು ಅಭಿವೃದ್ಧಿಯಲ್ಲಿ ಮಹಿಳೆ ಮೇಲೆ ಪ್ರಭಾವ ಬೀರುವಂತಹ ನ್ಯಾಯಯುತ ವಿಚಾರಗಳು ಮತ್ತು ಅಭಿವೃದ್ಧಿ ಅಂಗಗಳ ನಡುವಿನ ಕೊಂಡಿಯನ್ನು ತಿಳಿಯಲು ಪ್ರಯತ್ನಿಸುತ್ತೇವೆ. ಮಹಿಳೆಯರ ಬೇಡಿಕೆಗಳಾಗಿ ಯೋಜನೆಗಳನ್ನು ಅವಲಂಬಿಸುವುದರ ಬದಲು ಅಭಿವೃದ್ಧಿಯಲ್ಲಿ ಮಹಿಳೆಗೆ ಸಂಬಂಧಪಟ್ಟ ಹುನ್ನಾರಗಳನ್ನು ಸೂಚಿಸುವುದು ಎಂದರೆ ಮಹಿಳೆಯರು ಅಭಿವೃದ್ಧಿಯ ಮೂಲ ಆರ್ಥಿಕತೆಯಿಂದ ಕಣ್ಮರೆಯಾಗಿದ್ದರೂ ಸಹ ಅವರ ಕೊಡುಗೆ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಅಪಾರವಾಗಿದೆ. ಇದರಿಂದಾಗಿ ಮಹಿಳೆಯರಿಗೆ ಶಕ್ತಿಯುತ ರಾಜಕೀಯ ವ್ಯೂಹ ತಂತ್ರದ ಜೊತೆಗೆ ಸಾಮರ್ಥ್ಯವನ್ನು ಸಹ ಅಭಿವೃದ್ಧಿಯಲ್ಲಿ ಮಹಿಳೆ ಒದಗಿಸುತ್ತದೆ.

ಅಭಿವೃದ್ಧಿಯಲ್ಲಿ ಮಹಿಳೆಯ ಹುಟ್ಟು ಮತ್ತು ಬೆಳವಣಿಗೆ

ಅಭಿವೃದ್ಧಿಯಲ್ಲಿ ಮಹಿಳೆ(WID) ಪದದ ಬಳಕೆಯು ಮೊದಲ ಬಾರಿಗೆ ೧೯೭೦ರಲ್ಲಿ ವಾಷಿಂಗ್ ಟನ್ ಆಧಾರಿತ ಮಹಿಳಾ ಅಭಿವೃದ್ಧಿ ವೃತ್ತಿಪರ ಸಂಪರ್ಕದಿಂದಾಯಿತು. ಅವರ ಸ್ವಂತ

ಅನುಭವಗಳಿಂದಾಗಿ ಅಭಿವೃದ್ಧಿಯ ಸಿದ್ಧಾಂತಗಳು ಮತ್ತು ಅಧುನಿಕತೆಯ, ಸ್ತ್ರೀ-ಪುರುಷರ ಮೇಲೆ ಭಿನ್ನ ಪ್ರಭಾವವನ್ನು ತೋರುತ್ತಿದೆ ಎಂದು ವಾದಿಸಿದರು. ಮಹಿಳೆಯರ ಹಕ್ಕುಗಳನ್ನು ಮತ್ತು ಸ್ಥಾನ-ಮಾನಗಳನ್ನು ಉತ್ತಮಪಡಿಸುವುದರ ಬದಲಾಗಿ ಅಭಿವೃದ್ಧಿಯ ಪ್ರಕ್ರಿಯೆಯು ಅವರ ಸ್ಥಿತಿಯನ್ನು ಕೆಡಿಸುತ್ತಿದೆ. ಈ ರೀತಿಯ ಹಲವಾರು ಸಾಕ್ಷ್ಯಗಳನ್ನು ಮುಂದಿಟ್ಟುಕೊಂಡು 'ಯು.ಎಸ್.ಎ'ನ ಮಹಿಳಾ ಗುಂಪು ೧೯೭೩ರಲ್ಲಿ WIDನ್ನು ಜಾರಿಗೆ ತರುವಂತೆ ಮಾಡಿತ್ತು. ಇದರಿಂದಾಗಿ ಮಹಿಳೆಯರು ವಿದೇಶಿಗಳ ರಾಷ್ಟ್ರೀಯ ಆರ್ಥಿಕತೆಯಲ್ಲಿ ತೊಡಗಿ ಕೊಳ್ಳುವುದರ ಮೂಲಕ ಅವರ ಸ್ಥಿತಿ-ಗತಿಗಳನ್ನು ಉತ್ತಮಪಡಿಸಿಕೊಂಡು ಪೂರ್ಣಪ್ರಮಾಣದಲ್ಲಿ ಅಭಿವೃದ್ಧಿಗೆ ಶ್ರಮಿಸುತ್ತಾರೆ. ಈ ವಾಷಿಂಗ್‌ಟನ್ ಆಧಾರಿತ ಗುಂಪು, ಯು.ಎನ್.ಏಜೆನ್ಸಿಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ಮತ್ತು ಮಹಿಳಾ ಅಕಾಡೆಮಿಷೀಯನ್ ಗಳೊಂದಿಗೆ ಮಹಿಳೆಯರ ಉತ್ಪಾದನಾ ಕೆಲಸ, ಲಿಂಗತ್ವ ವಿಭಜನೆ ಮತ್ತು ಮಹಿಳೆಯರ ಮೇಲೆ ಅಭಿವೃದ್ಧಿ ಪ್ರಕ್ರಿಯೆಯ ಪ್ರಭಾವಗಳನ್ನು ಕುರಿತಂತೆ ಸಂಶೋಧನೆ ನಡೆಯಸಿರದಿರಲು. ೧೯೭೦ರಲ್ಲಿ ಅಭಿವೃದ್ಧಿಯಲ್ಲಿ ಮಹಿಳೆ ಮೇಲೆ ಉತ್ತರ ದೇಶಗಳಲ್ಲಿ ಹೋರಾಟಗಳು ಶುರುವಾದವು. ಇದಕ್ಕೆ ಪೂರಕವೆಂಬಂತೆ ಉದಾರವಾದಿ ಸ್ತ್ರೀವಾದಿಗಳಿಂದ ಅಭಿವೃದ್ಧಿಯಲ್ಲಿ ಮಹಿಳೆ ನ ಧ್ಯೇಯಗಳಲ್ಲಿ ಮಹಿಳೆಯರ ಸಮಾನ ಹಕ್ಕುಗಳು ಉದ್ಯೋಗ, ಸಮಾನತೆ, ನ್ಯಾಯ, ಯುಎಸ್‌ನ ಪೌರತ್ವ ಮೇಲಾಗಿ ರಾಜಕೀಯ ವ್ಯವಸ್ಥೆಯಲ್ಲಿ ಮಹಿಳೆಯರು ಸ್ಥಾನ ಪಡೆದುಕೊಳ್ಳುವಂತೆ ಒತ್ತಾಸೆಗಳನ್ನು ಚಿಂತಿಸಿಲಾರಂಭಿಸಿದರು.

ಉದಾರವಾದಿ ಸ್ತ್ರೀವಾದಿಗಳ ಪ್ರಕಾರ ಚಾಲ್ತಿಯಲ್ಲಿರುವ ಲಿಂಗ ಪೂರ್ವಗ್ರಹಗಳ ಮಾದರಿಗಳಿಂದಾಗಿ ಪುರುಷರ ನಿರೀಕ್ಷೆಗೆ ತಕ್ಕಂತೆ ಸ್ತ್ರೀಯರು ಬದಲಾಗುತ್ತಿದ್ದಾರೆ ಮತ್ತು ಕೆಲವು ಸಾಮಾಜಿಕ ಸಂಸ್ಥೆಯು ಇದಕ್ಕೆ ಸಹಕರಿಸುತ್ತಿದೆ. ಹೀಗಾಗಿ ಹಳೆಯ ಲಿಂಗ ಪೂರ್ವಾಗ್ರಹಗಳ ಮಾದರಿಗಳನ್ನು ಕಳಚಿ, ಹೆಣ್ಣು ಮಕ್ಕಳಿಗೆ ಒಳ್ಳೆಯ ಶಿಕ್ಷಣ ತರಬೇತಿಯೊಂದಿಗೆ ಉತ್ತಮ ಮಾದರಿ ವ್ಯಕ್ತಿಗಳನ್ನು ಮಾರ್ಪಾಡು ಮಾಡುವುದರ ಜೊತೆಗೆ ಸಮಾನ ಅವಕಾಶಗಳು ಮತ್ತು ಲಿಂಗತಾರತಮ್ಯ ಸೂಕ್ಷ್ಮತೆಗಳನ್ನು ರಾಜಕಾರಣಗಳ ಬಗೆಗೆ ಅರಿವು ನೀಡಬೇಕು. ಇದರಿಂದ ಸ್ತ್ರೀ-ಪುರುಷರ ನಡುವಿನ ಅಧಿಕಾರ ಸಂಬಂಧಗಳನ್ನು ಗಮನಿಸಬೇಕು. ಯು.ಎಸ್.ನಲ್ಲಿ ಮಹಿಳೆಯರಿಗೆ ಸಮಾನ ಉದ್ಯೋಗವಕಾಶಗಳಿದ್ದವು. ಇದು ಆಶ್ಚರ್ಯದ ಸಂಗತಿಯಲ್ಲ ಬದಲಾಗಿ ಅಭಿವೃದ್ಧಿಯ ಸಂಗತಿಗಳೊಂದಿಗೆ ಹೋಲಿಸಿದರೆ ಮಹಿಳೆಯರಿಗೆ ಕೆಲಸಕ್ಕೆ ತಕ್ಕಂತ ವೇತನ ನೀಡುತ್ತಾರೆ. ಆದರೆ ಅವರ ಸಾಮಾಜಿಕ ಕಲ್ಯಾಣ ಮತ್ತು ಪುನರುತ್ಪಾದನೆ ಕೆಲಸಕ್ಕೆ ಹಣ ನೀಡುವುದಿಲ್ಲ. ನಂತರದ ದಿನಗಳಲ್ಲಿ ಈ ಕಾಳಜಿಯು ಉತ್ತರದ ದೇಶಗಳಲ್ಲಿ ಮಹಿಳಾ ಸಂಗ್ರಾಮಕ್ಕೆ ತಿರುಗಿತು. ಇದರಿಂದಾಗಿ ಅಭಿವೃದ್ಧಿಯಲ್ಲಿ ಮಹಿಳೆ, ಮಹಿಳೆಯರ ಉತ್ಪಾದನಾ ಮಾದರಿಗಳಿಗೆ ಮತ್ತು ಆರ್ಥಿಕತೆಯಿಂದ ಅವರ ಸ್ಥಾನವನ್ನು ಉತ್ತಮಪಡಿಸಲು ಆಸಕ್ತಿ ತೋರಿತು. ಇದು ಮೂರನೆ ಜಗತ್ತಿನ ಮಹಿಳಾ

ಉತ್ಪಾದನಾ ಕಾರ್ಮಿಕರಿಗಾಗಿ ಅವರ ಅಭಿವೃದ್ಧಿ ಪಾಲಿಸಿಯ ಮನ್ನಣೆಗಾಗಿ ಅಭಿವೃದ್ಧಿ ಪಾಲನೆಯ ನಿರ್ಮಾಣಕ್ಕಾಗಿ ವ್ಯೂಹ ರಚಿಸಿತು. ಪೂರ್ವವಸಾಹತುಶಾಹಿ ಅಧಿಕಾರಿಗಳು ಯುದ್ಧ ಪೂರ್ವ. ಅಭಿವೃದ್ಧಿ ಏಜೆನ್ಸಿಗಳು ಮತ್ತು ಎನ್.ಜಿ.ಓಗಳು ಮಹಿಳೆಯರನ್ನು ಏಕಾಂಗಿಯಾಗಿ ಅವರ ಸಾಮಾನ್ಯ ಪಾತ್ರಗಳಿಂದ ಅಂದರೆ ಹೆಂಡತಿ ಮತ್ತು ತಾಯಿಯಾಗಿ ಗುರ್ತಿಸಿತು ಮತ್ತು ಯೋಜನೆಗಳು ಮಹಿಳೆಯರನ್ನು ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಾದ ಪೋಷಕಾಂಶ, ಶಿಕ್ಷಣ ಮತ್ತು ಗೃಹ ಆರ್ಥಿಕತೆ(Home Economics) ಮತ್ತು ಅಭಿವೃದ್ಧಿ ಅಪ್ರೋಚ್‌ಗಳಿಂದ ನಿಷೇಧಿಸಿದವು. ಮಹಿಳೆಯರನ್ನು ಮಾರುಕಟ್ಟೆಯಲ್ಲಿ ಉತ್ಪಾದಿಸುವ ಕೆಲಸಗಾರರಂತೆ ಬಿಂಬಿಸಲಾಯಿತು. ಇದು ಅಭಿವೃದ್ಧಿಯಲ್ಲಿ ಮಹಿಳೆ ಪ್ರಾರಂಬವಾದಾಗಿನಿಂದ ಸಾಮಾನ್ಯ ಯೋಜನೆಯಾಗಿತ್ತು ಮತ್ತು ಹಾಗೆಯೇ ಪ್ರಭಾವ ಬೀರಿತ್ತು.

ನಂತರ ಎರಡನೇ ಆವೃತ್ತಿಯ ಅಭಿವೃದ್ಧಿಯಲ್ಲಿ ಮಹಿಳೆಯಲ್ಲಿ ಅನೇಕ ಸಂಶೋಧನೆಗಳು, ಚರ್ಚೆಗಳು ನಡೆದವು. ''ಡ್ಯಾನಿಸ್ಟ್ ಎಕನಾಮಿಸ್ಟ್ ಎಸ್ತರ್ ಬೋಸರಪ್''ರು ಬಹಳ ಪ್ರಭಾವಿ ವ್ಯಕ್ತಿಯಾಗಿದ್ದರು. ಅಭಿವೃದ್ಧಿಯಲ್ಲಿ ಮಹಿಳೆ ಚಳುವಳಿಯ ಹೊಸ ದೃಷ್ಟಿಕೋನದಿಂದ ಬೋಸರಪ್‌ರು ''ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ''ವನ್ನು ಕುರಿತು ವಿಶ್ಲೇಷಿಸಿದರು. ಇವರು ವಸಾಹತುಶಾಹಿ ಮತ್ತು ಪೂರ್ವ ವಸಹಾತುಶಾಹಿ ಕೃಷಿ ಪಾಲಿಸಿ ಅದರ ಉತ್ಪಾದನೆಗಳನ್ನು ಪಾಶ್ಚಾತ್ಯ ಸಂಗತಿಗಳು ವಿವರಿಸಿದರು. ಇದರಲ್ಲಿ ಮಹಿಳೆಯರನ್ನು ಕಡೆಗಣಿಸಲಾಗುತ್ತಿದೆ. ಮಹಿಳೆಯರು ಕೃಷಿ ಕ್ಷೇತ್ರದಲ್ಲಿ ಮಾಡುವ ಸಾಂಪ್ರದಾಯಿಕ ಕೆಲಸಗಳಿಂದ ಅವರನ್ನು ಕೈಬಿಡಲಾಗುತ್ತಿದೆ. ಹೀಗಾಗಿ ಕೃಷಿ ಕ್ಷೇತ್ರದಲ್ಲಿ ಪುರುಷನಷ್ಟೇ ಸಮಾನ ಉತ್ಪಾದನೆಯನ್ನು ಅನುಭವಿಸುವ ಹಕ್ಕು ಸ್ತ್ರೀಯರಿಗೂ ಇರಬೇಕೆನ್ನುತ್ತಾರೆ. ನಂತರ ಅಭಿವೃದ್ಧಿಯಲ್ಲಿ ಮಹಿಳೆಯಲ್ಲಿ 'ಸ್ತ್ರೀ ಪ್ಯಾಸಿವ್' ಆಗಿದ್ದಾಳೆ. ಆದರೆ ಆಕೆ ಆರ್ಥಿಕತೆಗೆ ಸಾಕಷ್ಟು ಕೊಟ್ಟಿದ್ದಾಳೆ. ಆದರೆ ಅಭಿವೃದ್ಧಿಯಲ್ಲಿ ಸ್ತ್ರೀಯರ ಪಾತ್ರದ ಕೊಂಡಿ ಕಳಚಿಕೊಂಡಂತೆ ಗೋಚರವಾಗುತ್ತದೆ.

ಅಭಿವೃದ್ಧಿಯಲ್ಲಿ ಮಹಿಳೆಯ ಸೈಂಧಾಂತಿಕತೆ ಮೂಲಕ ಹಲವಾರು ಏಜನ್ಸಿಗಳನ್ನು ನಾವು ಕಾಣುತ್ತೇವೆ. UNDW (The United Nations Deeades for women) ಮತ್ತು ಅದರ ಜೊತೆಗಿರುವ ಮಹಿಳಾ ಸಮ್ಮೇಳನಗಳು ವೀಕ್ ಅನ್ನು 'UNS'(United Nations System) ನೊಂದಿಗೆ ರಾಷ್ಟ್ರೀಯ ಹಂತದಲ್ಲಿ ರಾಷ್ಟ್ರೀಕೃತಗೊಳಿಸಿದವು. ಈ ವಿನಿಯೋಗ ವ್ಯವಸ್ಥೆಯ ಅನುಭವದಿಂದ ಅಭಿವೃದ್ಧಿ ಏಜೆನ್ಸಿಗಳಿಂದ ತೆಗೆದುಕೊಂಡ ಪಾಲಿಸಿ ಮತ್ತು ಗುರಿಗಳನ್ನು ಜಾರಿಗೆ ತರಲು ಪ್ರಯತ್ನಿಸಿತು. ಈ ಅಂಶಗಳು ಮುಖ್ಯವಾಹಿನಿಯ ಅಭಿವೃದ್ಧಿಯ ಅಂಶಗಳೊಂದಿಗೆ ಹೊಂದಾಣಿಕೆಗಾಗಿ ಸಾಮಾಜಿಕ ನ್ಯಾಯ ಮತ್ತು ಅಸಮಾನತೆಯನ್ನು ಮಹಿಳೆಯರಿಗೆ ಒದಗಿಸಬೇಕೆಂದು ತಿಳಿಸುತ್ತದೆ.

'ಯುನ್ ಮಹಿಳಾ ವರ್ಷ' ಅಭಿವೃದ್ಧಿ ಪ್ರಕ್ರಿಯೆಯನ್ನು ಮಹಿಳೆಯರ ಪಾತ್ರ ಹೇಗಿರಬೇಕೆಂಬುದರ ಬಗ್ಗೆ ಪ್ರಮುಖ ಚಿತ್ರಣವನ್ನು ನೀಡುವುದರಲ್ಲಿ ಮುಖ್ಯಪಾತ್ರವಹಿಸಿತು. ಮಹಿಳೆಯರ ಆಸಕ್ತಿಗಾಗಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸೌಲಭ್ಯಗಳನ್ನು ನೀಡುವಂತೆ ಸಲಹೆ ನೀಡಲಾಯಿತು. ಈ ಅವಧಿಯಲ್ಲಿ ಹೊಸ ಕಾಯ್ದೆಗಳನ್ನು ಮಹಿಳೆಯರ ಹಕ್ಕುಗಳಾಗಿ ಮತ್ತು ವಿಡ್ ಸಂಬಂಧ ಅಂಶಗಳಿಗಾಗಿ, ಅದರಲ್ಲಿ ಮಹಿಳೆಯರ ಭಾಗವಹಿಸುವಿಕೆ ಅಭಿವೃದ್ಧಿಯ ಲಾಭವನ್ನು ಪಡೆದುಕೊಳ್ಳುವಿಕೆಗಾಗಿ ಜಾರಿಗೊಳಿಸಲಾಯಿತು. ಈ ಕಾಯ್ದೆಗಳಲ್ಲಿ ಮುಖ್ಯವಾಗಿ ೧೯೭೯ರಲ್ಲಿ ''ಮಹಿಳೆಯರ ವಿರುದ್ಧದ ಎಲ್ಲಾ ತಾರತಮ್ಯಗಳನ್ನು ಹೋಗಲಾಡಿಸುವುದು'' ಎಂಬ ಕಾಯ್ದೆಯನ್ನು ನಿರ್ಮಿಸಿ ಅದರಲ್ಲಿ ಮಹಿಳೆಯರಿಗಾಗಿ ತರಬೇತಿ ಪಡೆಯಲು ಮಹಿಳೆಯರ ಹಕ್ಕುಗಳು, ಶಿಕ್ಷಣ, ಆಪ್ತಸಮಾಲೋಚನ ಕೇಂದ್ರಗಳು, ಮಾರುಕಟ್ಟೆ ಮತ್ತು ಲಾಭಗಳಿಸುವಿಕೆಯ ಸಮಾನ ಅವಕಾಶ ಅಗ್ರೇರಿಯನ್ ರಿಫಾರ್ಮ್ಸ್‌ನಿಂದ ಸಮಾನ ಚಿಕಿತ್ಸೆ ಮುಂತಾದ ಅಂಶಗಳನ್ನು ಈ ಕಾಯ್ದೆಯ ಮೂಲಕ ಧ್ವನಿ ಎತ್ತಬಹುದಾಗಿದೆ. ಅಲ್ಲದೇ ಈ ವರ್ಷದಲ್ಲಿ ಲಿಂಗಶ್ರಮ ವಿಭಜನೆಯಲ್ಲಿರುವ ವೇತನ ಸಮಸ್ಯೆಗಳನ್ನು ಚರ್ಚಿಸಲಾಯಿತು. ಆದರೆ ಅಧಿಕಾರಶಾಹಿ ವರ್ಗಗಳು ಅಭಿವೃದ್ಧಿ ಪಾಲಿಸಿಗಳನ್ನು ಮಾಡುವಾಗ ಲಿಂಗ ಸಂಬಂಧಗಳನ್ನು ದೃಷ್ಟಿಯಲ್ಲಿರಿಸಿ ಕೊಂಡು ಸಾಂಸ್ಕೃತಿಕ ಪ್ರಭಾವವನ್ನು ಬೀರುವುದನ್ನು ಒಪ್ಪಿಕೊಳ್ಳಲು ಹಿಂಜರಿದವು. ಈ ಸಂಗತಿಗಳು ಇಂದಿಗೂ ಕಂಡುಬರುತ್ತಿವೆ.

೧೯೬೦ ಮತ್ತು ೧೯೭೦ರ ಅಭಿವೃದ್ಧಿ ಚರ್ಚೆಯು ಒಡತನದ ನಿವಾರಣೆಗಾಗಿ ತಂತ್ರಗಳನ್ನು ರೂಪಿಸಿತು. ಬಡತನವು ಅತಿಯಾದ ಕಂದಾಚಾರಗಳಿಂದ ತುಂಬಿದೆ. ಹೀಗಾಗಿ ಇಂತಹ ಸಂಪ್ರದಾಯಗಳನ್ನು ತೆಗೆದು ಹಾಕಬೇಕೆಂದು ಹೇಳಲಾಯಿತು. ಬಡತನ ನಿರ್ಮೂಲನಕ್ಕಾಗಿ ಎರಡು ವಿಧಾನಗಳ ಅವಶ್ಯಕತೆ ಇದೆ.

೧. ಸರ್ಕಾರವು ಜನರಿಗಾಗಿ ಉದ್ಯೋಗವಕಾಶಗಳನ್ನು ಹೆಚ್ಚಿಸಬೇಕು ಮತ್ತು ಈ ಉದ್ಯೋಗಗಳು ಸುಸ್ಥಿರವಾಗಿದ್ದು ಕಾರ್ಮಿಕರಿಗೆ ನ್ಯಾಯಯುತವಾಗಿ ಆದಾಯವನ್ನು ನೀಡಬೇಕು.

೨. ಮೂಲಭೂತ ಅಗತ್ಯಗಳನ್ನು ಸಮರ್ಪಕವಾಗಿ ರೂಪಿಸುವುದು. ಈ ಅಂಶಗಳು ಮುಖ್ಯ ಸಲಹೆ ಎಂದರೆ ಅಭಿವೃದ್ಧಿಯ ಪ್ರಾಥಮಿಕ ಗುರಿ ಎಂದರೆ ಮಾನವ ಮೂಲಭೂತ ಅಗತ್ಯಗಳನ್ನು ಈಡೇರಿಸುವುದು. ಈ ವಿಧದಲ್ಲಿ ಎಲ್ಲಾ ಆರ್ಥಿಕ ಮೂಲಗಳಿಗಿಂತಲೂ ಮುಖ್ಯವಾಗಿ ಮೂಲಭೂತ ಅವಶ್ಯಕತೆಗಳಿಂದ ತೃಪ್ತಿಯಾಗಬೇಕು. ಇದು ಯಾವುದೇ ರೀತಿಯ ತಾರತಮ್ಯವನ್ನು ಒಳಗೊಂಡಿರಬಾರದು. ಶಿಶು ಮರಣದ ಪ್ರಮಾಣವನ್ನು ಕಡಿಮೆಗೊಳಿಸಿ ಸ್ತ್ರೀಯರಿಗೆ ಶಿಕ್ಷಣವನ್ನು ಒದಗಿಸುವುದು ಮನೆಯ ಅಧಿಕ ಆದಾಯವನ್ನು ಗಮನಿಸಿ ಕಡಿಮೆ ಧರದಲ್ಲಿಯೇ ಕುಟುಂಬ

ನಿಯಂತ್ರಣ ಮತ್ತು ಬೇಡದ ಗರ್ಭವನ್ನು ತಡೆಯುವುದು. ಈ ರೀತಿಯ ಮೂಲಭೂತ ಮಾರ್ಗವು ಆರ್ಥಿಕ ಸಂಪನ್ಮೂಲಗಳ ಬಳಕೆ ಮತ್ತು ಉತ್ತಮ ಮೂಲಭೂತ ಅವಶ್ಯಕತೆಗಳನ್ನು ನೀಡುವಲ್ಲಿ ಉತ್ತಮವಾಗಿದೆ.

ಅಭಿವೃದ್ಧಿಯಲ್ಲಿ ಮಹಿಳೆ: ಪರಿಣಾಮಗಳು

ಅಭಿವೃದ್ಧಿಯಲ್ಲಿ ಮಹಿಳಾ ಸಂಬಂಧಿಂತ ಪರಿಣಾಮಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು.

೧. ಚರ್ಚೆ ಮತ್ತು ಸಂಶೋಧನೆಯು ಉತ್ಪಾದಿಸುವಂತದ್ದು.

೨. ಸರ್ಕಾರ ಮತ್ತು ಅಭಿವೃದ್ಧಿ ಏಜನ್ಸಿಗಳ ಒಳಗೇ ಸಂಸ್ಥೆಗಳನ್ನು ಯಾಂತ್ರಿಕರಿಸಿ ಬೆಳೆಸುವುದು.

ಏಜನ್ಸಿಗಳ ಆಜ್ಞೆಯಂತೆ ಅಭಿವೃದ್ಧಿಯಲ್ಲಿ ಮಹಿಳೆಯರನ್ನು ಒಟ್ಟುಗೂಡಿಸುವುದು. ಇದರ ಪ್ರಕಾರ ಪ್ರಾಥಮಿಕ ಪರಿಕಲ್ಪನೆ ಮತ್ತು ವಿಶ್ಲೇಷಣೆಗಳು ಮಹಿಳೆ ಮತ್ತು ಅಭಿವೃದ್ಧಿಯ ಕಡೆ ವಾಲಿದೆ. ಆದರೆ ಸ್ವಲ್ಪ ಮಾತ್ರ ಗಮನವನ್ನು ಸರ್ಕಾರ ಮತ್ತು ಅಭಿವೃದ್ಧಿ ಏಜೆನ್ಸಿಗಳು ಒಳಗೊಂಡ ವಿಡ್‌ನ ಸಂಸ್ಥೆಗಳ ಪ್ರಭಾವದ ಕಡೆ ಕೊಡಲಾಗಿದೆ. ಈ ವಿಷಯಗಳು ಮುಂಬರುವ ಅಸಂಖ್ಯಾತ(UNRISD) ಅನ್‌ರೈಸ್ಟ್ ಪ್ರಚಾರಣೆಗಳಾಗಿವೆ.

ಸಮಾನತೆ ಹೆಚ್ಚು ಒತ್ತು ನೀಡುವ ಅಭಿವೃದ್ಧಿಯಲ್ಲಿ ಮಹಿಳೆ ದೃಷ್ಟಿಕೋನವು, ಮಹಿಳೆಯರು ಸಾರ್ವಜನಿಕ ಕ್ಷೇತ್ರವನ್ನು ಪ್ರವೇಶಿಸಬೇಕು. ಅಸಂಪ್ರದಾಯಿಕ ಉದ್ಯೋಗಗಳಲ್ಲಿ ತೊಡಗಬೇಕೆಂದು ಹೇಳುತ್ತದೆಯೇ ಹೊರತು ಅವರ ಖಾಸಗಿ ಬದುಕಿನ ಬಗ್ಗೆ ಕಾಳಜಿ ತೋರಿಸುವುದಿಲ್ಲ. ಇದರಿಂದ ಇವರ ಪ್ರಯತ್ನಗಳು ಗ್ರಾಮೀಣ ಮಹಿಳೆಯರ ಮೇಲೆ ಯಾವ ಪರಿಣಾಮವನ್ನು ಬೀರುವುದಿಲ್ಲ. 'ಅಭಿವೃದ್ಧಿಯಲ್ಲಿ ಮಹಿಳೆ' ಪ್ರತಿಪಾದಿಸಿದ ಕೆಲವು ಕಾರ್ಯಕ್ರಮಗಳಿಗೆ ಮಹಿಳೆಯರು ಸ್ಪಂದಿಸಲೇ ಇಲ್ಲ. ಈ ಅಂಶವನ್ನು ಅದು ಗಣನೆಗೆ ತೆಗೆದುಕೊಳ್ಳಲಿಲ್ಲ, ಜವಾಬ್ದಾರಿ ಕೆಲಸ ಹಾಗೂ ಮೌಲ್ಯಗಳ ಅಸಮಾನ ಹಂಚಿಕೆಯನ್ನು 'ಸ್ವಾಭಾವಿಕ' ಎಂದು ಪರಿಗಣಿಸಿ ಅದನ್ನು ಬದಲಾಯಿಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ಈ ದೃಷ್ಟಿಕೋನ ಪ್ರತಿಪಾದಿಸಿತು.

ಈ ನಿಲುವಿನ ಮತ್ತೊಂದು ದೋಷವೆಂದರೆ ಇದು ಅಭಿವೃದ್ಧಿಯ ಗುರಿಗಳನ್ನು ಮತ್ತು ಗುರಿ ಸಾಧನೆಗೆ ಅಳವಡಿಸಿಕೊಂಡ ಕಾರ್ಯವಿಧಾನಗಳನ್ನು ಪ್ರಶ್ನಿಸುವುದಿಲ್ಲ. ಬದಲಿಗೆ ಮುಖ್ಯವಾಹಿನಿ ಅಭಿವೃದ್ಧಿಯ ಸಿದ್ಧಾಂತ ಮತ್ತು ತತ್ವಗಳನ್ನು ಅನುಸರಿಸಿಕೊಂಡು ಬಡತನ, ಬಡತನದಿಂದ ಸಮಾನತೆ, ಸಮಾನತೆಯಿಂದ ಸಾಮರ್ಥ್ಯದೆಡೆಗೆ ಮುಂದುವರಿಯುತ್ತದೆ. ಅದು ತನ್ನದೇ ಆದ ಸಿದ್ಧಾಂತ, ತತ್ವ, ಕಾರ್ಯ ಹಾಗೂ ನೀತಿಗಳನ್ನು ಹೊಂದಿಲ್ಲ. ಸಮಾನತೆಯ ಬಗ್ಗೆ ಚರ್ಚಿಸಿದರೂ

ಅಭಿವೃದ್ಧಿಯಲ್ಲಿ ಮಹಿಳೆಯು ಪುರುಷ ಮತ್ತು ಮಹಿಳೆಯರ ನಡುವೆ ಆಗಬೇಕಾಗಿರುವ ಮೂಲಭೂತ ಸಾಮಾಜಿಕ ಸಂಬಂಧಗಳ ಬದಲಾವಣೆ ಮತ್ತು ಸಂಪನ್ಮೂಲಗಳ ಹಂಚಿಕೆಗಳ ಬಗ್ಗೆ ಮಾತನಾಡುವುದಿಲ್ಲ. ಆದರೆ ವ್ಯವಸ್ಥೆಯನ್ನು ಪ್ರಶ್ನಿಸುವುದಕ್ಕೆ ಅಥವಾ ಅವರಲ್ಲಿ ಮೂಲಭೂತ ಬದಲಾವಣೆ ತರುವುದಕ್ಕಾಗಲೀ ಪ್ರಯತ್ನಿಸಲಿಲ್ಲ. ಮಹಿಳಾ ಸಮಸ್ಯೆಗಳೆಂದರೆ ಅಸಮಾನತೆ, ತರಬೇತಿ ಕೊರತೆ, ಸಂಪನ್ಮೂಲಗಳ ಕೊರತೆ, ಶ್ರಮ ಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಸಾಧ್ಯವಾಗದಿರುವುದು ಮುಂತಾದವುಗಳಿಗೆ ತಾಂತ್ರಿಕ ಪರಿಹಾರಗಳನ್ನು ಕಂಡುಕೊಳ್ಳಲು ''ಅಭಿವೃದ್ಧಿಯಲ್ಲಿ ಮಹಿಳೆ'' ಆದ್ಯತೆ ನೀಡಿತು.

'ಅಭಿವೃದ್ಧಿಯಲ್ಲಿ ಮಹಿಳೆ' ಸೈದ್ಧಾಂತಿಕ ನಿಲುವಿನ ಅಡಿಯಲ್ಲಿ ಸರ್ಕಾರಗಳ ಮೂಲಕ ಮಹಿಳೆಯರಿಗೋಸ್ಕರ ವಿವಿಧ ಕಾರ್ಯಕ್ರಮ, ನೀತಿಗಳನ್ನು ಜಾರಿಗೆ ತಂದರೂ ಸರ್ಕಾರಗಳ ವಿವಿಧ ಹಂತಗಳಲ್ಲಿ ನೀತಿ-ನಿರೂಪಣೆಯಲ್ಲಿ, ಯೋಜನೆಗಳನ್ನು ತಯಾರಿಸುವಲ್ಲಿ ಮಹಿಳೆಯರಿಗೆ ಲಿಂಗ ಸೂಕ್ಷ್ಮತೆಯ ಕೊರತೆ ಇರುವುದರಿಂದ ಮಹಿಳೆಯರ ನಿಜವಾದ ಅನುಭವ ಅವರ ಅಗತ್ಯ ಆಸಕ್ತಿಗಳ ಬಗ್ಗೆ ಸಾಕಷ್ಟು ಅರಿವಿರಲಿಲ್ಲ. ಇದರಿಂದಾಗಿ ಮಹಿಳಾ ಅಭಿವೃದ್ಧಿಗೆ ಪೂರಕದಂತಹ ಪ್ರಶ್ನೆಗಳು ಕಂಡುಬರಲಿಲ್ಲ. ಎಲ್ಲಿಯವರೆಗೆ ಮಹಿಳೆಯರು ನೀತಿ ನಿರೂಪನೆ ಮತ್ತು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವುದಿಲ್ಲವೋ ಅಲ್ಲಿಯವರೆಗೆ ಮಹಿಳಾ ಪರ ಅಭಿವೃದ್ಧಿ ಉಂಟಾಗುವುದು ಸಾಧ್ಯವಿಲ್ಲ. ಅಥವಾ ಅಭಿವೃದ್ಧಿ ಲಾಭಗಳು ಮಹಿಳೆಯರನ್ನು ತಲುಪುವುದಿಲ್ಲ ಎಂಬ ಅಂಶವನ್ನು 'ಅಭಿವೃದ್ಧಿಯಲ್ಲಿ ಮಹಿಳೆ'ಯ ಸಿದ್ಧಾಂತ ಗಮನಿಸಲಿಲ್ಲ. ಅಭಿವೃದ್ಧಿಯಲ್ಲಿ ಮಹಿಳೆ ದೃಷ್ಟಿಕೋನದ ಪ್ರಯತ್ನಗಳು ಅನೇಕ ಕ್ಷೇತ್ರಗಳಲ್ಲಿ ನಡೆದರೂ ಅವುಗಳಲ್ಲಿ ಹಲವು ಸಾಂಪ್ರದಾಯಿಕ ಮೌಲ್ಯಗಳ ಕೊರತೆಗಳು ಕಂಡುಬಂದವು. ಮಹಿಳಾ ಅಭಿವೃದ್ಧಿ ಯೋಜನೆಗಳಿಗೆ ಹೆಚ್ಚಿನ ಹಣಕಾಸಿನ ಸಹಾಯ ದೊರೆಯುವುದಿಲ್ಲ. ಇಂತಹ ಕಾರ್ಯಕ್ರಮಗಳು ಕೇವಲ ಕಲ್ಯಾಣ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿ ಬಿಡುತ್ತವೆ ಹಾಗೆ ಮಹಿಳೆಯರ ಸಂತಾನೋತ್ಪತ್ತಿ ಪಾತ್ರಕ್ಕೆ ಹೆಚ್ಚು ಒತ್ತನ್ನು ನೀಡುತ್ತವೆ. ಅಲ್ಲದೆ ಕಡಿಮೆ ಆದಾಯ ನೀಡುವ ನೆಪದಲ್ಲಿ ಅವರ ಕೆಲಸದ ಹೊರೆಯನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳು ಹೆಚ್ಚಾದವು. ಈ ವ್ಯವಸ್ಥೆಯಲ್ಲಿ ಲಿಂಗ ವ್ಯವಸ್ಥೆಯ ಸಂಬಂಧಗಳು ಸಮಾನ ವೇತನ ಮತ್ತು ಅಭಿವೃದ್ಧಿ ಹೊರೆಯನ್ನು ಸಮಾನವಾಗಿ ಹಂಚುವುದಕ್ಕೆ ಹೆಚ್ಚಿನ ಗಮನವನ್ನು ನೀಡಿಲ್ಲ ಎಂಬುದು ಗಮನಾರ್ಹ. ಜೊತೆಗೆ ಪಾಲಸಿಗಳಿಂದ ಮಹಿಳಾ ಕಲ್ಯಾಣ ದೃಷ್ಟಿಕೋನವು ಬದಲಾಯಿತು. ಹಿಂದಿನ ಅಭಿವೃದ್ಧಿ ಯೋಜನೆ ಮತ್ತು ಕಾರ್ಯಕ್ರಮಗಳಲ್ಲಿರುವಂತೆ ಮಹಿಳೆಯರ ಉತ್ಪಾದನೆಯಲ್ಲಿ ಅನೇಕ ಸಮಸ್ಯೆಗಳು ಮತ್ತೆ ಹುಟ್ಟಿಕೊಂಡವು. 'ವಿಡ್'ನ ಧ್ಯೇಯವು ಕಲ್ಯಾಣ ಅಂಶಗಳಿಂದ ದೂರವಾಯಿತು. '೧೯೭೦'ರ ಮೂಲಭುತ ಅಗತ್ಯಗಳ ಅಭಿವೃದ್ಧಿಯಲ್ಲಿ ವಕ್ರದೃಷ್ಟಿಯನ್ನು ಬೀರಿತು. ಇದರಿಂದಾಗಿ ಸ್ತ್ರೀವಾದಿಗಳು ಅಭಿವೃದ್ಧಿ ಪ್ರಕ್ರಿಯೆಗಳ ಅಗತ್ಯಗಳನ್ನು ಮೀರಿಸಿದರು.

'ವಿಡ್' ಮಹಿಳೆಯರ ಉತ್ಪಾದನೆಯ ಮಾದರಿಗಳನ್ನು ಗಮನಿಸದೆ ಉತ್ಪಾದನೆ ಮತ್ತು ಪುನರುತ್ಪಾದನಾ ಮಾದರಿಗಳನ್ನು ಗಮನಿಸುತ್ತದೆ ಎಂದು ಟೀಕಿಸಲಾಯಿತು.

ಅಭಿವೃದ್ಧಿ ಮತ್ತು ಮಹಿಳೆ(WAD)

ಅಭಿವೃದ್ಧಿ ಮತ್ತು ಮಹಿಳೆಯನ್ನು ನೋಡಿದಾಗ ಅಭಿವೃದ್ಧಿಯ ಜೊತೆ ಜೊತೆಗೆ ಮಹಿಳೆಯರನ್ನು ಪರಿಗಣಿಸಲಾಗಿದೆ ಮತ್ತು ಅಭಿವೃದ್ಧಿಯಲ್ಲಿ ಮಹಿಳೆಯರನ್ನು ಪಾಲುದಾರರನ್ನಾಗಿ ಮಾಡಿಕೊಂಡಿರುವುದನ್ನು ಕಾಣಬಹುದು ಮತ್ತು ಅಭಿವೃದ್ಧಿಗೆ ಮಹಿಳೆಯರ ಕೊಡುಗೆ ಏನೆಂಬುದನ್ನು ತಿಳಿಯಬಹುದಾಗಿದೆ. ಅಭಿವೃದ್ಧಿಗೆ ಮಹಿಳೆಯರ ಕೊಡುಗೆ ಅಪಾರ. ಆದರೆ ಅವರಿಗೆ ಸಿಗುತ್ತಿರುವ ಲಾಭ ಮಾತ್ರ ಶೂನ್ಯ ಫಲಿತಾಂಶವಾಗಿದೆ ಅಂದರೆ ಮಹಿಳೆಯರ ಅಭಿವೃದ್ಧಿಯಲ್ಲಿ ತನ್ನನ್ನು ಪರೋಕ್ಷವಾಗಿ ತೊಡಗಿಸಿಕೊಂಡಿದ್ದರೂ ಸಹ ಪ್ರಧಾನ ಧಾರೆಯ ಮೌಲ್ಯಗಳು ಅದನ್ನು ಕಡೆಗಣಿಸಿ ಮಹಿಳೆಯರ ಶ್ರಮವನ್ನು ಅಸಂಘಟಿತ ಎಂದು ಘೋಷಿಸಿದೆ. ಆದರೆ ಭಾರತದ ರಾಷ್ಟ್ರೀಯ ಆದಾಯದಲ್ಲಿ ಮಹಿಳೆಯೂ ಸಹ ಶೇಕಡಾವಾರು ಪಾಲು ಪಡೆದರೂ ಅದು ಅಗೋಚರವಾಗಿ ಉಳಿದಿದೆ. ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಂಡಿದ್ದರೂ ಸಹ ಯೋಜನೆಗಳ ದೋಷಪೂರಿತ ರಚನೆಯಿಂದ ಅವು ಕಾರ್ಯಗತಕ್ಕೆ ಬರುತ್ತಿಲ್ಲ. ಇದಕ್ಕ ಸರ್ಕಾರ ಮತ್ತು ಅಧಿಕಾರಿಗಳೇ ನೇರ ಜವಾಬ್ದಾರಿಗಳಾಗಿದ್ದಾರೆ. ಆದರೆ ಬಹಳ ಚಾಣಾಕ್ಷ ತನದಿಂದ ಅವರೂ ಅವರ ಯೋಜನೆಗಳ ಲೋಪದೋಷಗಳನ್ನು ಮುಚ್ಚಿಡುತ್ತಿದ್ದಾರೆ. ಏಕೆಂದರೆ ಉತ್ತಮ ತಳಹದಿಯುಳ್ಳ ಯೋಜನೆಗಳನ್ನು ರೂಢಿಸುವುದರಿಂದ ಅದರ ಲಾಭವನ್ನು ಸ್ತ್ರೀಯರು ಪಡೆಯುತ್ತಾರೆ. ಇದರಿಂದ ಅವರ ಅಭಿವೃದ್ಧಿ ಹೆಚ್ಚುತ್ತದೆ. ಮಹಿಳೆಯರು ಪುರುಷರಿಗೆ ಪೈಪೋಟಿಯಾಗ ಬಾರದೆಂದು ಭಾವಿಸಿ ಯೋಜನೆಗಳನ್ನು ಪುರುಷ ಪ್ರಧಾನ ಮೌಲ್ಯಗಳಿಂದ ರಚಿಸಿ ಪಿತೃ ಪ್ರಧಾನತೆಯನ್ನು ಹೆಚ್ಚು ಬಲಿಷ್ಟಗೊಳಿಸುವ ಹುನ್ನಾರಗಳನ್ನು ಪುರುಷರು ರಚಿಸುವುದರಿಂದಲೇ ಅಭಿವೃದ್ಧಿಯಲ್ಲಿ ಮಹಿಳೆಯರು ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತಿಲ್ಲ.

ಲಿಂಗತ್ವ ಮತ್ತು ಅಭಿವೃದ್ಧಿ(GAD)

ಭಾರತೀಯ ಸಂಸ್ಕೃತಿಯು ಪ್ರಮುಖವಾಗಿ ಪುರುಷ ಪ್ರಧಾನ ಮೌಲ್ಯಗಳನ್ನೇ ರೂಪಿಸಿಕೊಂಡು ಮೈದಳೆದಿದೆ. ಇಂದಿಗೂ ಸಹ ಪುರುಷ ಪ್ರಧಾನ ಮೌಲ್ಯಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಜಾರಿಯಲ್ಲಿದೆ. ಇಂತಹ ದೇಶಗಳಲ್ಲಿ ಒಂದು ಅಭಿವೃದ್ಧಿ ಕಾರ್ಯಕ್ರಮಗಳು ರೂಪುಗೊಳ್ಳಬೇಕೆಂದರೆ ಅದು ಪುರುಷ ಪ್ರಧಾನತೆಯ ಮೌಲ್ಯಗಳನ್ನು ಬಿಂಬಿಸುವಂತಿರಬೇಕು. ಆದರೆ ಮಹಿಳಾ ಪರ ಯೋಜನೆಗಳಿಗೂ ಸಹ ಇದೇ ಸಿದ್ಧಾಂತ ಅನ್ವಯಿಸುತ್ತಿರುವುದು ಸೋಜಿಗದ ಸಂಗತಿಯಾಗಿದೆ. ಮಹಿಳೆಯರ ಅಭಿವೃದ್ಧಿಯನ್ನು ಪುರುಷರ ಹತೋಟಿಯಲ್ಲಿ ಸಾಧಿಸುವ ಹುನ್ನಾರಗಳು ಇಂದಿಗೂ

ನಡೆಯುತ್ತಿವೆ. ದೇಶದ ಅಭಿವೃದ್ಧಿಯಲ್ಲಿ ಲಿಂಗ ಅಭಿವೃದ್ಧಿ ಮುಖ್ಯವಾಗಿರಬೇಕೆಂದು ಹೇಳುವಾಗ ಮಹಿಳೆಯರನ್ನು ಕೈಬಿಟ್ಟಿರುತ್ತಾರೆ. ಇಂತಹ ದೋಷಪೂರಿತ ವಾತಾವರಣದಲ್ಲಿ ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿದರೆ ಅದೂ ಕೂಡ ದೋಷಪೂರಿತವಾಗಿ ಯಶಸ್ಸಿನ ಮೆಟ್ಟಿಲನ್ನು ಏರದೇ ವೈಫಲ್ಯದ ಹಾದಿಯನ್ನು ತುಳಿಯುತ್ತದೆ.

ಹೀಗೆ ಅಭಿವೃದ್ಧಿಯಲ್ಲಿ ಮಹಿಳೆ, ಅಭಿವೃದ್ಧಿ ಮತ್ತು ಮಹಿಳೆ, ಲಿಂಗತ್ವ ಮತ್ತು ಅಭಿವೃದ್ಧಿ ಸಿದ್ಧಾಂತಗಳು ಮಹಿಳೆಯರನ್ನು ಅಭಿವೃದ್ಧಿಯಲ್ಲಿ ಪರಿಗಣಿಸದೇ ಅವರನ್ನು ಅಭಿವೃದ್ಧಿಯಿಂದ ದೂರಸರಿಸುತ್ತಿದೆ. ಮಹಿಳೆಯರ ಅಭಿವೃದ್ಧಿಗೆಂದು ವಿಶೇಷವಾಗಿ ಗಮನಹರಿಸಬೇಕಾದ ಅಭಿವೃದ್ಧಿ ಸಿದ್ಧಾಂತಗಳೇ ಮಹಿಳೆಯರ ಅಭಿವೃದ್ಧಿಗೆ ಮಾರಕವಾಗುತ್ತಿದೆ. ಇದಕ್ಕೆ ಮುಖ್ಯ ಕಾರಣವೆಂದರೆ 'ಲೈಂಗಿಕಾವಾದಿ ಚಿಂತನಾಕ್ರಮ'. ಈ ರೀತಿಯ ಚಿಂತನಾ ಕ್ರಮಗಳು ಸಮಾಜದಲ್ಲಿರುವುದರಿಂದ ಸ್ತ್ರೀ-ಪುರುಷರ ನಡುವೆ ಭಿನ್ನಾಭಿಪ್ರಾಯಗಳನ್ನು ಸೃಷ್ಟಿಸುತ್ತದೆ ಎಂದರೆ ಸಮಾಜದಲ್ಲಿ ಪಿತೃಪ್ರಧಾನ ಮೌಲ್ಯಗಳೇ ಹೆಚ್ಚಾಗಿರುವುದರಿಂದಾಗಿ ಪುರುಷನನ್ನು ಪ್ರಧಾನವಾಗಿ ಬಿಂಬಿಸಲಾಗುತ್ತದೆ. ಹೀಗಾಗಿ ಪುರುಷನ ಅಭಿವೃದ್ಧಿಗೆ ಪ್ರಾಧಾನ್ಯತೆ ನೀಡಿ ಆತನಿಗೆ ಅನುಕೂಲವಾಗುವಂತಹ ಯೋಜನೆಗಳನ್ನು ರೂಪಿಸಿಕೊಡಲಾಗುತ್ತದೆ. ಇತ್ತ ಮಹಿಳೆಯರು ಪುರುಷನ ಹಿಡಿತದಲ್ಲಿರಬೇಕು ಮತ್ತು ಆತನ ಮೇಲೆ ಅವಲಂಬಿಯಾಗಿರಬೇಕೆಂದು ಆಕೆಯನ್ನು ಪುರುಷನ ಸುಪರ್ದಿಗೆ ಬರುವಂತೆ ಸಮಾಜದಲ್ಲಿ ನೀತಿ-ನಿಯಮಗಳನ್ನು ಜಾರಿಗೊಳಿಸಲಾಗಿದೆ. ಅಲ್ಲದೇ ಮಹಿಳೆಯರನ್ನು ಅಭಿವೃದ್ಧಿ ಪಡಿಸಲು ರೂಪಿಸಿದ ಯೋಜನೆಗಳನ್ನು ಪಿತೃಪ್ರಧಾನ ಮೌಲ್ಯಗಳಿಂದ ರಚಿಸಿ ಜಾರಿಗೊಳಿಸಲಾಗಿದೆ. ಇದರಿಂದ ಅಂತಹ ಯೋಜನೆಗಳು ಸ್ತ್ರೀಯರಿಗೆ ಸಂಪೂರ್ಣ ಪ್ರಯೋಜನವಾಗದೇ ಮುಖ್ಯವಾಹಿನಿಯಲ್ಲಿ ತಮ್ಮನ್ನು ತಾವು ಗುರ್ತಿಸಿಕೊಳ್ಳಲು ಪರದಾಡುತ್ತಿದ್ದಾರೆ. ಹೀಗಾಗಿಯೇ ಇಂದಿಗೂ ಅನೇಕ ಮಹಿಳೆಯರು ನಾಲ್ಕು ಗೋಡೆಗಳ ಮಧ್ಯೆ ಸಾಂಪ್ರದಾಯಿಕ ಪಾತ್ರಗಳಾದ ತಾಯಿ-ಹೆಂಡತಿ ಪಾತ್ರಗಳನ್ನು ಮಾಡುತ್ತ ದಬ್ಬಾಳಿಕೆಗೆ ಒಳಗಾಗುತ್ತಿದ್ದಾಳೆ. ಸ್ತ್ರೀಯರನ್ನು ಸಾಂಪ್ರದಾಯಿಕ ಪಾತ್ರಗಳಿಗೇ ಸೀಮಿತಗೊಳಿಸಿ ಪುರುಷನ ಅಧಿಪತ್ಯವನ್ನು ಒಪ್ಪಿಕೊಂಡು ಜೀವನ ನಡೆಸಬೇಕೆಂಬುದೇ ಈ ಯೋಜನೆಗಳ ಅಪರೋಕ್ಷ ಚಿಂತನೆಯಾಗಿದೆ. ಇದರಿಂದಾಗಿ ಮಹಿಳೆಯರು ಸಮಸ್ಯೆಗಳಲ್ಲಿ ಸಿಲುಕಿಕೊಂಡಿದ್ದಾರೆ. ಅವರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸಬೇಕಾದ ಅಭಿವೃದ್ಧಿ ಸಿದ್ಧಾಂತಗಳೇ ಪುರುಷ ಮೌಲ್ಯಗಳಿಂದ ತುಂಬಿದ್ದು ಸ್ತ್ರೀಯರ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ.

ಈ ರೀತಿಯ ಮುಖ್ಯವಾಹಿನಿಯ ಸಮಸ್ಯೆಗಳನ್ನು ಪರಿಹರಿಸಿ ಮಹಿಳೆಯರನ್ನು ಅಭಿವೃದ್ಧಿ ಪಥದತ್ತ ಸಾಗಿಸಬೇಕಾದ ಅವಶ್ಯಕತೆ ಇದೆ. ದೇಶದ ಅರ್ಧಭಾಗದಷ್ಟಿರುವ ಮಹಿಳೆಯರನ್ನು ಅಭಿವೃದ್ಧಿ ಪಡಿಸುವುದರ ಮೂಲಕ ದೇಶದ ಅಭಿವೃದ್ಧಿಯನ್ನು ಬಹಳಷ್ಟು ಮಟ್ಟಿಗೆ

ಸುಧಾರಿಸಬಹುದಾಗಿದೆ. ಇದಕ್ಕಾಗಿ ಸರ್ಕಾರವು ಅಭಿವೃದ್ಧಿ ಸಿದ್ಧಾಂತಗಳನ್ನು ಸ್ತ್ರೀವಾದಿ ಸಿದ್ಧಾಂತಗಳ ಮೇಲೆ ಆಧರಿಸಿ ರಚಿಸುವುದರಿಂದಾಗಿ ಮಹಿಳೆಯರ ಅಭಿವೃದ್ಧಿಯಲ್ಲಿನ ಸೂಕ್ಷ್ಮ ತಿರುವುಗಳನ್ನು ಅಗತ್ಯಗಳನ್ನು ಗುರುತಿಸಿ ಅವುಗಳಿಗೆ ತಕ್ಕಂತೆ ಸಿದ್ಧಾಂತಗಳನ್ನು ಬದಲಾಯಿಸುವುದರಿಂದಾಗಿ ಯೋಜನೆಗಳು ಮತ್ತಷ್ಟು ಬಲಗೊಂಡು ಮಹಿಳೆಯರ ಅವಶ್ಯಕತೆಗಳಿಗೆ ಸಂಪೂರ್ಣವಾಗಿ ಸ್ಪಂದಿಸುತ್ತದೆ. ಇದರಿಂದಾಗಿ ಮಹಿಳೆಯರ ಅಭಿವೃದ್ಧಿಯು ಪೂರ್ಣ ಪ್ರಮಾಣದಲ್ಲಿ ಸಾಧ್ಯವಾಗುವುದರ ಜೊತೆಗೆ ಮುಖ್ಯವಾಹಿನಿಯ ಮಹಿಳೆಯರು ತಮ್ಮ ಇರುವಿಕೆಯನ್ನು ಪ್ರಬಲವಾಗಿ ಖಚಿತಪಡಿಸಿದಂತಾಗುತ್ತದೆ. ಮಹಿಳೆಯರ ಅಭಿವೃದ್ಧಿಯಾದರೆ ದೇಶದ ಸಮಗ್ರ ಅಭಿವೃದ್ಧಿಯಾಗುತ್ತಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

೨.೬ ಸ್ತ್ರೀವಾದಿ ಪಂಥಗಳು ಮತ್ತು ಮಹಿಳಾ ಅಭಿವೃದ್ಧಿ

ಅಭಿವೃದ್ಧಿ ಸಿದ್ಧಾಂತಗಳಲ್ಲಿ ಸ್ತ್ರೀವಾದಿ ಸಿದ್ಧಾಂತ/ಸ್ತ್ರೀವಾದಿ ಸಿದ್ಧಾಂತಗಳ ಧೋರಣೆಯಲ್ಲಿ ಅಭಿವೃದ್ಧಿ ಇಂದು ಜಾಗತಿಕ ಮಟ್ಟದಲ್ಲಿ ಅಭಿವೃದ್ಧಿಯಾಗುತ್ತಿದ್ದರೂ ಮಹಿಳೆಯರ ಪ್ರಗತಿ ಜಾಗತಿಕ ಮಟ್ಟದಲ್ಲಿ ಅಭಿವೃದ್ಧಿಯಾಗುತ್ತಿಲ್ಲ. ಮಹಿಳೆಯರನ್ನು ಅಭಿವೃದ್ಧಿಯಿಂದ ಬೇರ್ಪಡಿಸಿ ಅವರನ್ನು ಅಭಿವೃದ್ಧಿಯಿಂದ ಭಿನ್ನವಾಗಿ ಚಿತ್ರಿಸಿರುವುದರ ಪರಿಣಾಮವಾಗಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಅಭಿವೃದ್ಧಿಯ ಸಿದ್ಧಾಂತಗಳಲ್ಲಿ ಹಲವಾರು ತೊಡಕುಗಳಿವೆ. ಈ ತೊಡಕುಗಳನ್ನು ಅಭಿವೃದ್ಧಿ ಸಿದ್ಧಾಂತಗಳು ತಮ್ಮದೇ ಆದ ಶೈಲಿಯಲ್ಲಿ ವ್ಯಾಖ್ಯಾನಿಸಿವೆ.

೧. ಉದಾರವಾದಿ ಸ್ತ್ರೀವಾದ

ಉದಾರವಾದಿ ಸ್ತ್ರೀವಾದವು ಹದಿನಾರು ಮತ್ತು ಹದಿನೇಳನೇ ಶತಮಾನದಲ್ಲಿ ಉಗಮವಾಯಿತು. ಪ್ರತಿಯೊಬ್ಬ ವ್ಯಕ್ತಿಗೂ ಸ್ವಹಿತಾಶಕ್ತಿಯನ್ನು ಕಾಯ್ದುಕೊಳ್ಳುವ ಹಕ್ಕುಂಟು. ಅದಕ್ಕಾಗಿ ಸರ್ಕಾರ ಅವರನ್ನು ಬಲಪಡಿಸಬೇಕೆಂದು ಉದಾರವಾದಿ ಸ್ತ್ರೀವಾದ ಹೇಳುತ್ತದೆ. ಇದೇ ಅಂಶವನ್ನು ಮಹಿಳೆಯರಿಗೆ ಅನ್ವಯಿಸಿಕೊಂಡು ಉದಾರವಾದಿ ಸ್ತ್ರೀವಾದವು ಬೆಳೆಯಿತು. ಪ್ರತಿ ನಾಗರೀಕರಂತೆ ಮಹಿಳೆಯರಿಗೂ ಸಹ ಅವರ ಹಕ್ಕನ್ನು ಅನುಭವಿಸುವ ಹಕ್ಕಿದೆ ಎಂದು ಪ್ರತಿವಾದಿಸಿತು.

ಉದಾರವಾದಿ ಸ್ತ್ರೀವಾದವು ಮಹಿಳೆಯರ ಅಭಿವೃದ್ಧಿಗೆ ತನ್ನದೇ ಆದ ನಾಗರೀಕ ಹಕ್ಕಿನ ಸಲಹೆಗಳನ್ನು ನೀಡುತ್ತಾ ಈ ಮೂಲಕ ಮಹಿಳೆಯರ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುತ್ತದೆಂದು ಪ್ರತಿವಾದಿಸುತ್ತದೆ. ಇದರೊಂದಿಗೆ ಅಭಿವೃದ್ಧಿಯಲ್ಲಿನ ಪ್ರಮುಖ ತೊಡಕುಗಳನ್ನು ಹೀಗೆ ವಿವರಿಸುತ್ತದೆ....

* ಸಮಾಜದಲ್ಲಿ ಸ್ತ್ರೀ-ಪುರುಷರ ನಡುವೆ ಸಮಾನತೆಗೆ ಅವಕಾಶವಿಲ್ಲದಿರುವುದರಿಂದ ದೇಶದ ಪ್ರಗತಿಗೆ ಇದು ಮಾರಕವಾಗಿದೆ.

* ಮಹಿಳೆಯರಿಗೆ ಸಮಾನ ಅವಕಾಶವಿಲ್ಲದಿರುವುದು ಅಭಿವೃದ್ಧಿ ಪ್ರಕ್ರಿಯೆಯ ಒಂದು ನ್ಯೂನತೆಯಾಗಿದೆ.

* ಪುರುಷರಂತೆ ಮಹಿಳೆಯರು ಹೊರಗಿನ ದುಡಿಮೆಯಲ್ಲಿ ತೊಡಗಿಸಿಕೊಳ್ಳದೇ ಕುಟುಂಬ ಜವಾಬ್ದಾರಿಗಳನ್ನು ನಿಭಾಯಿಸುವುದು ಸಮಾಜದ ಅಭಿವೃದ್ಧಿಯ ಒಂದು ಭಾಗವಾಗಿದೆ ಎಂದು ಒತ್ತಿ ಹೇಳಲಾಗುತ್ತಿದೆ.

* ವೃತ್ತಿಗಿಂತ ವಿವಾಹಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡುವುದು ಮತ್ತು ವಿವಾಹ-ಮಕ್ಕಳ ಜನನದ ನಂತರ ಕೆಲಸ ಬಿಡುವುದು ಇವುಗಳಿಂದ ಮಹಿಳೆಯರು ಆರ್ಥಿಕ ಚಟುವಟಿಕೆಗಳ ಪರಿಧಿಯಿಂದ ದೂರ ಉಳಿಯುವಂತಾಗಿದೆ.

* ತಾಂತ್ರಿಕ ಕ್ಷೇತ್ರ, ಬ್ಯಾಂಕಿಂಗ್, ಪೊಲೀಸ್, ಸೈನ್ಯ, ವ್ಯವಹಾರ ಮತ್ತಿತರ ಸ್ಪರ್ಧಾತ್ಮಕ ಕ್ಷೇತ್ರಗಳಲ್ಲಿ ಭಾಗವಹಿಸಲು ಮಹಿಳೆಯರಿಗೆ ಸಾಧ್ಯವಾಗದಿರುವುದು ಮತ್ತು ನಿರ್ಧಾರ ಕೈಗೊಳ್ಳುವಂತಹ ಸ್ಥಾನಗಳನ್ನು ಪಡೆದುಕೊಳ್ಳಲು ಮಹಿಳೆಯರು ವಿಫಲರಾಗುವುದು.

* ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಸಮಾನ ಅವಕಾಶ ಸಿಗದಿರುವುದು ಮತ್ತು ಮಹಿಳೆಯರಲ್ಲಿ ವೈಚಾರಿಕತೆಯ ಕೊರತೆ ಇರುವುದು.

* ಸಮಾಜದಲ್ಲಿ ಲಿಂಗ ಸಮಾನತೆಗೆ ಕಾಯ್ದೆ-ಕಾನೂನು ಸಂಪ್ರದಾಯದ ಕಟ್ಟುಪಾಡುಗಳಿಂದ ಅಡಚಣೆಯುಂಟಾಗುತ್ತದೆ.

ಈ ಮೇಲ್ಕಂಡ ಸಮಸ್ಯೆಗಳಿಂದ ಮಹಿಳೆಯರ ಅಭಿವೃದ್ಧಿಯು ಸಾಧ್ಯವಾಗುತ್ತಿಲ್ಲ. ಈ ಎಲ್ಲಾ ಸಮಸ್ಯೆಗಳ ಹಿಂದೆ ಮಹಿಳೆಯರ ಬದುಕಿಗೆ ಇರುವ ಪ್ರಮುಖ ತೊಡಕೆಂದರೆ ಮಹಿಳಾ ಸಮುದಾಯದಲ್ಲಿರುವ ಸಾಂಪ್ರದಾಯಿಕ ಮೌಲ್ಯಗಳು ಇವುಗಳಿಂದಾಗಿ ಇನ್ನೂ ಮಹಿಳೆಯರ ಅಭಿವೃದ್ಧಿ ಕುಂಟುತ್ತಲೇ ಸಾಗುತ್ತಿದೆ.[೧೯]

೩. ಮಾರ್ಕ್ಸ್‌ವಾದಿ ಅಭಿವೃದ್ಧಿ ಸಿದ್ಧಾಂತ

ಮಾರ್ಕ್ಸ್‌ವಾದಿ ಅಭಿವೃದ್ಧಿ ಸಿದ್ಧಾಂತವು ಕಾರ್ಲ್‌ಮಾರ್ಕ್ಸ್ ಮತ್ತು ಸಮಾಜವಾದದ ಪ್ರತಿಪಾದಕರಿಂದ ಅಭಿವೃದ್ಧಿಗೊಂಡ ಒಂದು ಸಿದ್ಧಾಂತವಾಗಿದೆ. ಸೈಂಟ್ ಸಿಮೋನ್, ರಾಬರ್ಟ್ ಓಪಿನ್ ಮತ್ತು ಕಾರ್ಲ್‌ಮಾರ್ಕ್ಸ್ ಅವರು ಸಮಾಜವಾದದ ಪ್ರತಿಪಾದಕರು. ಕಾರ್ಲ್‌ಮಾರ್ಕ್ಸ್ ಅವರು ''ಕಮ್ಯುನಿಷ್ಟ್ ಮ್ಯಾನಿಫೆಸ್ಟೋ'' ಮತ್ತು ''ದಾಸ್ ಕ್ಯಾಪಿಟಲ್'' ಸಮಾಜದ ವಿವಿಧ ವರ್ಗಗಳ

ಜನರ ನಡುವಿನ ಸತತವಾದ ಆರ್ಥಿಕ ಹೋರಾಟವೇ ಇತಿಹಾಸ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಮಾರ್ಕ್ಸ್ ಅವರು ಈವರೆಗೆ ಆಗಿ ಹೋದ ಎಲ್ಲಾ ಸಮಾಜಗಳ ಇತಿಹಾಸವೆಂದರೆ ವರ್ಗ ಕಲಹಗಳ ಇತಿಹಾಸವಾಗಿದೆ. ಸ್ವತಂತ್ರರು-ಗುಲಾಮರು, ದೊರೆಗಳು-ಆಳುವವರು, ಒಡೆಯರು-ದಾಸರು ಅಥವಾ ಒಂದೇ ಮಾತಿನಲ್ಲಿ ಹೇಳುವುದಾದರೆ ಶೋಷಿಸುವವರು ಮತ್ತು ಶೋಷಿತ ವರ್ಗಗಳ ನಡುವೆ ಕಲಹ ನಡೆದು ಬಂದಿದೆ ಎಂದು ಇತಿಹಾಸವನ್ನು ವ್ಯಾಖ್ಯಾನಿಸುತ್ತಾರೆ.[೭] ಇತಿಹಾಸ ಶೋಷಿಸುವವರು ಮತ್ತು ಶೋಷಿತರ ನಡುವಿನ ಹೋರಾಟ ಎಂಬ ಅಂಶ ಇಂತಹ ಪ್ರಸ್ತುತ ಸ್ಥಿತಿಗೆ ಅನ್ವಯವಾಗುತ್ತಿದೆ ಎಂದು ಪುರುಷ ಶೋಷಣೆಯ ವಿರುದ್ಧ ಸ್ತ್ರೀಯರ ಹೋರಾಟವು ಮಾರ್ಕ್ಸ್‌ವಾದಿ ನೆಲೆಯಲ್ಲಿ ಸಾಗುತ್ತಿರುವುದು ಕಂಡುಬರುತ್ತಿದೆ.

ಮಾರ್ಕ್ಸ್ ಅವರು ಬಂಡವಾಳಶಾಹಿಗಳ ವಿರೋಧಿಗಳಾಗಿದ್ದಾರೆ. ''ಬಂಡವಾಳಶಾಹಿಗಳು ಕಾರ್ಮಿಕರಿಗೆ ಕಡಿಮೆ ಕೂಲಿಯನ್ನು ನೀಡಿ ಅಧಿಕ ಲಾಭವನ್ನು ಪಡೆಯುತ್ತಾರೆ. ಆ ಲಾಭದಿಂಧ ಅಧಿಕ ಸಂಪತ್ತನ್ನು ಹೊಂದುತ್ತಾರೆ. ಆ ಮೂಲಕ ಕಾರ್ಮಿಕರನ್ನು ಶೋಷಿಸುತ್ತಾರೆ ಎಂದು ತಮ್ಮ ಸಿದ್ಧಾಂತ ಮಂಡಿಸುತ್ತಾರೆ. ಬಂಡವಾಳಶಾಹಿಗಳು ಪಡೆಯುವ ಲಾಭವು 'ಅತಿರಿಕ್ತ ಮೌಲ್ಯ'ವಾಗಿದೆ ಅಥವಾ 'ಹೆಚ್ಚುವರಿ ಮೌಲ್ಯ'ವಾಗಿದೆ ಎಂದಿದ್ದಾರೆ.[೮]

ಬಂಡವಾಳಶಾಹಿಗಳು ಕಾರ್ಮಿಕರಿಗೆ ಕಡಿಮೆ ಕೂಲಿ ನೀಡಿ ಕಾರ್ಮಿಕರು ಉತ್ಪಾದಿಸುವ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಕಾರ್ಮಿಕರಿಗೆ ನೀಡುವ ಎರಡು ಪಟ್ಟು ಕೂಲಿಯ ಬೆಲೆಗೆ ಮಾರಾಟ ಮಾಡುತ್ತಾರೆ. ಇದರಿಂದ ಬಂದ ಹೆಚ್ಚುವರಿ ಹಣವೇ ಅತಿರಿಕ್ತ ಮೌಲ್ಯವಾಗಿದೆ. ಹೀಗೆ ಬಂಡವಾಳಶಾಹಿಗಳು ಕಾರ್ಮಿಕ ವರ್ಗವನ್ನು ಕಡಿಮೆ ಕೂಲಿ ನೀಡುವ ಮೂಲಕ ಶೋಷಣೆ ಮಾಡುತ್ತಾರೆ ಎಂಬ ವಾದ ಮಂಡಿಸುತ್ತಾರೆ. ಇಂದು ಇದೇ ರೀತಿಯ ವ್ಯವಸ್ಥೆಯ ಲಿಂಗಸಂಬಂಧಿ ಆಯಾಮದ ನೆಲೆಯಲ್ಲಿ ಸಮಾಜದಲ್ಲಿ ನಡೆಯುತ್ತಿವೆ. ಇಲ್ಲಿ ಬಂಡವಾಳ ಶಾಹಿಗಳು ಮತ್ತು ಪುರುಷಶಾಹಿ ವರ್ಗ ಮಹಿಳಾ ಕಾರ್ಮಿಕರಿಗೆ ಕಡಿಮೆ ಕೂಲಿ ನೀಡುವ ಮೂಲಕ ಶೋಷಿಸುತ್ತಿರುವುದು ಅಸಂಘಟಿತ ವಲಯ ಅಥವಾ ಅನೌಪಚಾರಿಕ ವಲಯದಲ್ಲಿ ಕಂಡುಬರುತ್ತಿದೆ.

'ಬಂಡವಾಳ ಶಾಹಿಗಳು ಇನ್ನೂ ಹೆಚ್ಚಿನ ಲಾಭ ಪಡೆಯುವ ಉದ್ದೇಶದಿಂದ ಮತ್ತು ಉತ್ಪಾದನಾ ವೆಚ್ಚ ಕಡಿಮೆ ಮಾಡುವುದರಿಂದ ಉತ್ಪಾದನೆಯಲ್ಲಿ ಯಂತ್ರೋಪಕರಣಗಳನ್ನು ಬಳಸುತ್ತಾರೆ. ಇದರಿಂದ ಅನೇಕ ಕಾರ್ಮಿಕರು ಉದ್ಯೋಗ ಕಳೆದುಕೊಂಡು ನಿರುದ್ಯೋಗಿ ಗಳಾಗುತ್ತಾರೆ. ಹೀಗೆ ಸಮಾಜದಲ್ಲಿ ನಿರುದ್ಯೋಗಿಗಳಾಗಿ ಉಳಿದ ಕಾರ್ಮಿಕರು ಮತ್ತು ಯಂತ್ರೋಪಕರಣಗಳ ಬಳಕೆಯಿಂದ ಉದ್ಯೋಗ ಕಳೆದುಕೊಂಡ ಕಾರ್ಮಿಕರು ಸೇರಿ 'ಕೈಗಾರಿಕಾ ಮೀಸಲುಪಡೆ' ಎಂಬ ನಿರುದ್ಯೋಗಿಗಳ ವರ್ಗ ನಿರ್ಮಾಣವಾಗುತ್ತದೆ. ವರ್ಗ ಬಂಡವಾಳಗಾರರ

ವಿರುದ್ಧ ಹೋರಾಟ ಮುಂದುವರಿಸುತ್ತದೆ. ಹೀಗೆ ಬಂಡವಾಳಗಾರರ ವಿರುದ್ಧ ಹೋರಾಟ ಮುಂದುವರಿಸುತ್ತದೆ. ಹೀಗೆ ಬಂಡವಾಳ ಶಾಹಿ ಮತ್ತು ಕಾರ್ಮಿಕ ವರ್ಗದ ನಡುವೆ ಹೋರಾಟ ನಡೆದು ಬಂಡವಾಳಶಾಹಿ ಅವನತಿ ಹೊಂದುತ್ತದೆ. ಆಗ ಕಾರ್ಮಿಕರ ಅಧಿಕಾರವಿರುವ ಸಮಾಜದ ನಿರ್ಮಾಣವಾಗುತ್ತದೆ. ಕಾಲಾಂತರದಲ್ಲಿ ಇದು ನಶಿಸಿ ಹೋಗಿ ಸಮತಾವಾದ ನಿರ್ಮಾಣವಾಗುತ್ತದೆ ಎಂದು ಕಾರ್ಲ್‌ಮಾರ್ಕ್ಸ್ ತಮ್ಮ ಸಿದ್ಧಾಂತವನ್ನು ಮಂಡಿಸುತ್ತಾರೆ.[೯]

ಇಂದು ಸಹ ಆರ್ಥಿಕ ವ್ಯವಸ್ಥೆಯಲ್ಲಿ ಬಂಡವಾಳಶಾಹಿಯ ನಾಶದ ಜೊತೆಗೆ ಪುರುಷಶಾಹಿಯ ನಾಶ ಅಗತ್ಯವಾಗಿದೆ. ಏಕೆಂದರೆ ಇಂದು ಮಹಿಳಾ ಕಾರ್ಮಿಕರು ಮತ್ತು ಮಹಿಳೆಯರು ಬಂಡವಾಳಶಾಹಿಯ ಶೋಷಣೆಯ ಜೊತೆಗೆ ಪುರುಷರ ಶೋಷಣೆಯನ್ನು ಅನುಭವಿಸುತ್ತಿದ್ದಾಳೆ. ಹೀಗಾಗಿ ಇಂದು ಪುರುಷಶಾಹಿ ನಿರ್ಮೂಲನೆಗೆ ಹೋರಾಟ ನಡೆಯಬೇಕಾದುದು ಅಗತ್ಯವಿದೆ.[೧೦]

೪. ಮಾರ್ಕ್ಸ್‌ವಾದಿ ಸ್ತ್ರೀವಾದ

ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಾರ್ಕ್ಸ್‌ವಾದಿ ಸ್ತ್ರೀವಾದವು ತನ್ನದೇ ಆದ ಸೈದ್ಧಾಂತಿಕ ಮೌಲ್ಯಗಳಿಂದ ಮಹಿಳಾ ಅಭಿವೃದ್ಧಿಯನ್ನು ವಿಶ್ಲೇಷಿಸುತ್ತದೆ. ಮಾರ್ಕ್ಸ್‌ವಾದದ ಪ್ರಕಾರ ಮಾನವ ಶ್ರಮವೆನ್ನುವುದು ಮೂಲಭೂತವಾಗಿ ಸಾಮಾಜಿಕವಾದುದು. ಮಾನವ ಶ್ರಮವೆನ್ನುವುದು ಅಮೂರ್ತ ಕಲ್ಪನೆಯೇನಲ್ಲ ಮತ್ತು ಇದು ವಂಶಪಾರಂಪರ್ಯವಾಗಿ ಹರಿದು ಬಂದಿರುವ ಗುಣವೂ ಅಲ್ಲ. ಅದು ಸಾಮಾಜಿಕ ಸಂಬಂಧಗಳ ಮೂಲಕ ಸಂದರ್ಭ ಸ್ಪಂದಿಯಾಗಿ ರೂಪ ಪಡೆಯುತ್ತದೆ. ಮಾನವ ಶ್ರಮವು ಸಾಮಾಜಿಕ ಸಂಬಂಧಗಳ ಮೂಲಕ ಉತ್ಪಾದನಾ ವ್ಯವಸ್ಥೆಯೊಂದನ್ನು ರೂಪಿಸುತ್ತದೆ. ಮಾರ್ಕ್ಸ್‌ವಾದದ ಪ್ರಕಾರ ಮನುಷ್ಯ ಸಂಬಂಧಗಳು ಉತ್ಪಾದನಾ ಸಂಬಂಧಗಳಿಂದ ರೂಪುಗೊಳ್ಳುತ್ತದೆ. ಇಲ್ಲಿ ಮನುಷ್ಯರ ಅರಿವು ಅಥವಾ ಪ್ರಜ್ಞೆಯ ಪಾತ್ರವು ಅನುಷಂಗಿಕ.

ಮಾರ್ಕ್ಸ್‌ವಾದದ ಬಹುಮುಖ್ಯ ಸಂಗತಿಯೆಂದರೆ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ವರ್ಗ ಸಂಬಂಧಗಳು ಅಂತರ್ಗತಗೊಂಡಿರುತ್ತವೆ ಎಂಬುದಾಗಿದೆ. ಖಾಸಗಿ ಆಸ್ತಿಯ ಅಸ್ತಿತ್ವವು ಸಮಾಜದಲ್ಲಿ ಪರಸ್ಪರ ವಿರೋಧಿಯಾದ ಎರಡು ವರ್ಗಗಳನ್ನು ಮೂಡಿಸಿ ಬಿಡುತ್ತವೆ. ಈ ವರ್ಗಗಳ ನಡುವಿನ ಸಂಬಂಧಗಳು ಶ್ರೇಣೀಕೃತವಾಗಿರುತ್ತದೆ ಮತ್ತು ಶೋಷಣಾತ್ಮಕವಾಗಿರುತ್ತವೆ. ಬಂಡವಾಳಶಾಹಿ ಸ್ವರೂಪದ ಅಭಿವೃದ್ಧಿಯು ಮುಖ್ಯವಾಗಿ ಶ್ರೇಣೀಕೃತ ಮತ್ತು ಶೋಷಣಾತ್ಮಕ ವಾದುದಾಗಿದೆ. ಇವು ಅಭಿವೃದ್ಧಿಗೆ ಅಂಟಿಕೊಂಡ ಮಿತಿಗಳೂ ಹೌದು. ವರ್ಗ ಸಂಬಂಧಗಳು ಶ್ರೇಣೀಕೃತವೂ-ಶೋಷಣಾತ್ಮಕವೂ ಆಗಿರುವುದರಿಂದ ಅವು ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತವೆ. ಮಾರ್ಕ್ಸ್‌ವಾದದ ಬಹುಮುಖ್ಯ ಪ್ರತಿಪಾದನೆಯೆಂದರೆ ಅಭಿವೃದ್ಧಿಯು ಸಂಘರ್ಷಣಾವಾದಿಯಾಗಿರುತ್ತದೆ ವಿನಃ ಸೌಹಾರ್ದಯುತವಾಗಿರುವುದಿಲ್ಲ ಎಂಬುದಾಗಿದೆ. ಈ ಮೂಲಕ ಅಭಿವೃದ್ಧಿ ಚಾರಿತ್ರಿಕ ಹಿನ್ನಲೆಯಲ್ಲಿ

ನಾವು ನೋಡಿರುವ ಸಂಗತಿ ಸಮಾಜದಲ್ಲಿ ಶೋಷಣೆ ಮಾಡುವವರ, ಮಾಡಿಸಿಕೊಳ್ಳುವವರ, ವರ್ಗ, ಅಧಿಕಾರ ಶಾಹಿತ್ವ ಮತ್ತು ಬಂಡವಾಳ ಶಾಹಿತ್ವವನ್ನು ಹುಟ್ಟು ಹಾಕುವುದರ ಜೊತೆಗೆ ಮಹಿಳಾ ಗುಂಪನ್ನು ಈ ಶ್ರೇಣೀಕೃತ ವರ್ಗ ವ್ಯವಸ್ಥೆಯ ನಡುವಿನಲ್ಲಿಯೇ ಪಿತೃ ಪ್ರಧಾನ ಅಧಿಕಾರಶಾಹಿತ್ವವನ್ನು ಬೆಳೆಸಿಕೊಂಡು ಬಂದಿರುವುದು ಬಂಡವಾಳ ಶಾಹಿ ಮತ್ತು ಅಧಿಕಾರಶಾಹಿಯ ಒಂದು ಗುಂಪಾಯಿತು. ಅದೇ ತೆರನಾಗಿ ಈ ಶ್ರೇಣಿಯಲ್ಲಿ ಬರುವ ಬಂದಿರುವ ಪರಿಧಿಯನ್ನು ಸಮಾಜ ಬೆಳೆಸುತ್ತಲೇ ಬಂದಿತು. ಅದು ಇಂದಿಗೂ ಅಭಿವೃದ್ಧಿ ಸಿದ್ಧಾಂತ ಮತ್ತು ಪ್ರಕ್ರಿಯೆಗೆ ತೊಡಕಾಗಿದೆ. ಅದರ ಪರಿಣಾಮವಾಗಿಯೇ ಇಂದಿಗೂ ಮಹಿಳೆಯರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಮಾನವ ಶ್ರಮವು ಅಭಿವೃದ್ಧಿಯ ಮೂಲ ಚಾಲಕ ಶಕ್ತಿ ಎಂಬುದನ್ನು ಮಾರ್ಕ್ಸ್‌ವಾದವು ಪ್ರತಿಪಾದಿಸುತ್ತಾ ಬಂದಿದೆ. 'ಏಂಜೆಲ್ಸ್' ಪ್ರಕಾರ ಸಂತಾನೋತ್ಪತ್ತಿಗೆ ಸಂಬಂಧಪಟ್ಟ ಲಿಂಗ ಸಂಬಂಧಿ ವಿಭಜನೆಯೇ ಪ್ರಥಮ ಶ್ರಮವಿಭಜನೆಯಾಗಿದೆ. ಪುರುಷರು ಹೊಟ್ಟೆ ಬಟ್ಟೆ ನೋಡಿಕೊಳ್ಳುವ ಶ್ರಮದಲ್ಲಿ ನಿರತರಾದರೆ ಮಹಿಳೆಯರು ಸಂತಾನೋತ್ಪತ್ತಿ ದುಡಿಮೆಯಲ್ಲಿ ನಿರತರಾಗಿರುತ್ತಾರೆ. ಮೂಲದಲ್ಲಿ ಶ್ರಮವಿಭಜನೆಯು ಸಮಾನತೆಯ ಗುಣವನ್ನು ಪಡೆದಿದ್ದರೆ ಅದು ಉತ್ಪಾದನಾ ಸಂಬಂಧಗಳಲ್ಲಿ ಬದಲಾವಣೆಯಾದಂತೆ ಲಿಂಗ ಸಂಬಂಧಿ ಶ್ರಮ ವಿಭಜನೆಯು ಶ್ರೇಣೀಕೃತವೂ ಮತ್ತು ಶೋಷಣಾತ್ಮಕವೂ ಆಗತೊಡಗಿತು. ಪುರುಷರ ದುಡಿಮೆ-ಶ್ರಮವು ಪ್ರಧಾನವಾಗಿ ಮಹಿಳೆಯರ ದುಡಿಮೆ ಶ್ರಮವು ಅಧೀನವಾಗತೊಡಗಿತು. ಮಹಿಳೆಯರ ಅಧೀನ ಸ್ಥಾನಮಾನಕ್ಕೆ, ಮಹಿಳೆಯರ ಅಡಿಯಾಳುತನಕ್ಕೆ ಇಲ್ಲಿ ಮುಖ್ಯ ಕಾರಣ ಖಾಸಗೀ ಮಾಲಿಕತ್ವ, ಎಂಜೆಲ್ಸ್ ಪ್ರಕಾರ ಶೋಷಣೆಯೆನ್ನುವುದು ಹುಟ್ಟಿಕೊಂಡಿದ್ದೆ ಮಹಿಳೆಯರ ಮೇಲೆ ಪುರುಷರು ನಡೆಸಿದ ಶೋಷಣೆಯಾಗಿದೆ.

ಬಂಡವಾಳಶಾಹಿ ಮತ್ತು ಮಾರುಕಟ್ಟೆ ವ್ಯವಸ್ಥೆಗಳು ಪ್ರಬಲವಾದಂತೆ ಸಂತಾನೋತ್ಪತ್ತಿ ದುಡಿಮೆ ಮತ್ತು ಆಹಾರೋತ್ಪಾದನೆ ದುಡಿಮೆಗಳ ನಡುವೆ ಅಂತರ-ಅಸಮಾನತೆಯು ತೀವ್ರವಾಗುತ್ತಾ ನಡೆಯಿತು. ಸಂತಾನೋತ್ಪತ್ತಿಯು ಖಾಸಗಿಯಾದುದೆಂದು ಅದನ್ನು ಕುಟುಂಬದ ವ್ಯಾಪ್ತಿಗೆ ಸೀಮಿತಗೊಳಿಸಲಾಯಿತು. ಅರ್ಥಿಕೋತ್ಪಾದನೆಯು ಸಾರ್ವಜನಿಕವೆಂದು ಅದನ್ನು ಆರ್ಥಿಕತೆಯ ವ್ಯಾಪ್ತಿಗೆ ವಿಸ್ತರಿಸಲಾಯಿತು. ಈ ಬಗೆಯ ಬಿರುಕಿನಿಂದಾಗಿ ಆರ್ಥಿಕೋತ್ಪಾದನೆ ಮತ್ತು ಸಾರ್ವಜನಿಕ ನೆಲೆಯಲ್ಲಿ ಸಹಭಾಗಿಗಳಾಗುವುದು ಮಹಿಳೆಯರಿಗೆ ಸಾಧ್ಯವಾಗಲಿಲ್ಲ.

ಹೀಗೆ ಮಾರ್ಕ್ಸ್‌ವಾದವು ತನ್ನದೇ ಆದ ರೀತಿಯಲ್ಲಿ ಅಭಿವೃದ್ಧಿಯನ್ನು ಬಿಂಬಿಸುತ್ತದೆ. ಇದರಲ್ಲಿ ಮುಖ್ಯವಾಗಿ ಲಿಂಗ ಶ್ರಮ ವಿಭಜನೆಯನ್ನು ನಾವು ಕಾಣಬಹುದು. ಜೈವಿಕ ಲಿಂಗದ

ಆಧಾರದ ಮೇಲೆ ಸ್ತ್ರೀ-ಪುರುಷರಿಬ್ಬರೂ ತಮ್ಮದೇ ಆದ ಕೆಲಸಗಳನ್ನು ನಿಭಾಯಿಸುತ್ತಾರೆ ಎಂದರೆ ಸ್ತ್ರೀಯು ಮಕ್ಕಳ ಪಾಲನೆ, ಗೃಹ ಸಂಬಂಧಿ ಕೆಲಸಗಳಲ್ಲಿ ತೊಡಗಿಕೊಂಡರೆ, ಪುರುಷನು ಹೊರಗೆ ಆರ್ಥಿಕ ಮೂಲದ ಮುಖ್ಯವಾಹಿನಿಯಲ್ಲಿ ತೊಡಗಿಕೊಂಡಿರುತ್ತಾನೆ. ಹೀಗಾಗಿ ಪುರುಷನಿಗೆ ಸ್ತ್ರೀಯರಿಗಿಂತಲೂ ಮಾನ್ಯತೆ ಹೆಚ್ಚಿರುವುದರಿಂದ ಗೃಹಿಣಿಯಾದ ಮಹಿಳೆಯರ ದುಡಿಮೆಯು ಆರ್ಥಿಕ ಅಭಿವೃದ್ಧಿಯಲ್ಲಿ ಪರಿಗಣಿಸಲ್ಪಡುವುದಿಲ್ಲ. ಈ ರೀತಿಯ ಲಿಂಗ ಶ್ರಮ ವಿಭಜನೆಯನ್ನು ಮಾರ್ಕ್ಸ್‌ವಾದಿಗಳು ಪ್ರಶ್ನಿಸುತ್ತಾ ಗೃಹ ಸಂಬಂಧಿ ಕೆಲಸಗಳಿಗೂ ಸಹ ಮಹಿಳೆಯರಿಗೆ ಸಂಬಳ ನೀಡಬೇಕು ಮತ್ತು ಅವರನ್ನು ಸಹ ಆರ್ಥಿಕತೆಯ ಮುಖ್ಯ ವಾಹಿನಿಯಲ್ಲಿ ಗುರ್ತಿಸಬೇಕೆಂದು ಹೇಳುತ್ತಾರೆ.

ಮುಖ್ಯವಾಗಿ ಸಮಾಜದಲ್ಲಿ ಅಭಿವೃದ್ಧಿಗೆ ತೊಡಕಾಗಿರುವ ಅಂಶವೆಂದರೆ ಅದು ಲಿಂಗ ಅಸಮಾನತೆ. ಅದರಲ್ಲೂ ಆರ್ಥಿಕತೆಯ ವಿಚಾರಗಳಿಗೆ ಬಂದಾಗ ಮಹಿಳೆಯರನ್ನು ಇನ್ನೂ ಕೆಳದರ್ಜೆಯವರಂತೆ ಪರಿಗಣಿಸಲಾಗುತ್ತಿದೆ. ಪ್ರಮುಖವಾಗಿ ಸಮಾನ ಪಾಲಸಿ ಮತ್ತು ಸಮಾನ ವೇತನಗಳಿಂದ ಮಹಿಳೆಯರು ವಂಚಿತರಾಗುತ್ತಿದ್ದಾರೆ. ಪಾಲಸಿ ಮತ್ತು ವೇತನಗಳಲ್ಲಿ ಪಾರದರ್ಶಕತೆ ಕಂಡುಬರುವಂತೆ ಯೋಜನೆಗಳನ್ನು ರೂಪಿಸಿದರೂ ಸಹ ಅವು ಯಶಸ್ವಿಯಾಗಿ ಜಾರಿಗೆ ಬರುವಲ್ಲಿ ವಿಫಲವಾಗುತ್ತಿದೆ. ಮುಖ್ಯವಾಗಿ ಸಮಾನ ವೇತನಗಳ ಬಗ್ಗೆ ಹಲವಾರು ಚರ್ಚೆಗಳು ನಡೆದಿವೆ. ಇಂದಿಗೂ ನಡೆಯುತ್ತಲೇ ಇದೆ. ಆದರೆ ಸಮಾನ ವೇತನವನ್ನು ಎಲ್ಲಾ ಕ್ಷೇತ್ರಗಳಲ್ಲಿ ಯಶಸ್ವಿಯಾಗಿ ನಿಗದಿಪಡಿಸಲಾಗುತ್ತಿಲ್ಲ. ದಿನಗೂಲಿ ಕಾರ್ಮಿಕರಿಂದ ಹಿಡಿದು ಉನ್ನತ ಅಧಿಕಾರವನ್ನು ಹೊಂದಿರುವವರವರೆಗೆ ಸಮಾನ ವೇತನಕ್ಕಾಗಿ ಪ್ರತಿಭಟನೆಗಳು, ಬೇಡಿಕೆಗಳ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಲಾಗುತ್ತಿದೆ. ಆದರೆ ಅವು ಯಾವುದೂ ಈಡೇರುತ್ತಿಲ್ಲ.

ನಮ್ಮ ಸಮಾಜದಲ್ಲಿ ಬೇರೂರಿರುವಂತಹ ಪಿತೃ ಪ್ರಧಾನ ಮೌಲ್ಯಗಳು, ಸಂಸ್ಕೃತಿ-ಸಂಪ್ರದಾಯಗಳು, ಪೂರ್ವಾಗ್ರಹಗಳು ಮತ್ತು ಲಿಂಗ ಶ್ರೇಣಿ-ಲಿಂಗ ಅಸಮಾನತೆಯ ಕಾರಣಗಳಿಂದಾಗಿ ಅಭಿವೃದ್ಧಿಯಲ್ಲಿ ಮಹಿಳೆಯು ಅದೃಶ್ಯಳಾಗಿದ್ದಾಳೆ. ಈ ಮೇಲ್ಕಂಡ ಅಂಶಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ನಮಗೆ ಅನೇಕ ಕಾರಣಗಳು ಮಹಿಳೆಯರ ಅಭಿವೃದ್ಧಿಯು ಕುಂಠಿತಗೊಂಡಿದೆ ಎಂಬುದಕ್ಕೆ ಸಾಕ್ಷ್ಯಗಳನ್ನು ಒದಗಿಸುತ್ತದೆ.

೫. ಸಮಾಜವಾದಿ ಸ್ತ್ರೀವಾದ

ಸಮಾಜವಾದಿ ಸ್ತ್ರೀವಾದವು ಉದಾರವಾದ ಮತ್ತು ಮಾರ್ಕ್ಸ್‌ವಾದಗಳ ನಿಲುವುಗಳನ್ನು ಇಟ್ಟುಕೊಂಡು ಬೆಳದಂತೆ ಸ್ತ್ರೀವಾದ ತೀವ್ರಗಾಮಿ ಸ್ತ್ರೀವಾದದಿಂದ ಕೂಡ ಪ್ರಭಾವಿತಗೊಂಡಿದೆ. ಇತರ ಸ್ತ್ರೀವಾದಗಳು ಒಂದೊಂದು ಅಂಶಕ್ಕೆ ಒತ್ತು ಕೊಟ್ಟು ಅದರ ಮೂಲಕ ಸ್ತ್ರೀ-ಶೋಷಣೆಯ

ಮೂಲವನ್ನು ಹುಡುಕಲು ಪ್ರಯತ್ನಿಸಿದವು. ಆದರೆ ಈ ಎಲ್ಲಾ ಅಂಶಗಳು ಸೇರಿದ ಒಂದು ಸಮಗ್ರ ದೃಷ್ಟಿಕೋನದಿಂದ ಲಿಂಗ ತಾರತಮ್ಯವು ಸೇರಿದಂತೆ ಸ್ತ್ರೀ ಶೋಷಣೆಗೆ ಕಾರಣವನ್ನು ಹುಡುಕುವ ಪ್ರಯತ್ನವಾಗಬೇಕೆಂದು ಅರಿತ ಹಲವು ಸ್ತ್ರೀವಾದಿಗಳು ಸಮಾಜವಾದಿ ಸ್ತ್ರೀವಾದವನ್ನು ಹುಟ್ಟುಹಾಕಿದರು.

ಸಮಾಜವಾದ ಸ್ತ್ರೀವಾದಿ ಸಿದ್ಧಾಂತದ ಪ್ರಕಾರ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಮಹಿಳಾ ವಿಷಯಗಳು, ಸಂಗತಿಗಳು ಕೇವಲ ಲಿಂಗ ಅಸಮಾನತೆಯ ತಳಹದಿಯಲ್ಲಿಯ ಕುರುಹುಗಳನ್ನು ಹೊತ್ತು ಸಂರಚಿತಗೊಂಡಿರುವ ಅಭಿವೃದ್ಧಿ ಪ್ರಕ್ರಿಯೆ ಕೂಡ ಅಪರಿಪೂರ್ಣವಾಗಿದೆ ಎಂದು ಹೇಳಲಾಗುತ್ತದೆ.

ಈ ಸಮಾಜವಾದಿ ಸ್ತ್ರೀವಾದಿ ಸಿದ್ಧಾಂತವು ಮಹಿಳಾ ಅಭಿವೃದ್ಧಿಯಲ್ಲಿರುವ ತೊಡಕುಗಳನ್ನು ಹೀಗೆ ವಿಶ್ಲೇಷಿಸುತ್ತದೆ.

* ವರ್ಣಬೇಧದ ಜೊತೆಗೆ ಲಿಂಗಬೇಧವನ್ನು ಮಹಿಳೆಯರ ಪರಾಧೀನತೆಗೆ ಮುಖ್ಯ ಕಾರಣವೆಂದು ಗುರುತಿಸುತ್ತದೆ.
* ಮಹಿಳೆಯರಿಗೆ ಕಡಿಮೆ ವೇತನ, ಭವಿಷ್ಯದಲ್ಲಿ ಭರವಸೆ ಇಲ್ಲದ ಕೆಲಸಗಳನ್ನು ನೀಡುವುದರಿಂದ ಉದ್ಯೋಗ ಕ್ಷೇತ್ರದಲ್ಲಿ ಲಿಂಗಾಧಾರಿತ ಶ್ರಮ ವಿಭಜನೆಯು ಮಹಿಳೆಯರ ವಿರುದ್ಧವಾಗಿ ಕೆಲಸ ಮಾಡುತ್ತದೆ.
* ಸ್ತ್ರೀಯರನ್ನು ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ತುಳಿತಕ್ಕೊಳಪಡಿಸಿರುವುದು ಅಭಿವೃದ್ಧಿಗೆ ಮಾರಕವಾಗಿದೆ.
* ಹೊಸ ಸಮಾಜವನ್ನು ಕಟ್ಟಲು ಸ್ತ್ರೀ-ಪುರುಷರಿಬ್ಬರೂ ಒಟ್ಟಿಗೆ ಕೆಲಸ ಮಾಡದಿರುವುದು ಮತ್ತು ಅನ್ಯಾಯಗಳ ವಿರುದ್ಧ ಹೋರಾಡದಿರುವುದು.
* ಎಲ್ಲಾ ಮಹಿಳೆಯರು ಒಗ್ಗೂಡದಿರುವುದು.
* ಲಿಂಗಾಧಾರಿತ ಶ್ರಮ ವಿಭಜನೆಯ ಮೂಲ ಮತ್ತು ಸಮಾಜದ ವಿವಿಧ ಸಂಸ್ಥೆಗಳಲ್ಲಿ ಕಂಡುಬರುವ ಮಹಿಳೆಯರ ಪರಾಧೀನತೆಯನ್ನು ಪ್ರಶ್ನಿಸದಿರುವುದು.
* ಪುರುಷ ಪ್ರಧಾನತೆಯು ಮಹಿಳಾ ಸಶಕ್ತೀಕರಣಕ್ಕೆ ದೊಡ್ಡ ಅಡ್ಡಿಯಾಗಿದೆ ಎಂದು ಹೇಳುತ್ತದೆ.[೨೦]

೨.೭. ಮಹಿಳಾ ಅಭಿವೃದ್ಧಿ ಮತ್ತು ಸಂಸ್ಕೃತಿ-ಸಂಪ್ರದಾಯಗಳು

ಸಮಾಜದೊಳಗಿರುವ ವಿಭಿನ್ನ ಮಾದರಿಯ ನಂಬಿಕೆಗಳು, ಮನೋಭಾವನೆಗಳು, ಆದರ್ಶಗಳು ಸಮಾಜದಲ್ಲಿನ ಜೀವನ ಮತ್ತು ಸಂಬಂಧಗಳನ್ನು ಅರ್ಥೈಸುವ ಜೀವನ ಶೈಲಿಯನ್ನು ಸಂಸ್ಕೃತಿ

ಎನ್ನುತ್ತೇವೆ. ಇಂತಹ ಸಂಸ್ಕೃತಿಯಲ್ಲೂ ಸಹ ಅನೇಕ ಪ್ರಕಾರಗಳಿರುತ್ತವೆ. ಮಾತೃ ಪ್ರಧಾನ ಮತ್ತು ಪಿತೃ ಪ್ರಧಾನ ಕುಟುಂಬಗಳಿರುತ್ತವೆ. ಈ ಭಿನ್ನ ಸಂಸ್ಕೃತಿಯು ತಮ್ಮದೇ ರೀತಿಯ ಸಂಪ್ರದಾಯ ಮಾದರಿಗಳನ್ನು ಹೊಂದಿರುತ್ತದೆ.

ಇಂದು ಜಗತ್ತಿನಾದ್ಯಂತ ಪಿತೃಪ್ರಧಾನ ಕುಟುಂಬಗಳು ಹೆಚ್ಚು ಚಾಲ್ತಿಯಲ್ಲಿವೆ. ಈ ರೀತಿಯ ಕುಟುಂಬಗಳಲ್ಲಿ ಪುರುಷನೇ ಪ್ರಧಾನ ಕೇಂದ್ರವಾಗಿರುತ್ತಾನೆ. ಆತನ ಮೂಲಕವೇ ಕುಟುಂಬದ ಎಲ್ಲಾ ಆಗು-ಹೋಗುಗಳು ನಡೆಯುತ್ತವೆ. ಆದ್ದರಿಂದಲೇ ಗಂಡುಮಕ್ಕಳಿಗೆ ಇಲ್ಲಿ ಪ್ರಾಧಾನ್ಯತೆ ಹೆಚ್ಚಿರುವುದರಿಂದ ಹೆಣ್ಣು ಮಕ್ಕಳನ್ನು ತಿರಸ್ಕೃತ ಭಾವದಿಂದ ಕಾಣಲಾಗುತ್ತದೆ. ಪಿತೃ ಪ್ರಧಾನ ಕುಟುಂಬದಲ್ಲಿ ಎಲ್ಲರೂ (ಕುಟುಂಬದ ಹಿರಿಯ, ಕಿರಿಯ ಸದಸ್ಯರು) ಪುರುಷನೊಬ್ಬನ ಅಧೀನದಲ್ಲಿರುತ್ತಾರೆ. ಆದರೆ ಆಜ್ಞೆಯನ್ನು ಪಾಲಿಸುತ್ತಾರೆ. ಆತನ ನಂತರ ಆತನ ಉತ್ತರಾಧಿಕಾರಿಯಾಗಿ ಮತ್ತೊಬ್ಬ ಹಿರಿಯ ಪುರುಷನು ಮನೆಯ ಜವಾಬ್ದಾರಿ ವಹಿಸಿಕೊಳ್ಳುತ್ತಾನೆ. ಆದ್ದರಿಂದಲೇ ಇಲ್ಲಿ ಗಂಡು ಸಂತಾನಕ್ಕೆ ಪ್ರಾಮುಖ್ಯತೆ ಹೆಚ್ಚು. ಈ ರೀತಿಯ ಕುಟುಂಬಗಳಲ್ಲಿ ಸ್ತ್ರೀಯರಿಗೆ ಯಾವುದೇ ರೀತಿಯ ಅಧಿಕಾರ ಮತ್ತು ಪ್ರಾಮುಖ್ಯತೆ ಇರುವುದಿಲ್ಲ. ಆಕೆಯ ನಿರ್ಧಾರ ಮತ್ತು ಹಕ್ಕುಗಳನ್ನು ಇಲ್ಲಿ ಪರಿಗಣಿಸುವುದಿಲ್ಲ. ಹೀಗಾಗಿ ಆಕೆ ಕುಟುಂಬದ ಸದಸ್ಯಳಾದರೂ ಸಹ ಕುಟುಂಬದ ನಿರ್ಧಾರಗಳಿಂದ ದೂರವಾಗುತ್ತಾಳೆ. ಕುಟುಂಬದ ನಿರ್ಧಾರ ಮತ್ತು ಆರ್ಥಿಕ ಚಟುವಟಿಕೆಗಳಿಂದ ದೂರವಾದ ಮಹಿಳೆಯರು ಸಹಜವಾಗಿಯೇ ಸಮಾಜದ ಆರ್ಥಿಕ ಮತ್ತು ನಿರ್ಧಾರ ತೆಗೆದುಕೊಳ್ಳುವ ಕಾರ್ಯದಲ್ಲಿ ನಿಷ್ಕ್ರಿಯಳಾಗುತ್ತಾಳೆ. ಹಾಗಾಗಿ ಮಹಿಳೆಯರು ಸಮಾಜದ ಮುಖ್ಯ ಶ್ರೇಣಿಯಿಂದ ಹೊರಗುಳಿಯುತ್ತಾರೆ. ಅಲ್ಲದೇ ತಮ್ಮದೇ ಆದ ಸ್ವಂತಿಕೆ/ಗಟ್ಟಿ ನೆಲೆಸಿಗದೆ ಸಮಾಜದಿಂದ ದಬ್ಬಾಳಿಕೆಗೆ ಒಳಗಾಗುತ್ತಿದ್ದಾರೆ.

ಸಮಾಜದ ಮುಖ್ಯ ಶ್ರೇಣಿಯಲ್ಲಿ ಪಿತೃ ಪ್ರಧಾನ ವ್ಯವಸ್ಥೆಯು ಚಾಲ್ತಿಯಲ್ಲಿದೆ. ಹಾಗಾಗಿ ಅದು ಎಲ್ಲೆಡೆ ತನ್ನ ಪ್ರಭಾವ ಹೊಂದಿರುತ್ತದೆ. ಇಂದು ಪ್ರಪಂಚದಲ್ಲೇಕೆ ಭಾಗಶಃ ಪಿತೃ ಪ್ರಧಾನ ವ್ಯವಸ್ಥೆಯೇ ಜಾರಿಯಲ್ಲಿರುವುದನ್ನು ನಾವು ಕಾಣಬಹುದು. ಹೀಗಾಗಿ ಪಿತೃ ಪ್ರಧಾನ ಸಂಪ್ರದಾಯಗಳನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ ಮತ್ತು ಬಲವಂತವಾಗಿ ಅಂತಹ ಮೌಲ್ಯಗಳಿಗೆ ತಲೆ ಬಾಗುವಂತೆ ಮಾಡಿದ್ದಾರೆ. ಹೀಗೆ ಎಲ್ಲೆಡೆಯೂ ಪಿತೃ ಪ್ರಧಾನ ಸಂಪ್ರದಾಯಗಳು, ಮೌಲ್ಯಗಳು ಬಲವಾಗಿ ಬೇರೂರಿರುವುದರ ಪರಿಣಾಮವಾಗಿ ದೇಶದ ಆರ್ಥಿಕ ಮತ್ತು ಅಭಿವೃದ್ಧಿಯ ಚಟುವಟಿಕೆಗಳಲ್ಲಿ ಇಂತಹ ಮೌಲ್ಯಗಳನ್ನು ಕಾಣಬಹುದು. ಆರ್ಥಿಕ ಮತ್ತು ಅಭಿವೃದ್ಧಿ ಚಟುವಟಿಕೆಗಳು ಪುರುಷನ ಅಧಿಕಾರವನ್ನು ಹೆಚ್ಚಿಸುತ್ತದೆ. ಇದರ ಪರಿಣಾಮವಾಗಿ ಪುರುಷನು ಈ ಎರಡೂ ಕ್ಷೇತ್ರಗಳಲ್ಲಿ ತನ್ನನ್ನು ಬಲಪಡಿಸಿಕೊಳ್ಳುತ್ತಾ, ತನ್ನನ್ನು ಇನ್ನೂ ಹೆಚ್ಚು ಶಕ್ತಿ ಶಾಲಿಯನ್ನಾಗಿಸಿಕೊಳ್ಳಲು

ಸರ್ವ ಪ್ರಯತ್ನವನ್ನು ಮಾಡುತ್ತಾನೆ. ಮುಖ್ಯವಾಗಿ ಪುರುಷ ಪ್ರಧಾನ ಸಮಾಜದಲ್ಲಿ ಆರ್ಥಿಕತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತದೆ. ಕುಟುಂಬದ ಯಜಮಾನನಾದ ಪುರುಷನು ಮನೆ-ಮಂದಿಯನ್ನು ಸಾಕುತ್ತಾನೆ. ಆತ ಹೊರಗಿನ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡು ಹಣ ಸಂಪಾದಿಸುತ್ತಾನೆ. ಆದರೆ ಸ್ತ್ರೀಯು ಗೃಹಿಣಿಯಾಗಿ ಗೃಹ ಕೃತ್ಯಗಳಲ್ಲಿ ತೊಡಗಿಕೊಳ್ಳುತ್ತಾಳೆ. ಹೀಗಾಗಿ ಸ್ತ್ರೀಯರಿಗಿಂತ ಪುರುಷರಿಗೇ ಆರ್ಥಿಕ ಸ್ವಾತಂತ್ರ್ಯವಿರುವುದರಿಂದಾಗಿ ಆತನೇ ಕುಟುಂಬ ನಿಯಂತ್ರಣ ಮಾಡುತ್ತಾನೆ. ಹೀಗೆ ಆರ್ಥಿಕ ಮತ್ತು ಸಾಮಾಜಿಕ ವಲಯದಲ್ಲಿ ಪುರುಷನು ಸಕ್ರಿಯವಾಗಿ ಪಾಲ್ಗೊಳ್ಳುವುದರಿಂದಾಗಿ ಆತನು ಅಭಿವೃದ್ಧಿ ಕ್ಷೇತ್ರದಲ್ಲಿ ಮುಂದೆ ಸಾಗುತ್ತಾನೆ. ಸ್ತ್ರೀಯರು ಅನೌಪಚಾರಿಕ ಕ್ಷೇತ್ರಗಳಲ್ಲಿ ತೊಡಗಿಕೊಂಡಿರುತ್ತಾರಲ್ಲದೇ ಅವರನ್ನು ಮುಖ್ಯವಾಗಿ ಆರ್ಥಿಕ ಮತ್ತು ಅಭಿವೃದ್ಧಿ ಕ್ಷೇತ್ರಗಳಲ್ಲಿ ಭಾಗವಹಿಸಲು ಬಿಡುವುದಿಲ್ಲ. ಏಕೆಂದರೆ ಅವರು ಆರ್ಥಿಕ ಸ್ವಾತಂತ್ರ್ಯವನ್ನು ಪಡೆದರೆ ಪುರುಷರಿಗಿಂತ ವೇಗವಾಗಿ ಅಭಿವೃದ್ಧಿ ಪಥದಲ್ಲಿ ಚಲಿಸುತ್ತಾರೆ. ಇದು ಹೀಗೆ ಮುಂದುವರೆದರೆ ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನು ಆಕೆ ಧಿಕ್ಕರಿಸುವುದರಿಂದ ಪುರುಷನಿಗೆ ಮುಖಭಂಗವಾಗುತ್ತದೆ. ಅಲ್ಲದೇ ತನ್ನ ಅಧಿಕಾರವನ್ನು ಕಳೆದುಕೊಳ್ಳುವ ಪರಿಸ್ಥಿತಿ ಬಂದುಬಿಡುತ್ತದೆ. ಹೀಗಾಗಿ ಪುರುಷ ಪ್ರಧಾನ ವ್ಯವಸ್ಥೆಯು ಸ್ತ್ರೀಯರನ್ನು ಅಭಿವೃದ್ಧಿ ಕ್ಷೇತ್ರದಲ್ಲಿ ಮುಂದುವರಿಯಲು ಬಿಡದೇ ತನ್ನ ಕಟ್ಟುನಿಟ್ಟಿನ ಗೊಡ್ಡು ಸಂಪ್ರದಾಯ ಮೌಲ್ಯಗಳಿಗೆ ಬಲಿಪಶುವನ್ನಾಗಿಸಿಕೊಳ್ಳುವುದರ ಮೂಲಕ ಎಲ್ಲೆಡೆ ತನ್ನ ಪ್ರಭಾವವನ್ನು ಬೀರಿದೆ.

ಈ ರೀತಿಯ ಪಿತೃಪ್ರಧಾನ ಕುಟುಂಬದಲ್ಲಿ ಸಹಜವಾಗಿಯೇ ಪುರುಷರಿಗೆ ಹೆಚ್ಚು ಪ್ರಾಧಾನ್ಯತೆ ದೊರೆತು ಸ್ತ್ರೀಯರು ಮೂಲೆಗುಂಪಾಗಿದ್ದಾರೆ. ಹೀಗಾಗಿ ಸಮಾಜದಲ್ಲಿ ಲಿಂಗ ಅಸಮಾನತೆ ಬೆಳೆಯುತ್ತಾ ಬಲವಾಗಿ ಬೇರೂರಿ ಬಿಟ್ಟಿದೆ. ಇಂದು ಅಭಿವೃದ್ಧಿ ಕ್ಷೇತ್ರದಲ್ಲಿಯೂ ಸಹ ಲಿಂಗ ಅಸಮಾನತೆ ತನ್ನ ಪ್ರಭಾವವನ್ನು ಮೂಡಿಸಿದೆ. ಸಾಕಷ್ಟು ಅಭಿವೃದ್ಧಿ ಕ್ಷೇತ್ರಗಳಲ್ಲಿ ಪುರುಷರೇ ಪ್ರಧಾನ ಹುದ್ದೆಯನ್ನು ಅಲಂಕರಿಸಿರುತ್ತಾರೆ. ಸ್ತ್ರೀಯರು ಅಲ್ಲಿ ಯಾವುದೇ ಪ್ರಾಧಾನ್ಯವಿಲ್ಲದ ಕೆಲಸವನ್ನು ನಿಭಾಯಿಸುತ್ತಾಳೆ. ಕೆಲವೊಮ್ಮೆ ಸ್ತ್ರೀಯರೂ ಸಹ ಉನ್ನತ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದರೂ ಸಹ ಅನೇಕ ಅಡೆತಡೆಗಳನ್ನು ಎದುರಿಸುತ್ತಾರೆ. ಎಲ್ಲಾ ಅಡೆ ತಡೆಗಳನ್ನು ಸಮರ್ಥವಾಗಿ ನಿಭಾಯಿಸಿ ಯಶಸ್ವೀ ಮಹಿಳೆಯರಾದವರು ಬೆರಳೆಣಿಕೆಯಷ್ಟು ಮಂದಿ ಮಾತ್ರ

ಅಭಿವೃದ್ಧಿ ಕ್ಷೇತ್ರವೆಂದರೆ ಅದು ಪುರುಷರಿಗೆ ಮಾತ್ರ ಸೀಮಿತ. ಸ್ತ್ರೀಯರು ಗೃಹಿಣಿಯಾಗಿ ತಮ್ಮ ಗೃಹ ಕೃತ್ಯ, ಮಕ್ಕಳ ಪಾಲನೆಯಲ್ಲಿ ತೊಡಗಿಸಿಕೊಳ್ಳಬೇಕು, ವಿವಾಹವು ಸ್ತ್ರೀಯರ ಪರಮೋಚ್ಛ ಗುರಿಯಾಗಬೇಕೆಂದು ಹೇಳಲಾಗುತ್ತದೆ. ಹೀಗಾಗಿ ಬಹುತೇಕ ಉದ್ಯೋಗಸ್ಥ ಮಹಿಳೆಯರು ಏನನ್ನಾದರೂ ಸಾಧಿಸಬೇಕೆಂದು ಹೊರಟಿರುತ್ತಾರೆ. ಆದರೆ ಮದುವೆಯ ನಂತರ ಅವರ ಪ್ರಾಧಾನ್ಯತೆ

ಗಂಡ, ಮನೆ-ಮಕ್ಕಳಾಗಿ ಬಿಡುತ್ತವೆ. ಹೀಗಾಗಿ ಅವರು ತಮ್ಮ ಉದ್ದೇಶ-ಗುರಿಗಳನ್ನು ಬದಲಾಯಿಸಿಕೊಂಡು ಬಿಡುತ್ತಾರೆ. ಅಲ್ಲದೆ ಇವೆಲ್ಲಾ ತಮಗ್ಯಾಕೆ ಎಂಬ ಮನೋಭಾವನೆಯನ್ನು ಬೆಳೆಸಿಕೊಂಡು ಬಿಡುತ್ತಾರೆ. ಹೀಗಾಗಿ ಮಹಿಳೆಯರೇ ಅಭಿವೃದ್ಧಿ ಕ್ಷೇತ್ರದಿಂದ ಹಿಂದೆ ಸರಿಯುತ್ತಿದ್ದಾರೆ.

ಇಂದು ಸಮಾಜದಲ್ಲಿ ಯಾವುದೇ ಕ್ಷೇತ್ರದಲ್ಲಿ ಅಭಿವೃದ್ಧಿ ಯೋಜನೆಗಳ ಪ್ರಾಯೋಗಿಕ ಸಂಪನ್ಮೂಲವಾಗಿ ಮಹಿಳೆಯರನ್ನು ಗುರ್ತಿಸಿಕೊಳ್ಳಲಾಗುತ್ತದೆ ಎಂದರೆ ಯಾವುದಾದರೊಂದು ವಸ್ತುವಿನ ಬಳಕೆಯು ಮಹಿಳೆಯರ ಮೇಲೆ ಹೇಗೆ ಕೆಲಸ ಮಾಡುತ್ತದೆ ಎಂದು ಮಹಿಳೆಯರ ಮೇಲೆ ಪ್ರಯೋಗಿಸಲಾಗುತ್ತದೆ. ನಂತರವೇ ಅದು ಮಾರುಕಟ್ಟೆಗೆ ಬರುತ್ತದೆ. ಇನ್ನೊಂದು ಕಡೆ ಗೃಹೋಪಯೋಗಿ ರಾಸಾಯನಿಕಗಳು ಇಂದು ಬಳಕೆಯಲ್ಲಿವೆ. ಆದರೆ ಇಂತಹ ರಾಸಾಯನಿಕಗಳ ಬಳಕೆಯಿಂದ ಸ್ತ್ರೀಯರ ಆರೋಗ್ಯದ ಮೇಲೆ ಯಾವ ರೀತಿ ಪರಿಣಾಮ ಉಂಟಾಗುತ್ತದೆಂದು ಅವರು ಯೋಚಿಸುವುದಿಲ್ಲ. ಇಂತಹ ರಾಸಾಯನಿಕ ಪದಾರ್ಥಗಳನ್ನು ತಯಾರಿಸುವವರು ಪುರುಷರೇ ಆಗಿರುವುದರಿಂದ ಅವರಿಗೆ ಇದರೆಡೆಗೆ ಹೆಚ್ಚಿನ ಗಮನವಿರುವುದಿಲ್ಲ. ಅವರ ಮುಖ್ಯ ಉದ್ದೇಶ ಹಣ ಸಂಪಾದನೆ ಮತ್ತು ಅದರ ಉತ್ಪನ್ನಗಳ ಯಶಸ್ವೀ ಮಾರಾಟವಷ್ಟೇ ಹೊರತು ಇದರ ಅಡ್ಡ ಪರಿಣಾಮಗಳಲ್ಲ. ಆದರೆ ಇಂತಹ ಉತ್ಪನ್ನಗಳು ಯಶಸ್ವಿಯಾದಾಗ ಅದು ತಮ್ಮ ಹೆಗ್ಗಳಿಕೆಯೆಂದು ಭಾವಿಸಿ ತಮ್ಮ ಪ್ರಾಬಲ್ಯವನ್ನು ಪುರುಷವರ್ಗವು ಮೆರೆಯುತ್ತದೆ. (ಸ್ತ್ರೀಯರನ್ನು ಪ್ರಯೋಗಗಳಿಗಾಗಿ ಬಳಸಿಕೊಳ್ಳುವ ಉತ್ಪಾದನೆಗಳು, ಗರ್ಭನಿರೋಧಕಗಳು, ಗೃಹೋಪಯೋಗಿ ವಸ್ತುಗಳು, ಸೊಳ್ಳೆ ಬತ್ತಿ, ಇತರ ಕ್ರಿಮಿನಾಶಕಗಳು). ಮಹಿಳಾ ಗುಂಪನ್ನು ಎಷ್ಟು ಮಹತ್ವಪೂರ್ಣವಾಗಿ ಬಳಸಲಾಗುತ್ತದೆ ಎಂಬುದನ್ನು ತಿಳಿಯಬಹುದು ಇಂತಹ ಸಂಗತಿಗಳು ಸಿದ್ಧಾಂತಗಳಲ್ಲಿ ಕಾರ್ಯನಿಧಾನದಲ್ಲಿ ಫಲಕಾರಿಯಾಗಿ ಬರುತ್ತಿಲ್ಲ.

ಹೀಗೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಲಿಂಗ ಅಸಮಾನತೆಗಳು ಕಾಣುತ್ತಿದ್ದರೂ ಸಹ ಅದನ್ನು ಹೋಗಲಾಡಿಸುವಲ್ಲಿ ನಮ್ಮ ಪ್ರಯತ್ನಗಳು ವಿಫಲವಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ ಪಿತೃ ಪ್ರಧಾನ ಮೌಲ್ಯಗಳನ್ನು ಸಂಪ್ರದಾಯಗಳು ಬಲವಾಗಿ ನೆಚ್ಚಿಕೊಂಡು ಬಂದಿರುವುದರಿಂದ ಪಿತೃ ಪ್ರಧಾನ ಮೌಲ್ಯಗಳು ಜಡವಾಗಿ ಬೇರೂರಿರುವುದರಿಂದ ಅದರಿಂದ ಆಚೆ ಬರಲು ಪ್ರಯತ್ನಿಸುತ್ತಿದ್ದರೂ ರೂಢಿಗತ ಮೌಲ್ಯಗಳು ವಿವಿಧತೆಯ ಮೂಲಕ ಲಿಂಗ ಸೂಕ್ಷ್ಮತೆಯನ್ನು ಎದುರಾಗಿಸಿ ನಿಲ್ಲುತ್ತಿದೆ. ಅಭಿವೃದ್ಧಿ ಸಿದ್ಧಾಂತಗಳು ತುಂಬಾ ಆಳವಾದ ಸೈದ್ಧಾಂತಿಕ ಮೌಲ್ಯಗಳನ್ನು ಹುಟ್ಟು ಹಾಕಬೇಕು. ಈ ನಿಟ್ಟಿನಲ್ಲಿ ಅಭಿವೃದ್ಧಿ ಪ್ರಕ್ರಿಯೆಯು ಬೆಳೆಯಬೇಕು.

ಹಿಗೆ ಪಿತೃ ಪ್ರಧಾನ ವ್ಯವಸ್ಥೆಯು ಸಂಸ್ಕೃತಿಯು ಒಂದು ಪ್ರಮುಖ ಅಂಗವಾಗಿ ಬೇರೂರಿದೆ. ಇದು ಅಭಿವೃದ್ಧಿ ಕ್ಷೇತ್ರದಲ್ಲಿಯೂ ಸಹ ತನ್ನ ಹಿಡಿತವನ್ನು ಹೊಂದಿದೆ. ಹೀಗಾಗಿ ಸಂಸ್ಕೃತಿ ಮತ್ತು

ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಿತೃ ಪ್ರಧಾನ ಮೌಲ್ಯಗಳು ಹೆಚ್ಚಾಗುತ್ತಿದ್ದಂತೆ ಸಮಾಜದಲ್ಲಿ ಸ್ತ್ರೀಯರ ಸ್ಥಾನ-ಮಾನಗಳು ನಾಲ್ಕು ಗೋಡೆಗಳಿಗೇ ಸೀಮಿತವಾಗುತ್ತದೆ. ಕೊನೆಗೊಮ್ಮೆ ಇಡೀ ಸಮಾಜದಿಂದಲೇ ಸ್ತ್ರೀಯರು ಅದೃಶ್ಯರಾಗಿಬಿಡುವ ಅಪಾಯವುಂಟು. ಆದ್ದರಿಂದಾಗಿ ಗೊಡ್ಡು ಸಂಪ್ರದಾಯಗಳ ಮೌಲ್ಯಗಳನ್ನು ತಡೆದು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರು ಪಾಲ್ಗೊಂಡು ಯಶಸ್ವಿಯಾಗಿ ಅವರೂ ಸಹ ಪುರುಷರಂತೆ ಸಮಾಜದಲ್ಲಿ ಸಮಾನ ಹಕ್ಕು ಸ್ಥಾನ-ಮಾನಗಳನ್ನು ಅನುಭವಿಸುವ ಅವಶ್ಯಕತೆ ಇದೆ.

ಸಾಂಸ್ಕೃತಿಕವಾಗಿ ಬಣ್ಣಿಸಲ್ಪಟ್ಟ ಲಿಂಗ ಮಾದರಿಗಳು ಮತ್ತು ಹಕ್ಕು ಭಾದ್ಯತೆಗಳು ಪುರುಷನ ವರ್ತನೆಯನ್ನು ಬಿಂಬಿಸುತ್ತದೆ. ಇದರಿಂದಾಗಿ ಪುರುಷರಿಗೆ ಸಂಪನ್ಮೂಲಗಳ ಮೇಲೆ ಹತೋಟಿ ಮತ್ತು ನಿರ್ಧಾರ ತೆಗೆದುಕೊಳ್ಳುವ ಹಕ್ಕು ಸುಲಭವಾಗಿ ಸಿಗುತ್ತದೆ. ಈ ರೀತಿಯ ಸೌಲಭ್ಯಗಳಿಂದಾಗಿ ಪುರುಷನು ಸಹಜವಾಗಿಯೇ ಸ್ತ್ರೀಯರ ಮೇಲೆ ದಬ್ಬಾಳಿಕೆ ನಡೆಸುತ್ತಾನೆ. ಇದಕ್ಕನುಗುಣವಾಗಿ ಸ್ತ್ರೀಯ ಸೌಮ್ಯತೆ ಮತ್ತು ಅಧೀನತೆಯು ತನ್ನ ನೈಸರ್ಗಿಕ ಗುಣವೆಂದು ತಲೆಬಾಗಿಸುತ್ತಾಳೆ. ಈ ರೀತಿಯ ವರ್ತನೆಗಳು ಸ್ತ್ರೀಯರನ್ನು ಇನ್ನಷ್ಟು ಅಧೀನತೆಗೆ ತಳ್ಳುತ್ತದೆ. ಹೀಗಾಗಿ ಈ ರೀತಿಯ ಕಟ್ಟುಪಾಡುಗಳಿಂದ ಹೊರಬರಲು ಸ್ತ್ರೀಯರು ಚಿಂತಸಬೇಕಿದೆ.

ಸ್ತ್ರೀಯರ ಅಧೀನತೆ ಮತ್ತು ಲಿಂಗ ಅಸಮಾನತೆಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ನೋಡಿದಾಗ ಸಮಾಜದಲ್ಲಿ ಸ್ತ್ರೀಯು ಪುರುಷನ ದಬ್ಬಾಳಿಕೆಯಿಂದ ನರಳುತ್ತಿದ್ದಾಳೆ. ಅಲ್ಲದೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿದ್ದರೂ ಅದನ್ನು ಪರಿಗಣಿಸುತ್ತಿಲ್ಲ. ಹೀಗಾದರೆ ಸ್ತ್ರೀಯು ಕೇವಲ ಗೃಹ ಕೃತ್ಯಗಳಿಗೆ ಮಾತ್ರ ಸೀಮಿತಗೊಳ್ಳುವ ಯಂತ್ರವಾಗಿ ಬಿಟ್ಟಿದ್ದಾಳೆ. ಆದ್ದರಿಂದ ಈ ರೀತಿಯ ಅಸಮಾನತೆಗೆ ತೆರೆ ಬೀಳಬೇಕಿದೆ. ಸ್ತ್ರೀಯ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ತನ್ನ ಅಸ್ಥಿತ್ವವನ್ನು ಗುರುತಿಸಿಕೊಳ್ಳುವಂತಾಗಬೇಕಿದೆ. ಸ್ತ್ರೀಯರು ಅಭಿವೃದ್ಧಿ ಹೊಂದಬೇಕಾದರೆ ಮುಖ್ಯವಾಗಿ ಸಮಾಜ ಮತ್ತು ಸಂಸ್ಕೃತಿಯಲ್ಲಿ ಕಟ್ಟು ನಿಟ್ಟಾಗಿ ಪಾಲಿಸಲಾಗುತ್ತಿರುವ ಪಿತೃ ಪ್ರಧಾನ ಮೌಲ್ಯಗಳನ್ನು ಪ್ರಶ್ನಿಸಬೇಕು. ಈ ರೀತಿಯ ಬಲವಂತದ ಕಟ್ಟುಪಾಡುಗಳಿಂದ ಸ್ತ್ರೀಯರಿಗಾಗುತ್ತಿರುವ ಲಾಭಗಳೇನು? ನಷ್ಟಗಳೇನೂ? ಎಂದು ಸ್ತ್ರೀಯರು ಅರಿಯಬೇಕು. ಪಿತೃ ಪ್ರಧಾನವೆಂಬ ಮೌಢ್ಯ ಸಂಸ್ಕೃತಿ-ಸಂಪ್ರದಾಯಗಳಿಂದ ಸ್ತ್ರೀಯರಿಗೆ ಲಾಭಕ್ಕಿಂತ ನಷ್ಟವೇ ಹೆಚ್ಚಾಗುತ್ತಿದೆ. ಸಮಾಜದ ಶೋಷಿತ ವರ್ಗದ ಗುಂಪಿಗೆ ಸ್ತ್ರೀಯರನ್ನು ಸೇರಿಸಿ ಅಭಿವೃದ್ಧಿ ಪ್ರಕ್ರಿಯೆಯಿಂದಲೇ ಅವರನ್ನು ಕೈಬಿಡಲಾಗಿದೆ. ಒಂದು ದೇಶದ ಅಭಿವೃದ್ಧಿಯಾಗಬೇಕಾದರೆ, ಸ್ತ್ರೀ-ಪುರುಷರಿಬ್ಬರೂ ಸಹ ಸಮಾನತೆಯಿಂದ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು. ಸಮಾನ ಹಕ್ಕು, ಸ್ಥಾನಮಾನಗಳು, ಸಾಧ್ಯತೆಗಳು ಸಿಗಬೇಕು. ಆದರೆ ಇಂದು ಪುರುಷರಿಗೆ ಸಮನಾದ ಯಾವುದೇ ಹಕ್ಕುಗಳು ಸ್ಥಾನ-ಮಾನಗಳು ಸ್ತ್ರೀಯರಿಗೆ ಸಿಗುತ್ತಿಲ್ಲ. ಇನ್ನು

ಅಧ್ಯಾಯ ಎರಡು

ಅಭಿವೃದ್ಧಿ ಒಂದು ತಾತ್ವಿಕ ಅಧ್ಯಯನ

೨.೧. ಅಭಿವೃದ್ಧಿ ಪರಿಕಲ್ಪನೆ

೨.೨. ಅಭಿವೃದ್ಧಿ ಕುರಿತ ವ್ಯಾಖ್ಯೆಗಳು

೨.೩. ಅಭಿವೃದ್ಧಿ ಸಿದ್ಧಾಂತಗಳು ಮತ್ತು ಚಾರಿತ್ರಿಕ ಹಿನ್ನೆಲೆ

೨.೪. ಆಧುನಿಕ ಆರ್ಥಿಕ ಅಭಿವೃದ್ಧಿ ಸಿದ್ಧಾಂತಗಳು ಮತ್ತು ಮಹಿಳೆ

೨.೫. ಮಹಿಳಾ ಅಭಿವೃದ್ಧಿ ಸಿದ್ಧಾಂತಗಳು

೨.೬. ಸ್ತ್ರೀವಾದಿ ಪಂಥಗಳು ಮತ್ತು ಮಹಿಳಾ ಅಬಿವೃದ್ಧಿ

೨.೭. ಮಹಿಳಾ ಅಭಿವೃದ್ಧಿ ಮತ್ತು ಸಂಸ್ಕೃತಿ-ಸಂಪ್ರದಾಯಗಳು

೨.೮. ಸರ್ಕಾರಿ ಮಹಿಳಾ ಅಭಿವೃದ್ಧಿ ಸೈದ್ಧಾಂತಿಕತೆಯಲ್ಲಿ
ಬದಲಾಗಬೇಕಾದ ಸಂಗತಿಗಳು

೨.೯. ಉಪಸಂಹಾರ

ದೇಶದ ಅಭಿವೃದ್ಧಿಯಾಗುವಂತಹ ಕ್ಷೇತ್ರಗಳಲ್ಲಿ ಸ್ತ್ರೀಯರನ್ನು ಸೇರಿಸಿಕೊಳ್ಳುವುದಿಲ್ಲ. ಇದು ಹೀಗೆ ಮುಂದುವರೆಯುವುದರಿಂದ ದೇಶದ ಆಂತರಿಕ ಅಭಿವೃದ್ಧಿಯಲ್ಲಿ ತೊಡಕುಂಟಾಗುತ್ತದೆ. ಆಂತರಿಕ ಅಭಿವೃದ್ಧಿಯನ್ನು ಪ್ರಥಮ ಆಧ್ಯತೆಯನ್ನಾಗಿ ಸ್ವೀಕರಿಸದ ಯಾವುದೇ ದೇಶವು ಬಾಹ್ಯ ಜಗತ್ತಿನೆಡೆಗೆ/ ವಿಶ್ವದ ಇತರೆ ದೇಶಗಳೊಂದಿಗೆ ಅಭಿವೃದ್ಧಿಗಾಗಿ ಪೈಪೋಟಿ ನಡೆಸಿ ಗೆಲುವನ್ನು ಸಾಧಿಸಲಾರವು. ಇಂತಹ ಅನೇಕ ಸತ್ಯಗಳನ್ನು ತೆರೆದಿಟ್ಟರೂ ಸಹ ಭಾರತದಂತ ಸಂಪ್ರದಾಯಸ್ಥ ದೇಶದಲ್ಲಿ ಸ್ತ್ರೀಯರನ್ನು ಕಡೆಗಣಿಸುತ್ತಲೇ ಬಂದಿದ್ದಾರೆ. ಇನ್ನು ಪಾಕಿಸ್ತಾನ, ಇರಾನ್-ಇರಾಕ್ ಇತ್ಯಾದಿ ಮುಸ್ಲಿಂ ದೇಶಗಳಲ್ಲಿ ಸ್ತ್ರೀಯರ ಅಭಿವೃದ್ಧಿಯ ಪ್ರಶ್ನೆಯೇ ಏಳುವುದಿಲ್ಲ. ಅಲ್ಲಿ ಯಾರೊಬ್ಬರೂ ಸಹ ಇದರ ಬಗ್ಗೆ ಚರ್ಚೆ ನಡೆಸುವ ಸಾಹಸಕ್ಕೆ ಕೈ ಹಾಕುವುದಿಲ್ಲ. ಹಾಗಂತ ಸುಮ್ಮನೇ ಬಿಟ್ಟರೆ ಇನ್ನು ಜಟಿಲವಾದ ಸಮಸ್ಯೆಗಳು ಉದ್ಭವಿಸುತ್ತದೆ. ಈ ರೀತಿಯ ಕ್ಲಿಷ್ಟ ವಾತಾವರಣಕ್ಕೆ ಕಡಿವಾಣ ಹಾಕಲೇ ಬೇಕಾದುದು ಇಂದಿನ ಪ್ರಮುಖ ಆದ್ಯತೆಯಾಗಿದೆ. ಮೊಟ್ಟಮೊದಲನೆಯದಾಗಿ ಸ್ತ್ರೀಯರಿಗೆ ಔಪಚಾರಿಕ ಶಿಕ್ಷಣವನ್ನು ನೀಡುವುದರ ಜೊತೆಗೆ ತಮ್ಮ ಮೇಲಾಗಿರುತ್ತಿರುವ ದೌರ್ಜನ್ಯಗಳನ್ನು ಖಂಡಿಸುವಂತಹ ಆತ್ಮಸ್ಥೈರ್ಯವನ್ನು ತುಂಬಬೇಕು. ಸ್ತ್ರೀಪರ ಕಾಳಜಿಯನ್ನು ಬೆಳಸಬೇಕು, ನಿಧಾನವಾಗಿ ಪಿತೃಪ್ರಧಾನ ಮೌಲ್ಯಗಳು ಅತಿ ಕಟ್ಟುನಿಟ್ಟಿನ ಸಂಪ್ರದಾಯಗಳ ಬಗ್ಗೆ ತಿಳಿಸಿ ಹೇಳಬೇಕು. ಸ್ತ್ರೀಯರಲ್ಲಿ ಬದಲಾವಣೆಯನ್ನು ತರಬೇಕು. ಇದರಿಂದಾಗಿ ಸ್ತ್ರೀಯರು ನಿಧಾನವಾಗಿಯಾದರೂ ತಮ್ಮ ಬೇಕು-ಬೇಡಗಳ ಬಗ್ಗೆ ತಿಳಿದುಕೊಂಡು ಎಚ್ಚರ ವಹಿಸುತ್ತಾರೆ. ಮುಂದೊಮ್ಮೆ ತಮ್ಮ ಅಭಿವೃದ್ಧಿಗೆ ತಡೆಯೊಡ್ಡುವ ಸಂಪ್ರದಾಯಗಳನ್ನು ಪಾಲಿಸಲು ಧಿಕ್ಕರಿಸುತ್ತಾರೆ. ಹೀಗೆ ಪಿತೃಪ್ರಧಾನ ಸಂಸ್ಕೃತಿ-ಸಂಪ್ರದಾಯಗಳನ್ನು ಸ್ತ್ರೀಯರು ಬೇಧಿಸದೆ ಹೊರತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅವರು ಉನ್ನತಿಯನ್ನು ಸಾಧಿಸಲಾರರು. ಆದರೆ ಸಾವಿರಾರು ವರ್ಷಗಳಿಂದಲೂ ಬೇರೂರಿರುವ ಸಂಸ್ಕೃತಿ-ಸಂಪ್ರದಾಯಗಳನ್ನು ತೊಡೆದು ಹಾಕುವುದು ಅಷ್ಟು ಸುಲಭವಲ್ಲ. ಇದಕ್ಕೆ ಸಂಪ್ರದಾಯವಾದಿ ಸ್ತ್ರೀಯರೂ ಸಹ ಒಪ್ಪುವುದಿಲ್ಲ. ಹಾಗಾಗಿ ನಿಧಾನಗತಿಯ ಪ್ರಕ್ರಿಯೆಯಿಂದಾಗಿ ಗೊಡ್ಡು ಸಂಪ್ರದಾಯಗಳಿಗೆ ನಾಂದಿ ಹಾಡಿ ಅಭಿವೃದ್ಧಿಯಲ್ಲಿ ತಮ್ಮದೇ ಆದ ಸಿದ್ಧಾಂತವನ್ನು ಮೂಡಿಸಲು ಸ್ತ್ರೀಯರು ಸಜ್ಜಾಗಬೇಕು, ಸರ್ಕಾರವೂ ಚಿಂತಿಸಬೇಕು.

೨.೮. ಸರ್ಕಾರಿ ಮಹಿಳಾ ಅಭಿವೃದ್ಧಿ ಸೈದ್ಧಾಂತಿಕತೆಯಲ್ಲಿ ಬದಲಾಗಬೇಕಾದ ಸಂಗತಿಗಳು

ಈ ದೇಶದ ಜನಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟು ಮಹಿಳೆಯರಿದ್ದಾರೆ. ಆದರೆ ಅವರ ಅಭಿವೃದ್ಧಿ ಮತ್ತು ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರದಲ್ಲಾಗಲೀ ಅಥವಾ ರಾಜ್ಯಸರ್ಕಾರ ದಲ್ಲಾಗಲೀ ಪ್ರತ್ಯೇಕ ಸಚಿವಾಲಯ ಇಲ್ಲದಿರುವುದು ವಿಚಿತ್ರವೆನಿಸುತ್ತದೆ. ಜಾಗತಿಕ ರಾಷ್ಟ್ರ-ರಾಜ್ಯ ಮತ್ತು ಸ್ಥಳೀಯ ಮಟ್ಟದಲ್ಲಿ ಮಹಿಳಾ ಚಳುವಳಿಗಳು ಮಹಿಳೆಯರ ಶೋಷಣೆ-ತಾರತಮ್ಯದ

ದುಃಸ್ಥಿತಿಗಳ ಬಗ್ಗೆ ನಿರ್ಲಕ್ಷ್ಯ ಮತ್ತು ಅಸಡ್ಡೆ ತಳೆದಿರುವುದು ವಿಶೇಷವಾಗಿದೆ. ಇಂದಿಗೂ ಸರ್ಕಾರಗಳು ಮಹಿಳೆಯರನ್ನು ಕುರಿತಂತೆ ಕಲ್ಯಾಣವಾದಿ ಧೋರಣೆಯನ್ನು ತೊರೆದು ಅಭಿವೃದ್ಧಿ ಧೋರಣೆಯನ್ನು ತಳೆಯುವುದರಲ್ಲಿ ವಿಫಲವಾಗಿದೆ. ಕುಟುಂಬ ಕಲ್ಯಾಣ ಕಾರ್ಯಕ್ರಮವೆಂದು ಹೆಸರಿಗೆ ಮಾತ್ರ 'ಕುಟುಂಬ ಕಲ್ಯಾಣ'ವೆನಿಸಿಕೊಂಡಿದೆ. ಉಳಿದಂತೆ ಅದು ಸಂಪೂರ್ಣವಾಗಿ ಜನಸಂಖ್ಯೆಯ ಬೆಳವಣಿಗೆಯನ್ನು ನಿಯಂತ್ರಿಸುವ 'ಕುಟುಂಬ ಯೋಜನಾ' ಕಾರ್ಯಕ್ರಮವಾಗಿದೆ. ಸುಮಾರು ೫೦ ಕೋಟಿಯಷ್ಟಿರುವ ಮಹಿಳೆಯರ ಹಿತರಕ್ಷಣೆ ಮಾಡಲು ಕುಟುಂಬ ಕಲ್ಯಾಣ ಕಾರ್ಯಕ್ರಮದ ಹೆಸರಿನಲ್ಲಿ ೨೦೦೦-೨೦೦೧ರ 'ಕೇಂದ್ರ ಬಜೆಟ್ಟಿನಲ್ಲಿ ಮೀಸಲಿಟ್ಟಿರುವ ಹಣ ಕೇವಲ ರೂ.೩೫೨೦ ಕೋಟಿ. ಮಾನವ ಸಂಪನ್ಮೂಲ ಮಂತ್ರಿ ಶಾಖೆಯಲ್ಲಿರ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಮೀಸಲಿಟ್ಟ ಮೊತ್ತ ರೂ. ೧೪೬೦ ಕೋಟಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯಲ್ಲಿ ಮೀಸಲಿಟ್ಟಿರುವ ಹಣ ರೂ.೧೩೫೦ ಕೋಟಿ. ಈ ಮೂಲಕ ಪರಿಗಣನೆಯಲ್ಲಿನ ಅಸಮಾನತೆಯನ್ನು ಗಮನಿಸಬಹುದು.

ಲಿಂಗತ್ವ ಮುಖ್ಯವಾಹಿನಿ(Gender Mainstreaming)

೧೯೭೦ರ ದಶಕದಿಂದೀಚೆಗೆ ಮಹಿಳಾ ಪರ ಅಭಿವೃದ್ಧಿ ಕಾರ್ಯಕ್ರಮಗಳು ವಿಭಿನ್ನ ದಾರಿಯಲ್ಲಿ ನಡೆಯತೊಡಗಿದವು. ವಿಶ್ವಸಮ್ಮೇಳನಗಳು ವಿವಿಧ ದೇಶದ ಅಧ್ಯಕ್ಷತೆಯಲ್ಲಿ ಒಂದು ವಿಶಿಷ್ಟ ಗುರಿಯೊಂದಿಗೆ ಆರಂಭಗೊಂಡವು. ಬೀಜಿಂಗ್, ಕೈರೋ, ಭಾರತ ಇನ್ನು ಮುಂತಾದ ದೇಶಗಳಲ್ಲಿ ಸಮ್ಮೇಳನಗಳು ನಡೆದವು. ಅವುಗಳಲ್ಲಿ ಬೀಜಿಂಗ್ ಸಮ್ಮೇಳನಗಳು ಪ್ರಮುಖವಾಗಿದೆ.

ಬೀಜಿಂಗ್ ಸಮ್ಮೇಳನವು ಲಿಂಗತ್ವವನ್ನು ಪ್ರಮುಖವಾಹಿನಿಗೆ(Gender Mainstreaming) ತರಲು ಒಂದು ಪ್ರಮುಖ ಹೆಜ್ಜೆಯನ್ನಿಟ್ಟಿತು. ಅದರಂತೆ ಸರ್ಕಾರಿ ಖಾಸಗಿ ಕ್ಷೇತ್ರಗಳಲ್ಲಿ ಲಿಂಗತ್ವವನ್ನು ಮುಖ್ಯವಾಹಿನಿಗೆ ತರಲು ಪ್ರೋತ್ಸಾಹಿಸಲಾಯಿತು. ಎಲ್ಲಾ ಪಾಲಿಸಿ ಮತ್ತು ಕಾರ್ಯಕ್ರಮಗಳಲ್ಲಿ ಲಿಂಗತ್ವವನ್ನು ಪ್ರಮುಖವಾಹಿನಿಗೆ ತರಲು ಯೋಜನೆಗಳನ್ನು ರೂಪಿಸಲಾಯಿತು.

ಈ ರೀತಿಯ ಧೋರಣೆಗಳು, ಅದೃಶ್ಯವಾಗಿರುವ ಮಹಿಳೆಯರನ್ನು ಮುಖ್ಯವಾಹಿನಿಗೆ ಕರೆತಂದು ಅವರ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳುವಂತೆ ಮಾಡಲಾಯಿತು. ೧೯೮೦ರ ವೇಳೆಗೆ ಈ ಯೋಜನೆಗಳೂ ನಿಧಾನಗತಿಯ ಅಭಿವೃದ್ಧಿಯನ್ನು ಕಾಣತೊಡಗಿದವು. ಕಾಲಕ್ರಮೇಣ ಪುರುಷರು ಹೊಂದಿರುವ ವಿಶೇಷ ಸೌಲಭ್ಯಗಳನ್ನು ಪ್ರಶ್ನಿಸಿ ಅನೇಕ ಸಂಸ್ಥೆಗಳು ವಿಶ್ವವ್ಯಾಪ್ತಿಯಾಗಿ ಹುಟ್ಟಿಕೊಂಡವು. ಜೊತೆಗೆ ಮಹಿಳೆಯರಿಗಾಗಿ ವಿಶಿಷ್ಟ ಚಟುವಟಿಕೆಗಳನ್ನು ನೀಡುತ್ತಾ ಮಹಿಳೆಯರನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಗಟ್ಟಿಗೊಳಿಸುತ್ತಾ ಹೋಯಿತು.

ಕಾಲಕ್ರಮೇಣ ಹೆಚ್ಚಿನ ಸಂಖ್ಯೆಯ ಸರ್ಕಾರಿ ಮತ್ತು ಇತರೆ ಅಭಿವೃದ್ಧಿ ಸಂಘಟನೆಗಳು 'ಲಿಂಗ ಸಮಾನತೆ'ಗೆ 'ಲಿಂಗತ್ವ ಪ್ರಮುಖ ವಾಹಿನಿ'ಯ ಅವಶ್ಯಕತೆ ಇದೆ ಎಂದು ಮನಗಂಡರು.

ಈ ರೀತಿಯಾಗಿ ಮುಖ್ಯವಾಹಿನಿಯ ಅಭಿವೃದ್ಧಿಗೆ ಲಿಂಗ ಸಮಾನತೆಯನ್ನು ಪ್ರಮುಖವಾಗಿ ಬಿಂಬಿಸಲಾಯಿತು. ಜೊತೆಗೆ ಎಲ್ಲಾ ಕ್ಷೇತ್ರಗಳ ಚಟುವಟಿಕೆಗಳು ಮತ್ತು ಯೋಜನಾ ಪ್ರಕ್ರಿಯೆಯ ಮೂಲಭೂತ ಅವಶ್ಯಕತೆಗಳ ಯಶಸ್ಸು ಲಿಂಗ ಸಮಾನತೆ ಎಂದು ತಿಳಿಯಲಾಯಿತು. ಹೀಗಾಗಿ ಲಿಂಗತ್ವ ಯೋಜನೆಯನ್ನು ಜಾರಿಗೆ ತರುವ ಜವಾಬ್ದಾರಿಯು ಕೇವಲ ಸಣ್ಣ ಕೆಲಸವಾಗಿದೆ. ಅದೊಂದು ದೊಡ್ಡ ಮಟ್ಟದ ಸಂಘಟನೆಯಾಗಬೇಕಾಗಿದೆ.

ಈ ರೀತಿಯ ಅಜೆಂಡಾಗಳು ಬೀಜಿಂಗ್ ಸಮ್ಮೇಳನದಲ್ಲಿ ಪ್ರಸ್ತಾಪಿಸಲ್ಪಟ್ಟವು. ನಿಧಾನಗತಿಯಲ್ಲಿ ಅವು ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಮಹಿಳೆಯರ ಆರ್ಥಿಕ, ರಾಜಕೀಯ, ಮತ್ತು ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸಲು ಪ್ರಯತ್ನಿಸಿದವು. ಮಹಿಳೆಯರ ಪರ ಪ್ರಸ್ತುತ ಚಾಲ್ತಿಯಲ್ಲಿರುವ ಯೋಜನೆಗಳಲ್ಲಿ ಮಾರ್ಪಾಟುಗಳನ್ನು ಮಾಡಿ ಅದು ಸಂಪೂರ್ಣವಾಗಿ ಮಹಿಳೆಯರ ಅಭಿವೃದ್ಧಿಗಾಗಿಯೇ ದುಡಿಯುವಂತಿರಬೇಕೆಂದು ತೀರ್ಮಾನಿಸಲಾಯಿತು. ಅಲ್ಲದೇ ಮಹಿಳೆಯರನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಅಭಿವೃದ್ಧಿ ಪಡಿಸಿದರೆ ಮುಖ್ಯವಾಹಿನಿಯಲ್ಲಿ ನಿಲ್ಲುವುದು ಸಾಧ್ಯವಾಗುತ್ತದೆ ಎಂದು ತಿಳಿಸಲಾಯಿತು.

ಮಹಿಳೆ ಮತ್ತು ಅಭಿವೃದ್ದಿ ವಿಷಯಕ್ಕೆ ಸಂಬಂಧಿಸಿದಂತೆ ವಿಸ್ತಾರವಾದಂತ ಅಧ್ಯಯನ ಮಾಡುವಲ್ಲಿ ಅಭಿವೃದ್ಧಿ ತಾತ್ವಿಕತೆಯ ಹರವನ್ನು ವಿಶ್ಲೇಷಿಸಿದಾಗ, ಜ್ಞಾನ, ಅಭಿವೃದ್ಧಿ ಪರಿಕಲ್ಪನೆ, ಆರಂಭದಿಂದಲೂ ಮಹಿಳೆಯ ಗುರುತು ಅಗೋಚರತೆಯಲ್ಲಿ ಮಸುಕಾಗಿಯೇ ಬೆಳೆದು ಬಂದಿರುವಂತದ್ದನ್ನು ಕಾಣಬಹುದು. ಈ ನಿಟ್ಟಿನಲ್ಲಿ ಗಮನಿಸುತ್ತ ಬಂದಾಗ, ತಾತ್ವಿಕತೆಯ ಚಹರೆಗಳಲ್ಲಿ ಮಹಿಳೆಯ ಜ್ಞಾನ, ಪರಿಗಣನೆಯು ಕೇವಲ ಅತೀ ಸಾಮಾನೀಕರಣಗೊಳಿಸುತ್ತಲೇ ಬಂದಿರುವುದೂ ನಿಜ. ಆರಂಭದಿಂದ ಇಂದಿನವರೆಗೆ ಹಲವಾರು ಬದಲಾವಣೆಗಳೇನೋ ಬಂದಿವೆ ಎಂತಾದರೂ ಲಿಂಗಸಮನ್ಯಾಯ ಮತ್ತು ಲಿಂಗತ್ವ ಪ್ರಜ್ಞೆಯ ತಿಳುವಳಿಕೆ, ಜ್ಞಾನದ ಕೊರತೆಯನ್ನು ಕಾಣಲಾಗುತ್ತಿದೆ. ಲಿಂಗ ಸಮಾನತೆಯ ಅರಿವು, ಅರಿತದ್ದಾದರೂ ಕೂಡ, ಅಭಿವೃದ್ಧಿ ಪರಿಕಲ್ಪನೆಯನ್ನು ಕಟ್ಟುವಲ್ಲಿ, ಸೈದ್ಧಾಂತಿಕತೆಯನ್ನು ಬಳಸುವಲ್ಲಿ ಕಾರ್ಯವಿಧಾನ, ಮೌಲ್ಯಮಾಪನದಲ್ಲಿ ಲಿಂಗತ್ವದ ಪ್ರಜ್ಞೆ ಕೊರತೆಯೇ ಹೆಚ್ಚಾಗಿದೆ.

ಲಿಂಗತ್ವ ಅವಶ್ಯಕತೆ(Gender Needs)

ಒಂದು ಯೋಜನೆಯನ್ನು ಲಿಂಗತ್ವದ(Gender) ಆಧಾರದ ಮೇಲೆ ಕಾರ್ಯಗತಗೊಳಿಸುವಾಗ ಅದು ಲಿಂಗ ಶ್ರಮವಿಭಜನೆಯ ಶಕ್ತಿಯನ್ನು ಸಮವಾಗಿರಿಸುವುದು, ಶಕ್ತಿ ಮತ್ತು ಸಂಪನ್ಮೂಲಗಳ

ಸಮರ್ಪಕ ಸಮಾನ ಬಳಕೆಯನ್ನು ಗುರಿಯನ್ನಾಗಿ ಹೊಂದಿರುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರಿಗೆ ಯಾವುದೇ ರೀತಿಯ ಸಂಪನ್ಮೂಲಗಳು ಸಮನಾಗಿ ಹಂಚಿಕೆಯಾಗುತ್ತಿಲ್ಲ ಕಾರಣ ಲಿಂಗ ಶ್ರಮ ವಿಭಜನೆ. ಹೀಗಾಗಿ ಪುರುಷರೇ ಹೆಚ್ಚಿನ ಮಟ್ಟಿನ ಸಂಪನ್ಮೂಲಗಳ ಲಾಭಗಳನ್ನು ಪಡೆಯುತ್ತಿದ್ದಾರೆ. ಅಲ್ಲದೇ ಯೋಜನೆಗಳನ್ನು ರೂಪಿಸುವಾಗಲೂ ಸಹ ತಮ್ಮ ಅನುಕೂಲಕ್ಕೆ ತಕ್ಕಂತೆ ಅವುಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಸ್ತ್ರೀಯರ ಅಭಿವೃದ್ಧಿಗಾಗಿ ಯೋಜನೆಗಳನ್ನು ನಿರ್ಮಿಸಲಾಗುತ್ತಿಲ್ಲ. ಆದ್ದರಿಂದ ಮಹಿಳೆಯರ ಬೇಡಿಕೆಗನುಗುಣವಾಗಿ ಯೋಜನೆಗಳನ್ನು ನಿರ್ಮಿಸಿ ಅವರಿಗೆ ಸಂಪನ್ಮೂಲಗಳ ಮೇಲೆ ಹತೋಟಿಯನ್ನು ನೀಡುವುದರ ಜೊತೆಗೆ ನಿರ್ಧಾರ ತೆಗೆದುಕೊಳ್ಳುವ ಹಕ್ಕನ್ನು ಪ್ರೋತ್ಸಾಹಿಸಬೇಕು. ಅಲ್ಲದೇ ತಮ್ಮ ಮೇಲಾಗುತ್ತಿರುವ ದೌರ್ಜನ್ಯವನ್ನು ತಡೆಗಟ್ಟುವ ಸಾಮರ್ಥ್ಯವನ್ನು ಮಹಿಳೆಯರು ಹೊಂದಬೇಕಾದ ಅವಶ್ಯಕತೆ ಇದೆ. ಇವುಗಳ ಮೂಲಕ ಸ್ತ್ರೀವಾದಿ ವಾತಾವರಣವು ಹುಟ್ಟಿಕೊಳ್ಳುವುದರಿಂದಾಗಿ ಮಹಿಳೆಯರ ಸ್ಥಾನ-ಮಾನಗಳಲ್ಲಿ ಬದಲಾವಣೆ ಉಂಟಾಗಿ ಸಮಾಜದಲ್ಲಿ ಪುರುಷರೊಂದಿಗಿನ ಸಂಬಂಧಗಳು ಉತ್ತಮಗೊಂಡು ಸ್ತ್ರೀಯರೂ ಸಹ ಮುಖ್ಯವಾಹಿನಿಯಲ್ಲಿ ಅವರ ಅಸ್ತಿತ್ವವನ್ನು ಕಂಡುಕೊಳ್ಳುವಂತಾಗುತ್ತದೆ. ಈ ನಿಟ್ಟಿನಲ್ಲಿ ಯೋಜನೆಗಳ ಪ್ರತಿ ಹಂತದಲ್ಲಿ ಲಿಂಗತ್ವದ ಅಧ್ಯಯನ, ವಿಶ್ಲೇಷಣೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳಬೇಕು.

ಲಿಂಗತ್ವ ಸಂಬಂಧ(Gender Relations)

ಶಕ್ತಿ ಮತ್ತು ಅಧಿಕಾರ ಶ್ರೇಣಿಯಲ್ಲಿ ಮಹಿಳೆ ಮತ್ತು ಪುರುಷರ ನಡುವೆ ವ್ಯತ್ಯಾಸಗಳಿರುವುದರಿಂದ ಸ್ತ್ರೀಯರು ಪುರುಷರಿಗಿಂತ ಕಡಿಮೆ ಶಕ್ತಿಯನ್ನು ಪಡೆದಿದ್ದಾರೆ. ಎಂದರೆ ಪುರುಷ ಪ್ರಧಾನ ಸಮಾಜದಲ್ಲಿ ಪುರುಷರು ಹೆಚ್ಚಿನ ಲಾಭಗಳನ್ನು ಪಡೆಯುತ್ತಿದ್ದು, ಸ್ತ್ರೀಯರಿಗೆ ಯಾವುದೇ ಲಾಭಗಳು ಸಿಗದೇ ಪುರುಷರ ಜೊತೆಗೆ ಪೈಪೋಟಿ ನಡೆಸುವಲ್ಲಿ ವಿಫಲರಾಗುತ್ತಿದ್ದಾರೆ.

ಲಿಂಗ ಅಸಮಾನತೆಯನ್ನು ನೈಸರ್ಗಿಕವೆಂದು ಒಪ್ಪಕೊಳ್ಳಲಾಗಿದೆ. ಆದರೆ ಸಾಮಾಜಿಕವಾಗಿ ಸೂಚಿಸಲ್ಪಟ್ಟ ಸಂಬಂಧಗಳು, ಸಾಂಸ್ಕೃತಿಕ ಆಧಾರಿತ ಸಂಬಂಧಗಳು. ಇನ್ನಿತರ ಕೆಲವು ಅಂಶಗಳಲ್ಲಿ ಲಿಂಗತ್ವ ಅಸಮಾನತೆಯನ್ನು ಒಪ್ಪಿಕೊಂಡಿದ್ದೇವೆ. ಆದರೆ ಇನ್ನೂ ಮುಂದುವರೆದು ಲಿಂಗ ಅಸಮಾನತೆಯನ್ನು, ಸಂಪನ್ಮೂಲಗಳು, ಲಿಂಗಶ್ರಮವಿಭಜನೆ, ಲಿಂಗತ್ವ ಮನೋಭಾವನೆಗಳಂತಹ ಕಲ್ಪನೆಗಳನ್ನು ಸ್ತ್ರೀ-ಪುರುಷರ ವರ್ತನೆಗಳಲ್ಲಿ ಕಾಣಬಹುದಾಗಿದೆ. ಏಕೆಂದರೆ ಸಾಮಾಜಿಕವಾಗಿ ರೂಢಿಯಾದಂತಹ ಸ್ತ್ರೀ-ಪುರುಷರ ಸಂಬಂಧಗಳು ಆರೋಗ್ಯಕರ ಪೈಪೋಟಿಯಾಗದೇ ಅಸಮಾನತೆಯತ್ತ ಹೆಜ್ಜೆ ಇಟ್ಟಿದೆ. ಇದರಿಂದಾಗಿ ಸ್ತ್ರೀಯರ ಅಭಿವೃದ್ಧಿಯಾಗದೇ ಸಮಾಜದಿಂದ ದೂರವಾಗಿ, ಸಂಪನ್ಮೂಲಗಳನ್ನು ಮತ್ತು ಅವರ ಬೇಡಿಕೆಗಳನ್ನು ಪೂರೈಸಿಕೊಳ್ಳದೇ ದೌರ್ಜನ್ಯಕ್ಕೊಳಗಾಗುತ್ತಿದ್ದಾರೆ. ಲಿಂಗಸಂಬಂಧಗಳು ಎರಡು ಲಿಂಗಗಳ ನಡುವೆ ಸಮಾನತೆಯನ್ನು

ತರಬೇಕೇ ಹೊರತು ಅಸಮಾನತೆ, ಹಿಂಸೆಗಳನ್ನಲ್ಲ. ಈ ರೀತಿಯ ಅಸಮಾನತೆಗಳಿಂದ ಸ್ತ್ರೀಯರ ಅಭಿವೃದ್ಧಿ ಪ್ರಕ್ರಿಯೆಯಿಂದಲೇ ದೂರವಾಗಿ ಬಿಡುತ್ತಾರಲ್ಲದೇ ಸಾಮಾಜಿಕವಾಗಿ ಸ್ತ್ರೀಯರ ಮೇಲೆ ಹೆಚ್ಚಿನ ದೌರ್ಜನ್ಯಗಳು ದಬ್ಬಾಳಿಕೆಗಳು ನಡೆದು ಸ್ತ್ರೀ-ಪುರುಷರ ಸಂಬಂಧಗಳು ಮತ್ತಷ್ಟು ಹಳಸಿ ಬದುದು ಯಾಂತ್ರಿಕವಾಗುತ್ತದೆ. ಈ ನಿಟ್ಟಿನಲ್ಲಿ ಲಿಂಗತ್ವ ಸಂಬಂಧಗಳನ್ನು ಗುರುತಿಸಿ ಯೋಜನೆಗಳನ್ನು ರೂಪಿಸಿ ಚರ್ಚಿಸಬೇಕಾಗಿದೆ.

ಲಿಂಗತ್ವದ ಹಿಂಸೆ(Gender Violence)

ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರ ಮೇಲಿನ ಅಸಮಾನತೆಗಳೇ ಅಲ್ಲದೇ ಅವರ ಮೇಲೆ ದೈಹಿಕ, ಲೈಂಗಿಕ ಮತ್ತು ಮಾನಸಿಕ ದೌರ್ಜನ್ಯವನ್ನು ನಡೆಸಲಾಗುತ್ತಿದೆ. ಇದಕ್ಕೆ ಕಾರಣ ಮಹಿಳೆಯರು ತಮಗಿಂತ ಕೆಳದರ್ಜೆಯವರು ಅವರ ಮೇಲೆ ಪುರುಷನು ದಬ್ಬಾಳಿಕೆ ನಡೆಸುವುದು ತಪ್ಪೇನಲ್ಲ ಎಂಬ ಮನೋಭಾವವು ಇಂದಿನ ಪುರುಷ ಸಮುದಾಯದ ಮನೋಭಾವವಾಗಿದೆ. ಈ ರೀತಿಯ ಮನಃಸ್ಥಿತಿಯಿಂದಾಗಿ ಸ್ತ್ರೀಯರ ಮೇಲೆ ಅನೇಕ ಕ್ರೌರ್ಯಗಳು ನಡೆಯುತ್ತಲೇ ಇದೆ.

ಲಿಂಗತ್ವ ಹಿಂಸೆಗಳು ಖಾಸಗಿ ಮತ್ತು ಸಾರ್ವಜನಿಕ ವಲಯಗಳಲ್ಲಿ ಸಂಭವಿಸುತ್ತದೆ. ಒಂದು ಸಮುದಾಯದ ಘರ್ಷಣೆಯಾಗಲೀ, ಕೋಮುವಾದವಾಗಲೀ, ವೈಯಕ್ತಿಕ ದ್ವೇಷವಾಗಲೀ ಅದರ ನೇರ ಪರಿಣಾಮ ಸ್ತೀಯರ ಮೇಲೆ ಬೀಳುತ್ತದೆ. ಹೇಗೆಂದರೆ ಘರ್ಷಣೆಗಳುಂಟಾದಾಗ ಒಂದು ಗುಂಪಿನ ಪುರುಷರು ಮತ್ತೊಂದು ಗುಂಪಿನ ಸ್ತ್ರೀಯರ ಮೇಲೆ ಅತ್ಯಾಚಾರ ಮಾಡುವುದು. ಇನ್ನೂ ಮುಂತಾದ ರೀತಿಯಲ್ಲಿ ಹಿಂಸಿಸುತ್ತಾರೆ. ಮಹಿಳೆಯರ ಮೇಲಿನ ಹಿಂಚಾಚಾರಗಳು ಯುದ್ಧದ-ಘರ್ಷಣೆಗಳು ಒಂದು ಭಯಂಕರ ಅಸ್ತ್ರವಾಗಿ ಬಿಟ್ಟಿವೆ. ಇಂದಿಗೂ ಸಹ ಈ ರೀತಿಯ ಹಿಂಸಾಚಾರಗಳು ಮಹಿಳೆಯರ ಮೇಲೆ ನಡೆಯುತ್ತಲೇ ಇದೆ. ಇದನ್ನು ತಡೆಗಟ್ಟಲು ಸಕಲ ಪ್ರಯತ್ನಗಳು ನಡೆಯುತ್ತಿದ್ದರೂ ಸಹ ಆಗಾಗ್ಗೆ ಇಂತಹ ಘಟನೆಗಳು ಮರುಕಳಿಸುತ್ತಲೇ ಇದೆ.

ಲೈಂಗಿಕ ಅತ್ಯಾಚಾರಗಳಲ್ಲದೇ ಕೌಟುಂಬಿಕ ದೌರ್ಜನ್ಯಗಳೂ ಸಹ ನಿರಂತರವಾಗಿ ಸ್ತ್ರೀಯರ ಮೇಲೆ ನಡೆಯುತ್ತಲೇ ಇದೆ. ವರದಕ್ಷಿಣೆ ಕಿರುಕುಳ, ಬಾಲಕಿಯರ ಮೇಲಿನ ದೌರ್ಜನ್ಯ, ಪತ್ನಿಯ ಮೇಲಿನ ಕಿರುಕುಳ, ಹೆಂಡತಿಯನ್ನು ಹೊಡೆಯುವುದು. ಇನ್ನೂ ಮುಂತಾದ ರೀತಿಯ ಹಿಂಸಾತ್ಮಕ ಕೃತ್ಯಗಳನ್ನು ವಿರೋಧಿಸಿದರೂ ಸಹ ವೈಯಕ್ತಿಕ ದ್ವೇಷದ ಹಿನ್ನೆಲೆಯಿಂದ ಇಂತಹ ಕ್ರೌರ್ಯಗಳು ಮರುಕಳಿಸುತ್ತಲೇ ಇವೆ. ಇದರ ಜೊತೆಗೆ ಹೆಣ್ಣು ಮಗುವಿನ ಭ್ರೂಣಹತ್ಯೆ, ಹೆಣ್ಣು ಮಕ್ಕಳ ಹತ್ಯೆ, ವ್ಯಭಿಚಾರ, ಅಪಹರಣ, ಲೈಂಗಿಕ ದುರ್ಬಳಕೆಗಳಂತಹ ಕೃತ್ಯಗಳು ದಿನ ನಿತ್ಯದ ಸಂಗತಿಗಳಾಗಿ ಬಿಟ್ಟಿವೆ.

೧೯೪೯ರಲ್ಲಿ ನಡೆದ 'ಜೆನಿವಾ' ವಿಶ್ವ ಸಮ್ಮೇಳನದಲ್ಲಿ ಈ ರೀತಿಯ ಹಿಂಸಾಚಾರಗಳನ್ನು '೪ನೇ ಕಾಯ್ದೆ'ಯಡಿ ನಿಷೇಧಿಸಲಾಗಿತ್ತು. ಮಹಿಳೆಯರ ಮತ್ತು ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ಕ್ರಮಕೈಗೊಳ್ಳಲಾಯಿತು. ಆದರೆ ಇವು ಯಾವುವೂ ನಿರೀಕ್ಷಿಸಿದ ಮಟ್ಟದಲ್ಲಿ ಕಾರ್ಯ ರೂಪಕ್ಕೆ ಬರುತ್ತಿಲ್ಲ.

ಹೀಗೆ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ಅನೇಕ ಕಾಯ್ದೆಗಳು ಜಾರಿಗೊಳ್ಳುತ್ತಿದ್ದರೂ ಅವುಗಳು ಯಶಸ್ವಿಯಾಗಿ ಕಾರ್ಯರೂಪಕ್ಕೆ ಬರಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಅದರಲ್ಲಿರುವ ತೊಡಕುಗಳು ಬಹುದೊಡ್ಡ ಸಮಸ್ಯೆಗಳಾಗಿವೆ ಎಂದರೆ ಸಂಪೂರ್ಣ ಸ್ತ್ರೀಪರ ಕಾಳಜಿ ವಹಿಸಿ ಯೋಜನೆಗಳನ್ನು ಕಾಯ್ದೆಗಳನ್ನು ಜಾರಿಗೊಳಿಸಲು ಸಾಧ್ಯವಾಗುತ್ತಿಲ್ಲ ಮತ್ತು ಪುರುಷ ಪ್ರಧಾನ ಮೌಲಯಗಳನ್ನು ಅಳವಡಿಸಿಕೊಂಡಿರುವುದರಿಂದ ಯೋಜನೆಗಳು ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸಲು ನಿರಾಸಕ್ತಿ ತೋರುತ್ತಿವೆ. ಈ ಎಲ್ಲಾ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಭಾರತ ಸರ್ಕಾರ ಮತ್ತು ವಿಶ್ವದ ಇತರ ದೇಶಗಳು ಎಚ್ಚರಿಕೆ ವಹಿಸಬೇಕಿದೆ.

ಸಾಮಾಜಿಕ ನ್ಯಾಯ(Social Justice)

ಮಹಿಳೆಯರ ಅಭಿವೃದ್ಧಿ ವಿಚಾರಗಳು ಬಂದಾಗ ಮೊದಲನೆಯದಾಗಿ ಅಭಿವೃದ್ಧಿಗೊಳ್ಳಬೇಕಾದ ಕ್ಷೇತ್ರವೆಂದರೆ ಅದು 'ಸಾಮಾಜಿಕ ಕ್ಷೇತ್ರ'. ಏಕೆಂದರೆ ಇಂದಿನ ಸಮಾಜದಲ್ಲಿ ಸ್ತ್ರೀಯರು ಯಾವುದೇ ರೀತಿಯ ಉನ್ನತ ಸ್ಥಾನ-ಮಾನ ಪಡೆದಿಲ್ಲ. ಉನ್ನತ ಸ್ಥಾನಮಾನ ಹೊಂದಿದ ಮಹಿಳೆಯರು ಬೆರಳೆಣಿಕೆಯಷ್ಟು ಮಂದಿ ಮಾತ್ರ ಇದ್ದಾರೆ. ಇದರಿಂದಾಗಿ ಸ್ತ್ರೀಯರು ಅನೇಕ ಅಸಮಾನತೆ ಮತ್ತು ದೌರ್ಜನ್ಯಗಳಿಗೆ ಒಳಗಾಗುತ್ತಿದ್ದಾರೆ. ಈ ರೀತಿಯ ಅಸಮಾನತೆಗಳಿಂದ ಮುಕ್ತಿ ಸಿಗಬೇಕಾದರೆ ಅವರಿಗೆ ಸಾಮಾಜಿಕವಾಗಿ ನ್ಯಾಯ ಸಿಗಬೇಕಾಗಿದೆ ಎಂದರೆ ಸ್ತ್ರೀಯರಿಗೆ ಅವರ ಮೇಲಿನ ಹಿಂಸಾಚಾರಗಳ ವಿರುದ್ಧ ಹೋರಾಡುವ ಹಕ್ಕು, ಸಾಮಾಜಿಕ ಸಮಾನತೆ, ಮಾನವ ಹಕ್ಕುಗಳು, ಪೂರ್ವಗ್ರಹ ಪೀಡಿತ ಸಂಪ್ರದಾಯಗಳನ್ನು ವಿರೋಧಿಸುವ ಹಕ್ಕುಗಳು ಸಿಗಬೇಕಾಗಿದೆ. ಈ ಹಕ್ಕುಗಳು ಜಾರಿಯಲ್ಲಿದ್ದರೂ ಅವು ಕೇವಲ ನೆಪಮಾತ್ರಕ್ಕೆ ಮಾತ್ರ ಜಾರಿಯಲ್ಲಿವೆ. ಇದರಿಂದಾಗಿ ಮಹಿಳೆಯರಿಗೆ ಯಾವುದೇ ರೀತಿಯ ಪ್ರಯೋಜನವಾಗುತ್ತಿಲ್ಲ. ಇಂತಹ ಹಕ್ಕುಗಳು ಕೇವಲ ನೆಪಮಾತ್ರಕ್ಕೆ ಸಿಗುವುದರಲ್ಲಿ ಅರ್ಥವಿಲ್ಲ. ಈ ಹಕ್ಕುಗಳು ಬಹು ಬಲಿಷ್ಟ ಮತ್ತು ಸಮರ್ಪಕವಾಗಿರಬೇಕು. ಇದಕ್ಕಾಗಿ ಸಮಾಜ, ಸರ್ಕಾರ ಮತ್ತು ಪುರುಷರು ಸಹಕರಿಸಬೇಕಾದ ಅವಶ್ಯಕತೆ ಇದೆ. ಇದರಿಂದಾಗಿ ಮಹಿಳೆಯರಿಗೆ ಸಮಾಜದಲ್ಲಿ ಸೂಕ್ತ ನ್ಯಾಯ ಸಿಕ್ಕಂತಾಗುತ್ತದೆ. ಅಲ್ಲದೇ ಮಹಿಳೆಯರ ವಿರುದ್ಧದ ಅಸಮಾನತೆಯನ್ನು ತೊಡೆದು ಹಾಕುವುದರಿಂದ ಮಹಿಳೆಯರಿಗೂ ಸಾಮಾಜಿಕ ನ್ಯಾಯ ಅವರ ಜನ್ಮ ಸಿದ್ಧ ಹಕ್ಕು ಎಂಬಂತಾಗುತ್ತದೆ. ಸಾಮಾಜಿಕ ನ್ಯಾಯದ ಪರಿಕಲ್ಪನೆ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳು ಮೂಡಿಬರಬೇಕು.

[illegible]

ಮಹಿಳೆ ಮತ್ತು ಮಾನವ ಹಕ್ಕುಗಳು(Women's Human Rights)

ಮಾನವ ಹಕ್ಕುಗಳೆಂದರೆ ಸ್ತ್ರೀ-ಪುರುಷರಿಬ್ಬರಿಗೂ ಸಮಾನವಾಗಿ ಇರುವಂತಹ ಹಕ್ಕುಗಳು, ಸ್ತ್ರೀಯರ ಮಾನವ ಹಕ್ಕುಗಳೆಂದರೆ ಕೇವಲ ಸ್ತ್ರೀಯರಿಗಾಗಿ ಮಾತ್ರ ಮೀಸಲಿರಿಸುವಂತದ್ದು. ಸ್ತ್ರೀಯರು ತಮ್ಮ ಮೇಲಾಗುವ ಎಲ್ಲಾ ರೀತಿಯ ತಾರತಮ್ಯಗಳನ್ನು, ದೌರ್ಜನ್ಯಗಳನ್ನು, ಹಿಂಸಾಚಾರ ಕ್ರೌರ್ಯಗಳನ್ನು ವಿರೋಧಿಸಿ ತಮಗೆ ಸಮಾನತೆ ಮತ್ತು ಶಾಂತಿಯುತ ಜೀವನ ನಡೆಸಲು ಬೇಕಾದಂತಹ ಹಕ್ಕುಗಳನ್ನು ಪಡೆಯುವಂತದ್ದು. ಇದು 'CEDAW' ರೂಪದಲ್ಲಿ ವಿಶ್ವ ಸಮ್ಮೇಳನದಲ್ಲಿ ಜಾರಿಗೊಂಡಿದೆ. ಆದರೆ ಇಂದು ಜಗತ್ತಿನ ಮೂಲೆ ಮೂಲೆಯಲ್ಲಿ ಸ್ತ್ರೀಯರ ಮೇಲೆ ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಅಭಿವೃದ್ಧಿಯಲ್ಲಿ, ಸಾಮಾಜಿಕವಾಗಿ, ಹಿಂಸಾಚಾರ, ತಾರತಮ್ಯ ಮತ್ತು ದಬ್ಬಾಳಿಕೆಗಳು ನಡೆಯುತ್ತಲೇ ಇವೆ. ಇಂದು ಶೇ.೬೦ರಷ್ಟು ಮಹಿಳೆಯರಿಗೆ ಮೀಸಲಾತಿ ಇಲ್ಲ. ಶೇ.೨೯ರಷ್ಟು ಮಹಿಳೆಯರಿಗೆ ಮೀಸಲಾತಿ ಇದೆ. ಶೇ.೧೧ರಷ್ಟು ಮಹಿಳೆಯರಿಗೆ ಖಾಯಂ ಉದ್ಯೋಗವಿಲ್ಲ. ಹೀಗೆ ಎಲ್ಲಾ ಕಡೆಗಳಿಂದಲೂ ತಾರತಮ್ಯಗಳು ಸ್ತ್ರೀಯರ ಮೇಲೆ ನಡೆಯುತ್ತಲೇ ಇವೆ. ಆದರೆ ಮಹಿಳೆಯರ ಮಾನವ ಹಕ್ಕುಗಳು ಮಾತ್ರ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ. ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳಲ್ಲಿ ಈ ಸಂಗತಿಗಳನ್ನು ಗುರುತಿಸಿಕೊಂಡಿಲ್ಲ.

ಲಿಂಗತ್ವ ತರಬೇತಿ(Gender Training)

ಲಿಂಗತ್ವ ತರಬೇತಿ ಎನ್ನುವುದು ಒಂದು ರೀತಿಯ ಅಸ್ತ್ರವಾಗಿದೆ. ಈ ಮೂಲಕ ಸ್ತ್ರೀ-ಪುರುಷರಲ್ಲಿ ಸಮಾನತೆಯನ್ನು ಮೂಡಿಸಿ ಒಟ್ಟಾಗಿ ಸಂಘಟಿಸುವುದರ ಮೂಲಕ ಲಿಂಗ ಅಸಮಾನತೆಯನ್ನು ಹೋಗಲಾಡಿಸಬಹುದಾಗಿದೆ. ಲಿಂಗಸೂಕ್ಷ್ಮ ಸಂವೇದನೆ ಜಾಗೃತಿ ಕಾರ್ಯಕ್ರಮಗಳು, ಗುಂಪು ಚರ್ಚೆ, ಲಿಂಗ ವಿಶ್ಲೇಷಣೆ, ಯೋಜನೆಗಳನ್ನು ಕಾರ್ಯಗತಗೊಳಿಸುವುದರ ಮೂಲಕ ಸ್ತ್ರೀಯರ ಸೂಕ್ಷ್ಮವಾದ ಕಾಳಜಿಯನ್ನು ಸಮಾಜದಲ್ಲಿ ಸ್ಥಾಪಿಸಬಹುದಾಗಿದೆ. ಈ ರೀತಿಯ ಕಾರ್ಯಕ್ರಮಗಳಲ್ಲಿ ಸ್ತ್ರೀ-ಪುರುಷರಿಬ್ಬರೂ ಭಾಗವಹಿಸುವುದರಿಂದಾಗಿ ಅವರಿಗೆ ಅದರ ಮಹತವಗಳ ಬಗ್ಗೆ ಅರಿವುಂಟಾಗುವುದರಿಂದ ಸಮಾನತೆಗಾಗಿ ಅವರು ಶ್ರಮಿಸುತ್ತಾರೆ. ಲಿಂಗ ಅಧ್ಯಯನಗಳೂ ಸಹ ಲಿಂಗ ಅಸಮಾನತೆಯನ್ನು ಹೋಗಲಾಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಜೊತೆಗೆ ಮಹಿಳಾ ಅಧ್ಯಯನ ಮತ್ತು ಮಹಿಳಾ ಸ್ವಯಂ ಸೇವಾ ಸಂಘಗಳೂ ಸಹ ಇಂತಹ ತರಬೇತಿಗಳನ್ನು ನಡೆಸುವುದರಿಂದಾಗಿ ಸ್ತ್ರೀಯರನ್ನು ಸಮಾಜದ ಮೇಲ್ಪಂಕ್ತಿಗೆ ತಂದು ಅವರನ್ನು ಅಭಿವೃದ್ಧಿಯ ನೇರ ವಾಹಕರನ್ನಾಗಿಮಾಡುವುದರಿಂದ ಮಹಿಳೆಯರ ಅಭಿವೃದ್ಧಿ ಸಾಧ್ಯವಾಗುತ್ತದೆ. ಇತ್ತೀಚಿನ ಸಂದರ್ಭದಲ್ಲಿ ಇಂತಹ ತರಬೇತಿಗಳ ಅವಶ್ಯಕತೆಗಳು ಬಹಳಷ್ಟಿದೆ.

ಮೌಲ್ಯಮಾಪನ

ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳ ಸಿದ್ಧಿ-ಸಾಧನೆಗಳನ್ನು ಪರಿಮಾಣಾತ್ಮಕವಾಗಿ ವಿಶ್ಲೇಷಿಸಲು ಸಾಧ್ಯವಿಲ್ಲ. ಮಹಿಳೆಯರ ಅಭಿವೃದ್ಧಿಯನ್ನು ಕುರಿತಂತೆ ಇಲ್ಲಿ ಯಾವುದೇ ರೀತಿಯ ಗಮನ ನೀಡಿಲ್ಲವೆಂಬುದು ಮಾತ್ರ ಅತ್ಯಂತ ಸ್ಪಷ್ಟವಾಗಿದೆ. ಮಹಿಳೆಯರ ಬದುಕನ್ನು ಉತ್ತಮಪಡಿಸುವ ದಿಶೆಯಲ್ಲಿ ಸರ್ಕಾರದ ಸಾಧನೆಯೂ ತುಂಬಾ ಕ್ಷೀಣವಾಗಿದೆ. ಮಹಿಳಾ ಕಲ್ಯಾಣ ಮತ್ತು ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಶಿಕ್ಷಣ, ಆರೋಗ್ಯ ಮತ್ತು ಕಲ್ಯಾಣ ಚಟುವಟಿಕೆಗಳಿಗೇ ಸೀಮಿತಗೊಂಡಿದ್ದರೂ ಸಹ ಅವುಗಳು ಯಶಸ್ವಿಯಾಗಿಲ್ಲ. ಇನ್ನೊಂದೆಡೆ ಮಹಿಳೆಯರ ಉದ್ಯೋಗ, ದುಡಿಮೆ, ವೇತನ, ಅವರ ಉದ್ಯಮ ಸಾಹಸ, ಉತ್ಪಾದನೆ ಮುಂತಾದವುಗಳ ಬಗ್ಗೆ ಸರ್ಕಾರವು ದಿವ್ಯ ನಿರ್ಲಕ್ಷ್ಯ ತಳೆದಿರುವುದು ಕಂಡುಬರುತ್ತದೆ. ಮಹಿಳೆಯರನ್ನು ರಾಷ್ಟ್ರ ನಿರ್ಮಾಣಲದಲ್ಲಿ ಭಾಗಿಗಳಾಗುವಂತೆ ಮಾಡಬೇಕು ಎಂಬ ಉದ್ದೇಶವಿಟ್ಟುಕೊಂಡಿರುವ ಸರ್ಕಾರವು ಅದಕ್ಕ ವಿರುದ್ಧವಾಗಿ ಕಲ್ಯಾಣವಾದಿ ಚಟುವಟಿಕೆಯಲ್ಲಿ ನಿರತರಾಗಿರುವುದು ಹಾಸ್ಯಾಸ್ಪದವಾಗಿದೆ. ಮಹಿಳೆಯರ ಅಭಿವೃದ್ಧಿಗಾಗಿ ರೂಪಿಸಲಾಗಿರುವ ಕಾರ್ಯಕ್ರಮಗಳ ಉದ್ದೇಶ 'ಕಲ್ಯಾಣವಾದಿ'ಯಾಗಿರುವುದರಿಂದ ಅವು ಒಟ್ಟಾರೆ ಆರ್ಥಿಕ ನೀತಿಯಲ್ಲಿ ಆದ್ಯತೆಯನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ. ಕಲ್ಯಾಣವಾದಿ ಧೋರಣೆಯು ಮೂಲದಲ್ಲಿ ಸರ್ಕಾರದ 'ಮಧ್ಯಮ ವರ್ಗ' ಸ್ವರೂಪ ಕೆಲಸ ಮಾಡುತ್ತಿರುವುದು ಸ್ಪಷ್ಟವಾಗಿದೆ. ಎಲ್ಲಿಯವರೆಗೆ ಪುರುಷ ಪ್ರಧಾನ ಮೌಲ್ಯಗಳು ಬದಲಾಗುವುದಿಲ್ಲವೋ ಅಲ್ಲಿಯವರೆಗೆ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳಿಂದ ಮಹಿಳೆಯರು ನ್ಯಾಯವನ್ನು ಬಯಸುವುದು ಸಾಧ್ಯವಿಲ್ಲ.

ಮಹಿಳಾ ಸಬಲೀಕರಣ

ಬೀಜಿಂಗ್ ನಲ್ಲಿ ನಡೆದ ವಿಶ್ವಸಮ್ಮೇಳನದ ಅಧಿವೇಶನದಲ್ಲಿ ಮಹಿಳೆಯರ ಸಬಲೀಕರಣಕ್ಕೆ ಮಹತ್ವ ನೀಡಲಾಯಿತು. ಅದರಂತೆ ''ಸಬಲೀಕರಣಗೊಳ್ಳುವಿಕೆ ನಿರ್ಧಾರ ತೆಗೆದುಕೊಳ್ಳುವ ಹಂತದಲ್ಲಿ ಭಾಗವಹಿಸುವುದು ಪವರ್ ಅನ್ನು ಪಡೆದುಕೊಳ್ಳುವ ಅವಕಾಶಗಳು ಇವು ಅಭಿವೃದ್ಧಿ ಸಮಾನತೆ ಮತ್ತು ಶಾಂತಿಯನ್ನು ಸಾಧಿಸಲು ಬೇಕಾಗುವ ಮೂಲಭೂತ ಅಂಶಗಳು.''

ಹೀಗೆ ಮಹಿಳಾ ಸಬಲೀಕರಣದ ಬಗ್ಗೆ ಅದನ್ನು ಸಾಧಿಸಲು ಇರಬೇಕಾದ ಅಂಶಗಳ ಬಗ್ಗೆ ತಿಳಿಸಲಾಗಿದೆ. ಆದರೆ ಕೇವಲ ಸಮ್ಮೇಳನಗಳಿಂದ ಮಾತ್ರ ಮಹಿಳೆಯರ ಸಬಲೀಕರಣ ಸಾಧ್ಯವಾಗುವುದಿಲ್ಲ. ಬದಲಿಗೆ ಅವುಗಳನ್ನು ಕಾರ್ಯಗತಗೊಳಿಸುವಲ್ಲಿ ಸತತ ಪ್ರಯತ್ನ ಲಿಂಗಸೂಕ್ಷ್ಮ ಸಂವೇದನೆ ಮತ್ತು ಮಹಿಳಾ ಪರ ಕಾಳಜಿಗಳಿದ್ದು ಕಟ್ಟು ನಿಟ್ಟಿನ ಕಾರ್ಯಾಚರಣೆಯಲ್ಲಿ ತೊಡಗಿದರೆ ಮಾತ್ರ ಮಹಿಳೆಯರ ಸಬಲೀಕರಣ ಸಾಧ್ಯವಾಗುವುದು. ಆದರೆ ಇಂದು ಸಮ್ಮೇಳನವು ಕೇವಲ

ಆಡಂಬರಗಳಿಗೆ ಸೀಮಿತಗೊಂಡಿದೆಯೇ ವಿನಃ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಇವು ಯಾವುದೇ ರೀತಿಯ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ.

ಮಹಿಳಾ ಸಬಲೀಕರಣವಾಗಲು ಇರುವ ಸಾಧ್ಯತೆಗಳು

೧. ಅಭಿವೃದ್ಧಿ ಪರಿಕಲ್ಪನೆಯನ್ನು ಇನ್ನು ವಿವರಣಾತ್ಮಕವಾಗಿ ಸ್ತ್ರೀವಾದಿ ದೃಷ್ಟಿಕೋನದಿಂದ ಅಧ್ಯಯನ ಮಾಡುವುದು ಹಾಗೂ ಅದರಲ್ಲಿನ ಲಿಂಗ ಅಸಮಾನತೆಯ ಎಳೆಗಳನ್ನು ಹೋಗಲಾಡಿಸಿ ನಿರ್ವಹಿಸುವುದು.

೨. ಸಂವಿಧಾನಾತ್ಮಕ ತಳಹದಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಮಹಿಳಾ ಅಭಿವೃದ್ಧಿ ಹಿನ್ನೆಲೆಯಲ್ಲಿ ರೂಪಿಸುತ್ತಿರುವ ಯೋಜನೆಗಳನ್ನು ವಿಶ್ಲೇಷಣೆಗೊಳಪಡಿಸುವುದು.

೩. ಸರ್ಕಾರದ ಅಂಗಗಳು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಕಾರ್ಯಗತ ಗೊಳಿಸುವಲ್ಲಿ ಅವುಗಳಿಗೆ ನ್ಯಾಯಬದ್ಧವಾಗಿ ಸಂರಚಿಸಲು ಬೇಕಾದಂತೆ ವಿಚಾರಧಾರೆಯನ್ನು ಹುಟ್ಟುಹಾಕುವುದು.

೪. ಮಹಿಳಾ ಅಭಿವೃದ್ಧಿಯನ್ನು ಪರಿಪೂರ್ಣವಾಗಿ ಅರ್ಥಪೂರ್ಣಗೊಳಿಸುವಲ್ಲಿ ಸರ್ಕಾರ ಮತ್ತು ಅದರ ಅಂಗಗಳು ಅಲ್ಲಿನ ನಿರ್ಧಾರ, ಅಧಿಕಾರ, ಸಂರಚನೆಯನ್ನು ಒಟ್ಟಾಗಿ ಮರು ವಿಶ್ಲೇಷಣೆಗೊಳಪಡಿಸುವುದು ಹಾಗೂ ಇನ್ನು ಅರ್ಥಪೂರ್ಣವನ್ನಾಗಿಸುವುದು.

೫. ಸಮಾಜದಲ್ಲಿ ಆರ್ಥಿಕ ಶೈಕ್ಷಣಿಕ, ಸಾಮಾಜಿಕ ಬಹುಮುಖ್ಯವಾಗಿ ರಾಜಕೀಯ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಸಂಪೂರ್ಣ ಯಶಸ್ಸನ್ನು ಸಾಧಿಸುವಂತೆ ಹಾಗೂ ಅದರೊಂದಿಗೆ ಪ್ರಭುತ್ವದ ಸಮಾನತೆಯನ್ನು ಇನ್ನು ಬಲಿಷ್ಟಗೊಳಿಸುವ ನಿಟ್ಟಿನಲ್ಲಿ ಸಾಗುವುದು ಹೇಗೆ ಎನ್ನುವುದನ್ನು ಗುರ್ತಿಸುವುದು ಹಾಗೂ ಜಾರಿಗೊಳಿಸುವುದು.

೨.೯ ಉಪಸಂಹಾರ

ಮಹಿಳಾ ಪರ ಅಭಿವೃದ್ಧಿ ಕಾರ್ಯಕ್ರಮಗಳು ಯಶಸ್ವಿಯಾಗಿ ಜಾರಿಯಾಗಲು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಎಲ್ಲದಕ್ಕೂ ಮುಖ್ಯವಾಗಿ ಸಮಾಜದಲ್ಲಿ ಮುಖ್ಯವಾಹಿನಿಯಲ್ಲಿ ಚಾಲ್ತಿಯಲ್ಲಿರುವ 'ಪುರುಷ ಪ್ರಧಾನ' ವ್ಯವಸ್ಥೆಯ ಎಲ್ಲಾ ಸಮಸ್ಯೆಗಳ ಮೂಲ ಸ್ವರೂಪವಾಗಿದೆ. ಭಾರತವು ಪುರುಷಪ್ರಧಾನತೆಯನ್ನು ಬಲವಾಗಿ ಪ್ರತಿಪಾದಿಸಿ ಪಾಲಿಸುವಂತಹ ದೇಶವಾಗಿದೆ. ಇಲ್ಲಿ ಪುರುಷನೇ ಸಮಾಜ ಮತ್ತು ಕುಟುಂಬದ ಮುಖ್ಯಸ್ಥನಾಗಿದ್ದಾನೆ. ಆತನ ಕೆಳಗೆ ಎಲ್ಲಾ ರೀತಿ-ನೀತಿಗಳು ರೂಪುಗೊಳ್ಳುತ್ತಿದೆ. ಸ್ತ್ರೀಯರೂ ಸಹ ಆತನ ಒಡೆತನದಲ್ಲಿದ್ದು ಆತನಿಗೆ ವಿಧೇಯಳಾಗಿ ಅವಲಂಬಿಯಾಗಿದ್ದಾಳೆ. ಹೀಗಾಗಿ ಮಹಿಳೆಯರೂ ಸಹ ಪುರುಷಪ್ರಭಾನ ವ್ಯವಸ್ಥೆಯನ್ನು ಒಪ್ಪಿಕೊಂಡು

ಜೀವನ ಸಾಗಿಸುತ್ತಿದ್ದಾರೆ. ಆದರೆ ಅದರ ಪ್ರಭಾವದಿಂದಾಗಿ ಬಹಳಷ್ಟು ನಲುಗಿ ಹೋಗಿದ್ದಾಳೆ. ಈ ಸಮಸ್ಯೆಗಳಿಂದಾಗಿ ವಿಮುಕ್ತಿ ಪಡೆಯಲು ಮಹಿಳೆಯು ಪುರುಷ ಪ್ರಧಾನತೆಯ ವಿರುದ್ಧ ಹೋರಾಟ ಮಾಡಲು ಶುರುಮಾಡಿದಾಗ ಅಸ್ತಿತ್ವಕ್ಕೆ ಧಕ್ಕೆ ಬರುವುದನ್ನು ಸಹಿಸದ ಪುರುಷ ಪ್ರಧಾನತೆಯು ಸ್ತ್ರೀಯರನ್ನು ಮತ್ತಷ್ಟು ಕಟ್ಟುನಿಟ್ಟಿನ ನಿಯಮಗಳೊಂದಿಗೆ ತುಳಿತಕ್ಕೊಳಪಡಿಸುತ್ತದೆ. ಆದರೆ ಸ್ತ್ರೀಯರು ತಮ್ಮೆಲ್ಲಾ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಮತ್ತು ಅದರ ಅಭಿವೃದ್ಧಿಗೆ ಯೋಜನೆಗಳ ಮೂಲಕ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಸ್ತ್ರೀಯರ ಅಭಿವೃದ್ಧಿ ಸಾಧ್ಯವಾದರೆ ಪುರುಷರಿಗೆ ಸರಿಸಮನಾಗಿ ನಿಲ್ಲುತ್ತಾಳೆ. ಆನಂತರ ಪುರುಷನನ್ನೇ ಧಿಕ್ಕರಿಸುತ್ತಾಳೆ. ಇದರಿಂದಾಗಿ ಇಡೀ ಪುರುಷ ಪ್ರಧಾನತೆಗೆ ಮುಖಭಂಗವಾಗುತ್ತದೆ. ಈ ರೀತಿಯ ಅವಮಾನವನ್ನು ಸಹಿಸಿಕೊಳ್ಳಲು ಇಚ್ಛಿಸದ ಪುರುಷ ಪ್ರಧಾನತೆಯ ಸ್ತ್ರೀಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪುರುಷ ಪ್ರಧಾನ ಸಿದ್ಧಾಂತಗಳ ಮೇಲೆ ನಿರೂಪಿಸಿದೆ. ಇದರಿಂದಾಗಿ ಇಡೀ ಅಭಿವೃದ್ಧಿ ಕಾರ್ಯಕ್ರಮಗಳು ಪುರುಷನನ್ನು ಕೇಂದ್ರ ಬಿಂದುವನ್ನಾಗಿಸಿಕೊಂಡು ಆತನ ಸುತ್ತಲೇ ಸುತ್ತುತ್ತಿರುತ್ತದೆ. ಈ ರೀತಿಯಿಂದಾಗಿಯೇ ಮಹಿಳಾ ಅಭಿವೃದ್ಧಿ ಸಿದ್ಧಾಂತಗಳು ಹೆಸರಿಗೆ ಮಾತ್ರ ಜಾರಿಯಲ್ಲಿವೆಯೇ ಹೊರತು ಪುರುಷನ ದಬ್ಬಾಳಿಕೆಯನ್ನು ಧಿಕ್ಕರಿಸಿ ಸ್ತ್ರೀಯರಿಗೆ ಸಂಪೂರ್ಣ ರಕ್ಷಣೆಯನ್ನು ಕೊಡುತ್ತಿಲ್ಲ ಮತ್ತು ಅವರ ಅಭಿವೃದ್ಧಿಗೆ ಶ್ರಮಿಸುತ್ತಿಲ್ಲ.

ಮೇಲ್ಕಂಡ ಸಮಸ್ಯೆಗಳಂತೆ ಲಿಂಗ ಅಸಮಾನತೆ ಪೂರ್ವಗ್ರಹಗಳು ದೌರ್ಜನ್ಯಗಳು. ಮೌಢ್ಯ ಸಂಪ್ರದಾಯಗಳೂ ಚಾಲ್ತಿಯಲ್ಲಿದೆ. ಈ ಸಮಸ್ಯೆಗಳನ್ನು ಹೋಗಲಾಡಿಸಲು ಯೋಜನೆಗಳು ಜಾರಿಯಲ್ಲಿದ್ದರೂ ಸಹ ಅವು ವಿಫಲವಾಗಿದೆ. ಜೊತೆಗೆ ಅನೇಕ ಕೊರತೆಗಳನ್ನು ಎದುರಿಸುತ್ತಿದೆ. ಈ ರೀತಿ ಸಮಸ್ಯೆಗಳನ್ನು ನಿವಾರಿಸಿ ಮಹಿಳಾ ಪರ ಯೋಜನೆಗಳು ಸದೃಢವಾಗಿ ರೂಪುಗೊಂಡು, ಯಶಸ್ವಿಯಾಗಿ ಜಾರಿಗೊಳ್ಳಬೇಕೆಂದರೆ ಮಹಿಳಾ ಪರ ಯೋಜನೆಗಳನ್ನು ''ಸ್ತ್ರೀವಾದಿ ಸಿದ್ಧಾಂತ''ಗಳ ಆಧಾರದ ಮೇಲೆ ನಿರ್ಮಿಸಬೇಕು. ಏಕೆಂದರೆ ಸ್ತ್ರೀವಾದಿಗಳೇ ಮಹಿಳೇಯರ ಅಗತ್ಯ. ಅನಗತ್ಯ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಅರ್ಥೈಸಬಲ್ಲರು. ಜೊತೆಗೆ ಅವರಿಗೆ ಮಹಿಳೆಯರ ಬಗೆಗೆ ಕಾಳಜಿ ಮತ್ತು ಮಹಿಳೆಯರ ಅಭಿವೃದ್ಧಿಯನ್ನು ಸಾಧಿಸುವುದೇ ಮುಖ್ಯಗುರಿಯಾಗಿರುತ್ತದೆ. ಜೊತೆಗೆ ಮಹಿಳೆಯರನ್ನು ಮುಖ್ಯವಾಹಿನಿಯಲ್ಲಿ ಪುರುಷನಷ್ಟೇ ಸಮಾನಗಳು ಎಂದು ಬಿಂಬಿಸುವುದು ಅವರ ಧ್ಯೇಯವಾಗಿರುತ್ತದೆ. ಆದ್ದರಿಂದಲೇ ಮಹಿಳಾ ಪರ ಯೋಜನೆಗಳನ್ನು ಸ್ತ್ರೀವಾದಿ ಸಿದ್ಧಾಂತ/ ಚಿಂತನೆಗಳ ಮೂಲಕ ರಚಿಸಬೇಕಾಗಿದೆ.

* ಪಿತೃ ಪ್ರಧಾನ ಮೌಲ್ಯಗಳನ್ನು ಸಮಾಜದಿಂದ ಸಂಪುರ್ಣವಾಗಿ ಹೋಗಲಾಡಿಸಲು ಸಾಧ್ಯವಿಲ್ಲ. ಆದರೆ ಮಹಿಳೆಯರ ಮೇಲಿನ ಕಟ್ಟುಪಾಡುಗಳನ್ನು ಹೋಗಲಾಡಿಸಲು ಪ್ರಯತ್ನಿಸಬೇಕು ಮತ್ತು ಅದರಲ್ಲಿರುವ ಸಿದ್ಧಾಂತ, ಮೌಲ್ಯಗಳಲ್ಲಿ ಬದಲಾವಣೆ ತರಬೇಕು.

* ಯೋಜನೆಗಳು ಜಾರಿಗೊಂಡ ನಂತರ ಅದರ ಮೇಲೆ ಸಮೀಕ್ಷೆಗಳನ್ನು ನಡೆಸಿ ಮೌಲ್ಯಮಾಪನದೊಂದಿಗೆ ಅದರ ಯಶಸ್ಸು-ವೈಫಲ್ಯಗಳನ್ನು ಚರ್ಚಿಸದಿರುವುದರಿಂದಾಗಿ ಅಭಿವೃದ್ಧಿ ಫಲಿತಾಂಶಗಳಲ್ಲಿ ಯಾವುದು ಎಷ್ಟರ ಮಟ್ಟಿಗೆ ಕೆಲಸ ನಿರ್ವಹಿಸುತ್ತಿವೆ ಎಂಬುದನ್ನು ತಿಳಿಯಲು ಸಾಧ್ಯವಾಗುವುದರಿಂದ ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು ನಿರೀಕ್ಷಿತ ಫಲಿತಾಂಶಗಳನ್ನು ನೀಡದೇ ವಿಫಲವಾಗುತ್ತಿದೆ. ಆದ್ದರಿಂದಲೇ ಯೋಜನೆಗಳನ್ನು ಮೌಲ್ಯಮಾಪನ ಮಾಡಿ ಅವುಗಳಲ್ಲಿರುವ ಲೋಪ-ದೋಷಗಳನ್ನು ಸರಿಪಡಿಸಿ ಪುನಃ ಜಾರಿಗೊಳಿಸಿದಾಗ ಮಾತ್ರ ಅದು ಯಶಸ್ವಿಯಾಗುತ್ತದೆ.

* ಸರ್ಕಾರಿ ಅಧಿಕಾರಿಗಳಲ್ಲಿನ ನಿರ್ಲಕ್ಷ್ಯ ಧೋರಣೆ ಮತ್ತು ಲಿಂಗ ಪೂರ್ವಾಗ್ರಹಗಳನ್ನು 'ಸೂಕ್ಷ್ಮ ಲಿಂಗ 'ಸಂವೇದನಾ' ತರಬೇತಿಗಳನ್ನು ನಡೆಸುವುದರ ಮೂಲಕ ನಿವಾರಿಸುವುದು.

* ಮಹಿಳೆಯರಲ್ಲಿ ವೈಚಾರಿಕತೆಯನ್ನು ಬೆಳೆಸುವುದು.

* ಸ್ತ್ರೀ-ಪುರುಷರ ನಡುವಿನ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸುವಂತಹ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸುವುದು.

* ಸಮಾಜದ ಮುಖ್ಯವಾಹಿನಿಯಲ್ಲಿಯೂ ಕೂಡ 'ಸೂಕ್ಷ್ಮ ಲಿಂಗ ಸಂವೇದನೆ'(Gender Sensetise) ತರಬೇತಿಗಳನ್ನು ನೀಡುವುದು.

ಈ ಮೂಲಕ ಸಮಾಜದಲ್ಲಿನ ಪ್ರಾಥಮಿಕ ಮತ್ತು ಮೂಲ ಸಮಸ್ಯೆಗಳನ್ನು ನಿವಾರಿಸಿ ಸ್ತ್ರೀವಾದಿ ಚಿಂತನೆಗಳ ಮೂಲಕ ಮಹಿಳಾ ಪರ ಅಭಿವೃದ್ಧಿ ಯೋಜನೆಗಳನ್ನು ನಿರ್ಮಿಸುವುದರಿಂದಾಗಿ ಅವು ಯಶಸ್ವಿ ಫಲಿತಾಂಶಗಳನ್ನು ನೀಡುತ್ತವೆ. ಇದರಿಂದಾಗಿ ಮಹಿಳೆಯರ ಎಲ್ಲಾ ಸಮಸ್ಯೆಗಳು ಪರಿಹಾರವಾಗಿ ಅಭಿವೃದ್ಧಿಯೆಡೆಗೆ ಪರಿಣಮಿಸುತ್ತಾರೆ. ಈ ಮೂಲಕ ಮಹಿಳೆಯರು ಮುಖ್ಯವಾಹಿನಿಯಲ್ಲಿ ಅಭಿವೃದ್ಧಿಯನ್ನು ಸಾಧಿಸುವುದರಿಂದಾಗಿ ದೇಶದ ಪ್ರಗತಿಯೂ ಸಾಧ್ಯವಾಗುತ್ತದೆ. ಜೊತೆಗೆ ಮಹಿಳಾ ಪರ ಯೋಜನೆಗಳೂ ಒಂದು ಮೈಲಿಗಲ್ಲಾಗಿ ನಿಲ್ಲುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಅಡಿಟಿಪ್ಪಣಿಗಳು

೧. http/www.dvelopmenttheory.com

೨. http/www.womentstutes.co.in

೩. http/www.dvelopmenttheory.com

೪. Descaters, **Development theory and work,** 1989, Pp.41

೫. http/www.dvelopmenttheory.com

೬. Ibid

೭. ಜಿಂಗನ್ ಎಂ.ಎಲ್., ದ ಎಕನಾಮಿಕ್ಸ್ ಆಫ್ ಡೆವಲಪ್‌ಮೆಂಟ್ ಅಂಡ್ ಫ್ಲಾನಿಂಗ್, ೨೦೦೯, ಪು.೯೫–೯೬

೮. ಅಗರವಾಲ, ಕುಂದನ್ ಲಾಲ, ದ ಎಕನಾಮಿಕ್ಸ್ ಡೆವಲಪ್‌ಮೆಂಟ್ ಅಂಡ್ ಪ್ಲಾನಿಂಗ್, ೧೯೯೩, ಪು.೧೩–೨೦

೯. ಜಿಂಗನ್ ಎಂ.ಎಲ್., ದ ಎಕನಾಮಿಕ್ಸ್ ಆಫ್ ಡೆವಲಪ್‌ಮೆಂಟ್ ಅಂಡ್ ಫ್ಲಾನಿಂಗ್, ೨೦೦೯, ಪು.೧೨೩–೧೩೭

೧೦. ಅದೇ, ಪು.೧೫.೧–೧೫.೨

೧೧. ಅದೇ, ಪು.೨೪೩

೧೨. ಅದೇ, ಪು.೧೮೧

೧೩. ಅಗರವಾಲ, ಕುಂದನ್ ಲಾಲ, ದ ಎಕನಾಮಿಕ್ಸ್ ಡೆವಲಪ್‌ಮೆಂಟ್ ಅಂಡ್ ಪ್ಲಾನಿಂಗ್, ೧೯೯೩, ಪು.೨೦೧–೨೦೨

೧೪. ಅದೇ, ಪು.೨೧೧–೨೧೨

೧೫. ಹುಲುಗಪ್ಪ ಎಚ್., ಅಸಂಗಟಿತ ಮಹಿಳೆಯರ ದುಡಿಮೆ ಮತ್ತು ಆರ್ಥಿಕತೆಯ ಸ್ವರೂಪ, ಪಿಎಚ್.ಡಿ ಪ್ರಬಂಧ, ಪು.೩೭

೧೬. ಅದೇ, ಪು.೩೭

೧೭. ಹೇಮಲತಾ ಹೆಚ್.ಎಂ., ಮಹಿಳಾ ಅಧ್ಯಯನ ೨, ಪು.೭೪

೧೮. ಅದೇ, ಪು.೪೧–೪೫

೧೯. ಅದೇ, ಪು.೧೧೨

೨೦. ಅದೇ, ಪು.೬೬–೬೭

೨೧. ಇಂಡಿಯನ್ ಗೌರ್‍ನಮೆಂಟ್ ಕಂಟ್ರಿರಿಪೋರ್ಟ್ ೧೯೯೫

ಅಧ್ಯಾಯ ಮೂರು

ಮಹಿಳೆ ಮತ್ತು ಸರ್ಕಾರಿ ಯೋಜನೆಗಳು: ವಿಶ್ಲೇಷಣಾತ್ಮಕ ಅಧ್ಯಯನ

೩.೧ ಯಾಕೆ ಪಂಚವಾರ್ಷಿಕ ಯೋಜನೆಗಳನ್ನು ಗುರುತಿಸಿಕೊಳ್ಳಲಾಗಿದೆ.

೩.೨ ಪಂಚವಾರ್ಷಿಕ ಯೋಜನೆಗಳ ಹಿನ್ನೆಲೆ

೩.೩ ಮಹಿಳಾ ಅಭಿವೃದ್ಧಿ ಮತ್ತು ಸರ್ಕಾರಿ ಮಹಿಳಾ ಯೋಜನೆಗಳು

೩.೪ ಮಹಿಳೆ ಮತ್ತು ಸರ್ಕಾರ ಯೋಜನೆಗಳ ವಿಶ್ಲೇಷಣಾತ್ಮಕ ವಿವರಣೆ

ಅಧ್ಯಾಯ ಮೂರು

ಮಹಿಳೆ ಮತ್ತು ಸರ್ಕಾರಿ ಯೋಜನೆಗಳು: ವಿಶ್ಲೇಷಣಾತ್ಮಕ ಅಧ್ಯಯನ

೩.೧. ಯಾಕೆ ಪಂಚವರ್ಷಿಕ ಯೋಜನೆಗಳನ್ನು ಗುರುತಿಸಿಕೊಳ್ಳಲಾಗಿದೆ

ಸಂವಿಧಾನಾತ್ಮಕವಾಗಿ ತಳೆದ ತಾತ್ವಿಕ ನಿಲುವುಗಳನ್ನು ಜಾರಿಗೆಗೊಳಿಸುವ ಸಲುವಾಗಿ ಕಾರ್ಯ ಯೋಜನೆಗಳನ್ನು ರೂಪಿಸಬೇಕಿತ್ತು. ಕಾಲಾವಧಿ ನಿಯಮಿತ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುತ್ತಾ ಬರಲಾಯಿತು. ಹೀಗೆ ಮಾಡುವುದರಿಂದ ಐದು ವರ್ಷಕ್ಕೊಮ್ಮೆ ಯೋಜನೆಗಳ ತಾತ್ವಿಕತೆ ಕಾರ್ಯವಿಧಾನ ಹಾಗೂ ಪರಿಣಾಮಗಳು ಒಟ್ಟಾರೆ ಸಂವಿಧಾನಾತ್ಮಕ ಉದ್ದೇಶಗಳನ್ನು ನೆರವೇರಿಸುತ್ತಿವೆಯೇ ಎಂಬುದನ್ನು ಮತ್ತೆ ಮತ್ತೆ ಅವಲೋಕಿಸಲು ಸಾಧ್ಯ. ಈ ಅವಲೋಕನವನ್ನು ಗಮನದಲ್ಲಿಟ್ಟುಕೊಂಡು ಆದರಿಸಿ ಮುಂದಿನ ಯೋಜನೆಗಳಲ್ಲಿ ತರಬೇಕಾದ ಅಗತ್ಯಗಳನ್ನು, ಬೆಳವಣಿಗೆಯನ್ನು ಮತ್ತು ಮಾರ್ಪಾಡುಗಳನ್ನು ಗಮನಿಸಿ ಅಳವಡಿಸಿಕೊಳ್ಳಲು ಅವಕಾಶಗಳು ಮುಕ್ತವಾಗಿರುತ್ತವೆ.

ಈ ಹಿನ್ನಲೆಯಲ್ಲಿ ಮೊದಲ ಪಂಚವಾರ್ಷಿಕ ಯೋಜನೆಯಿಂದ ಆರಂಭವಾದ ಚಿಂತನಾ ವಿಧಾನಗಳು ಹಲವು ಬಗೆಯ ಮಾರ್ಪಾಡುಗಳ, ಬೆಳವಣಿಗೆಗಳನ್ನು ಪಡೆದಿರುವುದನ್ನು ಕಾಣಬಹುದು / ಗಮನಿಸಬಹುದು. ಇದರ ಅನ್ವಯ ಪಂಚವಾರ್ಷಿಕ ಯೋಜನೆಗಳನ್ನು ನೋಡಿದರೆ, ಮೊದಲ ಹಂತವು..

೧. ಮಾರುಕಟ್ಟೆ ಆಧಾರಿತ ಯೋಜನೆಗಳು

೨. ಸಮುದಾಯದ ಶ್ರೇಣಿಕೃತ ಆಧಾರಿತ ಯೋಜನೆಗಳು

೩. ಜನಗಳನ್ನೊಳಗೊಂಡ ಆಧಾರಿತ ಯೋಜನೆಗಳು

ಮೂರು ಹಂತಗಳಲ್ಲಿ ಯೋಜನೆಗಳನ್ನು ಕಾಣಲಾಗುತ್ತದೆ.

ಜನ ಸಮುದಯದಲಿ ಶ್ರೇಣಿಕರಣವನ್ನು ಗಮನಿಸಿ ಮಾಡಿದ ಯೋಜನೆಗಳು ಚಿಂತನೆಗಳು ಹೀಗೆ ಸಾಗುತ ಬಂದವು. ಇವುಗಳಲ್ಲಿ ಹಲವು ಉತ್ತಮ ಫಲಿತಗಳು ಬಂದವೆಂಬುಧು ನಿಜ. ಇಷ್ಟಾದರೂ ಯೋಜನೆಗಳು ಮಹಿಳೆಯರ ಅಭಿವೃದ್ಧಿಗೆ ಅಷ್ಟಾಗಿ ಪೂರಕವಾಗಿಲ್ಲ ಎಂಬ ಪ್ರಶ್ನೆ ಉಳಿದುಕೊಂಡಿತ್ತು. ಈಗ ಮಹಿಳಾ ಸಮುದಾಯವನ್ನು ಕೇಂದ್ರವಾಗಿಟ್ಟುಕೊಂಡೇ ಚಿಂತನೆಗಳು ಯೋಜನೆಗಳ ರೂಪಿಕೆಯಲ್ಲಿ ಮುಖ್ಯ ಪಾತ್ರ ವಹಿಸುವುದು ಅಗತ್ಯವಾಯಿತು. ಈ ಹಿನ್ನಲೆಯಲ್ಲಿ ಅದಾಗಲೇ ಸಿದ್ಧಗೊಂಡಿದ್ದ "ಸಮಾನತೆಯಡೆಗೆ" ಎಂಬ ವರದಿ ಹಾಗೂ ಸ್ತ್ರೀವಾದಿಗಳು ಮಂಡಿಸಿದ್ದ ವಿಶಿಷ್ಟ ಚಿಂತನಾ ವಿಧಾನಗಳು ಮುನ್ನಲೆಗೆ ಬಂದವು.

ಈ ಹಿನ್ನಲೆಯಲ್ಲಿ ಮುಂದಿನ ಹಂತದ ಯೋಜನೆಗಳು ಮೊದಲಿಗೆ ಲಿಂಗತ್ವ ನಿಖರತೆಯಗಿ ಮೂಡಿಬಂದವು. ಈ ಹಿನ್ನಲೆಯಲ್ಲಿಯೂ ಕೂಡ ಮಹಿಳಾ ಸಮುದಾಯಕ್ಕೆ ತಲುಪಬೇಕಾದ ಯೋಜನೆಗಳು ತಲುಪುವಲ್ಲಿ ಮತ್ತೆ ಮಹಿಳೆಯರನ್ನು ವಿಶಿಷ್ಟವಾಗಿ ಗಮನಿಸಿ ಯೋಜನೆಗಳಲ್ಲಿ ಅಳವಡಿಸಲು ಮುಂದಾದವು. ಈ ಯೋಜನೆಗಳ ರೂಪಿಕೆಯಲ್ಲಿ ಮಹಿಳಾ ಸಮುದಾಯವನ್ನು ಕೇವಲ ಫಲಾನುಭವಿಗಳಾಗಿ ಮಾತ್ರ ಗಮನಿಸದೆ ಅವರನ್ನು ಚಿಂತನಾ ಕ್ರಮದಲ್ಲಿ ಭಾಗವಾಗಿ ಗುರುತಿಸುವುದು ಅವಶ್ಯವಾಯಿತು. ಇವೆಲ್ಲವುದರ ಪರವಾಗಿ ಮುಂದಿನ ಯೋಜನೆಗಳ ಮಹಿಳಾ ವಿಶಿಷ್ಟ ಕಾರ್ಯಕ್ರಮಗಳು, ಅವುಗಳು ಜಾರಿಗೊಳ್ಳಬೇಕಾದ ಗುರಿಗಳು ಹಂತ ಹಂತವಾಗಿ ತಲುಪಲು ಪ್ರಾರಂಭಿಸಿದವು. ಈ ಎಲ್ಲ ಚಿಂತನೆಗಳ ಹಿನ್ನಲೆಯಲ್ಲಿಯೇ ಸರ್ಕಾರಿ ಕಾರ್ಯಕ್ರಮಗಳಲ್ಲಿ ಮಹಿಳಾ ವಿಶಿಷ್ಟವಾದವುಗಳನ್ನು ವಿಶೇಷವಾಗಿ ಮೌಲ್ಯಮಾಪನಕ್ಕೆ ಗುರಿಮಾಡುವ ಚಿಂತನೆಗಳು ಜಾರಿಗೊಂಡವು. ಈ ಹಂತದಲ್ಲಿಯೂ ಹಲವು ಉತ್ತಮ ಬದಲಾವಣೆಗಳು ಬಂದವೆಂಬುದು ನಿಜವಾದರೂ ಹಲವು ತೊಡಕಿನ ಸಮಸ್ಯೆಗಳು ಉಳಿದುಬಿಟ್ಟವು. ಈ ಹಿನ್ನಲೆಯಲ್ಲಿ ಮಹಿಳೆಯರ ಅಭಿವೃದ್ಧಿಯನ್ನು ವಿಶೇಷವಾಗಿ ಗಮನಿಸುವ ಸ್ತ್ರೀವಾದಿ ಚಿಂತಕರು ಈ ಮೌಲ್ಯಮಾಪನದ ಉದ್ದೇಶ ಪಂಚವಾರ್ಷಿಕ ಯೋಜನೆಗಳನ್ನು ಅದು ಜಾರಿಗೊಳಿಸುವುದಾಗಲಿ, ಸರ್ಕಾರಿ ಕಾರ್ಯಕ್ರಮವನ್ನಾಗಲಿ ಬೆರೆಸುವುದು ಅಪರಾಧಿ ಎಂದು ನಿರೂಪಿಸುವ ಉದ್ದೇಶವಲ್ಲ, ಬದಲಿಗೆ ಈ ಮೌಲ್ಯಮಾಪನವು ಯೋಜನೆ ಹಾಗೂ ಕಾರ್ಯಕ್ರಮಗಳ ಮೂಲ ಉದ್ದೇಶವನ್ನು ನೆರವೇರಿಸುತ್ತವೆಂಬ ಉದ್ದೇಶವನ್ನು ಹೊಂದಿರುವಂತವು. ಇಂತಹ ಸ್ತ್ರೀವಾದಿ ಚಿಂತನಾ ವೈಧಾನಿಕತೆ ಹಾಗೂ ಇತರ ಪರಿಶ್ರಮಗಳನ್ನು ಸ್ತ್ರೀವಾದಿ ಅಧ್ಯಯನಕಾರರು ರೂಪಿಸುತ್ತಾ ಬಂದಿದ್ದಾರೆ. ಇವು ಮಾರ್ಗದರ್ಶಕ ಸೂತ್ರಗಳು ಮಾತ್ರ ಇಂತಹ ಒಂದು ಅಧ್ಯಯನ ವಿಧಾನವನ್ನು ಅಳವಡಿಸಿಕೊಂಡು ಸರ್ಕಾರಿ ಕಾರ್ಯಕ್ರಮಗಳಲ್ಲಿ ಮಹಿಳಾ ವಿಶಿಷ್ಟವಾದವುಗಳನ್ನು ಕೆಲವನ್ನು ಮಾದರಿಯಾಗಿ ಇಟ್ಟುಕೊಂಡು ಮೌಲ್ಯಮಾಪನ ಮಾಡುವ ಒಂದು ಆಶಯವನ್ನು ಈ ಮಹಾಪ್ರಬಂಧದಲ್ಲಿ ಹೊಂದಲಾಗಿದೆ.

ಈ ಪ್ರಕಾರ ಎಲ್ಲ ಮಹಿಳಾ ಕಾರ್ಯಕ್ರಮಗಳ ಕಿರುಪರಿಚಯವನ್ನು ಮಾತ್ರ ಮಾಡಲಾಗಿದೆ. ಇವುಗಳಲ್ಲಿ ಮುಖ್ಯ ಪ್ರಶ್ನೆಗಳು ಹೇಗೆ ಉಳಿದುಕೊಂಡುಬಿಟ್ಟವೆ ಎಂಬುದನ್ನು ಸ್ಥೂಲವಾಗಿ ಚರ್ಚಿಸಲಾಗಿದೆ. ಅಧ್ಯಯನಕ್ಕೆ ಮಾದರಿಯಾಗಿ ಕೆಲವಷ್ಟೆ ಕಾರ್ಯಕ್ರಮಗಳನ್ನು ಆಯ್ದು ಅವುಗಳ ವಿವರಗಳನ್ನು ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಇವುಗಳಿಗೆ ಸಂಬಂಧಿಸಿದ ಯೋಜನೆಗಳ ಮೂಲ ಉದ್ದೇಶ ಕಾರ್ಯಕ್ರಮ ವಿಧಾನ. ಇವುಗಳಿಂದ ದೊರಕಿದ ಫಲಿತಾಂಶಗಳನ್ನು ಇವುಗಳಲ್ಲಿ ವೈವಿಧ್ಯಮಯ ಮಾಹಿತಿ ಸಂಗ್ರಹ ವಿಶಿಷ್ಟ ಕ್ಷೇತ್ರಕಾರ್ಯವಿಧಾನಗಳನ್ನುಬಚೌಕಟ್ಟನ್ನಾಗಿ ಮಾಡಿಕೊಳ್ಳಲಾಗಿದೆ. ಸ್ತ್ರೀವಾದಿ ಚಿಂತನಾ ವಿಧಾನಗಳನ್ನು ಕೇಂದ್ರದಲ್ಲಿ ಇಟ್ಟುಕೊಂಡು ಈ ಪರಿಣಾಮಗಳ ವಿಶ್ಲೇಷಣೆಯನ್ನು ಮಾಡಿ ಕಂಡುಕೊಂಡ ಫಲಿತಾಂಶವನ್ನು ನಿರುಪಿಸಲಾಗಿದೆ. ಈ ನಿರೂಪಣೆಯು ಅಧ್ಯಯನದಲ್ಲಿ ವಿಶೇಷವಾಗಿ ಗಮನಿಸಲಾದ ಕಾರ್ಯಕ್ರಮಗಳ ಮೌಲ್ಯಮಾಪನವಾಗಿ ಯೋಜನಾ ನಿರೂಪಣೆಗೆ ಮಾರ್ಗದರ್ಶಕವಾಗಿ ಲಭಿಸುತ್ತದೆ ಎಂಬ ವಿಶ್ವಾಸವನ್ನು ಈ ಅಧ್ಯಯನವು ಹೊಂದಿದೆ.

೩.೨ ಪಂಚವಾರ್ಷಿಕ ಯೋಜನೆಯ ಹಿನ್ನಲೆ

ನಮ್ಮ ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು ೧೯೫೧ರಿಂದಲೇ ಆರಂಭಗೊಂಡವು. ಆದರೆ ಪಂಚವಾರ್ಷಿಕ ಯೋಜನೆಗಳ ಸೈದ್ಧಾಂತಿಕ ಚಿಂತನೆ ಸ್ವತಂತ್ರಪೂರ್ವದಿಂದಲೇ ಜಾರಿಯಲ್ಲಿ ಇತ್ತು. ೧೯೩೪ ಸರ್.ಎಂ.ವಿಶ್ವೇಶ್ವರಯ್ಯ ''Planned Economy for India''1 ಉತ್ತಮ ನಿದರ್ಶನ ಎನ್ನಬಹುದು. ಈ ಪುಸ್ತಕದ ಪ್ರತಿ ಮಾರ್ಗಸೂಚಿಗಳು ೧೯೩೮ರಿಂದಲೇ ಜಾರಿಯಲ್ಲಿದ್ದವು. ೧೯೪೪ರಲ್ಲಿ ಶ್ರೀಯುತ ಜವಾಹರಲಾಲ್ ನೆಹರು, "ರಾಷ್ಟ್ರೀಯ ಯೋಜನಾ ಸಮಿತಿಯನ್ನೇ" ನೇಮಿಸಿದರು. ಎರಡನೇ ಮಹಾಯುದ್ಧ ಕಾರಣದಿಂದ ಈ ಸಮಿತಿಯನ್ನು ಕಾರ್ಯಗತಗೊಳಿಸಲಾಗಲಿಲ್ಲ. ತದನಂತರ ೧೯೪೪ರಲ್ಲಿ ಭಾರತ ಸರ್ಕಾರ ಯೋಜನಾ ಕಾರ್ಯಕ್ರಮಗಳನ್ನು ಮುಖ್ಯವಾಗಿ ಪರಿಗಣಿಸಿ ಯೋಜನಾ ಮತ್ತು ಅಭಿವೃದ್ಧಿ ವಿಭಾಗ ಎಂಬ ಪ್ರತ್ಯೇಕ ವಿಭಾಗವನ್ನು ಸ್ಥಾಪಿಸಲಾಯಿತು. ೧೯೪೪ ಶ್ರೀಮಾನ್ಯ ನಾರಾಯಣರವರು ಕಟ್ಟಿದ ಯೋಜನಾ ವಿಧಾನ 'ಗಾಂಧಿಯನ್ ಪ್ಲಾನ್' ಎಂಬುದು ಹೆಚ್ಚು ಮಹತ್ವ ಮಾರ್ಗವಾಗಿ ಬದಲಾವಣೆ ತಂದಿತು. ತದನಂತರ ೧೯೪೫ ರಲ್ಲಿಯೂ ಸರ್ಕಾರ ಅಭಿವೃದ್ಧಿ ಯೋಜನೆಗಳನ್ನು ಮುಂದಿಟ್ಟುಕೊಂಡು "Peoples plan in April"೨ ಎಂಬ ಯೋಜನೆ ಜಾರಿಗೆ ತಂದಿತು. ಆದರೆ ಹಲವಾರು ಕಾರಣಾಂತರದಿಂದ ಜಾರಿಗೊಳಿಸಲಾಗಲಿಲ್ಲ. ೧೯೪೭ರಲ್ಲಿ ಭಾರತ ಸರ್ಕಾರ ಪ್ರಭಾವಿ ಸಲಹಾತ್ಮಕ ಮಂಡಲಿಯನ್ನು ರಚಿಸುವುದರ ಮೂಲಕ "ಭಾರತ ಯೋಜನಾ ವಿಧಾನವನ್ನು" ಜಾರಿಗೆ ತಂದಿತು. ಈ ಮಂಡಳಿಯ ಮೂಲಕ ಭಾರತದ ಅಭಿವೃದ್ಧಿಯನ್ನು ಅರಿಯಲು ಸಾಮಜಿಕ ಸ್ತರದಲ್ಲಿ

ತುಂಬಾ ಆಳವಾಗಿ ಅಭಿವೃದ್ಧಿ ಬಗೆಗೆ ಅಧ್ಯಯನ ನಡೆಸಲಾಯಿತು. ತದನಂತರ ಭಾರತೀಯ ಯೋಜನಾ ಮಂಡಳಿಯನ್ನು ಸ್ಥಾಪಿಸಿ 'ಅಭಿವೃದ್ಧಿ' ವಿಧಾನದ ಯೋಜನೆಗಳ ಬಗ್ಗೆ ಗಂಭೀರವಾಗಿ ಯೋಚನೆ ಮಾಡಲಾಯಿತು. ೧೯೫೦ರಲ್ಲಿ ಶ್ರೀ.ಜೈಪ್ರಕಾಶ ನಾರಾಯಣರವರು "Published plan"ಇ ಎಂಬುದನ್ನು ಪ್ರಕಟಿಸಿದರು. ಸರ್ಕಾರ ಜೈಪ್ರಕಾಶರವರ ಪ್ರಕಟಿತ ಯೋಜನಾ ವಿಧಾನವನ್ನು ಸಂಪೂರ್ಣವಾಗಿ ಬಳಸಲಿಲ್ಲವಾದರೂ ಕೂಡ ಭಾರತ ಯೋಜನಾ ಪದ್ಧತಿಗಳಲ್ಲಿ ಅವರ ಸಲಹೆ ಸಹಕಾರಗಳನ್ನು ಅಳವಡಿಸಿಕೊಳ್ಳಲಾಯಿತು. ತದನಂತರ ಮೊದಲ ಪಂಚವಾರ್ಷಿಕ ಯೋಜನೆಗಳನ್ನು ಭಾರತದಲ್ಲಿ ೧೯೫೦ರ ನಂತರ ಜಾರಿಗೊಳಿಸ ಲಾಯಿತು.

ಭಾರತದ ಸಂವಿಧಾನದಲ್ಲಿ ಯೋಜನಾ ಆಯೋಗದ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಭಾರತದ ಯೋಜನಾ ಆಯೋಗವು ಸಲಹಾ ಮಂಡಳಿಯ ಶಿಫಾರಸ್ಸಿನ ಮೇರೆಗೆ ರೂಪುಗೊಂಡಿರುವಂತದ್ದು ಹಾಗಾಗಿ ಇದು ಸಂದರ್ಭಕ್ಕೆ ತಕ್ಕಂತೆ ಬದಲಾವಣೆಗೊಳ್ಳುತ್ತಿರುತ್ತದೆ. ಭಾರತದ ಮೊದಲ ಪ್ರಧಾನ ಮಂತ್ರಿ ಜವಾಹರಲಾಲ ನೆಹರೂರವರು ಮೊದಲ ಯೋಜನಾ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡರು. ಸರ್ಕಾರ–ಸರ್ಕಾರೇತರ ಕ್ಷೇತ್ರಗಳಿಂದ ಅನುಭವಿ ವ್ಯಕ್ತಿಗಳನ್ನೊಳಗೊಂಡ ಸಲಹಾಮಂಡಳಿಯನ್ನು ರಚಿಸಲಾಯಿತು. ಈ ನಿಟ್ಟಿನಲ್ಲಿ ಭಾರತದ ಯೋಜನಾ ಆಯೋಗವು ರಚನೆಗೊಂಡಿತು. ೧೯೫೧ ರಿಂದ ಯೋಜನಾ ಕಾರ್ಯಕ್ರಮಗಳು ಜಾರಿಗೊಂಡವು.

೧೮ನೇ ಶತಮಾನದಲ್ಲಿ ಅಭಿವೃದ್ಧಿ ಹೊಂದಿದ ಅಭಿವೃದ್ಧಿಶೀಲ ರಾಷ್ಟ್ರಗಳು ಯಾವುದೇ ಯೋಜನೆಗಳಿಲ್ಲದೆ ಕಾರ್ಯನಿರ್ವಹಿಸುತ್ತಿದ್ದವು. ಆದರೆ ೧೯ನೇ ಮತ್ತು ೨೦ನೇ ಶತಮಾನದಲ್ಲಿ ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳು ಯೋಜನೆಗಳನ್ನು ರೂಪಿಸಿ ಅದರ ಪ್ರಕಾರ ಅಭಿವೃದ್ಧಿ ಸಾಧಿಸುತ್ತಿವೆ. ಬಹುತೇಕ ಎಲ್ಲಾ ರಾಷ್ಟ್ರಗಳೂ ಯೋಜನಾ ಕಾರ್ಯಕ್ರಮಗಳನ್ನು ರೂಪಿಸಿ ಅಭಿವೃದ್ಧಿ ಮಾರ್ಗದತ್ತ ಸಾಗುತ್ತಿವೆ. ೧೯೨೮ರಲ್ಲಿ ರಷ್ಯಾದಲ್ಲಿ ಆರಂಭವಾದ ಯೋಜನಾ ಪದ್ಧತಿ, ಭಾರತದಲ್ಲಿ ಸ್ವತಂತ್ರ ನಂತರ ೧೯೫೦ ರಿಂದ ಆರಂಭಗೊಂಡಿತು. ಯೋಜನೆಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹಾಗೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿಯೂ ರೂಪಿಸಲಾಗಿದೆ. ವಿಭಿನ್ನತೆ ಎಂದರೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ತಮ್ಮ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ, ಅಭಿವೃದ್ಧಿಶೀಲ ರಾಷ್ಟ್ರಗಳು ತಮ್ಮ ಅಭಿವೃದ್ಧಿಯನ್ನು ಸ್ಥಿರಗೊಳಿಸುವಲ್ಲಿ ಕಾರ್ಯನಿರ್ವಹಿಸುತ್ತಿವೆ. ಆಯಾ ಪ್ರಾದೇಶಿಕ ಭಿನ್ನತೆ, ಭೌಗೋಳಿಕ ಭಿನ್ನತೆ ಜನಗಣತಿ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಸಾಂಸ್ಕೃತಿಕ, ಮೌಲ್ಯಗಳ ಅಡಿಯಲ್ಲಿ ಯೋಜನೆಗಳನ್ನು ಸಂರಚಿಸಲಾಗುತ್ತಿದೆ. ಯೋಜನೆಗಳು ರಾಷ್ಟ್ರದಿಂದ ರಾಷ್ಟ್ರಕ್ಕೆ ಭಿನ್ನತೆಯನ್ನು ಮೈಗೂಡಿಕೊಂಡಿವೆ.

ಯೋಜನೆಗಳು ಆಯಾ ಪ್ರಾದೇಶಿಕ ಕ್ಷೇತ್ರದಲ್ಲಿನ ಹಾಗೂ ಎಲ್ಲ ಸಾಮಾಜಿಕ ಸಂಸ್ಥೆಗಳು ಹಾಗೂ ಇತರೆ ಅಂಶಗಳ ನೆಲೆಯಲ್ಲಿ ಒಟ್ಟಾಗಿ ಸಾಮಾಜಿಕ ಸುಧಾರಣೆಯ ನೆಲೆಗಟ್ಟಿನಲ್ಲಿ ಸಂರಚಿತಗೊಂಡಿದ್ದು, ಬಡತನ ನಿರ್ಮೂಲನೆ, ಶ್ರೇಣೀಕೃತ ವ್ಯವಸ್ಥೆಯ ಎಲ್ಲಾ ಸಮಸ್ಯೆಗಳನ್ನು ಹೋಗಲಾಡಿಸಿ ಸಾಮಾಜಿಕ ನ್ಯಾಯವನ್ನು ಸಂರಚಿಸಿ ಗಟ್ಟಿಗೊಳಿಸಿ, ಕಾರ್ಯಗತಗೊಳಿಸುವ ನೆಲೆಯಲ್ಲಿ ಯೋಜನೆಗಳು ಮಹತ್ವದ ಪಾತ್ರ ನಿರ್ವಹಿಸುತ್ತವೆ. ಯೋಜನೆಗಳು ಎಂದರೆ ಪ್ರತಿ ರಾಷ್ಟ್ರದ ನಿರ್ದಿಷ್ಟ ಧ್ಯೇಯೋದ್ದೇಶಗಳನ್ನು ಹೊತ್ತ ಸಾಮಾಜಿಕ ಶಾಂತಿಯನ್ನು ಕಾಪಾಡುವ ಸಬಲ ರಾಷ್ಟ್ರವನ್ನು ಕಟ್ಟುವ ಹಿನ್ನೆಲೆಯಲ್ಲಿ ಸರ್ಕಾರ ಬಳಸುತ್ತಿರುವ ಮಹಾ ಅಸ್ತ್ರಗಳು, ತಂತ್ರಗಳು ಹಲವು ಪಂಚವಾರ್ಷಿಕ ಯೋಜನೆಗಳು ಪ್ರಮುಖವಾದಂತವು.

"ಮಹಿಳಾ ಸಬಲೀಕರಣ" ಎಲ್ಲಾ ಕ್ಷೇತ್ರದಲ್ಲೂ ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ. ಸರ್ಕಾರದ ಯೋಜನೆ, ಕಾರ್ಯಕ್ರಮಗಳಲ್ಲೂ ಮಹಿಳಾ ವಿಶೇಷತೆಗಳನ್ನು ಕಾಣಲಾಗುತ್ತದೆ. ಈ ವಿಶೇಷತೆಯನ್ನು ತಿಳಿಸಿಕೊಟ್ಟಂತ್ತದ್ದು 'ಸಮಾನತೆಯೆಡೆಗೆ' ಎನ್ನುವ ವರದಿ ೧೯೭೦-೭೧ರ ವರ್ಷದಲ್ಲಿ ವಿಶ್ವಸಂಸ್ಥೆಯ ಮಹಿಳೆಯ ಸ್ಥಾನಮಾನವನ್ನು ಅರಿಯಲು ಒಂದು ಸಮಿತಿ ರಚಿಸಿತು. ಈ ಸಮಿತಿಯು ಭಾರತದಲ್ಲಿನ ಮಹಿಳಾ ಸ್ಥಾನಮಾನವನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ನ್ಯಾಯಾಂಗಿಕ ಕ್ಷೇತ್ರ, ಆಡಳಿತ, ಅಭಿವೃದ್ಧಿ ಹಾಗೂ ಇತರೆ ಎಲ್ಲಾ ಕ್ಷೇತ್ರದಲ್ಲೂ ಅಧ್ಯಯನ ಮಾಡಿ ೧೯೭೩-೭೪ರಲ್ಲಿ ಸರ್ಕಾರಕ್ಕೆ ಒಪ್ಪಿಸಿತು. ವರದಿಯಲ್ಲಿ ಮಹಿಳಾ ಸ್ಥಾನಮಾನದ ಬಗ್ಗೆ ಅವರ ಸಬಲೀಕರಣಕ್ಕೆ ಮಾರ್ಗಗಳನ್ನು ತಿಳಿಸಿತ್ತು. ಸರ್ಕಾರ ಮಹಿಳಾ ಅಭಿವೃದ್ಧಿಗೆ ಗಂಭೀರವಾಗಿ ಚಿಂತಿಸಬೇಕು. ಅಭಿವೃದ್ಧಿಪರ ಸಮಾನ ಚಿಂತನೆಗಳನ್ನು ಹುಟ್ಟು ಹಾಕಬೇಕು ಎಂದು ತಿಳಿಸಿಕೊಟ್ಟಿತು. ೧೯೩೯-೪೦ರಲ್ಲಿ ಕಾಂಗ್ರೆಸ್ ಪಕ್ಷವು ಸರ್ಕಾರಕ್ಕೆ ಮಹಿಳಾ ಸ್ಥಾನಮಾನದ ಅಭಿವೃದ್ಧಿಗೆ ಒಂದು ವರದಿಯನ್ನು ನೀಡಿತ್ತು. ಆದರೆ ಅಲ್ಲಿ ಅದನ್ನು ಯಾರೂ ಗಂಭೀರವಾಗಿ ಚಿಂತಿಸಿರಲಿಲ್ಲ. ಆದರೆ ಸಮಾನತೆಯೆಡೆಗೆ ವರದಿಯ ಫಲಶ್ರುತಿಯೇನೋ ೧೯೭೫-೮೦ರಲ್ಲಿ ಮಹಿಳಾ ಅಭಿವೃದ್ಧಿಯಲ್ಲಿ ಕ್ರಾಂತಿಕಾರಿ ಬದಲಾವಣೆ ಆಯಿತು.

೩.೩ ಮಹಿಳಾ ಅಭಿವೃದ್ಧಿ ಮತ್ತು ಸರ್ಕಾರಿ ಮಹಿಳಾ ಯೋಜನೆಗಳು.

ಪಂಚವಾರ್ಷಿಕ ಯೋಜನೆಗಳೆಲ್ಲವು ಅಭಿವೃದ್ಧಿಯ ಮೂಲ ಮಂತ್ರವನ್ನು ಪಠಣ ಮಾಡುತ್ತಿರುವುದು ತಿಳಿದ ಸಂಗತಿ. ಇಲ್ಲಿ ಈ ಯೋಜನೆಗಳು ಮಹಿಳಾ ಅಭಿವೃದ್ಧಿಗೆ ಯಾವ ರೀತಿ ಶ್ರಮಿಸುತ್ತಿವೆ ಎಂಬುದನ್ನು ಅಭ್ಯಸಿಸುವುದು ಅತ್ಯಂತ ಪ್ರಮುಖವಾದುದಾಗಿದೆ. ಯೋಜನೆಯನ್ನು ರೂಪಿಸುವಲ್ಲಿ ಯೋಜನಾಗಾರರು ಯಾವ ಸಿದ್ಧಾಂತಗಳಡಿಯಲ್ಲಿ, ಯಾವ ಸಮಸ್ಯೆಗಳ

ಪರಿಗಣನೆಯಲ್ಲಿ, ಯಾರಿಗೆ ಹೆಚ್ಚು ಒತ್ತು ನೀಡಿದ್ದಾರೆ. ಅದರ ಹಿನ್ನಲೆ ಏನು ಎಂಬುದನ್ನು ಈ ಅಧ್ಯಯನದಲ್ಲಿ ನೋಡಲಾಗುತ್ತದೆ.

ಮೊದಲನೆ ಪಂಚವಾರ್ಷಿಕ ಯೋಜನೆ

ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳಾ ಸಂಬಂಧಿತ ಕಾರ್ಯಕ್ರಮಗಳು ಎಂದಾಗ, ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಶಿಶು ಹಾಗು ತಾಯಂದಿರ ಮರಣದ ಸಂಖ್ಯೆಯನ್ನು ಪರಿಗಣಿಸಿ ೧೯೫೩(CSWB) ಕೇಂದ್ರೀಯ ಸಮಾಜ ಕಲ್ಯಾಣ ಸುಧಾರಣಾ ಮಂಡಳಿ, ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸ್ವಯಂ ಸಂಘ ಸಂಸ್ಥೆಗಳನ್ನು ಗುರುತಿಸಿ, ಅದರ ಮೂಲಕ ಸಮುದಾಯಕ್ಕೆ ಪೌಷ್ಠಿಕ ಆಹಾರ, ತಾಯಿ ಆರೋಗ್ಯ, ಮಗುವಿನ ಆರೋಗ್ಯ, ಆರೈಕೆ, ಗರ್ಭಿಣಿ ಮಹಿಳೆಯರ ಆರೈಕೆ ಬಗೆಗೆ ತರಬೇತಿ ಕಾರ್ಯಕ್ರಮಗಳನ್ನು ಆರಂಭಿಸುವ ಹಿನ್ನೆಲೆಯಲ್ಲಿ ಕೆಲ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಕೇಂದ್ರೀಯ ಸಮಾಜ ಸುಧಾರಣ ಮಂಡಳಿಯು ತಾಯ್ತನ, ಮಕ್ಕಳ ಪಾಲನೆ ಲಾಲನೆ ಬಗ್ಗೆ ಹಲವಾರು ಶಿಬಿರಗಳನ್ನು ಏರ್ಪಡಿಸಿಸತು.

ಮೊದಲನೆ ಪಂಚವಾರ್ಷಿಕ ಯೋಜನೆಯು ೩೩ನೇ ಅದ್ಯಾಯನದಲ್ಲಿ ಮಹಿಳಾ ಶಿಕ್ಷಣದ ಬಗ್ಗೆ ಚರ್ಚೆ ಮಾಡುತ್ತದೆಯಾದರೂ ಕೂಡ ಅಲ್ಲಿ ಕೇವಲ ಬಾಲಿಕೆಯರ ಶಿಕ್ಷಣಕ್ಕೆ ಇರುವ ಅಡೆತಡೆಗಳನ್ನು ಚರ್ಚಿಸಲಾಗಿದೆ. ಆದರೆ ಆ ಅಡೆತಡೆಗಳನ್ನು ಹೋಗಲಾಡಿಸುವ ಯಾವ ಕ್ರಮಗಳನ್ನು ಸೂಚಿಸಲಾಗಿಲ್ಲ ಹಾಗೂ ಕಾರ್ಯಕ್ರಮಗಳನ್ನು ಯೋಜಿಸಲಾಗಿಲ್ಲ.

೧೯೫೪ರಲ್ಲಿ ಕೇಂದ್ರೀಯ ಸಾಮಾಜಿಕ ಸುಧಾರಣ ಮಂಡಳಿ(CSWB)ಯು ಗ್ರಾಮೀಣ ಮಟ್ಟದಲ್ಲಿನ ಸಂಘಟನೆಗಳ ಮೂಲಕ ಸ್ವಸಹಾಯ ಗುಂಪುಗಳನ್ನು ರೂಪಿಸಿ ಅವುಗಳನ್ನು ಸಬಲಗೊಳಿಸುವ ಬಲಿಷ್ಠಗೊಳಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಅದರ ಮೂಲಕ ಮಹಿಳಾ ಗುಂಪುಗಳನ್ನು ರೂಪಿಸಿ ಅದರ ಮೂಲಕ ಅವರಿಗೆ ಜಾಗೃತಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮೂಲಕ ಆರೋಗ್ಯ ಮಾಹಿತಿ ನೀಡುವ ಅಂಶ ಇದಾಗಿತ್ತು. ಇಲ್ಲಿ ಮಹಿಳೆಯರನ್ನು ಸುಧಾರಣಾ ಕಾರ್ಯಕ್ರಮಗಳಲ್ಲಿ ಒಂದಾಗಿ ಪರಿಗಣಿಸಲಾಗಿದೆ. ಹಾಗೂ ಸಂತಾನೋತ್ಪತ್ತಿಯೇ ಮಹಿಳೆಯರಿಗೆ ಪ್ರಮುಖವಾದದ್ದು ಎನ್ನುವ ಮಾದರಿಯಡಿಯಲ್ಲಿ ಅವರನ್ನು ಗುರುತಿಸಿಕೊಳ್ಳಲಾಗಿದೆ. ಅವರ ಜ್ಞಾನ, ಶ್ರಮ, ಅನುಭವವನ್ನು ಪರಿಗಣಿಸಲಾಗದೆ ಎಂಬುದನ್ನು ಇಲ್ಲಿ ಕಾಣಬಹುದು. ಇಲ್ಲಿ ಮಹಿಳೆಯನ್ನು ಖಾಸಗೀವಲಯಕ್ಕೆ ಅವಳನ್ನು ಸೀಮಿತಗೊಳಿಸಲಾಗಿದೆ.

ಎರಡನೇ ಪಂಚವಾರ್ಷಿಕ ಯೋಜನೆ

ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಕೇವಲ ಸಂತಾನೋತ್ಪತ್ತಿಗೆ ಸೀಮಿತಗೊಂಡಿದ್ದ ಮಹಿಳೆಯರನ್ನು ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುವಂತಹ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಆರೋಗ್ಯ-ಶೈಕ್ಷಣಿಕ ಜೊತೆ ಜೊತೆಯಲಿ ಆರ್ಥಿಕ ಕ್ಷೇತ್ರದಲ್ಲಿ ಮಹಿಳೆಯನ್ನು ಅನುಭವಿಯನ್ನಾಗಿಸುವ ಈ ಯೋಜನೆಯು ಅವರಿಗೆ ಸ್ವಸಹಾಯ ಸಂಘಗಳ ಮೂಲಕ ಸ್ವಉದ್ಯೋಗ ತರಬೇತಿಯನ್ನು ನೀಡಲಾಯಿತು. ೧೯೫೭-೫೮ರಲ್ಲಿ ಕೇಂದ್ರೀಯ ಸಾಮಾಜಿಕ ಸುಧಾರಣ ಮಂಡಳಿ ಗ್ರಾಮೀಣ ಮಟ್ಟದಲ್ಲಿನ ಸ್ವಸಹಾಯ (SHG) ಗುಂಪುಗಳನ್ನು ಬಲಗೊಳಿಸುವ ಜೊತೆಯಲ್ಲಿ ಆ ಸಂಘಗಳನ್ನು ಮಹಿಳಾ ಅಭಿವೃದ್ಧಿ ಕೇಂದ್ರಗಳಾಗಿ ಬದಲಾಯಿಸಲಾಯಿತು. ಅಭಿವೃದ್ಧಿ ಕೇಂದ್ರಗಳಲ್ಲಿ ಸರ್ಕಾರದ ಸಹಾಯದಿಂದ ಗ್ರಾಮೀಣ ಮಹಿಳೆಯರಿಗೆ ಡೈರಿ, ಪಶುಸಂಗೋಪನೆ, ಹಂದಿ ಸಾಕಾಣಿಕೆ, ಕಸೂತಿ ಹೊಲಿಗೆಗಳ ಬಗೆಗೆ ತರಬೇತಿ ನೀಡಲಾಯಿತು ಹಾಗೂ ಅವುಗಳನ್ನು ಸ್ವ-ಉದ್ಯೋಗಗಳನ್ನಾಗಿ ಯಾವ ರೀತಿ ರೂಪಿಸಿಕೊಳ್ಳಬೇಕು ಎನ್ನುವ ನಿಟ್ಟಿನಲ್ಲಿ ತರಬೇತಿ ಹಾಗು ಸಹಾಯಕ ಕಾರ್ಯಕ್ರಮಗಳನ್ನು ರೂಪಿಸಿತು. ನಂತರ ಮಹಿಳಾ ಅಭಿವೃದ್ದಿ ಕೇಂದ್ರಗಳ ಮಹಿಳಾ ಉತ್ಪಾದನ ಘಟಕಗಳಾಗಿ ಮಾರ್ಪಾಡುಗೊಂಡವು. ಈ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಂಘಟನಾ ಅಭಿವೃದ್ಧಿ ಕೇಂದ್ರಗಳಲ್ಲಿ ಪ್ರತಿ ಬ್ಲಾಕ್‌ನಲ್ಲಿ ಆರಂಭಗೊಳಿಸಲಾಯಿತು ಹಾಗೂ ಪ್ರತಿ ತಾಲ್ಲೂಕುಗಳಿಗೆ ಇಬ್ಬರು ಗ್ರಾಮ ಸೇವಿಕಾಗಳನ್ನು ನೇಮಿಸಿತು. ಗ್ರಾಮ ಸೇವಿಕಾಗಳ ಮೂಲಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು, ಮಹಿಳೆಯರೆ ಗುಂಪು ರಚನೆ ಮಾಡುವುದು, ಹೆಚ್ಚಿನ ಮಹಿಳೆಯರು ಭಾಗವಹಿಸುವಂತೆ ಮಾಡುವುದು ಇದರ ಮೂಲಕ ಮಹಿಳೆಯರನ್ನು ಕುಟುಂಬದಿಂದ ಹೊರಗಡೆ ಬರುವಂತೆ ಮಾಡುವುದು ಹಾಗೂ ಮಹಿಳಾ ಸಂಘಗಳ ಯಾವುದೇ ಕಾರ್ಯಕ್ರಮಗಳಲ್ಲಿ ಮುಕ್ತವಾಗಿ ಭಾಗವಹಿಸುವಂತೆ ಮಾಡುವುದು ಇಲ್ಲಿನ ಹುನ್ನಾರ.

ಈ ಯೋಜನೆಯಲ್ಲಿ ಮಹಿಳೆಯರ 'ಸಾಮಾಜಿಕ ಶಿಕ್ಷಣಕ್ಕೆ' ಹೆಚ್ಚು ಒತ್ತು ನೀಡಲಾಯಿತು. ಮಹಿಳೆಯರಿಗೆ 'ಸಾಮಾಜಿಕ ಶಿಕ್ಷಣ'ದ ಮೂಲಕ ಸ್ವಸಹಾಯ (SHG) ಗುಂಪುಗಳಲ್ಲಿ ಸಾಮಾನ್ಯ ಜ್ಞಾನವನ್ನು ಹುಟ್ಟುಹಾಕುವುದು ಮುಖ್ಯ ಗುರಿಯಾಗಿತ್ತು. ಮಹಿಳೆಯರಲ್ಲಿ ಮುಖ್ಯವಾಗಿ ಮುಕ್ತ ಸಂವಹನೆಯನ್ನು ವೃದ್ಧಿಸುವುದಾಗಿತ್ತು. ಹಾಗಾಗಿ, 'ಸಾಮಾಜಿಕ ಶಿಕ್ಷಣ ಸಂಸ್ಥೆಗಳನ್ನು' ಆರಂಭಿಸಿದ ನಂತರ ಔಪಚಾರಿಕ ಅನೌಪಚಾರಿಕ ಶಿಕ್ಷಣಗಳ ಮಹತ್ವವನ್ನು ತಿಳಿಸುವುದಾಗಿತ್ತು. ಸ್ವಸಹಾಯ(SHG) ಗುಂಪುಗಳು ಅಭಿವೃದ್ಧಿ ಘಟಕಗಳಲ್ಲದೆ ಸಾಮಾಜಿಕ ಶಿಕ್ಷಣ ಸಂಸ್ಥೆಗಳಾಗಿ ಗುರುತಿಸಿಕೊಂಡವು.

ಎರಡನೇ ಪಂಚವಾರ್ಷಿಕ ಯೋಜನೆಯ ೧೫ನೇ ಅಧ್ಯಾಯದಲ್ಲಿ ಹೆಣ್ಣು ಮಕ್ಕಳ ಪ್ರೌಢ ಶಿಕ್ಷಣದ ಬಗ್ಗೆ ಚರ್ಚಿಸಲಾಗಿದೆ. ಹೆಣ್ಣುಮಕ್ಕಳಿಗೆ ಪ್ರೌಢ ಶಿಕ್ಷಣಕ್ಕೆ ಒತ್ತು ನೀಡುತ್ತ ಮೊದಲಿಯಾರ್

ಕಮಿಷನ್ ಸಲಹೆಗಳನ್ನು ಆಯ್ದುಕೊಳ್ಳಬೇಕು ಎಂದು ಹೇಳುತ್ತಾರೆ. "ಬಾಲಿಕಾ ಶಿಕ್ಷಣ" ಎನ್ನುವ ಶೀರ್ಷಿಕೆಯಲ್ಲಿ ಈ ವಿಷಯವನ್ನು ಚರ್ಚಿಸಲಾಗಿದೆ.

ಮಹಿಳಾ ಕುಟುಂಬ ಯೋಜನೆ ಮತ್ತು ಉತ್ತಮ ಕುಟುಂಬ ನಿರ್ವಹಣೆ, ಮಕ್ಕಳ ಲಾಲನೆ ಪಾಲನೆ, ಸಾಮಾಜಿಕ ಶಿಕ್ಷಣ ಕಾರ್ಯಕ್ರಮ ಮಹಿಳೆಯರನ್ನು ಕೌಟುಂಬಿಕ ಚೌಕಟ್ಟಿನಲ್ಲಿಯೇ ಎಲ್ಲವುಗಳು ಸೀಮಿತಗೊಳಿಸುವಂತಹ ಕಾರ್ಯಕ್ರಮಗಳಾಗಿವೆ. ಈ ಹಿನ್ನಲೆಯಲ್ಲಿಯೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಂಘಟನಾ ಗುಂಪುಗಳನ್ನು ರಚಿಸುವಲ್ಲಿ ಪರಿಣಾಮಕಾರಿಯಾದಂತಹ ವಾತಾವರಣವನ್ನು ಹುಟ್ಟುಹಾಕಿತು.

ಈ ಎಲ್ಲಾ ಕಾರ್ಯಕ್ರಮಗಳ ಆಚೆಗೂ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯರನ್ನು ಕಲ್ಯಾಣವಾದಿ ನೆಲೆಯಲ್ಲಿ ಗುರುತಿಸಿದ್ದು, ಖಾಸಗಿ ನೆಲೆಯಲ್ಲಿಯೇ ಅವರಿಗೆ ವಿಶೇಷ ಅವಕಾಶಗಳನ್ನು ಒದಗಿಸಿದೆ ಎಂದು ಹೇಳಲಾಗಿದೆ.

ಮೂರನೇ ಪಂಚವಾರ್ಷಿಕ ಯೋಜನೆ

ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಆರಂಭದಲ್ಲಿ ಗ್ರಾಮೀಣ ಮಹಿಳಾ ಕೃಷಿಕಾರ್ಮಿಕರ ಅಭಿವೃದ್ಧಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಲಾಯಿತು. ಗ್ರಾಮೀಣ ಮಹಿಳೆಯರಿಗೆ ದಾಸ್ತಾನು ಮಳಿಗೆಗಳಲ್ಲಿ ಆಹಾರ ಸಾಮಾಗ್ರಿಗಳ ನಿರ್ವಹಣೆ ಹಾಗೂ ಆಧುನಿಕ ದಾಸ್ತಾನು ಮಳಿಗೆಗಳ ಬಗೆಗೆ ತರಬೇತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಇಲ್ಲಿ ಕೃಷಿ ಕಾರ್ಮಿಕರಲ್ಲಿ ಮೇಲ್‌ಸ್ಥರದಲ್ಲಿ ರೈತ ಮಾರುಕಟ್ಟೆಯ ಕಾರ್ಯ ನಿರ್ವಹಿಸುತ್ತಿರುವ ಜವಬ್ದಾರಿಯನ್ನು ಹೊತ್ತಿದ್ದರಿಂದ ಸ್ಥಳೀಯ ಕ್ಷೇತ್ರದಲ್ಲಿ ಸಮಯಕ್ಕನುಗುಣವಾಗಿ ಆಹಾರಗಳನ್ನು ಸಂಗ್ರಹಿಸುವಲ್ಲಿ ಮಹಿಳೆಯರು ಸೂಕ್ತ ಎಂದು ಪರಿಗಣಿಸಲಾಯಿತು.

ಪ್ರಮುಖವಾಗಿ ANP ಕಾರ್ಯಕ್ರಮವನ್ನು ಪರಿಚಯಿಸಲಾಯಿತು. ಅಪ್ಲಾಯಿಡ್ ನ್ಯೂಟ್ರಿಷನ್, ಪ್ರೊಗ್ರಾಂ(Applied Nutrition Programme). ತಾಯಿ ಮಗುವಿನ ಆರೋಗ್ಯ, ಕುಟುಂಬಯೋಜನೆ, ಪೌಷ್ಠಿಕಾಂಶಯುಕ್ತ ಆಹಾರ, ಹಾಲುಣಿಸುವಿಕೆಯ ಬಗೆಗೆ ತರಬೇತಿಯನ್ನು ನೀಡಲಾಯಿತು. ೩೪%(ರಾಷ್ಟ್ರದಲ್ಲಿ)ದಷ್ಟು ಸಂಘಟನಾ ಗುಂಪುಗಳನ್ನು ಪರಿಗಣಿಸಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲಾಯಿತು.

ಮೂರನೆ ಪಂಚವಾರ್ಷಿಕ ಯೊಜನೆಯಲ್ಲಿ ೨೯ನೇ ಅಧ್ಯಾಯದಲ್ಲಿ ಮಹಿಳಾ ಶಿಕ್ಷಣದ ಬಗೆಗೆ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಪ್ರಾಥಮಿಕ ಹಂತದಲ್ಲಿ ಮಹಿಳಾ ಶಿಕ್ಷಣ ಎಂಬ ಶೀರ್ಷಿಕೆಯಲ್ಲಿ ಪ್ರಾಥಮಿಕ ಶಿಕ್ಷಣ ಹೆಣ್ಣು ಮಕ್ಕಳಿಗೆ ಎಷ್ಟು ಅವಶ್ಯಕ ಎಂಬುದನ್ನು ಚರ್ಚಿಸಲಾಗಿದೆ.

ಕಾರಣ ಶೈಕ್ಷಣಿಕ ಶಾಲೆಗಳಲ್ಲಿ 'ಹುಡುಗ-ಹುಡುಗಿ'ಯರ ಸಂಖ್ಯೆಯಲ್ಲಿ ಅತ್ಯಧಿಕ ಅಂತರ ಇರುವುದನ್ನು ಇಲ್ಲಿ ಗಂಭೀರವಾಗಿ ಪರಿಗಣಿಸಲಾಯಿತು. ಈ ನಿಟ್ಟಿನಲ್ಲಿಯೇ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಿಕ್ಷಣದಲ್ಲಿ ಹೆಣ್ಣುಮಕ್ಕಳ ಸಂಖ್ಯೆಯನ್ನು ಹೆಚ್ಚಿಸುವಲ್ಲಿ, ಸುಧಾರಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಯಾದಂತಹ ಕ್ರಮಗಳನ್ನು ಕೈಗೊಂಡಿತು. ಅವುಗಳಲ್ಲಿ ಪ್ರಮುಖವಾದವು.

ನಾಲ್ಕನೇ ಪಂಚವಾರ್ಷಿಕ ಯೋಜನೆ

ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ 'ವಿಭಿನ್ನತೆ' ಎಂದರೆ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಯಿತು. ಗ್ರಾಮೀಣ ಮಹಿಳೆಯರಿಗೆ ಕೇಂದ್ರೀಯ ಸರ್ಕಾರದ ನೆರವಿನ ಮೂಲಕ ವಿಶೇಷ ಶಾಲೆಗಳನ್ನು ಆರಂಭಿಸಲಾಯಿತು. ಗ್ರಾಮೀಣ ಪ್ರದೇಶದಲ್ಲಿ 'ಶಿಶುವಿಹಾರ'ಗಳನ್ನು ಆರಂಭಿಸಲಾಯಿತು. ಈ ಕಾರ್ಯಕ್ರಮದ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಶಿಶುವಿಹಾರಗಳಲ್ಲಿ ಗರ್ಭಿಣಿ ಮಹಿಳೆಯರಿಗೆ ಪೌಷ್ಠಿಕಾಂಶದ ಆಹಾರದ ಬಗ್ಗೆ ಮಕ್ಕಳ ಬಗೆಗೆ, ಕೂಲಿಕಾರರಿಗೆ ಆರ್ಥಿಕ ಚಟುವಟಿಕೆಗಳ ಬಗೆಗೆ ತರಬೇತಿ ನೀಡಲಾಯಿತು. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇ.೩೮ರಷ್ಟು ಪ್ರದೇಶದಲ್ಲಿ ಎಎನ್‌ಪಿ ಕಾರ್ಯಕ್ರಮವು ಆಯೋಜಿಸಿದ್ದ ಪ್ರದೇಶಗಳನ್ನು ಒಟ್ಟು ಉಳಿದ ಪ್ರದೇಶದಲ್ಲಿ ಈ ಶಾಖೆಗಳನ್ನು ಆಯೋಜಿಸಲಾಯಿತು.

ವಿಶೇಷ ಭತ್ಯೆ ನಿರ್ಣಯ: ಗ್ರಾಮೀಣ ಪ್ರದೇಶದಲ್ಲಿನ ಮಹಿಳಾ ಮಂಡಳಿಗಳಲ್ಲಿ ನಡೆಯುವ ಆರ್ಥಿಕ ಆರೋಗ್ಯಿಕ ಕಾರ್ಯಕ್ರಮಗಳಲ್ಲಿ ಉತ್ತಮ ಹಾಗೂ ವಿಶೇಷ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿರುವ ಮಂಡಲಿಗಳಿಗೆ ಹಣಕಾಸಿನ ಸಹಾಯ ಮಾಡುವುದರ ಮೂಲಕ ವಿಶೇಷ ಭತ್ಯೆ ನಿರ್ಣಯದ ಯೋಜನೆ ರೂಪಿಸಲಾಯಿತು.

ನಾಲ್ಕನೇ ಪಂಚವಾರ್ಷಿಕ ಸಮಯದಲ್ಲಿಯೇ ಭಾರತ ದೇಶದಲ್ಲಿ ವಿಶ್ವಸಂಸ್ಥೆ ಮಹಿಳಾ ಸ್ಥಿತಿಗತಿ ಹಾಗೂ ಸ್ಥಾನಮಾನವನ್ನು ಅರಿಯಲು ೧೯೭೧ರಲ್ಲಿ ಒಂದು ಕಮಿಟಿಯನ್ನು ರೂಪಿಸಿತು. ಇವರು ಎಲ್ಲ ಕ್ಷೇತ್ರದಲ್ಲಿ ಮಹಿಳಾ ಸ್ಥಾನಮಾನವನ್ನು ಅಧ್ಯಯನ ಮಾಡಬೇಕಾಗಿತ್ತು.

ಐದನೇ ಪಂಚವಾರ್ಷಿಕ ಯೋಜನೆ

ಮಹಿಳಾ ಅಭಿವೃದ್ಧಿಗಾಗಿ ಹೆಚ್ಚಿನ ಹಾಗು ವಿಶೇಷ ಕಾರ್ಯಕ್ರಮಗಳನ್ನು ಈ ಯೋಜನೆಯಡಿಯಲ್ಲಿ ಪರಿಚಯಿಸಲಾಯಿತು. ಮಹಿಳಾ ಶಿಕ್ಷಣ, ಗ್ರಾಮೀಣ ಮಹಿಳಾ ಅಭಿವೃದ್ಧಿ, ಮಹಿಳಾ ಆರ್ಥಿಕ ಚಟುವಟಿಕೆಗಳ ಬಗೆಗೆ ಹೆಚ್ಚು ಒತ್ತು ನೀಡಲಾಯಿತು. ಗರಿಷ್ಟ ಬೇಡಿಕೆಗಳು ಎನ್ನುವ ಶೀರ್ಷಿಕೆಯಲ್ಲಿ ಗ್ರಾಮೀಣ ಮಹಿಳೆಯರಿಗೆ ಪ್ರಾಥಮಿಕ ಶಿಕ್ಷಣವನ್ನು ನೀಡುವ ಮಹಿಳಾ ಆರೋಗ್ಯವನ್ನು ಸುಧಾರಿಸುವ ದಿಶೆಯಲ್ಲಿ ಪ್ರಾಥಮಿಕ ಆರೋಗ್ಯಕೇಂದ್ರಗಳನ್ನು ಸ್ಥಾಪಿಸಲಾಯಿತು

ಹಾಗೂ ಮಹಿಳಾ ಬಡತನವನ್ನು ಗುರುತಿಸಿ ಪೌಷ್ಠಿಕಾಂಶಯುಕ್ತ ಆಹಾರ, ನೀರು, ವಸತಿ ಸೌಕರ್ಯರ್ಕಕ್ಕಾಗಿ ಮನೆಗಳನ್ನು ಒದಗಿಸುವ ನಿಟ್ಟಿನಲ್ಲಿ ಅಭಿವೃದ್ಧಿ ಂಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು.

ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ೮ ಗೃಹ ವಿಜ್ಞಾನ ಕೇಂದ್ರಗಳನ್ನು ತೆರೆಯಲಾಯಿತು. ಅದರ ಮೂಲಕ ಮಹಿಳೆಯರಿಗೆ ಹೆಚ್ಚಿನ ಶೈಕ್ಷಣಿಕ ಅವಕಾಶವನ್ನು ಒದಗಿಸುವುದಾಗಿತ್ತು. ಮಹಿಳಾ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಸಂಶೋಧನಾ ಅಧ್ಯಯನಗಳನ್ನು ಮಾಡಲು ಒತ್ತು ನೀಡಲಾಯಿತು. ಗ್ರಾಮೀಣ ಕುಟುಂಬಗಳಿಗೂ ವಿಸ್ತರಿಸುವ ಶೈಕ್ಷಣಿಕ-ಕಾರ್ಯಕ್ರಮಗಳು ರೂಪಿಸಲಾಯಿತು. ಕೇಂದ್ರೀಯ ಸಮಾಜಿಕ ಸುಧಾರಣಾ(CSWB) ಮಂಡಳಿಯ ೧೯೭೩ರಲ್ಲಿ ಗ್ರಾಮೀಣ ಮಹಿಳೆಯರಿಗೆಂದು ಪಶುಸಂಗೋಪನೆಯನ್ನು ಸರ್ಕಾರದ ಆಡಳಿತದಲ್ಲಿ ಆರಂಭಿಸಲಾಯಿತು. ಮಹಿಳಾ ಉದ್ಯೋಗವಕಾಶವನ್ನು ಹೆಚ್ಚಿಸಲು ಗ್ರಾಮೀಣ ಮಹಿಳಾ ಅಭಿವೃದ್ದಿಯನ್ನು ಧನಾತ್ಮಕವಾಗಿ ವೃದ್ಧಿಸಲು ಈ ಯೋಜನೆ ರೂಪಿಸಲಾಯಿತು. ಬೇಸಿಗೆಯಲ್ಲಿ ತರಬೇತಿ ಶಿಬಿರಗಳನ್ನು ಹಮ್ಮಿಕೊಳ್ಳಲಾಯಿತು. ಇದರ ಮೂಲಕ ಮಹಿಳೆಯರ ಸ್ವ-ಉದ್ಯೋಗದ ಮಹತ್ವ ಅವಕಾಶಗಳ ಬಗೆಗೆ ತಿಳಿಸಿಕೊಡಲಾಯಿತು. ೧೯೭೫-೭೬ರಲ್ಲಿ(KAR) ಕೇಂದ್ರವು ಗ್ರಾಮೀಣ ಹಾಗೂ ನಗರ ಪ್ರದೇಶದ ಮಹಿಳೆಯರಿಗೆ ಸರಳ ತಾಂತ್ರಿಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ನೆಲೆಗಟ್ಟಿನಲ್ಲಿ ಸರ್ಕಾರ ಮಹಿಳಾ ಅಭಿವೃದ್ಧಿಗೆ ವಿಶೇಷ ಪ್ರತಿನಿಧ್ಯವನ್ನು ನೀಡಿತ್ತು.

ಈ ಯೋಜನೆಯಡಿಯಲ್ಲಿ ೧೬ ರಾಜ್ಯಗಳಲ್ಲಿ ೧೮ ಕೃಷಿ ವಿಜ್ಞಾನ ಕೇಂದ್ರಗಳನ್ನು ೭ ತರಬೇತುದಾರರ ತರಬೇತಿ ಕೇಂದ್ರಗಳನ್ನು ಆರಂಭಿಸಿತು. ಇವುಗಳ ಮೂಲಕ ಮಹಿಳೆಯರಿಗೆ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿತು. ವಿಶ್ವವಿದ್ಯಾಲಯ ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಮಹಿಳೆ, ಹೆಣ್ಣು ಮಕ್ಕಳಿಗೆ ಆಧುನಿಕ ಕೃಷಿಯ ಬಗೆಗೆ ಮತ್ತು ಗೃಹವಿಜ್ಞಾನದ ಬಗೆಗೆ, ಅದರ ಉಪಯೋಗ ಹಾಗೂ ಮಹತ್ವದ ಬಗ್ಗೆ ತರಬೇತಿ ನೀಡಲಾಯಿತು. ಹೊಲಿಗೆ, ಕಸೂತಿ, ಜವಳಿ ಕೈಗಾರಿಕೆಗಳ ಬಗೆಗೂ ತರಬೇತಿ ನೀಡಲಾಯಿತು.

ರಾಜ್ಯ ಸಹಯೋಗದೊಂದಿಗೆ ಮಹಿಳೆ ಮತ್ತು ಹೆಣ್ಣು ಮಕ್ಕಳಿಗೆ ಆಧುನಿಕ ಕೃಷಿ ವಿಧಾನದ ಬಗೆಗೆ, ಗೃಹ ವಿಜ್ಞಾನದ ಮಹತ್ವ ಹಾಗೂ ಉಪಯೋಗ, ಹೊಲಿಗೆ ಕಸೂತಿ, ಕೈಗಾರಿಕೆಗಳ ಬಗೆಗೆ ತರಬೇತಿ ನೀಡುವ ಕಾರ್ಯಕ್ರಮವನ್ನು ರೂಪಿಸಲಾಯಿತು.

೧೯೭೫ರಲ್ಲಿ 'ಅಂತರಾಷ್ಟ್ರೀಯ ಮಹಿಳಾ ದಶಕದ' ಅಂಗವಾಗಿ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಚಯಿಸಿತು. ಅವುಗಳನ್ನು ಸರ್ಕಾರಿ ಯೋಜನೆಗಳ ಮೂಲಕವೇ

ಯಶಸ್ವಿಗೊಳಿಸಿತು. ಮಹಿಳಾ ಸುಧಾರಣೆ ಹಾಗೂ ಅಭಿವೃದ್ಧಿಗೆ ಸುಧಾರಣಾ ಕೇಂದ್ರದ ಸಹಯೋಗದೊಂದಿಗೆ ಒಂದು ಹೊಸ ವಿಭಾಗವನ್ನು ಆರಂಭಗೊಳಿಸಲಾಯಿತು. ಹಾಗೂ ಮಹಿಳಾ ಕಾರ್ಯಕ್ರಮಗಳನ್ನು ಅಭಿವೃದ್ಧಿ ನೆಲೆಯಲ್ಲಿ ಸಂಚರಚಿಸುವ ಹೊಸ ಹೆಜ್ಜೆಯನ್ನು ಪರಿಚಯಿಸಿತು. ಇದೇ ಸಂದರ್ಭದಲ್ಲಿ ಉದ್ಯೋಗ ಹಾಗೂ ಕಾರ್ಮಿಕ ಇಲಾಖೆಯ ವಿಶೇಷ ವಿಭಾಗಗಳನ್ನು ಹುಟ್ಟು ಹಾಕಿತು. ಅಲ್ಲಿ ಮಹಿಳಾ ಉದ್ಯೋಗದ ಅವಶ್ಯಕತೆ ಹಾಗೂ ತೊಂದರೆ, ಅಡೆತಡೆಗಳನ್ನು ಗುರುತಿಸಿ ಪರಿಹರಿಸುವಲ್ಲಿ ಪ್ರಾರಂಭಿಸಲಾಯಿತು. ಇದರಿಂದ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ಗುರುತಿಸಲು ಸಾಧ್ಯವಾಯಿತು. ಇದರ ಪರಿಣಾಮವಾಗಿ ೧೯೭೬ರಲ್ಲಿ ಸಮಾನ ಭತ್ಯೆ ಕಾಯ್ದೆಯನ್ನು (The Equal Remuniration) ಜಾರಿಗೊಳಿಸಲಾಯಿತು. ಇದರಿಂದ ಹೆಣ್ಣು ಹಾಗೂ ಗಂಡಿನ ನಡುವಿನ ಭತ್ಯ ತಾರತಮ್ಯವನ್ನು ಹೋಗಲಾಡಿಸುವ ಪ್ರಮುಖ ಅಸ್ತ್ರವನ್ನಾಗಿ ಬಳಸಲಾಯಿತು. ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಬಲಗೊಳಿಸುವ ಕಾರ್ಯ ಆರಂಭವಾಯಿತು. ಹಾಗೆಯೇ ೧೯೭೭ರಲ್ಲಿ Planning Council ಕೃಷಿ ಮಹಿಳಾ ಗುಂಪುಗಳನ್ನು ಸಂಘಟಿಸುವ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಗ್ರಾಮೀಣ ಅಭಿವೃದ್ಧಿ ಇಲಾಖೆ ಹಾಗೂ ಕೃಷಿ ಇಲಾಖೆಯ ಸಹಯೋಗದಿಂದ ಕೃಷಿ ಮಹಿಳೆಯರ ಗುಂಪುಗಳನ್ನು ಗ್ರಾಮೀಣ ಮಟ್ಟದ ಸಂಘಸಂಸ್ಥೆಗಳಿಗೆ ಬೆಳೆಸಿ ವಿಲೀನಗೊಳಿಸುವ ನೆಲೆಗಳಲ್ಲಿ ಕಾರ್ಯಕ್ರಮಗಳನ್ನು ಆರಂಭಿಸಲಾಯಿತು. ಇಲ್ಲಿ ಗಮನಾರ್ಹ ಅಂಶವೆಂದರೆ ಮಹಿಳಾ ಕಾರ್ಯಕ್ರಮಗಳನ್ನು ಆರಂಭಿಸಲಾಯಿತು. ಇಲ್ಲಿ ಗಮನಾರ್ಹ ಅಂಶವೆಂದರೆ ಮಹಿಳಾ ಕಾರ್ಯಕ್ರಮಗಳು ಅಲ್ಪ ಮಟ್ಟದಲ್ಲಿ ಕಲ್ಯಾಣದಿಂದ 'ಅಭಿವೃದ್ಧಿ' ನೆಲೆಯಲ್ಲಿ ಪರಿವರ್ತಿಸಲಾಯಿತು. ಈ ಯೋಜನೆಯಲ್ಲಿ ಮಹಿಳಾ ಶಿಕ್ಷಣಕ್ಕೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಲ್ಲಿ ವಿಶೇಷ ಯೋಜನೆಗಳನ್ನು ಆಯೋಜಿಸಿದ್ದವು. ಬಾಲಕಿಯರಿಗೆ ವಿಶೇಷ ಶಿಕ್ಷಣ ಸವಲತ್ತುಗಳನ್ನು ಮಹಿಳೆಯರಿಗೂ ವಿಸ್ತರಿಸಲಾಯಿತು. ವಿದ್ಯಾರ್ಥಿನಿಯರಿಗೆ ವಸತಿ ಶಾಲೆಗಳನ್ನು ತೆರೆಯುವ ಕಾರ್ಯಕ್ರಮವನ್ನು ತೀರ್ಮಾನಿಸಲಾಯಿತು. ಶೈಕ್ಷಣಿಕ ಕ್ಷೇತ್ರದಲ್ಲೂ ಅದರಲ್ಲೂ ಔಪಚಾರಿಕ ಶಿಕ್ಷಣದಲ್ಲಿ ಮಹಿಳಾ ಶಿಕ್ಷಣವನ್ನು ಹೆಚ್ಚಿಸಲು ವಿಶೇಷ ಮಹಿಳಾ ವಿಭಾಗವನ್ನು ತೆರೆಯಲು ನಿರ್ಧರಿಸಿತು. ಇವೆಲ್ಲವೂ ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳಾ ಶಿಕ್ಷಣ ಮಾಡಿದ ಕಾರ್ಯಕ್ರಮಗಳು. ಇದೇ ಸಂದರ್ಭದಲ್ಲಿಯೇ ಭಾರತ ದೇಶದಲ್ಲಿ ಸಮಾನತೆಯೆಡೆಗೆ ವರದಿಯನ್ನು ಮಾಡುವ ಒಂದು ಸಮಿತಿಯನ್ನು ರಚಿಸಿಲಾಗಿತ್ತು. ಇದರ ಮೂಲಕ ಭಾರತದಲ್ಲಿ ಎಲ್ಲ ಕ್ಷೇತ್ರದಲ್ಲಿ ಮಹಿಳಾ ಸ್ಥಾನಮಾನವನ್ನು ತಿಳಿಯಲು ಅಧ್ಯಯನ ಸಮಿತಿ ರಚಿಸಿತು. ಆ ಕಮಿಟಿಯು ಸರ್ಕಾರಕ್ಕೆ ೭೫-೭೬ ರಲ್ಲಿ ವರದಿ ಒಪ್ಪಿಸಿತು. ಮಹಿಳಾ ಸ್ಥಾನ-ಮಾನ ಹಾಗೂ ಸುಧಾರಣೆಗೆ ಮಹಿಳಾ ಅಭಿವೃದ್ಧಿಗೆ ಮಹತ್ವದ ಬದಲಾವಣೆ ತರುವಲ್ಲಿ ಕಾರಣವಾಯಿತು.

ಆರನೇ ಪಂಚವಾರ್ಷಿಕ ಯೋಜನೆ

೬ನೇ ಪಂಚವಾರ್ಷಿಕ ಯೋಜನೆಯು ಸಮನ್ಯಾಯ ಸಿದ್ಧಾಂತಕ್ಕೆ ಒತ್ತು ಕೊಟ್ಟಿದೆ. ಅಂದರೆ ಸ್ತ್ರೀ–ಪುರುಷ, ವರ್ಗಗಳೆಂಬ ಭೇದ–ಭಾವವಿಲ್ಲದೇ, ತಾರತಮ್ಯ ರಹಿತವಾಗಿ ಎಲ್ಲರಿಗೂ, ಸಮನ್ಯಾಯ ಸಿಗಬೇಕೆಂಬ ಉದ್ದೇಶ ಹೊಂದಿದೆ. ಈ ಯೋಜನೆಯೂ ಸಹ ಎಲ್ಲರಿಗೂ ಸಮಾನವಾಗಿ ಅವಕಾಶವನ್ನು ಒದಗಿಸುವುದರ ಮೂಲಕ ಎಲ್ಲರೂ ಯೋಜನೆಗಳ ಫಲವನ್ನು ಅನುಭವಿಸಬೇಕು ಎಂಬ ಕಾರಣದಿಂದ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ 'ಸಮನ್ಯಾಯ' ಸಿದ್ಧಾಂತವನ್ನು ಅಳವಡಿಸಿಕೊಳ್ಳಲಾಗಿದೆ.

ಈ ಯೋಜನೆಯಲ್ಲಿಯೂ ಸಹ ಮಹಿಳೆಯರ ಆರೋಗ್ಯವನ್ನು ಪ್ರಮುಕವಾಗಿ ಪರಿಗಣಿಸಲಾಯಿತು. 'ಸಂಯೋಜಿತ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ'(Integrated child development Scheme) ಕಾರ್ಯಕ್ರಮದ ಮೂಲಕ ಗರ್ಭಿಣಿ ಮಹಿಳೆಯರಿಗೆ ಕಬ್ಬಿಣಾಂಶ ಹಾಗೂ ಪೌಷ್ಠಿಕಾಂಶ ಮಾತ್ರೆಗಳನ್ನು ಉಚಿತವಾಗಿ ಕೊಡಲಾಯಿತು. ಗರ್ಭಿಣಿ ಮಹಿಳೆಯರ ಆರೋಗ್ಯಕ್ಕೆ ಹೆಚ್ಚು ಒತ್ತು ನೀಡಲಾಯಿತು. ಭಾರತೀಯ ಆಕಾಶವಾಣಿ ಸಹಯೋಗ ಹಾಗೂ ಸರ್ಕಾರವು UNICEF ರವರ ಸಲಹೆಯ ಹಾಗೂ ಸಂಘಟನೆಯ ನೆಲೆಯಲ್ಲಿ ಮಕ್ಕಳ ಹಾಗೂ ಗರ್ಭಿಣಿ ಮಹಿಳೆಯರಿಗೆ ಕಾರ್ಯಗಾರವನ್ನು ಏರ್ಪಡಿಸಿತು. ಗೀತೆಗಳು ಹಾಗೂ ನಾಟಕಗಳ ಮೂಲಕ ಹೆರಿಗೆ, ಮಕ್ಕಳ ಲಾಲನೆಬಗ್ಗೆಶಿಕ್ಷನ ನೀಡುವ ಸೇವಾ ಸೌಲಭ್ಯಗಳನ್ನು ವಿವರಿಸುವ ಕಾರ್ಯಕ್ರಮಗಳನ್ನು ಆರಂಭಿಸಲಾಯಿತು. ಹಾಗೆಯೇ ಭಾರತೀಯ ದೂರದರ್ಶನ ಸಂಸ್ಥೆಯ ಈ ನೆಲೆಯಲ್ಲಿಯೇ ಚಲನಚಿತ್ರ ಮತ್ತು ಇತರೆ ಕಾರ್ಯಕ್ರಮಗಳನ್ನು ರೂಪಿಸಿ ಅವರ ಸಮಸ್ಯೆ ಮತ್ತು ಅಭಿವೃದ್ಧಿ ವಾಹಕಗಳನ್ನು ಸಮುದಾಯಕ್ಕೆ ತಿಳಿಸುವಂತೆ ಈ ಕಾರ್ಯಕ್ರಮಗಳನ್ನು ರೂಪಿಸಿ ಅವರ ಸಮಸ್ಯೆ ಮತ್ತು ಅಭಿವೃದ್ಧಿ ವಾಹಕಗಳನ್ನು ಸಮುದಾಯಕ್ಕೆ ತಿಳಿಸುವಂತೆ ಈ ಕಾರ್ಯಕ್ರಮಗಳನ್ನು ರೂಪಿಸಿಲಾಯಿತು. ಇದರಿಂದ ಬಹುವೇಗವಾಗಿ ಆರೋಗ್ಯದ ಬಗ್ಗೆ ಜಾಗೃತಿ ಮಾಹಿತಿಗಳು ಸಮುದಾಯಕ್ಕೆ ತಲುಪಲು ಸಾಧ್ಯವಾಯಿತು. ಇದರಿಂದಾಗಿ ಗರ್ಭಿಣಿ ಮತ್ತು ಮಕ್ಕಳ ಸಾವಿನ ಪ್ರಮಾಣ ಕುಂಠಿತವಾಯಿತು.

ಈ ಯೋಜನೆಯು ಮಹಿಳಾ ಅಭಿವೃದ್ಧಿಯ ಇತಿಹಾಸದಲ್ಲಿ ಒಂದು ಪ್ರಮುಖ ಮೈಲಿಗಲ್ಲು ಎಂದೂ ಹೇಳಬಹುದು ಏಕೆಂದರೆ ಈ ಅಭಿವೃದ್ಧಿ ಯೋಜನೆಯಲ್ಲಿ ಪ್ರಪ್ರಥಮವಾಗಿ 'ಮಹಿಳಾ ಅಭಿವೃದ್ಧಿ' ಎಂಬ ಪ್ರತ್ಯೇಕ ಅಧ್ಯಾಯವನ್ನು ಸೇರಿಸಲಾಯಿತು. ಮಹಿಳಾ ಅಭಿವೃದ್ಧಿಯನ್ನು ಮುಖ್ಯವಾಹಿನಿ ಅಭಿವೃದ್ಧಿಯ ಪ್ರಮುಖ ಕ್ಷೇತ್ರವನ್ನಾಗಿ ಗುರುತಿಸಲಾಯಿತು. ಈ ಯೋಜನೆಯಡಿಯಲ್ಲಿ ಮಹಿಳೆಯರಿಗೆ ವಿಶೇಷವಾಗಿ ಆರೋಗ್ಯ, ಶಿಕ್ಷಣ ಮತ್ತು ಉದ್ಯೋಗಕ್ಕೆ ಪ್ರಾಮುಖ್ಯತೆ ನೀಡಲಾಗಿತ್ತು.

ವಿಶೇಷವಾಗಿ ಮಹಿಳಾ ಕಾರ್ಯಕ್ರಮಗಳಿಗೆ ಆದ್ಯತೆ ನೀಡಿ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಯೋಜನೆಯ ಬಹುಮುಖ್ಯ ಕಾರ್ಯಕ್ರಮವೆಂದರೆ ಗ್ರಾಮೀಣ ಮಹಿಳೆ ಮತ್ತು ಮಕ್ಕಳಿಗಾಗಿ ೧೯೮೨ರಲ್ಲಿ 'ಗ್ರಾಮೀಣ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ(DWACR)'ನ್ನು ಜಾರಿಗೊಳಿಸಲಾಯಿತು.

ಗ್ರಾಮೀಣ ವಲಯದ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ(Development of women and children in Rural Areas) ಅಡಿ ಗ್ರಾಮೀಣ ಪ್ರದೇಶದ ಮಹಿಳೆ ಮತ್ತು ಮಕ್ಕಳ ಬಗ್ಗೆ ಅಪಾರ ಕಾಳಜಿಯನ್ನು ವಹಿಸಲಾಯಿತು. ಈ ಯೋಜನೆಯು ೬ನೇ ಪಂಚವಾರ್ಷಿಕ ಯೋಜನೆಯ ಬಹುದೊಡ್ಡ ಸಾಧನೆ ಎಂದೇ ಹೇಳಬಹುದು. ಈ ೬ನೇ ಪಂಚವಾರ್ಷಿಕ ಯೋಜನೆಯಡಿ ಗ್ರಾಮೀಣ ಜನತೆಗೆ ಹಲವಾರು ಕೊಡುಗೆಗಳನ್ನು ನೀಡಲಾಗಿದೆ. ಅವುಗಳೆಂದರೆ–

* ಗ್ರಾಮೀಣ ಮಹಿಳೆಯರಿಗೆ ಉದ್ಯೋಗವನ್ನು ಒದಗಿಸುವ ಸಲುವಾಗಿ ತರಬೇತಿ ಕೇಂದ್ರಗಳನ್ನು ಬೆಂಗಳೂರು, ಮುಂಬೈ ಮತ್ತು ತಿರುವನಂತಪುರಗಳಲ್ಲಿ ತೆರೆಯಲಾಯಿತು. ಅಲ್ಲದೇ ರಾಷ್ಟ್ರೀಯ ಮಟ್ಟದ ತರಬೇತಿ ಕೇಂದ್ರವನನು ದೆಹಲಿಯಲ್ಲಿ ಸ್ಥಾಪಿಸಲಾಯಿತು.ಇಲ್ಲಿ ೬೦೦ ಮಹಿಳಾ ತರಬೇತುದಾರರನ್ನು ನೇಮಿಸಲಾಯಿತು.

* ಮೇಲ್ಕಂಡ ಸಂಸ್ಥೆಗಳ ಒಟ್ಟು ೧೪೪ ತರಬೇತಿ ಕೇಂದ್ರಗಳು ೬ನೇ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ ಎಲ್ಲಾ ರಾಜ್ಯಗಳಲ್ಲಿ ಮಹಿಳೆಯರನ್ನು ಸಕ್ರಿಯವಾಗಿ ಉದ್ಯೋಗದಲ್ಲಿ ತೊಡಗಿಸಿಕೊಂಡಿತ್ತಲ್ಲದೆ ವಾರ್ಷಿಕ ೧೧,೨೦೦ ಮಹಿಳೆಯರಿಗೆ ತರಬೇತಿ ನೀಡಲಾಗುತ್ತಿತ್ತು.

* ಸಂಯೋಜಿತ ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ ಮಹಿಳೆಯರಿಗೆ ವಿಶೇಷ ಪ್ರಾಮುಖ್ಯತೆ ನೀಡುವಂತೆ ಜಾರಿಗೊಳಿಸಲಾಯಿತು.

* ಗ್ರಾಮೀಣ ಯುವತಿ/ಯುವಕರ ಸ್ವ ಉದ್ಯೋಗ ತರಬೇತಿ ಕಾರ್ಯಕ್ರಮದ ಅಡಿಯಲ್ಲಿ ಶೇ.೧/೩ ಭಾಗ ಫಲಾನುಭವಿಗಳು ಮಹಿಳೆಯರೇ ಆಗಬೇಕೆಂದು ತೀರ್ಮಾನಿಸಲಾಯಿತು.

* ೧೯೮೨–೮೩ ರಲ್ಲಿ ವನ್ನು ದೇಶದ ೫೦ ಬ್ಲಾಕ್‌ಗಳನ್ನು ಜಾರಿಗೆ ತರಲಾಯಿತು. ಇದು ವಿಶೇಷವಾಗಿ ಮಹಿಳೆ ಮತ್ತು ಮಕ್ಕಳನ್ನು ಗಮನದಲ್ಲಿರಿಸಿಕೊಂಡು ಯೋಜಿಸಲಾದ ಕಾರ್ಯಕ್ರಮವಾಗಿದೆ.

* ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಯಿತು. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಮಕ್ಕಳು ಹೋಗುವಂತೆ ಆರ್ಥಿಕ ಸಹಾಯವನ್ನು ನೀಡಲಾಯಿತಲ್ಲದೆ ಶೈಕ್ಷಣಿಕವಾಗಿ ಹಿಂದುಳಿದ ರಾಜ್ಯಗಳಿಗೆ ಹಣ ಸಹಾಯ ನೀಡಿತಲ್ಲದೇ ಹೆಣ್ಣು, ಮಕ್ಕಳಿಗಾಗಿ ಅನೌಪಚಾರಿಕ ಶಿಕ್ಷಣವನ್ನು ಜಾರಿಗೆ ತರಲಾಯಿತು.

* ಮೊದಲ ಬಾರಿಗೆ ಪ್ರಾಥಮಿಕ ಶಿಕ್ಷಣದಲ್ಲಿ ಹೆಚ್ಚಿನ ಸಂಖ್ಯೆಯ ಮಕ್ಕಳನ್ನು ಆಕರ್ಷಿಸಲು ೩–೬ ವರ್ಷ ವಯಸ್ಸಿನೊಳಗಿನ ಮಕ್ಕಳಿಗಾಗಿ ಬಾಲ್ಯ ಶಿಕ್ಷಣ ಯೋಜನೆಯನ್ನು ಆರಂಭಿಸಲಾಯಿತು.

* ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗುಂಪಿಗೆ ಸೇರಿದ ಹೆಣ್ಣು ಮಕ್ಕಳಿಗೆ ವಿದ್ಯಾರ್ಥಿ ವೇತನದ ಜೊತೆಗೆ ಉಚಿತ ಬಟ್ಟೆ, ಶಿಕ್ಷಣ ಮತ್ತಿತರ ಸೌಲಭ್ಯಗಳನ್ನು ನೀಡಲಾಯಿತು.

* ಮಹಿಳೆಯರಿಗಾಗಿ ಪ್ರತ್ಯೇಕವಾಗಿ ಸ್ತ್ರೀ ಶಿಕ್ಷಣ ಕೇಂದ್ರಗಳಲ್ಲಿ ಆರೋಗ್ಯ, ಪೋಷಕಾಂಶ, ಮಕ್ಕಳಪಾಲನೆ, ಕುಟುಂಬ ನಿಯಂತ್ರಣಗಳಂತಹ ವಿಷಯಗಳನ್ನು ಭೋಧಿಸುವಂತಹ ಯೋಜನೆಯನ್ನು ಜಾರಿಗೊಳಿಸಲಾಯಿತು.

* ತಂತ್ರಜ್ಞಾನದ ಬಗೆಗೆ ತರಬೇತಿ ನೀಡಲಾಯಿತು.

* ಯುಜಿಸಿ ಮೂಲಕ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಉತ್ತೇಜಿಸಲಾಯಿತು.

* ಗರ್ಭಿಣಿ ಸ್ತ್ರೀಯರು ಮತ್ತು ತಾಯಂದಿರಿಗೆ ವಿಶೇಷ ಪ್ರಾಶಸ್ತ್ಯ ನೀಡಲಾಯಿತು. ICDS ದ ಮೂಲಕ ಅವರಿಗೆ ಪೋಷಕಾಂಶ ಭರಿತ ಆಹಾರ ಮತ್ತು ಚುಚ್ಚು ಮದ್ದುಗಳನ್ನು ಹಾಕಲಾಯಿತು. ಅನೀಮಿಯಾ ಮತ್ತು ನ್ಯೂನ ಪೋಷಣೆಯನ್ನು ತಡೆಗಟ್ಟಲು ಪೋಲಿರ್ಕ ಆ್ಯಸಿರ್ಡ ಮಾತ್ರೆಗಳನ್ನು ನೀಡಲಾಯಿತು.

* ಹೆಣ್ಣು ಶಿಶು ಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಯಿತು.

ಏಳನೇ ಪಂಚವಾರ್ಷಿಕ ಯೋಜನೆ

೭ನೇ ಪಂಚವಾರ್ಷಿಕ ಯೋಜನೆಯೂ ಸಹ ಎಂದಿನಂತೆ ಮಹಿಳೆಯರ ಆರೋಗ್ಯ, ಉದ್ಯೋಗಕ್ಕೆ ಪ್ರಾಮುಖ್ಯತೆ ನೀಡಲಾಯಿತು. 'DWACRA' ಯೋಜನೆಯ ಮೂಲಕ ಗ್ರಾಮೀಣ ಮಹಿಳೆ ಮತ್ತು ಮಕ್ಕಳ ಬಗ್ಗೆ ಕಾಳಜಿ ವಹಿಸಲಾಯಿತು. 'ಗ್ರಾಮೀಣ ಯುವತಿ/ಯುವಕರ ಸ್ವ ಉದ್ಯೋಗ ಕಾರ್ಯಕ್ರಮ' ಮೂಲಕ ಗ್ರಾಮೀಣ ಯುವಜನತೆ ಸ್ವಯಂ ಉದ್ಯೋಗಕ್ಕಾಗಿ ತರಬೇತಿ ನೀಡಲಾಯಿತು. ಈ ಮೂಲಕ ೬ನೇ ಪಂಚವಾರ್ಷಿಕ ಯೋಜನೆಯನ್ನು 'ಮಹಿಳಾ ಅಭಿವೃದ್ಧಿ' ಯೋಜನೆಯೆಂದೇ ಕರೆಯಲಾಯಿತು. ಆದರೆ ಹೆಸರಿಗೆ ತಕ್ಕಂತೆ ಮಹಿಳಾ ಅಭಿವೃದ್ಧಿ ಮಾತ್ರ ಆಗಲಿಲ್ಲ. 'DWACRA' ಯೋಜನೆಗಾಗಿ ಸರ್ಕಾರ ಮಹಿಳೆ ಮತ್ತು ಮಕ್ಕಳ ಬಗ್ಗೆ ಕಾಳಜಿವಹಿಸಿ ಬಿಡುಗಡೆಗೊಳಿಸಿದ ಹಣವು ಅಧಿಕಾರಿಗಳಿಂದ ದುರುಪಯೋಗಗೊಂಡಿತಲ್ಲದೇ ಮಹಿಳೆ ಮತ್ತು ಮಕ್ಕಳಿಗೆ ಯಾವುದೇ ರೀತಿಯ ಲಾಭಾಂಶಗಳು ದಕ್ಕಲಿಲ್ಲ. ಅಂತೆಯೇ 'ಗ್ರಾಮೀಣ ಯುವತಿ/ ಯುವಕರ ಸ್ವ ಉದ್ಯೋಗ ಕಾರ್ಯಕ್ರಮ'ನಲ್ಲಿ ಗ್ರಾಮೀಣ ಯುವ ಜನತೆಗೆ ಸ್ವಯಂ ಉದ್ಯೋಗ

ತರಬೇತಿ ನೀಡುವಾಗ ಮಹಿಳೆಯರನ್ನು ಕೈ ಬಿಟ್ಟ ಕೇವಲ ಯುವಕರನ್ನೇ ಗಣನೆಗೆ ತೆಗೆದುಕೊಂಡಿದ್ದರಿಂದಾಗಿ ಯುವತಿಯರಿಗೆ ಯಾವುದೇ ರೀತಿಯ ಪ್ರಯೋಜನವಾಗಿರಲಿಲ್ಲ. ಯುವಕ ಯುವತಿಯರಿಗೆ ತರಬೇತಿ ನೀಡಲಾಯಿತೇ ಹೊರತು ಸ್ವಯಂ ಉದ್ಯೋಗಕ್ಕೆ ಬೇಕಾದ ಬಂಡವಾಳ, ಕಚ್ಚಾವಸ್ತು, ಸ್ಥಳಾವಕಾಶಗಳ ಸೌಲಭ್ಯವನ್ನು ಸರ್ಕಾರ ಒದಗಿಸಲು ಮರೆತು ಬಿಟ್ಟಿದ್ದರಿಂದ ಈ ಯೋಜನೆಯು ಯಶಸ್ವಿಯಾಗಲಿಲ್ಲ. ಹೀಗೆ 'ಮಹಿಳಾ ಅಭಿವೃದ್ಧಿ' ಎಂದು ಜಾರಿಗೊಂಡ ೬ನೇ ಪಂಚವಾರ್ಷಿಕ ಯೋಜನೆಯು ಮಹಿಳೆಯರ ಅಭಿವೃದ್ಧಿಯನ್ನು ಸಾಧಿಸಲೇ ಇಲ್ಲ.

ಈ ಯೋಜನೆಯಲ್ಲಿ ಹಲವಾರು ತರಬೇತಿಗಳನ್ನು ಕೇಂದ್ರಗಳನ್ನು ಪ್ರಾರಂಭಿಸಲಾಯಿತು. ಎಷ್ಟು ಯುವತಿಯರಿಗೆ ಮನೆಯಿಂದ ಹೊರಗಡೆ ಕಳುಹಿಸದ ತಂದೆ ತಾಯಿಗಳು ತಮ್ಮ ಹೆಣ್ಣು ಮಕ್ಕಳನ್ನು ದೂರದ ತರಬೇತಿ ಕೇಂದ್ರಗಳಿಗೆ ಕಳುಹಿಸಿದ ಪರಿಸ್ಥಿತಿ ನಮಗೆ ತಿಳಿದೆ ಇದೆ. ಇದೇ ಸಮಸ್ಯೆ ಮಹಿಳೆಯರದ್ದೂ ಆಗಿದೆ. ಈ ನಿಟ್ಟಿನಲ್ಲಿ ನೋಡಿದರೆ 'ಅಭಿವೃದ್ಧಿ' ವ್ಯವಸ್ಥೆಯಲ್ಲಿ ಸಮನ್ಯಾಯ ನೆಲೆಯಲ್ಲಿ ರೂಪಿತವಾದರೂ ಕೂಡ ಮಹಿಳೆಯರಿಗೆ ಕಾರ್ಯಗೊಳಿಸುವಲ್ಲಿ ಯಶಸ್ವಿಯಾಗುವುದು ಭಾಗಶಃ ತೊಂದರೆ ಆಗಿದೆ.

ಕೊನೆಯದಾಗಿ ಪಂಚವಾರ್ಷಿಕ ಯೋಜನೆಯಲ್ಲಿ ೬ನೇ ಪಂಚವಾರ್ಷಿಕ ಯೋಜನೆ ಮಹಿಳಾ ಅಭಿವೃದ್ಧಿಗೆ ಒಂದು ಮೈಲಿಗಲ್ಲು ಎಂದು ಗುರುತಿಸಿಕೊಂಡರೂ ಸಹ ಕಾರ್ಯಕ್ರಮಗಳ ವಿಧಾನದಲ್ಲಿ ಹಾಗೂ ಕಾರ್ಯಕ್ರಮಗಳ ಸಮನ್ವಯಗೊಳಿಸುವ ವಿಧಾನದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂಬುದು ಸ್ಪಷ್ಟವಾಗಿದೆ.

೭ನೇ ಪಂಚವಾರ್ಷಿಕ ಯೋಜನೆಯಲ್ಲಿಯೂ ಸಹ ಮಹಿಳೆಯರಿಗಾಗಿ ಉದ್ಯೋಗ, ಆರೋಗ್ಯ, ಶಿಕ್ಷಣ, ಪೋಷಕಾಂಶ, ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಸಂಬಂಧಿಸಿದಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಅಲ್ಲದೇ ಆದಾಯದ ಮೂಲ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲಾಯಿತು. ಮತ್ತು ಸಮಾಜೋ-ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಲಾಯಿತು. ವರದಕ್ಷಿಣೆ ನಿಶೇಧ ಕಾನೂನನ್ನು ಮತ್ತಷ್ಟು ಕಠಿಣವಾಗಿ ಜಾರಿಗೊಳಿಸಲಾಯಿತು. ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರ ಮೇಲಿನ ಅಧಿಕ ಕೆಲಸದ ಒತ್ತಡವನ್ನು ನಿವಾರಿಸುವುದಾಗಿದೆ.

ಗ್ರಾಮೀಣ ನೈರ್ಮಲ್ಯ ಯೋಜನೆ: ೧೯೮೬ರಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಯಿತು. ಗ್ರಾಮೀಣ ಪ್ರದೇಶದಲ್ಲಿ ಮಹಿಳಯರಿಗಾಗಿ, ಅವರ ಶುಭ್ರತೆಯ ದೃಷ್ಟಿಯಿಂದ ಪ್ರತಿ ಮನೆಗೆ ಒಂದು ಶೌಚಾಲಯವನ್ನು ನಿರ್ಮಿಸಿಕೊಡಲು ಯೋಜನೆಯನ್ನು ರೂಪಿಸಲಾಗಿತ್ತು.

ಜವಾಹರ್ ರೋಜ್‌ಗಾರ್ ಯೋಜನೆ: ಗ್ರಾಮೀಣ ಕೂಲಿ ಕೆಲಸ ಕಾರ್ಯಕ್ರಮಗಳು ೧೯೮೯ರಲ್ಲಿ ಜವಾಹರ್ ರೋಜ್‌ಗಾರ್ ಯೋಜನೆಯೊಡನೆ ವಿಲೀನಗೊಂಡವು. ಇದರ ಪ್ರಕಾರ ಗ್ರಾಮೀಣ ಜನತೆಗೆ ಮತ್ತು ಗ್ರಾಮೀಣ ಕಸುಬುಗಳಿಗೆ ನೇರವಾಗಿ ಲಾಭ ತರುವಂತಹ ಉದ್ಯೋಗಾವಕಾಶಗಳನ್ನು ನೀಡಲಾಯಿತು. ಈ ಯೋಜನೆಯಡಿಯಲ್ಲಿ ಮಹಿಳೆಯರಿಗಾಗಿ ಶೇ.೮೦ರಷ್ಟು ಉದ್ಯೋಗವಕಾಶಗಳನ್ನು ಮೀಸಲಿಡಲಾಯಿತು.

ನೆಹರು ರೋಜ್‌ಗಾರ್ ಯೋಜನೆ: ೧೯೮೯ರಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಯಿತು. ನಗರ ಪ್ರದೇಶದಲ್ಲಿ ಬಡತನ ರೇಖೆಗಿಂತ ಕಡಿಮೆ ಇರುವ ಬಡ ಜನರ ಅಭಿವೃದ್ಧಿಯನ್ನು ಗುರಿಯನ್ನಾಗಿಸಲಾಯಿತು. ಈ ಯೋಜನೆಯಲ್ಲಿ ಶೇ.೩೦ರಷ್ಟು ಮಹಿಳೆಯರು ಫಲಾನುಭವಿಗಳಾಗುವಂತೆ ಜಾಗ್ರತೆ ವಹಿಸಲಾಯಿತು.

ಆರೋಗ್ಯ: ಪ್ರಸವ ಮತ್ತು ಮಕ್ಕಳ ಆರೋಗ್ಯ ಕೇಂದ್ರದ ಮೂಲಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು. ವಿಶೇಷವಾಗಿ ತಾಯಿಯಾಗುವ ಹಂತದಲ್ಲಿರುವ ಹೆಣ್ಣುಮಕ್ಕಳಿಗೆ ಅವರ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದರ ಮೂಲಕ ಹೆರಿಗೆಯ ಸಮಯದಲ್ಲಿ ಆಗುವ ತಾಯಿ ಮತ್ತು ಮಗುವಿನ ಮರಣ ದರವನ್ನು ಕಡಿಮೆಗೊಳಿಸಲು ಪ್ರಯತ್ನಿಸಲಾಯಿತು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಸಾಂಪ್ರದಾಯಿಕ ಮಾದರಿಯಂತೆ ಮನೆಯಲ್ಲಿಯೇ ಅನುಭವಿ ವ್ಯಕ್ತಿಗಳಿಂದ ಹೆರಿಗೆ ಮಾಡಿಸಿದಾಗ ತಾಯಿ ಮತ್ತು ಮಗುವಿನ ಸಾವು ಉಂಟಾಗುವ ಸಾಧ್ಯತೆಗಳು ಹೆಚ್ಚಿನದಾಗಿರುತ್ತದೆ. ಮನೆ ಹೆರಿಗೆಯ ಸಂದರ್ಭದಲ್ಲಿ ಬಳಸುವ ವಸ್ತುಗಳು ಶುಚಿಯಾಗಿಲ್ಲದಿರುವುದರಿಂದ ನಂಜು ಉಂಟಾಗಿ ತಾಯಿ-ಮಗು ಸಾವನ್ನುಪ್ಪುತ್ತಾರೆ. ಆದರೆ ಈ ಮಾದರಿಯ ಹೆರಿಗೆಗಳು ಇಂದಿಗೂ ನಡೆಯುತ್ತಲೆ ಇವೆ. ಸರ್ಕಾರ ಇದರ ಬಗ್ಗೆ ಎಚ್ಚರಿಕೆ ವಹಿಸಿದ್ದರೂ ತಪ್ಪಿಸಲಾಗುತ್ತಿಲ್ಲ. ಇನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಬಡ ಮಹಿಳೆಯರು ಹೆರಿಗೆಗೆ ಬಂದಾಗ ಅಲ್ಲಿಯೂ ಸಹ ಅನೇಕ ಸಮಸ್ಯೆಗಳುಂಟಾಗುತ್ತವೆ.

* ಸಮಯಕ್ಕೆ ಸರಿಯಾಗಿ ವೈದ್ಯ ಸಿಬ್ಬಂದಿ ಕಾರ್ಯನಿರ್ವಹಿಸದಿರುವುದು.
* ಮಹಿಳಾ ವೈದ್ಯರು ಮತ್ತು ಪ್ರಸೂತಿ ತಜ್ಞರ ಕೊರತೆ.
* ಸೂಕ್ತ ವೈದ್ಯಕೀಯ ಸಲಕರಣೆಗಳ ಕೊರತೆ.
* ಆಸ್ಪತ್ರೆಯಲ್ಲಿ ಕೊಠಡಿ ಮತ್ತು ಇತ್ಯಾದಿ ಸ್ಥಳಾವಕಾಶಗಳ ಕೊರತೆ
* ಆಸ್ಪತ್ರೆಯಲ್ಲಿ ವೈದ್ಯ ಸಿಬ್ಬಂದಿಯ ಗೈರು ಹಾಜರಿ ಮತ್ತು ನಿರ್ಲಕ್ಷ್ಯ.

ಹೀಗೆ ಹಲವಾರು ಕಾರಣಗಳಿಂದಲೂ ಸಹ ಸರ್ಕಾರಿ ಆಸ್ಪತ್ರೆಗೆ ಹೆರಿಗೆಗೆ ಬಂದ ಗರ್ಭಿಣಿ ಸ್ತ್ರೀಯರ ಸಾವಾಗುತ್ತಿದೆ. ಆದರೆ ಇದರ ಬಗ್ಗೆ ೭ನೇ ಪಂಚಾವಾರ್ಷಿಕ ಯೋಜನೆಯಲ್ಲಿ ಮಹಿಳೆಯರ ಆರೋಗ್ಯ, ಶಿಕ್ಷಣ, ಪೋಷಕಾಂಶ, ವಿಜ್ಞಾನ ಮತ್ತು ತಂತ್ರಜ್ಞಾನ, ಉದ್ಯೋಗಗಳಿಗೆ ಸಂಬಂಧಿಸಿದಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಆದರೆ ಅವು ಯಾವುವೂ ಉನ್ನತ ಫಲಿತಾಂಶದ ಗುರಿ ಮುಟ್ಟಲಿಲ್ಲ.

ಶಿಕ್ಷಣ: ಹೆಣ್ಣುಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿ ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರವನ್ನು ನೀಡಲಾಯಿತು. ಆದರೆ ಶಾಲಾ ಮಕ್ಕಳಿಗೆ ಶಾಲೆಗೆ ಬರಲು ಆಸಕ್ತಿ ಇದ್ದರೂ ಪೋಷಕರಲ್ಲಿದ್ದ ಮೂಢನಂಬಿಕೆಗಳಿಂದಾಗಿ ಅವರು ಹೆಣ್ಣು ಮಕ್ಕಳನ್ನು ದೂರದ ಶಾಲೆಗಳಿಗೆ ಕಳುಹಿಸಲು ನಿರಾಕರಿಸಿದರು. ಈ ಸಮಸ್ಯೆಗಾಗಿ ಉಚಿತ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸ ಲಾಯಿತು. ಆದರೆ ಎಲ್ಲಾ ಕಡೆ ವಸತಿ ನಿಲಯಗಳು ಸ್ಥಾಪನೆಯಾಗಲೇ ಇಲ್ಲ. ಹೀಗಾಗಿ ಹೆಣ್ಣು ಮಕ್ಕಳು ಶಾಲೆಗೆ ಬರುವುದನ್ನು ಗರಿಷ್ಠ ಮಟ್ಟಕ್ಕೆ ಏರಿಸಲಾಗಲಿಲ್ಲ. ಜೊತೆಗೆ ಕಾಲೇಜು ಮಕ್ಕಳಿಗೆ ತಂತ್ರಜ್ಞಾನ, ಪಾಲಿಟೆಕ್ನಿಕ್‌ಗಳಂತಹ ವಿಷಯಗಳನ್ನು ಹೆಣ್ಣು ಮಕ್ಕಳು ಹೊಂದಿಕೊಳ್ಳುವಂತೆ ಅವರಿಗೆ ವಿಶೇಷ ತರಬೇತಿಯನ್ನೇನು ನೀಡಲಿಲ್ಲ. ಅಲ್ಲದೇ ಅನೇಕ ಕಡೆಗಳಲ್ಲಿ ಕಾಲೇಜು ಸಿಬ್ಬಂದಿವರ್ಗವೇ ಹೆಣ್ಣುಮಕ್ಕಳಿಗೆ ಈ ವಿಷಯಗಳೇಕೆ ಎಂದು ಗೇಲಿ ಮಾಡಿದ್ದೂ ಉಂಟು. ಸರ್ಕಾರ ಯಾವುದೇ ರೀತಿ ಕ್ರಮ ತೆಗೆದುಕೊಳ್ಳುತ್ತಿಲ್ಲ. ಬದಲಿಗೆ ತನ್ನ ತೊಡಕುಗಳನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತಿದೇ ವಿನಃ ಸಮಸ್ಯೆಗೆ ಕಠಿಣ ಕ್ರಮ ಕೈಗೊಳ್ಳುತ್ತಿಲ್ಲ. ಇದು ಹೀಗೆ ಮುಂದುವರಿದರೆ ತಾಯಿ ಮತ್ತು ಮಗುವಿನ ಮರಣದರ ಕಡಿಮೆಗೊಳಿಸಲು ಸರ್ಕಾರ ಹಾಕಿಕೊಂಡಿರುವ ಯೋಜನೆಗಳ ಕಾರ್ಯವೈಖರಿ ಹಾಸ್ಯಾಸ್ಪದವೇ ಸರಿ.

ಉದ್ಯೋಗ: ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಉದ್ದೇಶದಿಂದ ಸರ್ಕಾರವು ಮಹಿಳೆಯರಿಗೆ ಉದ್ಯೋಗವನ್ನು ದೊರಕಿಸಿಕೊಡುವ ಪ್ರಯತ್ನ ಮಾಡಿತು. ಜೊತೆಗೆ ಸ್ವಯಂ ಉದ್ಯೋಗಕ್ಕೂ ಪ್ರೇರಣೆ ನೀಡಿತು. ಆದರೆ ಮಹಿಳೆಯರು ಸಾಕಷ್ಟು ಶಿಕ್ಷಣ ಹೊಂದಿಲ್ಲದ ಕಾರಣದಿಂದಾಗಿ ಸಣ್ಣ ಕೈಗಾರಿಕೆಗಳು ನಷ್ಟದ ಪಾಲಾದವು. ಸರ್ಕಾರವು ಮಹಿಳೆಯರಿಗಾಗಿ ನೀಡಲಾಗುತ್ತಿದ್ದ ತರಬೇತಿಗಳು ಕಳಪೆ ಮಟ್ಟದ್ದಾಗಿತ್ತು. ಮತ್ತು ಸಣ್ಣ ಕೈಗಾರಿಕೆಗಳಿಗೆ ಬೇಕಾದ ವಸ್ತುಗಳು ಮತ್ತು ಬಂಡವಾಳವು ನಿರೀಕ್ಷಿಸಿದ ಮಟ್ಟದಲ್ಲಿ ಮಹಿಳೆಯರಿಗೆ ಲಭ್ಯವಾಗಲಿಲ್ಲ. ಆದುದರಿಂದ ಸಣ್ಣ ಉದ್ಯಮಗಳಲ್ಲಿ ಮಹಿಳೆಯರು ವೈಫಲ್ಯ ಅನುಭವಿಸಿದರು.

೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯರನ್ನು ಅಭಿವೃದ್ಧಿವಾಹಕರಾಗಿ ಗುರುತಿಸಲಾಗಿತ್ತು. ಸೈದ್ಧಾಂತಿಕವಾಗಿ ಅಭಿವೃದ್ದಿಯಲ್ಲಿ ಮಹಿಳೆಯನ್ನು ಗುರುತಿಸಿಕೊಂಡರೂ ಅವರಿಗೆ

ಲಿಂಗಸಮ ನ್ಯಾಯಿಕವಾದ ಸ್ಥಾನಮಾನವನ್ನು ತಂದುಕೊಡಲು ಸಮಾಜದಲ್ಲಿ ಹಕ್ಕುಗಳು ಜೊತೆ ಜೊತೆಗೆ ಆರ್ಥಿಕ ಸ್ವಾವಲಂಬನೆಯು ಅತ್ಯವಶ್ಯಕ ಎಂಬುದನ್ನು ಗುರುತಿಸಿಕೊಂಡಿತು. ಈ ನಿಟ್ಟಿನಲ್ಲಿ ಶಿಕ್ಷಣ್ಯ, ಆರೋಗ್ಯ, ಉದ್ಯೋಗಗಳಿಗೆ ಒತ್ತು ನೀಡಲಾಯಿತು. ಆದರೆ ಅವರಿಗೆ ಸುರಕ್ಷಿತ, ಸರಳ ಫಲಿತಗಳು, ಮಹಿಳೆಯರಿಗೆ ವಿಶೇಷವಾಗಿ ಗುರುತಿಸಿ ಒದಗಿಸಿ ಕೊಡುವಂತಹ ವ್ಯವಸ್ಥೆಗಳ ಕೊರತೆಯನ್ನು ಕಾಣಲಾಗುತ್ತದೆ. ಈ ನಿಟ್ಟಿನಲ್ಲಿ ಹೇಳುವುದಾದರೆ, ಪ್ರತಿ ಮನೆಗೆ ಶೌಚಾಲಯವನ್ನು ಒದಗಿಸಿಕೊಡುವ ಯೋಜನೆ ಮಾಡಲಾಯಿತು. ಆದರೆ ಶೌಚಾಲಯವನ್ನು ಬಳಸುವುದಕ್ಕಿಂತ ಮುಖ್ಯವಾಗಿ ಅದರ ಶುಭ್ರತೆಗೆ ಬೇಕಾದ ಸವಲತ್ತುಗಳು, ನಿರ್ಮಿಸಿದ ಸ್ಥಳ ಮುಖ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಸರಿಯಾಗಿ ನೀರಿನ ಸೌಕರ್ಯವಿಲ್ಲದ ಮಹಿಳೆಯರು ದೂರದ ಪ್ರದೇಶದಿಂದ ನೀರನ್ನು ತರಬೇಕಾದ ಪರಿಸ್ಥಿತಿಯಲ್ಲಿ ಶೌಚಾಲಯದ ಶುಭ್ರತೆಗೆ ಚಿಂತಿಸತೊಡಗಿದ್ದು. ಅದನ್ನು ಇತರೆ ಉಪಯೋಗಕ್ಕೆ ಬಳಸಿದ ನಿದರ್ಶನಗಳು ಬೇಕಾದಷ್ಟು ಇದೆ. ಈ ನಿಟ್ಟಿನಲ್ಲಿ ಕಾರ್ಯಕ್ರಮಗಳಲ್ಲಿ ಸೈದ್ಧಾಂತಿಕವಾಗಿ ಅವರಿಗೆ ಶೌಚಾಲಯದ ಅವಶ್ಯಕತೆ ಗುರುತಿಸಿದರೂ ಕಾರ್ಯಗತಗೊಳಿಸುವಲ್ಲಿ ನಿರ್ಮಿಸಿದ ಸ್ಥಳ ಮನೆಯ ಮುಂದಿನ ಅವರ ವಾತಾವರಣವನ್ನೇ ಹಾನಿ ಮಾಡಿದ ಸ್ಥಿತಿಗತಿಗಳನ್ನು ತಿಳಿಯದಂತ ಸಂದಿಗ್ಧತೆಗಳನ್ನೇ ಇಲ್ಲಿ ಕಾಣಬಹುದು. ಇದಕ್ಕೆ ಕಾರಣ ಲಿಂಗಸಂಬಂಧಿ ದೃಷ್ಟಿಕೋನವೇ ಆಗಿದೆ. ಸರ್ಕಾರಕ್ಕೆ ಶೌಚಾಲಯವನ್ನು ಒದಗಿಸುವುದು ಮುಖ್ಯ ಸಂಗತಿಯಾಗಿತ್ತೇ ಹೊರತು ಮಹಿಳೆಯರು ಎಷ್ಟು ಸಮರ್ಥವಾಗಿ ಬಳಸಲ್ಪಡುತ್ತಾರೆ ಎಂಬುದನ್ನು ಗುರುತಿಸಲಾಗಲಿಲ್ಲ. ಮೌಲ್ಯಮಾಪನ ಸಂದರ್ಭದಲ್ಲಿಯೂ ಶೌಚಾಲಯ ನಿರ್ಮಾಣವಾಗಿದೆ ಎಂಬುದು ಪರಿಗಣನೆಗೆ ಬಂದಿರುತ್ತದೆಯೇ ಹೊರತಾಗಿ ಉಪಯುಕ್ತತೆ ಗೌಣವಾಗಿರುತ್ತದೆ.

ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಹಿಳೆಯರಿಗೆ ಶಿಕ್ಷಣದ ಅವಕಾಶಗಳನ್ನು ಒದಗಿಸಬೇಕು ಎಂಬುದರ ಹಿನ್ನೆಲೆಯಲ್ಲಿ ನೋಡುವುದಾದರೆ ತಂತ್ರಜ್ಞಾನದಲ್ಲಿ ಮಹಿಳೆಯರು ಹೆಚ್ಚು ಶಿಕ್ಷಿತರಾಗಬೇಕು ಎಂದು ಗುರುತಿಸಿ, ಪಾಲಿಟೆಕ್ನಿಕ್ ಹೆಣ್ಣು ಮಕ್ಕಳಿಗೆ ಒತ್ತು ನೀಡಲಾಯಿತು. ಆದರೆ ತದ ನಂತರ ಮಹಿಳೆಯರು ಉದ್ಯೋಗಕ್ಕಾಗಿ ಕಾರ್ಖಾನೆಗಳಲ್ಲಿ ಹೋದಾಗ ಕೈಗಾರಿಕಾ ಕ್ಷೇತ್ರದಲ್ಲಿ ಮಹಿಳೆಯರನ್ನೇ ಸೇರಿಸಿಕೊಳ್ಳಲು ಕೈಗಾರಿಕಾ ಕ್ಷೇತ್ರದಲ್ಲಿರುವವರು ಚಿಂತಿಸುತ್ತಿರುವ ಪರಿಸ್ಥಿತಿ ಇಂದಿಗೂ ಇದೆ. ಮಹಿಳೆಯರು ಕೈಗಾರಿಕಾ ಕ್ಷೇತ್ರದಲ್ಲಿ ಬಲಿಷ್ಠರಲ್ಲ ಎನ್ನುವುದರಿಂದ ಅವರ ಶಿಕ್ಷಣ ಅನುಭವಕ್ಕೆ ಯಾವುದೇ ಪ್ರತಿಫಲವಿಲ್ಲದಂತ ಪರಿಸ್ಥಿತಿ ಇಲ್ಲಿದೆ. ಮುಂದುವರೆದು ಸ್ವಯಂ ತಾಂತ್ರಿಕ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ಅದಕ್ಕೆ ಬೇಕಾದ ಪೂರಕ ಸವಲತ್ತುಗಳನ್ನು ಒದಗಿಸಿದರೂ ಕೂಡ ಅವುಗಳಿಗೆ ಬೇಕಾದ ಮಾರುಕಟ್ಟೆ ಮಾರಾಟ ವ್ಯವಸ್ಥೆಯಲ್ಲಿ ಮಹಿಳೆಯರು ಕೌಟುಂಬಿಕ ಮತ್ತು ಕೈಗಾರಿಕಾ ಉತ್ಪನ್ನಗಳ ಮಾರಾಟಕ್ಕೆ ಪ್ರಯತ್ನಗಳಿಗಾಗಿ ಬೇರೆ ಬೇರೆ ಪ್ರದೇಶಗಳಿಗೆ ತೆರಳಬೇಕಾದಾಗ ಕುಟುಂಬವೇ ಮಹತ್ತರವಾಗಿ ಸ್ವ ಉದ್ಯೋಗವನ್ನು ಕೈಬಿಡಬೇಕಾದ ಸಂಗತಿಗಳನ್ನು

ಕಾಣಲಾಯಿತು. ಇಲ್ಲಿಯೂ ಕೂಡ ಆರ್ಥಿಕವಾಗಿ ಸಬಲಳಾದ ಮಹಿಳೆಗೆ ಸಾಮಾಜಿಕ ಪಾತ್ರಗಳ ಮೂಲಕ ಬಂದಂತಹ ಜವಾಬ್ದಾರಿ ಮುಖ್ಯವಾಗಿದ್ದು ತಿಳಿದುಬರುತ್ತದೆ. ಈ ನಿಟ್ಟಿನಲ್ಲಿ ಮಹಿಳೆಯನ್ನು ಅಭಿವೃದ್ಧಿಯ ವಾಹಕಗಳಾಗಿ ಗುರುತಿಸಿ ಹಲವಾರು ಹುನ್ನಾರಗಳ ಮೂಲಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರು ಕೂಡ ಲೈಂಗಿಕತಾ ಸಿದ್ಧಾಂತವೂ ಸೂಕ್ಷ್ಮವಾಗಿ ಮಹಿಳೆಯನ್ನು ತಡೆಹಿಡಿಯುವ ಸಂಗತಿಗಳು ಅಭಿವೃದ್ಧಿ ನಿಯೋಜಕರಿಗೆ ಗುರುತಿಸಲು ಆಗಲಿಲ್ಲ ಎಂಬುದನ್ನು ಕಾಣಬಹುದು.

ಎಂಟನೇ ಪಂಚವಾರ್ಷಿಕ ಯೋಜನೆ

೮ನೇ ಪಂಚವಾರ್ಷಿಕ ಯೋಜನೆಯು ತನ್ನ ಗಮನವನ್ನು ಮಹಿಳಾ ಅಭಿವೃದ್ಧಿಯಿಂದ ಸಬಲೀಕರಣಕ್ಕೆ ಬದಲಾಯಿಸಿತು. ಮಹಿಳೆಯರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಉತ್ತಮಪಡಿಸಲು ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಇದಲ್ಲದೇ ಮಹಿಳೆಯರ ಆರ್ಥಿಕತೆ ಮತ್ತು ಆದಾಯತರುವ ಚಟುವಟಿಕೆಗಳನ್ನು, ಸ್ವ ಉದ್ಯೋಗವನ್ನು ಪ್ರೋತ್ಸಾಹಿಸಿ ಅದರ ಕೌಶಲ್ಯಗಳನ್ನು ತರಬೇತಿ ನೀಡುವುದರ ಮೂಲಕ ಉತ್ತಮಪಡಿಸಲಾಯಿತು. ಜೊತೆಗೆ ಆರೋಗ್ಯ ಮತ್ತು ಪೋಷಕಾಂಶಗಳ ಮಟ್ಟವನ್ನು ಉತ್ತಮ ಪಡಿಸಲಾಯಿತು. ೮ನೇ ಪಂಚವಾರ್ಷಿಕ ಯೋಜನೆಯ ಮತ್ತೊಂದು ಮುಖ್ಯ ಗುರಿ ಎಂದರೆ, ಕೆಳವರ್ಗದ ಮಹಿಳೆಯರ ಗುಂಪನ್ನು ನಿರ್ಮಿಸಿ ಅದನ್ನು ಬಲಪಡಿಸುವುದರಿಂದ ಸ್ಥಳೀಯ ಮಹಿಳೆಯರ ಅವಶ್ಯಕತೆಗಳನ್ನು ಪೂರೈಸುವುದಾಗಿದೆ.

ತರಬೇತಿ-ಉದ್ಯೋಗ-ಉತ್ಪಾದನೆ ಕೇಂದ್ರಗಳು: ಈ ಕೇಂದ್ರಗಳು ಅಸಂಪ್ರದಾಯಿಕ ಕ್ಷೇತ್ರದಲ್ಲಿರುವ ಮಹಿಳಾ ಉದ್ಯೋಗಿಗಳನ್ನು ತರಬೇತಿ ನೀಡುವುದರ ಮೂಲಕ ಸಬಲೀಕರಣಗೊಳಿಸುವುದು.

ಉದ್ಯೋಗಸ್ಥ ಮಹಿಳೆಯರ ಪ್ರೋತ್ಸಾಹ ಮತ್ತು ಸವಲತ್ತುಗಳನ್ನು ಬಲಪಡಿಸುವುದು: ರಾಷ್ಟ್ರೀಯ ಶಿಶುವಿಹಾರ ನಿಧಿಯು ಅಂಗನವಾಡಿ ಕೇಂದ್ರಗಳ ಜೊತೆಗೆ ಶಿಶುವಿಹಾರ ಕೇಂದ್ರಗಳನ್ನೊಳಗೊಂಡು ಪ್ರಾರಂಭ ವಾಯಿತು.

ಪಂಚಾಯತ್‌ರಾಜ್ ಸದಸ್ಯರಿಗೆ ತರಬೇತಿ ನೀಡುವುದು: ಪಂಚಾಯತ್‌ರಾಜ್‌ನಲ್ಲಿರುವ ೮ಲಕ್ಷ ಮಹಿಳಾ ಸದಸ್ಯರನ್ನು ತರಬೇತಿ ನೀಡುವುದರ ಮೂಲಕ ಸಬಲೀಕರಣಗೊಳಿಸಿ ಈ ಮೂಲಕ ಮೀಸಲಾತಿ ಮೂಲಕ ಆಯ್ಕೆಯಾದ ೧/೩ ಭಾಗದ ಮಹಿಳೆಯರು ತಮ್ಮ ಅಧಿಕಾರವನ್ನು ಅವರೇ ಚಲಾಯಿಸುವಂತೆ ಮಾಡುವುದು.

ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳು

* ೬ ವರ್ಷ ವಯಸ್ಸಿನೊಳಗಿನ ಮಕ್ಕಳ ಆರೋಗ್ಯ ಮತ್ತು ಪೋಷಕಾಂಶಗಳ ಸ್ಥಿತಿಯನ್ನು ಸುಧಾರಿಸಲು ಮತ್ತು ಗರ್ಭಿಣಿ ಸ್ತ್ರೀಯರು. ತಾಯಂದಿರು, ಹರೆಯದ ಹೆಣ್ಣುಮಕ್ಕಳ ಆರೋಗ್ಯ

ಸುಧಾರಣೆಗಾಗಿ ಸಂಯೋಜಿತ ಮಕ್ಕಳಾಭಿವೃದ್ಧಿ ಕಾರ್ಯಕ್ರಮ ಅಭಿವೃದ್ಧಿಪಡಿಸಿ ಮುಂದುವರಿಸಲಾಯಿತು.

* ಹೆಣ್ಣುಮಕ್ಕಳಿಗಾಗಿ ರಾಷ್ಟ್ರೀಯ ಯೋಜನೆಯನ್ನು ಅವರ ಆರೋಗ್ಯ ಸುಧಾರಿಸಲು ಜಾರಿಗೆ ತರಲಾಯಿತು(National Action Plan).

ಆರೋಗ್ಯ ಮತ್ತು ಪೋಷಕಾಂಶಗಳ ಅಭಿವೃದ್ಧಿ ಕಾರ್ಯಕ್ರಮಗಳು

* ೧೯೯೨-೯೩ರಲ್ಲಿ ಮಕ್ಕಳ ಉಳಿಯುವಿಕೆ(Child Survival) ಮತ್ತು ಸುರಕ್ಷಿತ ತಾಯ್ತನ(Safe Motherhood)ವನ್ನು ಕಾಪಾಡಲು ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು.

* National Plan of Action ಅಡಿಯಲ್ಲಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಪೋಷಕಾಂಶ ಭರಿತ ಆಹಾರ ನೀಡುವುದು ಮತ್ತು ಹಾಲು, ಶಿಶು ಆಹಾರ, ಫಿಡಿಂಗ್ ಬಾಟಲ್‌ಗಳನ್ನು ಉಚಿತವಾಗಿ ನೀಡುವುದರ ಮೂಲಕ ಮಕ್ಕಳಲ್ಲಿನ ನ್ಯೂನತೆ ಪೋಷಣೆಯನ್ನು ತಡೆಗಟ್ಟುವುದು.

ಶಿಕ್ಷಣ ಅಭಿವೃದ್ಧಿ ಕಾರ್ಯಕ್ರಮಗಳು

* ಸ್ತ್ರೀ ಶಿಕ್ಷಣವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ 'ಜಿಲ್ಲಾ ಪ್ರಾಥಮಿಕ ಶಿಕ್ಷಣ'ವನ್ನು ವಿಶೇಷ ಆಸಕ್ತಿ ವಹಿಸಿ ಜಾರಿಗೆ ತರಲಾಯಿತು.

* ಸಾಕ್ಷರತಾ ಅಭಿಯಾನದ ಮೂಲಕ ಸಬಲೀಕರಣಗೊಳಿಸುವುದು.

* 'ಅಪರೇಶನ್ ಬ್ಲಾಕ್ ಬೋರ್ಡ್' ಮೂಲಕ ಶಾಲೆಗಳ ಸೌಲಭ್ಯಗಳನ್ನು ಉತ್ತಮಪಡಿಸಿ ಎಲ್ಲಾ ಶಾಲೆಗಳಿಗೆ ಶೇ.೫೦ರಷ್ಟು ಶಿಕ್ಷಕಿಯರನ್ನು ನೇಮಿಸುವುದು.

* ಮಹಿಳೆಯರ ಸಬಲೀಕರಣಕ್ಕಾಗಿ 'ಮಹಿಳಾ ಸಾಮಾಖ್ಯ'ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು.

* ಮಹಿಳಾ ಸಮೃದ್ಧಿ ಯೋಜನೆಯನ್ನು ಗ್ರಾಮೀಣ ಮಹಿಳೆಯರ ಆರ್ಥಿಕತೆಯನ್ನು ಉತ್ತಮ ಪಡಿಸಲು ಆರಂಭಿಸಲಾಯಿತು. ಮಹಿಳೆಯರಿಗೆ ತಮ್ಮ ಗಳಿಕೆಯ ಹಣದ ಉಳಿತಾಯವನ್ನು ಮಾಡುವುದರ ಬಗೆಗೆ ತಿಳಿಸಿಕೊಟ್ಟಿತು. ಆದರೆ ಮುಖ್ಯವಾಗಿ ಮಹಿಳೆಯರಿಗೆ ನಿರುದ್ಯೋಗದ ಸಮಸ್ಯೆ ಇರುವುದರಿಂದ ಸಣ್ಣಪುಟ್ಟ ಕೆಲಸಗಳಿಂದ ಬರುವ ಆದಾಯದಿಂದ ಜೀವನ ಸಾಗಿಸುವುದೇ ಕಷ್ಟಕರವಾಗಿರುವಾಗ ಇನ್ನು ಉಳಿತಾಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹೀಗೆ ಸರ್ಕಾರವು ಮೊದಲು ಮಹಿಳೆಯರಿಗೆ ಒಂದು ನಿಶ್ಚಿತವಾದ ಕೆಲಸವನ್ನು ದೊರಕಿಸಿಕೊಡುವಲ್ಲಿಯೇ ವಿಫಲವಾಗಿದೆ. ಆದ್ದರಿಂದ ಉಳಿತಾಯ ಯೋಜನೆಯೂ ಸಹ ಯಶಸ್ವಿಯಾಗಲಿಲ್ಲ.

* ಪಂಚಾಯತ್‌ರಾಜ್‌ನಲ್ಲಿ ಮಹಿಳೆಯರಿಗೆ ಶೇ.೧/೩ ಭಾಗದಷ್ಟು ಮೀಸಲಾತಿಯನ್ನು ವಿಧಿಸಿತು. ಆದರೆ ಮಹಿಳೆಯರು ಯಾರೂ ಸ್ವಯಂ ಪ್ರೇರಣೆಯಿಂದ ಪಂಚಾಯತ್ ಕ್ಷೇತ್ರದಲ್ಲಿ ಭಾಗವಹಿಸಲಿಲ್ಲ.

ಮಹಿಳೆಯರಿಗೆ ಮೀಸಲಿಟ್ಟ ಕ್ಷೇತ್ರದಲ್ಲಿ ಪುರುಷ ಅಭ್ಯರ್ಥಿಗಳು ತಮ್ಮ ತಾಯಿ, ಹೆಂಡತಿ, ಅಕ್ಕ, ತಂಗಿ ಹೀಗೆ ತಮ್ಮ ಕುಟುಂಬದ ಮಹಿಳಾ ಸದಸ್ಯರನ್ನೇ ಚುನಾವಣೆ ಮೂಲಕ ಗೆಲ್ಲಿಸಿ ಅವರ ಅಧಿಕಾರವನ್ನು ಸಹ ಪುರುಷರೇ ನಿಭಾಯಿಸುತ್ತಾರೆ. ಇಲ್ಲಿ ಮಹಿಳೆಯರು ಆಟಕ್ಕುಂಟು ಲೆಕ್ಕಕ್ಕಿಲ್ಲ. ಮಾದರಿಯಲ್ಲಿ ಮೂಲೆಗುಂಪಾಗಿದ್ದಾರೆ. ಇದಕ್ಕಾಗಿ ಸರ್ಕಾರ ಮಹಿಳೆಯರೇ ಸ್ವಯಂಪ್ರೇರಿತರಾಗಿ ಪಂಚಾಯತ್‌ರಾಜ್‌ನಲ್ಲಿ ಭಾಗವಹಿಸಿ ತಮ್ಮ ಅಧಿಕಾರವನ್ನು ತಾವೇ ನಿಭಾಯಿಸುವಂತೆ ಮಹಿಳೆಯರನ್ನು ಉತ್ತೇಜಿಸಬೇಕಾದ ಅವಶ್ಯಕತೆ ಇದೆ. ಆದರೆ ಸರ್ಕಾರ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳದೇ ಇರುವುದರಿಂದ ಇನ್ನೂ ಮಹಿಳೆಯರು ರಾಜಕೀಯವಾಗಿ ಹಿಂದುಳಿದಿದ್ದಾರೆ.

* ರಾಷ್ಟ್ರೀಯ ಮಹಿಳಾ ಆಯೋಗವು ಮಹಿಳೆಯರ ಕಾನೂನು ಸಂವಿಧನಾತ್ಮಕ ಹಕ್ಕು ಮತ್ತು ರಕ್ಷಣೆಗಳಿಗೆ ಚ್ಯುತಿ ಬರದಂತೆ ಕಾಪಾಡುವುದಾಗಿದೆ. ಆದರೆ ಇಂದು ಮಹಿಳೆಯರ ಸಂವಿಧಾನಾತ್ಮಕ ಹಕ್ಕುಗಳನ್ನು ಲೆಕ್ಕಿಸದೇ ಮಹಿಳೆಯರ ಮೇಲೆ ದೌರ್ಜನ್ಯಗಳು ನಡೆಯುತ್ತಲೇ ಇವೆ. ಆದರೂ ಸಹ ಅವರಿಗೆ ಕಾನೂನಿನ ಅಡಿಯಲ್ಲಿ ಸೂಕ್ತ ರಕ್ಷಣೆ ಮತ್ತು ನ್ಯಾಯ ಸಿಗದೇ ಇರುವುದು ದುಃಖಕರ ಸಂಗತಿಯಾಗಿದೆ.

* ರಾಷ್ಟ್ರೀಯ ಮಹಿಳಾ ಖೋಷ್‌ನಡಿ ಅನೌಪಚಾರಿಕ ವಲಯದಲ್ಲಿರುವ ಬಡ ಮಹಿಳೆಯರಿಗೆ ೨ ಲಕ್ಷ ನೀಡುವುದಾಗಿ ಸರ್ಕಾರ ಘೋಷಿಸಿತ್ತು. ಆದರೆ ಇಲ್ಲಿಯವರೆಗೂ ಯಾರೂ ಯಶಸ್ವಿಯಾಗಿ ಹಣ ಪಡೆಯದೇ ಇರುವುದು ಸರ್ಕಾರದ ನಿರ್ಲಕ್ಷ್ಯತನವನ್ನು ತೋರಿಸುತ್ತದೆ.

* ಉದ್ಯೋಗ ತರಬೇತಿಗಳನ್ನು ನೀಡುವುದರ ಮೂಲಕ ಮಹಿಳೆಯರನ್ನು ಉನ್ನತ ವರ್ಗದ ಉದ್ಯೋಗದ ಕಡೆ ಕರೆದೊಯ್ಯುವ ನಿರೀಕ್ಷೆಯನ್ನು ಸರ್ಕಾರಿ ಯೋಜನೆಗಳು ಹೊಂದಿದ್ದವು. ಉದ್ಯೋಗ ತರಬೇತಿ ನೀಡುವುದೇನೋ ಸರಿಯೇ ಆದರೆ ಉದ್ಯೋಗವೇ ಸಿಗುತ್ತಿಲ್ಲ. ಸಿಕ್ಕರೂ ಅಲ್ಲಿ ತಂತ್ರಜ್ಞಾನ ಮತ್ತು ಪುರುಷರೊಂದಿಗೆ ಪೈಪೋಟಿ ನಡೆಸಲು ಸಾಧ್ಯವಾಗದೇ ಮಹಿಳೆಯರು ಸ್ಥಾನಪಲ್ಲಟಗೊಳ್ಳುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಸರ್ಕಾರವೂ ಉದ್ಯೋಗ ತರಬೇತಿಯ ಗುಣಮಟ್ಟವನ್ನು ಹೆಚ್ಚಿಸುವ ಅಗತ್ಯಕ್ಕೆ ತಲೆಭಾಗಲೇ ಇಲ್ಲ.

* ಮಕ್ಕಳು ಮತ್ತು ಹೆಣ್ಣುಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸುವ ನಿಟ್ಟಿನಲ್ಲಿ TCDS ಕಾರ್ಯಕ್ರಮವನ್ನು ಇನ್ನಷ್ಟು ಅಭಿವೃದ್ಧಿಪಡಿಸಿ ಜಾರಿಗೆ ತರಲಾಯಿತು. ಆದರೆ ಮಕ್ಕಳ ಆರೋಗ್ಯ ಪರಿಸ್ಥಿತಿಯು ಉತ್ತಮ ಮಟ್ಟದಲ್ಲಿ ಸುಧಾರಿಸಲಿಲ್ಲ.

ಒಂಬತ್ತನೇ ಪಂಚವಾರ್ಷಿಕ ಯೋಜನೆ

ಮಹಿಳೆಯರ ಸಬಲೀಕರಣವು ೯ನೇ ಪಂಚವಾರ್ಷಿಕ ಯೋಜನೆಯ ಮುಖ್ಯ ಧ್ಯೇಯವಾಗಿತ್ತು. ಪುರುಷರೊಂದಿಗೆ ಸಮನಾಗಿ ಮಹಿಳೆಯು ಸಹ ತನ್ನ ಅಧಿಕಾರವನ್ನು ಸಾಮಾಜಿಕವಾಗಿ

ಚಲಾಯಿಸುವಂತೆ ಉತ್ತೇಜನ ನೀಡಲಾಯಿತು. ಇದರ ಫಲವಾಗಿ "ರಾಷ್ಟ್ರೀಯ ಸಬಲೀಕರಣ ನೀತಿ"(National Empowerment Policy for women)ನ್ನು ಜಾರಿಗೆ ತರಲಾಯಿತು.

ಮಹಿಳೆಯರನ್ನು ಅಭಿವೃದ್ದಿಯ ಮತ್ತು ಸಾಮಾಜಿಕ ಬದಲಾವಣೆಯ ಕಾರ್ಯಕರ್ತ ರನ್ನಾಗಿಸುವುದು.

೧. "National Policy for Empowerment of women" ಮೂಲಕ ಮಹಿಳೆಯರು ತಮ್ಮ ಹಕ್ಕುಗಳು ಮತ್ತು ಅಧಿಕಾರವನ್ನು ಅರಿತು ಸಮಾಜದಲ್ಲಿ ಮತ್ತು ಕುಟುಂಬದೊಳಗೆ ಪುರುಷರಿಗೆ ಸಮನಾಗಿ ವ್ಯಕ್ತಪಡಿಸುವುದರ ಮೂಲಕ ಲಿಂಗ ಸಮಾನತೆಯನ್ನು ಸ್ಥಾಪಿಸುವುದು.

೨. ಸ್ತ್ರೀಯರು ರಾಜಕೀಯದಲ್ಲಿ ಭಾಗವಹಿಸುವುದನ್ನು ಪ್ರೋತ್ಸಾಹಿಸಲು ರಾಜ್ಯಸಭೆ ಮತ್ತು ಲೋಕ ಸಭೆಗಳಲ್ಲಿ ಶೇ ೧/೩ರಷ್ಟು ಮೀಸಲಾತಿಯನ್ನು ಸ್ತ್ರೀಯರಿಗೆ ನೀಡುವುದು. ಇದರ ಮೂಲಕ ಸ್ತ್ರೀಯರಿಗೆ ನಿರ್ಧಾರ ಕೈಗೊಳ್ಳುವ ಹಕ್ಕನ್ನು ಬಲಪಡಿಸುವುದು.

೩. ಮಹಿಳಾ ಸಂಯುಕ್ತ ಯೋಜನೆಗಳಲ್ಲಿ ಶೇ.೩೦% ರಷ್ಟು ಲಾಭ ಮತ್ತು ಹಣವು ಮಹಿಳಾ ಅಭಿವೃದ್ಧಿ ಕ್ಷೇತ್ರಗಳಿಗೆ ಮೀಸಲಿಡಲಾಯಿತು.

೪. ಮಹಿಳಾ ಸ್ವ-ಸಹಾಯ ಗುಂಪುಗಳನ್ನು ಸಂಘಟಿಸುವುದರ ಮೂಲಕ ಮಹಿಳೆಯರ ಸಬಲೀಕರಣವನ್ನು ಸಾಧಿಸುವುದು.

೫. ಗರ್ಭಸ್ಥ ಶಿಶು(Production child Health Care)ಗಾಗಿ ಹೆಚ್ಚಿನ ಪ್ರಾಶಸ್ತ್ಯ ನೀಡಲಾಯಿತು.

೬. ವಿಶೇಷ ಪೋಷಕಾಂಶ ಕಾರ್ಯಕ್ರಮ(Special Nutrition Programme) ಮಧ್ಯಾಹ್ನ ಭೋಜನ ಮತ್ತು ಪೂರಕ ಆಹಾರ ಯೋಜನೆ(Supplimentary feeding programme) ಯನ್ನು ಮತ್ತಷ್ಟು ಉತ್ತಮಗೊಳಿಸಿ ಎಲ್ಲೆಡೆ ವಿಸ್ತರಿಸುವುದು.

೭. ೧೯೯೮ರ ವಿಶೇಷ ಕಾಯ್ದೆ(Special Action) ಮೂಲಕ ಮಹಿಳೆಯರಿಗೆ ಮತ್ತು ಹೆಣ್ಣು ಮಕ್ಕಳಿಗೆ ಪುರುಷರಿಗೆ ಸಮನಾಗಿ ಮತ್ತು ಸುಲಭವಾಗಿ ಶಿಕ್ಷಣ ಸಿಗುವಂತೆ ಮಾಡುವುದು.

೮. ಹೆಣ್ಣು ಮಕ್ಕಳಿಗೆ ಕಾಲೇಜು ಶಿಕ್ಷಣದಿಂದ ವೃತ್ತಿಪರ ಶಿಕ್ಷಣದವರೆಗಿನ ಎಲ್ಲಾ ಶಿಕ್ಷಣವನ್ನು ಉಚಿತವಾಗಿ ನೀಡಲು ಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು.

೯. ಹೆಣ್ಣು ಮಕ್ಕಳಿಗೆ ಕಾಲೇಜು ಶಿಕ್ಷಣದಿಂದ ವೃತ್ತಿಪರ ಶಿಕ್ಷಣದವರೆಗಿನ ಎಲ್ಲಾ ಶಿಕ್ಷಣವನ್ನು ಉಚಿತವಾಗಿ ನೀಡಲು ಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು.

೧೦. ಆಧುನಿಕ ಯುಗದಲ್ಲಿ ಬರುತ್ತಿರುವ ಜ್ಞಾನ ಕೌಶಲ್ಯಗಳ ಬಗ್ಗೆ ಮಹಿಳೆಯರಿಗೆ ತಿಳಿಸುವುದು, ಇಂದಿನ ಆಗು–ಹೋಗುಗಳ ಬಗ್ಗೆ ಮಾಹಿತಿ ನೀಡುವುದರಿಂದ ಆಧುನಿಕ ವಿದ್ಯಮಾನಗಳಿಗೆ ಹೊಂದುಕೊಂಡು ಅವರು ಸ್ವತಂತ್ರವಾಗಿ ಸ್ವ–ಉದ್ಯೋಗವನ್ನು ಮಾಡುವುದರಿಂದ ಆರ್ಥಿಕವಾಗಿ ಉತ್ತಮಗೊಳ್ಳುವಂತಾಗುತ್ತದೆ.

೧೧. ಮಹಿಳೆಯರ ಸ್ವಯಂ–ಉದ್ಯೋಗಕ್ಕಾಗಿ ಅವರ ಸಣ್ಣ ಕೈಗಾರಿಕೆಗಳಿಗೆ ಸಾಲ ನೀಡುವುದರ ಮೂಲಕ ಮತ್ತು ಅವರಿಗಾಗಿಯೇ "ಮಹಿಳಾ ಉದ್ಯಮಿಗಳ ಅಭಿವೃದ್ಧಿ ಬ್ಯಾಂಕ್ (Development Bank for women Enterpreneurs)" ಮೂಲಕ ಹಣ ಒದಗಿಸುವುದರ ಮೂಲಕ ಅದರ ವ್ಯಾಪಾರಕ್ಕೆ ಬಂಡವಾಳ ಒದಗಿಸುವುದಾಗಿದೆ.

೧. ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ಅ. ೯ನೇ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಲಾಯಿತು. ಅವರಿಗೆ 'ಪ್ರಾಥಮಿಕ ಆರೋಗ್ಯ ಸೇವೆಗಳು' ಸುಲಭವಾಗಿ ದೊರಕುವಂತೆ ಮಾಡಲಾಯಿತು. ಇದರ ಮೂಲಕ ಸ್ತ್ರೀಯರ ವಯಸ್ಸಿಗನು ಗುಣವಗಿ ಅವರಿಗೆ ಅವರ ಆರೋಗ್ಯಕ್ಕೆ ತಕ್ಕಂತೆ ಚಿಕಿತ್ಸೆ ನೀಡಲಾಯಿತು. ಸಂತಾನ ಮತ್ತು ಮಕ್ಕಳ ಆರೋಗ್ಯ ಕೇಂದ್ರ(Reproductive Child Health Care Centre) ವನ್ನು ಸ್ಥಾಪಿಸಲಾಯಿತು.

ಆ. ೫೦/೧೦೦೦ IMR ಮತ್ತು ೩/೧೦೦೦ MMR ದರದಲ್ಲಿ ಶಿಶು ಮತ್ತು ತಾಯಿಮರಣವನ್ನು ತಗ್ಗಿಸಲು ಪ್ರಯತ್ನಿಸಲಾಗಿದೆ. ಇದಕ್ಕಾಗಿ ಸಂತಾನ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮ ವನ್ನು ಮತ್ತಷ್ಟು ಉತ್ತಮ ಪಡಿಸುವುದು.

ಇ. ಪ್ರಸವದ ತೊಂದರೆಯಲ್ಲಿರುವ ಸ್ತ್ರೀಯರು, ಅನೀಮಿಯಾ, ಅಧಿಕ ರಕ್ತದೊತ್ತಡ, ಇತ್ಯಾದಿ ಗಂಭೀರ ಸ್ತ್ರೀರೋಗಗಳನ್ನು ಗುರ್ತಿಸಿ ಸೂಕ್ತ ಸಮಯದಲ್ಲಿ ಅವರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವುದು.

ಈ. ಹಳ್ಳಿಗಳಲ್ಲಿ ಅನುಭವಿ ವ್ಯಕ್ತಿಗಳಿಂದ ಕಾನೂನುಬಾಹಿರವಾಗಿ ನಡೆಯುವ ಗರ್ಭಪಾತಕ್ಕೆ ಕಡಿವಾಣ ಹಾಕಿ ಗರ್ಭಧಾರಣೆ ಮತ್ತು ಪ್ರಸವ ಪೂರ್ವ ಹಂತಗಳಲ್ಲಿ PHCಗಳ ಮೂಲಕ ಉತ್ತಮ ಆರೋಗ್ಯ ಸೌಲಭ್ಯ ಒದಗಿಸುವುದು.

ಉ. ೧೯೯೪ರ ಕಾಯ್ದೆಯ ಪ್ರಕಾರ ಪ್ರಸವ ಪೂರ್ವ ಭ್ರೂಣಲಿಮಗಪತ್ತೆ ಹಚ್ಚುವುದನ್ನು ನಿಶೇಧಿಸಲಾಯಿತು. ಇಂತಹ ಕೆಲಸ ಮಾಡುವವರನ್ನು ಕಾನೂನಡಿ ಶಿಕ್ಷೆಗೆ ಒಳಪಡಿಸ ಲಾಗುತ್ತದೆ

ಊ. ಸಂತಾನ ಮತ್ತು ಮಕ್ಕಳ ಆರೋಗ್ಯದ ಮೂಲಕ ಗರ್ಭಧಾರಣಾ ಸಂದರ್ಭದಲ್ಲಿ ಉಂಟಾಗುವ ತೊಂದರೆಗಳು ಬಂಜೆತನ, ಕ್ಯಾನ್ಸರ್, ಎದೆ ಮತ್ತು ಗರ್ಭಕೋಶ ಕ್ಯಾನ್ಸರ್‌ಗಳನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಸೂಕ್ತ ಚಿಕಿತ್ಸೆಯನ್ನು ನೀಡುವುದು.

ಋ. ಲಿಂಗ ಸಂವೇಧಿ ಕಾರ್ಯಕ್ರಮಗಳ ಮೂಲಕ ನಂತಹ ಸೋಂಕುಗಳ ಬಗ್ಗೆ ಜನರಿಗೆ ತಿಳುವಳಿಕೆ ನೀಡುವುದರ ಜೊತೆಗೆ ಲೈಂಗಿಕ ಮತ್ತು ಪುನರುತ್ಪಾದನಾ ಹಂತದಲ್ಲಿನ ಆರೋಗ್ಯ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು.

೨. ಪೋಷಕಾಂಶಗಳು

ಅ. ಮಹಿಳೆ, ಗರ್ಭಿಣಿಯರು ಮತ್ತು ಮಕ್ಕಳಲ್ಲಿ ಕಂಡುಬರುವ ನ್ಯೂನ ಪೋಷಕಾಂಶ ಮತ್ತು ಪ್ರೋಟೀನ್ ಕೊರತೆಯನ್ನು ನೀಗಿಸಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ವಿಶೇಷವಾಗಿ ಬಡತನದ ರೇಖೆಗಿಂತ ಕೆಳಗಿರುವ ಮಹಿಳೆಯರಿಗೆ ಆದ್ಯತೆ ನೀಡಲಾಯಿತು.

ಆ. ೧೯೯೮ರ ವಿಶೇಷ ಕ್ರಿಯಾಯೋಜನೆಗಳ ಮೂಲಕ ಶಾಲಾ ಮಕ್ಕಳಿಗೆ, ವಿಶೇಷವಾಗಿ ಪೋಷಕಾಂಶ ಕಾರ್ಯಕ್ರಮದ ಅಡಿಯಲ್ಲಿ ಪೋಷಕಾಂಶ ಭರಿತ ಧಾನ್ಯಗಳನ್ನು ನೀಡುವುದು ಮತ್ತು ಶಾಲೆಗಳಲ್ಲಿ ಮಧ್ಯಾಹ್ನ ಊಟದ ವ್ಯವಸ್ಥೆಯನ್ನು ಮಾಡುವುದಾಗಿದೆ. ಅಲ್ಲದೆ ಹಾಲುಣಿಸುವ ತಾಯಂದಿರಿಗೂ ಸಹ ಪೋಷಕಾಂಶ ಭರಿತ ಆಹಾರವನ್ನು ಕೊಡುವುದು.

ಇ. ಮಹಿಳೆ, ತಾಯಂದಿರು ಮತ್ತು ಮಕ್ಕಳ ಆರೋಗ್ಯದ ದೃಷ್ಟಿಯಿಂದ ಅತ್ಯವಶ್ಯಕವಾಗಿ ಬೇಕಾಗಿರುವ ವಿಟಮಿನ್ ಎ, ಕಬ್ಬಿಣ ಮತ್ತು ಐಯೋಡಿನ್‌ನಂತಹ ಖನಿಜಗಳನ್ನು ಒಳಗೊಂಡಿರುವ ಆಹಾರ ಮತ್ತು ಔಷಧಿಗಳನ್ನು ನೀಡುವುದರಿಂದ ನ್ಯೂನಪೋಷಕಾಂಶತೆಯಿಂದ ಉಂಟಾಗುವ ತೊಂದರೆಗಳನ್ನು ತಡೆಗಟ್ಟುವುದಾಗಿದೆ.

೧. ಮಹಿಳೆಯರ ಸಬಲೀಕರಣ ರಾಷ್ಟ್ರೀಯ ಯೋಜನೆ(National Policy for Empowering of Women) ಮೂಲಕ ಮಹಿಳೆಯರಿಗೆ ತಮ್ಮ ಹಕ್ಕು ಮತ್ತು ಅಧಿಕಾರಿಗಳ ಬಗ್ಗೆ ತಿಳಿಸಿ ಪುರುಷರಿಗೆ ಸಮನಾಗಿ ವ್ಯವಹರಿಸುವುದರಿಂದ ಲಿಂಗ ಸಮಾನತೆಯನ್ನು ಸ್ಥಾಪಿಸುವುದಾಗಿತ್ತು. ಆದರೆ ಸರ್ಕಾರವೇ ಪುರುಷ ಪ್ರಧಾನ ವ್ಯವಸ್ಥೆಯ ಮೇಲೆ ನಿಂತು ಅದರ ಅಡಿಯಲ್ಲಿಯೇ ಯೋಜನೆಗಳನ್ನು ನಿರ್ಮಿಸಿರುವಾಗ ಅದನ್ನು ಮೀರಿ ಕೆಲಸ ನಿರ್ವಹಿಸುವುದು ಅಸಾಧ್ಯದ ಮಾತಾಗಿತ್ತು. ಹೀಗಾಗಿ ಮೊದಲು ಸರ್ಕಾರದ ಪುರುಷ ಪ್ರಧಾನ ವ್ಯವಸ್ಥೆಯ ದೃಷ್ಟಿಕೋನವು ಬದಲಾಗಬೇಕಾದ ಅವಶ್ಯಕತೆ ಇದೆ.

೨. ಹೆಣ್ಣು ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದಿಂದ ವೃತ್ತಿಪರ ಶಿಕ್ಷಣದವರೆಗೆ ಉಚಿತ ಶಿಕ್ಷಣವನ್ನು ಸರ್ಕಾರ ಘೋಷಿಸಿದರೂ ಸಹ ಸರ್ಕಾರಿ ಸಂಸ್ಥೆಗಳಲ್ಲಿಯೂ ಸಹ ಹೆಚ್ಚು ಹಣ ಪಾವತಿಸಲೇ

ಬೇಕಾಗಿದೆ. ಹೀಗಾದಲ್ಲಿ ಸರ್ಕಾರವು ಉಚಿತ ಶಿಕ್ಷಣವನ್ನು ಜಾರಿಗೊಳಿಸು ತ್ತೇವೆಂಬ ಭರವಸೆಗಳು ವ್ಯರ್ಥಗೊಂಡವು.

೩. ಮಹಿಳೆಯರ ಸ್ವಯಂ-ಉದ್ಯೋಗಕ್ಕಾಗಿ ಬಂಡವಾಳವನ್ನು ಪೂರೈಸಲು ಹಲವಾರು ಬ್ಯಾಂಕುಗಳನ್ನು ಸರ್ಕಾರ ನೇಮಿಸಿತು. ಆದರೆ ಆ ಬ್ಯಾಂಕುಗಳಲ್ಲಿ ಗ್ಯಾರಂಟಿ ಪತ್ರಗಳನ್ನಿಡಬೇಕಿತ್ತು. ಆದರೆ ಬಡ ಮಹಿಳೆಯರಿಗೆ ಸ್ವಂತ ನೆಲೆಯೇ ಇಲ್ಲವಾದಲ್ಲಿ ಇನ್ನೂ ಗ್ಯಾರಂಟಿ ಪತ್ರಗಳನ್ನು ಎಲ್ಲಿಂದ ತಂದು ಕೊಡುತ್ತಾರೆಂಬ ಆಲೋಚನೆಯನ್ನು ಸಹ ಸರ್ಕಾರ ಮಾಡಲಿಲ್ಲ.

೪. IMR ಮತ್ತು MMR ನ್ನು ಕಡಿತಗೊಳಿಸಲು ಸರ್ಕಾರ ಪ್ರಯತ್ನಿಸುತ್ತಲೇ ಇದೆ. ಆದರೆ ಇಂದಿಗೂ ಅದು ಯಶಸ್ವಿಯಾಗಿ ಕಾರ್ಯಚರಣೆಯಾಗದಿರುವುದು ವಿಷಾದವೇ ಸರಿ.

೫. ಪ್ರಸವ ಪೂರ್ವಲಿಂಗ ಪತ್ತೆ ಹಚ್ಚುವುದನ್ನು ಸರ್ಕಾರ ನಿಷೇಧಿಸಿತು. ಆದರೆ ಸಂಚಾರಿ ವಾಹನಗಳ ಮೂಲಕ ಈ ರೀತಿಯ ಅಕ್ರಮಗಳು ನಡೆಯುತ್ತಿದ್ದರೂ ಸಹ ಸರ್ಕಾರ ಸುಮ್ಮನಿರುವುದು ಸರ್ಕಾರದ ನಿರ್ಲಕ್ಷ್ಯತನವನ್ನು ತೋರಿಸುತ್ತದೆ.

೬. ಲಿಂಗಸಂವೇದಿ ಮೂಲಕ ಲೈಂಗಿಕ ಕ್ರಿಯೆಯ ಮೂಲಕ ಹರಡುವ ರೋಗಗಳು ಮತ್ತು ಹೆಚ್‌ಐವಿ/ಏಡ್ಸ್‌ನಂತಹ ಸೋಂಕು ರೋಗಗಳ ಬಗ್ಗೆ ಜನರಿಗೆ ತಿಳಿಸಿ ಹೇಳಬೇಕಾದ ಸರ್ಕಾರವೇ ಸರ್ಕಾರಿ ಕಚೇರಿಗಳಲ್ಲಿನ ಸೋಂಕು ಪೀಡಿತರನ್ನು ನಿರ್ಲಕ್ಷ್ಯದಿಂದ ಕಂಡು ಕೆಲಸದಿಂದ ವಜಾಗೊಳಿಸುತ್ತಿರುವುದು ಬೆಳಕಿಗೆ ಬಂದಿದೆ.

೭. ಪಠ್ಯ ಪುಸ್ತಕಗಳಲ್ಲಿ ಮತ್ತು ಇತ್ಯಾದಿ ಶಿಕ್ಷಣ ವಿಷಯದಲ್ಲಿ ಕಂಡುಬರುವ ಲಿಂಗ ವ್ಯತ್ಯಾಸಗಳನ್ನು ಮುದ್ರಿಸದಿರಲು ಸರ್ಕಾರ ನಿರ್ಧರಿಸಿತಾದರೂ ಮನೆಯ ಕೆಲಸದಲ್ಲಿ ತಾಯಿ-ಮಗಳು, ಮನರಂಜನೆ ಕಾರ್ಯಕ್ರಮದಲ್ಲಿ ತಂದೆ-ಮಗ ಭಾಗಿಯಾಗಿರುವಂತೆ ಪಾಠಗಳನ್ನು ಮುದ್ರಿಸುತ್ತದೆ.

೮. ಬಾಲಕಿಯರಿಗೆ ಉಚಿತ ಶಿಕ್ಷಣ ಮತ್ತು ಹಾಸ್ಟೆಲ್‌ಗಳನ್ನು ನಿರ್ಮಿಸುವುದಾಗಿ ಹೇಳಿದ ಸರ್ಕಾರ ಪ್ರಾಥಮಿಕ ಶಿಕ್ಷಣಕ್ಕೇ ವಿರಾಮ ಹಾಕಿ ಹಾಸ್ಟೆಲ್‌ಗಳ ವಿಚಾರ ಮರತೇ ಬಿಟ್ಟಿತು.

೯. ಮಧ್ಯಾಹ್ನ ಬಿಸಿಯೂಟ ಯೋಜನೆ ಆರಂಭಿಸಿದಾಗಿನಿಂದ ಇಂದಿನವರೆಗೂ ಅದರ ಗುಣಮಟ್ಟ ಅತ್ಯಂತ ಕಳಪೆ ಮಟ್ಟದ್ದಾಗಿರುವುದಕ್ಕೆ ಸಾವಿರಾರು ಮಕ್ಕಳು ಅಸ್ವಸ್ಥರಾಗಿರುವುದೇ ಇದಕ್ಕೆ ಸಾಕ್ಷಿಯಾಗಿದೆ.

೧೦. ಹೆಣ್ಣು ಮಕ್ಕಳಿಗೆ ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ವಿಷಯಗಳ ಬಗ್ಗೆ ತರಬೇತಿ ನೀಡು ವುದಾಗಿ ಸರ್ಕಾರ ಹೇಳಿದೆ. ಆದರೆ ಅಂತಹ ಕೋರ್ಸ್‌ಗಳನ್ನು ಉಚಿತವಾಗಿ ಇನ್ನೂ ಬೋಧಿಸಲಾಗುತ್ತಿಲ್ಲ.

೧೧ನೇ ಪಂಚವಾರ್ಷಿಕ ಯೋಜನೆ

೨೦೦೧ರಲ್ಲಿ ಅಡಿಯಲ್ಲಿ ಮಹಿಳೆಯರ ಸಬಲೀಕರಣಕ್ಕೆ ಮತ್ತಷ್ಟು ಶ್ರಮಿಸಲಾಯಿತು. ೯ನೇ ಪಂಚವಾರ್ಷಿಕ ಯೋಜನೆಯ ಗುರಿಗಳನ್ನೇ ಮತ್ತಷ್ಟು ಬಲಪಡಿಸಿ ನಿರ್ದಿಷ್ಟ ಗುರಿ ಸಾಧಿಸಲು ಶ್ರಮವಹಿಸಲಾಯಿತು.

೧. ಧನಾತ್ಮಕ ಆರ್ಥಿಕತೆ ಮತ್ತು ಸಾಮಾಜಿಕ ಪಾಲಸಿಗಳ ಮೂಲಕ ಮಹಿಳೆಯರಿಗೆ ಅವರ ಸಾಮರ್ಥ್ಯವನ್ನು ತಿಳಿಸಿಕೊಡುವುದರಿಂದ ಅಭಿವೃದ್ಧಿ ಹೊಂದುವುದು.

೨. ರಾಜಕೀಯ, ಆರ್ಥಿಕ, ಸಾಮಾಜಿಕ, ಕಾನೂನು ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ಪುರುಷನಿಗೆ ಸಮನಾಗಿ ಸ್ತ್ರೀಯರೂ ಸಹ ತಮ್ಮ ಮೂಲಭೂತ ಹಕ್ಕುಗಳನ್ನು ಚಲಾಯಿಸು ವಂತಾಗಬೇಕು.

೩. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರ ಸಮಾನ ಭಾಗವಹಿಸುವಿಕೆ ಮತ್ತು ನಿರ್ಧಾರ ತೆಗೆದುಕೊಳ್ಳುವ ಹಕ್ಕನ್ನು ಪ್ರೋತ್ಸಾಹಿಸುವುದು.

೪. ಮಹಿಳೆಯರಿಗೆ ಆರೋಗ್ಯ ಸೇವೆ, ಸಮಾನ ಶಿಕ್ಷಣ, ಔದ್ಯೋಗಿಕ ಮತ್ತು ವೃತ್ತಿಪರ ಮಾರ್ಗದರ್ಶನ, ಉದ್ಯೋಗ, ಸಮಾನ ವೇತನ, ಆರೋಗ್ಯ ಮತ್ತು ರಕ್ಷಣೆ, ಸಾಮಾಜಿಕ ರಕ್ಷಣೆ ಮತ್ತು ಸಾರ್ವಜನಿಕ ವಲಯಗಳಲ್ಲಿ ಇನ್ನೂ ಅನೇಕ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಸೌಲಭ್ಯಗಳು ಸುಲಭವಾಗಿ ಕೈಗೆಟುಕುವಂತೆ ಮಾಡಲಾಯಿತು.

೫. ಮಹಿಳೆಯರ ಮೇಲಿನ ಎಲ್ಲಾ ಬಗೆಯ ತಾರತಮ್ಯಗಳನ್ನು ತೊಡೆದು ಹಾಕಲು ಕಾನೂನಿನಡಿಯಲ್ಲಿ ನಿರ್ದಿಷ್ಟ ಕಾಯಿದೆಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಯಿತು.

೬. ಸಮಾಜದಲ್ಲಿ ರೂಢಿಯಲ್ಲಿರುವ ಸಾಂಪ್ರದಾಯಿಕ ಮಾದರಿಗಳನ್ನು ಬದಲಾಯಿಸಿ ಸ್ತ್ರೀ-ಪುರುಷರಿಬ್ಬರು ಸಮನಾಗಿ ಭಾಗವಹಿಸುವಂತೆ ಮಾಡುವುದು.

೭. ಲಿಂಗತ್ವ-ಧೋರಣೆಯನ್ನು ಪ್ರಧಾನ ಧಾರೆಯ ಪ್ರಕ್ರಿಯೆಯಲ್ಲಿ ತರುವುದು.

೮. ಸ್ತ್ರೀ ಮತ್ತು ಹೆಣ್ಣು ಮಕ್ಕಳ ಮೇಲಿನ ಎಲ್ಲ ಬಗೆಯ ಕ್ರೌರ್ಯವನ್ನು ತಡೆಯುವುದು.

೯. ಮಹಿಳಾ ಸಂಘಟನೆಗಳು, ಕಾರ್ಪೋರೇಟ್ ಮತ್ತು ಖಾಸಗೀ ವಲಯ ಏಜೆನ್ಸಿಗಳ ಮೂಲಕ ಕಾನೂನು ಮತ್ತು ಸಮಾಜದಲ್ಲಿ ಮಹಿಳೆಯರ ಸಹಭಾಗಿತ್ವವನ್ನು ಬಲಪಡಿಸುವುದು.

೧೦. ಪುನರುತ್ಪಾದನಾ ಆರೋಗ್ಯ ಮತ್ತು ಶಿಶು ಆರೋಗ್ಯ ಸೇವೆಗಳ ಮೂಲಕ ಜನರಿಗೆ ಪ್ರಾಥಮಿಕ ಆರೋಗ್ಯ ಸೇವೆ ಮತ್ತು ಕುಟುಂಬ ಕಲ್ಯಾಣ ಯೋಜನೆಗಳು ಸುಲಭವಾಗಿ ದೊರಕುವಂತೆ ಮಾಡುವುದು.

೧೧. ರಾಷ್ಟ್ರೀಯ ಜನಗಣತಿ ನೀತಿ/ಪಾಲನೆ–೨೦೦೦ದ ಗುರಿಯ ಪ್ರಕಾರ ೨೦೧೦ರ ವೇಳೆಗೆ ಶಿಶು ಮರಣ ದರ್ಥವನ್ನು ೧೦೦೦ಕ್ಕೆ ೩೦ರಂತೆ ಕಡಿತಗೊಳಿಸುವುದು ಮತ್ತು ಮಾತೃ ಮರಣ ದರವನ್ನು ೧ ಲಕ್ಷಕ್ಕೆ ೧೦೦ ರಂತೆ ಕಡಿಮೆಗೊಳಿಸುವುದು.

೧೨. ಪ್ರಧಾನ ಮಂತ್ರಿ ಗ್ರಾಮೋದ್ಯೋಗ ಯೋಜನೆಯ ಅಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸೌಲಭ್ಯಗಳು ಮತ್ತು ಅಪೋಷಿಕಾಂಶ ಸೌಲಭ್ಯಗಳ ನಡುವಿನ ತೀವ್ರ ಸ್ವರೂಪದ ವ್ಯತ್ಯಾಸಗಳನ್ನು/ಬಿರುಕು/ಅಂತರಗಳನ್ನು ಸರಿದೂಗಿಸುವುದು.

೧೩. ತೀವ್ರ ಸ್ವರೂಪದ ಮತ್ತು ಅಲ್ಪ ಪ್ರಮಾಣದ ನ್ಯೂನ ಪೋಷಕಾಂಶಗಳ ತೊಂದರೆಯಿಂದ ಬಳಲುತ್ತಿರುವವರಿಗೆ ನಿಯಮಿತ ಆರೋಗ್ಯ ತಪಾಸಣೆ, ಚುಚ್ಚುಮದ್ದು ನೀಡುವುದು, ಪೂರಕ ಆಹಾರ ಒದಗಿಸುವುದರ ಮೂಲಕ ಪೋಷಕಾಂಶಗಳ ಬಗ್ಗೆ ಶಿಕ್ಷಣ ಮತ್ತು ಜಾಗೃತಿಯನ್ನು ಮೂಡಿಸುವುದು.

೧೪. ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ 'ಶಿಕ್ಷಣವು ಮಹಿಳೆಯರ ಹಕ್ಕು' ಎನ್ನುವ ಅಂಶವನ್ನು ಜಾರಿಗೆ ತರುವುದರ ಮೂಲಕ ಮಹಿಳಾ ಶಿಕ್ಷಣಕ್ಕೆ ಪ್ರಮುಖ ಆದ್ಯತೆ ನೀಡುವುದು. ಜೊತೆಗೆ ಮಹಿಳೆಯರು ಶೈಕ್ಷಣಿಕವಾಗಿ ಸಾಧನೆ ಮಾಡಲು ಪ್ರೋತ್ಸಾಹಿಸುವುದು.

೧೫. ಮಹಿಳೆ ಮತ್ತು ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ಅಗತ್ಯ ಸೌಲಭ್ಯಗಳು ಕೈಗೆಟುಕುವಂತೆ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಕ್ರಮತೆಗೆದುಕೊಳ್ಳಲಾಯಿತು. ಜೊತೆಗೆ ತಾಂತ್ರಿಕ ಮತ್ತು ವೃತ್ತಿಪರ ಕ್ಷೇತ್ರಗಳಲ್ಲೂ ಸಹ ಉಚಿತ ಪ್ರದೇಶದ ಸೌಲಭ್ಯ ಒದಗಿಸುವುದರೊಂದಿಗೆ ಔದ್ಯೋಗಿಕ ತರಬೇತಿಗಳನ್ನು ನೀಡಲಾಯಿತು.

೧೬. ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸಲು ಮತ್ತು ಶಾಲೆಗೆ ಮಕ್ಕಳ ದಾಖಲಾತಿಯನ್ನು ಹೆಚ್ಚಿಸಲು ಮಕ್ಕಳಿಗೆ ಉಚಿತ ಶಿಕ್ಷಣದ ಮೂಲಕ ಉಚಿತ ಸಮವಸ್ತ್ರ, ಪುಸ್ತಕ, ಹಾಸ್ಟೆಲ್ ಸೌಲಭ್ಯ, ಸಂಚಾರಿ ವೆಚ್ಚಗಳನ್ನು ಸರ್ಕಾರ ನೀಡುವುದರ ಜೊತೆಗೆ ಮಧ್ಯಾಹ್ನದ ಬಿಸಿಯೂಟ ವ್ಯವಸ್ಥೆಯನ್ನು ಮಾಡಲಾಯಿತು.

೧೭. ಮಹಿಳೆಯರಿಗಾಗಿ ಔದ್ಯೋಗಿಕ ತರಬೇತಿ ಕೇಂದ್ರಗಳನ್ನು ಎಲ್ಲಾ ಜಿಲ್ಲೆ ಮತ್ತು ಉಪ ಜಿಲ್ಲೆಗಳಲ್ಲಿ ಮಾರುಕಟ್ಟೆ ಮೌಲ್ಯಗಳನ್ನು ಬೋಧಿಸುವ ವಿಷಯಗಳೊಂದಿಗೆ ವಾಸಸ್ಥಳದ ಸೌಲಭ್ಯಗಳೊಂದಿಗೆ ಸ್ಥಾಪಿಸಲಾಯಿತು.

೧೧ನೇ ಪಂಚವಾರ್ಷಿಕ ಯೋಜನೆಯೂ ಸಹ ಮಹಿಳೆಯರ ಸಬಲೀಕರಣಕ್ಕೆ ಪಣತೊಟ್ಟು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿತು.

೧. ಮಹಿಳೆಯರಿಗೆ ಆರೋಗ್ಯ ಸೇವೆ, ಸಮಾನ ಶಿಕ್ಷಣ, ಔದ್ಯೋಗಿಕ ವೃತ್ತಿಪರ ಮಾರ್ಗದರ್ಶನ, ಉದ್ಯೋಗ, ಸಮಾನ ವೇತನ, ಆರೋಗ್ಯ ರಕ್ಷಣೆ, ಸಾಮಾಜಿಕ ರಕ್ಷಣೆ, ಸಾರ್ವಜನಿಕ ವಲಯಗಳಲ್ಲಿ ಮತ್ತು ಇನ್ನು ಅನೇಕ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಸೌಲಭ್ಯಗಳು ಸುಲಭವಾಗಿ ಕೈಗೆಟುಕುವಂತೆ ಮಾಡಲು ಯೋಜನೆಯನ್ನು ರೂಪಿಸಲಾಯಿತು. ಆದರೆ ಆ ಸೌಲಭ್ಯಗಳನ್ನು ಪಡೆಯಲು ಮಹಿಳೆಯರು ಇವತ್ತಿನವರೆಗೂ ಪರದಾಡುತ್ತಲೇ ಇರುವರು.

೨. ಸಮಾಜದಲ್ಲಿರುವ ತಾರತಮ್ಯಗಳನ್ನು ತೊಡೆದುಹಾಕಿ ಲಿಂಗ ಸಮಾನತೆ ಸ್ಥಾಪಿಸಲು ಸ್ಥಾಪಿಸಿದ ಯೋಜನೆಗಳೇ ಲಿಂಗ ಪೂರ್ವಾಗ್ರಹ ಪೀಡಿತವಾಗಿದೆ. ಇನ್ನು ಈ ದೃಷ್ಟಿಕೋನ ದಿಂದ ಜಾರಿಗೆ ತಂದ ಕಾನೂನಿನ ಕಾಯ್ದೆಗಳು ಯಾವುದೇ ವಿಶೇಷತೆಯನ್ನು ಹೊಂದಿಲ್ಲ.

೩. ಸ್ತ್ರೀ ಮತ್ತು ಹೆಣ್ಣು ಮಕ್ಕಳು ಮೇಲಿನ ಎಲ್ಲ ಬಗೆಯ ದೌರ್ಜನ್ಯವನ್ನು ತೊಡೆದು ಹಾಕಲು ಕಾನೂನಿನ ಕ್ರಮ ಕೈಗೊಳ್ಳಲಾಯಿತು. ಆದರೆ ಇಂದು ಸರ್ಕಾರಿ ಅಧಿಕಾರಿಗಳು ಮಹಿಳೆಯರ ಮೇಲೆ ಬಹಿರಂಗವಾಗಿ ದೌರ್ಜನ್ಯವೆಸಗುತ್ತಿದ್ದಾರೆ.

೪. ಪ್ರಧಾನಮಂತ್ರಿ ಆರೋಗ್ಯ ಗ್ರಾಮೋದ್ಯೋಗ ಯೋಜನೆಯಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸೌಲಭ್ಯಗಳನ್ನು ಮತ್ತು ಪೋಷಕಾಂಶ–ಸೌಲಭ್ಯಗಳ ನಡುವಿನ ತೀವ್ರ ಸ್ವರೂಪದ ಬಿರುಕುಗಳನ್ನು ಸರಿ ಮಾಡಲಾಯಿತಾದರೂ ಆಳವಾದ ಕಂದಕವನ್ನು ಮುಚ್ಚಲು ಅಲ್ಪ ಪ್ರಮಾಣದ ಶ್ರಮಪಟ್ಟಂತೆ ಎಲ್ಲವೂ ವ್ಯರ್ಥವೆನಿಸತೊಡಗಿವೆ.

೩.೪ ಮಹಿಳೆ ಮತ್ತು ಸರ್ಕಾರಿ ಯೋಜನೆಗಳು: ವಿಶ್ಲೇಷಣಾತ್ಮಕ ವಿವರಣೆ

ಭಾರತ ಸರ್ಕಾರವು ಮಹಿಳೆಯರ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು. ಭಾರತ ಸ್ವಾತಂತ್ರ್ಯ ನಂತರ ಪಂಚವಾರ್ಷಿಕ ಯೋಜನೆಗಳನ್ನು ದೇಶದ ಪ್ರಗತಿಗೆ ಎಂದು ಅಳವಡಿಸಿ ಆಯೋಜಿಸಿ ಜಾರಿಗೆ ತರಲಾಯಿತು. ಆ ಸಂದರ್ಭದಲ್ಲಿಯೇ, ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ, ಧಾರ್ಮಿಕ, ಸಾಮಾಜಿಕ ಇತರ ಸಂಗತಿಗಳ ಹಿನ್ನಲೆಯಲ್ಲಿ ಶ್ರೀಮಂತ ಸಂವಿಧಾನವನ್ನು ರಚಿಸಲಾಯಿತು. ಪ್ರತಿ ನಾಗರೀಕ ವ್ಯಕ್ತಿಗೂ ಕೂಡ ಜವಾಬ್ದಾರಿಯುತ ಮೌಲ್ಯಯುಕ್ತ ಹಕ್ಕುಗಳು ಮರ್ಯಾದೆ, ಮೌಲ್ಯಗಳು ಲಭ್ಯವಾಗುವಂತೆ ಈ ಮೂಲಕ ಸಮಾಜದಲ್ಲಿ ನ್ಯಾಯಿಕವಾಗಿ, ಸಾಮಾಜಿಕವಾಗಿ, ಸಮಾನ ಸ್ಥಾನಮಾನ ಅವಕಾಶಗಳನ್ನು ಪಡೆಯುವಂತೆ ದಾರಿ ಮಾಡಲಾಯಿತು. ಹಾಗೂ ಸಮಾಜದಲ್ಲಿನ ಶ್ರೇಣಿಕೃತ ವ್ಯವಸ್ಥೆಯನ್ನು ಹೋಗಲಾಡಿಸಿ ಶಾಂತಿ ಸೌಹಾರ್ದಯುತ ಸಾಮಾಜಿಕ ವಾತಾವರಣದ ಕನಸನ್ನು ಹೊತ್ತು ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಯಿತು. ಅದರಲ್ಲಿ ಪಂಚವಾರ್ಷಿಕ ಯೋಜನೆಗಳೂ ಹೌದು.

ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟು ಜನಸಂಖ್ಯೆ ಮಹಿಳೆಯರಿದ್ದೂ ಅವರು ಸಾಮಾಜಿಕ ಸ್ತರದಲ್ಲಿನ ಲಿಂಗ ಶ್ರೇಣೀಕೃತ ವ್ಯವಸ್ಥೆಯಿಂದ ಹಲವಾರು ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಈ ಸಂಗತಿಯನ್ನು ಅರಿತ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದ್ದರೂ ಇಂದಿಗೂ ಮಹಿಳೆಯರು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಗೌಣವಾಗುತ್ತಿರುವುದು ಶೋಚನೀಯ ಸಂಗತಿ.

ಸಾಮಾಜಿಕ ಸರ್ವತೋಮುಖ ಅಭಿವೃದ್ದಿಗೆ ಸರ್ಕಾರದ ಜವಾಬ್ದಾರಿಯಾಗಿ ಪಂಚವಾರ್ಷಿಕ ಯೋಜನೆಗಳನ್ನು ಗುರುತಿಸಲಾಯಿತು. ಇವುಗಳನ್ನು ಸಮಾಜದಲ್ಲಿ ಸಮಸ್ಯೆಗಳನ್ನು ಗುರುತಿಸಿ, ಸಮಸ್ಯೆಗಳನ್ನು ಪರಿಹರಿಸಲು, ಒಂದು ಸೈದ್ಧಾಂತಿಕ ಚೌಕಟ್ಟಿನಡಿಯಲ್ಲಿ ಯೋಜನೆಗಳನ್ನು ರೂಪಿಸುವುದು ಹಾಗೂ ಅವುಗಳನ್ನು ಕಾರ್ಯಗತಗೊಳಿಸುವುದು. ಐದು ವರ್ಷಗಳ ಅವಧಿ ಮುಗಿಯುವ ಸಂದರ್ಭದಲ್ಲಿ ಆಯಾ ಯೋಜನೆಗಳನ್ನು ಅಂದರೆ ಕಾರ್ಯಗತಗೊಂಡಂತ ಯೋಜನೆಗಳನ್ನು ಮೌಲ್ಯ ಮಾಪನಮಾಡಿ ಅಮೌಲ್ಯಮಾಪನದ ಆಧಾರದ ಮೇಲೆ ಸಮಸ್ಯೆಗಳು ಎಷ್ಟರ ಮಟ್ಟಿಗೆ ಪರಿಹಾರವಾಗಿದೆ ಎಂಬುದರ ನಿರ್ಧಾರದ ಮೇಲೆ ಮುಂದಿನ ಯೋಜನೆಗಳನ್ನು ರೂಪಿಸುವುದಾಗಿದೆ. ಪಂಚವಾರ್ಷಿಕ ಯೋಜನೆಗಳು ಮುಖ್ಯವಾಗಿ, ಸಾರ್ವತ್ರಿಕವಾಗಿ ಸಮಾಜದ ಸಮಸ್ಯೆಗಳನ್ನು ಪರಿಹರಿಸಲು ರೂಪುಗೊಂಡಂತ ವ್ಯವಸ್ಥೆಯಾಗಿದೆ. ಇವುಗಳಲ್ಲಿ ಮಹಿಳೆಯರನ್ನು ಕೂಡ ಗುರುತಿಸಲಾಗಿದೆ.

ಸ್ವಾತಂತ್ರ್ಯ ನಂತರ ಸ್ವಾತಂತ್ರ್ಯ ಪೂರ್ವದಲ್ಲಿಯ ಸಮಾಜದಲ್ಲಿ ಲಿಂಗ-ಅಸಮಾನತೆ ಇದೆ ಎಂಬುದು ತಿಳಿದ ಸಂಗತಿಯಾಗಿತ್ತು. ಅದೇ ಸಂದರ್ಭದಲ್ಲಿ ಮಹಿಳೆಯರು ತಮ್ಮ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಅವರಿಗೆ ದೊರಕಬೇಕಾದ ಅವಕಾಶಗಳು-ದೊರಕಬೇಕು. ಈ ನಿಟ್ಟಿನಲ್ಲಿ ಹಲವಾರು ಮಹಿಳಾ ಹೋರಾಟಗಳನ್ನು ಕಾಣಬಹುದು. ಮಹಿಳೆಯರು ಶೋಷಿತವರ್ಗದವರು ಎನ್ನುವ ಮನೋಭಾವ ಎಲ್ಲೆಡೆ ಹಬ್ಬಿತ್ತು.

೧೯೫೧ ರಿಂದ ೨೦೧೧ರವರೆಗೆ ಒಟ್ಟು ೧೧ ಪಂಚವಾರ್ಷಿಕ ಯೋಜನೆಗಳನ್ನು ನಾವು ಕಾಣುತ್ತೇವೆ. ಈ ಪಂಚವಾರ್ಷಿಕ ಯೋಜನೆಗಳ ಗುರಿ. ಸಾಮಾಜಿಕ ಸ್ತರದಲ್ಲಿನ ಎಲ್ಲ ವರ್ಗದ ಗುಂಪಿಗೆ, ಸಮುದಾಯಕ್ಕೆ ಎಲ್ಲ ಬಗೆಯ ಸವಲತ್ತುಗಳು ದೊರೆಯುವಂತೆ ಮಾಡುವುದು. ಆರ್ಥಿಕತೆಯನ್ನು ಬೆಳೆಸುವುದು. ಬಡತನವನ್ನು ನಿವಾರಿಸಿ ಸಮಾಜವನ್ನು ಪಿಡುಗು ಮುಕ್ತವನ್ನಾಗಿಸುವುದಾಗಿದೆ.

ಸ್ತ್ರೀವಾದಿ ದೃಷ್ಟಿಕೋನದಿಂದ ಪಂಚವಾರ್ಷಿಕ ಯೋಜನೆಗಳನ್ನು ಅವರ ಸೈದ್ಧಾಂತಿಕ ಔಕಟ್ಟನ್ನು ಕಾರ್ಯಕ್ರಮ ವಿಧಾನ-ಮೌಲ್ಯ ಮಾಪನವನ್ನು ಗಮನಿಸುತ್ತಾ ಬಂದರೆ ಪಂಚವಾರ್ಷಿಕ ಯೋಜನೆಗಳಲ್ಲಿ ಮಹಿಳೆಯನ್ನೇ ಆರಂಭದ ಹಂತದಲ್ಲಿ ನಿರ್ಲಕ್ಷಿಸಿದ್ದು, ತದನಂತರ ಎಷ್ಟೇ

ಗಂಭೀರವಾಗಿ ಗುರುತಿಸಿದ್ದರೂ ಅಲ್ಲಿ ಯೋಜನೆಗಳ ರಾಚನಿಕ ವ್ಯವಸ್ಥೆಯಲ್ಲಿ ವೆಚ್ಚ ಮೌಲ್ಯಗಳು ಯೋಜನೆಗಳ ವೈಫಲ್ಯಕ್ಕೆ ಕಾರಣವಾಗಿದೆ ಎಂಬುದನ್ನು ಕಾಣಲಾಗುತ್ತದೆ.

ಈ ಮೊದಲ ಅಧ್ಯಾಯದಲ್ಲಿ ಚರ್ಚೆ ಮಾಡಿದ ಪ್ರಕಾರ 'ಅಭಿವೃದ್ಧಿ' ಪರಿಕಲ್ಪನೆಯು ಆರ್ಥಿಕ ಚೌಕಟ್ಟಿನಿಂದ ಸಾಮಾಜಿಕ ಮೌಲ್ಯಗಳಡಿಯಲ್ಲಿ ಗುರುತಿಸಿಕೊಂಡಿರುವುದನ್ನು ಕಾಣಬಹುದು. ೧೯ನೇ ಶತಮಾನದ ಸಂದರ್ಭದಲ್ಲಿ ಅಭಿವೃದ್ಧಿ ಎನ್ನುವಂತದ್ದು ವಿಶಾಲವಾದಂತ ಅರ್ಥವನ್ನು ಹೊಂದಿತ್ತು. ಈ ನಿಟ್ಟಿನಲ್ಲಿ ಮೊದಲ ಪಂಚವಾರ್ಷಿಕ ಯೋಜನೆ ಪ್ರಸ್ತುತ ಪಂಚವಾರ್ಷಿಕ ಯೋಜನೆಗಳು ಪ್ರತಿ ಹಂತದಲ್ಲಿಯೂ ಒಂದೊಂದು ಕ್ಷೇತ್ರಗಳನ್ನು ಗುರುತಿಸಿ ಅವುಗಳ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸುವ ನಿಟ್ಟಿನಲ್ಲಿ ರೂಪಿಸಲಾಗಿದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಆರಂಭದಿಂದ ಇಂದಿನವರೆಗೂ ಮಹಿಳೆಯರ ಆರೋಗ್ಯಕ್ಕೆ ಹೆಚ್ಚು ಒತ್ತು ನೀಡಲಾಗಿದೆ.

ಹೆಚ್ಚಿನ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳು ಪಂಚವಾರ್ಷಿಕ ಯೋಜನೆಗಳ ಮೂಲಕವೇ ಅನುಷ್ಠಾನಗೊಳ್ಳುತ್ತಿವೆ. ಈ ಸಂಗತಿಯನ್ನು ಪ್ರಮುಖವಾಗಿ ಗುರುತಿಸಿಕೊಂಡು ಪಂಚವಾರ್ಷಿಕ ಯೋಜನೆಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಮಹಿಳಾ ಅಭಿವೃದ್ಧಿ ಯೋಜನೆಗಳು ಅನುಷ್ಠಾನಗೊಳ್ಳುವಿಕೆಯಲ್ಲಿನ ತೊಂದರೆಗಳನ್ನು ಗಂಭೀರವಾಗಿ ಗುರುತಿಸಿ ಚರ್ಚಿಸಲಾಗುತ್ತಿದೆ. ಸೈಧಂತಿಕತೆಯು ಮುಂದುಇವರೆದು ಯೋಜನೆಗಳ ಅನುಷ್ಠಾನದಲ್ಲಿ ಲಿಂಗಅಸಮಾನತೆಗಳು ಹೇಗೆ ಉಂಟಾಗುತ್ತಿದೆ. ಅಲ್ಲಿನ ಲಿಂಗ ಅಸಮಾನತೆಯ ಸಂಗತಿಗಳು ಕಾರ್ಯನಿರ್ವಹಿಸುತ್ತಿವೆ ಎಂಬುದು ಪುರುಷ ಪ್ರಧಾನ ಸಮಾಜದಿಂದ ಮಹಿಳೆಯು ನಾನಾ ರೀತಿಯ ತೊಂದರೆಗಳನ್ನು ಅನುಭವಿಸುತ್ತಿದ್ದು ಅವರಿಗೆಂದೆ ಇರುವ ಯೋಜನೆಗಳು ವಿಫಲವಾಗಲು ಕಾರಣವಾಗುತ್ತಿವೆ.

- ಭಾರತದಲ್ಲಿ ಮಹಿಳೆಯರಿಗೆ ಹಲವಾರು ಹಕ್ಕು ಕಯ್ದೆಗಳನ್ನು, ಪಾಲಿಸಿಗಳನ್ನು ಮಾಡಿದ್ದಾರೆ. ಆದರೆ ಸೈದ್ಧಾಂತಿಕತೆಯ ಚರಿತ್ರೆಯಲ್ಲಿ ಪುರುಷ ಸಂಸ್ಕೃತಿ ಇರುವುದರಿಂದ ಸಾಂಸ್ಕೃತಿಕ ಸಂಗತಿಗಳಲ್ಲಿಯ ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ.
- ಪಿತೃ ಪ್ರಧಾನತೆಯಲ್ಲಿ ಮಹಿಳೆಯರನ್ನು ವಿಶೇಷವಾಗಿ ಗುರುತಿಸುವಂತಹುದೆ ಒಂದು ಸಂಗತಿ ಯಾದರು ಮಹಿಳಾ ಅಭಿವೃದ್ಧಿಗೆಂದು ಪ್ರಚಾರ ಪಡಿಸಿದ ಯೋಜನೆಗಳ ಬಗೆಗೆ ಮಾಹಿತಿ ಕೊರತೆ ಇರುವುದು, ಇನ್ನೊಂದೆಡೆ ಅವುಗಳ ಅನುಸರಣೆ ಪುರುಷರದ್ದಾಗಿರುವುದು ಇನ್ನೊಂದೆಡೆ.
- ಸಾಂಸ್ಕೃತಿಕ ಮೌಲ್ಯಗಳ ಜೊತೆಗೆ ಮೌಢ್ಯತೆಯ ಸಂಗತಿಗಳು ಒಳಗೊಂಡಿವೆ.
- ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳಲ್ಲಿ ಲಿಂಗತ್ವದ ಅಗತ್ಯತೆ ಹಾಗೂ ಲಿಂಗತ್ವದ ಯೋಜನೆಗಳ ಕ್ರಮಗಳು ಅತ್ಯವಶ್ಯವಾಗಿದೆ. ಕೇವಲ ಸೈದ್ದಾಂತಿಕತೆಯಲ್ಲಿ ಸಮುದಾಯ ಸ್ತರದಲ್ಲಿ.

• ಲಿಂಗತ್ವ ಪಾತ್ರಗಳು ಹಾಗೂ ಸ್ತ್ರೀತ್ವ ಮತ್ತು ಪುರುಷತ್ವದಗಳಡಿಯಲ್ಲಿ ಎಲ್ಲಾ ಯೋಜನೆಗಳನ್ನು ಸ್ವೀಕರಿಸಲಾಗುತ್ತಿದೆ. ಹಾಗೂ ಅಳವಡಿಸಿಕೊಂಡು ಚಿಂತಿಸಲಾಗುತ್ತದೆ. ಹಾಗಾಗಿ ಯೋಜನೆಗಳ ರೂಪಿಕೆಯಲ್ಲಿ ಅನುಷ್ಠಾನದಲ್ಲಿ ಲಿಂಗಪಾತ್ರಗಳ ಸ್ತ್ರೀತ್ವಗಳ ನೆಲೆಯಲ್ಲಿಯೇ ಅನುಷ್ಟಾನಗೊಳ್ಳುತ್ತಿವೆ.

• ಇಲ್ಲಿ ಯೋಜನಾ ಕ್ರಮಗಳನ್ನು ಲಿಂಗತ್ವದ ಅತ್ಯವಶ್ಯಕತೆಯ ತಳಹದಿಯಲ್ಲಿ ವಿಭಾಗಿಸಬೇಕಾಗಿದೆ ಅದರ ಕೊರತೆ ಇದೆ.

ಯೋಜನೆಗಳನ್ನು, ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ ಎಂದು ಹೇಳುತ್ತದೆ. ಆದರೆ ಸಮಾಜದಲ್ಲಿ ಇಂದಿಗೂ ಎಷ್ಟೋ ಸಾಮಾನ್ಯ ಮಹಿಳೆಯರಿಗೆ ಇವುಗಳ ಅರಿವೆ ಇಲ್ಲದಿರುವುದನ್ನು ಕಾಣಬಹುದು. ಸರ್ಕಾರಿ ಕಾರ್ಯಕ್ರಮಗಳನ್ನು ಗುರುತಿಸಿ ಅವುಗಳಲ್ಲಿ ಮಹಿಳಾ ಅಭಿವೃದ್ಧಿಯನ್ನು ರಚಿಸಿಕೊಂಡ ಬಗೆಯನ್ನು ಅಭಿವೃದ್ಧಿ ತಜ್ಞೆ 'ಮೋಸರ್' ರವರು ಅವರ ಐದು ಅಪ್ರೋಚ್+ಗಳ ಮೂಲಕ ತಿಳಿಯಲು ಪ್ರಯತ್ನಿಸಿದರೂ ಕೂಡ ಅವುಗಳ ಸಮರ್ಪಕ ಅನುಸರಣೆ, ವಿಶ್ಲೇಷಣೆ ಒಳಗೊಂಡಿರದಿರುವುದನ್ನು ನಾವು ಕಾಣಬಹುದು. ಮಹಿಳಾ ಅಭಿವೃದ್ಧಿ ಸಂಬಂಧಿಸಿದ ಚಟುವಟಿಕೆಗಳು, ಮುಖ್ಯವಾಗಿ ಅಭಿವೃದ್ಧಿಶೀಲ ದೇಶಗಳಲ್ಲಿ ಹೆಚ್ಚಾಗಿ ಧ್ವನಿ ಎತ್ತಲಿಲ್ಲ. ಇಂದಿನ ಜಾಗತೀಕರಣದಿಂದ ಮಹಿಳೆಯರ ಮೇಲೆ, ಅವರ ದೇಹದ ಮೇಲೆ ದುಷ್ಪರಿಣಾಮವೇ ಬೀರಿದೆ. 'ಮಹಿಳಾ ಅಭಿವೃದ್ಧಿ' ಎನ್ನುವಂತದ್ದು ಕೇವಲ ಆರ್ಥಿಕ ಸವಲತ್ತುಗಳನ್ನು ಒದಗಿಸುವುದರ ಮೂಲಕ ಆರಂಭಗೊಂಡಿತು. ಮತ್ತು ಅವರ ದೇಹ ಮತ್ತು ತಾಯ್ತನವನ್ನು ಮುಖ್ಯವಾಗಿ ಗುರುತಿಸಿಕೊಂಡಿತು. ಕೈಗಾರಿಕೆಯ ಬೆಳವಣಿಗೆ ಮಹಿಳೆಯರನ್ನು ನೆಲಕಚ್ಚುವಂತೆ ಮಾಡಿದರೂ ಕೂಡ ಕೈಗಾರಿಕಾ ಅಭಿವೃದ್ಧಿ ಮಹಿಳೆಯರನ್ನು ಮುಖ್ಯ ಅನುಭೋಗಿ ತಂತ್ರಗಳಾಗಿ ಬೆಳೆಸಿದರು. ಹೀಗಾಗಿ ಮಹಿಳಾ ಸಂಬಂಧಿತ ಅಭಿವೃದ್ಧಿ ಫಲಕಗಳು ಆರಂಭಗೊಂಡವು. ಆದರೆ ಮಹಿಳೆಯರ ಸೂಕ್ಷ್ಮಾತಿ ಸೂಕ್ಷ್ಮ ಸಂಗತಿಗಳನ್ನು ಆರಂಭದಿಂದಲೂ ಗುರುತಿಸಿಕೊಳ್ಳಲಾಗಿಲ್ಲ ಎಂಬುದನ್ನು ಕಾಣಬಹುದಾಗಿದೆ. Boutros Boutres, Ghali, U.N Secretory General ರವರು ಬೀಜಿಂಗ್‌ನಲಿ ನಡೆದ ಸಮ್ಮೇಳನದಲ್ಲಿ ಯಾವ ದೇಶದಲ್ಲಿಯೂ ಸ್ತ್ರೀ ಮತ್ತು ಪುರುಷ ಸಂಪೂರ್ಣವಾಗಿ ಸಮಾನತೆಯನ್ನು ಅನುಭವಿಸಲು ಸಾಧ್ಯವಾಗುತ್ತಿಲ್ಲ. ಅಂತಹ ದೇಶ ಯಾವುದು ಇಲ್ಲ ಎಂದು ಹೇಳುತ್ತಾರೆ. ಮುಂದುವರೆದು ನೋಡಿದಾಗ ೧೯೯೫ ರ ಸಮಾವೇಶದಲ್ಲಿ ಲಿಂಗತ್ವ ಮತ್ತು ಅಭಿವೃದ್ಧಿ ನಿರ್ದೇಶನವು ಸಹ ಮೇಲಿನ ಹೇಳಿಕೆಯಂತೆಯೇ "ಪುರುಷರು ಅನುಭವಿಸುವಂತಹ ಅವಕಾಶವನ್ನು ಮಹಿಳೆಯರು ಸನುಭವಿಸಲು ಯಾವ ಸಮಾಜವೂ ಒಪ್ಪುವುದಿಲ್ಲ ಎಂಬಂತಹ ಹೇಳಿಕೆಯನ್ನು ನೀಡೆದ್ದಾರೆ (ಹೆಚ್.ಡಿ.ಆರ್ ೧೯೯೫).

ಈ ಮೇಲಿನ ಹೇಳಿಕೆಗಳನ್ನು ನೋಡುವುದಾದರೆ, ಮಹಿಳಾ ಅಭಿವೃದ್ಧಿ ಸಮ್ಮೇಳನಗಳಲ್ಲಿಯೂ ಲಿಂಗ ಅಸಮಾನತೆ ಮತ್ತು ಮಹಿಳೆಯರ ಮೇಲಿನ ಲಿಂಗತ್ವ ದೌರ್ಜನ್ಯ ತಡೆಯಲು ಹಲವಾರು ಯೋಜನೆಗಳನ್ನು ಕಾರ್ಯಕ್ರಮಗಳನ್ನು ಸರ್ಕಾರ ಜಾರಿಗೊಳಿಸುತ್ತಿದ್ದು ಅದಕ್ಕೆ ತಕ್ಕ ಉದಾಹರಣೆಯಾಗಿ ಈ ಪಂಚವಾರ್ಷಿಕ ಯೋಜನೆಗಳಲ್ಲಿ ಜಾರಿಗೊಳಿಸಿದ ಮಹಿಳಾ ಸಂಬಂಧಿತ ಯೋಜನೆಗಳು. ಮಹಿಳಾ ಅಭಿವೃದ್ಧಿ ಕಾರ್ಯದಲ್ಲಿ ಸೈದ್ಧಾಂತಿಕತೆಯಲ್ಲಿ ಮಹಿಳಾ ಅಭಿವೃದ್ಧಿಗೆ ಪೂರಕವಾಗಿ ಹಲವಾರು ಹೋರಾಟಗಳು ಕಂಡುಬಂದಂತೆ ಕಾರ್ಯಕ್ರಮಗಳ ಅನುಷ್ಠನದಲ್ಲಿಯೂ ಕೂಡ ಹಲವಾರು ಮಹಿಳಾ ಗಹೋರಾಟಗಳನ್ನು ಕಾಣಬಹುದು. ಸರ್ಕಾರ ಕಾರ್ಯಕ್ರಮಗಲನ್ನು ಜಾರಿಗೆಗೊಳಿಸುತ್ತಿದೆ. ಅದರಲ್ಲೂ ಎರಡು ಸಂಗತಿಗಳನ್ನು ನಾವು ಕಾಣಬಹುದಾಗಿದೆ.

೧. ಯಾವುದಾದರೂ ಘಟನೆಗಳ ಆಧಾರದ ಮೇಲೆ ಯೋಜನೆಗಳನ್ನು ಜಾರಿಗೊಳಿಸುವುದು.

೨. ಯಾವುದಾದರೂ ಹೋರಾಟಗಳ ಪ್ರತಿಫಲವಾಗಿ ಯೋಜನೆಗಳನ್ನು ಜಾರಿಗೆಗೊಳಿಸುವುದು.

ಆರಂಭದಿಂದ ಇಂದಿನವರೆಗೂ ಮುಖ್ಯವಾಗಿ ಪರಿಗಣಿಸಬೇಕಾದಂತಹ ಸಂಗತಿ ಎಂದರೆ ಮಹಿಳಾ ಅಧ್ಯಯನ ಯೋಜನೆಗಳು ರೂಪಿಕೆಯ ರಾಜಕಾರಣ ಒಂದಾದರೆ ಯೋಜನೆಗಳಲ್ಲಿ ತೋರಿಸುವ, ಅನುಷ್ಠಾನಗೊಂಡಿರುವ ಸಂಗತಿ ಇನ್ನೊಂದೆಡೆ ಆದರೆ ಅದರ ಫಲಿತಗಳು ಪ್ರಶ್ನೆಗಳಾಗಿಯೇ ಇವೆ? ಆ ಸಂಗತಿಗಳನ್ನು ಈ ಅಧ್ಯಯನದಲ್ಲಿ ನೋಡಬಹುದಾಗಿದೆ. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಕಲ್ಯಾಣವಾದಿ ತಂತ್ರಗಳ

ಅಡಿಟಿಪ್ಪಣಿಗಳು

1. Dr. Sarala Gapalar(Ed), **National profile on Women Helath and Development country profile,** Pp.199-215
2. Ibid, Pp.217
3. Ibid, Pp.222-376

ಅಧ್ಯಾಯ ನಾಲ್ಕು

ಕ್ಷೇತ್ರಕಾರ್ಯ ವರದಿ

೪.೧. ಕ್ಷೇತ್ರಕಾರ್ಯ ವಿಧಾನ

೪.೨. ಮಾಹಿತಿ ಸಂಗ್ರಹಣೆ ವಿವರ

೪.೩. ವಿಶ್ಲೇಷಣಾ ವರದಿ

೪.೪. ಕ್ಷೇತ್ರಕರ್ಯ ಸಮೀಕ್ಷಾ ವರದಿಯ ಮೌಲ್ಯಮಾಪನ

೪.೫. ಉಪಸಂಹಾರ

ಅಧ್ಯಾಯ ನಾಲ್ಕು

ಕ್ಷೇತ್ರಕಾರ್ಯ ವರದಿ

ಕ್ಷೇತ್ರಕಾರ್ಯ ವರದಿ

ಸಮಾಜದ ಪ್ರತಿ ಮೂಲೆಯಲ್ಲೂ ಜನ ಸಮುದಾಯದ ಹೆಜ್ಜೆ ಗುರುತು ಕಂಡೇ ಕಾಣುತ್ತೇವೆ. ಹಾಗೆಯೇ ಸಮಾಜದ ಅಭಿವೃದ್ಧಿಗೆ ನೀತಿಗಳನ್ನು ರೂಪಿಸಿಕೊಳ್ಳುವುದು ಸರ್ವೇಸಾಮಾನ್ಯ. ವ್ಯವಸ್ಥಿತ ಯೋಜನಾಬದ್ಧ ಅಭಿವೃದ್ಧಿ ವ್ಯವಸ್ಥೆ, ಪ್ರಕ್ರಿಯೆ ಎಲ್ಲೆಡೆಯಲ್ಲಿಯೂ ಅತ್ಯವಶ್ಯಕ. ಈ ನಿಟ್ಟಿನಲ್ಲಿ ಸಮರ್ಪಕ ವ್ಯವಸ್ಥಿತ ಸಮಾಜ ನಿರ್ಮಾಣಕ್ಕೆ ಹಿಂದುಳಿದ ಕ್ಷೇತ್ರಗಳ ಆಯ್ಕೆ ಅತ್ಯವಶ್ಯಕ. ಅಧ್ಯಯನದ ಅನುಭವದ ಆಧಾರದ ಮೇಲೆ ಕ್ಷೇತ್ರಗಳ ಅಭಿವೃದ್ಧಿ ಸಾಧ್ಯ.

ಪ್ರಸ್ತುತ ಅಧ್ಯಯನದ ಆರಂಭದಲ್ಲಿ ಈಗಾಗಲೇ ತಿಳಿಸಿದಂತೆ ಮಹಿಳಾ ಅಧ್ಯಯನ ಯೋಜನೆಗಳಲ್ಲಿ ಆರಂಭದಿಂದಲೂ ಲಿಂಗಸಂಬಂಧಿ ಸಂಗತಿಗಳು ಮಹಿಳೆಯರನ್ನಾಗಿ ಗಂಭೀರವಾಗಿ ಪರಿಗಣಿಸಿಲ್ಲ. ಪರಿಗಣನೆಗೆ ತೆಗೆದುಕೊಂಡಿದ್ದರೂ ಕೂಡ ಮಹಿಳಾ ಸಮುದಾಯಕ್ಕೆ ಸಮರ್ಪಕ ನ್ಯಾಯ ಒದಗಿಸಲು ಸಾಧ್ಯವಾಗುತ್ತಿಲ್ಲ. ಮಹಿಳಾ ಸಂಬಂಧಿತ ಯೋಜನೆಗಳು, ಸಿದ್ಧ ಯೋಜನೆಗಳನ್ನು ರೂಪಿಸುವ ಸಿದ್ಧಾಂತಗಳು ಆ ಸಿದ್ಧಾಂತಗಳ ಪ್ರಮೇಯದಂತೆ ಕಾರ್ಯಗತಗೊಳ್ಳುತ್ತಿರುವ ಕಾರ್ಯಕ್ರಮಗಳು ಮೌಲ್ಯಮಾಪನ ವಿಧಾನ, ಎಲ್ಲವೂ ಅಪರಿಪೂರ್ಣತೆಯಿಂದ ಬಳಸುತ್ತಿವೆ. ಈ ನಿಟ್ಟಿನಲ್ಲಿ ಮಹಿಳಾ ಸಂಬಂಧಿತ ಸರ್ಕಾರಿ ಯೋಜನೆಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಮೌಲ್ಯಮಾಪನ ಮಾಡುವುದು ಪ್ರಸ್ತುತವಾಗಿ ಅತ್ಯವಶ್ಯಕ. ಅಧ್ಯಯನದ ಗುರಿ ಉದ್ದೇಶಗಳನ್ನು ಗುರುತಿಸಿಕೊಂಡು ಕ್ಷೇತ್ರಕಾರ್ಯದಲ್ಲಿ ಮೊದಲನೇ ಅಧ್ಯಾಯಕ್ಕೆ ಸಂಬಂಧಿಸಿದ ಅಭಿವೃದ್ಧಿ ಅಧ್ಯಯನದ ತಾತ್ವಿಕತೆ ಸಂಗತಿಯನ್ನು ಮುಂದಿಟ್ಟುಕೊಂಡು ಅಭಿವೃದ್ಧಿ ಪರಿಕಲ್ಪನೆಯನ್ನು, ತಾತ್ವಿಕತೆಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗಿದೆ. ಕ್ಷೇತ್ರಕಾರ್ಯದ ಮೂಲಕ ಅಭಿವೃದ್ಧಿ ತಾತ್ವಿಕತೆಯಲ್ಲಿ ಲೈಂಗಿಕ ವಾದದ ಮೌಲ್ಯಗಳು ಮಹಿಳಾ ಅಭಿವೃದ್ಧಿಗೆ, ವಿಧಾನಕ್ಕೆ ಅಡೆತೆ ಉಂಟುಮಾಡುತ್ತವೆ ಎಂಬುದನ್ನು ತಿಳಿಯಲು ಕ್ಷೇತ್ರಕಾರ್ಯ ಕೈಗೊಳ್ಳಲಾಯಿತು.

ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಮುಖವಾಗಿ ಗುರುತಿಸಿಕೊಂಡು ಅಧ್ಯಯನ ಮಾಡಲಾಗಿದೆ.

೧. ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳಲ್ಲಿ ಹಲವಾರು ಮೈಲಿಗಲ್ಲುಗಳು ಬಂದರೂ ಕೂಡ ಅಭಿವೃದ್ಧಿ ಎಂದರೇನು? ಯೋಜನೆಗಳು ಎಂದರೇನು? ಅವುಗಳಿಗೆ ಸಂಬಂಧಿಸಿದಂತೆ ಮಹಿಳೆಯರಿಗಿರುವ ಸವಲತ್ತುಗಳೇನು? ಮಹಿಳಾ ಸ್ಥಾನ ಮಾನಗಳ ಯಾವ ತಳಹದಿಯಲ್ಲಿ ಬದಲಾವಣೆಗೊಳ್ಳಬೇಕು? ಎಲ್ಲ ಮಾಹಿತಿಗಳ ಕೊರತೆ ಇಂದಿಗೂ ಕಂಡುಬರುತ್ತಿದೆ. ಮುಂದುವರೆದು ಸರ್ಕಾರಿ ಮಹಿಳಾ ಅಭಿವೃದ್ಧಿಯಲ್ಲಿ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳು ಯಾವುವು ಎಂಬುದರ ಮಾಹಿತಿ ಇಲ್ಲ. ಕೇವಲ ಕೆಲ ಮೂಲಭೂತ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ಯೋಜನೆಗಳ ಬಗೆಗೆ ಮಾಹಿತಿಗಳ ಅರಿವಿದ್ದೂ, ಅಲ್ಲಿಯೂ ಆಯಾ ಯೋಜನೆಗಳ ಅನುಸರಣೆ ಲಿಂಗಪಾತ್ರಗಳ ತಳಹದಿಯಲ್ಲಿಯೇ ಹಂಚಿಕೆಯಾಗಿವೆ? ಈ ಸಂಗತಿಗಳನ್ನು ತಿಳಿಯಲು ಪ್ರಯತ್ನಿಸಲಾಗಿದೆ. ಈ ಮೂಲಕ ಲಿಂಗಸಂಬಂಧಿ ಸಂಗತಿಗಳು ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳಲ್ಲಿ ಅಲ್ಲಿನ ಸೈದ್ಧಾಂತಿಕತೆಗೂ ಸಾಮಾನ್ಯ ಮಹಿಳಾ ಜೀವನಕ್ಕೂ ಏನೆಲ್ಲ ವ್ಯತ್ಯಾಸಗಳಿವೆ ಎಂಬುದನ್ನು ತಿಳಿಯಲು ಪ್ರಯತ್ನಿಸಲಾಗಿದೆ.

೨. ಎರಡನೆಯದಾಗಿ ಅಂಗನವಾಡಿ ಕರ್ಯಕರ್ತೆಯರು, ಪಂಚಾಯಿತ ಸದಸ್ಯರುಗಳು, ಅಧ್ಯಕ್ಷರುಗಳನ್ನು ಒಳಗೊಂಡು ಮಾಹಿತಿಗಳನ್ನು ಪಡೆಯಲು ಪ್ರಯತ್ನಿಸಲಾಗಿದೆ. ಈ ಹಂತದಲ್ಲಿ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳು ಅನುಷ್ಠಾನದಲ್ಲಿ, stake holders ಗಳಾಗಿ ಅವರ ಅನುಭವಗಳ ಮೂಲಕ ಯೋಜನೆಗಳ ಅನುಷ್ಠಾನದಲ್ಲಿನ ಸಮಸ್ಯೆಗಳನ್ನು ಲಿಂಗತ್ವದ ಸಂಗತಿಗಳು ಹೇಗೆ ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ವಿಶ್ಲೇಷಿಸಲಾಗಿದೆ.

೩. ಸರ್ಕಾರಿ ಕುಟುಂಬ ಯೋಜನೆಗಳ ಕಾರ್ಯಕ್ರಮಗಳಲ್ಲಿ ನೋವು ರಹಿತ ಸಂತಾನ ಹರಣ ಶಸ್ತ್ರ ಚಿಕಿತ್ಸೆಯನ್ನು ಮುಖ್ಯವಾಗಿ ಗುರುತಿಸಿ ಅದರ ಬಗೆಗಿನ ಮಾಹಿತಿಗಳನ್ನು ಕಲೆ ಹಾಕಲಾಗಿದೆ. ಈ ಮೂಲಕ ಕುಟುಂಬ ಯೋಜನೆಗಳಲ್ಲಿ ಪುರುಷ ಮತ್ತು ಮಹಿಳಾ ಸಂತಾನ ಹರಣ ಶಸ್ತ್ರಚಿಕಿತ್ಸೆಗಳಲ್ಲಿ ಯಾಕೆ ವ್ಯತ್ಯಾಸವಿದೆ? ಇಲ್ಲಿನ ವ್ಯತ್ಯಾಸಕ್ಕೆ ಲಿಂಗತ್ವದ ಸಂಗತಿಗಳು ಸ್ತ್ರೀತ್ವ ಪುರುಷತ್ವದ ಪಾತ್ರಗಳು ಹೇಗೆ ಮುಖ್ಯವಾಗಿವೆ. ಇಲ್ಲಿ ಪುರುಷ ಸಂಸ್ಕೃತಿ ಹೇಗೆ ಕಾರ್ಯನಿರ್ವಹಿಸುತ್ತಿದೆ. ಪುರುಷ / ಮಹಿಳೆಯಲ್ಲಿನ ಚಿಂತನೆಗಳು ಏನು? ಈ ಎಲ್ಲ ಸಂಗತಿಗಳನ್ನು ಅವಲೋಕಿಸಿ ಚರ್ಚಿಸಲಾಗುತ್ತಿದೆ. ಈ ಮೂಲಕ ನೋವುರಹಿತ ಪುರುಷ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೂ ಅದರ ವೈಫಲ್ಯಕ್ಕೆ ಮಹಿಳಾ ಸಂತಾನ ಹರಣ ಶಸ್ತ್ರ ಚಿಕಿತ್ಸೆಯ ಮುಂದಿರುವ ಸಾಧನಾ ಅಂಶಗಳೇನು ಸ್ತ್ರೀವಾದಿ ದೃಷ್ಟಿಕೋನದಿಂದ ಅಧ್ಯಯನ

ಮಾಡಲಾಗುತ್ತಿದೆ. ಮೌಲ್ಯಮಾಪನಾ ಸಂದರ್ಭದಲ್ಲಿ ಮಹಿಳಾ ಸಂಗತಿಗಳು ಲಿಂಗ ಸೂಕ್ಷ್ಮಸಂಗತಿಗಳು ಹೇಗೆ ಗೌಣವಾಗಿವೆ. ಯೋಜನೆಗಳ ಮೌಲ್ಯಮಾಪನದಲ್ಲಿ ಲಿಂಗಅಸಮಾನ ಎಳೆಗಳು ಕಂಡುಬರುತ್ತಿವೆ ಎಂಬುದನ್ನು ಚರ್ಚಿಸಲಾಗುತ್ತಿದೆ.

೪. ನೋವುರಹಿತ ಸಂತಾನ ಹರಣ / ಹಾಗೂ ಕುಟುಂಬ ಯೋಜನೆಗಳ ವಿಧಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಇರುವ ದೈಹಿಕ ತೊಂದರಗಳನ್ನು, ಮೂಡನಂಬಿಕೆಗಳನ್ನು ಹಾಗೂ ವೈದ್ಯಕೀಯ ಸಂಗತಿಗಳನ್ನು ಕಲೆ ಹಾಕಲು ಪ್ರಯತ್ನಿಲಾಗಿದೆ. ಈ ಮೂಲಕ ಮಹಿಳೆಯರು ಸಂತಾನ ತಡೆಯಲು ಕುಟುಂಬಯೋಜನೆಗಳನ್ನು ಅನುಸರಿಸುವುದಕ್ಕೂ ಪುರುಷರು ಅನುಸರಿಸುವುದಕ್ಕೂ, ಆಗುವ ದೈಹಿಕ ಆರೋಗ್ಯಿಕ ತೊಂದರೆಗಳನ್ನು ತಿಳಿಯಬೇಕಾಗಿದ್ದು, ಸೂಕ್ಷ್ಮವಾಗಿ ಗಮನಿಸಿದಾಗ ಪುರುಷರಲ್ಲಿನ ತಪ್ಪು ಗ್ರಹಿಕೆಗಳಿಗೆ, ಪುರುಷ ಪ್ರಧಾನ್ಯತೆಯೇ ಕಾರಣ ಎಂಬುದನ್ನು ತಿಳಿಯಲು ಪ್ರಯತ್ನಿಲಾಗಿದೆ. ಈ ಮುಲಕ ಪುರುಷ ಮತ್ತು ಮಹಿಳೆಯ ಭಾಗವಹಿಸುವಿಕೆ, ಯೋಜನೆಗಳಿಗೆ ಸಂಬಂಧಿಸುವಂತೆ ಇರುವ ಪ್ರಧಾನಧಾರೆಯ ಮೌಲ್ಯಗಳಿಂದ ಯೋಜನೆಗಳು ಹೇಗೆ ಅನುಷ್ಠಾನಗೊಳ್ಳುವಲ್ಲಿ ಲಿಂಗ ರಾಜಕಾರಣ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಅರಿಯುವುದಾಗಿದೆ.

ಮಹಿಳಾ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ ಪ್ರಕ್ರಿಯೆ ಹೊಸ ಹೊಸ ಪ್ರಮೇಯ ಸಿದ್ಧಾಂತಗಳನ್ನು ಹುಡುಕುತ್ತಲೇ ಇವೆ. ಆದರೂ ನಮ್ಮೆಲ್ಲರ ಮುಂದಿನ ಯಕ್ಷ ಪ್ರಶ್ನೆ ಮಹಿಳಾ ಅಭಿವೃದ್ಧಿಯ ಸಾಧನೆ ಆಗದಿರುವುದು. ಈ ನಿಟ್ಟಿನಲ್ಲಿ ಮಹಿಳಾ ಬದುಕಿನ ಸಮಸ್ಯೆಗಳಿಗೆ ಕಾರಣ ಹೊಸ ಹೊಸ ಆವಿಷ್ಕಾರಗಳಲ್ಲಿ, ಅಲ್ಲಿಯೇ ಹುದುಗಿಕೊಂಡಿರುವ ಸಮಸ್ಯೆಗಳ ಪರಿಹಾರ ಸಮಸ್ಯೆ ಕೇವಲ ಒಂದೆಯಾಗಿಲ್ಲ, ಪ್ರತಿ ಹಂತದಲ್ಲಿಯೂ ಇದೆ. ಯೋಜನಾ ವಿಧಾನದಲ್ಲಿ, ಚಿಂತಕರಲ್ಲಿ, ವೈಧಾನಿಕತೆ, ಸೈದ್ಧಾಂತಿಕತೆ ತಳಹದಿಯಲ್ಲಿ, ಕಾರ್ಯವಿಧಾನದಲ್ಲಿ, \ಮೌಲ್ಯಮಾಪನದಲ್ಲಿ, ಸಮಾಜದಲ್ಲಿ, ಪ್ರತಿ ಸಮುದಾಯದಲ್ಲಿ ಪ್ರತಿಯೊಂದರಲ್ಲೂ ಸಮಸ್ಯೆಗಳು ಇವೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕ್ಷೇತ್ರಕಾರ್ಯವನ್ನು ಮಾಡಲಾಗಿದೆ.

೪.೧ ಕ್ಷೇತ್ರಕಾರ್ಯ ವಿಧಾನ

ಈ ಸಂಶೋಧನೆಯ ಆರಂಭದಲ್ಲಿ ಉಲ್ಲೇಖಗೊಂಡಂತೆ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳಲ್ಲಿ ಆರಂಭದಿಂದಲೂ ಲಿಂಗಸಂಬಂಧಿ ಮೌಲ್ಯಗಳು ಮಹಿಳೆಯರನ್ನು ಅಭಿವೃದ್ಧಿ ಯೋಜನೆಗಳಿಂದ ದೂರವಿರಿಸುತ್ತಿದೆ. ಇಲ್ಲಿ ಯೋಜನೆಗಳಲ್ಲಿ ಮಾತ್ರವಲ್ಲ ಅಭಿವೃದ್ಧಿ ಸಿದ್ಧಾಂತಗಳಲ್ಲಿಯೂ ಸಮಸ್ಯೆ ಇದೆ. ಈ ಸಂಗತಿಯನ್ನು ಪ್ರಮುಖವಾಗಿ ಗುರ್ತಿಸಿಕೊಂಡು

ಸರ್ಕಾರಿ ಮಹಿಳಾ ಯೋಜನೆಗಳಲ್ಲಿನ ಸಮಸ್ಯೆಗಳನ್ನು ಗುರಿಗಳನ್ನು ಗುರುತಿಸಿಕೊಂಡು ಕ್ಷೇತ್ರಕಾರ್ಯದಲ್ಲಿ ಮೊದಲನೇ ಅಧ್ಯಯನಕ್ಕೆ ಸಂಬಂಧಿಸಿದಂತೆ ಸೈದ್ಧಾಂತಿಕ ಚೌಕಟ್ಟಿನಲ್ಲಿ ಅಂದರೆ ಅಭಿವೃದ್ಧಿಯ ತೌತ್ವಿಕತೆಯಲ್ಲಿ ಲೈಂಗಿಕತಾವಾದದ ಸಿದ್ಧಾಂತದ ಮೌಲ್ಯಗಳು ಇರುವುದರಿಂದ ಯೋಜನಾ ಕಾರ್ಯ ವಿಧಾನ ಮೌಲ್ಯಮಾಪನದಲ್ಲಿ ತೊಂದರೆಯಾಗುತ್ತಿದೆ ಎನ್ನುವ ಸಂಗತಿಯನ್ನು ಗುರ್ತಿಸಿ ಈ ಅಧ್ಯಯನಕ್ಕೆ ಪೂರಕವಾಗುವ ಒಂದು ಸಮೀಕ್ಷೆಯನ್ನು ಮಾಡಲಾಯಿತು. ಈ ಸಮೀಕ್ಷೆಯಲ್ಲಿ ಕೆಳಕಂಡ ಅಂಶಗಳನ್ನು ಪ್ರಮುಖವಾಗಿ ಗುರ್ತಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಮಾದರಿಗಳ ಆಯ್ಕೆ ವಿವರ

ಈ ಅಧ್ಯಯನದಲ್ಲಿ ಆಯ್ಕೆ ಮಾಡಲಾದ **ಮಾದರಿಗಳ** ಕ್ಷೇತ್ರಕಾರ್ಯಗಳಿಗೆ ಸಂಬಂಧಪಟ್ಟಂತೆ ಇಲ್ಲಿ ಮಾಹಿತಿದಾರರನ್ನು

೧. ಎನ್.ಎಸ್.ವಿ.ಯೋಜನೆಗಾಗಿ ೫೦ ಜನ ವೈದ್ಯರು ಮತ್ತು ೨೦೦ ಮಂದಿ ಸಾಮಾನ್ಯ ಸ್ತ್ರೀ–ಪುರುಷರು.

೨. ಪಂಚಾಯತ್ ಯೋಜನೆಗಾಗಿ ೫೦ ಮಂದಿ ಸಾಮಾನ್ಯ ಸ್ತ್ರೀ–ಪುರುಷರು.

೩. ಸರ್ಕಾರಿ ಸಾಮಾನ್ಯ ಮಹಿಳಾ ಪರ ಯೋಜನೆಗಳ ಬಗ್ಗೆ ವಿವರಿಸಿದವರು. ೫೦ ಮಂದಿ ಅಂಗನವಾಡಿ ಕಾರ್ಯಕರ್ತರು ಮತ್ತು ೨೦೦ ಮಂದಿ ಸಾಮಾನ್ಯ ಸ್ತ್ರೀ–ಪುರುಷರು.

೪. ಇವರಲ್ಲಿ ಒಟ್ಟು ಸ್ತ್ರೀಯರು ೪೩೮

೫. ಒಟ್ಟು ಪುರುಷರು ೧೧೨

೬. ಒಟ್ಟು ಮುಸ್ಲಿಂರು ೯೭

೭. ಒಟ್ಟು ಮೇಲ್ವರ್ಗದವರು ೧೫೮

೮. ಒಟ್ಟು ಮಧ್ಯಮವರ್ಗದವರು ೧೨೪

೯. ಒಟ್ಟು ಕೆಳವರ್ಗದವರು ೨೦೮

೧೦. ೧೦೦೦ದಿಂದ ೫೦೦೦ದ ವರೆಗೆ ಸಂಬಳ ಪಡೆಯುವವರು ೧೬೬

೧೧. ೫೦೦೦ದಿಂದ ೧೦,೦೦೦ದವರೆಗೆ ಸಂಬಳ ಪಡೆಯುವವರು ೨೪೯

೧೨. ೧೦,೦೦೦ಕ್ಕಿಂತ ಮೇಲ್ಪಟ್ಟು ಸಂಬಳ ಪಡೆಯುವವರು ೧೩೫

೪.೨ ಮಾಹಿತಿ ಸಂಗ್ರಹಣೆ ವಿವರ

ಈ ಅಧ್ಯಯನದ ಸಮೀಕ್ಷಾ ವರದಿಯನ್ನು ಕೊಪ್ಪಳ ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ನಡೆಸಲಾಗಿದೆ. 'ಎನ್‌ಎಸ್‌ವಿ'ಬಗೆಗಿನ ಮಾಹಿತಿಯನ್ನು ಗಂಗಾವತಿ ಮತ್ತು ಆನೆಗುಂಡಿ ಸುತ್ತಮುತ್ತಲಿನ ಪ್ರದೇಶಗಳಿಂದ ಪಡೆಯಲಾಗಿದೆ.

ಮಾಹಿತಿ ಸಂಗ್ರಹಣೆಗಾಗಿ ನಿರ್ಮಿಸಿದ ನಿರೂಪಣೆ(ಪ್ರಶ್ನಾವಳಿ)

ವೈದ್ಯರು, ಅಂಗನವಾಡಿ ಕಾರ್ಯಕರ್ತರು, ಸಾಮಾನ್ಯ ಸ್ತ್ರೀ-ಪುರುಷರನ್ನು ಗಮನದಲ್ಲಿರಿಸಿಕೊಂಡು ತಲಾ ೧೦ ರಿಂದ ೧೧ ಪ್ರಶ್ನೆಗಳಿರುವ ಪ್ರತ್ಯೇಕ ಪ್ರಶ್ನಾವಳಿಯನ್ನು ಎಲ್ಲರಿಗೂ ನೀಡಿ ಪ್ರತಿ ಪ್ರಶ್ನೆಯನ್ನು ಓದಿ ಅದರ ಮುಂದೆ ಕೊಟ್ಟಿರುವ ಆಯ್ಕೆಗಳಾದ 'ಹೌದು', 'ಇಲ್ಲ' ಇವುಗಳ ಮುಂದೆ ' ' ಚಿಹ್ನೆಯನ್ನು ಹಾಕುವುದರ ಮೂಲಕ ಅವರ ಉತ್ತರವನ್ನು ತಿಳಿಸಬೇಕಿದೆ. ಪ್ರತಿ ಪ್ರಶ್ನೆಯಲ್ಲಿಯೂ ಇದೇ ರೀತಿಯ ಆಯ್ಕೆಗಳಿದ್ದು ಅವುಗಳ ಮುಂದೆ ಮಾಹಿತಿದಾರರು ತಮ್ಮ ಉತ್ತರವನ್ನು ನಮೂದಿಸಬೇಕಾಗಿದೆ. ಈ ಪ್ರಶ್ನಾವಳಿಯ ಉತ್ತರದ ಮೂಲಕ ಮಾಹಿತಿಯನ್ನು ಪಡೆಯುವುದಾಗಿದೆ.

ಪ್ರಶ್ನಾವಳಿ ವಿಧಾನ: ೧. ಕೌಟುಂಬಿಕ ಪ್ರಶ್ನಾವಳಿ, ೨. ವೈವಾಹಿಕ ಪ್ರಶ್ನಾವಳಿ ೩. ಆಮಾಹಿತಿ ಪ್ರಶ್ನಾವಳಿ.

ಮಾದರಿಗಳ ಆಯ್ಕೆ ವಿವರ: ಪ್ರಸ್ತುತ ಅಧ್ಯಯನದಲ್ಲಿ ಬಹು ಹಂತದ ಪ್ರಾರಂಭಿಕ ಕ್ಷೇತ್ರ ವ್ಯವಸ್ಥಿತ ಮಾದರಿ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಡಿಎಲ್‌ಎಚ್‌ಎಸ್-೩ ಅಂಕಿ ಅಂಶಗಳ ಮಾದರಿಯನ್ನು ಬಳಸಲಾಗಿದೆ. ೫೦ ಪ್ರಾಥಮಿಕ ಮಾದರಿ ಘಟಕಗಳಾಗಿ ಗುರುತಿಸಿಕೊಳ್ಳಲಾಗಿದೆ.

ಪ್ರಶ್ನಾವಳಿ: ಮಾಹಿತಿ ಸಂಗ್ರಹಣೆಗಾಗಿ ಪ್ರಮುಖವಾಗಿ ಪ್ರಶ್ನಾವಳಿಯನ್ನು ಬಳಸಲಾಗಿದ್ದು, ಅನಕ್ಷರಸ್ಥ ಮಾದರಿಗಳನ್ನು ಖುದ್ದಾಗಿ ಕೇಳಿ ಮಾಹಿತಿಯನ್ನು ಪಡೆಯುವುದಾಗಿದೆ. ಈ ಮೂಲಕ ಹೆಚ್ಚು ನೈಜ ಮಾಹಿತಿಯನ್ನು ಪಡೆಯಲು ಪ್ರಯತ್ನಿಸಲಾಗಿದೆ.

ದತ್ತಾಂಶಗಳ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ: ಈ ಅಧ್ಯಯನದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ವಿವರವಾಗಿ ವಿಶ್ಲೇಷಣೆ ಮಾಡಲಾಗಿದೆ. ಸಂಗ್ರಹಿಸಿದ ಮಾಹಿತಿಯನ್ನು ಸ್ತ್ರೀವಾದಿ ಸಂಶೋಧನಾ ವಿಧಾನದ ಮೂಲಕ ತುಲನಾತ್ಮಕವಾಗಿ ವಿಶ್ಲೇಷಿಸಲಾಗಿದೆ. ಸ್ವೀಕರಿಸಿದ ಮಾಹಿತಿಗಳು ಅಧ್ಯಯನಕ್ಕೆ ಪೂರಕವಾಗಿದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸಿ ಈ ಮೂಲಕ ಇದೇ ಅಧ್ಯಯನಕ್ಕೆ ಪುಷ್ಟಿ ನೀಡುವುದಾಗಿದೆ.

ಕ್ರ.ಸಂ.	ಆಯ್ಕೆಗಳು	ಪುರುಷ	ಮಹಿಳೆ	ಹಿಂದು	ಮುಸ್ಲಿಂ	ಮೇಲ್ವರ್ಗ	ಮಧ್ಯಮ	ಕೆಳವರ್ಗ	೫೦೦೦	೫೦೦೦	೧೦೦೦೦
೧	೨೦೦	೬೫	೧೩೫	೧೮೬	೧೪	೭೦	೩೬	೯೪	೫೮	೮೯	೫೩
೨	೫೦ ವೈದ್ಯರು	೧೯	೩೧	೩೨	೧೮	೧೯	೧೧	೨೦	–	–	೫೦
೩	೫೦ಪಂಚಾಯತ್	೦೮	೪೨	೩೭	೧೩	೧೬	೧೧	೨೩	೨೨	೨೯	೦೮
೪	೨೦೦ಸಾಮಾನ್ಯ ಜನರು	೨೦	೧೮೦	೧೬೧	೩೯	೪೪	೪೭	೧೦೯	೫೪	೧೨೨	೨೪
೫	೫೦ ಅಂಗನವಾಡಿ ಕಾರ್ಯಕರ್ತರು	೦	೫೦	೩೭	೧೩	೦೯	೧೯	೨೨	೩೨	೧೮	–
	ಒಟ್ಟು	೧೧೨	೪೩೮	೪೫೩	೯೭	೧೫೮	೧೨೪	೨೬೮	೧೬೬	೨೪೯	೧೩೫

ಅಭಿವೃದ್ಧಿ ಬಗ್ಗೆ ೨೦೦ ಮಾದರಿಗಳು ಸಾಮಾನ್ಯ ಸ್ತ್ರೀ–ಪುರುಷರಿಗೆ ಕೇಳಲಾದ ಪ್ರಶ್ನೆಗಳು.

ಕೋಷ್ಟಕ ೧

೧. ನಿಮ್ಮ ಪ್ರಕಾರ ಅಭಿವೃದ್ಧಿ ಎಂದರೇನು?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಸಾಮಾಜಿಕ	೪೧	೨೩	೦೭	೩೫
೨	ಆರ್ಥಿಕ	೯೯	೫೫	೧೧	೫೫
೩	ಸರ್ವೋತೂಮುಖ	೪೦	೨೨	೦೨	೧೦
	ಒಟ್ಟು	೧೮೦	೧೦೦	೨೦	೧೦೦

'ಅಭಿವೃದ್ಧಿ' ಪರಿಕಲ್ಪನೆಯ ಬಗೆಗೆ ಸಮುದಾಯದಲ್ಲಿ ಜನ ಸಾಮಾನ್ಯರಲ್ಲಿ (ಸ್ತ್ರೀ–ಪುರುಷ) ಎಷ್ಟರಮಟ್ಟಿಗೆ ಮಾಹಿತಿಯನ್ನು ಹೊಂದಿದ್ದಾರೆ. ಅವರ ಚಿಂತನಾ ಕ್ರಮದಲ್ಲಿ ಅಭಿವೃದ್ಧಿ ಪ್ರಕ್ರಿಯೆ ಎಂದರೇನು ಎಂಬುದನ್ನು ತಿಳಿಯಲು ಯತ್ನಿಸಲಾಗಿದೆ. ಸಾಮಾಜಿಕ, ಆರ್ಥಿಕ, ಸ್ಥಾನಮಾನದ ನೆಲೆಯಲ್ಲಿ, ಅವರ ಶೈಕ್ಷಣಿಕ ಸ್ಥಿತಿಗತಿಯ ಹಿನ್ನೆಲೆಯಲ್ಲಿ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ.

ಕೋಷ್ಟಕ ೧ರ ಅಂಕಿ ಅಂಶಗಳನ್ನು ನೋಡಿದಾಗ ನಿಮ್ಮ ಪ್ರಕಾರ ಅಭಿವೃದ್ಧಿ ಎಂದರೇನು? ಎಂಬ ಪ್ರಶ್ನೆಗೆ ಶೇ.೨೩%ರಷ್ಟು ಮಹಿಳೆಯರು ಸಾಮಾಜಿಕ ಅಭಿವೃದ್ಧಿ ಎಂದರು, ಶೇ.೨೨% ರಷ್ಟು

ಮಂದಿ ಮಹಿಳೆಯರು ಸರ್ವತೋಮುಖ ಅಭಿವೃದ್ಧಿ ಎಂದರು, ಉಳಿದ ೫೫% ಮಂದಿ ಆರ್ಥಿಕ ಅಭಿವೃದ್ಧಿ ಎಂದರು. ಪುರುಷರಿಗೂ ಇದೇ ಪ್ರಶ್ನೆಯನ್ನು ಕೇಳಿದಾಗ ೫೫% ರಷ್ಟು ಮಂದಿ ಅಭಿವೃದ್ಧಿ ಎಂದರೆ ಆರ್ಥಿಕ ಅಭಿವೃದ್ಧಿ ಎಂದು, ೩೫% ಮಂದಿ ಸಾಮಾಜಿಕ ಅಭಿವೃದ್ಧಿ ಎಂದೂ, ಉಳಿದ ೧೦%ರಷ್ಟು ಮಂದಿ ಪುರುಷರು ಸರ್ವತೋಮುಖ ಎಂದು ಅಭಿಪ್ರಾಯಪಟ್ಟರು. ಇಲ್ಲಿ ಸ್ತ್ರೀ–ಪುರುಷರಿಬ್ಬರೂ ಸಹ ಅಭಿವೃದ್ಧಿ ಎಂದರೆ 'ಆರ್ಥಿಕ' ಅಭಿವೃದ್ಧಿ ಎಂದು ಉತ್ತರಿಸಿದರೆ ಸಾಮಾನ್ಯವಾಗಿ ಅಭಿವೃದ್ಧಿ ಎಂದರೆ ಸರ್ವತೋಮುಖವಾಗಿ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿಯಾಗುವಂತಹ ಪರಿಕಲ್ಪನೆಯ ಬಗೆಗೆ ಸಾರ್ವಜನಿಕರಲ್ಲಿ ಗೊಂದಲವಿದ್ದು ಯಾರಿಗೂ ಈ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ. ಆದ್ದರಿಂದಾಗಿ ಜನರಿಗೆ ಅಭಿವೃದ್ಧಿ ಪರಿಕಲ್ಪನೆಯ ಬಗ್ಗೆ ಸರ್ಕಾರವು ಸರಿಯಾದ ತಿಳುವಳಿಕೆ ನೀಡಬೇಕು.

ಕೋಷ್ಟಕ ೨

೨. ಸರ್ಕಾರಿ ಯೋಜನೆಗಳನ್ನು ಮಹಿಳೆಯರಿಗೆ ಮತ್ತು ಪುರಷರಿಬ್ಬರಿಗೂ ಭಿನ್ನವಾಗಿ ರೂಪಿಸಬೇಕೆಂದು ನಿಮಗನ್ನಿಸುತ್ತದೆಯೇ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೪೨	೨೩	೦೩	೧೫
೨	ಇಲ್ಲ	೫೫	೩೧	೦೮	೪೦
೩	ಇಬ್ಬರು ಒಂದೆ	೮೩	೪೬	೦೯	೪೫
	ಒಟ್ಟು	೧೮೦	೧೦೦	೨೦	೧೦೦

ಕೋಷ್ಟಕ ೨ರ ಪ್ರಕಾರ ಸರ್ಕಾರಿ ಯೋಜನೆಗಲನ್ನು ಮಹಿಳೆಯರಿಗೆ ಮತ್ತು ಪುರಷರಿಬ್ಬರಿಗೂ ಭಿನ್ನವಾಗಿ ರೂಢಿಸಬೇಕೆಂದು ಶೇ.೨೫ರಷ್ಟು ಮಹಿಳೆಯರು ಹೇಳುತ್ತಾರೆ. ಶೇ.೩೧ರಷ್ಟು ಮಂದಿ ಬೇಡವೆನ್ನುತ್ತಾರೆ. ಇನ್ನುಳಿದ ಶೇ.೪೬ ಮಂದಿ ಇಬ್ಬರಿಗೂ ಒಂದೇ ರೀತಿಯ ಯೋಜನೆಗಳನ್ನು ರೂಪಿಸಬೇಕೆನ್ನುತ್ತಾರೆ. ಇನ್ನು ಪುರುಷರ ಅಂಕಿ ಅಂಶಗಳನ್ನು ನೋಡಿದಾಗ ಶೇ.೧೫ರಷ್ಟು ಪುರುಷರು ಸ್ತ್ರೀ–ಪುರುಷರಿಬ್ಬರಿಗೂ ಭಿನ್ನವಾದ ಯೋಜನೆಗಳನ್ನು ರೂಪಿಸಬೇಕೆನ್ನುತ್ತಾರೆ. ಶೇ.೪೦ರಷ್ಟು ಪುರುಷರು ಭಿನ್ನವಾದ ಯೋಜನೆಗಳನ್ನು ವಿರೋಧಿಸುತ್ತಾರೆ. ಮತ್ತು ಶೇ.೪೫ರಷ್ಟು ಪುರುಷರು ಸ್ತ್ರೀ–ಪುರುಷರಿಬ್ಬರಿಗೂ ಒಂದೇ ಸಮನಾದ ಯೋಜನೆಗಳನ್ನು ರೂಪಿಸಬೇಕೆನ್ನುತ್ತಾರೆ. ವಾಸ್ತವವಾಗಿ ಸ್ತ್ರೀಯರಿಗೆ ಪ್ರತ್ಯೇಕವಾದಂತಹ ಯೋಜನೆಗಳ ಅವಶ್ಯಕತೆ ಇದೆ. ಆದರೆ ಸ್ತ್ರೀಯರಿಗೇ ಈ ವಿಷಯವಾಗಿ

ತಮ್ಮ ಅಗತ್ಯಗಳ, ಬೇಕು ಬೇಡಗಳ ನಡುವೆ ಗೊಂದಲವಿದೆ. ಆದಕಾರಣ ಶೇ.೩೧ರಷ್ಟು ಮಹಿಳೆಯರು ತಮಗೆ ಭಿನ್ನವಾದ ಯೋಜನೆಗಳ ಅವಶ್ಯಕತೆ ಇಲ್ಲ ಎಂದಿದ್ದಾರೆ. ಅಭಿವೃದ್ಧಿ ಪರಿಕಲ್ಪನೆಯಲ್ಲಿನ ಗೊಂದಲ, ಯೋಜನೆಗಳನ್ನು ಮಾಡುವಲ್ಲಿರುವ ತೊಂದರೆಗಳಿಂದ ಹಾಗೂ ಜನ ಸಾಮಾನ್ಯರಿಗೆ ಸರ್ಕಾರಿ ಅಭಿವೃದ್ಧಿ ಯೋಜನೆಗಳ ಬಗ್ಗೆ ಮಾಹಿತಿಯ ಕೊರತೆ ಇರುವುದರಿಂದ ತಮಗೆ ಬರಬೇಕಾದ ವಿಶೇಷ ಸೌಲಭ್ಯಗಳಿಗೆ ವ್ಯಕ್ತಪಡಿಸುತ್ತಿದ್ದಾರೆ. ಇಲ್ಲಿ ಮುಖ್ಯವಾಗಿ ಮಹಿಳಾ ಸಮಸ್ಯೆಗಳ ಬಗ್ಗೆ ಸಮಾಜದಲ್ಲಿ ಕಾಳಜಿ ಇಲ್ಲದಿರುವುದರಿಂದಾಗಿ ಮಹಿಳಾ ಸಮಸ್ಯೆಗಳಿಗೆ ಸೂಕ್ತವಾಗಿ ಸ್ಪಂದಿಸುವ ವಿಶೇಷ ಮಹಿಳಾ ಅಭಿವೃದ್ಧಿ ಯೋಜನೆಗಳ ಕೊರತೆಯುಂಟಾಗಿದೆ.

ಕೋಷ್ಟಕ ೩

ಸರ್ಕಾರಿ ಯೋಜನೆಗಳಲ್ಲಿ ಮಹಿಳೆಯರು ಮುಕ್ತರಾಗಿ ಭಾಗವಹಿಸಿ ಯೋಜನೆಗಳ ಯಶಸ್ಸಿಗೆ ಕಾರಣವಾಗುತ್ತಿದ್ದಾರೆಯೇ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೪೨	೨೩	೦೩	೧೦
೨	ಇಲ್ಲ	೭೦	೩೯	೧೪	೭೦
೩	ಕಂಡುಬಂದಿಲ್ಲ	೬೮	೩೮	೦೪	೨೦
	ಒಟ್ಟು	೧೮೦	೧೦೦	೨೧	೧೦೦

ಕೋಷ್ಟಕ ೩ರ ಪ್ರಕಾರ ಸರ್ಕಾರಿ ಯೋಜನೆಗಳಲ್ಲಿ ಮಹಿಳೆಯರು ಮುಕ್ತವಾಗಿ ಭಾಗವಹಿಸಿ ಯಶಸ್ಸಿಗೆ ಕಾರಣವಾಗುತ್ತಿದ್ದಾರೆಂದು ಶೇ.೨೩ರಷ್ಟು ಮಹಿಳೆಯರು ಒಪ್ಪಿಕೊಂಡಿರುತ್ತಾರೆ. ಇನ್ನುಳಿದ ಶೆ.೩೯ರಷ್ಟು ಮಹಿಳೆಯರು ಇದನ್ನು ಒಪ್ಪುವುದಿಲ್ಲ. ಮತ್ತು ಶೇ.೩೮ರಷ್ಟು ಮಹಿಳೆಯರು ಇದು ಕಂಡುಬಂದಿಲ್ಲ ಎಂದು ಹೇಳುತ್ತಾರೆ. ಇನ್ನು ಪುರುಷರ ಫಲಿತಾಂಶಗಳನ್ನು ಗಮನಿಸಿದಾಗ ಶೇ.೧೦ರಷ್ಟು ಪುರುಷರ ಪ್ರಕಾರ ಮಹಿಳೆಯರು ಸರ್ಕಾರಿ ಯೋಜನೆಗಳಲ್ಲಿ ಮುಕ್ತವಾಗಿ ಭಾಗವಹಿಸಿ ಯಶಸ್ಸಿಗೆ ಕಾರಣರಾಗುತ್ತಿದ್ದಾರೆ ಎಂದಿದ್ದಾರೆ. ಶೇ.೭೦ರಷ್ಟು ಪುರಷರು ಮಹಿಳೆಯರು ಯಶಸ್ವಿಯಾಗಿ ಕಾರಣರಾಗುತ್ತಿದ್ದಾರೆ ಎಂದಿದ್ದಾರೆ. ಶೇ.೭೦ರಷ್ಟು ಪುರುಷರು ಮಹಿಳೆಯರುಯ ಯಶಸ್ವಿಯಾಗಿ ಯೋಜನೆಗಳಲ್ಲಿ ಭಾಗವಹಿಸುತ್ತಿಲ್ಲ ಎಂದಿದ್ದಾರೆ. ಇನ್ನುಳಿದ ಶೇ.೨೦ರಷ್ಟು ಪುರುಷರು ತಮಗೆ ಏನೂ ಕಂಡುಬಂದಿಲ್ಲ ಎಂದಿದ್ದಾರೆ. ವಾಸ್ತವವಾಗಿ ಸರ್ಕಾರಿ ಯೋಜನೆಗಳಲ್ಲಿ ಸ್ತ್ರೀಯರು ಮುಕ್ತವಾಗಿ ಭಾಗವಹಿಸುತ್ತಿಲ್ಲ. ಏಕೆಂದರೆ ಕೌಟುಂಬಿಕ ಒತ್ತಡಗಳಿಂದ, ಲಿಂಗ ಪೂರ್ವಗ್ರಹಗಳಿಂದ ಸ್ತ್ರೀಯರು

ಯೋಜನೆಗಳಲ್ಲಿ ಭಾಗವಹಿಸುತ್ತಿಲ್ಲ. ಸ್ತ್ರೀಯರಿಗೆ ತಮ್ಮ ಬೇಡಿಕೆ ಅಭಿಪ್ರಾಯಗಳನ್ನು ಮಂಡಿಸಿ ಅದನ್ನು ಸಾಕಾರಗೊಳಿಸಿಕೊಳ್ಳಬೇಕೆಂಬ ಬಯಕೆಯಿದ್ದರೂ ಕೂಡ ಸರ್ಕಾರಿ ಯೋಜನೆಗಳಲ್ಲಿ ಅವರು ಭಾಗವಹಿಸುವಂತಿಲ್ಲ. ಸರ್ಕಾರಿ ಯೋಜನೆಗಳ ಬಗ್ಗೆ ಅವರಿಗೆ ಸೂಕ್ತ ಮಾಹಿತಿ ಇಲ್ಲದಿರುವುದರಿಂದ ಅವರು ಯೋಜನೆಗಳಲ್ಲಿ ಭಾಗವಹಿಸದಂತೆ ನಿರ್ಬಂಧ ಹೇರುತ್ತಿದ್ದಾರೆ. ಹಾಗಾಗಿ ಸ್ತ್ರೀಯರು ಮುಕ್ತವಾಗಿ ಯೋಜನೆಗಳಲ್ಲಿ ಭಾಗವಹಿಸುವಂತಿಲ್ಲ.

ಕೋಷ್ಟಕ ೪

೪. ನಿಮ್ಮ ಪ್ರಕಾರ ಇಂದಿಗೂ ಲಿಂಗತ್ವ ಸಾಮಾಜಿಕ ಸಮಸ್ಯೆಗಳು ಜಾರಿಯಲ್ಲಿವೆಯೇ? ಮತ್ತು ಇದಕ್ಕೆ ಸರ್ಕಾರದ ಯೋಜನಾ ನೀತಿಯಲ್ಲಿ ತೊಂದರೆ ಇದೆ ಎಂದೆನಿಸುತ್ತಿದೆಯೇ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೧೧೨	೬೨	೧೬	೮೦
೨	ಇಲ್ಲ	೬೮	೩೮	೦೪	೨೦
ಒಟ್ಟು		೧೮೦	೧೦೦	೨೦	೧೦೦

ಕೋಷ್ಟಕ ೪ರ ಪ್ರಕಾರ ಇಂದಿಗೂ ಲಿಂಗತ್ವ ಸಾಮಾಜಿಕ ಸಮಸ್ಯೆಗಳಿವೆ ಮತ್ತು ಇದಕ್ಕೆ ಸರ್ಕಾರದ ಯೋಜನಾ ನೀತಿಯಲ್ಲಿರುವ ತೊಂದರೆಗಳೇ ಕಾರಣ ಎಂದು ಶೇ.೬೨ ಮಂದಿ ಸ್ತ್ರೀಯರು ಒಪ್ಪಿಕೊಂಡರೆ ಶೇ.೮೩ರಷ್ಟು ಇದನ್ನು ಒಪ್ಪುವುದಿಲ್ಲ. ಇನ್ನು ಶೇ.೮೦ರಷ್ಟು ಪುರುಷರು ಲಿಂಗತ್ವ ಸಾಮಾಜಿಕ ಸಮಸ್ಯೆಗಳು ಇಂದಿಗೂ ಜಾರಿಯಲ್ಲಿವೆ. ಮತ್ತು ಸರ್ಕಾರದ ಬೋಜನಾ ನೀತಿಯಲ್ಲಿ ತೊಂದರೆ ಇದೆ ಎಂದು ಒಪ್ಪುತ್ತಾರೆ. ಆದರೆ ಶೇ.೨೦ರಷ್ಟು ಮಂದಿ ಇಲ್ಲ ಎನ್ನುತ್ತಾರೆ.

ವಾಸ್ತವವಾಗಿ ಇಂದಿಗೂ ಕೂಡ ಲಿಂಗತ್ವ ಸಾಮಾಜಿಕ ಸಮಸ್ಯೆಗಳು ಜಾರಿಯಲ್ಲಿವೆ. ಇದಕ್ಕೆ ಸರ್ಕಾರದ ಯೋಜನಾ ನೀತಿಯಲ್ಲಿರುವ ತೊಂದರೆಗಳೇ ಮುಖ್ಯ ಕಾರಣವಾಗಿದೆ. ಏಕೆಂದರೆ ಸರ್ಕಾರವು ಮತ್ತು ಅದರ ಯೋಜನೆಗಳು ಪುರುಷ ಪ್ರಧಾನ ಮೌಲ್ಯಗಳಿಂದ ಕೂಡಿದ್ದು ಯೊಜನೆಗಳನ್ನು ಜಾರಿಗೊಳಿಸುವಾಗ ಸ್ತ್ರೀಪರ ಕಾಳಜಿಯನ್ನು ಹೊಂದಿರುವುದಿಲ್ಲ. ಹೀಗಾಗಿ ಇಂದಿಗೂ ಸಮಾಜದಲ್ಲಿ ಲಿಂಗತ್ವ ಸಮಸ್ಯೆಗಳು ಜಾರಿಯಲ್ಲಿವೆ. ಇಲ್ಲಿ ಶೇ.೮೦ರಷ್ಟು ಪುರುಷರು ಇದನ್ನು ಒಪ್ಪಿಕೊಂಡಿದ್ದಾರೆ. ಆದರೆ ಅದನ್ನು ನಿವಾರಿಸಲು ಸರ್ಕಾರ ತೆಗೆದುಕೊಳ್ಳುವ ನಿರ್ಧಾರದ ಹಿಂದೆ ಪುರುಷ ಪ್ರಾಬಲ್ಯವಿರುತ್ತದೆ. ಹೀಗಾಗಿ ಲಿಂಗತ್ವ ಸಮಸ್ಯೆಗಳು ಇನ್ನಷ್ಟು ಜಟಿಲವಾಗುತ್ತಾ ಬರುತ್ತವೆ. ಯೋಜನೆಗಳ ಮೌಲ್ಯಮಾಪನದ ಸಂದರ್ಭದಲ್ಲಿ ಸಮಸ್ಯೆಗಳುಂಟಾಗುತ್ತವೆ.

ಕೊಷ್ಟಕ ೫

೫. ಮಹಿಳೆಯರು ಸ್ವತಂತ್ರವಾಗಿ ಘನತೆಯಿಂದ ಸಾಮಾಜಿ ಜೀವನ ನಡೆಸಲು ಯೋಜನೆಗಳು ಜವಾಬ್ದಾರಿಗಳೇ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೧೦೯	೬೦	೧೨	೬೦
೨	ಇಲ್ಲ	೭೨	೪೦	೦೯	೪೦
	ಒಟ್ಟು	೧೮೦	೧೦೦	೨೦	೧೦೦

ಕೋಷ್ಠಕ ೫ರ ಪ್ರಕಾರ ಮಹಿಳೆಯರು ಸ್ವತಂತ್ರವಾಗಿ ಘಟನೆಯಿಂದ ಸುರಕ್ಷಿತ ಸಾಮಾಜಿಕ ಜೀವನವನ್ನು ನಡೆಸಲು ಸರ್ಕಾರದ ಯೋಜನೆಗಳ ಜವಾಬ್ದಾರಿಗಳು ಹೆಚ್ಚಾಗಬೇಕೆಂದು ಶೇ.೬೦ರಷ್ಟು ಸ್ತ್ರೀ ಪುರುಷರಿಬ್ಬರೂ ಒಪ್ಪುತ್ತಾರೆ. ಇದರ ಅವಶ್ಯಕತೆ ಇಲ್ಲವೆಂದು ಶೇ.೪೦ ರಷ್ಟು ಸ್ತ್ರೀ–ಪುರುಷರಿಬ್ಬರೂ ಹೇಳುತ್ತಾರೆ.

ವಾಸ್ತವವಾಗಿ ಮಹಿಳೆಯರು ಸ್ವತಂತ್ರವಾಗಿ ಘನತೆಯಿಂದ ಸುರಕ್ಷಿತ ಸಾಮಾಜಿಕ ಜೀವನವನ್ನು ನಡೆಸಲು ಸರ್ಕಾರದ ಯೋಜನೆಗಳ ಜವಾಬ್ದಾರಿಗಳು ಹೆಚ್ಚಾಗಬೇಕು. ಆದರೆ ಇಂದು ಪಿತೃ ಪ್ರಧಾನ ಮೌಲ್ಯಗಳಿಂದ ತುಂಬಿದ ಯೋಜನೆಗಳು ಸ್ತ್ರೀಯರಿಗೆ ಯಾವುದೇ ರೀತಿಯ ರಕ್ಷಣೆಯನ್ನು ಒದಗಿಸುತ್ತಿಲ್ಲ. ಬದಲಾಗಿ ಸ್ತ್ರೀಯರು ದಾಸ್ಯದಲ್ಲಿ ಬದುಕುವಂತೆ ಪ್ರೇರೇಪಿಸುವಂತಿದೆ. ಹಲವಾರು ಯೋಜನೆಗಳಿದ್ದರೂ ಸಹ ಅವುಗಳ ಕಾರ್ಯವಿಧಾನದಲ್ಲಿ ಅನೇಕ ಸಮಸ್ಯೆಗಳಿವೆ.

ಕೋಷ್ಟಕ ೬

೬. ಮಹಿಳಾ ಸರ್ಕಾರಿ ಯೋಜನೆಗಳು ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಿ ಬಿಡುಗಡೆಯನ್ನು ಹೊಂದಲು ಸಹಾಯ ಮಾಡುತ್ತಿವೆಯಾ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೪೬	೨೪	೦೯	೪೫
೨	ಇಲ್ಲ	೧೮೪	೭೪	೧೧	೫೫
	ಒಟ್ಟು	೧೮೦	೧೦೦	೨೦	೧೦೦

ಕೋಷ್ಟಕ ೬ರ ಅಂಕಿ ಅಂಶಗಳ ಪ್ರಕಾರ ಮಹಿಳಾ ಸರ್ಕಾರಿ ಯೋಜನೆಗಳು ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಿ ಬಿಡುಗಡೆಯನ್ನು ಹೊಂದಲು ಸಹಾಯ ಮಾಡುತ್ತಿವೆ ಎಂದು ಶೇ.೨೬ರಷ್ಟು ಮಹಿಳೆಯರು ಒಪ್ಪಿದ್ದಾರೆ. ಆದರೆ ಶೇ.೭೪ ರಷ್ಟು ಮಂದಿ ಇದನ್ನು ಒಪ್ಪುವುದಿಲ್ಲ. ಅಂತೆಯೇ ಪುರುಷರ ಶೇಕಡವಾರು ಫಲಿತಾಂಶವನ್ನು ನೋಡಿದರೆ ಶೇ.೪೫ರಷ್ಟು ಪುರುಷರು ಇದನ್ನು ಒಪ್ಪಿದರೆ ಶೇ.೫೫ರಷ್ಟು ಪುರುಷರು ಇದನ್ನು ವಿರೋಧಿಸುತ್ತಾರೆ.

ಇಂದು ಮಹಿಳಾ ಸರ್ಕಾರಿ ಯೋಜನೆಗಳು ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಿ ಸ್ತ್ರೀಯರು ಬಿಡುಗಡೆ ಹೊಂದಲು ಸಹಾಯ ಮಾಡುತ್ತಿಲ್ಲವೆಂದೇ ಹೇಳಬಹುದು. ಏಕೆಂದರೆ ಇಂದು ಚಾಲ್ತಿಯಲ್ಲಿರುವ ಮಹಿಳಾ ಯೋಜನೆಗಳು ಅಷ್ಟು ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಈ ಯೋಜನೆಗಳೆಲ್ಲವೂ ಪುರುಷ ಮೌಲ್ಯಗಳಿಂದ ತುಂಬಿದೆ. ಈ ಪುರುಷ ಮೌಲ್ಯಗಳು ಸ್ತ್ರೀಯರನ್ನು ಬಂಧಮುಕ್ತರನ್ನಾಗಿಸುವ ಬದಲು ಮತ್ತಷ್ಟು ದೌರ್ಜನ್ಯಗಳನ್ನು ಅವರ ಮೇಲೆ ನಡೆಸಿ ಮತ್ತೆ ಪುರುಷನ ಅಧೀನಕ್ಕೆ ಒಳಪಡಿಸುತ್ತಿವೆ. ಹೀಗಾಗಿ ಈ ಯೋಜನೆಗಳು ಅಷ್ಟು ಮಹತ್ವ ಪೂರ್ಣವಾಗಿ ಕೆಲಸ ಮಾಡುತ್ತಿಲ್ಲವೆಂದೇ ಹೇಳಬಹುದು.

ಕೋಷ್ಟಕ ೭

೭. ಸರ್ಕಾರಿ ಯೋಜನೆಗಳ ಮೌಲ್ಯಮಾಪನ ಸಂದರ್ಭದಲ್ಲಿ ಮಹಿಳೆಯರ ಅನುಭವಗಳನ್ನು ಪರಿಭಾವಿಸಲಾಗುತ್ತಿದೆಯೇ?

ಕ್ರಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೧೧	೦೬	೦೮	೪೦
೨	ಇಲ್ಲ	೧೬೯	೯೪	೧೨	೬೦
ಒಟ್ಟು		೧೮೦	೧೦೦	೨೦	೧೦೦

ಕೋಷ್ಟಕ ೭ರ ಅಂಕಿ-ಅಂಶಗಳ ಪ್ರಕಾರ ಸರ್ಕಾರಿ ಯೋಜನೆಗಳ ಮೌಲ್ಯಮಾಪನದ ಸಂದರ್ಭದಲ್ಲಿ ಮಹಿಳೆಯರ ಅನುಭವಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ ಎಂದು ಶೇ.೬ರಷ್ಟು ಮಹಿಳೆಯರು ಮಾತ್ರ ಹೇಳುತ್ತಾರೆ. ಇನ್ನುಳಿದ ಶೇ.೯೪ರಷ್ಟು ಮಹಿಳೆಯರು ಅನುಭವಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿಲ್ಲ ಎನ್ನುತ್ತಾರೆ. ಇನ್ನು ಪುರುಷರ ಫಲಿತಾಂಶವನ್ನು ನೋಡಿದಾಗ ಶೇ.೪೦ರಷ್ಟು ಪುರುಷರು ಮಹಿಳೆಯರ ಅನುಭವಗಳನ್ನು ನೋಡಿದಾಗ ಶೇ.೪೦

ರಷ್ಟು ಪುರುಷರು ಮಹಿಳೆಯರ ಅನುಭವಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿದೆ ಎಂದರೇ ಶೇ.೬೦ರಷ್ಟು ಮಂದಿ ಇಲ್ಲ ಎಂದಿದ್ದಾರೆ. ವಾಸ್ತವವಾಗಿ ಸರ್ಕಾರಿ ಯೋಜನೆಗಳ ಮೌಲ್ಯಮಾಪನದ ಸಂದರ್ಭದಲ್ಲಿ ಮಹಿಳೆಯರ ಅನುಭವಗಳನ್ನು ಗಂಭೀರವಾಗಿ ಪರಿಗಣಿಸಲಾಗಿಲ್ಲ. ಏಕೆಂದರೆ ಮಹಿಳೆಯರ ಅನುಭವಗಳು ಅಷ್ಟೊಂದು ಮಹತ್ವದಲ್ಲ ಎಂದು ತಿರಿಸ್ಕರಿಸಲಾಗಿದೆ. ಇದರಿಂದಾಗಿಯೇ ಮಹಿಳೆಯರಿಗೆ ಅಗತ್ಯವಾದ ಯೋಜನೆಗಳನ್ನು ರೂಪಿಸುವಲ್ಲಿ ಸರ್ಕಾರ ಸತತವಾಗಿ ವಿಫಲವಾಗುತ್ತಿದೆ.

ಕೋಷ್ಟಕ ೮

೮. ಸರ್ಕಾರಿ ಯೋಜನೆಗಳನ್ನು ಯಾವುದೇ ತೊಂದರೆಯಿಲ್ಲದೇ ಸರಳವಾಗಿ ಪಡೆಯಲು ಸಾಧ್ಯವಾಗಿದೆಯೇ?

ಕ್ರಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೧೧	೦೬	೦೭	೩೫
೨	ಇಲ್ಲ	೧೬೯	೯೪	೧೩	೬೫
	ಒಟ್ಟು	೧೮೦	೧೦೦	೨೦	೧೦೦

ಕೋಷ್ಟಕ ೮ರ ಅಂಕಿ ಅಂಶಗಳ ಪ್ರಕಾರ ಸರ್ಕಾರಿ ಯೋಜನೆಗಳನ್ನು ಯಾವುದೇ ತೊಂದರೆಯಿಲ್ಲದೇ ಸರಳವಾಗಿ ಪಡೆಯಲು ಸಾಧ್ಯ ಎಂದು ಶೇ.೬ರಷ್ಟು ಮಹಿಳೆಯರು ಉತ್ತರಿಸಿದ್ದರೆ ಶೇ.೯೪ ರಷ್ಟು ಮಹಿಳೆಯರು ಸಾಧ್ಯವಿಲ್ಲ ಎಂದು ಉತ್ತರಿಸಿದ್ದಾರೆ. ಇನ್ನು ಪುರುಷರ ಫಲಿತಾಂಶಕ್ಕೆ ಬಂದಾಗ ಶೇ.೩೫ರಷ್ಟು ಪುರುಷರು ಯಾವುದೇ ತೊಂದರೆ ಇಲ್ಲದೇ ಸರ್ಕಾರಿ ಯೋಜನೆಗಳನ್ನು ಪಡೆಯಬಹುದು ಎಂದರೆ ಶೇ.೬೫ರಷ್ಟು ಮಂದಿ ಸಾಧ್ಯವಿಲ್ಲ ಎಂದಿದ್ದಾರೆ.

ವಾಸ್ತವವಾಗಿ ಸರ್ಕಾರಿ ಯೋಜನೆಗಳನ್ನು ಯಾವುದೇ ತೊಂದರೆ ಇಲ್ಲದೇ ಸರಳವಾಗಿ ಪುರುಷರು ಪಡೆಯಬಹುದು. ಆದರೆ ಮಹಿಳೆಯರು ಅವರ ಅಗತ್ಯಗಳಿಗೆ ಅನುಗುಣವಾಗಿರುವಂತಹ ಯೋಜನೆಗಳನ್ನು ಪಡೆಯುವುದು ಕಷ್ಟ. ಏಕೆಂದರೆ ಮಹಿಳಾ ಪರ ಯೋಜನೆಗಳು ಹಲವಾರು ಲೋಪದೋಷಗಳಿಂದ ಕೂಡಿದ್ದು ಮಹಿಳೆಯರ ಹಿತದೃಷ್ಟಿಗೆ ಅನುಗುಣವಾಗಿ ಅವು ಕಾರ್ಯ ನಿರ್ವಹಿಸುವುದಿಲ್ಲ. ಹಾಗಾಗಿ ಸರ್ಕಾರಿ ಯೋಜನೆಗಳನ್ನು ಸರಳವಾಗಿ ಪಡೆಯಲು ಸಾಧ್ಯವಿಲ್ಲ.

ಕೋಷ್ಟಕ ೯

೯. ಮೌಲ್ಯಮಾಪನಗಾರರು ಮಹಿಳೆಯರು ಅನುಭವಗಳನ್ನು ಉದಾತ್ತ ಮೌಲ್ಯಗಳೆಂದು ಪರಿಗಣಿಸಿ ಮೌಲ್ಯಮಾಪನದ ಸಂದರ್ಭದಲ್ಲಿ ಬಳಸುತ್ತಾರೆಯೇ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೨೭	೧೫	೦೯	೪೫
೨	ಇಲ್ಲ	೧೫೩	೮೫	೧೧	೫೫
	ಒಟ್ಟು	೧೮೦	೧೦೦	೨೦	೧೦೦

ಕೋಷ್ಟಕ ೯ರ ಫಲಿತಾಂಶಗಳನ್ನು ನೋಡಿದಾಗ ಶೇ.೧೫ರಷ್ಟು ಮಹಿಳೆಯರು ಮೌಲ್ಯಮಾಪನ ಗಾರರು ಮಹಿಳೆಯರ ಅನುಭವಗಳನ್ನು ಉದಾತ್ತ ಮೌಲ್ಯಗಳೆಂದು ಪರಿಗಣಿಸಿ ಮೌಲ್ಯ ಮಾಪನದ ಸಂದರ್ಭದಲ್ಲಿ ಬಳಸುತ್ತಾರೆಂದಿದ್ದಾರೆ. ಆದರೆ ಶೇ.೮೫ ಮಂದಿ ಮಹಿಳೆಯರ ಅನುಭವಗಳನ್ನು ಪರಿಗಣಿಸುವುದಿಲ್ಲ ಎನ್ನುತ್ತಾರೆ. ಇನ್ನು ಶೇ.೪೫ರಷ್ಟು ಪುರುಷರು ಹೌದು ಎಂದು ಉತ್ತರಿಸಿದರೆ ಶೇ.೫೫ರಷ್ಟು ಪುರುಷರು ಇಲ್ಲ ಎಂದು ಉತ್ತರಿಸುತ್ತಾರೆ.

ವಾಸ್ತವದಲ್ಲಿ ಮೌಲ್ಯಮಾಪನಗಾರರು ಮಹಿಳೆಯರ ಅನುಭವಗಳನ್ನು ಉದಾತ್ತ ಮೌಲ್ಯಗಳೆಂದು ಪರಿಗಣಿಸಿ ಮೌಲ್ಯಮಾಪನದ ಸಂದರ್ಭದಲ್ಲಿ ಬಳಸುವುದಿಲ್ಲ. ಅಷ್ಟಕ್ಕೂ ಮಹಿಳೆಯರ ಅನುಭವಗಳು ಕೆಲಸಕ್ಕೆ ಬಾರದವು ಅವುಗಳನ್ನು ಪರಿಗಣಿಸುವ ಅಗತ್ಯವಿಲ್ಲ ಎನ್ನುವ ಧೋರಣೆ ಪುರುಷ ಮೌಲ್ಯಮಾಪಕರಲ್ಲಿದೆ. ಹಾಗಾಗಿ ಸ್ತ್ರೀಯರ ಅನುಭವಗಳನ್ನು ಅವರು ಪರಿಗಣಿಸದೇ ತಿರಸ್ಕರಿಸುತ್ತಾರೆ. ಹೀಗಾಗಿ ಮಹಿಳೆಯರಿಗೆ ಅನುಕೂಲವಾಗುವಂತಹ ಯೋಜನೆಗಳು ಸರಿಯಾಗಿ ರೂಪುಗೊಳ್ಳದೇ ಮಹಿಳೆಯರ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ.

ಕೋಷ್ಟಕ ೧೦

೧೦. ಸರ್ಕಾರಿ ಯೊಜನೆಗಳನ್ನು ಪಡೆದುಕೊಂಡ ಮಹಿಳೆಯರು ತೊಂದರೆಗಳನ್ನು ಅನುಭವಿಸು ತ್ತಿದ್ದಾರೆಯೇ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೧೦೨	೫೭	೦೯	೪೫
೨	ಇಲ್ಲ	೭೮	೪೩	೧೧	೫೫
	ಒಟ್ಟು	೧೮೦	೧೦೦	೨೦	೧೦೦

ಕೋಷ್ಟಕ ೧೧ರ ಅಂಕಿ ಅಂಶಗಳನ್ನು ನೋಡಿದಾಗ ಶೇ.೫೭ರಷ್ಟು ಮಹಿಳೆಯರು ಸರ್ಕಾರಿ ಯೋಜನೆಗಳನ್ನು ಪಡೆದುಕೊಂಡ ಮಹಿಳೆಯರು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ ಎಂದು ಉತ್ತರಿಸಿದರೆ, ಶೇ.೪೩ರಷ್ಟು ಮಹಿಳೆಯರು ತೊಂದರೆಗಳನ್ನು ಅನುಭವಿಸುತ್ತಿಲ್ಲ ಎಂದಿದ್ದಾರೆ. ಇನ್ನು ಪುರುಷರ ಫಲಿತಾಂಶವನ್ನು ನೋಡಿದಾಗ ಶೇ.೪೫ರಷ್ಟು ಪುರುಷರು ಮಹಿಳೆಯರು ಸರ್ಕಾರಿ ಯೋಜನೆಗಳನ್ನು ಪಡೆದುಕೊಂಡು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ ಎಂದರೆ, ಶೇ.೫೫ರಷ್ಟು ಪುರುಷರು ಮಹಿಳೆಯರು ಸರ್ಕಾರಿ ಯೋಜನೆಗಳನ್ನು ಪಡೆದುಕೊಂಡು ತೊಂದರೆಗಳನ್ನು ಅನುಭವಿಸುತ್ತಿಲ್ಲ ಎಂದಿದ್ದಾರೆ.

ಮಹಿಳೆಯರಿಗೆ ಅನುಕೂಲವಾಗುವಂತಹ ಯೋಜನೆಗಳನ್ನು ಸರ್ಕಾರವು ಸರಿಯಾಗಿ ಜಾರಿಗೆ ತರದೇ ಇರುವುದರಿಂದ ತಮ್ಮ ಬೇಡಿಕೆಗಳಿಗೆ ಸ್ಪಂದಿಸದ ಯೋಜನೆಗಳನ್ನು ಪಡೆದುಕೊಂಡು ಮಹಿಳೆಯರ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ.

೨

ಪಂಚಾಯತ್ ಕ್ಷೇತ್ರದ ಯೋಜನೆಗಳ ಬಗ್ಗೆ ೫೦ ಪಂಚಾಯತ್ ಅಧ್ಯಕ್ಷರು/ಉಪಾಧ್ಯಕ್ಷರು/ ಸದಸ್ಯರಿಗೆ ಕೇಳಲಾದ ಪ್ರಶ್ನೆಗಳು.

ಕೋಷ್ಟಕ ೧೧

೧೧. ಪಂಚಾಯತ್ ಅಧ್ಯಕ್ಷರಾಗಿ/ಉಪಾಧ್ಯಕ್ಷರಿಗೆ/ಸದಸ್ಯರಾಗಿ ನಿಮ್ಮ ಗ್ರಾಮದಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಸರ್ಕಾರಿ ಯೋಜನೆಗಳ ಬಗ್ಗೆ ನಿಮ್ಮ ಅಭಿಪ್ರಾಯ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೩೪	೮೧	೦೬	೭೫
೨	ಇಲ್ಲ	೦೮	೧೯	೦೨	೨೫
	ಒಟ್ಟು	೧೮೦	೧೦೦	೨೦	೧೦೦

ಕೋಷ್ಟಕ ೧೧ರ ಫಲಿತಾಂಶಗಳನ್ನು ನೋಡಿದಾಗ, ಪಂಚಾಯತ್ ಅಧ್ಯಕ್ಷರಾಗಿ/ ಉಪಾಧ್ಯಕ್ಷರಾಗಿ/ಸದಸ್ಯರಾಗಿ ನಿಮ್ಮ ಗ್ರಾಮದಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಸರ್ಕಾರಿ ಯೋಜನೆಗಳ ಬಗೆಗೆ ನಿಮ್ಮ ಅಭಿಪ್ರಾಯ ಏನೆಂದು ಪಂಚಾಯತ್‌ನ ಸ್ತ್ರೀ ಮತ್ತು ಪುರುಷ ಅಧ್ಯಕ್ಷ/ಉಪಾಧ್ಯಕ್ಷ/ಸದಸ್ಯರನ್ನು ಕೇಳಿದಾಗ ಶೇ.೮೧ರಷ್ಟು ಮಹಿಳಾ ಅಧ್ಯಕ್ಷರು ಉತ್ತಮವಾಗಿದೆ

ಎಂದರು ಮತ್ತು ಶೇ.೧೯ರಷ್ಟು ಮಹಿಳೆಯರ ಕೊರತೆ ಇದೆ ಎಂದರು. ಇಡೀ ಪ್ರಶ್ನೆಗೆ ಪುರುಷ ಅಧ್ಯಕ್ಷರು ಶೇ.೭೫%ರಷ್ಟು ಮಂದಿ ಉತ್ತಮವಾಗಿದೆ ಎಂದರು. ಇನ್ನುಳಿದ ಶೇ.೨೫ರಷ್ಟು ಮಂದಿ ಕೊರತೆ ಇದೆ ಎಂದರು.

ಪಾಲಿಸಿವಾಹಕವಾಗಿ ಪಂಚಾಯತ್‌ನ ಅಧ್ಯಕ್ಷರು ಸಮುದಾಯದ ಸಮಸ್ಯೆಗಳನ್ನು ಹೇಗೆ ಅರಿತಿದ್ದಾರೆಂಬುದನ್ನು ಈ ಮೂಲಕ ತಿಳಿಯಬಹುದಾಗಿದೆ. ಸರ್ಕಾರಿ ಮಹಿಳಾ ಯೋಜನೆಗಳಲ್ಲಿ ಕೊರತೆಯಿದ್ದರೂ ಶೇ.೭೫ರಷ್ಟು ಮಂದಿ ಮಂದಿ ಉತ್ತಮವಾಗಿದೆ ಎಂದು ಹೇಳಿದ್ದಾರೆ. ಮೇಲ್ನೋಟಕ್ಕೆ ಯೋಜನೆಗಳನ್ನು ತಿಳಿದ್ದಾರೆ ಹೊರತು ಅದು ಯಾವ ರೀತಿ ಮಹಿಳೆಯರಿಗೆ ಪ್ರಯೋಜನಕಾರಿ ಎಂಬುದನ್ನು ತಿಳಿಯುವ ಪ್ರಯತ್ನವನ್ನು ಪುರುಷ ಅಧ್ಯಕ್ಷರು ಮಾಡುತ್ತಿಲ್ಲ. ಮಹಿಳಾ ಸಮಸ್ಯೆಗಳ ಬಗ್ಗೆ ಕಾಳಜಿ ಇಲ್ಲದಿರುವುದು, ಯೋಜನೆಗಳ ಸೂಕ್ಷ್ಮ ಗ್ರಹಿಕೆಯ ಕೊರತೆಯಿರುವುದರಿಂದಾಗಿ ಮಹಿಳಾ ಸಮಸ್ಯೆಗಳನ್ನು ಪ್ರಮುಖವಾಗಿ ಗುರುತಿಸುತ್ತಿಲ್ಲ. ಹೀಗಾಗಿ ಮಹಿಳಾ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ.

ಕೋಷ್ಟಕ ೧೨

೧೨. ಇಂದಿಗೂ ಸರ್ಕಾರಿ ಸವಲತ್ತುಗಳು ಮಹಿಳೆಯರನ್ನು ತಲುಪಲು ಪುರುಷಶಾಹಿ ಮೌಲ್ಯಗಳು ಅಡೆತಡೆಯುಂಟು ಮಾಡುತ್ತಿವೆಯೇ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೩೮	೯೦	೦೭	೮೮
೨	ಇಲ್ಲ	೦೪	೧೦	೦೧	೧೨
	ಒಟ್ಟು	೪೨	೧೦೦	೨೦	೧೦೦

ಕೋಷ್ಟಕ ೧೨ರ ಫಲಿತಾಂಶವನ್ನು ನೋಡಿದಾಗ ಶೇ.೯೦ರಷ್ಟು ಮಹಿಳೆಯರು ಇಂದಿಗೂ ಸರ್ಕಾರಿ ಸವಲತ್ತುಗಳು ಮಹಿಳೆಯರನ್ನು ತಲುಪಲು ಪುರುಷಶಾಹಿ ಮೌಲ್ಯಗಳು ಅಡೆತಡೆಯುಂಟು ಮಾಡುತ್ತಿವೆ ಎಂದು ಹೇಳುತ್ತಾರೆ. ಇನ್ನುಳಿದ ಶೇ.೧೦ರಷ್ಟು ಮಂದಿ ಇದನ್ನು ಒಪ್ಪುವುದಿಲ್ಲ. ಇನ್ನುಳಿದಂತೆ ಶೇ.೮೮ ಪುರುಷರು ಪುರುಷಶಾಹಿ ಮೌಲ್ಯಗಳು ಅಡೆತಡೆಯುಂಟು ಮಾಡುತ್ತಿವೆ ಎಂದು ಹೇಳಿದರೆ ಶೇ.೧೨ ಮಂದಿ ಇಲ್ಲಿ ಎನ್ನುತ್ತಾರೆ.

ಸರ್ಕಾರವು ಮಹಿಳೆಯರ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ ಆದರೆ ಈ ಎಲ್ಲಾ ಯೋಜನೆಗಳು ಪುರುಷ ಪ್ರಧಾನ ಮೌಲ್ಯಗಳಿಂದ ತುಂಬಿದೆ. ಈ ಯೋಜನೆಗಳು

ಮಹಿಳೆಯರನ್ನು ಕೌಟುಂಬಿಕ ಪಾತ್ರಗಳಿಗೇ ಸೀಮಿತಗೊಳಿಸಲು ಇಚ್ಛಿಸುತ್ತವೆ. ಅಲ್ಲದೇ ಯೋಜನೆಗಳ ಕಾರ್ಯವಿಧಾನ ಮತ್ತು ಮೌಲ್ಯಮಾಪನಗಳಲ್ಲಿ ತೊಂದರೆಗಳಿರುವುದರಿಂದ ಇಂದಿಗೂ ಸರ್ಕಾರಿ ಸವಲತ್ತುಗಳು ಮಹಿಳೆಯರನ್ನು ತಲುಪಲು ಪುರುಷಶಾಹಿ ಮೌಲ್ಯಗಳು ಅಡೆತಡೆಯುಂಟು ಮಾಡುತ್ತಿವೆ.

ಕೋಷ್ಟಕ ೧೩

ಯೋಜನೆಗಳ ಅಸಮರ್ಪಕ ಬಳಕೆಗೆ ಯಾರು ಕಾರಣ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಕುಟುಂಬ	೧೦	೨೪	೦೧	೧೦
೨	ಮಹಿಳೆ	೦೭	೧೬	೦೫	೬೪
೩	ಪುರುಷ	೧೩	೩೧	೦೧	೧೨
೪	ಸಮಾಜ	೧೨	೨೯	೦೧	೧೨
	ಒಟ್ಟು	೪೨	೧೦೦	೦೮	೧೦೦

ಕೋಷ್ಟಕ ೧೩ರ ಅಂಕಿ–ಅಂಶಗಳ ಪ್ರಕಾರ ಪಂಚಾಯತ್ ಅಧ್ಯಕ್ಷರನ್ನು ಯೋಜನೆಗಳ ಅಸಮರ್ಪಕ ಬಳಕೆಗೆ ಕಾರಣ ಯಾರೆಂದು ಕೇಳಿದಾಗ ಶೇ.೨೪ರಷ್ಟು ಮಹಿಳಾ ಅಧ್ಯಕ್ಷರು ಕುಟುಂಬ ಕಾರಣ ಎಂದರು. ಇನ್ನುಳಿದಂತೆ ಶೇ.೧೬ ಮಂದಿ ಮಹಿಳೆ ಕಾರಣ. ಶೇ.೧೩ರಷ್ಟು ಪುರುಷ ಕಾರಣ ಮತ್ತು ಶೇ.೨೯ರಷ್ಟು ಮಂದಿ ಸಮಾಜ ಕಾರಣ ಎಂದರು.

ಇದೇ ಪ್ರಶ್ನೆಗೆ ಪುರುಷ ಅಧ್ಯಕ್ಷರಲ್ಲಿ ಶೇ.೧೨ರಷ್ಟು ಮಂದಿ ಕುಟುಂಬ, ಶೇ.೬೪%ರಷ್ಟು ಮಂದಿ ಮಹಿಳೆ, ಶೇ.೧೨ರಷ್ಟು ಮಂದಿ ಪುರುಷ, ಶೇ.೧೨ ರಷ್ಟು ಮಂದಿ ಸಮಾಜ ಕಾರಣ ಎಂಬ ಉತ್ತರವನ್ನು ನೀಡಿದರು. ಇಲ್ಲಿ ಶೇ.೩೧ರಷ್ಟು ಮಹಿಳೆಯರ ಪ್ರಕಾರ ಪುರುಷರೇ ಅತಿಹೆಚ್ಚಾಗಿ ಯೋಜನೆಗಳ ಅಸಮರ್ಪಕ ಬಳಕೆಗೆ ಕಾರಣ ಎಂದರು. ಏಕೆಂದರೆ ಯೋಜನೆಗಳು ಪುರುಷ ಪ್ರಧಾನತೆಯ ಹಿಡಿತದಲ್ಲಿರುವುದರಿಂದ ಎಲ್ಲಾ ಯೋಜನೆಗಳನ್ನು ಪುರುಷರೇ ಅಸಮರ್ಪಕವಾಗಿ ಬಳಕೆ ಮಾಡುತ್ತಾರೆ ಎಂದಿದ್ದಾರೆ. ಆದರೆ ಶೇ.೬೪ ರಷ್ಟು ಪುರುಷರು ಮಹಿಳೆಯರೇ ಯೋಜನೆಗಳ ಅಸಮರ್ಪಕ ಬಳಕೆಗೆ ಕಾರಣ ಎಂದಿದ್ದಾರೆ. ಇನ್ನುಳಿದಂತೆ ಮಹಿಳೆಯರು ಸಮಾಜವನ್ನು ಶೇ.೨೪ ಮತ್ತು ಕುಟುಂಬವನ್ನು ಶೇ.೧೨ರಂತೆ ಕಾರಣ ಎಂದರೆ ಶೇ.೧೨ರಷ್ಟು ಪುರುಷರು ಕುಟುಂಬ ಮತ್ತು ಸಮಾಜವು ಯೋಜನೆಗಳ ಅಸಮರ್ಪಕ ಬಳಕೆಗೆ ಕಾರಣ ಎಂದಿದ್ದಾರೆ.

ಯೋಜನೆಗಳ ಬಳಕೆಗೆ ಮುಂಚೆ ಅವುಗಳ ರಚನೆ, ಕಾರ್ಯವಿಧಾನ, ಮೌಲ್ಯಮಾಪನ, ಫಲಿತಾಂಶಗಳ ಬಗ್ಗೆ ಮೊದಲು ಯೋಚಿಸಬೇಕು. ಈ ಎಲ್ಲಾ ಹಂತಗಳಲ್ಲೂ ಪುರುಷ ಪ್ರಧಾನತೆಯು ಪ್ರಮುಖವಾಗಿ ಕಾರ್ಯನಿರ್ವಹಿಸುವುದರಿಂದ ಮಹಿಳೆಯರಿಗೆ ಯೋಜನೆಗಳ ಬಳಕೆಗೆ ಅವಕಾಶವೇ ಕೊಡುವುದಿಲ್ಲ. ಸಮಾಜದಲ್ಲಿ ಸ್ತ್ರೀಯರಿಗೆ ಪುರುಷರಿಗೆ ಸಮನಾಗಿ ಯಾವುದೇ ಸ್ಥಾನ ಮಾನಗಳಲ್ಲಿರುವುದರಿಂದ ಮಹಿಳೆಯರಿಂದ ಯೋಜನೆಗಳ ಅಸಮರ್ಪಕ ಬಳಕೆ ಸಾಧ್ಯವಿಲ್ಲ. ಆದರೆ ಶೇ.೬೪ ಮಂದಿ ಪುರುಷ ಅಧ್ಯಕ್ಷರು ಮಹಿಳೆಯರೇ ಕಾರಣ ಎಂದಿದ್ದಾರೆ. ಹೀಗಾಗಿ ಪುರುಷ ಅಧ್ಯಕ್ಷರು ಲಿಂಗ ಪೂರ್ವಾಗ್ರಹಗಳಿಂದ ಆಲೋಚಿಸುತ್ತಾರೆಂದಾಯಿತು. ಈ ಕಾರಣಗಳಿಂದಲೇ ಮಹಿಳೆಯರ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ.

ಯೋಜನೆಗಳ ಅಸಮರ್ಪಕ ಬಳಕೆಯ ಶೇಕಡಾವಾರು ಫಲಿತಾಂಶವನ್ನು ರೇಖಾ ಚಿತ್ರ ೧೩ರಲ್ಲಿ ನೋಡಬಹುದು.

ಕೋಷ್ಟಕ ೧೪

ಯಾವ ಯೋಜನೆಗಳಲ್ಲಿ ಮಹಿಳೆಯರು ಹೆಚ್ಚು ಭಾಗವಹಿಸುತ್ತಿದ್ದಾರೆ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಆರೋಗ್ಯ	೨೭	೬೪	೦೪	೫೦
೨	ವಿದ್ಯಾಭ್ಯಾಸ	೧೨	೨೯	೦೩	೩೮
೩	ಉದ್ಯೋಗ	೦೩	೦೭	೦೧	೧೨
ಒಟ್ಟು		೧೪೦	೧೦೦	೨೦	೧೦೦

ಕೋಷ್ಟಕ ೧೪ರ ಪ್ರಕಾರ ಶೇ.೬೪ರಷ್ಟು ಮಂದಿ ಮಹಿಳೆಯರು ಆರೋಗ್ಯ ಸಂಬಂಧಿ ಯೋಜನೆಗಳಲ್ಲಿ ಭಾಗವಹಿಸುತ್ತಾರೆ. ಶೇ.೨೯ರಷ್ಟು ಮಂದಿ ವಿದ್ಯಾಭ್ಯಾಸ, ಶೇ.೦೭ರಷ್ಟು ಮಂದಿ ಉದ್ಯೋಗ ಸಂಬಂಧಿ ಯೋಜನೆಗಳಲ್ಲಿ ಭಾಗವಹಿಸುತ್ತಾರೆಂದು ಮಹಿಳಾ ಪಂಚಾಯತ್ ಅಧ್ಯಕ್ಷರು ಉತ್ತರಿಸುತ್ತಾರೆ. ಪುರುಷರ ಅಂಕಿ–ಅಂಶಗಳನ್ನು ನೋಡಿದಾಗ ಶೇ.೫೦ರಷ್ಟು ಮಂದಿ ಪುರುಷರು ಮಹಿಳೆಯರು ಆರೋಗ್ಯ ಯೋಜನೆಯಲ್ಲಿ ಭಾಗವಹಿಸುತ್ತಾರೆಂದಿದ್ದಾರೆ. ಇನ್ನುಳಿದಂತೆ ಶೇ.೩೮ರಷ್ಟು ಮಂದಿ ವಿದ್ಯಾಭ್ಯಾಸ ಮತ್ತು ಶೇ.೧೨ರಷ್ಟು ಮಂದಿ ಉದ್ಯೋಗ ಯೋಜನೆಗಳಲ್ಲಿ ಮಹಿಳೆಯರು ಭಾಗವಹಿಸುತ್ತಿದ್ದಾರೆ ಎನ್ನುತ್ತಾರೆ.

ಇಲ್ಲಿ ಸ್ತ್ರೀ ಪುರುಷರಿಬ್ಬರ ಶೇಕಡಾವಾರು ಫಲಿತಾಂಶಗಳನ್ನು ನೋಡಿದಾಗ ಇವರಿಬ್ಬರೂ ಸಹ ಮಹಿಳೆಯರು ಆರೋಗ್ಯ ಸಂಬಂಧಿ ಯೋಜನೆಗಳಲ್ಲಿ ಹೆಚ್ಚಾಗಿ ಭಾಗವಹಿಸುತ್ತಾರೆ ಎಂದು ಅಭಿಪ್ರಾಯಪಡುತ್ತಾರೆ. ತದನಂತರ ವಿದ್ಯಾಭ್ಯಾಸಕ್ಕೆ ದ್ವಿತೀಯ ಸ್ಥಾನ ಮತ್ತು ಕೊನೆಯ ಸ್ಥಾನದಲ್ಲಿ ಉದ್ಯೋಗವನ್ನು ಪರಿಗಣಿಸುತ್ತಾರೆ. ಮಹಿಳೆಯರು ಇಂದು ಆರೋಗ್ಯ ಸಂಬಂಧಿ ಯೋಜನೆಗಳಲ್ಲಿ ಹೆಚ್ಚಾಗಿ ಭಾಗವಹಿಸುತ್ತಿದ್ದರೂ ಸಹ ಅವರ ಆರೋಗ್ಯದಲ್ಲಿ ಉತ್ತಮ ರೀತಿಯ ಸುಧಾರಣೆ ಕಂಡುಬಂದಿರುವುದು ವಿಷಾಧನೀಯ ಸಂಗತಿ. ಮಹಿಳೆಯರಿಗೆ ಆರೋಗ್ಯದಷ್ಟೇ ವಿದ್ಯಾಭ್ಯಾಸ ಮತ್ತು ಉದ್ಯೋಗ ಮುಖ್ಯವೆಂದು ಪರಿಗಣಿಸದಿರುವುದು ನಿಜಕ್ಕೂ ಶೋಚನೀಯ ಸಂಗತಿಯಾಗಿದೆ. ಸರ್ಕಾರವು ಮಹಿಳೆಯರು ಎಲ್ಲಾ ಕ್ಷೇತ್ರಗಳನ್ನೂಪ್ರಮುಖವೆಂದು ಪರಿಗಣಿಸಿ ಭಾಗವಹಿಸುವಂತೆ ಪೂರಕ ವಾತಾವರಣವನ್ನು ಕಲ್ಪಿಸಬೇಕು. ಪಂಚಾಯತ್ ರಾಜ್‌ನ ಅಧ್ಯಕ್ಷರು ಇದಕ್ಕೆ ಉತ್ತಮ ವಾತಾವರಣವನ್ನು ಕಲ್ಪಿಸಬೇಕು ಆದರೆ ಅವರೇ ನಿರ್ಲಕ್ಷ್ಯ ತೋರುತ್ತಿರುವುದು ಸರಿಯಲ್ಲ.

ಯೋಜನೆಗಳಲ್ಲಿ ಮಹಿಳೆಯರು ಭಾಗವಹಿಸುವ ಕ್ಷೇತ್ರದ ಶೇಕಡಾವಾರು ಫಲಿತಾಂಶವನ್ನು ರೇಖಾಚಿತ್ರ ೧೪ರ ಮೂಲಕ ನೋಡಬಹುದು.

ಕೋಷ್ಟಕ ೧೫

ಮಹಿಳಾಪರ ಸರ್ಕಾರಿ ಯೋಜನೆಗಳಲ್ಲಿ ಇನ್ನೂ ಸೂಕ್ಷ್ಮವಾದ ಸೈದ್ಧಾಂತಿಕತೆ ಬೇಕೆಂದು ನಿಮಗನ್ನಿಸಿದೆಯೇ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೩೬	೮೬	೦೫	೬೩
೨	ಇಲ್ಲ	೦೬	೧೪	೦೩	೩೭
ಒಟ್ಟು		೪೨	೧೦೦	೦೮	೧೦೦

ಕೋಷ್ಟಕ ೧೫ರ ಪ್ರಕಾರ ಫಲಿತಾಂಶಗಳನ್ನು ನೋಡಿದಾಗ ಶೇ.೮೬ರಷ್ಟು ಮಹಿಳಾ ಪಂಚಾಯತ್ ಪಂಚಾಯರ್ತ ಸದಸ್ಯರು ಮಹಿಳಾ ಪರ ಸರ್ಕಾರಿಯೋಜನೆಗಳಲ್ಲಿ ಇನ್ನೂ ಸೂಕ್ಷ್ಮವಾದ ಸೈದ್ಧಾಂತಿಕತೆ ಬೇಕೆನ್ನುತ್ತಾರೆ. ಇನ್ನುಳಿದ ಶೇ.೧೪ರಷ್ಟು ಮಹಿಳಾ ಸದಸ್ಯರು ಬೇಡವೆನ್ನುತ್ತಾರೆ. ಪುರುಷ ಸದಸ್ಯರ ಫಲಿತಾಂಶಕ್ಕೆ ಬಂದರೆ ಶೇ.೬೩ ರಷ್ಟು ಪುರುಷರು ಮಹಿಳಾ ಪರ ಸರ್ಕಾರಿ ಯೋಜನೆಗಳಲ್ಲಿ ಇನ್ನೂ ಸೂಕ್ಷ್ಮವಾದ ಸೈದ್ಧಾಂತಿಕತೆ ಬೇಕೆನ್ನುತ್ತಾರೆ. ಉಳಿದ ಶೇ.೩೭ರಷ್ಟು ಮಂದಿ ಬೇಡವೆನ್ನುತ್ತಾರೆ.

ಮಹಿಳಾ ಪರ ಯೋಜನೆಗಳಲ್ಲಿ ಸೂಕ್ಷ್ಮವಾದ ಸೈದ್ಧಾಂತಿಗಳು ಇದ್ದರೆ ಯೋಜನೆಗಳು ಹೆಚ್ಚು ಪಾರದರ್ಶಕವಾಗಿದ್ದು ಮಹಿಳೆಯರ ಬೇಡಿಕೆಗಳಿಗೆ ಸೂಕ್ತವಾಗಿ ಸ್ಪಂದಿಸುತ್ತದೆ: ಇದರಿಂದ ಮಹಿಳೆಯರ ಅಭಿವೃದ್ಧಿಯೂ ಸಾಧ್ಯವಾಗುತ್ತದೆ. ಆದರೆ ಇಂದು ಸರ್ಕಾರಿ ಮಹಿಳಾ ಯೋಜನೆಗಳಲ್ಲಿ ಯಾವುದೇ ರೀತಿಯ ಸೂಕ್ಷ್ಮ ಸೈದ್ಧಾಂತಿಕತೆ ಇಲ್ಲ. ಇದರಿಂದಾಗಿ ಮಹಿಳಾ ಯೋಜನೆಗಳು ಮಹಿಳಾ ಪರ ಕೆಲಸ ಮಾಡುವುದನ್ನೇ ನಿಲ್ಲಿಸಿವೆ. ಏಕೆಂದರೆ ಈ ಸೈದ್ಧಾಂತಗಳನ್ನು ಪುರುಷ ಪ್ರಧಾನತೆಯು ಯೋಜನೆಗಳಲ್ಲಿ ಅಳವಡಿಸಲು ಬಿಡುತ್ತಿಲ್ಲ. ಹೀಗಾಗಿ ಮಹಿಳಾಪರ ಸರ್ಕಾರಿ ಯೋಜನೆಗಳಲ್ಲಿ ಇನ್ನೂ ಸ್ಪಷ್ಟವಾದ ಸೈದ್ಧಾಂತಿಕ ಬೇಕೆಂದು ಮೇಲಿನ ಫಲಿತಾಂಶಗಳ ಮೂಲಕ ತಿಳಿಯಬಹುದು.

ಕೋಷ್ಠಕ ೧೬

ನಿಮ್ಮ ಪಂಚಾಯತ್ ಸಭೆಗಳಲ್ಲಿ ಮಹಿಳಾ ಗುಂಪುಗಳು ಮುಕ್ತವಾಗಿ ಭಾಗವಹಿಸುತ್ತಿವೆಯೇ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೦೧	೦೨	೦೧	೧೩
೨	ಇಲ್ಲ	೦೨	೦೫	೦೧	೧೨
೩	ತುಂಬಾ ಕಡಿಮೆ	೩೯	೯೩	೦೬	೭೫
	ಒಟ್ಟು	೪೨	೧೦೦	೦೮	೧೦೦

ಕೋಷ್ಠಕ ೧೬ರ ಅಂಕಿ-ಅಂಶಗಳ ಪ್ರಕಾರ ಪಂಚಾಯತ್ ಸಭೆಗಳಲ್ಲಿ ಮಹಿಳಾ ಗುಂಪುಗಳು ಮುಕ್ತವಾಗಿ ಭಾಗವಹಿಸುತ್ತಿವೆಯೆ? ಎಂಬ ಪ್ರಶ್ನೆಗೆ ಶೇ.೦೨ರಷ್ಟು ಮಹಿಳಾ ಸದಸ್ಯರು ಹೌದು ಎಂದರೆ ಇನ್ನುಳಿದ ೦೫% ರಷ್ಟು ಮಂದಿ ಇಲ್ಲ ಎಂದಿದ್ದಾರೆ. ಶೇ.೯೩ರಷ್ಟು ಮಂದಿ ಮಹಿಳೆಯರು ತುಂಬಾ ಕಡಿಮೆ ಎನ್ನುತ್ತಾರೆ. ಇನ್ನು ಪುರುಷರ ಸದಸ್ಯರನ್ನು ಪ್ರಶ್ನಿಸಿದಾಗ ಶೇ.೧೩ರಷ್ಟು ಮಂದಿ ಹೌದು ಎಂದರೆ, ಶೇ.೧೨ ಮಂದಿ ಇಲ್ಲಿ ಎನ್ನುತ್ತಾರೆ. ಶೇ.೭೫ರಷ್ಟು ಮಂದಿ ತುಂಬಾ ಕಡಿಮೆ ಎಂದು ಉತ್ತರಿಸುತ್ತಾರೆ. ಒಟ್ಟಾರೆಯಾಗಿ ಈ ಅಂಕಿ-ಅಂಶಗಳನ್ನು ನೋಡಿದಾಗ ಪಂಚಾಯತ್ ಸಭೆಗಳಲ್ಲಿ ಮಹಿಳಾ ಗುಂಪುಗಳು ಅತಿ ಕಡಿಮೆ ಪ್ರಮಾಣದಲ್ಲಿ ಭಾಗವಹಿಸುತ್ತಿವೆ. ಏಕೆಂದರೆ ಮಹಿಳಾ ಗುಂಪುಗಳಿಗೆ ಪಂಚಾಯತ್ ಸಭೆಗಳಲ್ಲಿ ಭಾಗವಹಿಸುವ ವಿಧಾನ ಯೋಜನೆ ಮತ್ತು ಕಾರ್ಯತಂತ್ರಗಳ ಬಗ್ಗೆ ತಿಳುವಳಿಕೆ ಇರುವುದಿಲ್ಲ. ಆದ್ದರಿಂದಾಗಿ ಅವರು ಪಂಚಾಯತ್ ಸಭೆಗಳಲ್ಲಿ ಮುಕ್ತವಾಗಿ ಭಾಗವಹಿಸುವುದಿಲ್ಲ. ಸರ್ಕಾರವು ಈ ಬಗ್ಗೆ ಗಮನಹರಿಸಿ ಮಹಿಳಾ ಗುಂಪುಗಳು

ಪಂಚಾಯತ್ ಸಭೆಗಳಲ್ಲಿ ಮುಕ್ತವಾಗಿ ಭಾಗವಹಿಸುವುದಿಲ್ಲ. ಸರ್ಕಾರವು ಈ ಬಗ್ಗೆ ಗಮನಹರಿಸಿ ಮಹಿಳಾ ಗುಂಪುಗಳು ಪಂಚಾಯತ್ ಸಭೆಗಳಲ್ಲಿ ಮುಕ್ತವಾಗಿ ಭಾಗವಹಿಸಿ ಮಹಿಳಾ ಯೋಜನೆಗಳ ಬಗ್ಗೆ ಮಾಹಿತಿ ಪಡೆದು ಅದರ ಸೌಲಭ್ಯಗಳನ್ನು ಪಡೆದು ಅಭಿವೃದ್ಧಿ ಹೊಂದುವಂತೆ ಮಾಡಬೇಕು. ಆದರೆ ಇಂದು ಸರ್ಕಾರದ ನಿರ್ಲಕ್ಷ್ಯದಿಂದ ಮಹಿಳಾ ಗುಂಪುಗಳು ಪಂಚಾಯತ್ ಸಭೆಗಳಲ್ಲಿ ಮುಕ್ತವಾಗಿ ಭಾಗವಹಿಸುತ್ತಿಲ್ಲ. ಇದರಿಂದಾಗಿ ಅವರಿಗೆ ಮಹಿಳಾ ಯೋಜನೆಗಳ ಬಗ್ಗೆ ಯಾವುದೇ ಮಾಹಿತಿ ಇದರ ಕಾರಣ ಆಯಾ ಯೋಜನೆಗಳ ಸೌಲಭ್ಯಗಳನ್ನು ಪಡೆದು ಅಭಿವೃದ್ಧಿ ಹೊಂದುವಲ್ಲಿ ವಿಫಲರಾಗುತ್ತಿದ್ದಾರೆ.

ಪಂಚಾಯತ್ ಸಭೆಗಳಲ್ಲಿ ಮಹಿಳಾ ಗುಂಪುಗಳ ಮುಕ್ತ ಭಾಗವಹಿಸುವಿಕೆಯ ಶೇಕಡಾವಾರು ಫಲಿತಾಂಶವನ್ನು ರೇಖಾನಕ್ಷೆ ೧೬ರಲ್ಲಿ ಕಾಣಬಹುದು.

ಕೋಷ್ಟಕ ೧೭

ಸರ್ಕಾರಿ ಯೋಜನೆಗಳ ಲಾಭಗಳನ್ನು ನೇರವಾಗಿ ಪಡೆದು ಮಹಿಳೆಯರು ಸಬಲರಾಗಿದ್ದಾರಾ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೦೨	೦೫	೦೨	೨೫
೨	ಇಲ್ಲ	೦೩	೦೭	೦೨	೨೫
೩	ಸಮಾಜಕ್ಕೆ ತಕ್ಕಂತೆ	೩೭	೮೮	೦೪	೫೦
	ಒಟ್ಟು	೪೨	೧೦೦	೦೮	೧೦೦

ಕೋಷ್ಟಕ ೧೭ರ ಅಂಕಿ ಅಂಶಗಳನ್ನು ಗಮನಿಸಿದಾಗ ಸರ್ಕಾರಿ ಯೋಜನೆಗಳ ಲಾಭವನ್ನು ನೇರವಾಗಿ ಪಡೆದು ಮಹಿಳೆಯರು ಸಬಲರಾಗಿದ್ದಾರಾ? ಎಂಬ ಪ್ರಶ್ನೆಗೆ ಶೇ.೦೫ರಷ್ಟು ಮಹಿಳಾ ಅಧ್ಯಕ್ಷರು 'ಹೌದು' ಎಂದು ಉತ್ತರಿಸಿದ್ದಾರೆ. ಶೇ.೦೭ರಷ್ಟು ಮಂದಿ 'ಇಲ್ಲ' ಎಂದು ಉತ್ತರಿಸಿದ್ದಾರೆ. ಮತ್ತು ಶೇ.೮೮ರಷ್ಟು ಮಂದಿ 'ಸಂದರ್ಭಕ್ಕೆ ತಕ್ಕಂತೆ' ಎಂದು ಉತ್ತರಿಸಿದ್ದಾರೆ. ಪುರುಷ ಅಧ್ಯಕ್ಷರ ಅಂಕಿ ಅಂಶಗಳನ್ನು ನೋಡಿದಾಗ ಶೇ.೨೫ರಷ್ಟು ಮಂದಿ 'ಹೌದು' ಎಂದಿದ್ದಾರೆ. ಶೇ.೨೫ರಷ್ಟು ಮಂದಿ 'ಇಲ್ಲ' ಎಂದು ಉತ್ತರಿಸಿದ್ದಾರೆ ಮತ್ತು ಶೇ.೫೦ರಷ್ಟು ಪುರುಷರು ಸಂದರ್ಭಕ್ಕೆ ತಕ್ಕಂತೆ ಸರ್ಕಾರಿ ಯೋಜನೆಗಳ ಲಾಭಗಳನ್ನು ನೇರವಾಗಿ ಪಡೆದು ಸಬಲರಾಗಿದ್ದಾರೆ ಎಂದಿದ್ದಾರೆ.

ಸರ್ಕಾರಿ ಯೋಜನೆಗಳನ್ನು ಮಹಿಳೆಯರು ನೇರವಾಗಿ ಪಡೆದು ಸಬಲರಾಗುತ್ತಿಲ್ಲ. ಏಕೆಂದರೆ ಲೋಪ-ದೋಷಗಳಿಂದ ಕೂಡಿದ ಯೋಜನೆಗಳು ಎಲ್ಲಾ ಹಂತಗಳಲ್ಲೂ ಪುರುಷ ಮೌಲ್ಯಗಳನ್ನೊಳಗೊಂಡಿದೆ. ಹೀಗಾಗಿ ಅವುಗಳ ಕಾರ್ಯವಿಧಾನಗಳು ಸಮರ್ಪಕವಾಗಿಲ್ಲವಾದ್ದರಿಂದ ಇವುಗಳ ಲಾಭಗಳನ್ನು ಪಡೆದು ಮಹಿಳೆಯರು ಸಬಲರಾಗುತ್ತಿಲ್ಲ.

ಕೋಷ್ಟಕ ೧೮

ಎಲ್ಲಾ ಸರ್ಕಾರಿ ಯೋಜನೆಗಳು ಮಹಿಳೆಯರ ವ್ಯಕ್ತಿತ್ವ ಮತ್ತು ಸಾಮರ್ಥ್ಯವನ್ನು ಪರಿಗಣಿಸಿವೆ ಎಂದು ಭಾವಿಸುವಿರಾ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೨೪	೫೭	೦೭	೮೮
೨	ಇಲ್ಲ	೧೮	೪೩	೦೧	೧೨
ಒಟ್ಟು		೪೨	೧೦೦	೦೮	೧೦೦

ಕೋಷ್ಟಕ ೧೮ರ ಅಂಕಿ ಅಂಶಗಳನ್ನು ಗಮನಿಸಿದಾಗ ಶೇ.೫೭ರಷ್ಟು ಮಹಿಳಾ ಸದಸ್ಯರು ಎಲ್ಲಾ ಸರ್ಕಾರಿ ಯೋಜನೆಗಳು ಮಹಿಳೆಯರ ವ್ಯಕ್ತಿತ್ವ ಮತ್ತು ಸಾಮರ್ಥ್ಯವನ್ನು ಪರಿಗಣಿಸಿದೆ ಎಂದರೆ ಇನ್ನುಳಿದ ಶೇ.೪೩ ಮಂದಿ ಪರಿಗಣಿಸಿಲ್ಲ ಎಂದಿದ್ದಾರೆ. ಪುರುಷ ಸದಸ್ಯರಲ್ಲಿ ಶೇ.೮೮ರಷ್ಟು ಮಂದಿ 'ಹೌದು' ಎಂದರೆ ಶೇ.೧೨ರಷ್ಟು ಮಂದಿ ಇಲ್ಲ ಎಂದಿದ್ದಾರೆ.

ಎಲ್ಲಾ ಸರ್ಕಾರಿ ಯೋಜನೆಗಳು ಮಹಿಳೆಯರ ವ್ಯಕ್ತಿತ್ವ ಮತ್ತು ಸಾಮರ್ಥ್ಯವನ್ನು ಪರಿಗಣಿಸಿದ್ದರೆ ಮಹಿಳಾ ಪರ ಯೋಜನೆಗಳು ಯಶಸ್ವಿಯಾಗುತ್ತಿದ್ದವು. ಆದರೆ ಯೋಜನೆಗಳು ಮಹಿಳೆಯರ ವ್ಯಕ್ತಿತ್ವ ಮತ್ತು ಸಾಮರ್ಥ್ಯಗಳನ್ನು ಪರಿಗಣಿಸದೇ ಇರುವುದರಿಂದಾಗಿ ಮಹಿಳೆಯರ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಪಂಚಾಯತ್ ಅಧ್ಯಕ್ಷರು ಈ ರೀತಿಯ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಮನವಿ ಮಾಡಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಪಂಚಾಯತ್ ಅಧ್ಯಕ್ಷರು ಈ ರೀತಿಯ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಮನವಿ ಮಾಡಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಮಹಿಳಾ ಅಭಿವೃದ್ಧಿಗಾಗಿ ಅವರ ಜವಾಬ್ದಾರಿಗಳು ಹೆಚ್ಚಳವಾಗಬೇಕಿದೆ.

ಕೋಷ್ಟಕ ೧೯

ನಿಮ್ಮ ಗ್ರಾಮದಲ್ಲಿರುವ ಹೆಣ್ಣು ಮಕ್ಕಳದ ಶಿಕ್ಷಣದ ಅನುಕೂಲಗಳಿಂದ ಹೆಣ್ಣುಮಕ್ಕಳು ಇಂದಿಗೂ ಶಿಕ್ಷಣವನ್ನು ಪಡೆಯುತ್ತಿದ್ದಾರಾ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೨೧	೫೦	೦೩	೫೮
೨	ಇಲ್ಲ	೨೧	೫೦	೦೫	೪೨
ಒಟ್ಟು		೪೨	೧೦೦	೦೮	೧೦೦

ಕೋಷ್ಟಕ ೧೯ರ ಅಂಕಿ ಅಂಶಗಳನ್ನು ನೋಡಿದಾಗ ಶೇ.೫೦ ರಷ್ಟು ಮಂದಿ ಮಹಿಳಾ ಅಧ್ಯಕ್ಷರು ಅವರ ಗ್ರಾಮದಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಅನುಕೂಲತೆಗಳಿಂದ ಹೆಣ್ಣು ಮಕ್ಕಳು ಇಂದಿಗೂ ಶಿಕ್ಷಣವನ್ನು ಪಡೆಯುತ್ತಿದ್ದಾರೆ ಎಂದರೆ ಶೇ.೫೦ರಷ್ಟು ಮಹಿಳೆಯರು ಪಡೆಯುತ್ತಿಲ್ಲ ಎಂದಿದ್ದಾರೆ. ಪುರುಷ ಅಧ್ಯಕ್ಷರ ಅಂಕಿ-ಅಂಶಗಳನ್ನು ನೋಡಿದಾಗ ಶೇ.೩೮ರಷ್ಟು ಮಂದಿ ಶಿಕ್ಷಣ ಪಡೆಯುತ್ತಿದ್ದಾರೆ ಎಂದರೆ ಶೇ.೬೨ರಷ್ಟು ಮಂದಿ ಇಲ್ಲ ಎಂದಿದ್ದಾರೆ.

ಒಟ್ಟಾರೆ ಫಲಿತಾಂಶವನ್ನು ನೋಡಿದಾಗ ಹೆಣ್ಣು ಮಕ್ಕಳಿಗಿರುವ ಶಿಕ್ಷಣದ ಅನುಕೂಲತೆಗಳಿಂದ ಹೆಣ್ಣು ಮಕ್ಕಳು ಇಂದಿಗೂ ಪೂರ್ಣಪ್ರಮಾಣದ ಶಿಕ್ಷಣವನ್ನು ಪಡೆಯುತ್ತಿಲ್ಲ ಎಂಬುದು ಕಂಡುಬರುತ್ತದೆ. ಸರ್ಕಾರವು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ರೂಪಿಸಿದ ಯೋಜನೆಗಳು ಪೂರ್ಣ ಪ್ರಮಾಣದ ಧ್ಯೇಯ ಮತ್ತು ಗುರಿಗಳನ್ನು ಹೊಂದಿಲ್ಲ. ಹೆಣ್ಣು ಮಕ್ಕಳ ಶಿಕ್ಷಣವನ್ನು ಸರ್ಕಾರವು ನಿರ್ಲಕ್ಷಿಸಿದೆ ಎಂದರೆ ಯೋಜನೆಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಅಗತ್ಯವಾದ ಉಚಿತ ಶಿಕ್ಷಣ, ಮಧ್ಯಾಹ್ನದ ಊಟ, ವಸತಿ ನಿಲಯ, ವಿದ್ಯಾರ್ಥಿ ವೇತನ, ಪುಸ್ತಕ, ಸಮವಸ್ತ್ರ, ಸ್ತ್ರೀ ಶಿಕ್ಷಕಿಯರ ನೇಮಕಾತಿ ಇತ್ಯಾದಿ ಅವಶ್ಯಕತೆಗಳನ್ನು ಸರ್ಕಾರ ಸರಿಯಾಗಿ ಪೂರೈಸುತ್ತಿಲ್ಲ. ಹೀಗಾಗಿ ಹೆಣ್ಣು ಮಕ್ಕಳ ಶಾಲಾ ದಾಖಲಾತಿ ಪ್ರಮಾನ ಕಡಿಮೆ ಇದೆ. ಇನ್ನಾದರೂ ಸರ್ಕಾರವು ಹೆಣ್ಣು ಮಕ್ಕಳ ಶಿಕ್ಷಣದ ಅನುಕೂಲತೆಗಳನ್ನು ಮತ್ತಷ್ಟು ಉತ್ತಮಪಡಿಸಿ ಹೆಣ್ಣು ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸುವ ಅಗತ್ಯ ಇದೆ. ಇದಕ್ಕಾಗಿ ಪಂಚಾಯತ್ ಅಧ್ಯಕ್ಷರು ಬಹಳ ಶ್ರಮವಹಿಸಬೇಕಿದೆ.

ಕೋಷ್ಟಕ ೨೦

ಪಂಚಾಯತ್‌ನಲ್ಲಿ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ನಿಮ್ಮದಾಗಿದೆಯೇ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೦೧	೦೨	೦೨	೨೫
೨	ಇಲ್ಲ	೪೦	೯೬	೦೪	೫೦
೩	ಕೆಲವೊಮ್ಮೆ ಮಾತ್ರ	೦೧	೦೨	೦೨	೧೦೦
	ಒಟ್ಟು	೪೨	೧೦೦	೦೮	೧೦೦

ಕೋಷ್ಟಕ ೨೦ರ ಅಂಕಿ-ಅಂಶಗಳನ್ನು ಗಮನಿಸಿದಾಗ ಶೇ.೨ರಷ್ಟು ಮಂದಿ ಮಹಿಳಾ ಪಂಚಾಯತ್ ಅಧ್ಯಕ್ಷರು ಪಂಚಾಯತ್‌ನಲ್ಲಿ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಅವರಿಗಿದೆ ಎಂದರೆ, ಶೇ.೨ರಷ್ಟು ಮಂದಿ ಕೆಲವೊಮ್ಮೆ ಮಾತ್ರ ಎಂದಿದ್ದಾರೆ. ಇನ್ನುಳಿದ ಶೇ.೯೨ರಷ್ಟು ಮಂದಿ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ತಮಗಿಲ್ಲ ಎಂದಿದ್ದಾರೆ. ಇನ್ನು ಪುರುಷ ಅಂಕಿ-ಅಂಶಗಳಿಗೆ ಬಂದಾಗ ಶೇ.೨೫ರಷ್ಟು ಮಂದಿ ನಿರ್ಧಾರ ತೆಗೆದುಕೊಳ್ಳುವ ಹಕ್ಕಿದೆ ಎಂದರೆ, ಶೇ.೨೫ರಷ್ಟು ಮಂದಿ ಕೆಲವೊಮ್ಮೆ ಮಾತ್ರ ಎಂದಿದ್ದಾರೆ ಮತ್ತು ಶೇ.೫೦ರಷ್ಟು ಮಂದಿ ಇಲ್ಲ ಎಂದಿದ್ದಾರೆ.

ಇಲ್ಲಿ ಪುರುಷರಿಗೆ ನಿರ್ಧಾರ ತೆಗೆದುಕೊಳ್ಳುವ ಹಕ್ಕಿಲ್ಲ ಎಂದು ಶೇ.೫೦ರಷ್ಟು ಪುರುಷರು ಹೇಳಿದರೆ, ಶೇ.೯೪%ರಷ್ಟು ಮಂದಿ ಮಹಿಳೆಯರು ತಮಗೆ ನಿರ್ಧಾರ ತೆಗೆದುಕೊಳ್ಳುವ ಹಕ್ಕಿಲ್ಲ ಎಂದಿದ್ದಾರೆ. ಏಕೆಂದರೆ ಪುರುಷ ಪ್ರಧಾನತೆಯೇ ಹೆಚ್ಚಾಗಿರುವ ಪಂಚಾಯತ್‌ನಲ್ಲಿ ಸ್ತ್ರೀಯರ ಸಂಖ್ಯೆ ಕಡಿಮೆ ಇರುತ್ತದೆ ಮತ್ತು ಸ್ತ್ರೀಯರಿಗೆ ಯಾವುದೇ ರೀತಿಯ ನಿರ್ಧಾರ ತೆಗೆದುಕೊಳ್ಳುವ ಹಕ್ಕನ್ನು ಪುರುಷ ಅಧ್ಯಕ್ಷರು ನೀಡುವುದಿಲ್ಲ. ಸ್ತ್ರೀಯರಿಗೆ ಸರಿಯಾಗಿ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂಬ ಧೋರಣೆ ನಮ್ಮ ಸಮಾಜದಲ್ಲಿ ಬಲವಾಗಿ ಬೇರೂರಿ ಬಿಟ್ಟಿದೆ. ಆದ್ದರಿಂದಲೇ ಸ್ತ್ರೀಯರಿಗೆ ಯಾವುದೇ ರೀತಿಯ ನಿರ್ಧಾರ ತೆಗೆದುಕೊಳ್ಳುವ ಹಕ್ಕನ್ನು ಕೊಡದೆ ಅವರ ಹಕ್ಕುಗಳನ್ನು ಪುರುಷ ಪ್ರಧಾನತೆಯು ಕಸಿದುಕೊಂಡು ಮಹಿಳೆಯರನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದೆ. ಹೀಗಾಗಿ ಮಹಿಳೆಯರಿಗೆ ಪಂಚಾಯತ್‌ನಲ್ಲಿ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವಿಲ್ಲ. ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸಬೇಕಾದ ಪಂಚಾಯತ್‌ನಲ್ಲೇ ಲಿಂಗ ತಾರತಮ್ಯಗಳಿರುವುದು ವಿಷಾದದ ಸಂಗತಿಯಾಗಿದೆ.

೩

ಸರ್ಕಾರಿ ಮಹಿಳಾ ಯೋಜನೆಗಳ ಬಗ್ಗೆ ೫೦ ಮಂದಿ ಅಂಗನವಾಡಿ ಕಾರ್ಯಕರ್ತರಿಗೆ ಕೇಳಲಾದ ಪ್ರಶ್ನೆಗಳು.

ಕೋಷ್ಟಕ ೨೧

ನಿಮ್ಮ ಅನುಭವದಲ್ಲಿ ಮಹಿಳೆಯರು ಸರ್ಕಾರಿ ಯೋಜನೆಗಳನ್ನು ಯಶಸ್ವಿಗೊಳಿಸಲು ಮುಕ್ತವಾಗಿ ಭಾಗವಹಿಸುತ್ತಾರೆಯೇ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಹೌದು	೪೮	೯೬
೨	ಇಲ್ಲ	೦೨	೦೪
	ಒಟ್ಟು	೧೦೦	೧೦೦

ಕೋಷ್ಟಕ ೨೧ರ ಫಲಿತಾಂಶವನ್ನು ನೋಡಿದಾಗ ಅಂಗನವಾಡಿ ಕಾರ್ಯಕತೃರು ಅವರ ಅನುಭವದಲ್ಲಿ ಶೇ.೯೬ರಷ್ಟು ಮಹಿಳೆಯರು ಸರ್ಕಾರಿ ಯೋಜನೆಗಳನ್ನು ಯಶಸ್ವಿಗೊಳಿಸುತ್ತಾರೆ. ಎಂದರೆ, ಇನ್ನುಳಿದ ಶೇ.೪ರಷ್ಟು ಮಂದಿ ಭಾಗವಹಿಸುವುದಿಲ್ಲ ಎಂದಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಯೋಜನೆಗಳಲ್ಲಿ ಭಾಗವಹಿಸುತ್ತಾರೆಂದು ಅಂಕಿ–ಅಂಶಗಳು ತೋರಿಸುತ್ತಿದ್ದರೂ ಸಹ ಮಹಿಳೆಯರ ಅಭಿವೃದ್ಧಿ ಮಾತ್ರ ಸಾಧ್ಯವಾಗುತ್ತಿಲ್ಲ.

ಸರ್ಕಾರದ ಮತ್ತು ಸಮಾಜದ ಸೇತುವೆಯಾದಂತಹ ಅಂಗನವಾಡಿ ಕಾರ್ಯಕರ್ತರು ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಪ್ರಚಾರಪಡಿಸುತ್ತಿದ್ದರೂ ಸಹ ಯೋಜನೆಗಳ ಕಾರ್ಯವಿಧಾನದಲ್ಲಿರುವ ಲಿಂಗ ತಾರತಮ್ಯಗಳಿಂದಾಗಿ ಯೋಜನೆಗಳು ಮಹಿಳೆಯರ ಪರವಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಆದ್ದರಿಂದಾಗಿ ಅಭಿವೃದ್ಧಿ ಯೋಜನೆಗಳ ಕಾರ್ಯ ವಿಧಾನ, ಮೌಲ್ಯಮಾಪನದಲ್ಲಿರುವ ಪ್ರಮುಖ ಸಮಸ್ಯೆಗಳನ್ನು ಅವಲೋಕಿಸಿ ಅದರ ನಿವರಣೆಗೆ ಸೂಕ್ತ ಕ್ರಮಗಳನ್ನು ಕೈಗೊಂಡು ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಯಶಸ್ವಿಗೊಳಿಸಬೇಕಾದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಅಂಗವಾಡಿ ಕಾರ್ಯಕರ್ತರು ಈ ಕಾರ್ಯ ನಿರ್ವಹಿಸಬೇಕಿದೆ.

ಕೋಷ್ಟಕ ೨೨

ನಿಮ್ಮ ಪ್ರಕಾರ ಯಾವ ಯೋಜನೆಯಲ್ಲಿ ಮಹಿಳೆಯರು ಮುಕ್ತವಾಗಿ ಭಾಗವಹಿಸುತ್ತಾ/ ಭಾಗವಹಿಸುತ್ತಿದ್ದಾರೆ.

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಆರೋಗ್ಯ	೩೧	೬೨
೨	ವಿದ್ಯಾಭ್ಯಾಸ	೧೨	೨೪
೩	ಉದ್ಯೋಗ	೦೭	೧೪
	ಒಟ್ಟು	೫೦	೧೦೦

ಕೋಷ್ಟಕ ೨೨ರ ಫಲಿತಾಂಶವನ್ನು ನೋಡಿದಾಗ ಅಂಗನವಾಡಿ ಕಾರ್ಯಕರ್ತೆಯರ ಪ್ರಕಾರ ಶೇ.೬೮ರಷ್ಟು ಮಹಿಳೆಯರು ಆರೋಗ್ಯ ಸಂಬಂಧಿ ಯೋಜನೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಶೇ.೨೪ರಷ್ಟು ಮಂದಿ ವಿದ್ಯಾಭ್ಯಾಸ ಮತ್ತು ಶೇ.೧೪ ರಷ್ಟು ಮಂದಿ ಉದ್ಯೋಗ ಸಂಬಂಧಿ ಯೋಜನೆಗಳಲ್ಲಿ ಭಾಗವಹಿಸುತ್ತಾರೆ. ಆರೋಗ್ಯ ಕ್ಷೇತ್ರಕ್ಕೆ ನೀಡಿದ ಮಹತ್ವವನ್ನು ಸ್ತ್ರೀಯರು ವಿದ್ಯಾಭ್ಯಾಸ ಮತ್ತು ಉದ್ಯೋಗ ಕ್ಷೇತ್ರಗಳಿಗೆ ನೀಡುತ್ತಿಲ್ಲ. ಮಹಿಳೆಯರಿಗೆ ವಿದ್ಯಾಭ್ಯಾಸ ಮತ್ತು ಉದ್ಯೋಗ ದ್ವಿತೀಯ ಆಯ್ಕೆಯಾಗಿದೆ ಎಂದು ಭಾವಿಸಿ ನಿರ್ಲಕ್ಷಿಸುತ್ತಾರೆ. ಆದ್ದರಿಂದಾಗಿ ಈ ಕ್ಷೇತ್ರಗಳಲ್ಲಿ ಮಹಿಳೆಯರ ಅಭಿವೃದ್ಧಿ ಕುಂಠಿತಗೊಂಡಿದೆ ಎಂದು ಅಂಗನವಾಡಿ ಕಾರ್ಯಕರ್ತರು ಅಭಿಪ್ರಾಯಪಡುತ್ತಾರೆ. ಮಹಿಳೆಯರ ವಿದ್ಯಾಭ್ಯಾಸ, ಉದ್ಯೋಗಕ್ಕೆ ಸಂಬಂಧಿಸಿದಂತ ಹೆಚ್ಚಿನ ಯೋಜನೆಗಳು ಬರುತ್ತಿಲ್ಲ. ಕೆಲವೊಂದು ಯೋಜನೆಗಳಿದ್ದರೂ ಅವು ಮಹಿಳೆಯರನ್ನು ಅಭಿವೃದ್ಧಿ ಪಡಿಸುವಲ್ಲಿ ವಿಫಲವಾಗಿದೆ. ಸಮಾಜವು ಮಹಿಳೆಯರಿಗೆ ವಿದ್ಯಾಭ್ಯಾಸ ಮತ್ತು ಉದ್ಯೋಗಗಳು ನಿರುಪಯೋಗವೆಂದು ಅವರು ಗೃಹಕೃತ್ಯಗಳಿಗೇ ಸೀಮಿತವಾಗಬೇಕೆಂದು ಬಯಸುತ್ತದೆ. ಹಾಗಾಗಿ ಈ ಕ್ಷೇತ್ರಗಳ ವಿಶೇಷ ಅಭಿವೃದ್ಧಿಗಾಗಿ ಯೋಜನೆಗಳನ್ನು ನಿಖರವಾಗಿ ರೂಪಿಸಿಲ್ಲ. ಈ ಕ್ಷೇತ್ರಗಳಿಗೆ ಸಂಬಂಧಿಸಿದ ಯೋಜನೆಗಳು ಪುರುಷರಿಗೆ ಲಾಭ ತರುತ್ತದೆ ಹೊರತು ಮಹಿಳೆಯರಿಗಲ್ಲ. ಹೀಗಾಗಿ ಮಹಿಳೆಯರು ವಿದ್ಯಾಭ್ಯಾಸ ಮತ್ತು ಉದ್ಯೋಗ ಕ್ಷೇತ್ರಗಳ ಬಗ್ಗೆ ಹೆಚ್ಚಾಗಿ ಆಸಕ್ತಿ ತೋರಿಸುತ್ತಿಲ್ಲ ಎಂದು ಅಂಗನವಾಡಿ ಕಾರ್ಯಕರ್ತರು ಹೇಳುತ್ತಾರೆ.

ಕೋಷ್ಟಕ ೨೩

ಹಲವಾರು ಯೋಜನೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ

ಯಾರು ಅಡೆತಡೆ ಒಡ್ಡುತ್ತಿದ್ದಾರೆ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ತಾವೇ	೦೪	೮
೨	ಸಮಾಜ	೧೨	೨೪
೩	ಕುಟುಂಬ	೨೮	೫೬
೪	ಗಂಡ	೦೬	೧೨
ಒಟ್ಟು		೫೦	೧೦೦

ಕೋಷ್ಟಕ ೨೩ರ ಪ್ರಕಾರ ಅಂಗನವಾಡಿ ಕಾರ್ಯಕರ್ತೆಯರು ಯೋಜನೆಗಳಲ್ಲಿ ಮಹಿಳೆಯರು ಭಾಗವಹಿಸುವಿಕೆಗೆ ಯಾರು ಅಡೆ-ತಡೆ ಒಡ್ಡುತ್ತಿದ್ದಾರೆಂದು ಕೇಳಿದ ಪ್ರಶ್ನೆಗೆ ಈ ರೀತಿ ಹೇಳುತ್ತಾರೆ.

ಶೇ.೦೮ರಷ್ಟು ಮಹಿಳೆಯರು ತಾನೇ ಯೋಜನೆಗಳಲ್ಲಿ ಭಾಗವಹಿಸುವುದಿಲ್ಲ. ಶೇ.೨೪ರಷ್ಟು ಗಂಡ ಅಡೆತಡೆ ಒಡ್ಡುತ್ತಿದ್ದಾನೆ. ಇಲ್ಲಿ ಸಮಾಜ ಮತ್ತು ಕುಟುಂಬವು ಹೆಚ್ಚಾಗಿ ಮಹಿಳೆಯರು ಯೋಜನೆಗಳಲ್ಲಿ ಭಾಗವಹಿಸುವುದಕ್ಕೆ ಅಡೆತಡೆಯುಂಟು ಮಾಡುತ್ತಿದೆ. ಇಲ್ಲಿ ಸಮಾಜ ಮತ್ತು ಕುಟುಂಬವು ಪುರುಷ ಪ್ರಧಾನತೆಯ ಕೇಂದ್ರ ಬಿಂದುವಾಗಿದ್ದು ಮಹಿಳೆಯರು ಅಲ್ಲಿ ಅಧೀನತೆಯನ್ನು ಒಪ್ಪಿಕೊಂಡು ಬಾಳುವವಳಾಗಿದ್ದಾಳೆ. ಮಹಿಳೆಯರು ಯೋಜನೆಗಳಲ್ಲಿ ಭಾಗವಹಿಸಿ ಅಭಿವೃದ್ಧಿ ಹೊಂದುವುದಕ್ಕಿಂತ ಮುಖ್ಯವಾಗಿ ಗೃಹಿಣಿಯಾಗಿ ಕೌಟುಂಬಿಕ ನಿರ್ವಹಣೆಯನ್ನು ಚೆನ್ನಾಗಿ ಮಾಡಬೇಕು. ಗಂಡ-ಮಕ್ಕಳ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಬೇಕು ಎಲ್ಲಕ್ಕಿಂತ ಮುಖ್ಯವಾಗಿ ಪುರುಷ ಪ್ರಧಾನ ಮೌಲ್ಯಗಳನ್ನು ಒಪ್ಪಿಕೊಂಡು ಅನುಸರಿಸಿಕೊಂಡು ಹೋಗಬೇಕು. ಇದನ್ನೇ ಸಮಾಜ ಮತ್ತು ಕುಟುಂಬ ಬಯಸುತ್ತದೆ. ಇದರ ಬದಲಾಗಿ ಮಹಿಳೆಯರು ಯೋಜನೆಗಳಲ್ಲಿ ಭಾಗವಹಿಸಿ ಅಭಿವೃದ್ಧಿ ಹೊಂದಿದರೆ ಪುರುಷ ಪ್ರಧಾನತೆಯನ್ನು ಆಕೆ ಧಿಕ್ಕರಿಸುತ್ತಾಳೆಂಬ ಕಾರಣಕ್ಕಾಗಿ ಸಮಾಜ ಮತ್ತು ಕುಟುಂಬವು ಸ್ತ್ರೀಯರು ಯೋಜನೆಗಳಲ್ಲಿ ಭಾಗವಹಿಸದಂತೆ ಅಡ್ಡಿಯುಂಟು ಮಾಡುತ್ತವೆ. ಈ ನಿಟ್ಟಿನಲ್ಲಿ ಅಂಗನವಾಡಿ ಕಾರ್ಯಕರ್ತರು ಸಮಾಜದಲ್ಲಿ ಮತ್ತು ಕುಟುಂಬದಲ್ಲಿರುವ ಈ ರೀತಿಯ ಮನೋಭಾವಗಳನ್ನು ನಿವಾರಿಸಿ ಮಹಿಳೆಯ ಯೋಜನೆಗಳಲ್ಲಿ ಮುಕ್ತವಾಗಿ ಭಾಗವಹಿಸುವಂತೆ ಮಾಡಿ ಅವರ ಅಭಿವೃದ್ಧಿಗಾಗಿ ಶ್ರಮಿಸಬೇಕಾಗಿದೆ.

ಕೋಷ್ಟಕ ೨೪

ವಿವಾಹ ಮತ್ತು ಜನ್ಮದಿನಾಂಕವನ್ನು ದಾಖಲಾತಿಯಲ್ಲಿ ನೋಂದಾಯಿಸಲು ಮಹಿಳೆಯರು ಸ್ವ ಇಚ್ಛೆಯಿಂದ ಮತ್ತು ಸಾಮಾಜಿಕ ಪ್ರಜ್ಞೆಯಿಂದ ಬರುತ್ತಾರೆಯೇ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಹೌದು	೧೩	೨೬
೨	ಇಲ್ಲ	೩೭	೭೪
ಒಟ್ಟು		೫೦	೧೦೦

ಕೋಷ್ಟಕ ೨೪ ಅಂಕಿ-ಅಂಶಗಳ ಪ್ರಕಾರ ಶೇ.೨೬ರಷ್ಟು ಮಹಿಳೆಯರು ವಿವಾಹ ಮತ್ತು ಜನ್ಮದಿನಾಂಕವನ್ನು ದಾಖಲಾತಿಯಲ್ಲಿ ನೊಂದಾಯಿಸಲು ಸ್ವ ಇಚ್ಛೆ ಮತ್ತು ಸಾಮಾಜಿಕ ಪ್ರಜ್ಞೆಯಿಂದ ಬರುತ್ತಾರೆ. ಇನ್ನುಳಿದ ಶೇ.೭೪ರಷ್ಟು ಮಂದಿ ಬರುವುದಿಲ್ಲ. ಅಂಗನವಾಡಿ ಕಾರ್ಯಕರ್ತರ ಅಭಿಪ್ರಾಯದಂತೆ ಇಂದು ಮಹಿಳೆಯ ಶಿಕ್ಷಣದ ಮಟ್ಟ ಹೆಚ್ಚುತ್ತಿದ್ದರೂ ಸಹ ಅವರ ಸಾಮಾಜಿಕ ಪ್ರಜ್ಞೆ ಕುಸಿಯುತ್ತದೆ. ವಿವಾಹ ಮತ್ತು ಜನ್ಮದಿನಾಂಕವನ್ನು ಕಡ್ಡಾಯವಾಗಿ ನೋಂದಾಯಿಸಬೇಕಾದುದು

ಎಲ್ಲರ ಕರ್ತವ್ಯ. ಆದರೆ ಮಹಿಳೆಯರು ಇದು ತಮಗೆ ಸಂಬಂಧಪಟ್ಟಿರುವುದಿಲ್ಲ ಎಂದು ನಿರ್ಲಕ್ಷ್ಯತನದಿಂದ ವರ್ತಿಸುತ್ತಿರುವುದು ಅವರಿಗೆ ಸಾಮಾಜಿಕ ಪ್ರಜ್ಞೆಯು ಕಡಿಮೆ ಇದೆ ಎಂಬುದನ್ನು ಸೂಚಿಸುತ್ತದೆ. ಕೆಲವು ಮಹಿಳೆಯರ ದಾಖಲಾತಿಗಳು ನೋಂದಾಯಿಸಲು ಬಂದರೂ ಅದು ಇತರರ ಒತ್ತಾಯದಿಂದ ಮತ್ತು ಅದರಿಂದ ಏನಾದರೂ ಲಾಭವಾದೀತು ಎಂಬ ಉದ್ದೇಶದಿಂದ ಮಾತ್ರ. ಇಲ್ಲಿ ಮುಖ್ಯವಾಗಿ ಮಹಿಳೆಯರಿಗೆ ಸಾಮಾಜಿಕ ಪ್ರಜ್ಞೆ ಇಲ್ಲದಿರುವುದು ಪ್ರಮುಕವಾಗಿ ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಅಂಗನವಾಡಿಕಾರ್ಯಕರ್ತೆರು ಮಹಿಳೆಯರಲ್ಲಿ ಸಾಮಾಜಿಕ ಪ್ರಜ್ಞೆಯ ಅರಿವನ್ನು ಮೂಡಿಸಬೇಕು ಸಮಾಜದ ಜವಾಬ್ದಾರಿಗಳನ್ನು ಅರಿತು ತಮ್ಮ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸುವಂತಾಗಬೇಕು. ಆಗ ಮಾತ್ರ ಮಹಿಳೆಯರ ಅಭಿವೃದ್ಧಿ ಸಾಧ್ಯವಾಗುತ್ತದೆ.

ಕೋಷ್ಟಕ ೨೩

ಸ್ವಸಹಾಯ ಮಹಿಳಾ ಗುಂಪುಗಳು ಮಹಿಳೆಯರ ಸಬಲೀಕರಣಕ್ಕೆ ಸರ್ಕಾರಿ ಯೋಜನೆಗಳನ್ನು ಸಮರ್ಪಕವಾಗಿ ಸದುಪಯೋಗ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆಯೇ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಹೌದು	೪೦	೮೦
೨	ಇಲ್ಲ	೧೦	೨೦
ಒಟ್ಟು		೫೦	೧೦೦

ಕೊಷ್ಟಕ ೨೫ರ ಪ್ರಕಾರ ಸ್ವ ಸಹಾಯ ಮಹಿಳಾ ಗುಂಪುಗಳು ಮಹಿಳೆಯರ ಸಬಲೀಕರಣಕ್ಕೆ ಸರ್ಕಾರಿ ಯೋಜನೆಗಳನ್ನು ಸಮರ್ಪಕವಾಗಿ ಸದುಪಯೋಗ ಪಡಸಿಕೊಳ್ಳುವಲ್ಲಿ ಶೇ.೮೦ರಷ್ಟು ಯಶಸ್ವಿಯಾಗಿದ್ದಾರೆ. ಇನ್ನುಳಿದ ಶೇ.೨೦ರಷ್ಟು ಮಂದಿ ಸರ್ಕಾರಿ ಯೋಜನೆಗಳನ್ನು ಬಳಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಇಲ್ಲಿ ಶೇ.೮೦ರಷ್ಟು ಸ್ವಸಹಾಯ ಮಹಿಳಾ ಗುಂಪುಗಳು ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದಾರೆ. ಆದರೆ ಅವರ ಯಶಸ್ಸನ್ನು ರಾಷ್ಟ್ರೀಯ ಆದಾಯದಲ್ಲಿ ಪರಿಗಣಿಸುತ್ತಿಲ್ಲ ಮತ್ತು ಅವರನ್ನು ಅಭಿವೃದ್ಧಿ ವಾಹಕರನ್ನಾಗಿ ಗುರುತಿಸುತ್ತಿಲ್ಲ. ಜೊತೆಗೆ ಸರ್ಕಾರದ ಎಲ್ಲಾ ಯೋಜನೆಗಳನ್ನು ಸ್ವ ಸಹಾಯ ಗುಂಪುಗಳು ಪಡೆಯಲಾಗುತ್ತಿಲ್ಲ. ಏಕೆಂದರೆ ಯೋಜನೆಗಳ ಅಸಮರ್ಪಕ ಧ್ಯೇಯಗಳು ಮತ್ತು ಸ್ವ ಸಹಾಯ ಗುಂಪುಗಳಿಗೆ ಅವಶ್ಯಕವಾದ ಬಂಡವಾಳ, ತರಬೇತಿ, ಮಾರುಕಟ್ಟೆ ಸೌಲಭ್ಯಗಳನ್ನು ಸರ್ಕಾರ ಸ್ವ ಸಹಾಯ ಗುಂಪುಗಳಿಗೆ ಒದಗಿಸುತ್ತಿಲ್ಲ. ಎಲ್ಲಾ ಸೌಲಭ್ಯಗಳು ಮತ್ತು ಯೋಜನೆಗಳ ಬಗ್ಗೆ ನಿಖರ ಮಾಹಿತಿಗಳು ಸ್ವ

ಸಹಾಯ ಗುಂಪುಗಳಿಗೆ ಲಭ್ಯವಾದಾಗ ಮಾತ್ರ ಅವರು ಶೇ.೧೦೦ರಷ್ಟು ಯಶಸ್ವಿಯಾಗುತ್ತಾರೆನ್ನುವುದರಲ್ಲಿ ಎರಡು ಮಾತಿಲ್ಲ. ಈ ನಿಟ್ಟಿನಲ್ಲಿ ಯೋಜನೆಗಳು ಮಹಿಳಾ ಸ್ವ ಸಹಾಯ ಗುಂಪುಗಳಿಗೆ ಪೂರ್ಣಪ್ರಮಾಣದಲ್ಲಿ ಲಭ್ಯವಾಗುವಂತೆ ಅಂಗನವಾಡಿ ಕಾರ್ಯಕರ್ತರು ಶ್ರಮಿಸಬೇಕು.

ಕೋಷ್ಟಕ ೨೬

ಸರ್ಕಾರಿ ಯೋಜನೆಗಳ ಮೌಲ್ಯಮಾಪನದ ಸಂದರ್ಭದಲ್ಲಿ ಮಹಿಳೆಯರ ಅನುಭವಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿದೆಯೇ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಹೌದು	೧೧	೨೨
೨	ಇಲ್ಲ	೩೯	೭೮
ಒಟ್ಟು		೫೦	೧೦೦

ಯಾವುದೇ ಯೋಜನೆಯಾಗಲೀ ಅವುಗಳ ಮೌಲ್ಯಮಾನದ ಸಂದರ್ಭದಲ್ಲಿ ಮಹಿಳೆಯರ ಅನುಭವಗಳನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ. ಆದರೆ ಇಂದು ಸರ್ಕಾರಿ ಯೋಜನೆಗಳ ಮೌಲ್ಯಮಾಪನದ ಸಂದರ್ಭದಲ್ಲಿ ಮಹಿಳೆಯರ ಅನುಭವಗಳನ್ನು ಶೇ.೭೮ರಷ್ಟು ಪರಿಗಣಿಸುವುದೇ ಇಲ್ಲ. ಕೇವಲ ಶೇ.೨೨ರಷ್ಟು ಮಾತ್ರ ಮಹಿಳೆಯರನ್ನು ಪರಿಗಣಿಸುತ್ತಾರೆಂದು ಅಂಗನವಾಡಿ ಕಾರ್ಯಕರ್ತೆಯರು ಹೇಳುತ್ತಾರೆ. ಮಹಿಳೆಯರನ್ನು ಶೇ.೨೨ರಷ್ಟು ಪರಿಗಣಿಸಿದರೂ ಸಹ ಅಲ್ಲಿ ಅವರ ಅನುಭವಗಳಿಗೆ ಯಾವುದೇ ಬೆಲೆಯಿರುವುದಿಲ್ಲ. ಅದು ಕೇವಲ ನಾಮಮಾತ್ರಕ್ಕೆ ಮೀಸಲಾಗಿರುತ್ತದೆ. ಆದ್ದರಿಂದಾಗಿ ಬಹುಪಾಲು ಮಹಿಳೆಯರ ಅನುಭವಗಳನ್ನು ಸರ್ಕಾರಿ ಯೋಜನೆಗಳ ಮೌಲ್ಯಮಾಪನದ ಸಂದರ್ಭದಲ್ಲಿ ಗಂಭೀರವಾಗಿ ಪರಿಗಣಿಸುವುದಿಲ್ಲ. ಇದರಿಂದಾಗಿ ಯೋಜನೆಗಳಲ್ಲಿರುವ ಲೋಪ-ದೋಷಗಳು ಮರು ಮೌಲ್ಯಮಾಪನಗೊಂಡು ಯಶಸ್ವಿಯಾಗಿ ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸುವಲ್ಲಿ ವಿಫಲವಾಗಿದೆ. ಆದ್ದರಿಂದಾಗಿ ಸರ್ಕಾರಿ ಯೋಜನೆಗಳ ಮೌಲ್ಯಮಾಪನದಲ್ಲಿ ಮಹಿಳೆಯರ ಅನುಭವಗಳನ್ನು ಸರ್ಕಾರಿ ಮೌಲ್ಯಮಾಪಕರು ಗಂಭೀರವಾಗಿ ಪರಿಗಣಿಸಿ ಅವರಿಗೆ ಅನುಕೂಲವಾಗು ವಂತಹ ಯೋಜನೆಗಳನ್ನು ಸಿದ್ಧಪಡಿಸುವ ಅವಶ್ಯಕತೆ ಇದೆ. ಈ ಫಲಿತಾಂಶಗಳನ್ನು

ಕೊಷ್ಟಕ ೨೭

ಸರ್ಕಾರಿ ಯೋಜನೆಗಳ ಮೌಲ್ಯಮಾಪನದ ಸಂದರ್ಭದಲ್ಲಿ ಮಹಿಳಾ ಫಲನಾನುಭವಿಗಳ ಸಮಸ್ಯೆಗಳನ್ನು ಕಡೆಗಣಿಸಲಾಗುತ್ತಿದೆಯೇ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಹೌದು	೪೧	೮೨
೨	ಇಲ್ಲ	೦೯	೧೮
ಒಟ್ಟು		೫೦	೧೦೦

ಅಂಗನವಾಡಿ ಕಾರ್ಯಕರ್ತೆಯರ ಪ್ರಕಾರ ಕೋಷ್ಟಕ ೨೭ರ ಅಂಕಿ-ಅಂಶಗಳನ್ನು ಗಮನಿಸಿದಾಗ ಶೇ.೮೨ರಷ್ಟು ಭಾಗ ಸರ್ಕಾರಿ ಯೋಜನೆಗಳ ಮೌಲ್ಯಮಾಪನದ ಸಂದರ್ಭದಲ್ಲಿ ಮಹಿಳಾ ಫಲಾನುಭವಿಗಳ ಸಮಸ್ಯೆಗಳನ್ನು ಕಡೆಗಣಿಸಲಾಗುತ್ತದೆ. ಇನ್ನುಳಿದ ಶೇ.೧೮ರಷ್ಟು ಭಾಗ ಮಾತ್ರ ಮಹಿಳಾ ಫಲಾನುಭವಿಗಳ ಸಮಸ್ಯೆಗಳನ್ನು ಗುರುತಿಸಲಾಗುತ್ತದೆ ಎಂದು ಹೇಳುತ್ತಾರೆ. ಶೇ.೮೨ರಷ್ಟು ಮಹಿಳಾ ಫಲಾನುಭವಿಗಳ ಸಮಸ್ಯೆಗಳನ್ನು ಗುರುತಿಸಲಾಗುತ್ತಿದೆ ಎಂದು ಹೇಳುತ್ತಾರೆ. ಶೇ.೮೨ರಷ್ಟು ಮಹಿಳಾ ಫಲಾನುಭವಿಗಳ ಸಮಸ್ಯೆಗಳನ್ನು ಕಡಿಗಣಿಸುತ್ತಿರುವುದಕ್ಕೆ ಅವರ ಅಭಿವೃದ್ಧಿ ಕುಂಠಿತಗೊಂಡಿರುವುದೇ ಸಾಕ್ಷಿಯಾಗಿದೆ. ಮಹಿಳಾ ಫಲಾನುಭವಿಗಳ ಸಮಸ್ಯೆಗಳನ್ನು ಸರ್ಕಾರಿ ಯೋಜನೆಗಳ ಮೌಲ್ಯಮಾಪನದ ಸಂದರ್ಭದಲ್ಲಿ ಸೂಕ್ಷ್ಮವಾಗಿ ಪರಿಗಣಿಸಿದರೆ ಅವರ ಸಮಸ್ಯೆಗಳು ಏನೆಂಬುದನ್ನು ತಿಳಿಯುತ್ತದೆ. ಆಗ ಅವರ ಸಮಸ್ಯೆಗಳಿಗೆ ಸೂಕ್ತ ಉತ್ತರವನ್ನು ಉತ್ತಮ ಯೋಜನೆಗಳನ್ನು ಮಾಡುವುದರ ಮೂಲಕ ನೀಡಬಹುದಾಗಿದೆ. ಆದರೆ ಸರ್ಕಾರವು ಯೋಜನೆಗಳನ್ನು ರೂಪಿಸುವಾಗ ಮಹಿಳಾ ಫಲಾನುಭವಿಗಳ ಸಮಸ್ಯೆಗಳನ್ನು ಮೌಲ್ಯಮಾಪನದ ವೇಳೆ ಕಡೆಗಣಿಸಿದ್ದರಿಂದಲೇ ಇಂದಿಗೂ ಮಹಿಳೆಯರ ಸಮಸ್ಯೆಗಳು ಪರಿಹಾರಗೊಳ್ಳದೇ ಮತ್ತಷ್ಟು ಜಟಿಲವಾಗ ತೊಡಗಿದೆ. ಮುಖ್ಯವಾಗಿ ಸರ್ಕಾರಿ ಯೋಜನೆಗಳನ್ನು ಮೌಲ್ಯಮಾಪನ ಮಾಡುವವರು ಪುರುಷ ಪ್ರಧಾನ ಮೌಲ್ಯಗಳನ್ನು ಒಪ್ಪಿಕೊಂಡಿರುವವರೇ ಆಗಿರುವುದರಿಂದ ಸ್ತ್ರೀಯರನ್ನು ನಿರ್ಲಕ್ಷಿಸಿದ್ದಾರೆ. ಇಲ್ಲಿಯೂ ಸಹ ಲಿಂಗತಾರತಮ್ಯ ಹೆಚ್ಚಾಗಿ ಕೆಲಸ ಮಾಡುತ್ತಿದೆ ಎನ್ನಬಹುದು.

ಕೋಷ್ಟಕ ೨೮

ಸರ್ಕಾರಿ ಯೋಜನೆಗಳು ನಿಮ್ಮನ್ನು ತಲುಪುವಲ್ಲಿ ಏನಾದರೂ ಸಮಸ್ಯೆಗಳಾಗುತ್ತವೆಯೇ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಹೌದು	೩೮	೭೬
೨	ಇಲ್ಲ	೧೨	೨೪
ಒಟ್ಟು		೫೦	೧೦೦

ಅಂಗನವಾಡಿ ಕಾರ್ಯಕರ್ತೆಯರ ಪ್ರಕಾರ ಶೇ.೭೯ರಷ್ಟು ಮಂದಿ ಸರ್ಕಾರಿ ಯೋಜನೆಗಳು ಅವರನ್ನು ತಲುಪುವಲ್ಲಿ ಸಮಸ್ಯೆಗಳಾಗಿರುತ್ತವೆ ಎಂದಿದ್ದಾರೆ. ಇನ್ನುಳಿದ ಶೇ.೨೪ರಷ್ಟು ಮಂದಿ ಸರ್ಕಾರಿ ಯೋಜನೆಗಳು ಅವರನ್ನು ತಲುಪುವಲ್ಲಿ ಯಾವುದೇ ಸಮಸ್ಯೆಗಳಿಲ್ಲ ಎಂದಿದ್ದಾರೆ. ಈ ಅಂಕಿ ಅಂಶಗಳನ್ನು ಕೋಷ್ಟಕ ೨೮ರಲ್ಲಿ ಕಾಣಬಹುದು. ಶೇ.೭೯ರಷ್ಟು ಅಂಗನವಾಡಿ ಕಾರ್ಯಕರ್ತರು ಹಲವಾರು ಸಮಸ್ಯೆಗಳಿಂದಾಗಿ ಸರ್ಕಾರಿ ಯೋಜನೆಗಳು ಅವರನ್ನು ತಲುಪುತ್ತಿಲ್ಲ ಎಂದಿದ್ದಾರೆ. ಏಕೆಂದರೆ ಯಾವುದೇ ಯೋಜನೆಗಳು ಜಾರಿಗೊಂಡಾಗ ಆ ಯೋಜನೆಗಳನ್ನು ಕಾರ್ಯಗತಗೊಳಿಸಲು ಅಂಗನವಾಡಿ ಕಾರ್ಯಕರ್ತರಿಗೆ ಸರಿಯಾದ ತರಬೇತಿ, ಶಿಕ್ಷಣ, ಮಾಹಿತಿ, ತಂತ್ರಜ್ಞಾನಗಳನ್ನು ನೀಡುವುದಿಲ್ಲ. ಇದರಿಂದಾಗಿ ಅಂಗನವಾಡಿ ಕಾರ್ಯಕರ್ತರಿಗೆ ಯೋಜನೆಗಳ ಕಾರ್ಯವಿಧಾನ ಸರಿಯಾಗಿ ತಿಳಿದಿರುವುದಿಲ್ಲ. ಜೊತೆಗೆ ಅವರಿಗೆ ಸಿಗಬೇಕಾದ ವೇತನ ಭತ್ಯೆಗಳೂ ಸರಿಯಾಗಿ ಸಿಗದಿರುವುದಿದರಿಂದ ಅಂಗನವಾಡಿ ಕಾರ್ಯಕರ್ತೆರಿಗೆ ತೊಂದರೆಗಳುಂಟಾಗುತ್ತವೆ. ಹೀಗಾಗಿ ಸರ್ಕಾರಿ ಯೋಜನೆಗಳು ಅಂಗನವಾಡಿ ಕಾರ್ಯಕರ್ತರನ್ನು ತಲುಪುವಲ್ಲಿ ಸಮಸ್ಯೆಗಳುಂಟಾಗುತ್ತವೆ.

ಕೋಷ್ಟಕ ೨೯

ಮಹಿಳೆಯರ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಮರ್ಥರಿದ್ದರೂ ಸಹ ಕಾರ್ಯಯೋಜನಾ ನೀತಿಯಲ್ಲಿರುವ ತೊಂದರೆಗಳಿಂದ ಹಿಂದೇಟು ಹಾಕುತ್ತಿದ್ದಾರೆಯೇ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಹೌದು	೪೪	೮೮
೨	ಇಲ್ಲ	೦೬	೧೨
	ಒಟ್ಟು	೫೦	೧೦೦

ಕೋಷ್ಟಕ ೨೯ರ ಫಲಿತಾಂಶಗಳನ್ನು ನೋಡಿದಾಗ ಶೇ.೮೮ರಷ್ಟು ಮಹಿಳೆಯರು ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಮರ್ಥರಿದ್ದರೂ ಸಹ ಕಾರ್ಯ ಯೋಜನಾ ನೀತಿಯಲ್ಲಿರುವ ತೊಂದರೆಗಳಿಂದ ಹಿಂದೇಟು ಹಾಕುತ್ತಿದ್ದಾರೆಂದು ತಿಳಿದುಬರುತ್ತದೆ ಮತ್ತು ಶೇ.೧೨ರಷ್ಟು ಮಂದಿ ಇಲ್ಲ ಎಂದು ಉತ್ತರಿಸಿದ್ದಾರೆ.

ಸರ್ಕಾರಿ ಮಹಿಳಾ ಯೋಜನೆಗಳ ರಚನೆ, ಕಾರ್ಯವಿಧಾನ, ಮೌಲ್ಯಮಾಪನ ಇನ್ನುಳಿದ ಎಲ್ಲ ಹಂತಗಳಲ್ಲಿಯು ಲಿಂಗತಾರತಾಮ್ಯಗಳಿರುವುದರಿಂದ ದೋಷಪುರಿತ ಯೋಜನೆಗಳು ಜಾರಿಯಲ್ಲಿರುವುದರಿಂದ ಈ ಯೋಜನೆಗಳು ಯಾವುದೇ ರೀತಿಯಿಂದಲೂ ಸ್ತ್ರೀಯರ

ಅಭಿವೃದ್ಧಿಯನ್ನು ಸಾಧಿಸುತ್ತಿಲ್ಲ. ಮತ್ತು ಸಮಾಜದಲ್ಲಿರುವ ಪುರುಷ ಪ್ರಧಾನತೆಯು ಮಹಿಳೆಯರು ಯೋಜನೆಗಳ ಲಾಭ ಪಡೆದು ಅಭಿವೃದ್ಧಿ ಹೊಂದುವುದನ್ನು ತಡೆಯಲು ಪ್ರಯತ್ನಿಸುತ್ತದೆ. ಹಾಗಾಗಿ ಮಹಿಳೆಯರು ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಮರ್ಥರಿದ್ದರೂ ಸಹ ಕಾರ್ಯಯೋಜನಾ ನೀತಿಯಲ್ಲಿರುವ ತೊಂದರೆಗಳಿಂದ ಹಿಂದೇಟು ಹಾಕುತ್ತಿದ್ದಾರೆ.

ಕೋಷ್ಟಕ ೩೦

ಒಟ್ಟಾರೆಯಾಗಿ ಸರ್ಕಾರಿ ಯೋಜನೆಗಳು ವೈಧಾನಿಕತೆ ಮತ್ತು ಕಾರ್ಯತಂತ್ರಗಳು ಮಹಿಳೆಯರನ್ನು ನಿರ್ಲಕ್ಷಿಸಿವೆಯೇ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಹೌದು	೩೨	೬೪
೨	ಇಲ್ಲ	೧೮	೩೬
	ಒಟ್ಟು	೫೦	೧೦೦

ಒಟ್ಟಾರೆಯಾಗಿ ಎಲ್ಲ ಸರ್ಕಾರಿ ಯೋಜನೆಗಳ ವೈಧಾನಿಕತೆ ಮತ್ತು ಕಾರ್ಯತಂತ್ರಗಳ ಬಗ್ಗೆ ಅಂಗನವಾಡಿ ಕಾರ್ಯಕರ್ತೆರನ್ನು ಪ್ರಶ್ನಿಸಿದಾಗ ಶೇ.೬೪ರಷ್ಟು ಮಂದಿ ಯೋಜನೆಗಳ ವೈಧಾನಿಕತೆ ಮತ್ತು ಕಾರ್ಯತಂತ್ರಗಳು ಮಹಿಳೆಯರನ್ನು ನಿರ್ಲಕ್ಷಿಸಿವೆ ಎನ್ನುತ್ತಾರೆ. ಇನ್ನುಳಿದ ಶೇ.೮೬ರಷ್ಟು ಮಂದಿ ನಿರ್ಲಕ್ಷಿಸಿಲ್ಲ ಎನ್ನುತ್ತಾರೆ. ಶೇ.೬೪ರಷ್ಟು ಅಂಗನವಾಡಿ ಕಾರ್ಯಕರ್ತೆರ ಪ್ರಕಾರ ಸರ್ಕಾರವು ತನ್ನ ಎಲ್ಲ ಯೋಜನೆಗಳ ವೈಧಾನಿಕತೆ ಮತ್ತು ಕಾರ್ಯತಂತ್ರಗಳನ್ನು ಪಿತೃಪ್ರಧಾನ ಸಿದ್ಧಾಂತಗಳ ಮೌಲ್ಯಗಳ ಮೇಲೆ ರೂಪಿಸಿವೆ. ಹಾಗಾಗಿಯೇ ಈ ಸಿದ್ಧಾಂತಗಳು ಪುರುಷನನ್ನು ಕೇಂದ್ರ ಬಿಂದುವನ್ನಾಗಿಸಿ ಆತನಿಗೆ ಸಹಕರಿಸಲಾಗಿದೆ. ಯೋಜನಾ ಕಾರ್ಯವಿಧಾನಗಳು ಪುರುಷನ ಅಧೀನದಲ್ಲಿರುವುದರಿಂದ ಪುರುಷರು ಯೋಜನೆಗಳನ್ನು ಮಹಿಳಾ ಅಭಿವೃದ್ಧಿಗಾಗಿ ಶ್ರಮಿಸಲು ಬಿಡುವುದಿಲ್ಲ. ಬದಲಾಗಿ ಆ ಯೋಜನೆಗಳನ್ನು ತನ್ನ ಅನುಕೂಲಕ್ಕಾಗಿ ಬಳಸಿಕೊಳ್ಳುತ್ತಾನೆ. ಇದರಿಂದಾಗಿ ಮಹಿಳೆಯರು ನಿರೀಕ್ಷಿಸಿದಂತೆ ಯೋಜನೆಗಳು ಅವರಿಗೆ ಎಟುಕುವುದಿಲ್ಲ ಮತ್ತು ಅವುಗಳು ದೊರೆತರೂ ಅವುಗಳಿಂದ ಮಹಿಳೆಯರಿಗೆ ಯಾವುದೇ ರೀತಿಯ ಪ್ರಯೋಜನವಾಗುತ್ತಿಲ್ಲ. ಆದ್ದರಿಂದಾಗಿ ಸರ್ಕಾರಿ ಯೋಜನೆಗಳ ವೈಧಾನಿಕತೆ ಮತ್ತು ಕಾರ್ಯತಂತ್ರಗಳು ಸ್ತ್ರೀಯರನ್ನು ನಿರ್ಲಕ್ಷಿಸಿವೆ ಎಂದು ಕೋಷ್ಟಕ ೩೦ರ ಅಂಕಿ ಅಂಶಗಳ ಆಧಾರದ ಮೇಲೆ ವಿಶ್ಲೇಷಿಸಲಾಗಿದೆ. ಈ ನಿಟ್ಟಿನಲ್ಲಿ ಅಂಗನವಾಡಿ ಕಾರ್ಯಕರ್ತರು ಸರ್ಕಾರಿ ಯೋಜನೆಗಳಲ್ಲಿ ಮಹಿಳೆಯರನ್ನು ನಿರ್ಲಕ್ಷಿಸದಂತೆ ಮಹಿಳೆಯನ್ನು ಸಂಘಟಿಸುವ ಅಗತ್ಯವಿದೆ.

೪. ಬರೆಯಬೇಕು ಬಗ್ಗೆ ೨೦೦ ಮಂದಿ ಸ್ತ್ರೀ ಪುರುಷರಿಗೆ ಕೇಳಲಾದ ಪ್ರಶ್ನೆಗಳು.

ಕೋಷ್ಟಕ ೩೧

೧. ಪಿಎಚ್‌ಸಿಯಲ್ಲಿ ಸಿಗುವ ಸರ್ಕಾರಿ ಯೋಜನೆಗಳನ್ನು ತಾವು ಸಮರ್ಪಕವಾಗಿ ಬಳಸಿಕೊಂಡಿದ್ದೀರಾ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೪೯	೩೬	೨೨	೩೪
೨	ಇಲ್ಲ	೨೮	೨೧	೧೪	೨೧
೩	ಕೆಲವೊಮ್ಮೆ	೫೮	೪೩	೨೯	೪೫
ಒಟ್ಟು		೧೩೫	೧೦೦	೬೫	೧೦೦

ಮೇಲಿನ ಕೋಷ್ಟಕದ ಪ್ರಕಾರ ಪಿಎಚ್‌ಸಿ ಕೇಂದ್ರಗಳಲ್ಲಿ ಸಿಗುವ ಎಲ್ಲ ಸರ್ಕಾರಿ ಯೋಜನೆಗಳನ್ನು ಸ್ತ್ರೀ ಪುರುಷರಿಬ್ಬರೂ ಸಹ ಸಮರ್ಪಕವಾಗಿ ಬಳಸಿಕೊಂಡಿಲ್ಲ. ಶೇ.೩೬ರಷ್ಟು ಮಹಿಳೆಯರು ಸರ್ಕಾರಿ ಯೋಜನೆಗಳನ್ನು ಬಳಸಿಕೊಂಡಿದ್ದಾರೆ. ಶೇ.೩೪ರಷ್ಟು ಪುರುಷರು ಬಳಸಿಕೊಂಡಿದ್ದಾರೆ. ಇನ್ನು ಶೇ.೨೧ರಷ್ಟು ಮಹಿಳೆಯರು ಯೋಜನೆಗಳನ್ನು ಬಳಸಿಕೊಳ್ಳಲಿಲ್ಲ. ಪುರುಷರ ಸಂಖ್ಯೆ ಕೂಡ ಶೇ.೨೧ರಷ್ಟಿದೆ. ಇನ್ನುಳಿದಂತೆ ಶೇ.೫೮ರಷ್ಟು ಮಹಿಳೆಯರು ಕೆಲವೊಮ್ಮೆ ಮಾತ್ರ ಬಳಸಿಕೊಂಡಿದ್ದರೆ, ಶೇ.೪೫ರಷ್ಟು ಪುರುಷರು ಕೆಲವೊಮ್ಮೆ ಬಳಸಿಕೊಂಡಿದ್ದಾರೆ. ಒಟ್ಟಾರೆ ಅಂಕಿ ಅಂಶಗಳನ್ನು ನೋಡಿದಾಗ ಸ್ತ್ರೀ ಪುರುಷರಿಬ್ಬರೂ ಸಹ ಸರ್ಕಾರಿ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಸರ್ಕಾರಿ ಯೋಜನೆಗಳೆಲ್ಲವೂ ಅಸಮರ್ಪವಾದ್ದರಿಂದ ಜನಸಾಮಾನ್ಯರಿಗೆ ಸಮರ್ಪವಾಗಿ ಸಿಗುತ್ತಿಲ್ಲ. ಇದರಿಂದಾಗಿ ಅಭಿವೃದ್ಧಿ ಸಾಗುತ್ತಿಲ್ಲ.

ಕೋಷ್ಟಕ ೩೨

೨. ಎನ್‌ಎಸ್‌ವಿಯ ಬಗ್ಗೆ ಎಲ್ಲಿಂದ ಕೇಳಿದ್ದೀರಿ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಪಿಎಚ್‌ಸಿಯಿಂದ	೮೪	೬೬	೪೨	೬೫
೨	ಮಾಧ್ಯಮದಿಂದ	೦೬	೦೪	೦೪	೦೬
೩	ಫಲಶೃತಿಗಳಿಂದ	೨೭	೨೦	೧೨	೧೮
೪	ಇತರೆ	೧೩	೧೦	೦೭	೧೧
ಒಟ್ಟು		೧೩೫	೧೦೦	೬೫	೧೦೦

ಕೋಷ್ಟಕ ೩೨ರಲ್ಲಿರುವಂತೆ ಎನ್‌ಎಸ್‌ವಿಯ ಬಗ್ಗೆ ಎಲ್ಲಿರುವ ಮಾಹಿತಿಯನ್ನು ಕೇಳಿದ್ದೀರಿ ಎಂಬ ಪ್ರಶ್ನೆಗೆ ಶೇ.೬೬ರಷ್ಟು ಮಹಿಳೆಯರು ಪಿಎಚ್‌ಸಿಯಿಂದ ಎಂದರೆ, ಶೇ.೪ರಷ್ಟು ಮಂದಿ ಮಧ್ಯಮದಿಂದ, ಶೇ.೩೦ರಷ್ಟು ಮಂದಿ ಫಲಾನುಭವಿಗಳಿಂದ, ಶೇ.೧೦ಮಂದಿ ಇತರ ಮೂಲಗಳಿಂದ ತಿಳಿದಿದ್ದಾರೆ. ಇನ್ನು ಪುರುಷರು ಶೇ.೬೫ ಮಂದಿ ಪಿಎಚ್‌ಸಿಯಿಂದ, ಶೇ.೬ಮಂದಿ ಮಾಧ್ಯಮದಿಂದ, ಶೇ.೧೮ರಷ್ಟು ಮಂದಿ ಫಲಾನುಭವಿಗಳಿಂದ, ಶೇ.೧೧ರಷ್ಟು ಮಂದಿ ಇತರೆ ಮೂಲಗಳಿಂದ ಎನ್‌ಎಸ್‌ವಿ ಬಗ್ಗೆ ಕೇಳಿದ್ದಾರೆ. ಇಲ್ಲಿ ಯಾರಿಗೂ ಸಹ ಎನ್‌ಎಸ್‌ವಿಯ ಬಗ್ಗೆ ಜನರಿಗೆ ಸರಿಯಾದ ಮಾಹಿತಿ ನೀಡಿ ಅದನ್ನು ಪ್ರೋತ್ಸಾಹಿಸುತ್ತಿಲ್ಲ. ಏಕೆಂದರೆ ಎನ್‌ಎಸ್‌ವಿಯು ಪುರುಷ ಸಂತಾನಹರಣ ಶಸ್ತ್ರ ಚಿಕಿತ್ಸೆಯಾದ್ದರಿಂದ ಇದನ್ನು ಪ್ರೋತ್ಸಾಹಿಸುತ್ತಿಲ್ಲ. ಸ್ತ್ರೀಯರೇ ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು ಹೆಚ್ಚಿನ ಮಹತ್ವ ಎನ್‌ಎಸ್‌ಟಿಗೆ ನೀಡುತ್ತಿದೆಯೇ ಹೊರತು ಎನ್‌ಎಸ್‌ವಿಯನ್ನು ಪ್ರೋತ್ಸಾಹಿಸುತ್ತಿಲ್ಲ. ಸರ್ಕಾರ ಎನ್‌ಎಸ್‌ವಿ ಬಗ್ಗೆ ಯೋಜನೆಗಳನ್ನು ಜಾರಿಗೆ ತಂದರೂ ಸಹ ಜನರಲ್ಲಿರುವ ಮೂಢನಂಬಿಕೆಗಳಿಂದ ಎನ್‌ಎಸ್‌ವಿ ಚಿಕಿತ್ಸೆಯನ್ನು ಪಡೆಯಲು ಯಾರೂ ಮುಂದಾಗುತ್ತಿಲ್ಲ. ಆದರೆ ಸರ್ಕಾರವು ಈ ಮೂಢನಂಬಿಕೆಗಳನ್ನು ಹೋಗಲಾಡಿಸಿ ಎನ್‌ಎಸ್‌ವಿಯನ್ನು ಪ್ರಚುರಪಡಿಸುವ ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಎನ್.ಎಸ್.ವಿಯ ಫಲಿತಾಂಶಗಳ ಬಗ್ಗೆ ರೇಖಾಚಿತ್ರ ೩೨ರಲ್ಲಿ ಕಾಣಬಹುದು.

ಕೋಷ್ಟಕ ೩೩

೩. ಪುರುಷರೇ ಸಂತಾನಹರಣ ಶಸ್ತ್ರ ಚಿಕಿತ್ಸೆಯನ್ನು ಪಡೆಯಲು ನೀವು ಒಪ್ಪುತ್ತೀರಾ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೩೭	೨೭	೧೧	೧೭
೨	ಇಲ್ಲ	೯೮	೭೩	೫೪	೮೩
ಒಟ್ಟು		೧೩೫	೧೦೦	೬೫	೧೦೦

ಕೋಷ್ಟಕ ೩೩ರ ಅಂಕಿ ಅಂಶಗಳನ್ನು ನೋಡಿದಾಗ ಶೇ.೨೭ರಷ್ಟು ಮಹಿಳೆಯರು ಪುರುಷರು ಸಂತಾನಹರಣ ಚಿಕಿತ್ಸೆಯನ್ನು ಪಡೆಯಲು ಒಪ್ಪಿದರೆ ಶೇ.೭೩ರಷ್ಟು ಮಹಿಳೆಯರು ಇದನ್ನು ಒಪ್ಪುವುದಿಲ್ಲ.

ಒಟ್ಟಾರೆಯಾಗಿ ಗಮನಿಸಿದಾಗ ಸ್ತ್ರೀಯರೇ ಸಂತಾನಹರಣ ಶಸ್ತ್ರ ಚಿಕಿತ್ಸೆಯನ್ನು ಮಾಡಿಕೊಳ್ಳಬೇಕು. ಇದು ಪುರುಷರಿಗೆ ಸಂಬಂಧ ಪಟ್ಟದ್ದಲ್ಲ ಎಂಬ ಮನೋಭಾವ ನಮ್ಮ

ಸಮಾಜದಲ್ಲಿ ಬಲವಾಗಿ ಬೇರೂರಿ ಬಿಟ್ಟಿದೆ. ಅಲ್ಲದೆ ಪುರುಷರು ಸಂತಾನಹರಣ ಚಿಕಿತ್ಸೆ ಮ್ಹಾಡಿಸಿಕೊಳ್ಳವುದರಿಂದ ಅವರ ಪುರುಷತ್ವಕ್ಕೆ ತೊಂದರೆಯಾಗುವುದೆಂಬ ಕಾರಣಕ್ಕೆ NSVಯನ್ನು ಸ್ತ್ರೀ–ಪುರುಷರಿಬ್ಬರೂ ಬಲವಾಗಿ ವಿರೋಧಿಸುತ್ತಾರೆ. ಜೊತೆಗೆ NSV ಬಗ್ಗೆ ನಮ್ಮ ಸಮಾಜಕ್ಕೆ ಸೂಕ್ತ ಮಾಹಿತಿ ಇಲ್ಲ ಹೀಗಾಗಿ ಮಾಹಿತಿ ಕೊರತೆಯಿಂದ ಜನರು NSVಯನ್ನು ವಿರೋಧಿಸುತ್ತಾರೆ. ಈ ಬಗ್ಗೆ ಸರ್ಕಾರ ಸೂಕ್ತ ಯೋಜನೆ ಮತ್ತು ಮಾಹಿತಿಗಳನ್ನು ರೂಪಿಸುವ ಅವಶ್ಯಕತೆ ಇದೆ. ಆದರೆ ಯೋಜನೆಗಳನ್ನು ರೂಪಿಸುವ ಪುರುಷರೇ ಇದನ್ನು ಒಪ್ಪಿಕೊಳ್ಳದೇ ಇರುವುದರಿಂದ NSVಚಿಕಿತ್ಸೆಯನ್ನು ಪಡೆಯಲು ಪುರುಷರು ಆಸಕ್ತಿ ವಹಿಸುತ್ತಿಲ್ಲ.

ಕೋಷ್ಟಕ ೩೪

೪. ಮಹಿಳೆಯರೇ ಸಂತಾನ ಹರಣ ಶಸ್ತ್ರ ಚಿಕಿತ್ಸೆಯನ್ನು ಪಡೆಯಬೇಕೆಂಬುದನ್ನು ನೀವು ಒಪ್ಪುತ್ತೀರಾ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೧೧೯	೮೮	೫೧	೭೮
೨	ಇಲ್ಲ	೧೬	೧೨	೧೪	೨೨
ಒಟ್ಟು		೧೩೫	೧೦೦	೬೫	೧೦೦

ಕೋಷ್ಟಕ ೩೪ರ ಅಂಕಿ ಅಂಶಗಳ ಪ್ರಕಾರ ಶೇ.೮೮ರಷ್ಟು ಮಂದಿ ಸ್ತ್ರೀಯರು ತಾವೇ ಸಂತಾನಹರಣ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬೇಕೆಂದು ಒಪ್ಪುತ್ತಾರೆ. ಇನ್ನುಳಿದ ಶೇ.೧೨ ಮಂದಿ ಇದನ್ನು ಒಪ್ಪುವುದಿಲ್ಲ. ಇನ್ನುಳಿದಂತೆ ಶೇ.೭೮ರಷ್ಟು ಪುರುಷರು ಸ್ತ್ರೀಯರೇ ಸಂತಾನಹರಣ ಚಿಕಿತ್ಸೆಯನ್ನು ಪಡೆಯಬೇಕೆಂದರೆ ಶೇ.೨೨ ಮಂದಿ ಇದನ್ನು ಒಪ್ಪುವುದಿಲ್ಲ.

ಒಟ್ಟಾರೆಯಾಗಿ ಗಮನಿಸಿದಾಗ ಸ್ತ್ರೀ–ಪುರುಷರಿಬ್ಬರಲ್ಲೂ ಪಿತೃ ಪ್ರಧಾನ ಮೌಲ್ಯಗಳು ಬಲವಾಗಿ ಬೇರೂರಿವೆ. ಸ್ತ್ರೀಯರೇ ಸಂತಾನಹರಣ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬೇಕೆಂಬ ಬಲವಾದ ನಂಬಿಕೆ ಇಂದಿಗೂ ಸ್ತ್ರೀಯರಲ್ಲಿವೆ. ಹಾಗಾಗಿ ಸ್ತ್ರೀಯರೇ ಈ ಚಿಕಿತ್ಸೆಗೆ ಹೆಚ್ಚಿ ಒಳಗಾಗುತ್ತಿದ್ದಾರೆ. ಇದನ್ನು ಸ್ವತಹ ಸ್ತ್ರೀಯರೇ ಒಪ್ಪಿಕೊಳ್ಳುತ್ತಾರೆ. ಸ್ತ್ರೀಯರೇ ಪಿತೃಪ್ರಧಾನ ಮೌಲ್ಯಗಳನ್ನು ಧಿಕ್ಕರಿಸದೇ ಅದನ್ನು ಬಲವಾಗಿ ಒಪ್ಪಿಕೊಂಡು ಪಾಲಿಸುತ್ತಿರುವುದು ಶೋಚನೀಯ ಸಂಗತಿಯಾಗಿವೆ. ಆದರೆ ಸ್ತ್ರೀಯರಲ್ಲಿರುವ ಈ ಮೂಢನಂಬಿಕೆಗಳನ್ನು, ಮೌಢ್ಯತೆಗಳನ್ನು ನಿವಾರಿಸಿ NSV ಬಗ್ಗೆ ಮಾಹಿತಿ ನೀಡಬೇಕಾದ ಸರ್ಕಾರವೇ ಲಿಂಗ ತಾರತಮ್ಯಗಳನ್ನು ಪ್ರೋತ್ಸಾಹಿಸುತ್ತಿದೆ. ಹೀಗಾಗಿ ಮಹಿಳೆಯರು ಪುರುಷರಿಂದ ಸತತ ದಬ್ಬಾಳಿಕೆಗೆ ಒಳಗಾಗುತ್ತಿದ್ದಾರೆ.

ಈ ಫಲಿತಾಂಶಗಳನ್ನು ರೇಖಾ ಚಿತ್ರ ೩೪ರಲ್ಲಿ ನೋಡಬಹುದಾಗಿದೆ.

ಕೋಷ್ಟಕ ೩೫

೫. ನಿಮ್ಮಲ್ಲಿ ಯಾರಾದರೂ NSV ಚಿಕಿತ್ಸೆಯನ್ನು ಪಡೆದವರು ಇದ್ದಾರೆಯೇ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಇದ್ದಾರೆ	೦೨	೦೧	೦೧	೦೧
೨	ಇಲ್ಲ	೧೧೫	೮೬	೫೬	೮೬
೩	ಮಾಹಿತಿಯಿಲ್ಲ	೧೮	೧೩	೦೮	೧೩
ಒಟ್ಟು		೧೩೫	೧೦೦	೬೫	೧೦೦

ಕೋಷ್ಟಕ ೩೫ರಲ್ಲಿರುವಂತೆ ಶೇ.೧೦ರಷ್ಟು ಮಹಿಳೆಯರು NSV ಚಿಕಿತ್ಸೆಯನ್ನು ಪಡೆದವರು ಇದ್ದಾರೆಂದು ಹೇಳಿದರೆ, ಶೇ.೮೬ರಷ್ಟು ಇಲ್ಲ ಎಂದಿದ್ದಾರೆ. ಶೇ.೧೩ರಷ್ಟು ಮಾಹಿತಿ ಇಲ್ಲ ಎಂದಿದ್ದಾರೆ. ಇನ್ನು ಶೇ.೧೦ ರಷ್ಟು ಪುರುಷರು NSV ಚಿಕಿತ್ಸೆ ಪಡೆದವರು ಇದ್ದಾರೆಂದರೆ, ಶೇ.೮೬ ಮಂದಿ ಇಲ್ಲ ಎಂದಿದ್ದಾರೆ. ಇನ್ನುಳಿದ ಶೇ.೧೩ ಮಂದಿ ಮಾಹಿತಿ ಇಲ್ಲಿ ಎಂದಿದ್ದಾರೆ.

ಸ್ತ್ರೀಯರ ಸಂತಾನ ಹರಣ ಶಸ್ತ್ರ ಚಿಕಿತ್ಸೆಯ ಬಗ್ಗೆ ಎಲ್ಲರಿಗೂ ಗೊತ್ತು ಆದರೆ NSV ಬಗ್ಗೆ ಯಾರಿಗೂ ಮಾಹಿತಿ ಇಲ್ಲದಿರುವುದು. ಈ ಅಂಕಿ-ಅಂಶಗಳನ್ನು ನೋಡುವುದರ ಮೂಲಕ ಸಾಬೀತಾಗಿದೆ. NSV ಚಿಕಿತ್ಸೆಯನ್ನು ಮಾಡಿಸಿಕೊಂಡ ವ್ಯಕ್ತಿಗಳು ಯಾರೂ ಇದರ ಬಗ್ಗೆ ಎಲ್ಲಿಯೂ ಹೇಳುವುದಿಲ್ಲ. ಏಕೆಂದರೆ NSV ಚಿಕಿತ್ಸೆ ಪಡೆದ ಪುರುಷನನ್ನು ನಪುಂಸಕನೆಂದು ಸಮಾಜ ಭಾವಿಸುತ್ತದೆ. ಆದ್ದರಿಂದಾಗಿ NSV ಚಿಕಿತ್ಸೆಯನ್ನು ಯಾರೂ ಮಾಡಿಸಿಕೊಳ್ಳುತ್ತಿಲ್ಲ. ಸರ್ಕಾರ ಈ ನಿಟ್ಟಿನಲ್ಲಿ ಎಚ್ಚರ ವಹಿಸಿ NSV ಬಗ್ಗೆ ಧನಾತ್ಮಕ ವಾತಾವರಣವನ್ನು ಸಮಾಜದಲ್ಲಿ ಸೃಷ್ಟಿಸಬೇಕಿದೆ.

ಕೋಷ್ಟಕ ೩೬

೬. NSV ಪುರುಷತ್ವಕ್ಕೆ ಮಾರಕವಾಗಿದೆಯೇ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೧೨೭	೯೪	೫೮	೮೯
೨	ಇಲ್ಲ	೦೮	೦೬	೦೭	೧೧
ಒಟ್ಟು		೧೩೫	೧೦೦	೬೫	೧೦೦

ಕೋಷ್ಠಕ ೩೬ರಲ್ಲಿ ತೋರಿಸಿರುವಂತೆ ಶೇ.೯೪ ರಷ್ಟು ಸ್ತ್ರೀಯರು ಯು ಪುರುಷತ್ವಕ್ಕ ಮಾರಕವಾಗಿ ಎಂದರೆ ಶೇ.೦೬ರಷ್ಟು ಮಂದಿ ಇಲ್ಲ ಎನ್ನುತ್ತಾರೆ. ಇನ್ನು ಶೇ.೮೯ ಮಂದಿ ಪುರುಷರು NSV ಪುರುಷತ್ವಕ್ಕೆ ಮಾರಕವೆಂದರೆ ಶೇ.೧೧ರಷ್ಟು ಮಂದಿ ಇಲ್ಲ ಎಂದಿದ್ದಾರೆ.

NSV ಬಗ್ಗೆ ಸರ್ಕಾರವು ಜನರಿಗೆ ಸರಿಯಾದ ರೀತಿಯ ಮಾಹಿತಿಯನ್ನು ನೀಡದೇ ಇರುವುದರಿಂದ ಜನರಲ್ಲಿ NSV ಬಗ್ಗೆ ಪೂರ್ವಾಗ್ರಹಗಳು ಇನ್ನೂ ಹಾಗೆಯೇ ಇದೆ. ಪುರುಷರಿಗೆ ಅವರ ಪುರುಷತ್ವವೇ ಪ್ರಧಾನವಾಗಿದೆ NSV ಚಿಕಿತ್ಸೆಯು ಪುರುಷತ್ವವನ್ನು ನಾಶಪಡಿಸುತ್ತದೆಂಬ ಮನೋಭಾವ ಸಮಾಜದಲ್ಲಿದೆ ಅದರಲ್ಲೂ ಮುಖ್ಯವಾಗಿ ಸ್ತ್ರೀಯರಲ್ಲಿ ಹೆಚ್ಚಿದೆ ಆದ್ದರಿಂದಾಗಿ ತಮ್ಮ ಗಂಡಂದಿರು NSV ಚಿಕಿತ್ಸೆಯನ್ನು ಮಾಡಿಸಿಕೊಳ್ಳುವುದನ್ನು ಹೆಂಡತಿಯರೇ ತಡೆಯುತ್ತಾರೆ. ಹೀಗಾಗಿ ಸ್ತ್ರೀಯರೇ ಸಂತಾನ ಹರಣ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳುತ್ತಾರೆ. ಇದರಿಂದಾಗಿಯೇ ಪುರುಷರೂ ಸಹ NSVಗಿಂತ ಹೆಚ್ಚಾಗಿ NSVಗೆ ಹೆಚ್ಚು ಪ್ರೋತ್ಸಾಹ ನೀಡುತ್ತಾರೆ. ಸಮಾಜದಲ್ಲಿ ಪ್ರಚಲಿತವಾಗಿರುವ ಈ ರೀತಿಯ ಮನೋಭಾವಗಳಿಂದಲೇ ಇಂದಿಗೂ ಸಹ ಸ್ತ್ರೀಯರೇ NSV ಚಿಕಿತ್ಸೆ ಪಡೆಯುತ್ತಿದ್ದಾರೆ. ಸರ್ಕಾರವು ಈ ರೀತಿಯ ಊಹಾಪೋಹಗಳನ್ನು ಪೂರ್ವಾಗ್ರಹಗಳನ್ನು ಹೋಗಲಾಡಿಸಿ NSV ಚಿಕಿತ್ಸೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ NSVಯನ್ನು ಹೆಚ್ಚು ಪ್ರಚುರ ಪಡಿಸಬೇಕಾದ ಅವಶ್ಯಕತೆ ಇದೆ. ಸರ್ಕಾರವೇ ಈ ಬಗ್ಗೆ ನಿರ್ಲಕ್ಷ್ಯ ತಳೆದಿರುವುದರಿಂದ ಸ್ತ್ರೀಯರ ಮೇಲೆ ಅಧಿಕ ಒತ್ತಡ ಬೀಳುತ್ತದೆ. ನಿರಂತರವಾಗಿ ಸ್ತ್ರೀಯರು ಶೋಷಣೆಗೆ ಒಳಗಾಗುತ್ತಿದ್ದಾರೆ.

ಕೋಷ್ಠಕ ೩೭

೭. NSV ಚಿಕಿತ್ಸೆಗೆ ಹಿರಿಯರ, ಕುಟುಂಬದವರ ಸ್ನೇಹಿತರ ಪೋತ್ಸಾಹವಿದೆಯೇ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೦೦	೦೦	೦೦	೦೦
೨	ಇಲ್ಲ	೧೨೯	೯೫	೬೫	೧೦೦
೩	ಮಧ್ಯಮ	೦೬	೦೫	೦೦	೦೦
	ಒಟ್ಟು	೧೩೫	೧೦೦	೬೫	೧೦೦

NSV ಚಿಕಿತ್ಸೆಗೆ ಬಹುಪಾಲು ಹಿರಿಯರ, ಕುಟುಂಬದವರ, ಸ್ನೇಹಿತರ ವಿರೋಧವನ್ನು ಕೋಷ್ಠಕ ೩೭ರಲ್ಲಿ ಕಾಣಬಹುದು. ಯ ಬಗ್ಗೆ ಸರ್ಕಾರವು ಸರಿಯಾದ ಮಾಹಿತಿಯನ್ನು ನೀಡದಿರುವುದು, ಲಿಂಗತಾರತಮ್ಯ ಮತ್ತು ತಪ್ಪು ತಿಳುವಳಿಕೆಗಳಿಂದಾಗಿ NSV ಚಿಕಿತ್ಸೆಗೆ ಎಲ್ಲರ

ವಿರೋಧವಿದೆ ಎಂಬುದನ್ನು ಅಂಕಿ-ಅಂಶಗಳ ಮೂಲಕ ತಿಳಿಯಬಹುದು. ಶೇ.೦೦ರಷ್ಟು ಮಹಿಳೆಯರು ಪ್ರೋತ್ಸಾಹವಿದೆ ಎಂದರೆ ಶೇ.೯೫ರಷ್ಟು ಮಹಿಳೆಯರು ಇಲ್ಲ ಎಂದಿದ್ದಾರೆ. ಶೇ.೦೫ರಷ್ಟು ಮಂದಿ ಮಧ್ಯಂತರ ಎಂದಿದ್ದಾರೆ. ಇನ್ನು ಶೇ.೧೦೦% ರಷ್ಟು ಪುರುಷರು NSV ಚಿಕಿತ್ಸೆಗೆ ಯಾವ ಪ್ರೋತ್ಸಾಹ ಇಲ್ಲ ಎಂದಿದ್ದಾರೆ.

ಕೋಷ್ಟಕ ೩೮

೮. NSV ಚಿಕಿತ್ಸೆಯನ್ನು ಪಡೆಯುವುದರಿಂದ ಲೈಂಗಿಕ ಸಂಬಂಧದಲ್ಲಿ ತೊಂದರೆಯಾಗುತ್ತದೆಂದು ನಂಬುತ್ತೀರಾ?

ಕ್ರ.ಸಂ.	ಆಯ್ಕೆಗಳು	ಸ್ತ್ರೀಯರ ಫಲಿತಾಂಶ	ಸ್ತ್ರೀಯರ ಶೇಕಡವಾರು	ಪುರುಷರ ಫಲಿತಾಂಶ	ಪುರುಷರ ಶೇಕಡವಾರು
೧	ಹೌದು	೨೮	೯೫	೫೩	೮೨
೨	ಇಲ್ಲ	೦೭	೦೫	೧೨	೧೮
ಒಟ್ಟು		೧೩೫	೧೦೦	೬೫	೧೦೦

ಕೋಷ್ಟಕ ೩೮ರ ಫಲಿತಾಂಶಗಳನ್ನು ನೋಡಿದಾಗ ಶೇ.೯೫ರಷ್ಟು ಮಹಿಳೆಯರು ಚಿಕಿತ್ಸೆಯನ್ನು ಪಡೆಯುವುದರಿಂದ ಲೈಂಗಿಕ ಸಂಬಂಧದಲ್ಲಿ ತೊಂದರೆಯಾಗುತ್ತದೆಂದು ನಂಬುತ್ತಾರೆ. ಶೇ.೦೫ ರಷ್ಟು ಇಲ್ಲ ಎನ್ನುತ್ತಾರೆ. ಶೇ.೮೨ರಷ್ಟು ಪುರುಷರು ಹೌದು ಎಂದರೆ. ಶೇ.೧೮ರಷ್ಟು ಮಂದಿ ಇದನ್ನು ಒಪ್ಪುವುದಿಲ್ಲ. NSV ಬಗ್ಗೆ ೫೦ ಮಂದಿ ವೈದ್ಯರಿಗೆ ಕೇಳಲಾದ ಪ್ರಶ್ನೆಗಳು

ಕೋಷ್ಟಕ ೩೯

೧. ನಿಮ್ಮ ಆಸ್ಪತ್ರೆಗೆ ನಿಮ್ಮ ಸೇವೆಯಲ್ಲಿ NSV ಶಸ್ತ್ರ ಚಿಕಿತ್ಸೆಯನ್ನು ಪಡೆಯಲು ಬಂದಂಥ ಪುರುಷರು ಇದ್ದಾರೆಯೇ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಹೌದು	೧೦	೨೦
೨	ಇಲ್ಲ	೪೦	೮೦
ಒಟ್ಟು		೫೦	೧೦೦

ಕೋಷ್ಟಕ ೩೯ರಲ್ಲಿ ಎನ್‌ಎಸ್‌ವಿ ಶಸ್ತ್ರ ಚಿಕಿತ್ಸೆಯನ್ನು ಪಡೆಯಲು ಆಸ್ಪತ್ರೆಗೆ ಬಂದಿದ್ದಾರೆಯೇ ಎಂದು ವೈದ್ಯರಿಗೆ ಕೇಳಿದಾಗ ಶೇ.೨೦ ಮಂದಿ ಮಾತ್ರ ಚಿಕಿತ್ಸೆಯ ಬಗ್ಗೆ ಮಾಹಿತಿ ಕೇಳಿದ್ದಾರೆ.

ಇನ್ನುಳಿದ ಶೇ.೮೦ ಮಂದಿ ಎನ್‌ಎಸ್‌ವಿ ಶಸ್ತ್ರ ಚಿಕಿತ್ಸೆಯನ್ನು ಪಡೆಯಲು ಬಂದಿಲ್ಲ ಎಂದು ಹೇಳುತ್ತಾರೆ. ಪುರುಷರಲ್ಲಿಯೂ ಸಹ ಇಂದಿಗೂ ಎನ್‌ಎಸ್‌ವಿ ಚಿಕಿತ್ಸೆಯ ಬಗ್ಗೆ ತಪ್ಪು ತಿಳುವಳಿಕೆ ಇದೆ. ಎನ್‌ಎಸ್‌ವಿ ಚಿಕಿತ್ಸೆಯಿಂದಾಗಿ ತಮ್ಮ ಪುರುಷತ್ವದ ನಾಶವಾಗುತ್ತದೆ ಎಂದು ತಿಳಿದು ಇದನ್ನು ಪಡೆಯಲು ಹಿಂಜರಿಯುತ್ತಾರೆ. ಬದಲಾಗಿ ಸ್ತ್ರೀಯರನ್ನೇ ಸಂತಾನಹರಣ ಶಸ್ತ್ರ ಚಿಕಿತ್ಸೆಯನ್ನು ಪಡೆಯಲು ಸೂಚಿಸುತ್ತಾರೆ.

ಇಲ್ಲಿಯೂ ಸಹ ಲಿಂಗ ತಾರತಮ್ಯ, ಸ್ತ್ರೀಯರ ಮೇಲಿನ ಶೋಷಣೆ ನಡೆಯುತ್ತಲೇ ಇದೆ. ಆದ್ದರಿಂದಾಗಿಯೇ NSV ಚಿಕಿತ್ಸೆಯನ್ನು ಮಾಡಿಸಿಕೊಳ್ಳಲು ಬರುವ ಪುರುಷರ ಸಂಖ್ಯೆ ಕಡಿಮೆ.

ಕೋಷ್ಟಕ ೪೦

೪

೨. ಸಂತಾನ ನಿಯಂತ್ರಣ ಚಿಕಿತ್ಸೆಗೆ ಹೆಚ್ಚು ಬಂದಂತವರು ಯಾರು?

ಕ್ರ.ಸಂ.	**ಆಯ್ಕೆಗಳು**	**ಫಲಿತಾಂಶಗಳು**	**ಶೇಕಡವಾರು**
೧	ಮಹಿಳೆಯರು	೩೩	೫೬
೨	ಪುರುಷರು	೦೭	೧೪
೩	ಇಬ್ಬರು	೧೦	೨೦
ಒಟ್ಟು		೫೦	೧೦೦

ಕೋಷ್ಟಕ ೪೦ರ ಅಂಕಿ-ಅಂಶಗಳನ್ನು ಕಂಡಾಗ ಶೇ.೬೬ರಷ್ಟು ಮಹಿಳೆಯರು ಸಂತಾನ ನಿಯಂತ್ರಣ ಶಸ್ತ್ರಚಿಕಿತ್ಸೆಗೆ ಬಂದರೆ, ಶೇ.೧೪ರಷ್ಟು ಪುರುಷರು ಬರುತ್ತಾರೆ. ಶೇ.೨೦ರಷ್ಟು ಸ್ತ್ರೀ-ಪುರುಷರಿಬ್ಬರೂ ಬರುತ್ತಾರೆ. ಪುರುಷರು ಚಿಕಿತ್ಸೆಗಾಗಿ ಬಂದರೂ ಮಹಿಳೆಯರೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಚಿಕಿತ್ಸೆಯನ್ನು ಪಡೆಯಲು ಬರುತ್ತಾರೆ. ಸಂತಾನ ನಿಯಂತ್ರಣವು ಸ್ತ್ರೀಯರ ಜವಾಬ್ದಾರಿ ಅದು ಪುರುಷರಿಗೆ ಸಂಬಂಧಪಟ್ಟದ್ದಲ್ಲ ಎಂಬ ಮನೋಭಾವನೆ ಸಮಾಜದಲ್ಲಿರುವುದರಿಂದಾಗಿ ಸ್ತ್ರೀಯರೇ ಹೆಚ್ಚಾಗಿ ಶಸ್ತ್ರ ಚಿಕಿತ್ಸೆಗೆ ಒಳಗಾಗುತ್ತಿದ್ದಾರೆ.

ಕೋಷ್ಟಕ ೪೧

೩. ಸಂತಾನ ನಿಯಂತ್ರಣ ಚಿಕಿತ್ಸೆಗೆ ದೈಹಿಕವಾಗಿ ಅಶಕ್ತರಿದ್ದರೂ NSV ಮಹಿಳೆಯರು ಚಿಕಿತ್ಸೆಗೆ ಬರುತ್ತಾರಾ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಬರುತ್ತಾರೆ	೪೦	೮೦
೨	ಬರುವುದಿಲ್ಲ	೧೦	೨೦
	ಒಟ್ಟು	೫೦	೧೦೦

ಕೋಷ್ಟಕ ೪೧ರ ಸರಾಸರಿಯಂತೆ ಶೇ.೩೦ರಷ್ಟು ಮಹಿಳೆಯರು ದೈಹಿಕವಾಗಿ ಅಶಕ್ತರಿದ್ದರೂ ಸಹ ಸಂತಾನ ನಿಯಂತ್ರಣ ಚಿಕಿತ್ಸೆಯನ್ನು ಪಡೆಯಲು ಆಸ್ಪತ್ರೆಗೆ ಬರುತ್ತಾರೆ. ಇನ್ನುಳಿದ ಶೇ.೨೦ ಮಂದಿ ಮಹಿಳೆಯರು ಬರುವುದಿಲ್ಲ. ಸ್ತ್ರೀಯರ ಮೇಲಿನ ಬಲವಾದ ಒತ್ತಡ ಹಾಗೂ ಲಿಂಗ ಪೂರ್ವಾಗ್ರಹಗಳಿಂದ ಸ್ತ್ರೀಯರು ತಮಗೆ ಇಷ್ಟವಿಲ್ಲದಿದ್ದರೂ ಸಹ ಕುಟುಂಬದವರ ಒತ್ತಾಯದಿಂದಾಗಿ ಅಸ್ವಸ್ಥತೆಯಿಂದ ಬಳಲುತ್ತಿದ್ದರೂ ಸಹ ಚಿಕಿತ್ಸೆಗೆ ಬರುತ್ತಾರೆ. ಸ್ತ್ರೀಯರ ಮೇಲಿನ ಈ ರೀತಿಯ ಒತ್ತಡವನ್ನು ದೌರ್ಜನ್ಯವೆಂದೇ ಪರಿಗಣಿಸಬೇಕಿದೆ.

ಕೋಷ್ಟಕ ೪೨

೪. ಮಹಿಳೆಯರಿಗೆ ಸಮಸ್ಯೆಯಾಗುತ್ತಿದೆ ಎಂದು ಗೊತ್ತಿದ್ದರೂ ಚಿಕಿತ್ಸೆಯನ್ನು ಪುರುಷರು ಪಡೆಯುತ್ತಾರೆ.

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಬರುತ್ತಾರೆ	೦೮	೧೬
೨	ಬರುವುದಿಲ್ಲ	೪೨	೮೪
	ಒಟ್ಟು	೫೦	೧೦೦

ಕೋಷ್ಟಕ ೪೨ರ ಫಲಿತಾಂಶಗಳ ಮೂಲಕ ತಿಳಿಯುವುದೇನೆಂದರೆ ಶೇ.೧೬ರಷ್ಟು ಪುರುಷರು ಮಹಿಳೆಯರಿಗೆ ಸಮಸ್ಯೆಯಾಗುತ್ತಿದೆ ಎಂದು ಗೊತ್ತಿದ್ದರೂ NSV ಚಿಕಿತ್ಸೆಯನ್ನು ಪುರುಷರು ಪಡೆಯುತ್ತಾರೆ. ಆದರೆ ಇನ್ನುಳಿದ ಶೇ.೬೪ ಮಂದಿ NSV ಚಿಕಿತ್ಸೆಯನ್ನು ಪಡೆಯಲು ಬರುವುದಿಲ್ಲ. ಪತ್ನಿಗೆ ಎಷ್ಟೇ ದೈಹಿಕ ತೊಂದರೆಗಳಿದ್ದರೂ ಸಹ ಪತಿಯು ಮಾತ್ರ NSV ಚಿಕಿತ್ಸೆಯನ್ನು

ಪಡೆಯುವುದಿಲ್ಲ. NSV ಸುರಕ್ಷಿತ ಶಸ್ತ್ರ ಚಿಕಿತ್ಸೆ ಎಂದು ತಿಳಿದಿದ್ದರೂ ಸಹ ಅದನ್ನು ಪಡೆಯಲು ಪುರುಷರು ಒಪ್ಪುವುದಿಲ್ಲ. ಆದರೆ ಸ್ತ್ರೀಯರ ಸಂತಾನಹರಣ ಶಸ್ತ್ರ ಚಿಕಿತ್ಸೆಯು ತುಸು ಅಪಾಯಕಾರಿ ಎಂದು ತಿಳಿದಿದ್ದರೂ ಸಹ ಪುರುಷರು ಸ್ತ್ರೀಯರೇ ಸಂತಾನ ಹರಣ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳಲು ಹೆಚ್ಚು ಒತ್ತಾಯ ಮಾಡುತ್ತಾರೆ. ಇದಕ್ಕೆ ಪುರುಷ ಪ್ರಧಾನ ವ್ಯವಸ್ಥೆಯ ಮೂಢನಂಬಿಕೆಗಳು ಮತ್ತು NSV ಬಗೆಗಿನ ಸೂಕ್ತ ಮಾಹಿತಿ ಕೊರತೆಗಳಿರುವುದೇ ಮುಖ್ಯ ಕಾರಣವಾಗಿದೆ. ಏನೇ ಆದರೂ ಸಹ ಪುರುಷರು ಮಾತ್ರ ತಮ್ಮ ಸಂತಾನ ಶಕ್ತಿಯನ್ನು ಮಾತ್ರ ಕಳೆದುಕೊಳ್ಳಲು ಇಚ್ಛಿಸುವುದಿಲ್ಲ. ಈ ನಿಟ್ಟಿನಲ್ಲಿ ಸರ್ಕಾರವು ಅವರಗೆ ಆಪ್ತ ಸಮಾಲೋಚನೆಯ ಮೂಲಕ ಅವರ ಭಯ, ಸಮಸ್ಯೆ, ಮೂಢನಂಬಿಕೆಗಳನ್ನು ಪರಿಹರಿಸಿ NSV ಚಿಕಿತ್ಸೆಯನ್ನು ಮಾಡಿಸಿಕೊಳ್ಳುವಂತೆ ಮಾಡಬೇಕು.

ಕೋಷ್ಟಕ ೪೩

೫. ಮಹಿಳೆಯರು NSV ಯನ್ನು ಪ್ರಚೋದಿಸುತ್ತಾರಾ? ಪ್ರೋತ್ಸಾಹಿಸುತ್ತಾರಾ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಹೌದು	೦೦	೦೦
೨	ಇಲ್ಲ	೫೦	೧೦೦
ಒಟ್ಟು		೫೦	೧೦೦

ಕೋಷ್ಟಕ ೪೩ರ ಅಂಕಿ ಅಂಶಗಳನ್ನು ನೋಡಿದಾಗ ಯಾವೊಬ್ಬ ಮಹಿಳೆಯೂ ಸಹ ಯನ್ನು ಪ್ರೋತ್ಸಾಹಿಸುವುದಿಲ್ಲ. ಶೇ.೧೦೦ರಷ್ಟು ಮಹಿಳೆಯರು ಎನ್‌ಎಸ್‌ವಿಯನ್ನು ವಿರೋಧಿಸುತ್ತಾರೆ. ಇಂದಿನ ಆಧುನಿಕ ಯುಗದಲ್ಲಿ ಮಾಹಿತಿ ತಂತ್ರಜ್ಞಾನ ಎಷ್ಟೇ ಬೆಳವಣಿಗೆಯಾಗಿದ್ದರೂ ಮಹಿಳೆಯರಿಗೆ ಎನ್‌ಎಸ್‌ವಿ ಬಗ್ಗೆ ತಿಳಿದಿದ್ದರೂ ಸಹ ಅವರು ತಮ್ಮ ಪತಿ ಎನ್‌ಎಸ್‌ವಿ ಚಿಕಿತ್ಸೆಯನ್ನು ಪಡೆಯುವುದಿಲ್ಲ. ಇಚ್ಛಿಸುವುದಿಲ್ಲ. ಬದಲಾಗಿ ತಾವೇ ಎನ್‌ಎಸ್‌ಟಿಯನ್ನು ಮಾಡಿಸಿಕೊಳ್ಳುತ್ತಾರೆ. ಇದರಿಂದಾಗಿ ಪುರುಷರಲ್ಲಷ್ಟೇ ಅಲ್ಲ ಸ್ತ್ರೀಯರಲ್ಲೂ ಸಹ ಪಿತೃ ಪ್ರಧಾನ ಮೌಲ್ಯಗಳು ಗಾಢವಾಗಿ ಪರಿಣಾಮ ಬೀರಿದೆ ಎಂದು ತಿಳಿಯಬಹುದು. ಕೆಲವೊಮ್ಮೆ ಸ್ತ್ರೀಯರಿಗೆ NSV ಬಗ್ಗೆ ಬಲವಿದ್ದರೂ ಸಹ ಅದನ್ನು ಬಹಿರಂಗವಾಗಿ ವ್ಯಕ್ತಪಡಿಸಲು ಹಿಂಜರಿಯುತ್ತಾರೆ. ಏಕೆಂದರೆ ಸಮಾಜವು ತನ್ನನ್ನು ಹೀಯಾಳಿಸುವುದೆಂಬ ಕಾರಣದಿಂದ ಮಹಿಳೆಯರು ಮೌನಿಯಾಗುತ್ತಾರೆ. ಮಹಿಳೆಯರಿಗೆ ಈ ಕುರಿತ ಸೂಕ್ತ ಮಾಹಿತಿ ಇಲ್ಲದಿರುವುದರಿಂದ ಈ ಸಮಸ್ಯೆಗಳು ಉದ್ಭವಿಸುತ್ತಿವೆ ಆದ್ದರಿಂದ ಸರ್ಕಾರವು ಈ ಬಗ್ಗೆ ಮಾಹಿತಿ ನೀಡಬೇಕಾದ ಅವಶ್ಯಕತೆ ಇದೆ.

ಕೋಷ್ಟಕ ೪೪

೬. ಎನ್‌ಎಸ್‌ವಿಯ ಬಗೆಗೆ ಮಹಿಳೆಯರ ಪ್ರತಿಕ್ರಿಯೆ ಹೇಗಿದೆ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಋಣಾತ್ಮಕವಾಗಿರುವ	೩೦	೬೦
೨	ಧನಾತ್ಮಕವಾಗಿರುವ	೦೬	೧೨
೩	ಮಧ್ಯಮವಾಗಿದೆ	೧೪	೨೮
ಒಟ್ಟು		೫೦	೧೦೦

ಕೋಷ್ಟಕ ೪೪ರ ಅಂಕಿ–ಅಂಶಗಳನ್ನು ಗಮನಿಸಿದಾಗ ವೈದ್ಯರೇ ಹೇಳುವಂತೆ ಶೇ.೬೦ ಮಂದಿ ಮಹಳೆಯರು ಎನ್‌ಎಸ್‌ವಿ ಬಗ್ಗೆ ಋಣಾತ್ಮಕ ಪ್ರತಿಕ್ರಿಯೆ ಹೊಂದಿದ್ದಾರೆ. ಶೇ.೧೨ರಷ್ಟು ಮಂದಿಯ ಪ್ರತಿಕ್ರಿಯೆ ಧನಾತ್ಮಕವಾಗಿದೆ. ಇನ್ನುಳಿದಂತೆ ಶೇ.೨೮ ಮಂದಿಯ ಅಭಿಪ್ರಾಯ ಮಧ್ಯಮವಾಗಿದೆ. ಎನ್‌ಎಸ್‌ವಿ ಚಿಕಿತ್ಸೆಯ ಬಗ್ಗೆ ಎಷ್ಟೇ ಮಾಹಿತಿ ನೀಡಿದರೂ ಸಹ ಇಂದಿಗೂ ಎನ್‌ಎಸ್‌ವಿ ಬಗ್ಗೆ ಪುರುಷರಿಗಿಂತ ಸ್ತ್ರೀಯರಿಗೆ ತುಸು ಹೆಚ್ಚಾಗಿಯೇ ಅಪನಂಬಿಕೆ ಇದೆ. ಸ್ತ್ರೀಯರಿಗೆ ಎನ್‌ಎಸ್‌ವಿ ಬಗ್ಗೆ ತಿಳಿಸಿದರೂ ಸಹ ಅವರು ಅದನ್ನು ಒಪ್ಪುವುದಿಲ್ಲ. ಕುಟುಂಬ, ಸಮಾಜ, ವೈಯಕ್ತಿಕ ಅಭಿಪ್ರಾಯಗಳೇ ಎನ್‌ಎಸ್‌ವಿ ಚಿಕಿತ್ಸೆಯನ್ನು ವಿರೋಧಿಸಲು ಕಾರಣವಿರಬಹುದು. ಹೀಗಾಗಿ ಬಹುತೇಕ ಮಹಿಳೆಯರಿಗೆ ಎನ್‌ಎಸ್‌ವಿ ಬಗ್ಗೆ ಋಣಾತ್ಮಕ ಅಭಿಪ್ರಾಯವಿದೆ. ಸರ್ಕಾರವು ಮಹಿಳೆಯರ ಋಣಾತ್ಮಕ ಅಭಿಪ್ರಾಯಗಳನ್ನು ಹೋಗಲಾಡಿಸುವಲ್ಲಿ ಶ್ರಮಿಸಬೇಕಿದೆ.

ಕೋಷ್ಟಕ ೪೫

೭. NSV ಯನ್ನು ಯಾರು ಹೆಚ್ಚು ಪ್ರೋತ್ಸಾಹಿಸುತ್ತಾರೆ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಪುರುಷರು	೦೭	೧೪
೨	ಸ್ತ್ರೀಯರು	೦೬	೧೦
೩	ಯಾರು ಇಲ್ಲ	೩೮	೭೬
ಒಟ್ಟು		೫೦	೧೦೦

ಕೋಷ್ಟಕ ೪೫ರ ಅಂಕಿ–ಅಂಶಗಳ ಪ್ರಕಾರ ಎನ್‌ಎಸ್‌ವಿ ಚಿಕಿತ್ಸೆಯನ್ನು ಸ್ತ್ರೀ–ಪುರುಷರಿಬ್ಬರೂ ಹೆಚ್ಚಾಗಿ ಪ್ರೋತ್ಸಾಹಸುವುದಿಲ್ಲ. ಆದರೆ ಪುರುಷರು ಶೇ.೧೪ರಷ್ಟು ಮತ್ತು ಸ್ತ್ರೀಯರು ಶೇ.೧೦ರಷ್ಟು

ಮಾತ್ರ ಎನ್‌ಎಸ್‌ವಿಯನ್ನು ಪ್ರೋತ್ಸಾಹಿಸುತ್ತಾರೆ. ಇನ್ನುಳಿದಂತೆ ಶೇ.೭೬ರಷ್ಟು ಯಾರೂ ಇದನ್ನು ಪ್ರೋತ್ಸಾಹಿಸುವುದಿಲ್ಲ ಎಂದು ವೈದ್ಯರು ಹೇಳುತ್ತಾರೆ. ಇಂದು ಸ್ತ್ರೀ-ಪುರುಷರಿಗೆ ಮಾಹಿತಿ ಇದ್ದರೂ ಸಹ ಎನ್‌ಎಸ್‌ವಿ ಚಿಕಿತ್ಸೆಯನ್ನು ಪ್ರೋತ್ಸಾಹಿಸಲು ಹಿಂಜರಿಯುತ್ತಾರೆ. ಸರ್ಕಾರವು ಈ ಬಗ್ಗೆ ಎಷ್ಟೇ ತರಬೇತಿಗಳನ್ನು ನೀಡಿದರೂ ಸಹ ಜನರಲ್ಲಿ ಎನ್‌ಎಸ್‌ವಿ ಬಗೆಗೆ ಒಲವು ಮೂಡುತ್ತಿಲ್ಲ.

ಕೋಷ್ಟಕ ೪೬

೮. ವೈಜ್ಞಾನಿಕವಾಗಿ NSVಯುಗೆ (Nom-Spell Tubeltomy)ಗೆ ಪೂರಕವಾಗಿ ಪುರುಷರಿಗೆ ಅಪಾಯಕಾರಿಯಾಗಿದೆಯೇ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಹೌದು	೦೦	೦೦
೨	ಇಲ್ಲ	೫೦	೧೦೦
ಒಟ್ಟು		೫೦	೧೦೦

ಕೋಷ್ಠಕ ೪೬ರ ಅಂಕಿ-ಅಂಶಗಳನ್ನು ನೋಡಿದಾಗ ಎಲ್ಲಾ ವೈದ್ಯರ ಪ್ರಕಾರ ಎನ್‌ಎಸ್‌ವಿಯು ಎನ್‌ಎಸ್‌ಟಿಗಿಂತ ಉತ್ತಮ ಚಿಕಿತ್ಸೆಯಾಗಿದೆ. ಎನ್‌ಎಸ್‌ಟಿಯಲ್ಲಿ ಸೋಂಕು ಉಂಟಾಗುವ ಸಾಧ್ಯತೆ ಹೆಚ್ಚು. ಆದರೆ ಎನ್‌ಎಸ್‌ವಿಯಲ್ಲಿ ಸೋಂಕುಗಳುಂಟಾಗುವ ಸಾಧ್ಯತೆ ಕಡಿಮೆ. ಎನ್‌ಎಸ್‌ವಿ ಚಿಕಿತ್ಸೆಯು ಶೇ.೧೦೦ರಷ್ಟು ಸುರಕ್ಷಿತವಾಗಿದೆ. ಆದರೆ ಈ ಚಿಕಿತ್ಸೆಯನ್ನು ಪಡೆಯಲು ಹಿಂಜರಿಯುತ್ತಿರುವುದರಿಂದ ಎನ್‌ಎಸ್‌ವಿ ಚಿಕಿತ್ಸೆಯು ಇಂದು ಯಶಸ್ವಿಯಾಗುವಲ್ಲಿ ವಿಫಲವಾಗಿದೆ. ಮಹಿಳೆಯರಿಗೆ ಎನ್‌ಎಸ್‌ಟಿ ನಂತರ ಕೌಟುಂಬಿಕ, ಮಕ್ಕಳ ಒತ್ತಡಗಳನ್ನು ಕೂಡ ಅವರ ಉತ್ತಮ ಆರೋಗ್ಯಕ್ಕೆ ಎಡೆ ಮಾಡಿಕೊಳ್ಳುವುದಿಲ್ಲ.

ಕೋಷ್ಟಕ ೪೭

೯. ಎನ್‌ಎಸ್‌ವಿಯಿಂದ ಮಹಿಳೆ-ಪುರುಷರಿಗೆ ಅವರ ಚರಮ ಸುಖದಲ್ಲಿ ಯಾರಾದರೂ ವ್ಯತ್ಯಾಸವಾಗುತ್ತದೆಯೇ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಹೌದು	೦೦	೦೦
೨	ಇಲ್ಲ	೫೦	೧೦೦
ಒಟ್ಟು		೫೦	೧೦೦

ಕೋಷ್ಟಕ ೪೭ರ ಫಲಿತಾಂಶಗಳನ್ನು ನೋಡಿದಾಗ ಎನ್‌ಎಸ್‌ವಿಯಿಂದ ಮಹಿಳೆ ಪುರುಷರಿಗೆ ಅವರ ಚರಮ ಸುಖದಲ್ಲಿ ೧೦೦% ರಷ್ಟು ಯಾವುದೇ ತೊಂದರೆ ಆಗುವುದಿಲ್ಲ ಎಂದು ವೈದ್ಯರು ಹೇಳುತ್ತಾರೆ.

ಕೋಷ್ಟಕ ೪೮

೧೦. ಎನ್‌ಎಸ್‌ವಿಯಿಂದ ಪುರುಷರಿಗೆ ಅವರ ಕೆಲಸ/ಉದ್ಯೋಗಗಳಲ್ಲಿ ದೈಹಿಕ ತೊಂದರೆ ಗಳಾಗುತ್ತದೆಯಾ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಹೌದು	೦೦	೦೦
೨	ಇಲ್ಲ	೫೦	೧೦೦
ಒಟ್ಟು		೫೦	೧೦೦

ಕೋಷ್ಟಕ ೪೮ರ ಫಲಿತಾಂಶಗಳನ್ನು ನೋಡಿದಾಗ ಶೇ.೧೦೦ರಷ್ಟು ಎನ್‌ಎಸ್‌ವಿಯಿಂದ ಪುರುಷರಿಗೆ ಅವರ ಕೆಲಸ/ಉದ್ಯೋಗಗಳಲ್ಲಿ ದೈಹಿಕವಾಗಿ ಯಾವುದೇ ತೊಂದರೆಗಳಾಗುವುದಿಲ್ಲ ವೆಂದ ವೈದ್ಯರು ಹೇಳುತ್ತಾರೆ. ಆದರೆ ಜನರಲ್ಲಿರುವ ಮೂಢನಂಬಿಕೆಯ ಕಾರಣದಿಂದಾಗಿ NSV ಚಿಕಿತ್ಸೆಯಿಂದಾಗಿ ಏನಾದರೂ ತೊಂದರೆಗಳುಂಟಾಗುತ್ತವೆ ಎಂದು ಎಲ್ಲರೂ ತಪ್ಪಾಗಿಗಿ ಗ್ರಹಿಸುತ್ತಾರೆ. ಆದರೆ ಎನ್‌ಎಸ್‌ವಿ ಚಿಕಿತ್ಸೆಯಿಂದಾಗಿ ಯಾವುದೇ ರೀತಿಯ ತೊಂದರೆಗಳಾಗುವುದಿಲ್ಲ. ಇದೊಂದು ಸಂಪೂರ್ಣ ಸುರಕ್ಷಣಾ ಶಸ್ತ್ರ ಚಿಕಿತ್ಸೆಯಾಗಿದೆ. ಆದರೆ ಎನ್‌ಎಸ್‌ವಿ ಬಗ್ಗೆ ಸರ್ಕಾರವು ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ಜನರಿಗೆ ನೀಡುತ್ತಿಲ್ಲ. ಅವರಲ್ಲಿರುವ ಮೌಢ್ಯತೆಗಳನ್ನು ಹೋಗಲಾಡಿಸಲು ವಿಫಲವಾಗಿರುವುದರಿಂದಾಗಿಯೇ ಎನ್‌ಎಸ್‌ವಿ ಚಿಕಿತ್ಸೆ ಯಶಸ್ವಿಯಾಗುತ್ತಿಲ್ಲ. ಮುಖ್ಯವಾಗಿ ಪುರುಷ ಪ್ರಧಾನತೆಯಿಂದ ತುಂಬಿದ ಯೋಜನೆಗಳು ಎನ್‌ಎಸ್‌ವಿ ಪುರುಷತ್ವಕ್ಕೆ ಧಕ್ಕೆಯಾಗುತ್ತದೆ ಎಂದು ಭಾವಿಸಿ ಎನ್‌ಎಸ್‌ವಿಯನ್ನು ಪ್ರೋತ್ಸಾಹಿಸಿ ಯಶಸ್ವಿಗೊಳಿಸಲು ಆಸ್ಪದ ನೀಡುತ್ತಿಲ್ಲ. ಹೀಗಾಗಿ ಸ್ತ್ರೀಯರ ಮೇಲೆ ಹೆಚ್ಚು ಒತ್ತಡ ಬೀಳುತ್ತಲೇ ಇದೆ.

ಕೋಷ್ಟಕ ೪೯

೧೧. NSV ಯೋಜನೆ ಕಾರ್ಯ ತಂತ್ರಗಳನ್ನು ಬಳಸಿ ಸಮುದಾಯದ ಮನ ಒಲಿಸುವಲ್ಲಿ ಯಶಸ್ವಿಯಾಗಿದ್ದಿರಾ?

ಕ್ರ.ಸಂ.	ಆಯ್ಕೆಗಳು	ಫಲಿತಾಂಶಗಳು	ಶೇಕಡವಾರು
೧	ಯಶಸ್ವಿಯಾಗಿದೆ	೦೩	೦೬
೨	ಯಾಶಸ್ವಿಯಾಗಿಲ್ಲ	೪೭	೯೪
ಒಟ್ಟು		೫೦	೧೦೦

ಕೋಷ್ಟಕ ೪೯ರ ಅಂಕಿ ಅಂಶಗಳನ್ನು ನೋಡಿದಾಗ NSV ಯೋಜನಾ ಕಾರ್ಯ ತಂತ್ರಗಳನ್ನು ಬಳಸಿ. ಸಮುದಾಯದ ಮನ ಒಲಿಸಲು ವೈದ್ಯರು ಪ್ರಯತ್ನಿಸಿದಾಗ ಕೇವಲ ಶೇ.೬ರಷ್ಟು ಮಾತ್ರ ಯಶಸ್ವಿಯಾಗಿದೆ. ಇನ್ನುಳಿದ ಶೇ.೯೪ ರಷ್ಟು ಯಶಸ್ವಿಯಾಗದೆ ವಿಫಲವಾಗಿದೆ. ಏಕೆಂದರೆ ಪಿತೃ ಪ್ರಧಾನ ಸಮಾಜದಲ್ಲಿ ಇಂದಿಗೂ ಸಹ ಪುರುಷತ್ವವೇ ಬಹು ಮುಖ್ಯವೆಂದ ಸ್ತ್ರೀ–ಪುರುಷರಿಬ್ಬರಿಗೂ ಬಲವಾಗಿ ನಂಬಿದ್ದಾರೆ. ಎನ್‌ಎಸ್‌ವಿ ಚಿಕಿತ್ಸೆಯಿಂದಾಗಿ ಪುರುಷತ್ವದ ನಾಶವಾಗುತ್ತದೆಂದು ಎಲ್ಲರೂ ಭಾವಿಸಿರುವುದರಿಂದಾಗಿ ಮತ್ತು ಹಲವಾರು ಮೂಢನಂಬಿಕೆಗಳ ಹಾಗೂ ಸಮಾಜದ ರೀತಿ–ನೀತಿಗಳಿಗೆ ಹೆದರಿ ಜನರು ಎನ್‌ಎಸ್‌ವಿ ಚಿಕಿತ್ಸೆಯನ್ನು ಪ್ರೋತ್ಸಾಹಿಸು ವುದರಿಂದಾಗಿ ಎನ್‌ಎಸ್‌ವಿ ಯೋಜನೆ ಯಶಸ್ವಿಯಾಗುತ್ತಿಲ್ಲ. ಎನ್‌ಎಸ್‌ವಿಯನ್ನು ಪ್ರೋತ್ಸಾಹಿಸಿ ಅಭಿವೃದ್ಧಿಪಡಿಸಲು ಸರ್ಕಾರವು ಸಾಕಷ್ಟು ಶ್ರಮವಹಿಸಿ ಯೋಜನೆಗಳನ್ನು ಕಾರ್ಯಗತಗೊಳಿಸದಿರು ವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಅಲ್ಲದೆ ಸರ್ಕಾರ ರೂಪಿಸುವ ಯೋಜನೆಗಳ ಎಲ್ಲಾ ಹಂತಗಳಲ್ಲೂ ಲೋಪ–ಲೋಷಗಳಿರುವುದರಿಂದ ಯಶಸ್ವಿಯಾಗುತ್ತಿಲ್ಲ ಮತ್ತು ಪುರುಷ ಪ್ರಧಾನತೆ ಎನ್‌ಎಸ್‌ವಿಯನ್ನು ಯಶಸ್ವಿಯಾಗಲು ಬಿಡುತ್ತಿಲ್ಲ.

೪.೩ ವಿಶ್ಲೇಷಣಾ ವರದಿ

ಪ್ರಸ್ತುತ ವಿಶ್ಲೇಷಣಾ ವರದಿಯನ್ನು ನೋಡಿದಾಗ ಯಾವ ಯೋಜನೆಗಳಲ್ಲಿಯೂ ಸಹ ಮಹಿಳೆಯರಿಗೆ ಪೂರಕವಾದ ಅಭಿವೃದ್ಧಿಯನ್ನು ಸಾಧಿಸುವ ಸೌಲಭ್ಯಗಳಿಲ್ಲ. ಎಲ್ಲ ಯೋಜನೆಗಳೂ ಪಿತೃ ಪ್ರಧಾನ ನೆಲೆಯಿಂದ ರೂಪುಗೊಂಡಿರುವುದರಿಂದ ಯೋಜನೆಗಳ ರಚನೆ, ಕಾರ್ಯವಿಧಾನ, ಮೌಲ್ಯಮಾಪನದ ಎಲಾ ಹಂತಗಳೂ ಪುರುಷ ಮೌಲ್ಯಗಳನ್ನು ಬಲವಾಗಿ ಪ್ರಚೋದಿಸುತ್ತವೆ. ಅಂತೆಯೇ ಮಹಿಳೆಯರು ಈ ಮೌಲ್ಯಗಳನ್ನು ಒಪ್ಪಿಕೊಂಡು ನಡೆಯುವಂತೆ ಮಾಡಲಾಗಿದೆ. ಇದರಿಂದಾಗಿ ಸ್ತ್ರೀಯರ ಮೇಲೆ ಪುರುಷ ಪ್ರಧಾನತೆಯು ದೌರ್ಜನ್ಯ ನಡೆಸಿ ಮಹಿಳೆಯರ ಅಭಿವೃದ್ಧಿಯಾಗುವುದನ್ನು ತಡೆಯುತ್ತಿದೆ. ಅಭಿವೃದ್ಧಿ ತಾತ್ವಿಕತೆಯಲ್ಲಿನ ವಿಧಾನಗಳಲ್ಲಿ ಯೋಜನೆಗಳನ್ನು ಸ್ತ್ರೀವಾದಿ ಸಂಶೋಧನಾ ವಿಧಾನದಲ್ಲಿ ರಚಿಸದೇ ಪುರುಷ ಪ್ರಧಾನ ನೆಲೆಯಲ್ಲಿ ರಚಿಸಿಲಾಗಿದೆ. ಹೀಗಾಗಿ ಈ ಯೋಜನೆಗಳು ಸಹಜವಾಗಿಯೇ ಪುರುಷರ ಪರವಾಗಿಯೇ ಕೆಲಸಮಾಡಲು ತೊಡಗಿದ್ದರಿಂದ ಸ್ತ್ರೀಯರಿಗೆ ಇದರಿಂದ ಯಾವುದೇ ಲಾಭಗಳಾಗಿಲ್ಲ. ಮಹಿಳಾ ಪರ ಯೋಜನೆಗಳು ಜಾರಿಯಲ್ಲಿದ್ದರೂ ಸಹ ಅವುಗಳು ಮಹಿಳೆಯರ ಬೇಡಿಕೆ, ಅಗತ್ಯಗಳನ್ನು ಪೂರೈಸುತ್ತಿಲ್ಲ. ಬದಲಾಗಿ ಪುರುಷರಿಗೆ ಅನುಕೂಲವಾಗುವ ರೀತಿಯಲ್ಲಿಯೇ ಕಾರ್ಯನಿರ್ವಹಿಸುತ್ತಿವೆ. ಹೀಗಾಗಿ ಸ್ತ್ರೀಯರ ಅಭಿವೃದ್ಧಿ ಸಾಧ್ಯವಾಗದೇ ಮಹಿಳೆಯರು ಸಮಾಜದಲ್ಲಿ ಪುರುಷರಿಗೆ ಸಮಾನವಾಗಿ ನಿಲ್ಲಲು

ಸಾಧ್ಯವಾಗುತ್ತಿಲ್ಲ. ಯೋಜನೆಗಳ ಮೌಲ್ಯಮಾಪನದ ಸಂದರ್ಭದಲ್ಲಿ ಮಹಿಳೆಯರ ಅನುಭವಗಳನ್ನು ಅಗತ್ಯಗಳನ್ನು ಪರಿಶೀಲಿಸಿ ಅವರಿಗೆ ಅನುಕೂಲವಾಗುವಂತ ಯೋಜನೆಗಳನ್ನು ನೀಡುವುದರ ಬದಲಾಗಿ ಮಹಿಳೆಯರ ಅನುಭವಗಳನ್ನು ಪರಿಗಣಿಸದೇ ನಿರ್ಲಕ್ಷ್ಯ ಮನೋಭಾವದಿಂದ ಮಹಿಳಾ ಯೋಜನೆಗಳನ್ನು ರೂಪಿಸಿದಾಗ ಅವು ಮಹಿಳೆಯರಿಗೆ ಯಾವುದೇ ರೀತಿಯಿಂದಲೂ ಸಹಕರಿಸದೇ ವಿಫಲವಾಗುತ್ತಿವೆ. ಹೀಗಾಗಿ ಯೋಜನೆಗಳ ಮೌಲ್ಯಮಾಪನದ ಸಂದರ್ಭದಲ್ಲಿ ಮಹಿಳೆಯರ ಅನುಭವಗಳನ್ನು, ಬೇಡಿಕೆಗಳನ್ನು ಪರಿಗಣಿಸುವ ಅಗತ್ಯವಿದೆ. ಹೀಗಾಗಿ ಅಭಿವೃದ್ಧಿ ಯೋಜನೆಗಳ ಎಲ್ಲಾ ಹಂತಗಳಲ್ಲೂ ಲಿಂಗ ತಾರತಮ್ಯಗಳು ತುಂಬಿರುವುದರಿಂದ ಮಹಿಳಾ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ.

ಈ ಅಧ್ಯಯನ ಮುಖ್ಯ ಉದ್ದೇಶವೂ ಸಹ ಯೋಜನೆಗಳಲ್ಲಿರುವ ಲೋಪ-ದೋಷಗಳನ್ನು ಗುರ್ತಿಸುವುದಾಗಿದೆ. ಅಂತೆಯೇ ಸರ್ಕಾರಿ ಯೋಜನೆಗಳ ಎಲ್ಲಾ ಕಾರ್ಯಹಂತಗಳಲ್ಲಿಯೂ ಪುರುಷ ಪ್ರಧಾನ ಮೌಲ್ಯಗಳಿರುವುದರಿಂದಾಗಿ ಸ್ತ್ರೀಯರ ಅಭಿವೃದ್ಧಿಗೆ ಅವಕಾಶ ಇಲ್ಲದಂತಾಗಿದೆ. ಈ ಸಮಸ್ಯೆಗಳ ಮುಖ್ಯ ಕಾರಣಗಳನ್ನು ತಿಳಿದು ಅದನ್ನು ನಿವಾರಿಸಲು ಸೂಕ್ತ ಮಾರ್ಗಗಳನ್ನು ಕಂಡುಹಿಡಿಯುವುದಾಗಿದೆ. ಸಮಾಜದಲ್ಲಿ ಮಹಿಳೆಯರ ಅಭಿವೃದ್ಧಿಗೆ ಮಾರಕವೆನಿಸಿರುವ ಪುರುಷ ಪ್ರಧಾನ ಮೌಲ್ಯಗಳನ್ನು ನಿವಾರಿಸುವುದಾಗಿದೆ.

ಗರ್ಭನಿರೋಧಕಗಳ ಬಗ್ಗೆ ಇನ್ನೂ ಅಧ್ಯಯನ ನಡೆಯುತ್ತಿದೆಯಾದರೂ ಇವುಗಳು ಮುಂದುವರೆದ ರಾಷ್ಟ್ರಗಳಲ್ಲಿ ಬಳಕೆಯಲ್ಲಿವೆ ಹಾಗೂ ಅವುಗಳಿಂದ ಉಂಟಾದ ಅಡ್ಡ ಪರಿಣಾಮಗಳಿಗೆ ಇನ್ನೂ ಸರಿಯಾದ ಚಿಕಿತ್ಸೆಗಳು ಜಾರಿಗೆ ಬಂದಿಲ್ಲ. ಒಟ್ಟಿನಲ್ಲಿ ಈ ಮೇಲಿನ ನಾಲ್ಕು ಗರ್ಭನಿರೋಧಕ ಅಂಶಗಳು ಮಹಿಳೆಯರ ದೈಹಿಕ ಆರೋಗ್ಯದ ಮೇಲೆ ಹಾನಿಕಾರಕ ಪರಿಣಾಮವನ್ನು ಬೀರುತ್ತಿವೆ. ಸ್ತ್ರೀ ಸಂತಾನ ನಿರೋಧಕ ಶಸ್ತ್ರ ಚಿಕಿತ್ಸೆಯಿಂದ ಸೋಂಕುಂಟಾದಲ್ಲಿ ಅದು ತೊಂದರೆಗಳನ್ನುಂಟು ಮಾಡಬಲ್ಲದು. ಈ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ನಂತರ ಋತುಚಕ್ರದಲ್ಲಿ ಏರುಪೇರುಂಟಾಗುತ್ತದೆ. ಇನ್ನು ಶಿಬಿರಗಳ ಮೂಲಕ ನಡೆಸುವ ಶಸ್ತ್ರ ಕ್ರಿಯೆಯಿಂದ ಮಹಿಳೆಯರಿಗೆ ಸಂಪೂರ್ಣವಾಗಿ ವೈದ್ಯಕೀಯ ನೆರವು ಸಿಗುವುದೇ ಇಲ್ಲ. ಪುರುಷ ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಯಿಂದಾಗಿ ಯಾವ ರೀತಿಯ ಅಡ್ಡ ಪರಿಣಾಮಗಳಿಲ್ಲದಿದ್ದರೂ ಸಹ ಸರ್ಕಾರ ಮಹಿಳೆಯರ ಮೇಲೆಯೇ ಕುಟುಂಬ ನಿಯಂತ್ರಣ ಶಸ್ತ್ರ ಚಿಕಿತ್ಸೆಯ ಜವಾಬ್ದಾರಿಯನ್ನು ಹೇರುತ್ತಿದೆ.

ತಾತ್ಕಾಲಿಕ ಗರ್ಭ ನಿರೋಧಕಗಳಿಂದ ಮುಖ್ಯವಾಗಿ ಕಾಂಡೋಗಳಿಂದ ಸಾಮಾನ್ಯ ಪುರುಷನು ಅವುಗಳನ್ನು ಎಚ್ಚರಿಕೆಯಿಂದ ಉಪಯೋಗಿಸದೇ ಇದ್ದಲ್ಲಿ ಸ್ತ್ರೀಗೆ ಅನಿಶ್ಚಿತತೆಯ ಆತಂತ್ರ ಉಂಟಾಗುತ್ತದೆ ಹಾಗೂ ಸ್ತ್ರೀ ಗರ್ಭಧರಿಸುವ ಸಾಧ್ಯತೆಯೂ ಇದೆ.

ಗರ್ಭದಲ್ಲಿರಿಸುವ ಸಾಧನಗಳಿಂದ ದೇಶದಲ್ಲಿ ಅನಾರೋಗ್ಯಕರ ಪರಿಸರದಲ್ಲಿ ವಾಸಿಸುವ ಹಾಗೂ ಯಾವುದೇ ಚಿಕಿತ್ಸೆಗೆ ಒಳಪಡದ ಮಹಿಳೆಯರು ಹಲವಾರು ಸೋಂಕುಗಳಿಂದ, ಯೋನಿಸ್ರಾವದಿಂದ ನರಳುತ್ತಿದ್ದಾರೆ. ಇದಕ್ಕೆಲ್ಲ ಈ ಸಾಧನಗಳೇ ಮುಖ್ಯ ಕಾರಣವಾಗಿದೆ. ಅತಿಯಾದ ರಕ್ತ ಸ್ರಾವ, ಬೆನ್ನು ನೋವು, ಹಲವಾರು ಸೋಂಕುಗಳಿಂದ ನರಳುವ ಸ್ಥಿತಿ ಇದ್ದರೂ ಅವರಿಗೆ ಯಾವುದೇ ತರಹದ ವೈದ್ಯಕೀಯ ಸೌಲಭ್ಯಗಳು ಸಹಾಯಕ್ಕೆ ಬರುತ್ತಿಲ್ಲ. ಇನ್ನು ಗರ್ಭನಿರೋಧಕ ಮಾತ್ರೆಗಳಿಂದ ಅವುಗಳನ್ನು ಸೇವಿಸುವುದರಿಂದ ತೀವ್ರವಾದ ವಾಂತಿ, ತಲೆ ನೋವು, ಭಿನ್ನತೆ, ಮಧುಮೇಹ, ರಕ್ತದೊತ್ತಡ, ರಕ್ತ ಹೆಪ್ಪುಗಟ್ಟುವಿಕೆ, ರಕ್ತನಾಳ ತೊಂದರೆಯಿಂದ ಹೃದ್ರೋಗ, ಶಿಲೀಂದ್ರಣ ಸೋಂಕುಗಳು, ಯಕೃತ್ತಿನ ತೊಂದರೆ, ಅರ್ಬುದ ರೋಗಗಳು ಬರುತ್ತದೆ. ಈ ತರದಲ್ಲಿ ಗರ್ಭನಿರೋಧಕಗಳಿಂದ ತೊಂದರೆಯಾಗುತ್ತಿದೆ. ಇವು ಹೆಚ್ಚಾಗಿ ಮಹಿಳೆಯರಿಗಾಗಿ ಮಾಡಿದ ಗರ್ಭನಿರೋಧಕ ಸಾಧನಗಳಾಗಿದ್ದು ಅವರಿಗೆ ಹೆಚ್ಚಿನ ತೊಂದರೆಗಳುಂಟಾಗುತ್ತದೆ. ಇಂತಹ ಈ ತೊಂದರೆಗಳ ಬಗ್ಗೆ ತಿಳಿದಿದ್ದರೂ ಸರ್ಕಾರ ಯಾವ ತರಹದ ಸುಧಾರಣಾ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಕೇವಲ ಕುಟುಂಬ ಯೋಜನಾ ಕ್ರಮಗಳನ್ನು ಸ್ತ್ರೀಯರಿಂದ ಯಶಸ್ವಿಗೊಳಿಸಬೇಕೆಂದು ಸರ್ಕಾರ ಯೋಚಿಸತ್ತದೆ.

ಮಹಿಳೆಯರ ಆರೋಗ್ಯವು ಸಂತಾನ ನಿಯಂತ್ರಣ ಕ್ರಮಗಳಿಂದ ಉತ್ತಮಗೊಳ್ಳುತ್ತಾ ಒಂತಾದರೂ ಕೆಲವೊಂದು ಹಾನಿಕಾರಕ ಪರಿಣಾಮಗಳನ್ನು ಸಹ ಬೀರುತ್ತದೆ. ಅವುಗಳನ್ನು ಈ ಕೆಳಗಿನ ಸಂತಾನ ತಂತ್ರಜ್ಞಾನದಲ್ಲಿ, ಲಿಂಗತಾರತಮ್ಯದಲ್ಲಿ ಸೂಕ್ಷ್ಮವಾಗಿ ಚರ್ಚಿಸಲಾಗಿದೆ.

ಭ್ರೂಣದಲ್ಲಿದ್ದಾಗ, ಹುಟ್ಟು, ಹಾಲುಣ್ಣುವಿಕೆ ಮತ್ತು ಬೆಳವಣಿಗೆಯ ಎಲ್ಲಾ ಹಂತದಲ್ಲಿ ಸ್ತ್ರೀಯರ ಅಭಿವ್ಯಕ್ತಿ, ಚಿಂತನೆ, ಗ್ರಹಿಕೆ, ಒಟ್ಟಾಗಿ ಭ್ರೂಣದಿಂದಲೇ ತಾರತಮ್ಯಕ್ಕೆ ಒಳಗಾಗುವ ಹೆಣ್ಣು ಪ್ರಗತಿಯತ್ತ ಸಾಗುತ್ತಿದ್ದರೂ ಪ್ರಧಾನ ನೆಲೆಗಳ ಮೌಲ್ಯಗಳು ಮತ್ತೆ ಅವಳನ್ನು ಹತ್ತಿಕ್ಕುತ್ತಿದೆ. ಇಂತಹ ಪ್ರಧಾನಧಾರೆಯ ಮೌಲ್ಯಗಳನ್ನು ಆಧರಿಸಿ ತಂತ್ರಜ್ಞಾನಗಳು ಪ್ರಗತಿ ನೆಲೆಗೊಳ್ಳುವ, ರೂಪುಗೊಳ್ಳುವ ಅಂಶವೇ ಇದಕ್ಕೆ ಕಾರಣ. ಅದಕ್ಕೆ ಮಹಿಳಾ ಸ್ವಾಯತ್ತದ ನೆಲೆಯಲ್ಲಿ ಅವಳ ಅಧ್ಯಯನ, ಸಂಶೋಧನೆ ಅತ್ಯಗತ್ಯವಾಗಿದೆ. ಮಹಿಳಾ ಆರೋಗ್ಯವು ಪ್ರಧಾನಧಾರೆಯ ಕಲ್ಪಿತ, ರೂಪಿತ ನೆಲೆಯಲ್ಲಿ ಕ್ಷೀಣಿಸುತ್ತಾ ಅಶಕ್ತತೆಯ ದಾರಿಯಲ್ಲಿ ಸಾಗುತ್ತಿದೆ.

ಹೀಗೆ ಸ್ತ್ರೀಯರಿಗೆ ಅವರ ದೇಹ ರಚನೆ, ಅವರಲ್ಲಿ ನಡೆಯುವಂತ ಸ್ವಾಭಾವಿಕ ಕ್ರಿಯೆಗಳ ಹಾಗೂ ಅವಳ ಆರೋಗ್ಯದ ಬಗ್ಗೆ ಅವಳಿಗೆ ತಿಳಿದಿರುವುದು ಕಡಿಮೆ. ಅವಳಿಗೆ ತನ್ನ ಜನನೇಂದ್ರಿಯ ಲೈಂಗಿಕ ಅಂಗ, ಗರ್ಭಧಾರಣೆಯ ತೊಂದರೆಗಳನ್ನು ಗೌಪ್ಯವಾಗಿಡುವ ಸ್ಥಿತಿ ಅವಳಲ್ಲಿದೆ. ಇಂತಹ ಭಾವನೆಯನ್ನು ಹೊರಡಿಸುವುದು. ಇತರರೊಡನೆ ಹಂಚಿಕೊಳ್ಳುವುದು ಅವಮಾನಕರ ಸಂಗತಿ

ಎಂದು ಅವಳ ಮನದಲ್ಲಿ ಬಿತ್ತಲಾಗಿದೆ. ಈಗಿನ ಆರೋಗ್ಯ ವ್ಯವಸ್ಥೆ, ಸಂಶೋಧನೆಗಳು, ವೈದ್ಯಕೀಯ ತಂತ್ರಜ್ಞಾನಗಳೆಲ್ಲವೂ ಪುರುಷಕೇಂದ್ರಿತ ನೆಲೆಯಲ್ಲಿಯೇ ರೂಪುಗೊಂಡಿವೆ. ಪ್ರಾರಂಭಿಕ ಶಿಕ್ಷಣ ಹಂತವನ್ನು ಗಮನಿಸಿದಾಗ ತಂತ್ರಜ್ಞಾನ, ವೈದ್ಯಕೀಯ ಅಧ್ಯಯನಕ್ಕೆ ಪುರುಷರು ಯೋಗ್ಯರು ಎಂಬ ಒಂದು ಲಿಂಗ ಪೂರ್ವಗ್ರಹವನ್ನು ನಾವು ಸ್ಪಷ್ಟವಾಗಿ ಕಾಣುತ್ತೇವೆ. ಹೀಗಿರುವಾಗ ಆರಂಭದ ಹಂತದಲ್ಲಿಯೇ ಹೆಣ್ಣನ್ನು ಪ್ರಧಾನ ಧಾರೆಯ ವರ್ಗವು ಹತ್ತಿಕ್ಕಿ ತನ್ನ ಅನುಕೂಲಕ್ಕೆ ತಕ್ಕಂತೆ ನಿರ್ವಹಿಸುತ್ತಿರುವುದರಿಂದ ಇಲ್ಲಿ ಲಿಂಗ ತಾರತಮ್ಯತೆ, ಲಿಂಗ ಪೂರ್ವಾಗ್ರಹಗಳನ್ನು ಸ್ಪಷ್ಟವಾಗಿ ಗುರುತಿಸಬಹುದು ಕಾರಣ ಎಲ್ಲವೂ ಪುರುಷನ ಅನುಕೂಲಕ್ಕೆ ತಕ್ಕಂತೆ ನಿರ್ವಚಿಸಿದ್ದಾನೆ.

ಉದಾ: ಸ್ತ್ರೀಯರು ವಂಕಿ ಧರಿಸಿದಾಗ ಹೊಟ್ಟೆನೋವು, ರಕ್ತಸ್ರಾವ ಉಂಟಾದಾಗ ಅಶಕ್ತರಾಗಿ ಇತರೆ ತೊಂದರೆಗಳಾದರೆ ಇವೆಲ್ಲವೂ ಕೆಲಸಗಳಿಂದ ತಪ್ಪಿಸಿಕೊಳ್ಳುವ ಸಂಚು ಎಂದು ಹೇಳಲಾಗುತ್ತಿತ್ತು. ಇನ್ನು ಗರ್ಭನಿರೋಧಕಗಳಾದ ವಂಕಿಧಾರಣೆ, ಮಾತ್ರೆಗಳ ಬಗ್ಗೆ ಇನ್ನೂ ಸಂಶೋಧನೆ ನಡೆಯುತ್ತಲೇ ಇದೆ. ಹಾಗೂ ಈ ಎಲ್ಲ ಗರ್ಭನಿರೋಧಕಗಳು ಮುಂದೆ ಹುಟ್ಟುವ ಭ್ರೂಣದ ಮೇಲೆ, ಹೆಣ್ಣಿನ ದೇಹದ ಮೇಲೆ, ಹೆಣ್ಣಿನ ಗರ್ಭಕೋಶದ ಮೇಲೆ ಯಾವ ಪರಿಣಾಮವನ್ನು ಬೀರುತ್ತದೆ ಎಂಬುದನ್ನು ಯಾವ ಸಂಶೋಧನೆಯೂ ನಿಖರವಾಗಿ ಹೇಳಿಲ್ಲ. ಹಾಗೂ ಒಂದು ವೇಳೆ ಸೂಕ್ಷ್ಮವಾಗಿ ಹೇಳಿದ್ದರೂ ಅದನ್ನು ಆಳವಾಗಿ/ಗಂಭೀರವಾಗಿ ಪರಿಗಣಿಸಿಲ್ಲ ಮತ್ತು ಅಧ್ಯಯನ ಮಾಡಿಲ್ಲ. ಆದರೆ ಮಹತ್ವದ ಸಂಗತಿಯೆಂದರೆ ಗರ್ಭನಿರೋಧಕಗಳನ್ನು ಪುರುಷರಿಗಿಂತ ಸ್ತ್ರೀಯರು ಹೆಚ್ಚಾಗಿ ಬಳಸುವಂತೆ ಸೃಷ್ಟಿ ಮಾಡಲಾಗಿದೆ. ವಾಸ್ತವವಾಗಿ ಬಳಕೆಯಲ್ಲಿರುವ ಎಲ್ಲಾ ಗರ್ಭ ನಿರೋಧಕಗಳನ್ನು ಅವಲೋಕಿಸಿದರೂ 'ಎರಡಕ್ಕಿಂತ' ಹೆಚ್ಚಿನ ಗರ್ಭ ನಿರೋಧಕಗಳು ಪುರುಷರಿಗಿಲ್ಲ. ಆದರೆ ಸ್ತ್ರೀಯರಿಗೆ 'ಆರು' ರೀತಿಯ ಗರ್ಭನಿರೋಧಕಗಳನ್ನು ಸಂಶೋಧಿಸಲಾಗಿದೆ. ಇಲ್ಲಿ ಪುರುಷ ರಾಜಕಾರಣ. ಅವರ ತಂತ್ರಜ್ಞಾನದ ಬೆಳವಣಿಗೆ ಎಲ್ಲವನ್ನು ಕಾಣಬಹುದು. ಇದಕ್ಕೆ ಉತ್ತಮ ಉದಾಹರಣೆ ಎಂದರೆ, ಇ.ಪಿ.ಪೋರ್ಸ್ಟ್ ಎಂಬ ಮಾತ್ರೆಯನ್ನು ಗರ್ಭ ಪರೀಕ್ಷೆಗಾಗಿ ಕೊಡಲಾಗುತ್ತದೆ. ಆದರೆ ಮಾತ್ರೆ ಸೇವನೆಯಿಂದ ಹುಟ್ಟುವ ಮಗುವಿನ ಮೇಲೆ ಮಾರಕ ಪರಿಣಾಮ ಬೀರುತ್ತದೆಂಬುದನ್ನು ಸ್ಪಷ್ಟಪಡಿಸಿದೆ. ೧೯೮೮ರಲ್ಲೇ ಇದನ್ನು ಬಹಿಷ್ಕರಿಸಲಾಯಿತು. ಆದರೆ ಅದು ಇಂದಿಗೂ ಮಾರುಕಟ್ಟೆಯಲ್ಲಿ ಲಭ್ಯವಿದೆ.

ಎಷ್ಟೇ ತಂತ್ರಜ್ಞಾನ, ತಾಂತ್ರಿಕತೆ ಬೆಳೆಯುತ್ತಾ ಬಂದರೂ ಸಹ ಅದು ಮಹಿಳಾ ಲೋಕದ ಬಗ್ಗೆ ನಿರ್ಲಕ್ಷ್ಯ ಭಾವನೆಯನ್ನು ತೋರುತ್ತಿದೆ. ಮಾನವ ಪರಿಸರ ಸಮತೋಲನವು ಈಗ ಕಾಯ್ದುಕೊಳ್ಳಲಾಗುತ್ತಿಲ್ಲ. ಸರ್ಕಾರ ಎಷ್ಟೊಂದು ಆರೋಗ್ಯ ಕಾರ್ಯಕ್ರಮಗಳನ್ನು ಹಾಕಿಕೊಂಡಿತು. ವೈಜ್ಞಾನಿಕ, ತಂತ್ರಜ್ಞಾನದ ಬೆಳವಣಿಗೆಯನ್ನು ವೃದ್ಧಿಪಡಿಸಿತು. ಆದರೂ ಭಾರತದಲ್ಲಿ ಬಡತನ

ಹೆಚ್ಚುತ್ತಲೇ ಇದೆ; ಬಡತನಕ್ಕೆ ಜನಸಂಖ್ಯೆಯ ಹೆಚ್ಚಳವೇ ಕಾರಣ. ಈ ಜನಸಂಖ್ಯೆಯ ನಿಯಂತ್ರಣಕ್ಕೆ ಸರ್ಕಾರ ಕಾರ್ಯಕ್ರಮಗಳನ್ನು ಹಾಕಿಕೊಂಡಿತು. ಆದರೆ ಇಲ್ಲಿ ಮಹಿಳಾ ಆರೋಗ್ಯದ ಬಗ್ಗೆ ಕಳಕಳಿಯೇ ಇಲ್ಲ. ಈ ತಂತ್ರಜ್ಞಾನದ ಪ್ರಗತಿಯ ಫಲವಾಗಿ ಸರ್ಕಾರ ಹಳ್ಳಿ ಹಳ್ಳಿಗಳಲ್ಲಿ ದೊಡ್ಡ ದೊಡ್ಡ ಶಿಬಿರಗಳನ್ನು ಏರ್ಪಡಿಸಿ ಅಲ್ಲಿ ಹಳ್ಳಿ ಹೆಂಗಸರಿಗೆ ಸಂತಾನ ಹರಣ ಶಸ್ತ್ರ ಕ್ರಿಯೆಯನ್ನು ಮಾಡಲಾಗುತ್ತದೆ. ತಮ್ಮ ಬದುಕಿನ ಅತಿ ಮುಖ್ಯ ಮತ್ತು ಮಹತ್ವದ ನಿರ್ಧಾರವನ್ನು ಕೈಗೊಳ್ಳಲು ಇಲ್ಲಿಗೆ ಬಂದಂತಹ ಸ್ತ್ರೀಯರಿಗೆ ಅಸಡ್ಡೆಯಿಂದ ಶಸ್ತ್ರಚಿಕಿತ್ಸೆಯನ್ನು ಮಾಡಲಾಗುತ್ತದೆ. ಆದರೆ ಶಸ್ತ್ರಕ್ರಿಯೆ ಆದ ನಂತರ ಸ್ತ್ರೀಯರಿಗೆ ಅವರ ಆರೋಗ್ಯದ ರಕ್ಷಣೆ ಮಾಡಲು ಯಾವ ರೀತಿಯ ವೈದ್ಯಕೀಯ ಸೇವೆಯೂ ಇರುವುದಿಲ್ಲ. ಸ್ತ್ರೀಯರ ಸಂತಾನ ಹರಣ ಶಸ್ತ್ರಕ್ರಿಯೆಗಿಂತ ಪುರುಷರ ಸಂತಾನ ಶಸ್ತ್ರಕ್ರಿಯೆ ತುಂಬಾ ಸುಲಭ ಹಾಗೂ ಸರಳವಾದದ್ದು ಮತ್ತು ಯಾವುದೇ ಆರೋಗ್ಯ ಸಮಸ್ಯೆಗಳಿರುವುದಿಲ್ಲ. ಸರ್ಕಾರ ಪುರುಷರಿಗೆ ವ್ಯಾಸೆಕ್ಟಮಿಯನ್ನು ಉತ್ತೇಜಿಸಿದರೂ ಯಾರೂ ಮುಂದೆ ಬಂದು ವ್ಯಾಸೆಕ್ಟಮಿಯನ್ನು ಮಾಡಿಸಿಕೊಳ್ಳುತ್ತಿಲ್ಲ; ಆಧುನಿಕ ತಂತ್ರಜ್ಞಾನದ ಬಳಕೆಗೆ ಸ್ತ್ರೀಯರನ್ನೇ ಮುಖ್ಯ ಗುರಿಯನ್ನಾಗಿಸಿಕೊಂಡು ಆಕೆಯ ಮೇಲೆಯೇ ಪ್ರಯೋಗಗಳನ್ನು ಮಾಡುತ್ತಾ ಸ್ತ್ರೀಯರನ್ನು ಬಲಿಪಶುಗಳನ್ನಾಗಿ ಮಾಡುತ್ತಿದ್ದಾರೆ.

ಭಾರತವು ಕುಟುಂಬ ಯೋಜನಾ ಕಾರ್ಯಕ್ರಮಗಳನ್ನು ರಾಷ್ಟ್ರೀಯ ಯೋಜನೆಗಳಲ್ಲಿ ಅಳವಡಿಸಿಕೊಂಡ ಮೊದಲ ದೇಶ. ನಮ್ಮ ಎಲ್ಲಾ ಪಂಚವಾರ್ಷಿಕ ಯೋಜನೆಗಳಲ್ಲೂ ಕುಟುಂಬ ಯೋಜನಾ ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು. ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಕುಟುಂಬ ನಿಯಂತ್ರಣದ ಬಗ್ಗೆ ದಂಪತಿಗಳಿಬ್ಬರಿಗೂ ತಿಳುವಳಿಕೆಯನ್ನು ನೀಡಲಾಯಿತು. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ನಿರೋಧ್‌ಗಳು, ವಂಕಿ, ಮಾತ್ರೆ, ಶಸ್ತ್ರ ಕ್ರಿಯೆಗೆ ಆದ್ಯತೆ ನೀಡಿತು. ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಂಡವರಿಗೆ ಪ್ರೋತ್ಸಾಹ ಧನವನ್ನು ನೀಡಲಾಯಿತು. ಇಲ್ಲಿ 'ವಂಕಿ' ಪ್ರಭಾವಶಾಲಿಯಾದ ಪರಿಣಾಮ ಬೀರಲಿಲ್ಲ. ಆದರೆ ಈ ಸಮಯದಲ್ಲಿ ಸ್ತ್ರೀಯರಲ್ಲಿ ಯೋನಿಕ್ಷಯ ಹೆಚ್ಚಾಗಿದ್ದು ಕಂಡುಬಂದಿತು. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಶಿಬಿರಗಳ ಮೂಲಕ ಶಸ್ತ್ರಕ್ರಿಯೆಯನ್ನು ಮಾಡಲಾಯಿತು.(ಇಲ್ಲಿ ಸ್ತ್ರೀಯರ ಶಸ್ತ್ರ ಕ್ರಿಯೆಗೆ ಪ್ರೋತ್ಸಾಹ ನೀಡಲಾಯಿತು) ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಗರ್ಭಪಾತವನ್ನು ಕಾನೂನು ಬದ್ಧಗೊಳಿಸಲಾಯಿತು. ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಅತಿ ಸಂತಾನವನ್ನು ನಿಯಂತ್ರಿಸಲು ಉತ್ತೇಜಿಸಲಾಯಿತು. ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಲೆಪ್ರೋಸ್ಕೋಪಿ ಶಸ್ತ್ರ ಚಿಕಿತ್ಸೆಗೆ ಒತ್ತು ನೀಡಲಾಯಿತು.

ಈ ಎಲ್ಲಾ ಯೋಜನೆಗಳನ್ನು ಗಮನಿಸಿದಾಗ ಹೆಣ್ಣನ್ನು ಪ್ರಜನನ ಕ್ರಿಯೆ. ಜನ್ಮದಾತೆಯಾಗಿ ಪರಿಗಣಿಸಿವೆಯೇ ಹೊರತು ವ್ಯಕ್ತಿಯಾಗಿ ಅಲ್ಲ. ಇವೆಲ್ಲವೂ ಜನಪರ ಕಾಳಜಿಗೆ ಒತ್ತು ನೀಡದೆ

[illegible]

ಜನನ ನಿಯಂತ್ರಣಕ್ಕೆ ಒತ್ತು ನೀಡಿದೆ. ಮಹಿಳೆಯರ ಆರೋಗ್ಯದ ಮೇಲಿನ ಪರಿಣಾಮಗಳನ್ನು ನಿರ್ಲಕ್ಷಿಸಿ ಅವರ ಆಸಕ್ತಿಯನ್ನು ಘಾಸಿಗೊಳಿಸಿದೆ.

ಪುರುಷ ತಾಂತ್ರಿಕ ಕೇಂದ್ರಿತ ಆಧುನಿಕ ಆರೋಗ್ಯ ವ್ವವಸ್ಥೆಯು ಮಹಿಳೆಯನ್ನು ಹೊರ ತಳ್ಳಿದೆ. ಇತ್ತೀಚಿನ ಆರೋಗ್ಯ, ವ್ಯವಸ್ಥೆಯು ಎಷ್ಟೇ ಸುಧಾರಿತವಾದರೂ ಮಹಿಳೆಯರ ತಾಯ್ತನದ ಸುತ್ತ ಸುತ್ತುತ್ತಿರುವುದು ಸ್ಪಷ್ಟ ಸಂಗತಿ. ಒಟ್ಟಾಗಿ ಮಹಿಳಾ ಆರೋಗ್ಯವನ್ನು ಕಾಪಾಡಲು ಸಂತಾನ ನಿಯಂತ್ರಣ ಶಸ್ತ್ರ ಚಿಕಿತ್ಸೆಯಲ್ಲಿ ಟ್ಯೂಟಿಕ್ಟಮಿಗಿಂತ ವ್ಯಾಸೆಕ್ಟಮಿಗೆ ಹೆಚ್ಚು ಒತ್ತು ನೀಡಬೇಕು ಏಕೆಂದರೆ ಇದೊಂದು ಸುರಕ್ಷಿತ ಮತ್ತು ಸರಳ ವಿಧಾನವಾಗಿದೆ. ಮಹಿಳೆಯರ ಮತ್ತು ಅವರ ಆರೋಗ್ಯದ ಬಗ್ಗೆ ಸೂಕ್ತವಾದ, ವ್ಯಾಪಕವಾದ ಅಧ್ಯಯನ ಮತ್ತು ಸಂಶೋಧನೆಗಳನ್ನು ನಡೆಸಿ ಅವುಗಳನ್ನು ಪ್ರೋತ್ಸಾಹಿಸಿ ಯಶಸ್ವಿಯಾಗಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕಾದ ಅವಶ್ಯಕತೆ ಇದೆ.

ಈ ಮೇಲ್ಕಂಡ ಸಮಸ್ಯೆಗಳಿಗೆ ಈ ಕೆಳಗಿನ ಪರಿಣಾಮಗಳನ್ನು ಸೂಚಿಸಬಹುದು.

೧. ಗರ್ಭನಿರೋಧಕಗಳ ಗುಣಮಟ್ಟವನ್ನು ಉತ್ತಮಪಡಿಸುವುದು.

೨. ದಂಪತಿಗಳಿಗೆ ಎಲ್ಲಾ ನಿರೋಧಕ ಶಕ್ತಿಗಳ ಬಗ್ಗೆ ಸ್ಪಷ್ಟ ಮಾಹಿತಿ ನೀಡುವುದು.

೩. ಸೂಕ್ತ ಶಿಕ್ಷಣ ಹಾಗೂ ಪ್ರಚಾರಗಳ ಮೂಲಕ ಗರ್ಭ ನಿರೋಧಕಗಳ ತಾತ್ಕಾಲಿ ವಿಧಾನಗಳನ್ನು ಉತ್ತೇಜಿಸುವುದು.

೪. ಹಳ್ಳಿಗಳ ಸ್ತ್ರೀಯರಿಗೆ, ಅಲಕ್ಷಿತ ಸಮುದಾಯಗಳಲ್ಲಿ, ಬುಡಕಟ್ಟು ಜನಾಂಗಗಳಲ್ಲಿ ಮಹಿಳೆಯರ ಆರೋಗ್ಯದ ಬಗ್ಗೆ, ನಿರೋಧಕಗಳ ಬಗ್ಗೆ ಶಸ್ತ್ರ ಕ್ರಿಯೆಗಳ ಬಗ್ಗೆ ಸಂಪೂರ್ಣವಾಗಿ ತಿಳಿಸಿ ಅವರಿಗೆ ಈ ಸೌಲಭ್ಯಗಳು ಸಂಪೂರ್ಣವಾಗಿ ದೊರೆಯುವಂತೆ ಕಾರ್ಯಕ್ರಮಗಳನ್ನು ರೂಪಿಸಬೇಕು. ಶಿಬಿರಗಳ ಮೂಲಕ ಶಸ್ತ್ರಕ್ರಿಯೆ ನಡೆಸಿ ಪೂರ್ಣ ಪ್ರಮಾಣದ ವೈದ್ಯಕೀಯ ನೆರವು ನೀಡಬೇಕು.

ಎನ್‌ಎಸ್‌ವಿಯ ವೈಫಲ್ಯತೆಗೆ ಕಾರಣಗಳು

ಎನ್‌ಎಸ್‌ವಿ ಶಸ್ತ್ರ ಚಿಕಿತ್ಸೆಗೆ ಸಮಾಜ, ಪಿತೃಪ್ರಧಾನ ಮೌಲ್ಯಗಳು, ಸಂಪ್ರದಾಯಗಳು ಬಲವಾಗಿ ವಿರೊಧಿಸಿದರೆ ಅದರ ಕಾಯವಿಧಾನಗಳೂ ಸಹ ಎನ್‌ಎಸ್‌ವಿಯನ್ನು ವಿರೋಧಿಸುತ್ತವೆ. ಈ ಎಲ್ಲಾ ಕಾರಣಗಳಿಂದಾಗಿ ಎನ್‌ಎಸ್‌ವಿ ವಿಫಲವಾಗಿದೆ.

೧. **ವೈಧಾನಿಕತೆ:** ಎನ್‌ಎಸ್‌ವಿಯನ್ನು ಪಿತೃಪ್ರಧಾನ ಮೌಲ್ಯಗಳ ವೈಧಾನಿಕತೆಯ ಮೇಲೆ ರೂಪಿಸಲಾಗಿದೆ. ಪಿತೃಪ್ರಧಾನತೆಯು ಹೆಚ್ಚಾಗಿ ಪುರುಷರಿಗೆ ಪ್ರಾಮುಖ್ಯತೆ ನೀಡುತ್ತದೆ. ಆದ್ದರಿಂದ ಇಲ್ಲಿ ಎನ್‌ಎಸ್‌ವಿಚಿಕಿತ್ಸೆಯನ್ನು ಹೆಚ್ಚಾಗಿ ಪ್ರಚೋದಿಸುವುದಿಲ್ಲ. ಏಕೆಂದರೆ ಎನ್‌ಎಸ್‌ವಿಚಿಕಿತ್ಸೆಯಿಂದ

ಪುರುಷರ ಪುರುಷತ್ವಕ್ಕೆಮಾರಕವಾಗುತ್ತದೆ ಎಂದು ಭಾವಿಸಿ ಎನ್‌ಎಸ್‌ವಿಯನ್ನು ಅಭಿವೃದ್ಧಿ ದೃಷ್ಟಿಕೋನದಿಂದ ರಚಿಸಲಾಗಲಿಲ್ಲ. ಅಲ್ಲದೆ ಸಂತಾನಹರಣ ಶಸ್ತ್ರ ಚಿಕಿತ್ಸೆಯ ಸ್ತ್ರೀಯರಿಗಾಗಿ ಮೀಸಲಿರುವುದು ಇದು ಪುರುಷರಿಗಲ್ಲ ಎಂಬ ಪುರುಷ ಪಕ್ಷಪಾತವು ಅಭಿವೃದ್ಧಿಯ ಯೋಜನಾ ವೈಧಾನಿಕತೆಯಲ್ಲಿರುವುದರಿಂದ ಎನ್‌ಎಸ್‌ವಿಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲಾಗುತ್ತಿಲ್ಲ. ಸ್ತ್ರೀವಾದಿ ವೈಧಾನಿಕತೆಯ ಮೂಲಕ ಎನ್‌ಎಸ್‌ವಿ ಯೋಜನೆಯನ್ನು ರೂಪಿಸಿದಾಗ ಸ್ತ್ರೀಯರ ಸಂತಾನಹರಣ ಶಸ್ತ್ರಚಿಕಿತ್ಸೆಯಿಂದ ಸ್ತ್ರೀಯರಿಗುಂಟಾಗುವ ತೊಂದರೆಗಳು ಮತ್ತು ಅದರಪರಿಣಾಮ ಗಳನ್ನು ತಿಳಿಯಬಹುದಾಗಿದೆ. ಜೊತೆಗೆ ಈ ಸಮಸ್ಯೆಗಳನ್ನು ತಡೆಗಟ್ಟಲು ಸುರಕ್ಷಿತ ವಿಧಾನವಾದ ಎನ್‌ಎಸ್‌ವಿಯನ್ನು ಸೂಚಿಸಲಾಗುತ್ತದೆ ಇದುಮತ್ತೆ ಪುರುಷರ ಸಂತಾನಶಕ್ತಿಯನ್ನು ಹರಣ ಮಾಡುತ್ತದೆ ಎಂಬ ಮನೋಭಾವಗಳಿರುವುದರಿಂದಲೇ ಎನ್‌ಎಸ್‌ವಿಯನ್ನು ಪುರುಷ ಪ್ರಧಾನ ವೈಧಾನಕತೆಯಿಂದ ರೂಪಿಸಲಾಗಿದೆ. ಈ ವಿಧಾನವು ಪುರುಷರಿಗೆ ಎನ್‌ಎಸ್‌ವಿಯನ್ನು ಪಡೆಯಲು ಪ್ರೋತ್ಸಾಹಿಸದೇ ಅದನ್ನು ವೈಫಲ್ಯತೆಯ ಕಡೆಗೆ ನಡೆಸುತ್ತಿರುವುದು ಪಿತೃಪ್ರಧಾನ ವ್ಯವಸ್ಥೆಯ ಒಂದು ಭಾಗವೇ ಆಗಿದೆ. ಹೀಗಾಗಿ ಈ ವೈಧಾನಿಕತೆಯಲ್ಲಿ ಸಮಸ್ಯೆಗಳಿವೆ ಎಂಬುದನ್ನು ತಿಳಿಯಬಹುದು.

೨. **ಕಾರ್ಯವಿಧಾನ:** ಎನ್‌ಎಸ್‌ವಿ ಯೋಜನೆಯ ಕಾರ್ಯವಿಧಾನದಲ್ಲಿ ಹಲವಾರು ಲೋಪದೋಷ ಗಳಿರುವುದರಿಂದ ಎನ್‌ಎಸ್‌ವಿ ಕಾರ್ಯಕ್ರಮವು ಇಂದಿಗೂ ಯಶಸ್ವಿಯಾಗದೇ ಹಾಗೆ ಉಳಿದಿದೆ. ಎನ್‌ಎಸ್‌ವಿ ಕಾರ್ಯವಿಧಾನವು ಪುರುಷ ಮೌಲ್ಯಗಳಿಂದ ತುಂಬಿದ್ದು ಪುರುಷ ಸಂತಾನಹರಣ ಶಸ್ತ್ರಚಿಕಿತ್ಸೆಗಿಂತ ಸ್ತ್ರೀಯರ ಸಂತಾನಹರಣ ಚಿಕಿತ್ಸೆಗೆ ಹೆಚ್ಚು ಒತ್ತು ನೀಡುವುದು. ಮಹಿಳೆಯರ ಆರೋಗ್ಯ ದೃಷ್ಟಿಯಿಂದ ಎನ್‌ಎಸ್‌ಟಿಗಿಂತ ಎನ್‌ಎಸ್‌ವಿಸುರಕ್ಷಿತ ವಿಧಾನವಾಗಿದೆ. ಹಾಗಾಗಿ ಕೇವಲ ನೆಪಮಾತ್ರಕ್ಕೆ ಎನ್‌ಎಸ್‌ವಿಯನ್ನು ಪ್ರೋತ್ಸಾಹಿಸಲಾಗಿದೆ ಹೊರತು ಅದನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುತ್ತಿಲ್ಲ. ಎನ್‌ಎಸ್‌ವಿ ಬಗ್ಗೆ ಜನರಿಗೆ ಸೂಕ್ತ ಮಾಹಿತಿ ನೀಡುತ್ತಿಲ್ಲ. ದಂಪತಿಗಳಿಗೆ ಸರಿಯಾದ ಜ್ಞಾನವನ್ನು ಒದಗಿಸುತ್ತಿಲ್ಲ. ಜೊತೆಗೆ ಜನರಲ್ಲಿರುವ ಸಂಪ್ರದಾಯ ಮನೋಭಾವವನ್ನು ಬದಲಿಸಲು ಸರ್ಕಾರಿ ಯೋಜನೆಗಳು ವಿಫಲವಾಗಿದೆ. ಹೀಗಾಗಿ ಎನ್‌ಎಸ್‌ವಿ ಯೋಜನೆಯು ಯಶಸ್ವಿಯಾಗಿ ಕಾರ್ಯಗತಗೊಳ್ಳಿಸಲು ವಿಫಲವಾಗಿದೆ.

೩. **ಮೌಲ್ಯಮಾಪನ:** ಎನ್‌ಎಸ್‌ವಿಯೋನೆಯು ಜಾರಿಗೊಂಡನಂತರ ಅದರ ಕಾರ್ಯವಿಧಾನ ಹೇಗಿದೆ? ಅದರ ಫಲಿತಾಂಶಗಳೇನು? ಎಂಬ ಅಂಶಗಳ ಬಗ್ಗೆ ಸರ್ಕಾರವು ಸಮೀಕ್ಷೆ ನಡೆಸಿ ಅದರ ಲಾಭ–ನಷ್ಟಗಳ ಬಗ್ಗೆ ಚರ್ಚಿಸಿ ಅವುಗಳ ವೈಫಲ್ಯತೆಗೆ ಕಾರಣ ಹುಡುಕಿ ಅದನ್ನು ನವೀನ ವಿಧಾನಗಳ ಮೂಲಕ ನವೀಕರಿಸಿ ಸೂಕ್ತ ಕ್ರಮಗಳನ್ನು ಕೈಗೊಂಡು ಜಾರಿಗೊಳಿಸಬೇಕಾಗು ತ್ತದೆ. ಆದರೆ ಅಭಿವೃದ್ಧಿ ಯೋಜಕರು ಎನ್‌ಎಸ್‌ವಿಗೆ ಹೆಚ್ಚಿನ ಮಟ್ಟದ ಪ್ರಾಶಸ್ತ್ಯವನ್ನು ನೀಡದೆ

ನಿರ್ಲಕ್ಷಿಸಿದ್ದಾರೆ. ಹೀಗಾಗಿ ಮೌಲ್ಯಮಾಪನ ಹಂತದಲ್ಲಿಯೂ ಸಹ ಯೋಜನೆಯು ಲೋಪ-ದೋಷಗಳನ್ನು ಸರಿಪಡಿಸಿಕೊಳ್ಳದೇ ಮೂಲೆ ಗುಂಪಾಗಿದೆ.

ಈ ಎಲ್ಲಾ ಕಾರಣಗಳಿಂದಾಗಿ ಎನ್‌ಎಸ್‌ವಿ ಯೋಜನೆಯು ವಿಫಲವಾಗಿದೆ. ಇದರಿಂದಾಗಿ ಸಂತಾನಹರಣ ಶಸ್ತ್ರಚಿಕಿತ್ಸೆಗಾಗಿ ಸ್ತ್ರೀಯರ ಮೇಲೆ ಹೆಚ್ಚಿನ ಒತ್ತಡ ಬೀಳುತ್ತದೆ. ಸ್ತ್ರೀಯರು ಇದರಿಂದ ಹೆಚ್ಚಿನ ದೌರ್ಜನ್ಯಕ್ಕೊಳಗಾಗಿ ವಿವಿಧ ರೀತಿಯ ಆರೋಗ್ಯ ಸಮಸ್ಯೆಗಳಿಂದ ಜರ್ಜರಿತರಾಗುತ್ತಿದ್ದಾರೆ. ಆದ ಕಾರಣ ಎನ್‌ಎಸ್‌ವಿಯನ್ನು ಸರ್ಕಾರವು ಪ್ರಬಲಗೊಳಿಸಿ ಯಶಸ್ವಿಯಾಗಿ ಜಾರಿಗೊಳಿಸಬೇಕಾದ ಅವಶ್ಯಕತೆ ಇದೆ.

ಎನ್‌ಎಸ್‌ವಿ ಕ್ಷೇತ್ರಕಾರ್ಯವನ್ನು ೨೦೧೧ರ ಆಗಸ್ಟ್‌ನಿಂದ ಅಕ್ಟೋಬರ್‌ವರೆಗೆ ನಡೆಸಲಾಯಿತು. ಈ ಬಗ್ಗೆ ಮಾಹಿತಿಯನ್ನು ಸಾಮಾನ್ಯ ಜನರು, ವೈದ್ಯಾಧಿಕಾರಿಗಳು, ಜಾಗೃತಿ ಮೂಡಿಸುವವರು ಮತ್ತು ಅಂಗನವಾಡಿ ಕಾರ್ಯಕರ್ತರ ಮೂಲಕ ಪಡೆಯಲಾಗಿದೆ. ಸೇವಾಕಾರ್ಯದಲ್ಲಿ ಇರುವವರನ್ನು ಅವಲೋಕನಾ ಮಾದರಿಯಲ್ಲಿ ಅಧ್ಯಯನ ಮಾಡಲಾಗಿದೆ. ಹಾಗೂ ಒಟ್ಟು ಎರಡು ಪಿಎಚ್‌ಸಿಯಿಂದ ಕೇವಲ ಇಬ್ಬರು ಫಲಾನುಭವಿಗಳು ಭೇಟಿಯಾದರು. ಒಬ್ಬ ಫಲಾನುಭವಿ ಮಾತ್ರ ಸಂದರ್ಶನದಲ್ಲಿ ಭಾಗಿಯಾದರು ಮತ್ತೊಬ್ಬ ಫಲಾನುಭವಿ ಸಂದರ್ಶನವನ್ನು ನಿರಾಕರಿಸಿದರು.

೪.೪ ಕ್ಷೇತ್ರಕಾರ್ಯ ಸಮೀಕ್ಷಾ ವರದಿಯ ಮೌಲ್ಯಮಾಪನ

ಪ್ರಸ್ತುತ ಸಂಶೋಧನೆಯ ಆರಂಭದಲ್ಲಿ ಉಲ್ಲೇಖಗೊಂಡಂತೆ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳಲ್ಲಿ ಆರಂಭದಿಂದಲೂ ಲಿಂಗಸಂಬಂಧೀ ಮೌಲ್ಯಗಳು ಮಹಿಳೆಯರನ್ನು ಅಭಿವೃದ್ಧಿ ಯೋಜನೆಗಳಿಂದ ದೂರವಿರಿಸುತ್ತಿದೆ. ಸಮಸ್ಯೆಯು ಕೇವಲ ಯೋಜನೆಗಳಲ್ಲಿ ಮಾತ್ರವಲ್ಲ ಅಭಿವೃದ್ಧಿ ಸಿದ್ಧಾಂತಗಳಲ್ಲಿಯೂ ಇದೆ. ಈ ಸಂಗತಿಯನ್ನು ಪ್ರಮುಖವಾಗಿ ಗುರುತಿಸಿಕೊಂಡು ಸರ್ಕಾರಿ ಮಹಿಳಾ ಯೋಜನೆಗಳಲ್ಲಿನ ಸಮಸ್ಯೆಗಳನ್ನು ಸ್ತ್ರೀವಾದಿ ದೃಷ್ಟಿಕೋನ ದಿಂದ ವಿಶ್ಲೇಷಣೆ ಮಾಡುವುದರ ಜೊತೆಗೆ ಮೌಲ್ಯಮಾಪನವನ್ನೂ ಇಲ್ಲಿ ಮಾಡಲಾಗಿದೆ. ಈ ಅಧ್ಯಯನದ ಗುರಿ/ಉದ್ದೇಶಗಳನ್ನು ಮುಖ್ಯವಾಗಿ ಗುರ್ತಿಸಿ ಕ್ಷೇತ್ರಕಾರ್ಯದಲ್ಲಿ ಮೊದಲನೇ ಅಧ್ಯಯನಕ್ಕೆ ಸಂಬಂಧಿಸಿದಂತೆ ಸೈದ್ಧಾಂತಿಕ ಚೌಕಟ್ಟಿನ ಅಭಿವೃದ್ಧಿಯ ತಾತ್ವಿಕತೆಯಲ್ಲಿ ಲೈಂಗಿಕತಾವಾದದ ಸೈದ್ಧಾಂತಿಕ ಮೌಲ್ಯಗಳು ಇರುವುದರಿಂದ ಯೋಜನಾ, ಕಾರ್ಯ-ವಿಧಾನ, ಮೌಲ್ಯಮಾಪನದಲ್ಲಿ ತೊಂದರೆಯಾಗುತ್ತಿವೆ ಎನ್ನುವ ಸಂಗತಿಯನ್ನು ಗುರುತಿಸಿಕೊಂಡು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗುವ ಸಮೀಕ್ಷೆಯೊಂದನ್ನು ಮಾಡಲಾಯಿತು. ಈ ಸಮೀಕ್ಷೆಯಲ್ಲಿ ಬಂದಂತಹ ಮಾಹಿತಿಯನ್ನು ಇಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಕರ್ನಾಟಕ ರಾಜ್ಯ ಶಸ್ತ್ರಚಿಕಿತ್ಸೆಗೆ ಒಳಗಾದ ೨೦೦೯–೧೦ನೇ ಸಾಲಿನ

ಅಂಕಿ–ಅಂಶಗಳು(ಜಿಲ್ಲಾವಾರು)

ಕ್ರ.ಸಂ.	ಪ್ರದೇಶ	ಎನ್‌ಎಸ್‌ವಿ ಸಂತಾನಹರಣ ಚಿಕಿತ್ಸೆ	ಲೇಪ್ರೋಸ್ಕೋಪಿ ಸಂತಾನಹರಣ ಚಿಕಿತ್ಸೆ	ಟ್ಯೂಬಕ್ಟಮಿ	ಒಟ್ಟು	ವಾರ್ಷಿಕ ಫಲಿತಾಂಶ
೧	ಬೆಂಗಳೂರು(ನ)	೨೩	೧೦೮೭	೨೮೯	೧೩೯೯	೧೩೯೯
೨.	ಬೆಂಗಳೂರು(ಗ್ರಾ)	೦೧	೪೭೨	೯೯	೫೭೨	೫೭೨
೩.	ಚಿತ್ರದುರ್ಗ	೨೨	೭೨೩೮	೧೬೯	೯೧೯	೯೧೯
೪.	ದಾವಣಗೆರೆ	೨೭	೫೩	೨೮೯	೩೬೯	೩೬೯
೫.	ಕೋಲಾರ	೦೧	೪೬೩	೧೩೫	೫೯೯	೫೯೯
೬	ಶಿವಮೊಗ್ಗ	೦೪	೫೦೨	೧೦೨	೬೦೮	೬೦೮
೭	ತುಮಕೂರು	೨೨	೨೧೬	೨೫	೨೬೩	೨೬೩
೮.	ರಾಮನಗರ	೧೪	೧೯೧	೧೧	೨೧೬	೨೧೬
೯.	ಚಿಕ್ಕಬಳ್ಳಾಪುರ	೧೩	೭೩	೯೪	೧೮೦	೧೮೦
೧೦.	ಬೆಳಗಾವಿ	೨೩	೪೧೮	೧೧೩೯	೧೫೮೦	೧೫೮೦
೧೧.	ಬಿಜಾಪುರ	೨೮	೮೪೬	೧೫೩	೧೦೩೨	೧೦೩೨
೧೨.	ಬಾಗಲಕೋಟೆ	೧೧	೩೫೦	೩೩೮	೭೦೦	೭೦೦
೧೩.	ಗದಗ	೧೦	೨೮೧	೧೫೪	೪೪೫	೪೪೫
೧೪.	ಹಾವೇರಿ	೦೨	೧೩೩	೧೬೭	೩೦೨	೩೦೨
೧೫	ಉತ್ತರ ಕನ್ನಡ	೨೯	೩೦೬	೪೭	೩೮೨	೩೮೨
೧೬	ಬಳ್ಳಾರಿ	೩೧	೪೮೪	೧೩೨	೬೪೭	೬೪೭
೧೭	ಬೀದರ್	೧೨	೫೩	೭೧೨	೭೭೭	೭೭೭
೧೮	ಗುಲಬರ್ಗಾ	೦೦	೭೩೫	೭೭೨	೧೫೦೭	೧೫೦೭
೧೯.	ಕೊಪ್ಪಳ	೨೧	೬೩೮	೧೫೪	೮೧೩	೮೧೩
೨೦.	ರಾಯಚೂರು	೨೫	೮೮೭	೧೩೨	೧೦೪೪	೧೦೪೪
೨೧.	ಚಿಕ್ಕಮಗಳೂರು	೪೫	೮೩೩	೮೦	೪೦೬	೪೦೬

ಕ್ರಸಂ. ಪ್ರದೇಶ	ಎನ್‌ಎಸ್‌ವಿ ಸಂತಾನಹರಣ ಚಿಕಿತ್ಸೆ	ಲೇಪ್ರೋಸ್ಕೋಪಿ ಸಂತಾನಹರಣ ಚಿಕಿತ್ಸೆ	ಟ್ಯೂಬಕ್ಟಮಿ	ಒಟ್ಟು	ವಾರ್ಷಿಕ ಫಲಿತಾಂಶ
೨೨. ದಕ್ಷಿಣ ಕನ್ನಡ	೦೦	೩೧೪	೨೪೧	೫೫೫	೫೫೫
೨೩. ಉಡುಪಿ	೦೧	೮೫	೦೧	೮೭	೮೭
೨೪. ಹಾಸನ	೧೨	೪೭೯	೧೦೧	೫೯೨	೫೯೨
೨೫ ಕೊಡಗು	೦೫	೯೦	೪೬	೧೪೧	೧೪೧
೨೬ ಮಂಡ್ಯ	೦೦	೬೭೬	೨೨೧	೮೯೭	೮೯೭
೨೭ ಮೈಸೂರು	೦೨	೬೨೯	೪೫೦	೧೦೮೧	೧೦೮೧
೨೮ ಚಾಮರಾಜನಗರ	೦೩	೧೭೫	೧೮೯	೩೬೭	೩೬೭
೨೯ ಧಾರವಾಡ	೧೦	೧೦೩	೧೭೯	೨೯೨	೨೯೨

೨೦೦೯–೧೦ನೇ ಸಾಲಿನ ಶಾಶ್ವತ ಸಂತಾನಹರಣ ಚಿಕಿತ್ಸೆಗೆ ಒಳಗಾದ ಮಹಿಳೆಯರ ಅಂಕಿ–ಅಂಶಗಳು(ಜಿಲ್ಲಾವಾರು)

ಕ್ರಸಂ.	ಪ್ರದೇಶ	ಪ್ರೋಸ್ಕೋಪಿ ಸರ್ಕಾರಿ	ಲೇಪ್ರೋಸ್ಕೋಪಿ ಖಾಸಗಿ	ಒಟ್ಟು	ವರ್ಷ
೧	ಬೆಂಗಳೂರು(ನ)	೧೦೩೦	೫೭	೧೦೮೭	೧೦೮೭
೨.	ಬೆಂಗಳೂರು(ಗ್ರಾ)	೪೪೮	೨೪	೪೭೨	೪೭೨
೩.	ಚಿತ್ರದುರ್ಗ	೭೨೦	೦೮	೭೨೮	೭೨೮
೪.	ದಾವಣಗೆರೆ	೫೦	೦೩	೫೩	೫೩
೫.	ಕೋಲಾರ	೪೫೭	೦೬	೪೬೩	೪೬೩
೬	ಶಿವಮೊಗ್ಗ	೪೯೯	೦೮	೫೦೭	೫೦೭
೭	ತುಮಕೂರು	೨೦೪	೧೨	೨೧೬	೨೧೬
೮.	ರಾಮನಗರ	೧೮೯	೦೨	೧೯೧	೧೯೧
೯.	ಚಿಕ್ಕಬಳ್ಳಾಪುರ	೭೨	೦೧	೭೩	೭೩
೧೦.	ಬೆಳಗಾವಿ	೪೦೫	೧೩	೪೧೮	೪೧೮
೧೧.	ಬಿಜಾಪುರ	೮೩೫	೧೧	೮೪೬	೮೪೬

ಕ್ರಸಂ.	ಪ್ರದೇಶ	ಪ್ರೋಸ್ಕೋಪಿ ಸರ್ಕಾರಿ	ಲೇಪ್ರೋಸ್ಕೋಪಿ ಖಾಸಗಿ	ಒಟ್ಟು	ವರ್ಷ
೧೨.	ಬಾಗಲಕೋಟೆ	೩೧೯	೩೨	೩೫೧	೩೫೧
೧೩.	ಗದಗ	೯೦	೧೩	೧೦೩	೧೦೩
೧೪.	ಹಾವೇರಿ	೧೭೬	೧೦೫	೨೮೧	೨೮೧
೧೫	ಉತ್ತರ ಕನ್ನಡ	೧೩೩	೦೦	೧೩೩	೧೩೩
೧೬	ಬಳ್ಳಾರಿ	೨೯೫	೧೧	೩೦೬	೩೦೬
೭	ಬೀದರ್	೪೫೩	೩೧	೪೮೪	೪೮೪
೧೮	ಗುಲಬರ್ಗಾ	೫೩	೦೦	೫೩	೫೩
೧೯.	ಕೊಪ್ಪಳ	೬೯೩	೪೨	೭೩೫	೭೩೫
೨೦.	ರಾಯಚೂರು	೬೧೫	೨೩	೬೩೮	೬೩೮
೨೧.	ಚಿಕ್ಕಮಗಳೂರು	೮೬೮	೧೯	೮೮೭	೮೮೭
೨೨.	ದಕ್ಷಿಣ ಕನ್ನಡ	೩೩೩	೦೦	೩೩೩	೩೩೩
೨೩.	ಉಡುಪಿ	೩೧೩	೦೧	೩೧೪	೩೧೪
೨೪.	ಹಾಸನ	೬೯	೧೬	೮೫	೮೫
೨೫	ಕೊಡಗು	೪೭೫	೦೪	೪೭೯	೪೭೯
೨೬	ಮಂಡ್ಯ	೯೦	೦೦	೯೦	೯೦
೨೭	ಮೈಸೂರು	೬೭೬	೦೦	೬೭೬	೬೭೬
೨೮	ಚಾಮರಾಜನಗರ	೬೧೪	೧೫	೬೨೯	೬೨೯
೨೯	ಧಾರವಾಡ	೧೭೫	೦೦	೧೭೫	೧೭೫

೨೦೦೯–೧೦ನೇ ಸಾಲಿನ ಶಾಶ್ವತ ಸಂತಾನಹರಣ ಚಿಕಿತ್ಸೆಗೆ ಒಳಗಾದ ಪುರುಷರ ಅಂಕಿ–ಅಂಶಗಳು(ಜಿಲ್ಲಾವಾರು)

ಕ್ರ.ಸಂ.	ಪ್ರದೇಶ	ಪ್ರೋಸ್ಕೋಪಿ ಸರ್ಕಾರಿ	ಲೇಪ್ರೋಸ್ಕೋಪಿ ಖಾಸಗಿ	ಒಟ್ಟು	ವರ್ಷ
೧	ಬೆಂಗಳೂರು(ನ)	೨೩	೦೦	೨೩	೨೩
೨.	ಬೆಂಗಳೂರು(ಗ್ರಾ)	೦೧	೦೦	೦೧	೦೧
೩.	ಚಿತ್ರದುರ್ಗ	೧೬	೦೬	೨೨	೨೨
೪.	ದಾವಣಗೆರೆ	೨೫	೦೨	೨೭	೨೭
೫.	ಕೋಲಾರ	೦೧	೦೦	೦೧	೦೧
೬	ಶಿವಮೊಗ್ಗ	೦೪	೦೦	೦೪	೦೪
೭	ತುಮಕೂರು	೨೨	೦೦	೨೨	೨೨
೮.	ರಾಮನಗರ	೦೦	೧೪	೧೪	೧೪
೯.	ಚಿಕ್ಕಬಳ್ಳಾಪುರ	೧೨	೦೧	೧೩	೧೩
೧೦.	ಬೆಳಗಾವಿ	೨೩	೦೦	೨೩	೨೩
೧೧.	ಬಿಜಾಪುರ	೨೮	೦೦	೨೮	೨೮
೧೨.	ಬಾಗಲಕೋಟೆ	೦೦	೧೧	೧೧	೧೧
೧೩.	ಗದಗ	೧೦	೦೦	೧೦	೦೧
೧೪.	ಹಾವೇರಿ	೦೨	೦೦	೦೨	೦೨
೧೫	ಉತ್ತರ ಕನ್ನಡ	೨೭	೦೨	೨೯	೨೯
೧೬	ಬಳ್ಳಾರಿ	೩೦	೦೧	೩೧	೩೧
೭	ಬೀದರ್	೧೨	೦೦	೧೨	೧೨
೧೮	ಗುಲಬರ್ಗಾ	೦೦	೦೦	೦೦	೦೦
೧೯.	ಕೊಪ್ಪಳ	೨೧	೦೦	೨೧	೨೧
೨೦.	ರಾಯಚೂರು	೨೫	೦೦	೨೫	೨೫
೨೧.	ಚಿಕ್ಕಮಗಳೂರು	೪೨	೦೧	೪೩	೪೩
೨೨.	ದಕ್ಷಿಣ ಕನ್ನಡ	೦೦	೦೦	೦೦	೦೦
೨೩.	ಉಡುಪಿ	೦೧	೦೦	೦೧	೦೧

ಕ್ರಸಂ.	ಪ್ರದೇಶ	ಪ್ರೋಸ್ಕೋಪಿ ಸರ್ಕಾರಿ	ಲೇಪ್ರೋಸ್ಕೋಪಿ ಖಾಸಗಿ	ಒಟ್ಟು	ವರ್ಷ
೨೪.	ಹಾಸನ	೦೬	೦೬	೧೨	೧೨
೨೫	ಕೊಡಗು	೦೫	೦೦	೦೫	೦೫
೨೬	ಮಂಡ್ಯ	೦೦	೦೦	೦೦	೦೦
೨೭	ಮೈಸೂರು	೦೨	೦೦	೦೨	೦೨
೨೮	ಚಾಮರಾಜನಗರ	೦೩	೦೦	೦೩	೦೩
೨೯	ಧಾರವಾಡ	೦೨	೦೮	೧೦	೧೦

ಈ ಸಮೀಕ್ಷಾ ಅಧ್ಯಯನವನ್ನು ಬೆಂಗಳೂರು ನಗರ ಗ್ರಾಮೀಣ ಪ್ರದೇಶ, ಕೊಪ್ಪಳ, ಆನೆಗೊಂದಿ, ಯಾದಗಿರಿಯಲ್ಲಿ ನಡೆಸಲಾಯಿತು. ಈ ಅಧ್ಯಯನದಲಲಿ ಮಹಿಳಾ ಅಭಿವೃದ್ದಿ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ಕೊಟ್ಟಿರುವುದರಿಂದ ಹೆಚ್ಚಾಗಿ ಮಹಿಳೆಯರನ್ನು ಇಲ್ಲಿ ಗುರ್ತಿಸಿಕೊಳ್ಳಲಾಗಿದೆ. ಈ ಮೂಲಕ ಅವರಲ್ಲಿ ಈ ಕೆಳಕಂಡ ಅಂಶಗಳನ್ನು ಗುರುತಿಸುವುದು/ ಅವರಿಂದ ಮಾಹಿತಿ ಪಡೆಯುವುದು.

* ಅಭಿವೃದ್ಧಿ ಪರಿಕಲ್ಪನೆಯ ಬಗೆಗೆ ಮಹಿಳೆಯರು ಏನನ್ನು ಅರಿತಿದ್ದಾರೆ.
* ಸರ್ಕಾರಿ ಮಹಿಳಾ ಯೋಜನೆಗಳ ಬಗ್ಗೆ ಎಷ್ಟರ ಮಟ್ಟಿಗೆ ಮಹಿಳೆಯರಿಗೆ ಮಾಹಿತಿ ಇದೆ.
* ಸರ್ಕಾರಿ ಮಹಿಳಾ ಅಭಿವೃದ್ದಿ ಯೋಜನೆಗಳಲ್ಲಿ ಮಹಿಳೆಯರು ಭಾಗವಹಿಸುವಿಕೆಯ ಬಗೆಗೆ.
* ಮಹಿಳೆಯರ ಅನುಭವದಲ್ಲಿ ಎಲ್ಲಾದರೂ ಸರ್ಕಾರಿ ಮಹಿಳಾ ಯೋಜನೆಗಳಲ್ಲಿ ಲಿಂಗ ಅಸಮಾನತೆಯನ್ನು ಅನುಭವಿಸಿದ್ದಾರೆಯೇ ಎಂಬುದನ್ನು ತಿಳಿಯುವುದು.
* ಮಹಿಳಾ ಸರ್ಕಾರಿ ಅಭಿವೃದ್ದಿ ಯೋಜನೆಗಳಲ್ಲಿ ಸರ್ಕಾರದ ಜವಾಬ್ದಾರಿ ಹೆಚ್ಚಾಗಬೇಕು ಎನ್ನುವ ಸೂಕ್ಷ್ಮ ಗ್ರಹಿಕೆ ಮಹಿಳೆಯರಲ್ಲಿ ಇದೆಯೇ ಎಂದು ತಿಳಿಯುವುದು.
* ಲಿಂಗ ಸಂಬಂಧಿ ತೊಂದರೆಗಳನ್ನು ಅಳಿಸಿ ಹಾಕುವಲ್ಲಿ ಸರ್ಕಾರದ ಪಾತ್ರವನ್ನು ತಿಳಿದು ಅದರಲ್ಲೂ ಸರ್ಕಾರಿ ಯೋಜನೆಗಳು/ಕಾರ್ಯತಂತ್ರಗಳು/ರಾಚನಿಕ ವ್ಯವಸ್ಥೆಯು ಸಮರ್ಥವಾಗಿ ರೂಪಿತವಾಗಿದೆಯೇ ಎಂದು ತಿಳಿಯಲು.
* ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳ ಮೌಲ್ಯಮಾಪನದ ಸಂದರ್ಭದಲ್ಲಿ ಮಹಿಳೆಯರ ಅನುಭವಗಳಿಗೆ ಸಿಗುವ ಪ್ರಾಮುಖ್ಯತೆಯ ಬಗ್ಗೆ ತಿಳಿಯುವುದು.

ಈ ಎಲ್ಲಾ ಸಂಗತಿಗಳನ್ನು ಪ್ರಮುಖವಾಗಿ ಗುರುತಿಸಿಕೊಂಡು ಕ್ಷೇತ್ರಕಾರ್ಯವನ್ನು ಮಾಡಲಾಯಿತು. ಕೆಲ ಸಂದರ್ಭದಲ್ಲಿ ಮಿಶ್ರ ಪ್ರತಿಕ್ರಿಯೆ ಬಂದರೂ ಕೆಲ ಸಂದರ್ಭದಲ್ಲಿ ಮುಕ್ತವಾದ ಮಾಹಿತಿಯನ್ನು ಜನರು ನೀಡಿದ್ದಾರೆ. ಅಧ್ಯಯನದಲ್ಲಿನ ಮಾಹಿತಿದಾರರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಾನಮಾನವನ್ನು ಇಲ್ಲಿ ನೀಡಲಾಗಿದೆ. ಈ ಮೂಲಕ ಒಟ್ಟು ೧೦ ರಿಂದ ೧೧ ಪ್ರಶ್ನೆಗಳ ಮೂಲಕ ಮಾಹಿತಿಯನ್ನು ಪಡೆದಿದ್ದು ಕೆಲವು ಸಂದರ್ಭದಲ್ಲಿ ಅವಲೋಕನ ಮತ್ತು ಸಂದರ್ಶನ ಮಾಡುವ ಮೂಲಕ ಮಾಹಿತಿಯನ್ನು ಪಡೆಯಲಾಗಿದೆ.

ಪ್ರಸ್ತುತ ಈ ಅಧ್ಯಯನದಲ್ಲಿ ಸರ್ಕಾರಿ ಮಹಿಳಾ ಅಭಿವೃರ್ದಧಿ ಯೋಜನೆಗಳಲ್ಲಿರುವ ಸೈದ್ಧಾಂತಿಕ, ಕಾರ್ಯವಿಧಾನ, ಮೌಲ್ಯಮಾಪನದ ನೆಲೆಗಟ್ಟಿನಲ್ಲಿ ಇಂದಿಗೂ ಸಮಸ್ಯೆಗಳಿವೆ ಎಂಬುದನ್ನು ಅಧ್ಯಯನ ಮಾಡಲಾಗುತ್ತದೆ. ಮುಖ್ಯವಾಗಿ ಸರ್ಕಾರಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಮುಖ್ಯವಾಗಿ ಸ್ಟಾಕ್ ಹೋಲ್ಡರ್ಸ್‌ಗಳಾಗಿ ಅಂಗನವಾಡಿ ಕಾರ್ಯಕರ್ತರನ್ನು ಆಯ್ಕೆ ಮಾಡಲಾಗುತ್ತಿದೆ. ಈ ಮೂಲಕ ಅವರ ಅನುಭವದ ಆಧಾರದ ಮೇಲೆ ಅಭಿವೃದ್ಧಿ ಯೋಜನೆಗಳ ಬಗೆಗೆ ಮಾಹಿತಿಯನ್ನು ಪಡೆಯುವುದಾಗಿದೆ ಈ ಅಧ್ಯಯನದ ಉದ್ದೇಶಗಳನ್ನು ಪ್ರೋತ್ಸಾಹಿಸುವ ನೆಲೆಯಲ್ಲಿ ಸಮೀಕಷಾ ಅಧ್ಯಯನ ಇಲ್ಲಿದೆ.

ಮಹಿಳಾ ಅಂಗನವಡಿ ಕಾರ್ಯಕರ್ತೆಯರು ಹೆಚ್ಚಾಗಿ ಮಹಿಳಾ ಸಂಬಂಧಿತ ಸರ್ಕಾರಿ ಯೋಜನೆಗಳನ್ನು ಸಮುದಾಯಕ್ಕೆ ತಲುಪಿಸುವಲ್ಲಿ ಹಾಗೂ ಸರ್ಕಾರಕ್ಕೂ ಮತ್ತು ಸಮಾಜಕ್ಕೂ ನಡುವಿನ ಕೊಂಡಿಯಾಗಿ ಇವರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಅಂಶವನ್ನು ಗುರುತಿಸಿ ಮಹಿಳಾ ಸರ್ಕಾರಿ ಯೋಜನೆಗಳ ಬಗೆಗೆ ಅವರ ಅಭಿಪ್ರಾಯವನ್ನು ಇಲ್ಲಿ ಸಂಗ್ರಹಿಸಲಾಗಿದೆ. ಈ ಮೂಲಕ ಪ್ರಸ್ತುತ ಅಧ್ಯಯನದಲ್ಲಿ ಅವರ ಮಾಹಿತಿಗನುಗುಣವಾಗಿ ಸರ್ಕಾರಿ ಯೋಜನೆಗಳ ಬಗ್ಗೆಇರುವ ಅನುಭವಗಳನ್ನು ಪೂರಕವಾಗಿ ಬಳಸಲಾಗುತ್ತಿದೆ.

ಪ್ರಸ್ತುತ ಕ್ಷೇತ್ರಕಾರ್ಯದ ಪ್ರದೇಶಗಳಾದ ಬೆಂಗಳೂರುನಗರ ಮತ್ತು ಗ್ರಾಮೀಣ, ಕೊಪ್ಪಳ, ಯಾದಗಿರಿ, ಗಂಗಾವತಿಗಳಲ್ಲಿ ತಲಾ ೨೫ರಂತೆ ಅಂಗನವಾಡಿ ಕಾರ್ಯಕರ್ತೆಯರನ್ನು ಗುರುತಿಸಿ ರ್‍ಯಾಂಡಮ್ ಆಗಿ ವಿಶ್ಲೇಷಣೆ ಮಾಡಲಾಗಿದೆ. ಪ್ರಶ್ನಾವಳಿಗಳ ಮೂಲಕ, ಅವಲೋಕನಾ ಮತ್ತು ಸಂದರ್ಶನ ವಿಧಾನದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ. ಟ್ಯೂಬೆಕ್ಟಮಿಗಿಂತ ವ್ಯಾಸೆಕ್ಟಮಿ ಸರಳ, ಸುರಕ್ಷಿತ ಮತ್ತು ಕಡಿಮೆ ವೆಚ್ಚದ್ದು ಹಾಗೂ ಯಾವುದೇ ಅಡ್ಡ ಪರಿಣಾಮಗಳಿರುವುದಿಲ್ಲ. ಆದರೂ ಕೂಡ NSVಯನ್ನು ಒಪ್ಪಿ ಅಳವಡಿಸಿಕೊಳ್ಳಲು ಪುರುಷರು ತಯಾರಿಲ್ಲ ಹಾಗೂ ಮಹಿಳೆಯರಿಗೂ ಕೂಡ ಈ ಬಗ್ಗೆ ಆಸತಿ ಇಲ್ಲ. ಇಲ್ಲಿ ಪುನಃ ಪುರುಷತ್ವದ–ಸ್ತ್ರೀತ್ವದ ಸಂಗತಿಗಳು

ಎದ್ದು ಕಾಣುತ್ತದೆ. ಇಂತಹ ಹಲವಾರು ಸಮಸ್ಯೆಗಳಿದ್ದರೂ ಸಹ ಸರ್ಕಾರವು ಅಭಿವೃದ್ಧಿ ಯೋಜನೆಗಳು ವಿಫಲವಾಗುವ ಈ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತಿದೆ. ಆದ್ದರಿಂದಾಗಿಯೇ ಸರ್ಕಾರಿ ಮಹಿಳಾ ಯೋಜನೆಗಳು ವಿಫಲವಾಗುತ್ತಿದೆ.

NSV ಕಾರ್ಯಕ್ರಮವು ಕರ್ನಾಟಕದ ಪ್ರತಿ ಜಿಲ್ಲೆಯಲ್ಲಿ ಕಾರ್ಯಗತಗೊಳ್ಳುತ್ತಿದ್ದ ಈ ಅಧ್ಯಯನಕ್ಕಾಗಿ ಕೊಪ್ಪಳ ಜಿಲ್ಲೆ ಮತ್ತು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಪಿಎಚ್‌ಸಿಗಳ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಪ್ರದೇಶಗಳಲ್ಲಿ ೨೦೦೯-೧೦ರಲ್ಲಿ NSV ಚಿಕಿತ್ಸೆಯನ್ನು ಶೇ.೩ರಷ್ಟು ಮಂಡಿ ಪಡೆದಿದ್ದಾರೆ. ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಆಯಾ ಪ್ರದೇಶಗಳಲ್ಲಿ/ ಜಿಲ್ಲೆಗಳಲ್ಲಿ ೫೦ ಜನ ವೈದ್ಯರನ್ನು(೨೫-೨೫) ಹಾಗೂ ೫೦ ಜನ ಅಂಗನವಾಡಿ ಕಾರ್ಯಕರ್ತೆಯರನ್ನು(೨೫-೨೫) ಮತ್ತು ೨೦೦ಮಂದಿ ಸಾಮಾನ್ಯ ಜನರನ್ನು(೩ ಜನ ಫಲಾನುಭವಿಗಳನ್ನು ಸೇರಿಸಿ(೧೦೦-೧೦೦) ಪ್ರಶ್ನಾವಳಿಗಳ ಮೂಲಕ ಸಂದರ್ಶನ, ಅವಲೋಕನ ವಿಧಾನಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಯಿತು. ೨೦೦೫ರಿಂದ ಇಲ್ಲಿಯವರೆಗೆ NSVಯಲ್ಲಿ ಯಾವುದೇ ರೀತಿಯ ಹೆಚ್ಚಳವಾಗಲಿಲ್ಲ. ಮಹಿಳೆ ಮತ್ತು ಪುರುಷರಿಗೆ ಹೋಲಿಸಿ ನೋಡಿದಾಗ NSV ಬಗೆಗೆ ಇಬ್ಬರಲ್ಲೂ ಒಂದೇ ತೆರನಾದ ಋಣಾತ್ಮಕ ಮೂಢನಂಬಿಕೆಗಳು ಕಂಡುಬಂದಿದೆ. ಮತ್ತೊಂದು ವಿಷಯವೆಂದರೆ ಒಟ್ಟು ೭ ಜನರಲ್ಲಿ ಮೂವರು NSV ನಂತರ Swmen test ಮಾಡಿಸಿಕೊಂಡಿದ್ದಾರೆ. ಹಾಗೆಯೇ ನಿರೋಧ್ ಬಳಸಿದ್ದಾರೆ. ಇದರಿಂದ ನಮಗೆ NSV ಚಿಕಿತ್ಸೆಯ ಬಗ್ಗೆ ನಂಬಿಕೆ ಇಲ್ಲವೆಂದು ತಿಳಿದುಬರುತ್ತದೆ. ಸಂದರ್ಶನದ ಸಂದರ್ಭದಲ್ಲಿ ನಿರೋಧ್ ಬಳಕೆಯ ಬಗೆಗೆ ಕೇಳಿದರೆ ಹೆಚ್ಚು ಪುರುಷರು ನಿರೋಧ್‌ನ್ನು ಬಳಸಲು ನಿರಾಕರಿಸುತ್ತಾರೆ ಎನ್ನುವ ಉತ್ತರ ಬಂದಿದೆ. ಇದರಿಂದ ಕುಟುಂಬ ಯೋಜನಾ ಕಾರ್ಯಕ್ರಮಗಳಲ್ಲಿ ತಾತ್ಕಾಲಿಕ ಗರ್ಭನಿರೋಧಕವಾಗಿರಲಿ ಅಥವಾ ಶಾಶ್ವತ ಸಂತಾನ ನಿಯಂತ್ರಣವೇ ಇರಲಿ ಮಹಿಳೆಯರೇ ಹೆಚ್ಚು ಈ ಯೋಜನೆಗಳನ್ನು ಪಾಲಿಸುತ್ತಿದ್ದಾರೆ. ಜೊತೆಗೆ ಅವರಲ್ಲಿನ ಪೂರ್ವಸಿದ್ಧತೆಗಳು ಸಾಂಪ್ರದಾಯಿಕ ಚೌಕಟ್ಟುಗಳು, ಸಾಮಾಜಿಕ ಕೌಟುಂಬಿಕ ಅಭದ್ರತೆ, ಆರ್ಥಿಕ ಅಭದ್ರತೆ ಅವರನ್ನು ಹೆಚ್ಚು ಮೂಢನಂಬಿಕೆಗಳತ್ತ ಕೊಂಡೊಯ್ಯುತ್ತಿವೆ ಎಂಬ ಅಂಶ ಸ್ಪಷ್ಟವಾಗಿ ಕಾಣುತ್ತಿವೆ. ಹಾಗಾಗಿ ಪ್ರತಿ ಫಲಾನುಭವಿಗಳಿಗೆ ಯೋಜನೆಗಳ ಬಗೆಗೆ ಮಾಹಿತಿ ನೀಡುವಾಗ ಅವರಲ್ಲಿರುವ ಆಂತರಿಕ ತೊಂದರೆಗಳೇನು? ಅಲ್ಲಿ ಅವರ ಮನೋಭಾವ ವೈಚಾರಿಕ ಮೌಲ್ಯಗಳು ಯಾವುವು? ಎಂಬುದನ್ನು ತಿಳಿಯಬೇಕು. ಈ ನಿಟ್ಟಿನಲ್ಲಿ ಯೋಜನೆಯ ಕಾರ್ಯತಂತ್ರಗಳನ್ನು ರೂಪಿಸಬೇಕು. ಆದರೆ ಈ ಕೊರತೆಯು ಇಲ್ಲಿ ಎದ್ದು ಕಾಣುತ್ತಿವೆ. ಆದರೆ ಇವುಗಳನ್ನು ಸಾಂಪ್ರದಾಯಿಕ ಮೌಲ್ಯಗಳು ತಡೆಹಿಡಿಯುತ್ತವೆ.

ಮಹಿಳೆಯರ ಬಡತನ, ಲಿಂಗ ಅಸಮಾನತೆ ಎನ್ನುವಂತದ್ದು ಸಮಾಜದ ಪ್ರತಿ ಹಂತದಲ್ಲಿಯೂ ಇದೆ ಎಂಬುದನ್ನು ತಿಳಿದಿದ್ದೇವೆ. ಆದರೆ ಅದೊಂದು ಸಮಸ್ಯೆ ಎಂದು ತಿಳಿದಿದ್ದರೂ ಕೂಡ ಅದನ್ನು ತಂಭೀರವಾಗಿ ಗುರುತಿಸುವುದಿಲ್ಲ. ಹಾಗೆಯೇ ಮಹಿಳೆಯರು ಇಲ್ಲಿ ದಮನಿತರಾಗಿದ್ದಾರೆ. ಅವರನ್ನು ಪ್ರತಿ ಹಂತದಲ್ಲೂ ತಮ್ಮ ಮುಷ್ಠಿಯಲ್ಲಿ ಪಿತೃಪ್ರಧಾನತೆಯು ಬಂಧಿಸುತ್ತಿದ್ದರೂ ಕೂಡ ಮಹಿಳೆಯರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರಲು ಪ್ರಯತ್ನಿಸುವ ನಾಟಕವಾಡುತ್ತಿದ್ದಾರೆ. ಪುರುಷ ಸಾಂಪ್ರದಾಯಿಕ ಸಮಾಜವು ಶತಮಾನಗಳಿಂದಲೂ ಕಟ್ಟು ನಿಟ್ಟಿನ ಸಂಪ್ರದಾಯವನ್ನು ಮುಖ್ಯ ವಾಹಕವಾಗಿ ಗುರುತಿಸಿ ಬೆಳೆಸಿಕೊಂಡು ಬರುತ್ತಿವೆ. ಇಲ್ಲಿ ಹೆಣ್ಣು-ಗಂಡಿಗೆ ಅವರ ಪಾತ್ರಗಳಿಗೆ ತಕ್ಕಂತೆ ಜವಾಬ್ದಾರಿಗಳನ್ನ ಹಂಚಲಾಗಿದೆ. ಸ್ತ್ರೀಯರಿಗೆ ಕೌಟುಂಬಿಕ ಮತ್ತು ಗೃಹಿಣಿಯ ಜವಾಬ್ದಾರಿಗಳಿದ್ದರೆ, ಪುರುಷರಿಗೆ ಮನೆಯ ಒಡೆತನದ ಜವಾಬ್ದಾರಿಗಳಿವೆ. ಇದರಿಂದಾಗಿ ಸ್ತ್ರೀಯರು ಕೇವಲ ಗೃಹಿಣಿಯರಿಗೆ ಮಾತ್ರ ಗೋಚರಿಸುತ್ತಿದ್ದಾರೆಯೇ ಹೊರತು ಅಭಿವೃದ್ಧಿಯ ವಾಹಕರಾಗಲ್ಲ. ಈ ಸಂಗತಿಗಳನ್ನು ಗುರುತಿಸಿದ ಸರ್ಕಾರಿ ಯೋಜನಾಗಾರರು ಹಲವಾರು ಸಂದರ್ಭದಲ್ಲಿ ಇದನ್ನು ಸರಿಪಡಿಸಿ ಮಹಿಳೆಯರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರಲು ಪ್ರಯತ್ನಿಸುತ್ತಿದ್ದರೂ ಅದು ಸಾಧ್ಯವಾಗುತ್ತಿಲ್ಲ. ಲಿಂಗಸಂಬಂಧಿ ಸೂಕ್ಷ್ಮತೆಗಳನ್ನು ಲಿಂಗ ಅಸಮಾನತೆಯ ಎಳೆಗಳನ್ನು ಗ್ರಹಿಸಲು ಸಾಧ್ಯವಾಗದೇ ಇರುವಂತಹ ಸ್ಥಿತಿಗೆ ಸಮಾಜ ಹಾಗೂ ಅಲ್ಲಿನ ಸಂಪ್ರದಾಯಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳು ಮುಖ್ಯ ಕಾರಣವಾಗಿದೆ ಏಕೆಂದರೆ ಇವು ಸಂಪೂರ್ಣವಾಗಿ ಪುರುಷಶಾಹಿಯ ಹಿಡಿತದಲ್ಲಿವೆ. ಹೀಗಾಗಿ ಸಮಾಜದಲ್ಲಿ ಎಷ್ಟೇ ವಿದ್ಯಾವಂತರಿದ್ದರೂ ಸೂಕ್ಷ್ಮ ಚಿಂತಕರಿದ್ದರೂ ಲಿಂಗತಾರತಮ್ಯದ ಸಂಗತಿಗಳನ್ನು ಗುರುತಿಸುವಲ್ಲಿ ವಿಫಲರಾಗುತ್ತಿದ್ದಾರೆ. ಈ ಅಂಶಗಳು ಅಭಿವೃದ್ಧಿಯ ತಾತ್ವಿಕೆಯಲ್ಲಿ ಕಂಡುಬರುತ್ತಿರುವುದರಿಂದ ಅಭಿವೃದ್ಧಿ ಪರಿಕಲ್ಪನೆಯಿಂದ ಅಭಿವೃದ್ಧಿ ಯೋಜನೆ ಕಾರ್ಯವಿಧಾನ, ಮೌಲ್ಯಮಾಪನದಲ್ಲಿಯೂ ಕೊರತೆಗಳನ್ನು, ನ್ಯೂನತೆಗಳನ್ನು ಕಾಣಬಹುದು. ಈ ಅಂಶಗಳು ಪ್ರಸ್ತುತ ಅಧ್ಯಯನದಲ್ಲಿ ಸ್ಪಷ್ಟವಾಗಿ ಗೋಚರಿಸಿದೆ.

ಅಭಿವೃದ್ಧಿ ಪ್ರಕ್ರಿಯೆಲ್ಲಿ ತಾತ್ವಿಕ ಚಿಂತನೆ ಚೌಕಟ್ಟುಗಳು ಬಹುಮುಖ್ಯವಾಗಿವೆ. ಈ ನಿಟ್ಟಿನಲ್ಲಿಯೇ ಯೋಜನಾ ವಿಧಾನವು ರೂಪುಗೊಂಡಿರುತ್ತದೆ ಹಾಗೂ ಆ ನೆಲೆಗಟ್ಟಿನಲ್ಲಿ ಕಾರ್ಯಗತಗೊಳ್ಳುತ್ತದೆ. ಆದರೂ ಕೂಡ ಅಭಿವೃದ್ಧಿ ಯೋಜನೆಗಳಲ್ಲಿ ಅದರಲ್ಲೂ ಮುಖ್ಯವಾಗಿ ಸರ್ಕಾರಿ ಅಭಿವೃದ್ಧಿ ಯೋಜನೆಗಳಲ್ಲಿ ಪಿತೃಪ್ರಧಾನ ಮೌಲ್ಯಗಳು ವ್ಯವಸ್ಥಿತವಾಗಿ ಸಮಾಜದಲ್ಲಿ ರಾಚನಿಕ ಚೌಕಟ್ಟಿನಲ್ಲಿ ಸಾಮಾಜಿಕ ಸಂಸ್ಥೆಗಳ ಮೂಲಕ ಸಾರ್ವತ್ರಿಕವಾಗಿ ಬೆಳೆದು ಬರುತ್ತಿವೆ. ಹೀಗಾಗಿ ದೈಹಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ನೈತಿಕವಾಗಿ ಮಹಿಳೆಯರು ಪಿತೃ ಪ್ರಧಾನತೆಯ ಹತೋಟಿಯಲ್ಲಿದ್ದು ಎಷ್ಟೇ ಬದಲಾದ ವಾತಾವರಣ ಬಂದರೂ ಅವರಿಗೆ ಬೇಕಾದಂತಹ ಪೂರಕವಾತವರಣ ನಿರ್ಮಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಸಮಾಜದಲ್ಲಿ ಇಂದಿಗೂ ಲಿಂಗ ಮತ್ತು ಲಿಂಗತ್ವದ ಸಾಮಾಜಿಕ

ಭಿನ್ನತೆಯಿಂದ ಸ್ತ್ರೀತ್ವ ಮತ್ತು ಪುರುಷತ್ವದ ಮೌಲ್ಯಗಳು ಅವರನ್ನು ಪ್ರತಿಹಂತದಲ್ಲಿಯೂ ತಡೆಹಿಡಿಯುತ್ತಿವೆ. ಜೊತೆಗೆ ಎಷ್ಟೇ ಪುರುಷತ್ವದ ಮೌಲ್ಯಗಳು ಅವರನ್ನು ಪ್ರತಿಹಂತದಲ್ಲಿಯೂ ತಡೆಹಿಡಿಯುತ್ತಿದೆ ಜೊತೆ ಎಷ್ಟೇ ಮಹಿಳಾ ಪರ ಯೋಜನೆಗಳು ಬಂದರೂ ಸಹ ಅವುಗಳ ಬಗೆಗೆ ಕನಿಷ್ಠ ಮಾಹಿತಿಯು ಕೂಡ ಮಹಿಳೆಯರಿಗೆ ಸಿಗುತ್ತಿಲ್ಲ. ಇನ್ನು ಯೋಜನೆಗಳ ಲಾಭವನ್ನು ಪಡೆದು ಅಭಿವೃದ್ಧಿ ಹೊಂದುವುದು ದೂರದ ಮಾತು.

ಅಭಿವೃದ್ಧಿ ಯೋಜನೆಗಳಬಗ್ಗೆ ಮಹಿಳೆಯರಿಗೆ ಮುಕ್ತವಾದ ಮಾಹಿತಿ ದೊರೆಯಗಬೇಕಿದೆ. ೧೯೮೦ರ ನಂತರವೇ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಗುರುತಿಸಿದರೂ ಕೂಡ ಮಹಿಳೆಯರಿಗೆ 'ಅಭಿವೃದ್ಧಿ'ಎಂದರೆ ಆರ್ಥಿಕ ಬೆಳವಣಿಗೆಯೇ ಆಗಿವೆ. ಅಭಿವೃದ್ಧಿಯಲ್ಲಿ ಕೇವಲ ಮಹಿಳೆಯರನ್ನು ಭಾಗಿಯಾಗಿಸಲು ಪ್ರಯತ್ನ ನಡೆಯುತ್ತಿವೆ ಇಲ್ಲಿ ಮಹಿಳೆಯರ ಮನೋಭಾವ, ದೃಷ್ಟಿಕೋನ, ಅವಶ್ಯಕತೆಗಳು ಪುರುಷ ಪ್ರಧಾನ ಮೌಲ್ಯಗಳಿಗೆ ಹೊಂದಿಕೊಂಡಿವೆ ಅವುಗಳನ್ನು ಬದಲಾಯಿಸಬೇಕಾದ ಅತ್ಯವಶ್ಯಕತೆಇದೆ. ಅಭಿವೃದ್ಧಿ ಯೋಜನೆಗಳ ಲಾಭಗಳನ್ನು ಪಡೆಯುವುದು ನನ್ನ ಹಕ್ಕು ಮತ್ತು ಜವಾಬ್ದಾರಿ ಎಂಬ ಮನೋಭಾವ ಸ್ತ್ರೀಯರಲ್ಲಿ ಬರಬೇಕು. ಆಗ ಮಾತ್ರ ಅವರು ಯೋಜನೆಗಳ ಲಾಭಗಳನ್ನು ಪಡೆದು ಅಭಿವೃದ್ಧಿ ಹೊಂದಲು ಶಕ್ತರಾಗುತ್ತಾರೆ. ಮಹಿಳೆಯರ ಮನೋಭಾದಲ್ಲಿ ಬದಲಾವಣೆಯಾಗಬೇಕು ಮತ್ತು ಅಭಿವೃದ್ಧಿ ಸಿದ್ಧಾಂತಗಳು ಹಾಗೂ ಯೋಜನೆಗಳಲ್ಲಿ ಬದಲಾವಣೆಗಳಾಗಬೇಕು.ಆಗ ಮಾತ್ರ ಮಹಿಳೆಯರನ್ನು ಅಭಿವೃದ್ಧಿಗೊಳಿಸಲು ಸಾಧ್ಯವಾಗುತ್ತದೆಂದು ಕ್ಷೇತ್ರಕಾರ್ಯ ವರದಿಗಳ ಮೂಲಕ ತಿಳಿಯಲಾಗಿದೆ.

೪.೫ ಉಪಸಂಹಾರ

ಪ್ರತಿಯೊಬ್ಬ ನಾಗರಿಕರಿಗೂ ಎಟುಕುವಂತೆ ಸರ್ಕಾರವು ಯೋಜನೆಗಳನ್ನು ರೂಪಿಸುತ್ತದೆ. ವಿಶೇಷವಾಗಿ ಮಹಿಳೆಯರ ಅಭಿವೃದ್ಧಿಗಾಗಿ ಹಲವಾರು ಮಹಿಳಾ ಅಭಿವೃದ್ಧಿ ಯೋಜನೆಗಳನ್ನೂ ಸಹ ಸರ್ಕಾರ ಜಾರಿಗೆ ತಂದಿದೆ. ಈ ಮೂಲಕ ಮಹಿಳೆಯರನ್ನು ಅಭಿವೃದ್ಧಿಗೊಳಿಸಿ ದೇಶದ ಅಭಿವೃದ್ಧಿಯನ್ನು ಸಾಧಿಸಿ ಸ್ತ್ರೀ-ಪುರುಷರಿಬ್ಬರೂ ಸಮಾನರೆಂಬ ಭಾವನೆಯನ್ನು ಸಮಾಜದಲ್ಲಿ ತರುವುದಾಗಿದೆ.

ಸರ್ಕಾರದ, ಸಮುದಾಯದ ಮತ್ತು ಸ್ತ್ರೀಪುರುಷರ ಸಂಘಟಿತ ಪ್ರಯತ್ನದಿಂದ ಮಾತ್ರ ಸಮಾಜದಲ್ಲಿ ಸ್ತ್ರೀ-ಪುರುಷರಿಬ್ಬರೂ ಸಮಾನರಾಗಲು ಸಾಧ್ಯ. ವೀಕ್ಷಿಸಿದ ಮಾಹಿತಿಯ ಅನ್ವಯ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ನೆಪಮಾತ್ರಕ್ಕೆ ಜಾರಿಗೆ ತಂದಿದ್ದು ಪಿತೃ ಪ್ರಧಾನ ಮೌಲ್ಯಗಳೇ ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ನಿರ್ವಹಿಸುತ್ತಿವೆ. ಪಿತೃ ಪ್ರಧಾನ ಮೌಲ್ಯಗಳ ಅಡಿಯಲ್ಲಿ ರೂಪಿಸಲಾದ ಮಹಿಳಾ ಯೋಜನೆಗಳು ಮಹಿಳೆಯರಿಗೆ ಯಾವ ರೀತಿಯಿಂದಲೂ ಉಪಯೋಗ ಮಾಡುತ್ತಿಲ್ಲ. ಬದಲಾಗಿ ಸಮಸ್ಯೆಗಳನ್ನು ಮತ್ತಷ್ಟು ಜಟಿಲಗೊಳಿಸುತ್ತಿದೆ. ಮಹಿಳಾ

ಅಭಿವೃದ್ಧಿ ಯೋಜನೆಗಳು ನೆಪಮಾತ್ರಕ್ಕಿದ್ದು ಇದರಿಂದ ಮಹಿಳೆಯರು ಅಭಿವೃದ್ಧಿಗೊಂಡಿಲ್ಲ ಏಕೆಂದರೆ ಸಮಾಜದ ಮುಖ್ಯವಾಹಿನಿಯ ಪುರುಷ ಪ್ರಧಾನ ಮೌಲ್ಯಗಳು ಇದಕ್ಕೆ ತಡೆ ಒಡುತ್ತಿವೆ.

ಪರಿವೀಕ್ಷಣೆ ಮಾಡಿದ ಎಲ್ಲಾ ಕ್ಷೇತ್ರಗಳಲ್ಲಿ ಸಮಸ್ಯೆಗಳಲ್ಲಿ ಕಾಣುತ್ತವೆ. ಈ ಸಮಸ್ಯೆಗಳ ನಿವಾವರಣೆಗೆ ಸೂಕ್ತ ಯೋಜನೆಗಳನ್ನು ಕೈಗೊಳ್ಳಬೇಕಿದೆ. ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಪಾರದರ್ಶಕವಾಗಿ ಯಾವುದೇ ಲಿಂಗ ತಾರತಮ್ಯವಿಲ್ಲದಂತೆ ರೂಪಿಸಬೇಕಿದೆ. ಸರ್ಕಾರವು ಮಹಿಳೆಯರ ಅಭಿವೃದ್ಧಿಗಾಗಿ ಜಾರಿಗೊಳಿಸುವ ಯೋಜನೆಗಳು ಮುಖ್ಯವಾಗಿ ಈ ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕು.

* ಸಮುದಾಯದಲ್ಲಿರುವ ಲಿಂಗ ತಾರತಮ್ಯಗಳನ್ನು ಹೋಗಲಾಡಿಸಲು ಯೋಜನೆಗಳು ಪ್ರಯತ್ನಿಸಬೇಕು.
* ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಸ್ತ್ರೀವಾದಿ ಸಂಶೋಧನಾ ವಿಧಾನದಿಂದ ಮಾಡಬೇಕು.
* ಮಹಿಳೆಯರಿಗೆ ಅಭಿವೃದ್ಧಿ ಯೋಜನೆಗಳಲ್ಲಿ ಮುಕ್ತವಾಗಿ ಭಾಗವಹಿಸಲು ಅವಕಾಶ ನೀಡಬೇಕು.
* ಮಹಿಳಾ ಅಭಿವೃದ್ದಿ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವವರಿಗೆ ಸ್ತ್ರೀವಾದಿ ದೃಷ್ಠಿಕೋನವಿರಬೇಕು ಮತ್ತು ಸೂಕ್ಷ್ಮಲಿಂಗ ಸಂವೇದನಾ ತರಬೇತಿ ನೀಡಬೇಕು.
* ಸ್ತ್ರೀಯರಿಗೆ ಏನೂ ಗೊತ್ತಿಲ್ಲವೆಂಬ ನಕಾರಾತ್ಮಕ ಭಾವನೆ ಬೇಡ, ಅವರಿಗಿರುವ ಅನುಭವ, ಎದುರಿಸುತ್ತಿರುವ ಸವಾಲುಗಳು, ಸಮಸ್ಯೆಗಳ ಪರಿಹಾರೋಪಾಯಗಳನ್ನು ತಿಳಿಸಿ ಅವರನ್ನು ಉತ್ತೇಜಿಸಬೇಕು.
* ಮಹಿಳೆಯರಿಗೆ ಅಗತ್ಯ ಮಾನಸಿಕ ಸಿದ್ಧತೆ ಹಾಗೂ ಕೌಶಲ್ಯಗಳ ಬಗ್ಗೆ ತಿಳಿಸಿ ಹೇಳಬೇಕು.
* ಮಹಿಳೆಯರ ಅನುಭವಗಳನ್ನು, ಸಲಹೆ-ಸೂಚನೆಗಳನ್ನು ಯೋಜನೆಗಳ ಮೌಲ್ಯ ಮಾಪನದಲ್ಲಿ ಚರ್ಚಿಸಬೇಕು ಮತ್ತು ಯೋಜನೆಗಳಲ್ಲಿ ಅಳವಡಿಸಿಕೊಳ್ಳಬೇಕು.
* ಮಹಿಳೆಯರಿಗೆ ಅವಶ್ಯಕವಾದ ತರಬೇತಿಯನ್ನು ನೀಡಬೇಕು.
* ಮಹಿಳೆಯರ ಅಭಿವೃದ್ಧಿಯಿಂದ ಮಾತ್ರ ದೇಶದ ಸರ್ವತೋಮುಖ ಪ್ರಗತಿ ಸಾಧ್ಯ ಎಂಬ ಮನೋಭಾವವನ್ನು ಸಮುದಾಯದಲ್ಲಿ ಬೆಳೆಸಬೇಕು.
* ಸಮುದಾಯದ ಸ್ತ್ರೀ-ಪುರುಷರಿಬ್ಬರಿಗೂ ಲಿಂಗ ಸೂಕ್ಷ್ಮ ಸಂವೇದನಾ ತರಬೇತಿಯನ್ನು ನೀಡುವುದು.
* ಮಹಿಳೆಯರ ನಿರ್ಧಾರ ತೆಗೆದುಕೊಳ್ಳುವ ಹಕ್ಕನ್ನು ಬಲಪಡಿಸುವುದು.
* ಮಹಿಳೆಯರ ಅಭಿವೃದ್ಧಿ ಯೋಜನೆಗಳನ್ನು ಎಲ್ಲಾ ಮಹಿಳೆಯರು ಸಂಪೂರ್ಣವಾಗಿ ಬಳಸಿಕೊಂಡು ಸಬಲೀಕರಣಗೊಳ್ಳಬೇಕು.

ಅಡಿಟಿಪ್ಪಣಿಗಳು

೧. ಕೊಪ್ಪಳ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೮-೦೯, ಪು.೮

೨. ಅದೇ, ಪು.೧೪

೩. ಅದೇ, ಪು.೧೯

೪. ಅದೇ, ಪು.೨೦

೫. ಅದೇ, ಪು.೨೧

೬. ಅದೇ, ಪು.೨೩

೭. ಅದೇ, ಪು.೩೧

೮. ಅದೇ, ಪು.೩೩

೯. ಅದೇ, ಪು.೩೪, ಕೊಪ್ಪಳ ಜಿಲ್ಲಾ ಜನಸಂಖ್ಯಾ ವರದಿ ಡೈರೆಕ್ಟರೇಟ್ ಸೆನ್ಸಕ್ಸ್ ಆಪರೇಶನ್ ಆಫ್ ಕರ್ನಾಟಕ

ಅಧ್ಯಾಯ ಐದು

ಸಮಾರೋಪ

೫.೧. ಫಲಿತಗಳು

೫.೨. ಅಧ್ಯಯನದ ಸಾಧ್ಯತೆಗಳು

೫.೩. ಅಧ್ಯಯನದ ಮಿತಿಗಳು

೫.೪. ಅಧ್ಯಯನದ ಸಲಹೆಗಳು

ಅಧ್ಯಾಯ ಐದು

ಸಮಾರೋಪ

ಸ್ತ್ರೀವಾದಿ ವಿಶ್ಲೇಷಣಾ ವಿಧದ ನೆಲೆಯಲ್ಲಿ ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ತಾತ್ವಿಕವಾಗಿ, ಕಾರ್ಯವಿಧಾನ ಹಾಗೂ ಮೌಲ್ಯಮಾಪನ ವಿಧಾನವನ್ನು ಅಧ್ಯಯನ ಮಾಡುವುದರ ಜೊತೆಗೆ, ಸ್ತ್ರೀವಾದಿ ಸಲಹಾತ್ಮಕ ಸಂಶೋಧನೆಯ ಮೂಲಕ ಅಭಿವೃದ್ಧಿ ಪಥದಲ್ಲಿ ಆಗಬೇಕಾದ ಬದಲಾವಣೆಯಗಳನ್ನು ತರುವ ನಿಟ್ಟಿನಲ್ಲಿ ಈ ಅಧ್ಯಯನವನ್ನು ಆರಂಭಿಸಲಾಗಿತ್ತು. ಮಹಿಳಾ ಗುಂಪಿಗೆ ಲಿಂಗದೋಷಣೆಯ ಹೊರೆ ಇಂದು ನಿನ್ನೆಯದಲ್ಲ. ಶತ ಶತಮಾನಗಳಿಂದಲೂ ಪಿತೃಮೌಲ್ಯಗಳನ್ನು ಹೊತ್ತು ತರುತ್ತಿರುವ ಸಮಾಜ, ಸಾಮಾಜೀಕರಣ, ರೂಢಿಗತ ಸಂಪ್ರದಾಯಗಳು, ನೀತಿ ಸಂಹಿತೆಗಳಾಗಿ ಮಾರ್ಪಾಡುಗೊಂಡು, ದಿನೆ ದಿನೆ ಬೆಳೆಯುತ್ತಲೇ ಇವೆ. ಸಮಾಜ, ಸಮಾಜದಿಂದ ಸಾಮಾಜಿಕ ಸಂಸ್ಥೆಗಳಲ್ಲಿ ಒಳಗೂಡಿ, ಆಡಳಿತಾತ್ಮಕ ಕ್ಷೇತ್ರಗಳಲ್ಲಿಯೂ ಲಿಂಗ ಅಸಮಾನತೆಯ ಸೂಕ್ಷ್ಮಾತಿ ಸೂಕ್ಷ್ಮ ಸಂಗತಿಗಳು ಮಹಿಳೆಯರನ್ನು ಅಂಚಿನ ಪರಧಿಯಲ್ಲಿಯೇ ಸೀಮಿತಗೊಳ್ಳುತ್ತಿರುವುದಲ್ಲದೆ, ಅವರ ಎದುರಿನ ಭವಿಷ್ಯವನ್ನು ಜೊತೆಗೆ ವ್ಯಕ್ತಿಗತ ಅಸ್ತಿತ್ವವನ್ನು ಮರೆ ಮಾಚುತ್ತಿವೆ. ಬದಲಾಯಿಸುತ್ತಿವೆ. ಮಹಿಳಾ ಚಹರೆಯು ತನ್ನದಲ್ಲದ ಚಹರೆಯ ಮುಖವಾಡವನ್ನು ಹೊತ್ತು ಬದುಕನ್ನು ಪೂರ್ಣಗೊಳಿಸುವಂತಹ ಸ್ಥಿತಿ ಕಾಣಬಹುದು. ಮಹಿಳಾ ಬದುಕಿನ ಒಟ್ಟು ಸಮಸ್ಯೆಗಳ ಪರಿಹಾರೋಪಾಯವಾಗಿ ಅಭಿವೃದ್ಧಿ ವಾಹಕವನ್ನೆ ಮುಖ್ಯ ಸಾಧನವನ್ನಾಗಿಸಿಕೊಂಡಿದೆ. ಸರ್ಕಾರದ ಈ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಗುರುತಿಸಿ ಅಧ್ಯಯನದ ಆಕರವಾಗಿ ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಸರ್ಕಾರಿ ಮಹಿಳಾ ಅಭಿವೃದ್ಧಿಯ ಕ್ಷೇತ್ರದಲ್ಲಿ ಮಹಿಳಾ ಬದುಕಿನ ಸರ್ವತೋಮುಖ ಅಭಿವೃದ್ಧಿಗೆ ಬೇಕಾಗಿರುವ ವ್ಯವಸ್ಥೆಗಳನ್ನು, ನೀತಿ ಸಂಹಿತೆಗಳನ್ನು ಸೈದ್ಧಾಂತಿಕ ಚೌಕಟ್ಟನ್ನು ಅರಿಯುವುದು. ಅರ್ಥೈಸಿಕೊಳ್ಳುವುದು ಇಲ್ಲಿನ ಬಹುಮುಖ್ಯ ಉದ್ದೇಶವಾಗಿದೆ. ಮಹಿಳಾ ಬದುಕಿಗೆ ಆಗುತ್ತಿರುವ ಶೋಷಣೆಯನ್ನು ಅದರಲ್ಲೂ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಆಗುತ್ತಿರುವ ತೊಡಕುಗಳನ್ನು ಶೋಧಿಸಿ

ತೆಗೆಯುವುದಲ್ಲದೆ ಅದನ್ನು ಅರ್ಥೈಸಿಕೊಂಡು ಬದಲಾಯಿಸಬೇಕಾದಂತದ್ದು ಅತಹಯಗತ್ಯ. ಈ ನಿಟ್ಟಿನಲ್ಲಿ ಅಭಿವೃದ್ಧಿ ಪ್ರಕ್ರಿಯೆ ಪರಿಧಿಯನ್ನು ತಿಳಿಯುವುದು ಬಹುಮುಖ್ಯವಾಗಿದೆ. ಸಾಮಾಜಿಕ ಅಭಿವೃದ್ಧಿಯ ಭಾಗವಾಗಿರುವ ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು, ಯೋಜನೆಗಳು ಲಿಂಗ ಪಕ್ಷಪಾತದಿಂದ ಹೊರತಾಗಿಲ್ಲ ಎಂಬುದಕ್ಕೆ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳ ವೈಫಲ್ಯ ಹಾಗೂ ಮಹಿಳಾ ಬದುಕಿಗೆ ಉಂಟಾಗಿರುವ ಹಲವಾರು ತೊಂದರೆದಾಯಕವಾದ ಯೋಜನೆಗಳು ಅಂದರೆ ಸ್ತ್ರೀ ಕೇಂದ್ರಿತವಾಗಿಯೇ ಪುರುಷ ಮೌಲ್ಯಗಳಿಂದ ಕೂಡಿದ ಯೋಜನೆಗಳನ್ನು ನಾವು ಕಾಣಬಹುದಾಗಿದೆ. ಮಹಿಳಾ ಅಭಿವೃದ್ಧಿಯ ಸಮಗ್ರ ಅಧ್ಯಯನದ ಉದ್ದೇಶದ ನೆಲೆಯಲ್ಲಿ ಸರ್ಕಾರಿ ಮಹಿಳಾ ಅಭಿವೃದ್ಧಿಯು ಸೈದ್ಧಾಂತಿಕತೆ ಅಲ್ಲಿನ ಅಡೆತಡೆಗಳು ಹಾಗೂ ಲಿಂಗಪಕ್ಷಪಾತದ ಚಿಂತನೆಗಳು, ಯೋಜನೆಗಳ ಕಾರ್ಯವಿಧಾನಗಳು ಅಂತಿಮವಾಗಿ ಮೌಲ್ಯಮಾಪನದಲ್ಲಿನ ನಿರ್ಲಕ್ಷ್ಯಗಳೇನು ಎಂಬುದನ್ನು ಗಂಭೀರವಾಗಿ ಅಧ್ಯಯನ ಮಾಡಲಾಗುತ್ತವೆ. ಈ ಮೂಲಕ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪುರುಷ ಪ್ರಾಧಾನ್ಯತೆ ಮತ್ತು ಸ್ತ್ರೀ ಅಧೀನತೆಯ ಲಿಂಗ ಶ್ರೇಣೀಕೃತ ವ್ಯವಸ್ಥೆ ಹೇಗೆ ಬೆಳೆದು ಬಂದಿದೆ, ಬರುತ್ತಿದೆ. ಪುರುಷ–ಸ್ತ್ರೀ ಸಂಬಂಧಗಳಲ್ಲಿ ಬದುಕಿನ ಯಾವ ಬದಲಾವಣೆಗಳು ಆಗುತ್ತವೆ. ಸಾಮಾಜಿಕ ಬದುಕಿಗೆ ಇದು ಯಾವ ವಿಧದಲ್ಲಿ ಅಸಮರ್ಪಕ ಬೆಳವಣಿಗೆಗೆ ಕಾರಣವಾಗುತ್ತದೆ ಎಂಬುದನ್ನು ಅವಲೋಕಿಸಿ, ಗ್ರಹಿಸುವ ದಿಶೆಯಲ್ಲಿ ಅಧ್ಯಯನ ಸಾಗುತ್ತಿದೆ. ಸಂಶೋಧನೆಯ ಪ್ರಾಕ್ ಕಲ್ಪನೆಯಿಂದ ಸರ್ಕಾರಿ ಮಹಿಳಾ ಯೋಜನೆಗಳಲ್ಲಿರುವ ಲಿಂಗ ಅಸಮಾನತೆಯ ಚಿಂತನೆಗಳು ದೋಷಪೂರಿತವಾಗಿವೆ ಮತ್ತು ಇದರಿಂದ ಮಹಿಳಾ ಬದುಕಿಗೆ ಯಾವುದೇ ರೀತಿಯಿಂದಲೂ ಅಭಿವೃದ್ಧಿ ಪ್ರಕ್ರಿಯೆಯ ನಿರೀಕ್ಷಿತ ಮಟ್ಟವನ್ನು ಸಹ ತಲುಪಲು ಸಾಧ್ಯವಾಗುತ್ತಿಲ್ಲ ಎಂಬುದನ್ನು ಸಾಕ್ಷಿ ಪುರಾವೆಗಳೊಂದಿಗೆ ಚರ್ಚೆಗೆ ಒಳಪಡಿಸಲಾಗುತ್ತಿದೆ.

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ಪೂರಕವಾಗಿ ಅಧ್ಯಯನದ ಮಿತಿಗಳನ್ನು ಅಧ್ಯಯನದ ಸ್ವರೂಪಗಳನ್ನು ಹಾಗೂ ಅಧ್ಯಯನದ ಫಲಿತಗಳನ್ನು ರೂಪಿಸುವಲ್ಲಿ ಹಲವಾರು ಅಭಿವೃದ್ಧಿ ಅಧ್ಯಯನದ ತಜ್ಞರ ಪೂರಕ ಚಿಂತನೆಗಳು ಮಾಹಿತಿಗಳು ಸಮೀಕ್ಷಾ ವರದಿಗಳು ಅನುಕೂಲಕರ ವಾದವು. ಹಲವಾರು ಹೊಸ ಸಂಗತಿಗಳ ಅನಾವರಣಗೊಂಡವು. ರೈಟ್ ಟು ವುಮೆನ್ ಹೆಲ್ತ್ (೨೦೧೦, WHO) ವರದಿಯ ಪ್ರಕಾರ ಮಹಿಳೆ ಮತ್ತು ಆರೋಗ್ಯದ ನೆಲೆಯಲ್ಲಿ ಹೆಚ್.ಪಿ.ವಿ ಮತ್ತು ಲಿಂಗತ್ವದ ಸಂಗತಿಗಳನ್ನು ಅಧ್ಯಯನ ಮಾಡುವಾಗ ಮಹಿಳೆಯ ದೇಹ ಮತ್ತು ಪಿತೃ ಮೌಲ್ಯ ಅಥವಾ ಲಿಂಗ ಅಸಮಾನತೆಯ ಮಹಿಳಾ ದೇಹ–ಬದುಕು ಹೇಗೆ ಅಪಾಯದಂಚಿನಲ್ಲಿ ಪರಿಧಿಗೆ ಎಡೆಯಾಗಬೇಕಾಗಿದೆ ಎಂಬುದನ್ನು ಕಾಣಬಹುದು. ಅದೇ ವರದಿಯಲ್ಲಿಯೇ ಸಲಹಾತ್ಮಕ ಅಭಿವೃದ್ಧಿ ಪ್ರಕ್ರಿಯೆಯ ಮೂಲಕ ಲಿಂಗ ಸೂಕ್ಷ್ಮತೆಯ ಕೊರತೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಎಷ್ಟು ಅತ್ಯವಶ್ಯಕ ಎಂಬುದರ ಬಗ್ಗೆ ಚರ್ಚೆ ಮಾಡಲಾಗಿದೆ. 'ಸಮಾನತೆಯೆಡೆಗೆ' ವರದಿಯಿಂದ ಮಾನವ

ಅಭಿವೃದ್ಧಿ ವರದಿ, ವರ್ಲ್ಡ್ ಡೆವಲಪ್‌ಮೆಂಟ್ ರಿಪೋರ್ಟ್(೨೦೧೧)ವರೆಗೂ ಕೂಡ ಅಭಿವೃದ್ಧಿ ಪ್ರಕ್ರಿಯೆ – ಅಭಿವೃದ್ಧಿ ವೈಧಾನಿಕತೆಯೇ ಲಿಂಗತ್ವ ಸೂಕ್ಷ್ಮತೆಯ ಅವಶ್ಯಕತೆಯನ್ನು ಒತ್ತಿ ಹೇಳಿರುವುದನ್ನು ನಾವು ಕಾಣಬಹುದು. ಜೊತೆಗೆ ಮಹಿಳಾ ಬದುಕಿನ ಸಬಲತೆಗೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿನ ಲಿಂಗ ಅಸಮಾನತೆಗಳು ಕಾರಣ ಎಂಬುದನ್ನು ಗ್ರಹಿಸಲಾಗಿದೆ. ಸಂಶೋಧನೆಗೆ ಸಂಬಂಧಿಸಿದಂತೆ ಸಮೀಕ್ಷಾ ವರದಿಯನ್ನು ನಡೆಸಿದಾಗ ಅಧ್ಯಯನದ ಒಂದು ಚೌಕಟ್ಟನ್ನು ರೂಪಿಸಿಕೊಳ್ಳಲು ಸಾಧ್ಯವಾಯಿತು. ಈ ನಿಟ್ಟಿನಲ್ಲಿ ಯು.ಎನ್.ಪಿ.ಪಿ.ಯ 'ಡೆವಲಪ್ ಮೆಂಟ್ ಆಫ್ ವಿಮೆನ್' ತರಬೇತಿ ಮಾಡುವ, ಅಧ್ಯಯನದ ವ್ಯಾಪ್ತಿ, ಉದ್ದೇಶ, ನಿರೀಕ್ಷಿತ ಗುರಿಗಳನ್ನು ವಹಿಸುವಲ್ಲಿ, ರೂಪಿಸುವಲ್ಲಿ ಹೆಚ್ಚು ಉಪಯುಕ್ತವಾಯಿತು. ಈ ಮೂಲಕ ಸ್ತ್ರೀವಾದಿ ಹೋರಾಟಗಳ ಹಿನ್ನೆಲೆಯಲ್ಲಿ, ಅಭಿವೃದ್ದಿ ಯೋಜನೆಗಳ ಒಂದು ಸೂಕ್ಷ್ಮ ಅಧ್ಯಯನ ಮಾಡಿದ ತದನಂತರ ಮಹಿಳಾ ಅಭಿವೃದ್ಧಿಗೆ – ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಇರುವ ಲಿಂಗ ಅಸಮಾನತೆಗಳನ್ನು ತೆಗೆದು ಹಾಕಲು ಮಹಿಳಾ ಅಭಿವೃದ್ಧಿಗೆ ಸಬಲತೆಗೆ ಬೇಕಾದ ವಾತಾವರಣವನ್ನು ರೂಪಿಸಲು ಪೂರಕವಾದ ಮಹಿಳಾ ಸ್ನೇಹಿ ಅಭಿವೃದ್ಧಿ ಪ್ರಕ್ರಿಯೆ ಅವಶ್ಯಕತೆ ಯನ್ನು ಗುರುತಿಸಿ, ಈ ಅಧ್ಯಯನವು ಸಾಗಿತು. ಇದಕ್ಕೆ ಮೊದಲು ಸಮಸ್ಯೆಯ ಹರವು, ವಿಧಾನವನ್ನು ಅರಿಯುವುದು ಬಹುಮುಖ್ಯ ಎಂಬುದನ್ನು ಅರಿತು, ಕ್ಷೇತ್ರದಲ್ಲಿ ಮಹಿಳಾ ಬದುಕಿನ ಸ್ಥಿತಿಗತಿ ಅರಿಯಲು ಕ್ಷೇತ್ರಕಾರ್ಯವನ್ನು ಬಹುಮುಖ್ಯ ಸಾಧನವನ್ನಾಗಿ ಬಳಸಲಾಗಿದೆ.

ಮತ್ತೊಂದು ಮುಖ್ಯ ವಿಷಯವೆಂದರೆ, ಸಮಾಜದಲ್ಲಿ ಈ ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಎಷ್ಟೆ ಸೂಕ್ಷ್ಮವಾಗಿ ಜಾರಿಗೊಳಿಸಿದರೂ ಕೂಡ ಅಷ್ಟೆ ಪ್ರಬಲವಾಗಿ ಪುರುಷಮೌಲ್ಯಗಳು ಯೋಜನೆಗಳು ವಿಫಲತೆಗ ಕಾರಣವಾಗುತ್ತಿರುವುದು ಅಲ್ಲಿ ಮಹಿಳಾ ಸಮುದಾಯವಾಗಿರಬಹುದು ಅಥವಾ ಪುರುಷ ಸಮುದಾಯವಾಗಿರಬಹುದು. ಆದರೆ ಸಂಪ್ರದಾಯಿತ ಪುರುಷ ಕೇಂದ್ರಿತ ಮೌಲ್ಯಗಳು ಒಟ್ಟಾರೆ ಮಾನವ ಬದುಕಿನ ಮೌಲ್ಯಯುತ, ಶ್ರೇಣೀಕೃತ ರಹಿತ ಸಮಾಜದ ರಚನೆಗೆ ಅಡ್ಡಿಯಾಗುತ್ತದೆ. ಈ ಎಲ್ಲಾ ಸಂಗತಿಗಳನ್ನು ಗಂಭೀರವಾಗಿ ಪರಿಗಣಿಸಿ ಸಂಶೋಧನೆಯ ಪ್ರತಿ ಅಧ್ಯಯನವನ್ನು ಸೂಕ್ಷ್ಮವಾಗಿ ವಿಭಜಿಸಿ ಅಧ್ಯಯನದ ಅನುಕೂಲಕ್ಕೆ ಒಟ್ಟು ಐದು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಹಾಗೂ ಸರ್ಕಾರಿ ಮಹಿಳಾ ಯೋಜನೆಗಳು ಇರುವ ಲಿಂಗ ಅಸಮಾನತೆಗಳನ್ನು ಗ್ರಹಿಸಿ, ಅವುಗಳೇ ಮಹಿಳಾ ಯೋಜನೆಗಳ ವಿಫಲತೆಗೆ ಕಾರಣ ಎಂಬುದನ್ನು ಪುರಾವೆಗಳ ಮೂಲಕ ಚರ್ಚಿಸಲಾಗುತ್ತಿದೆ.

ಅಧ್ಯಯನದ ಪ್ರಮುಖ ಉದ್ದೇಶ ಅಭಿವೃದ್ಧಿ, ಪರಿಕಲ್ಪನೆ, ಅಭಿವೃದ್ದಿ ತಾತ್ವಿಕ ಚೌಕಟ್ಟು, ಕಾರ್ಯವಿಧಾನ, ಮೌಲ್ಯಮಾಪನ ಎಲ್ಲದರಲ್ಲಿಯೂ ಕೂಡ ದೋಷಗಳಿರುವುದರಿಂದ ಮಹಿಳಾ ಬದುಕಿನ ಅಭಿವೃದ್ಧಿ ಪ್ರಕ್ರಿಯೆ ಅಂಚಿನ ವರದಿಯಲ್ಲಿಯೇ ಇರುವುದು. ಇದನ್ನು ಗ್ರಹಿಸಿ ಅಲ್ಲಿನ

ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಅಧ್ಯಯನ ಮಾಡುವುದೇ ಆಗಿದೆ. ಇಲ್ಲಿ ಮಹಿಳಾ ಸಬಲೀಕರಣವನ್ನು ಸಾಧಿಸಲು ಅಭಿವೃದ್ಧಿ ಪ್ರಕ್ರಿಯೆ ಮೌಲ್ಯಮಾಪನಾತ್ಮಕ ಅಧ್ಯಯನಗಳು ಸಂಶೋಧನೆಗಳು ಅದರಲ್ಲೂ ಸ್ತ್ರೀವಾದಿ ದೃಷ್ಟಿಕೋನದ ನೆಲೆಯಲ್ಲಿ ಸಂಶೋಧನೆಗಳು ಅಧ್ಯಯನಗಳು ಅತ್ಯವಶ್ಯಕವಾಗಿದೆ.

ಸಮಾಜದ ವ್ಯವಸ್ಥೆಯಲ್ಲಿ ಲಿಂಗ ಅಸಮಾನತೆ–ತಾರತಮ್ಯ ಲಿಂಗ ಪೂರ್ವಾಗ್ರಹಗಳು, ಹಿಂಸೆ, ದೌರ್ಜನ್ಯಗಳು ಸ್ತ್ರೀ–ಪುರುಷರ ಇಬ್ಬರ ಮೇಲೂ ನಡೆಯುತ್ತಿರುವುದು ಸತ್ಯಾಂಶವಾದರೂ ಮಹಿಳಾ ಸಮುದಾಯದ ಮೇಲೆ ನಡೆಯುತ್ತಿರುವ ಲಿಂಗ ಶ್ರೇಣೀಕೃತ ವ್ಯವಸ್ಥೆಯ ಪರಿಣಾಮಗಳು ಹೆಚ್ಚಾಗಿವೆ. ನೇರವಾಗಿಯೋ, ಪರೋಕ್ಷವಾಗಿಯೋ ಹೆಣ್ಣಾದ ಕಾರಣಕ್ಕಾಗಿಯೇ ತಾರತಮ್ಯಕ್ಕೆ ಒಳಗಾಗುತ್ತಿರುವ ಹಂತ ಒಂದೆಡೆಯಾದರೆ ಹೆಣ್ಣಾದ ಕಾರಣಕ್ಕಾಗಿಯೇ ಪಿತೃ ಮೌಲ್ಯಗಳನ್ನು ಒಪ್ಪಿ ಇಷ್ಟವಿದ್ದರೂ, ತಾರತಮ್ಯಗಳನ್ನು ಅರಿತರೂ ಅದನ್ನು ವಿರೋಧಿಸದೆ ಒತ್ತಾಯದ ಮೌಲ್ಯಗಳನ್ನು ಒಪ್ಪಿತ ಮೌಲ್ಯಗಳಾಗಿ ಪಾಲಿಸುತ್ತಿರುವ ಹಂತ ಇನ್ನೊಂದೆಡೆ. ಲಿಂಗ ಅಸಮಾನತೆ ಕೇವಲ ಒಂದೇ ಹಂತದಲ್ಲಿ ಇದೆ ಎಂಬುದನ್ನು ನಾವು ಹೇಳಲಾಗುತ್ತಿಲ್ಲ. ಒಂದು ಭ್ರೂಣದಿಂದ ಹೆಣ್ಣಿನ ಅತ್ಯಂತದವರೆಗೂ ಪಿತೃ ಮೌಲ್ಯಗಳು ಮಹಿಳೆಯನ್ನು ದಿನಚರಿಯಾಗಿ, ರೂಢಿಗಳಾಗಿ, ಸಂಪ್ರದಾಯಗಳಾಗಿ ಸಾಮಾಜಿಕ ಜವಾಬ್ದಾರಿಗಳಿಗೆ, ನೀತಿ ಸಂಹಿತೆಗಳಾಗಿ, ಯೋಜನೆಗಳಾಗಿ, ಅಭಿವೃದ್ಧಿಯ ಪ್ರಕ್ರಿಯೆಗಳಾಗಿ ಬೆಳೆದು ಬಂದಿವೆ, ಬರುತ್ತವೆ. ಈ ಸಂಗತಿಗಳನ್ನು ಸರ್ಕಾರಿ ಮಹಿಳಾ ಯೋಜನೆಗಳಲ್ಲಿ ಕಾಣಲಾಗುತ್ತಿದೆ. ಆರಂಭದಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪುರುಷ ಮತ್ತು ಮಹಿಳೆ ಇಬ್ಬರನ್ನೂ ಸಂದರ್ಶಿಸಿದಾಗ ಕುಟುಂಬ ಯೋಜನೆಗಳ ಬಗೆಗೆ ಮಾಹಿತಿಯನ್ನು ತಿಳಿಯ ಪ್ರಯತ್ನಿಸಿದಾಗ ಮಹಿಳೆಯರಿಗೆ ಮಾಡುವ ಶಾಶ್ವತ ಸಂತಾನ ಹರಣ ಶಸ್ತ್ರಚಿಕಿತ್ಸೆ 'ಟ್ಯೂಬೆಕ್ಟಮಿ' – ಮಹಿಳೆಯರಿಗೆ ಇಷ್ಟವಿರಲಿ ಇರದೇ ಇರಲಿ, ಮಹಿಳಾ ದೇಹದ ಸ್ಥಿತಿ ಎಷ್ಟೇ ಅನಾರೋಗ್ಯವಾಗಿರಲಿ ಅವರೇ ಮಾಡಿಸಿಕೊಳ್ಳುವ ಸಂಗತಿ ಒಂದೆಡೆಯಾದರೆ, ವ್ಯಾಸಕ್ಟಮಿ ಬಗೆಗೆ ಮಾಹಿತಿಯೇ ಇಲ್ಲದಿರುವ ಸಂಗತಿ ಇನ್ನೊಂದೆಡೆ. ಮಾಹಿತಿ ಹೊಂದಿದ್ದರೂ ಪಾಲನೆ ಮಾಡದೇ ಇರುವಂತಹ ಗುಂಪು ಇನ್ನೊಂದಡೆ. ಮಹಿಳಾ ಸಮುದಾಯವೇ ಮೌಢ್ಯತೆಯ ಕೂಪದಲ್ಲಿರುವುದು ವಿಪರ್ಯಾಸವೇ ಸರಿ. ಸರಳ ಜನ ಸಾಮಾನ್ಯರು, ಯೋಜನೆಗಳನ್ನು ರೂಪಿಸಿ, ಚಾಲನೆ ತರುವ ಗುಂಪು, ನಿರ್ಧಾರಿತ ಗುಂಪು, ಎಲ್ಲವೂ ಕೂಡಾ ಮಹಿಳಾ ಸಮುದಾಯದಲ್ಲಿನ ಒಪ್ಪಿತ ಮೌಢ್ಯತೆಯ ಜೀವನವನ್ನು ಮುಂದುವರೆಸುವ ನಿಟ್ಟಿನಲ್ಲಿಯೇ ಸಾಗುತ್ತಿದ್ದಾರೆ. ಇದನ್ನು ಗ್ರಹಿಸಿ, ಇದರ ಬದಲಾವಣೆಯ ಹಂತವಾಗಿ 'ಅಭಿವೃದ್ಧಿ' ಪರಿಕಲ್ಪನೆಯನ್ನು ಸಂರಚಿಸಬೇಕಾಗಿದೆ. ತಾತ್ವಿಕತೆಯಲ್ಲಿ ಅಭಿವೃದ್ದಿ ಸೈದ್ಧಾಂತಿಕತೆಯಲಿ ಲಿಂಗ ಸೂಕ್ಷ್ಮತೆಯ ದೃಷ್ಟಿಕೋನವನ್ನು ತಂದಾಗಲೇ ಇದು ನಾವು ಎಂಬುದನ್ನು

ಅರಿತು ಮೂರನೆ ಅಧ್ಯಾಯದಲ್ಲಿಯೇ 'ಅಭಿವೃದ್ಧಿ' ಪರಿಕಲ್ಪನೆಯನ್ನು ಸಂಪೂರ್ಣವಾಗಿ ಲಿಂಗತ್ವ ವಿಶ್ಲೇಷಣೆಯಲಿ ಅಧ್ಯಯನ ಮಾಡಲಾಗಿದೆ. ಈಗಾಗಲೇ ಸಾರಲೇಖದಲ್ಲಿ ತಿಳಿಸಿದಂತೆ, ಅಭಿವೃದ್ಧಿ ಪ್ರಕ್ರಿಯೆ ಬೆಳೆದು ಬಂದ ಬಗೆ ಹಾಗೂ ಅಲ್ಲಿನ ಲಿಂಗ ಅಸಮಾನತೆಯೂ ಬೆಳೆದು ಬಂದ ಬಗೆಗಳನ್ನು ಸೂಕ್ಷ್ಮವಾಗಿ ಚರ್ಚಿಸಲಾಗುತ್ತದೆ ಎಂಬುದನ್ನು ಅಭಿವೃದ್ಧಿ ಅಧ್ಯಯನದಲ್ಲಿ ಚರ್ಚಿಸಲಾಗುತ್ತಿದೆ.

ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸರ್ಕಾರಿ ಮಹಿಳಾ ಯೋಜನೆಗಳ ವಿಫಲತೆಗೆ ಮಹಿಳಾ ಬದುಕಿನ ಸಬಲೀಕರಣಕ್ಕೆ ಅಡ್ಡಿಯಾಗಿರುವ ಸಂಗತಿಗಳನ್ನು ಪರಿಶೀಲಿಸಿದಾಗ ಅಭಿವೃದ್ಧಿ ಪ್ರಕ್ರಿಯೆ ಸ್ವರೂಪದ ಕೂಲಂಕುಶ ಅಧ್ಯಯನ ಅತ್ಯವಶ್ಯವೆನಿಸಿತು. ಅದರಲ್ಲೂ, ಅಧಿಕಾರ ನಿರ್ಧಾರಕ ಮನೋಭಾವ ಮತ್ತು ಯಜಮಾನ್ಯತೆ ಸಂಗತಿಗಳು ಹೇಗೆ ಹಂಚಿಕೆಯಾಗಿವೆ ಎಂಬುದನ್ನು ಅರಿಯುವುದು ಮುಖ್ಯವಾಗಿತ್ತು. ಕೌಟುಂಬಿಕ ಸ್ತರದಲ್ಲಿ ಸಾರ್ವಜನಿಕ ಸ್ತರದಲ್ಲಿ ಎರಡೂ ಕ್ಷೇತ್ರದಲ್ಲೂ ಒಂದೇ ಸ್ವರೂಪದ ಲಿಂಗತ್ವದ ಮೌಲ್ಯಗಳನ್ನೊಳಗೊಂಡ ವ್ಯವಸ್ಥೆ ಹಂಚಿಕೆಯಾಗುತ್ತಿದೆ. ಯೋಜನೆಗಳ ಬಗೆಗೆ ಮಾಹಿತಿಯೇ ಇರದಿರುವುದು ಒಂದೆಡೆ. ಮಾಹಿತಿಯನ್ನು ಪಡೆಯಬೇಕು ಎನ್ನುವ ಒತ್ತಾಸೆಯ ಕೊರತೆ ಇನ್ನೊಂದೆಡೆ, ಸಿಗುತ್ತಿರುವ ಸೌಲಭ್ಯಗಳು ಯೋಜನೆಗಳನ್ನು ತಮ್ಮ ಅಭಿವೃದ್ಧಿಗೆ ಬಳಸಲು ಸ್ವತಃ ನಿರ್ಧಾರ ತೆಗೆದುಕೊಳ್ಳದಿರುವ ಸ್ಥಿತಿ ಮತ್ತೊಂದೆಡೆ. ಇಲ್ಲಿ ಪ್ರತಿ ಹಂತದಲ್ಲೂ ಕೂಡ ಸಮಸ್ಯೆಗಳ ಆಳ ವಿಭಿನ್ನ ದಾರಿಗಳನ್ನು ತೋರಿಸಿಕೊಡುತ್ತಿದೆ. ಅಧಿಕಾರದ ಸ್ತರದಲ್ಲಿರುವ ಮಹಿಳಾ ಗುಂಪುಗಳಾಗಲಿ, ಸರ್ಕಾರದ ವಾಹಕರಾಗಿ ಆಗಲಿ, ಫಲಾನುಭವಿಗಳಾಗಿರಲಿ, ಪ್ರತಿ ಹಂತದಲ್ಲಿಯೂ ಕೂಡ ಮಹಿಳೆಯರು ಪುರುಷ ಪ್ರಧಾನ ಮೌಲ್ಯಗಳಿಂದ ಗೊತ್ತೋ-ಗೊತ್ತಿಲ್ಲದೆಯೋ ಬಂಧಿತರಾಗುತ್ತಿದ್ದಾರೆ. ಈ ಸಂಗತಿಗಳು 'ಅಭಿವೃದ್ಧಿ' ಪ್ರಕ್ರಿಯೆಯಲ್ಲಿ ಪರಿಗಣಿಸಲಾಗುತ್ತಿಲ್ಲ. ಇಂತಹ ಹತ್ತು ಹಲವು ಸಮಸ್ಯೆಗಳು ಕೇವಲ ಲಿಂಗ ಶ್ರೇಣೀಕೃತದ ವ್ಯವಸ್ಥೆಯಿಂದಲೇ ಸೃಷ್ಟಿಯಾಗುತ್ತಿದೆ. ಹಾಗೂ ಮಹಿಳಾ ಅಭಿವೃದ್ಧಿಗೆ ಮಾರಕವಾಗುತ್ತದೆ. ಇವುಗಳನ್ನು ಅಧ್ಯಯನದಲ್ಲಿ ಅರಿಯಲು ಸಾಧ್ಯವಾಯಿತು. ಪಂಚಾಯಿತ ಕ್ಷೇತ್ರದಲ್ಲಿ ಇರುವ ನಿರ್ಧಾರಕ ಗುಂಪುಗಳಲ್ಲಿಯೂ ಈ ಸಮಸ್ಯೆಗಳ ಅರಿವಾಯಿತು. ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಸಂದರ್ಶನದ ಸಂದರ್ಭದಲ್ಲಿಯೂ ಕೂಡ, ಅಭಿವೃದ್ಧಿ ವಾಹಕರಾಗಿ, ಕಾರ್ಯನಿರ್ವಹಿಸುತ್ತಿರುವ ಗುಂಪುಗಳಲ್ಲಿಯೂ ಈ ಮೇಲಿನ ಸಮಸ್ಯೆಯನ್ನು ಗ್ರಹಿಸಲಾಯಿತು. ಸರ್ಕಾರಿ ಮಹಿಳಾ ಅಭಿವೃದ್ಧಿಗಳನ್ನು ಈ ಮೇಲಿನ ಸಮಸ್ಯೆಗಳಡಿಯಲ್ಲಿ ವಿಶ್ಲೇಷಿಸಿ ರೂಪಿಸಬೇಕಾಗಿದೆ.

ಸಂಪೂರ್ಣ ಅಧ್ಯಯನದ ಮೂಲಕ ಅರಿತಿರುವುದೇನೆಂದರೆ ಮಹಿಳೆಯರ ಒಟ್ಟು ಸಮಸ್ಯೆ ಸಮಾಜದ ವ್ಯವಸ್ಥೆಯಲ್ಲಿಯೇ ಜನಿತವಾಗುತ್ತಿದೆ. ಅಲ್ಲಿಂದ ಮುಖ್ಯವಾಹಿನಿಯ ಚಿಂತನೆಗಳಲ್ಲಿ

ಅಡಕವಾಗಿ ಮತ್ತೇ ಸಮಾಜದ ಮೂಲಕ ವ್ಯಕ್ತಿಗತವಾಗಿ ಮಹಿಳಾ ಬದುಕು ಪಲ್ಲಟನಗೊಂಡು ಮರೆಯಾಗುತ್ತಿವೆ. ಮಹಿಳಾ ಬದುಕಿನ ಚಿತ್ರಣ ಅವಳದಲ್ಲದ ಚಿತ್ರಣದಲ್ಲಿ ಬಿಂಬಿತವಾಗುತ್ತಿದೆ. ಈ ಮೂಲಕ ಸಮಾಜದ ಅಭಿವೃದ್ಧಿಗೆ ಸಮಾಜದ ಮೌಲ್ಯಗಳೇ ಕಾರಣವಾಗುತ್ತಿದೆ. ಸಮಾಜದ ಒಂದು ಭಾಗವಾಗಿರುವ ಮಹಿಳೆ ತನ್ನ ಅಸ್ತಿತ್ವದ ಹೋರಾಟದಲ್ಲಿ ಮುಳುಗಿದ್ದಾಳೆ. ಎಷ್ಟೋ ಮಹಿಳೆಯರು ಅಂಧಕಾರದಲ್ಲಿಯೇ ತಮ್ಮ ಜೀವನದ ದಾರಿಯನ್ನು ತಳ್ಳುತ್ತಿದ್ದಾರೆ. ಈ ಸಮಸ್ಯೆಗಳಿಗೆ ಪರಿಹಾರಗಳನ್ನು ಸಮಾಜದ ವ್ಯವಸ್ಥೆಯಲ್ಲಿಯೇ ಶೋಧಿಸುವುದು ವ್ಯರ್ಥವೇ ಸರಿ. ಈ ಸಮಸ್ಯೆಗಳಿಗೆ ಮಹಿಳಾ ಕೇಂದ್ರಿತ ಚಿಂತನೆಗಳ ಮೂಲಕ 'ವ್ಯಕ್ತಿಗತ' ಅಂದರೆ ಪ್ರತಿ ಮಹಿಳೆಯನ್ನು ವಿಶೇಷವಾಗಿ ಪರಿಗಣಿಸಿ ಅಧ್ಯಯನ ಮಾಡುವುದರ ಮೂಲಕ ಸಮಸ್ಯೆಗಳಿಗೆ ಪರಿಹಾರಗಳನ್ನು ರೂಪಿಸಬೇಕು. ಈ ದೃಷ್ಟಿಕೋನವನ್ನು ಹೊತ್ತು ಸಾಗಿ ಅಧ್ಯಯನ ಮಾಡಲಾಗಿದೆ. ಕ್ಷೇತ್ರಕಾರ್ಯದಲ್ಲಿಯೂ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಕರಣ ಅಧ್ಯಯನಗಳ ಸಂದರ್ಭದಲ್ಲಿಯೂ ಹಾಗೂ ಸಂದರ್ಶನದ ಸಂದರ್ಭದಲ್ಲಿಯೂ ಸ್ತ್ರೀವಾದಿ ಅವಲೋಕನ ವಿಧಾನದಿಂದ ಲಭ್ಯವಾದ ಸಂಗತಿಗಳೆಂದರೆ, ಮೊದಲು ಇಂದಿಗೂ ಎಷ್ಟೋ ಮಹಿಳೆಯರ ಸ್ವ-ಅಭಿವೃದ್ಧಿಯ ಬಗೆಗೆ, ಚಿಂತನೆಗಳನ್ನು ಮಾಡುವುದೇ ಇಲ್ಲ. ಹಾಗೂ ಅಧಿಕಾರ ಸವಲತ್ತುಗಳು ಪುರುಷರ ಒಂದು ಅನುಕೂಲದ ನೆಲೆಯಲ್ಲಿ ಅವರು ಮುಖ್ಯವಾಹಿನಿಯಲ್ಲಿ ಪಾತ್ರಧಾರಿಗಳಾಗಿ ಭಾಗವಹಿಸುತ್ತಿರುವುದು ಅಭಿವೃದ್ಧಿ, ಅಭಿವೃದ್ಧಿ ಯೋಜನೆಗಳ ಬಗ್ಗೆ ಕಿಂಚಿತ್ತೂ ಚಿಂತಿಸದೆ ಇರುವ ಲಭ್ಯ ಜೀವನವನ್ನು, ಅವಕಾಶಗಳನ್ನು ಪಾಲಿಸುತ್ತ ಸಾಗಿಸುತ್ತಿರುವ ಸ್ಥಿತಿಗತಿಯೇ ಹೆಚ್ಚಾಗಿ ಭಾಸವಾಯಿತು.

ಕೌಟುಂಬಿಕ ಕ್ಷೇತ್ರದಲ್ಲಿ ಮಹಿಳಾ ಬದುಕಿನ ಸ್ಥಿತಿ ಪಿತೃ ಮೌಲ್ಯಗಳನ್ನು ಒಪ್ಪಿತ ಪಾಲಿಸಿ ಬದುಕುವ ಶೋಷನೀಯ ಸ್ಥಿತಿ ಒಂದಾದರೆ, ಸಾರ್ವಜನಿಕ ವಲಯದಲ್ಲಿ ಉದ್ಯೋಗ ಇತರೆ ಕ್ಷೇತ್ರದಲ್ಲಿ ಭಾಗಿಯಾಗುತ್ತಿರುವ ಮಹಿಳೆಯರು ಶಿಕ್ಷಿತ-ಅಶಿಕ್ಷಿತ ಎರಡೂ ವಿಭಾಗದ ಗುಂಪುಗಳು ಕೂಡ ತಮ್ಮ ಅಸ್ತಿತ್ವ ಶ್ರಮ ಆರ್ಥಿಕ ಬೆಳವಣಿಗೆಯ ಸಂಗತಿಗಳು, ಸಮಾಜದ ಅಭಿವೃದ್ಧಿಗೆ ಕಾರಣವಾಗಿರುವ ಅವರ ಜವಾಬ್ದಾರಿಯುತ ಭಾಗವಹಿಸುವಿಕೆ ಇವೆಲ್ಲವೂ ಕೂಡ ಗೌಣವಾಗಿರುವುದನ್ನು ಕಾಣಲಾಯಿತು. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಇಂದಿಗೂ ಲಿಂಗಸಂಬಂಧಿ ಸಮಸ್ಯೆಗಳು ಸೀಮಿತಗೊಳಿಸಿರುವ ಪ್ರಕ್ರಿಯೆ ಬಡತನದ ಮಹಿಳಾ ಕಾರಣ ಕಾನಸಂಟ್ರೈಜೇಷನ್ ಮಹಿಳಾ ಅವಶ್ಯಕತೆಗಳು ಎದ್ದು ಕಾಣುತ್ತಿವೆ.

ಅಭಿವೃದ್ಧಿ ಪ್ರಕ್ರಿಯೆ ವೈಧಾನಿಕತೆಯಲ್ಲಿ ಮತ್ತು ಸೈದ್ಧಾಂತಿಕತೆಯಲ್ಲಿ ತುಂಬಾ ಸೂಕ್ಷ್ಮವಾಗಿ ಬದಲಾವಣೆಗಳನ್ನು ಹೊಸ ಹೊಸ ದೃಷ್ಟಿಕೋನಗಳನ್ನು ಜಾರಿಗೊಳಿಸಿರುವ ಪ್ರಕ್ರಿಯೆ ನಾವು ಕಾಣಬಹುದು. ಸಿದ್ಧಾಂತಗಳಲ್ಲಿ ಮಹಿಳಾ ಸೂಕ್ಷ್ಮತೆಗಳನ್ನು ಹೊಸ ಹೊಸ ಯೋಜನೆಗಳನ್ನು

ಖಂಡಿತವಾಗಿ ಕಾಣಲಾಗುತ್ತಿದೆ. ಆದರೆ ಇಲ್ಲಿ ಮೂಲ ಸಮಸ್ಯೆ ಏನು? ಎಂಬುದನ್ನು ಅರಿಯಲು ಪ್ರಯತ್ನಿಸುತ್ತಿಲ್ಲ. ಮಹಿಳಾ ಸಮುದಾಯದ ಮೂಲ ಸಮಸ್ಯೆಯನ್ನು ಅಷ್ಟೆ ಸೂಕ್ಷ್ಮವಾಗಿ ಗ್ರಹಿಸಲು ವಿಫಲವಾಗಿದೆ. ಸೈದ್ಧಾಂತಿಕತೆ ತಾತ್ವಿಕತೆ ಎಷ್ಟೆ ವಿಶಿಷ್ಟ ಹುನ್ನಾರಗಳನ್ನು ಚಿಂತನೆಗಳನ್ನು ಮಾಡಿದರೂ ಕೂಡ ಸಮಸ್ಯೆಯ ಪರಿ ಇಂದಿಗೂ ಒಂದೇ ತೆರನಾಗಿದೆ. ಮಹಿಳಾ ಬದುಕು ಇಂದಿಗೂ ಅದೇ ಪುರುಷ ಮೌಲ್ಯಗಳಿಂದ ಬಂಧಿತವಾಗಿ ರೂಪಿತವಾಗುತ್ತಿದೆ. ಸಮಸ್ಯೆಯ ಆಳ ದಿನೇ ದಿನೇ ಹೆಚ್ಚುತ್ತಿದೆ. ಹೊಸ ಹೊಸ ಯೋಜನೆಗಳು ಆಳದ ಲೇಪನಗಳನ್ನು ಹೆಚ್ಚಿಸುತ್ತಲೇ ಇವೆ ಹೊರತಾಗಿ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುತ್ತಿಲ್ಲ.

ಅಭಿವೃದ್ಧಿ ಪ್ರಕ್ರಿಯೆಯನ್ನು ತಾತ್ವಿಕ ಚರ್ಚೆಯಲ್ಲಿ ಒಳಪಡಿಸುವ ಮುನ್ನ ಪ್ರಸ್ತುತ ಅಧ್ಯಯನವನ್ನು ಮೊದಲು ಐದು ಅಧ್ಯಯನಗಳಲ್ಲಿ ವಿಭಾಗಿಸಿಕೊಳ್ಳಲಾಯಿತು. ಮೊದಲ ಅಧ್ಯಾಯವು ಅಧ್ಯಯನದ ಉದ್ದೇಶ, ವ್ಯಾಪ್ತಿ, ಗುರಿಗಳನ್ನು ವಿವರಿಸುತ್ತಿದ್ದೂ, ಸಮಸ್ಯೆಯ ಹರವನ್ನು ಅರ್ಥೈಸುತ್ತದೆ. ಎರಡನೆ ಅಧ್ಯಾಯನದಲ್ಲಿ ಅಧ್ಯಯನದ ಮೂಲ ಬುನಾದಿಯಾದಂತ ಸಂಶೋಧನಾ ವೈಧಾನಿಕತೆ-ಸೈದ್ಧಾಂತಿಕತೆಯನ್ನು ವಿವರಿಸಲಾಗಿದೆ. ಕಾರಣ ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ವಿಶ್ಲೇಷಿಸಿ ಮೌಲ್ಯಮಾಪನಕ್ಕೆ ಒಳಪಡಿಸಲಾಗುತ್ತಿದೆ ಎಂಬುದನ್ನು ಮನಗಂಡು ಸಂಪೂರ್ಣವಾಗಿ ಎರಡನೆ ಅಧ್ಯಾಯದಲ್ಲಿ ಸ್ತ್ರೀವಾದಿ ಸಂಶೋಧನೆಯ ವಿಧಿ-ವಿಧಾನಗಳನ್ನು ಚರ್ಚಿಸಲಾಯಿತು. ಅಧ್ಯಯನಕ್ಕೆ ಪೂರಕವಾಗಿ ಇಲ್ಲಿ ಬಳಸಲಾಗುತ್ತಿರುವ ಪೂರಕ ವಿಧಾನಗಳು ಹಾಗೂ ಅವುಗಳಿಂದ ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳ ವಿಫಲತೆಗೆ ಕಾರಣವಾದ ಸಂಗತಿಗಳನ್ನು ಸೂಕ್ಷ್ಮವಾಗಿ ಗ್ರಹಿಸಲು ಸಾಧ್ಯವಾಗುತ್ತಿದೆ ಎಂಬುದನ್ನು ಚರ್ಚೆ ಮಾಡಲಾಯಿತು. ಈ ಮೂಲಕ ಸಂಪೂರ್ಣ ಅಧ್ಯಯನದಲ್ಲಿ ಹಂತ ಹಂತವಾಗಿ ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯ ವಿಧಿ ವಿಧಾನಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಯಿತು. ಮೌಲ್ಯಮಾಪನದ ಸಂದರ್ಭದಲ್ಲಿ ವಿಶ್ಲೇಷಣಾ ಸಂದರ್ಭದಲ್ಲಿಯೂ ಕೂಡ ಅಧ್ಯಯನದ ಮಿತಿಗಳನ್ನು ಅನುಸರಿಸಲು ಸಹಾಯಕವಾಯಿತು.

ಅಧ್ಯಯನದ ಮುಖ್ಯ ಭಾಗವಾಗಿರುವ ಎರಡನೆ ಅಧ್ಯಾಯ 'ಅಭಿವೃದ್ಧಿ' ಪರಿಕಲ್ಪನೆಯ ತಾತ್ವಿಕ ಹರವನ್ನು ಚರ್ಚೆ ಮಾಡಲಾಗಿದೆ. ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮೂಲವಾಗಿರುವ ಅಭಿವೃದ್ಧಿ ತಾತ್ವಿಕತೆಯ ಸ್ವರೂಪ ಬೆಳವಣಿಗೆಯ ಚರ್ಚೆಯ ಸಂದರ್ಭದಲ್ಲಿ ಮಹಿಳಾ ಸಂಗತಿಗಳು ಮರೆಯಾಗಿರುವ ಪರಿಯನ್ನು ಗ್ರಹಿಸಲು ಸಾಧ್ಯವಾಯಿತು. ಈ ಮೂಳಕ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಇರುವ ಲೈಂಗಿಕತಾವಾದದ ಸಂಗತಿಗಳು ಇಂದು ನಿನ್ನೆಯದಲ್ಲ ಆರಂಭದಿಂದಲೂ ಮಹಿಳಾ ಗುಂಪು ಸಾರ್ವತ್ರಿಕವಾಗಿ ಪರಿಗಣನೆಗೊಂಡರೂ ನಿರ್ಲಕ್ಷಿತ

ಗೊಂಡಿರುವ ಸಂಗತಿ ಭಾಸವಾಯಿತು. ಅಭಿವೃದ್ಧಿ ಪರಿಕಲ್ಪನೆಯಲ್ಲಿ ಸಾಮಾಜಿಕ ಸಮಸ್ಯೆಗಳು, ಸಾಮಾಜಿಕ ಬದಲಾವಣೆಗಳನ್ನು ಪರಿಗಣನೆಗೆ ತೆಗೆದುಕೊಂಡಿದ್ದರೂ ಕೂಡ ಮಹಿಳಾ ಬದುಕಿಗೆ ವಿಷಯಗಳ ನಿರ್ಲಕ್ಷಿತಗೊಂಡಿರುವ ಸಂಗತಿಗಳು ಸಿದ್ಧಾಂತಗಳಲ್ಲೂ ಬೆಳೆದು ಬಂದಿರುವುದರಿಂದ ಇಂದಿಗೂ ಕೂಡ ಮಹಿಳಾ ನಿಶ್ಚಿತ ಅಭಿವೃದ್ಧಿ ಸಿದ್ಧಾಂತಗಳು ಜಾರಿಗೆ ಬಂದರೂ ಕೂಡ ಸಮಸ್ಯೆಗಳ ಆಳವನ್ನು ಅರಿಯಲು ಸಾಧ್ಯವಾಗುತ್ತಿಲ್ಲ ಎಂಬುದು ತಿಳಿಯಲಾಯಿತು. ಹೀಗಾಗಿಯೇ ಬದಲಾಗುತ್ತಿರುವ ಮಹಿಳಾ ಅಭಿವೃದ್ಧಿ ಪ್ರಕ್ರಿಯೇ ಸೈದ್ಧಾಂತಿಕತೆಯ ದಾರಿಯಲ್ಲಿ ಆಳದಲ್ಲಿ ಮಹಿಳಾ ಸಮಸ್ಯೆಗಳು ಅದೃಶ್ಯಗೊಂಡು ಬೆಳೆದು ಬರುತ್ತಿವೆ. ಮೂರನೇ ಅಧ್ಯಾಯದಲ್ಲಿ ತಾತ್ವಿಕ ಚರ್ಚೆಯ ಸಂದರ್ಭದಲ್ಲಿ ಅಭಿವೃದ್ಧಿ ಯೋಜನೆಗಳ ವೈಧಾನಿಕತೆ ಮತ್ತು ಸೈದ್ಧಾಂತಿಕತೆಯ ತೊಡಕುಗಳನ್ನು ಸ್ತ್ರೀವಾದಿ ಮತ್ತು ಮಹಿಳಾ ಹೋರಾಟಗಳು ಗ್ರಹಿಸಿ ಹೋರಾಟ ನಡೆಸಿದ್ದರೂ ಕೂಡ ಇಂದಿಗೂ ಯೋಜನ ವಿಧಾನದಲ್ಲಿ ಜಾರಿಗೊಳಿಸಲಾಗುತ್ತಿಲ್ಲ ಎಂಬ ಸಂಗತಿ ಅರಿವಿಗೆ ಬಂದಿತು.

ಮಹಿಳಾ ಬದುಕಿನಲ್ಲಿನ ಅಂಧಕಾರವನ್ನು ಹೊಗ್ಗೂಡಿಸಿ ಬೆಳಕಿನತ್ತ ತರುವ ಎಲ್ಲ ಪಿತೃ ಮೌಲ್ಯಗಳಿಂದ ಬಂಧಮುಕ್ತಗೊಳಿಸುವ ಮಹಾದಾಸೆಯನ್ನು ಹೊತ್ತು ಬಂದಿರುವಂತ ಮಹಿಳ ಹೋರಾಟಗಳು ೬೦, ೭೦ರ ದಶಕದಿಂದಲೂ ಮಹಿಳಾ ಅಭಿವೃದ್ಧಿಗೆ ಪ್ರಬಲವಾಗಿಯೇ ಶ್ರಮಿಸುತ್ತಿವೆ. ಅಂದಿನಿಂದ ಇಂದಿನವರೆಗೂ ಮಹಿಳಾ ಪರ ಚಿಂತನೆಗಳನ್ನು ಪರಿ ಪರಿಯಾಗಿ ಕಟ್ಟಿಕೊಡುತ್ತಿದ್ದರೂ ಕೂಡ ಮಹಿಳ ಬದುಕಿನ ಅಭಿವೃದ್ಧಿ ಪ್ರಕ್ರಿಯೆಯೇ ವೈಫಲ್ಯತೆಗೆ ಕಾರಣ ಸಿದ್ಧಾಂತಗಳು ಯೋಜನೆಗಳು ಕಾರ್ಯಗತಗೊಳ್ಳುವಲ್ಲಿ ವಿಫಲವಾಗುತ್ತಿರುವುದು ೯೦ರ ದಶಕದಲ್ಲಿ ಮೂಡಿಬಂದಂತಹ ಹಲವಾರು ಮಹಿಳಾ ಪರ ಹೋರಾಟಗಳು ಅಭಿವೃದ್ಧಿ ತಾತ್ವಿಕ ಚೌಕಟ್ಟಿನಲ್ಲಿ ಹೊಸ ಬದಲಾವಣೆಯನ್ನು ತಂದವು. ೧೯೬೯ರಲ್ಲಿ ಪ್ರಕಟಿತವಾದ ಪಿಯರಸನ್ ವರದಿಯು ಅಭಿವೃದ್ಧಿ ತಾತ್ವಿಕತೆಯಲ್ಲಿ ಮಹಿಳಾ ಸಂಗತಿಗಳು ಮತ್ತು ಸಮಸ್ಯೆಗಳ ಚರ್ಚೆಯನ್ನು ಮಾಡದಿರುವುದನ್ನು ಗಂಭೀರವಾಗಿ ಗುರುತಿಸಿಕೊಟ್ಟರು. ಅದಾದ ನಂತರ ವಿಸ್ತರ ಬೋಷಪರವರು ತಮ್ಮ "ವಿಮೆನ್ಸ್ ರೋನ ಇನ್ ಎಕಾನೋಮಿಕ್ ಡೆವಲಪ್‌ಮೆಂಟ್" ಎಂಬ ಪುಸ್ತಕದಲ್ಲಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳಾ ಸಂಬಂಧಿತ ಯೋಜನೆಗಳ ಮಹತ್ವ-ವಿಧಾನಗಳನ್ನು ಚರ್ಚಿಸಿದರು.

ತದನಂತರ ಮಹಿಳಾ ಚಳುವಳಿಗಳ ಪರಿಣಮವಾಗಿ ಹಾಗೂ ಮಹಿಳಾ ಪರ ಚಿಂತಕರ ಪ್ರಭಾವದಿಂದ ಅಭಿವೃದ್ಧಿ ತಾತ್ವಿಕತೆಯಲ್ಲಿ ಮತ್ತು ಯೋಜನಾವಿಧಾನದಲ್ಲಿ ಮಹಿಳಾ ಸೂಕ್ಷ್ಮತೆ, ಲಿಂಗ ಸಂವೇದನಾ ವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ೧೯೭೦ ರಿಂದ ೯೦ರ ದಶಕಗಳಲ್ಲಿ ಮಹಿಳಾ ದಶಕಗಳಲ್ಲಿ ಹಲವಾರು ಲಿಂಗ ಸಂವೇದನಾತ್ಮಕವಾದಂತ ಅಭಿವೃದ್ಧಿ ಸಿದ್ಧಾಂತಗಳು ಸಂಶೋಧನೆಗಳು ಮೂಡಿಬಂದವು. ಇವುಗಳ ಫಲಪ್ರಧವಾಗಿ ಅಭಿವೃದ್ಧಿಯಲ್ಲಿನ ಮಹಿಳ

ಸಮಸ್ಯೆಗಳನ್ನು ಗ್ರಹಿಸಲು ಅನುಕೂಲಕರವಾಯಿತು. ಈ ಸಂಗತಿಗಳನ್ನು ಮೂರನೆ ಅಧ್ಯಾಯದಲ್ಲಿ ಚರ್ಚೆ ಮಾಡಿರುವುದರಿಂದ ಅಭಿವೃದ್ಧಿ ಯೋಜನೆಗಳಲ್ಲಿ ಮೂಡಿ ಬರಬೇಕಾದ ದೃಷ್ಟಿಕೋನಗಳನ್ನು, ಕಂಡುಹಿಡಿಯಲು ಹಾಗೂ ಅಭಿವೃದ್ಧಿ ವೈಧನಿಕತೆಯಲ್ಲಿರುವಂತ ಲೈಂಗಿಕತಾ ಸಿದ್ಧಾಂತದ ಎಳೆಗಳನ್ನು ಸಮರ್ಥವಾಗಿ ಗುರುತಿಸಲು ಸಾಧ್ಯವಾಯಿತು. ಮೂರನೆ ಅಧ್ಯಯನದ ಕೊನೆಯಲ್ಲಿ ಅಭಿವೃದ್ಧಿ ತಾತ್ವಿಕತೆಯಲ್ಲಿ ಬರಬೇಕಾದ ಬದಲಾವಣೆಗಳನ್ನು ಚರ್ಚಿಸಲಾಗಿದೆ. ಹಾಗೂ ಈ ಮೂಲಕ ನಾಲ್ಕನೆ ಅಧ್ಯಾಯದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ವಿಶ್ಲೇಷಣೆ ಮಾಡಲು ಸಾಧ್ಯವಾಯಿತು.

೧೯೭೦ರ ದಶಕದಿಂದ ಇಲ್ಲಿಯವರೆಗೆ ಅಭಿವೃದ್ಧಿ ತಾತ್ವಿಕತೆಯ ಚರಿತ್ರೆಯನ್ನು ವಿಶೇಷವಾಗಿ ಅಭ್ಯಸಿಸಲಾಗಿದ್ದು, ಅದರಿಂದಲೇ ಮಹಿಳೆ ಮತ್ತು ಮಹಿಳಾ ನಿಶ್ಚಿತ ಸೈದ್ಧಾಂತಿಕತೆಯ ಪ್ರಕ್ರಿಯೆಯ ಅಭಿವೃದ್ಧಿಯಲ್ಲಿ ವಿಶೇಷವಾಗಿ ಬೆಳೆದುಬಂದಿತು. ಈ ಅಂಶವನ್ನು ಗಂಭೀರವಾಗಿ ಪರಿಗಣಿಸಿ ನಾಲ್ಕನೆ ಅಧ್ಯಾಯದಲ್ಲಿ ಪಂಚವಾರ್ಷಿಕ ಯೋಜನೆಗಳಲ್ಲಿ ಜಾರಿಗೊಂಡ ಮಹಿಳ ಸಂಬಂಧಿತ ಸರ್ಕಾರಿ ಯೋಜನೆಗಳ ಲಿಂಗತ್ವ ಮೌಲ್ಯಮಾಪನಾತ್ಮಕ ಅಧ್ಯಯನ ಮಾಡಲು ಅನುಕೂಲಕರ ವಾಯಿತು. ಹಾಗೂ ಅಭಿವೃದ್ಧಿ ತಾತ್ವಿಕತೆಯಿಂದ, ಮೂಡಿಬಂದ ಸರ್ಕಾರಿ ಮಹಿಳಾ ಯೋಜನೆಗಳು ಕೇವಲ ತಾತ್ವಿಕತೆಯಲ್ಲಿ ಸಮಸ್ಯೆಗಳಿಲ್ಲ, ಯೋಜನೆಗಳ ಕಾರ್ಯ ವಿಧಾನಗಳಲ್ಲಿ ಕಾರ್ಯರೂಪಕ್ಕೆ ತರುವ ಹುನ್ನಾರಗಳಲ್ಲಿಯೂ ಸಮಸ್ಯೆಗಳಿವೆ. ಅಲ್ಲಿಯೇ ಲೈಂಗಿಕತಾ ಸಿದ್ಧಾಂತದ ಮೌಲ್ಯಗಳೂ ತಾಂಡವವಾಡುತ್ತಿವೆ. ಹಾಗಾಗಿ ಮಹಿಳಾ ಸಮಸ್ಯೆಗಳು ಇಂದಿಗೂ ಸಮಸ್ಯೆಗಳಾಗಿಯೇ ಇರುವ ಸಂಗತಿಯನ್ನು ಸಂಶೋಧಿಸಲು ಸಾಧ್ಯವಾಯಿತು.

ಸರ್ಕಾರಿ ಮಹಿಳಾ ಅಭಿವೃದ್ಧಿಗಳನ್ನು ಸಮಾಜದಲ್ಲಿ ಜಾರಿಗೊಳಿಸುತ್ತಿದ್ದರೂ ಕೂಡ ಮಹಿಳಾ ಸಮಸ್ಯೆಗಳು ಗಣನೀಯವಾಗಿ ಏರುತ್ತಲೇ ಇವೆ. ಆಮೆ ಗತಿಯಲ್ಲಿ ಅಭಿವೃದ್ಧಿಯ ಪರಿಣಾಮಗಳು ಕಂಡುಬಂದರೂ, ಮೊಲದ ವೇಗದಲ್ಲಿ ಸಮಸ್ಯೆಗಳು ಬೆಳೆಯುತ್ತಿವೆ. ಸಮಸ್ಯೆಗಳಿಗೆ ತಕ್ಕ ಪರಿಹಾರಗಳು ಅತ್ಯವಶ್ಯಕ. ಅದೇ ನಿಟ್ಟಿನಲಿ ತರ್ಕಕ್ಕೆ ಒಳಪಡಿಸಿದಾಗ ಕಂಡು ಬಂದಂತಹ ಸಂಗತಿ. ಸಮಸ್ಯೆ ಒಂದೇ ಸ್ತರದಲ್ಲಿ ಇಲ್ಲ. ಪ್ರತಿ ಹಂತದಲ್ಲಿಯೂ ಇದೆ ಎಂಬುದು ಅರಿವಾಯಿತು. ಈ ಕಾರಣವನ್ನು ಮುಂದಿಟ್ಟುಕೊಂಡ ಅಧ್ಯಯನದ ಪರಿಕಲ್ಪನೆಯನ್ನು ರಚಿಸಿಕೊಳ್ಳಲಾಯಿತು. ತದನಂತರ ಈ ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಸಮಸ್ಯೆ ಪ್ರತಿ ಯೋಜನೆಗಳಲ್ಲೂ ಇದ್ದರೂ, ಎಲ್ಲವನ್ನು ಅಧ್ಯಯನ ಮಾಡುವುದರ ಬದಲಾಗಿ, ಯಾವುದಾದರೂ ಒಂದು ಯೋಜನೆಯನ್ನು ಸಂಕ್ಷಿಪ್ತವಾಗಿ ಚರ್ಚೆಗೆ ಒಳಪಡಿಸುವಲ್ಲಿ ನಿರ್ಧರಿಸಿ 'ಎನ್‌ಎಸ್‌ವಿ' ಬಗೆಗೆ ಅಧ್ಯಯನ ಮಾಡಲು ಯೋಚಿಸಲಾಯಿತು. ಅಧ್ಯಯನಕ್ಕೆ ಸಂಬಂಧಿಸಿದ ತಜ್ಞರನ್ನು ಸಂಪರ್ಕಿಸಿದಾಗ ಅವರ ಸಲಹೆಯಂತೆ ಪ್ರತಿನಿತ್ಯವೂ ಸಂಬಂಧ ಹೊಂದಿದ ಮಹಿಳೆ

ಮತ್ತು ಆರೋಗ್ಯದ ಬಗೆಗೆ ಅದರಲ್ಲಿ ನಿರ್ಲಕ್ಷಿತಗೊಂಡಂತಹ ಹಾಗೂ ಅತಿ ಸಾಮಾನ್ಯೀಕರಣದ ದೃಷ್ಟಿಯಲ್ಲಿ ಮಹಿಳೆಯರು ಎಲ್ಲಿ ಕುರುಡು ಫಲಾನುಭವಿಗಳಾಗಿ ದ್ದಾರೆ ಎಂಬುದನ್ನು ಚಿಂತಿಸಲಾಯಿತು. ತದನಂತರ ಹಲವಾರು ಅಭಿಪ್ರಾಯಗಳ ತಳಹದಿಯಲ್ಲಿ ಮಹಿಳೆ ಮತ್ತು ಸರ್ಕಾರಿ ಯೋಜನೆಗಳ ನಡುವಿನ ಸಮಸ್ಯೆಯನ್ನು ಸೂಕ್ಷ್ಮವಾಗಿ ಚಿಂತನೆಗೆ ಒಳಪಡಿಸಿದಾಗ ಯೋಜನಾ ವಿಧನ, ಯೋಜನಾ ಕಾರ್ಯವೈಖರಿ, ಮೌಲ್ಯ ಮಾಪನಗಳನ್ನು ಪ್ರಮುಖ ಅಧ್ಯಯನ ಕ್ಷೇತ್ರವಾಗಿ ಗುರುತಿಸಿಕೊಳ್ಳಲಾಯಿತು.

ತದನಂತರ ಅಧ್ಯಯನದ ವಿಶ್ಲೇಷಣೆಗೆ ಅಧ್ಯಯನವನ್ನು ವಿಸ್ತ್ರುತವಾಗಿ ಚರ್ಚೆಗೆ ಒಳಪಡಿಸಲಾಯಿತು. ಅಧ್ಯಯನದ ಉದ್ದೇಶ ವ್ಯಾಪ್ತಿ ಸಂಬಂಧಿಸಿದಂತೆ ಮೂರು ಭಾಗಗಳಾಗಿ ವಿಂಗಡಿಸಲಾಯಿತು. ಅಧ್ಯಯನದ ತಾತ್ವಿಕತೆ, ಮೌಲ್ಯಮಾಪನ ವಿಶ್ಲೇಷಣೆ, ಮರುಮೌಲ್ಯಮಾಪನ ಅಧ್ಯಯನ.

ಮೊದಲನೆ ಭಾಗದಲ್ಲಿ 'ಅಭಿವೃದ್ಧಿ' ಪರಿಕಲ್ಪನೆಯ ಬಗೆಗೆ ವಿಸ್ತೃತವಾಗಿ ಚಿಂತನೆಗೆ ಒಳಪಡಿಸಿದ್ದೂ, ಅಭಿವೃದ್ಧಿ ಸೈದ್ಧಾಂತಿಕತೆಯ ರಚನೆ, ಬೆಳೆದು ಬಂದ ಬಗ್ಗೆ ಚರ್ಚಿಸಲಾಗಿದೆ. ಅಭಿವೃದ್ಧಿ, ಅಭಿವೃದ್ದಿ ವ್ಯಾಖ್ಯಾನ, ಸಿದ್ಧಾಂತ ಬೆಳೆದುಬಂದ ಬಗೆ, ಮಹಿಳೆ ಮತ್ತು ಅಭಿವೃದ್ಧಿಯ ಚಿಂತನೆಗಳನ್ನು ಚರ್ಚಿಸಲಾಗಿದೆ. ಕ್ಷೇತ್ರಕಾರ್ಯದ ಮೂಲಕ ಮತ್ತು ಅಧ್ಯಯನದ ಮೂಲಕ ತಿಳಿದುಕೊಂಡಂತೆ ಸಂಗತಿ ಎಂದರೆ, 'ಅಭಿವೃದ್ಧಿ' ಪರಿಕಲ್ಪನೆಯ ಬಗೆಗೆ ಇರುವ ಚಿಂತನೆಗಳೇ ಸಮುದಾಯದಲ್ಲಿ ಇಲ್ಲ. ಜೊತೆಗೆ ಯೋಜನಾ ಸಿದ್ಧಾಂತಗಳನ್ನು ರೂಪಿಸುವವರಲ್ಲಿಯೂ ಈ ಬಗೆಗಿನ ಚಿಂತನೆಗಳ ಆಳ ತುಂಬ ಸಂಕುಚಿತ ಮಟ್ಟದಲ್ಲಿದೆ.

ಅಭಿವೃದ್ಧಿ 'ಪರಿಕಲ್ಪನೆ' ಇಂದಿಗೂ ಹೆಚ್ಚಿನ ಮಟ್ಟದಲ್ಲಿ ಆರ್ಥಿಕ ಅಭಿವೃದ್ಧಿಗೇ ಸೀಮಿತಗೊಂಡಿರುವುದು. ಇನ್ನೂ ಉಳಿದ ಫಲಿತಾಂಶ ಸಾಮಾಜಿಕ ಅಭಿವೃದ್ಧಿ ಎಂದಾಗ ನೀರು, ಬೆಳಕು, ಚೆರಂಡಿ ಇಂತಹ ಸೌಕರ್ಯಗಳ ಬಗೆಗೆ ಚಿಂತೆಗೆ ಜಾರಿಹೋಗುತ್ತಿದೆ. ಹೊರತಾಗಿ ಅಲ್ಲಿನ ಅಪ್ರತ್ಯಕ್ಷ ಸಮಸ್ಯೆಗಳನ್ನು ಯಾರೂ ಗಂಭೀರವಾಗಿ ಪರಿಗಣಿಸಿಲ್ಲ ಎಂಬುದು ತಿಳಿದುಬಂದಿತು. ಅಭಿವೃದ್ಧಿ ಯೋಜನಾ ವಿಧಾನವು ಸಮಾಜದ ಪ್ರತಿ ಸಮಸ್ಯೆಗಳನ್ನು ಗಂಭೀರವಾಗಿ ಗುರುತಿಸಬೇಕೇ ಹೊರತಾಗಿ ಲಿಂಗ ಸಮನತೆಯ ಕೊರತೆ ಗೋಚರವಾಗುತ್ತದೆ.

ಸಂಪೂರ್ಣ ಅಭಿವೃದ್ದಿ ಅಧ್ಯಯನದ ತಾತ್ವಿಕತೆಯ ಅಭಿವೃದ್ಧಿ ಸಂಕಥನವನ್ನು ಅವಲೋಕಿಸುತ್ತಾ ಬಂದರೆ ತುಂಬಾ ಶ್ರೀಮಂತ ಹರವನ್ನು ಬಳಸಿ ಬಂದಿದೆಯಾದರೂ ಮಹಿಳೆಯರನ್ನು ಸ್ಪಂದಿಸುವಲ್ಲಿ, ಗುರುತಿಸುವಲ್ಲಿ ಸೋತಿದೆ ಎನ್ನಬಹುದು. ಅಭಿವೃದ್ಧಿ ಭಾಗದಲ್ಲಿ ನೋಡುವುದಾದರೆ ಸರಳತೆ, ಆಧುನಿಕತೆ, ನೀರಪೇಕ್ಷತೆಗೆ ಸಾಂಪ್ರದಾಯಿಕತೆಗೆ ಪಾಶ್ಚಾತ್ಯ ಚಿಂತನೆಗಳಿಗೆ

ಜಾಗತಿಕ ಸಿದ್ಧಾಂತಗಳಿಗೆ, ಜಾಗತಿಕ ಮಾರುಕಟ್ಟೆ ಇತರೆಗಳಿಗೆ ಹೆಚ್ಚು ಒತ್ತು ಕೊಡಲಾಗಿದೆ. ಮಹಿಳೆ ಮತ್ತು ಮಹಿಳಾ ಅಭಿವೃದ್ಧಿಗೆ ಸಂಬಂಧಿಸಿದಂತೆಯೂ ಈ ಮೇಲಿನ ಚಿಂತನೆಗಳನ್ನು ಅಳವಡಿಸಿದ್ದು ಲಿಂಗಸೂಕ್ಷ್ಮತೆ, ಲಿಂಗ ಸಮನ್ಯಾಯ, ಲಿಂಗತ್ವ ಸೂಕ್ಷ್ಮತೆ ಬಗೆಗೆ ಮಹಿಳೆಯ ಅನುಭವಕ್ಕೆ ಅಳವಾದಂತಹ ಅಧ್ಯಯನ ಮಾಡುವ ಕ್ರಮ ಬೆಳೆದು ಬಂದಿಲ್ಲ.

ಮಹಿಳಾ ಅಭಿವೃದ್ಧಿಯ ಪರಿಧಿ

ಅಭಿವೃದ್ಧಿ ಸಿದ್ಧಾಂತಗಳಿಗೂ, ಮಹಿಳಾ ಅಭಿವೃದ್ಧಿಗೂ ಮಧ್ಯದಲ್ಲಿ ಒಂದು ತೆಳುವಾದಂತಹ ಪರಿಧಿಯನ್ನು ಇಲ್ಲಿ ಕಾಣಲಾಗುತ್ತದೆ. ನಯವಾದ, ತೆಳುವಾದಂತಹ ಪರಿಧಿ, ಅದನ್ನು ಸಂದರ್ಭ ಸಮಯಕ್ಕೆ ತಕ್ಕಂತೆ ಆಯ್ಕೆ ಮಾಡಿಕೊಳ್ಳಲಾಯಿತು. ರಾಜಕಾರಣದ ತೆಳು ಪರಿಧಿ ಸಾಮಾಜಿಕ ಸ್ತರದಲ್ಲಿ ಚಿಂತಕರಲ್ಲಿ ಕಾಣಲಾಗುತ್ತಿದೆ. ಮಹಿಳೆಯರ ಸಣ್ಣ ಸಣ್ಣ ಅನುಭವಗಳು, ಸಮಸ್ಯೆಗಳು ಗಂಭೀರವಾಗಿ ಗುರುತಿಸದಿರುವುದು ಪರಿಧಿಗಳ ಅಂತರದಲ್ಲಿ ಸಾಮಾನ್ಯ ಸ್ಥಿತಿಗತಿಗಳು ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಸಂಗತಿಗಳಲ್ಲಿ ಗಂಭೀರವಾಗಿ ಮಹಿಳೆಯರು ಅನ್ಯಾಯಕ್ಕೆ ಒಳಗಾಗುತ್ತಿದ್ದರು. ಈ ಸಂಗತಿಗಳಲ್ಲಿ ತಿಳಿದು ಬಂದಿರುವ ಮತ್ತೊಂದು ಸಂಗತಿ ಎಂದರೆ "ಅಭಿವೃದ್ಧಿಯಲಿ ಪ್ರತಿಬಿಂಬಗೊಳ್ಳುತ್ತಿರುವ ಮಹಿಳೆಯರ ಪಾತ್ರ" ಎಂಬಂತಹ ಪ್ರತಿಬಿಂಬ ಅಭಿವೃದ್ಧಿಯಲ್ಲಿ ಬೆಳೆದು ಬರುತ್ತಿದೆ. ಎಂದರೆ ಮಹಿಳೆಯರು ಅಭಿವೃದ್ಧಿ ವಾಹಕರಾಗಿ, 'ಪಾಲಿಸಿ ಮೇಕರ್'ಗಳಾಗಿ, ಉದ್ಯಮಿಗಳಾಗಿ ಹೊರಬರಬೇಕು ಎನ್ನುವ ಸಂಗತಿಗಳು ಕಂಡುಬರುತ್ತವೆ. ಯೋಜನೆಗಳು ಬರುತ್ತಿವೆ, ಆದರೆ ಪರಿಧಿಯ ಅಂತರದಲ್ಲಿ ಅವರು ಮತ್ತೆ ಅವರಿಗೆ ಅವುಗಳನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಒಟ್ಟಿನಲ್ಲಿ ಅಭಿವೃದ್ಧಿಯು ಹೊಸ ಸಿದ್ದಾಂತಗಳನ್ನು ಬೆಳೆಸುವುದಕ್ಕಿಂತ ಬದಲಾಗಿ ಇರುವಂತಹ ಅಭಿವೃದ್ಧಿ ಚಿಂತನೆಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಆಳವಾಗಿ ಸಂಶೋಧಗಳನ್ನು ಮಾಡಬೇಕು ಎಂದೆನಿಸುತ್ತದೆ.

ತಾತ್ವಿಕ ಚೌಕಟ್ಟನ್ನು ಒಳಗೊಂಡು ವಿವಿಧ ಅಭಿವೃದ್ಧಿ ಸಿದ್ಧಾಂತಗಳನ್ನು ಮತ್ತು ಸರ್ಕಾರಿ ಯೋಜನೆಗಳನ್ನು(ಅವುಗಳಲ್ಲಿ ಮಹಿಳಾ ಸಂಬಂಧಿತ ಕಾರ್ಯಕ್ರಮಗಳು) ಅಧ್ಯಯನಕ್ಕೆ ಒಳಪಡಿಸಿದಾಗ ಅಲ್ಲಿನ ಸಮಸ್ಯೆ, ಲಿಂಗತಾರತಮ್ಯ, ಲಿಂಗ ಅಸೂಕ್ಷ್ಮತೆಯ ಸಂಗತಿಗಳು ತಿಳಿದುಬಂದವು.

ಅಂತಿಮವಾಗಿ ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು ಕಾರ್ಯವಿಧಾನದಲ್ಲಿ ಯೋಜನೆಗಳು, ಕಾರ್ಯಕ್ರಮಗಳು ಸಮರ್ಪಕವಾಗಿ ತಲುಪುತ್ತಿಲ್ಲ. ಮೊದಲನೆಯದಾಗಿ ಸಮಾಜದಲ್ಲಿ ಮಹಿಳಾ ವಿಷಯಗಳು, ಅಂಚಿಗೆ ದೂಡಲ್ಪಟ್ಟಿವೆ. ಪ್ರತಿ ವ್ಯಕ್ತಿಯ ಸಮಸ್ಯೆಗಳು ಶ್ರೇಣಿಕೃತ ವಿಂಗಡಣೆಗಳ ಮೇರೆಗೆ ಯಾವ ನೆಲೆಯಲ್ಲಿ ಅಂಚಿನ ಪರಿಧಿಯಲ್ಲಿ ಗುರುತಿಸಿದ್ದಾರೆಯೋ ಅ ನೆಲೆಯಲ್ಲಿ ಸಮಸ್ಯೆಗಳನ್ನು ಗುರುತಿಸಿ, ಯೋಜನೆಗಳನ್ನು ರೂಪಿಸಿ ಪರಿಹರಿಸಬೇಕು. ವೈಯಕ್ತಿಕ ಸಮಸ್ಯೆಗಳನ್ನು

ಪ್ರಜಾಪ್ರಭುತ್ವವಾದ ಸಂಗತಿಗಳಲ್ಲಿ, ರಾಜಕೀಯ ಕ್ಷೇತ್ರದಲ್ಲಿ ಗುರುತಿಸದೇ ಇರುವುದು. ಉದಾ: ಮಹಿಳೆಯರು ನಿರ್ಧಾರ ತೆಗೆದುಕೊಳ್ಳುವಲ್ಲಿ ಬಲಶಾಲಿಗಳಲ್ಲ ಎನ್ನುವ ಸಂಗತಿ ವೈಯಕ್ತಿಕವಗಿ ಗುರುತಿಸಲಾಗುತ್ತದೆ. ಆದರೆ ಅದು ಮಹಿಳಾ ಸಮಸ್ಯೆಯಲ್ಲ, ಸಮಾಜೀಕರಣದ ಸಮಸ್ಯೆ. ಇಂತಹ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ಸಮಾಜದಲ್ಲಿ ಅರಿತವಾದ ಯೋಜನೆಗಳು ತಲುಪುತ್ತವೆ ಎನ್ನಬಹುದು. ಮಹಿಳಾ ಅಭಿವೃದ್ದಿ ಯೋಜನೆಗಳನ್ನು ಕಾರ್ಯಗತ ಗೊಳಿಸುವುದು, ಮೌಲ್ಯೀಕರಣ ಮಾಡುವಲ್ಲಿ ಸಾಮಾಜಿಕ ಜನ ಜೀವನ, ಅವರ ಪ್ರಾಮುಖ್ಯತೆ, ಯೋಗ್ಯತೆಗೆ ಅನುಸಾರವಾಗಿ ವಿಸ್ತರಿಸಿ, ಮೌಲ್ಯಮಾಪನ ಮಾಡಬೇಕಾಗಿದೆ. ಆಂತರಿಕ ಸಂಗತಿಗಳನ್ನು ಒಳಗೊಂಡು ಮತ್ತು ಬಾಹ್ಯ ಸಮಸ್ಯೆಗಳನ್ನು ಪರಿಶೀಲಿಸಿ ಮಹಿಳಾ ಯೋಜನೆಗಳು ರೂಪು ಗೊಳ್ಳಬೇಕು. ಹಾಗೂ ಮೌಲ್ಯಮಾಪನಕ್ಕೆ ಒಳಗಾಗಬೇಕು. ಇವೆಲ್ಲವುಗಳು ಮಹಿಳಾ ಬದುಕಿನ ವೈಯಕ್ತಿಕ ಅನುಭವ ಹಂಚಿಕೆಯಿಂದಲೇ ಸಾಧ್ಯ. ಮಹಿಳಾ ಅನುಭವದ ಮೂಲಕವೇ ಬದಲಾವಣೆ ತರಬೇಕಾಗಿದೆ. 'ಅಭಿವೃದ್ಧಿ' ಪ್ರಕ್ರಿಯೆ, ಅನುಭವಾತ್ಮಕತೆಯು ತಳಹದಿಯಲ್ಲಿಯೇ ಸಾಗಬೇಕಾಗಿದೆ.

ಅಭಿವೃದ್ಧಿ ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿಸ್ತಾರವಾಗಿ ಅಧ್ಯಯನ ಮಾಡಲು ಅಧ್ಯಯನದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಮೌಲ್ಯಮಾಪನ ಮಾಡಲಾಯಿತು. ಮೌಲ್ಯಮಾಪನ ಸಂದರ್ಭದಲ್ಲಿ ಬಹುದೊಡ್ಡ ವಿಸ್ತಾರವಾದ ಹರವನ್ನು ಹೊಂದಿರುವ ಪಂಚವಾರ್ಷಿಕ ಯೋಜನೆಗಳಲ್ಲಿ ಮಹಿಳಾ ಯೋಜನೆಗಳ ಭಾಗವಾಗಿ ಶ್ರೀಮಂತಿಕೆಯಿಂದ ಮರೆಯುತ್ತಿದ್ದರೂ ಅವುಗಳನ್ನು ಬಳಸಿ ಅಭಿವೃದ್ಧಿ ಹೊಂದಲಾಗದಂತ ಸ್ಥಿತಿಯನ್ನೆ ಹೊಂದಿರುವುದನ್ನು ಕಾಣಲಾಗುತ್ತಿವೆ. ಮಹಿಳೆ ಮತ್ತು ಪುರುಷರ ಬದುಕಿಗೆ ಪೂರಕವಾಗಿ ನಿಲ್ಲಬೇಕಾದಂತ ಪಂಚವಾರ್ಷಿಕ ಯೋಜನೆಗಳೂ ಮಹಿಎಯ ಆಶಾದಾಯಕ ಸಂಗತಿಗಳಾದರೂ ಸಮಾಜಿಕ ಮೌಲ್ಯ ಅತಂತ್ರತೆ, ಮಹಿಳಾ ಅಭದ್ರತೆ, ಅನಕ್ಷರಸ್ಥತೆ, ಮಹಿಳಾ ಬದುಕಿನಾಚೆ ಇರುವ ಪುರುಷ ಮೌಲ್ಯದ ಪರಿಧಿ ಅವರನ್ನು ತಡೆಹಿಡಿಯುವಲ್ಲೇ ಇತ್ತು, ಇದೆ ಎಂಬುದು ತಿಳಿಯಲಾಯಿತು. ಲೋಕ ವ್ಯವಹಾರದ ಮಧ್ಯದಲ್ಲಿ ಪುರುಷ ಸಮುದಾಯಕ್ಕೆ ಲಾಭದಾಯಕವಾದ ಯೋಜನೆಗಳು ಮಹಿಳೆಗೆ ಸೀಮಿತ ದೃಷ್ಟಿಯಲ್ಲಿ ಅವಕಾಶ ದೊರೆಯುತ್ತಿದೆಯೇ ಹೊರತು, ಲಿಂಗಸಮಾನ್ಯಾಯದ ಚಿಂತನೆ ಇನ್ನು ಬೆಳೆದು ಬಂದಿಲ್ಲ. ಅವಕಾಶಗಳು, ಅನುಕೂಲತೆಗಳು, ಅಭಿವೃದ್ದಿ ಅನುಭವಗಳು, ಇಂದಿಗೂ ಪುರುಷ ಪರಿಧೀಯ ನೆಲೆಯಲ್ಲಿಯೇ ಬಿಂಬಿತಗೊಳ್ಳುತ್ತಿವೆ.

ಅತ್ಯಂತ ಮಹತ್ವಪೂರ್ಣ ಚಿಂತನೆಯಲ್ಲಿಯೇ ಕ್ಷೇತ್ರಕಾರ್ಯವನ್ನು ಮಾಡಲಾಗಿದೆ. ತಾತ್ವಿಕತೆಯಷ್ಟೇ ಮಹತ್ವ ಅತ್ಯವಶ್ಯಕತೆ ಕ್ಷೇತ್ರಕಾರ್ಯಕ್ಕೆ ನೀಡಲಾಯಿತು. ಕ್ಷೇತ್ರಕಾರ್ಯದಲ್ಲಿ ಒಟ್ಟು ಅಭಿವೃದ್ಧಿ, ತಾತ್ವಿಕತೆಯ ಹರವು ಜಜಸಾಮಾನ್ಯರಲ್ಲಿ ಹೇಗೆ ಬೆಳೆದು ಬಂದಿದೆ ಎಂಬುದನ್ನು ಸಾಮಾನ್ಯ ಜನರಲ್ಲಿ ಅಭಿವೃದ್ಧಿ ಪರಿಕಲ್ಪನೆ, ಸಿದ್ಧಾಂತ ಪ್ರಕ್ರಿಯೆ ಬಗೆಗೆ ತಿಳಿಯಲಾಯಿತು. ಹೆಚ್ಚಿನ

ಮಟ್ಟದಲ್ಲಿ ಅಭಿವೃದ್ಧಿ ತಾತ್ವಿಕತೆ ಎಂಬುದು ಆರ್ಥಿಕತೆಯನ್ನು ಗಟ್ಟಿಯಾಗಿ ಹಿಡಿದು ಸಾಗುತ್ತಿದೆ ಎಂಬುದು ತಿಳಿಯಲಾಯಿತು.

ಸರ್ಕಾರಿ ಯೋಜನೆಗಳು ಅದರಲ್ಲೂ ಮಹಿಳಾ ಸಂಬಂಧಿತ ಸರ್ಕಾರಿ ಯೋಜನೆಗಳಿಗೆ ಮತ್ತು ಮಹಿಳೆಯರಿಗೆ ಪೂರಕವಾಗಿ ಅಂಗನವಾಡಿ ಕಾರ್ಯಕರ್ತೆಯರ ಪಾತ್ರ ಬಹುದೊಡ್ಡದಾಗಿದೆ. ಇದನ್ನು ಗುರುತಿಸಿ, ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಯಶಸ್ವಿಗೊಳಿಸಲು ಅವರ ಅನುಭವ ಪಾತ್ರವನ್ನು ಪಡೆಯಲು ಅವರನ್ನು ಅಧ್ಯಯನದಲ್ಲಿ ಒಳಗೊಳ್ಳಲಾಯಿತು. ಎಷ್ಟೋ ಅಂಗನವಾಡಿ ಕಾರ್ಯಕರ್ತೆಯರಲ್ಲೂ ಸ್ವತಃ ಮಹಿಳೆಯರಿಗಾಗಿ ತಮ್ಮ ಅಭಿವೃದ್ಧಿಯ ತಾತ್ವಿಕತೆಯ ದಾರಿ ಅರಿವಾಗದಿರುವುದು, ಅಸಹಾಯತೆಯಲ್ಲಿ ಅವರೂ ಸಾಗುತ್ತಿರುವುದು ಅವರಿಗೆ ಬಂದಿತು.

ಅನುಷ್ಠಾನ ವಿಧಾನ

ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳು ತಾತ್ವಿಕತೆಯಲ್ಲಿರುವ ಸಮಸ್ಯೆಗಳ ಮೂಲವನ್ನು ಮೂಲವಾಗಿರಿಸಿಕೊಂಡು ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ವಿಧಾನದಲ್ಲಿರುವ ಕಾರ್ಯ, ಅಲ್ಲಿನ ಲಿಂಗ ಸಮಸ್ಯೆಗಳ ಒಂದು ಅವಲೋಕನಕ್ಕೆ ಪಂಚವಾರ್ಷಿಕ ಯೋಜನೆಗಳನ್ನು ಗುರುತಿಸಿಕೊಳ್ಳಲಾಯಿತು. ಪಂಚವಾರ್ಷಿಕ ಯೋಜನೆಗಳು ಎಂದಾಗ ನಮ್ಮ ಮುಂದೆ ಬರುವ ಮುಖ್ಯ ಪ್ರಶ್ನೆ ಎಂದರೆ ಇದೊಂದು ತುಂಬಾ ವಿಶಾಲವಾದಂತಹ ಹರವು ಎಂಬುದು. 'ಅಭಿವೃದ್ಧಿ' ಪ್ರಕ್ರಿಯೆ ಎಂಬುದೇ ಒಂದು ವಿಶಾಲವಾದಂತಹ ಹರವು. ಅದರ ಚಾರಿತ್ರಿಕ ಹಿನ್ನಲೆಗಿನ್ನೂ ವಿಶಿಷ್ಟ ಸ್ಪಷ್ಟನೆ ಬೇಕಿಲ್ಲ. ಈ ಸಂಗತಿಯನ್ನು ಒಂದೆಡೆ ಗುರುತಿಸಿಕೊಂಡರೂ, ಸರ್ಕಾರದ ಯೋಜನಾ ಪ್ರಕ್ರಿಯೆ ಆರಂಭದಿಂದ ಇಲ್ಲಿಯವರೆಗೂ ಹೆಚ್ಚಿನ ಸರ್ಕಾರಿ ಕಾರ್ಯಕ್ರಮಗಳು, ಪಂಚವಾರ್ಷಿಕ ಯೋಜನೆಗಳ ಮೂಲಕವೇ ಜಾರಿಗೆಗೊಂಡಿವೆ. ಈ ಸಂಗತಿಗಳನ್ನು ಮುಖ್ಯವಾಗಿ ಗುರುತಿಸಿಕೊಂಡು ಪಂಚವಾರ್ಷಿಕ ಯೋಜನೆಗಳನ್ನು ಗುರುತಿಸಿಕೊಳ್ಳಲಾಯಿತು.

ಮೂರನೇ ಅದ್ಯಾಯನದಲ್ಲಿ ಸರ್ಕಾರ ಮಹಿಳಾ ಅಭಿವೃದ್ಧಿಗೆಂದು ರೂಪಿಸಿದ ಯೋಜನೆಗಳನ್ನು ಗುರುತಿಸಿ ಮೊದಲ ಪಂಚವಾರ್ಷಿಕ ಯೋಜನೆಯಿಂದ ಹತ್ತನೇ ಪಂಚವಾರ್ಷಿಕ ಯೋಜನೆಗಳ ವರೆಗೆ ಜಾರಿಗೆಗೊಂಡಂತಹ ಮುಖ್ಯ ಕಾರ್ಯಕ್ರಮಗಳನ್ನು ಹಾಗೂ ಅಲ್ಲಿ ಕಂಡುಬಂದಂತಹ ಲಿಂಗ ಅಸಮಾನತೆಯ ಎಳೆಗಳನ್ನು ಆಯಾ ಯೋಜನೆಗಳಲ್ಲಿಯೇ ಚರ್ಚಿಸಲಾಗಿದೆ.

ಸರ್ಕಾರಿ ಪಂಚವಾರ್ಷಿಕ ಯೋಜನೆಗಳಲ್ಲಿ ಕೇವಲ ಕಾರ್ಯಕ್ರಮಗಳ ಭಾಗವಾಗಿ ಬಂದಂತಹ ಯೋಜನೆಗಳು ಹಲವಾರು. ಅದು ಮಹಿಳೆಯರಿಗೆ ಆಗಲಿ, ಪುರುಷರಿಗೆ ಆಗಲಿ ಅವುಗಳಲ್ಲಿ

ಅನುಷ್ಠಾನ ಗೊಂಡಿರುವಂತಹು ಸಾಧನೆಯ ತುದಿ ಮುಟ್ಟಿರುವುದರಲ್ಲಿ ಪುರುಷರಿಗೆ ಸಂಬಂಧಿಸಿರುವುದೇ ಹೆಚ್ಚು. ಕಾರ್ಯಕ್ರಮಗಳನ್ನು ಜಾರಿಗೊಳಿಸುವಲ್ಲಿ ಮಹಿಳೆಯರಿಗೆ ಬಂದಂತಹು ಕೇವಲ ಯೋಜನೆಗಳಾಗಿಯೇ ಇರುವಂತಹುಗಳನ್ನೇ ನಾವು ಕಾನಲಾಗುತ್ತಿದೆ. ಹೆಚ್ಚಿನ ಮಟ್ಟದಲ್ಲಿ ಜಾರಿಗೆಗೊಂಡಿರುವಂತದ್ದು ಆರೋಗ್ಯ ಮತ್ತು ಕುಟುಂಬ ಯೋಜನೆಯ ಕಾರ್ಯಕ್ರಮಗಳು. ಇವುಗಳು ಯಾಕೆ ಹೆಚ್ಚು ಜಾರಿಗೆಗೊಂಡಿವೆ ಎಂದು ಸೂಕ್ಷ್ಮವಾಗಿ ಅವಲೋಕಿಸಿದಾಗ ಅಲ್ಲಿನ ಲಿಂಗ ರಾಜಕಾರಣವನ್ನು ಅರಿಯಬಹುದಾಗಿದೆ. ಅಲ್ಲಿನ ಸ್ತ್ರೀತ್ವ ಮತ್ತು ಪುರುಷತ್ವದ ಜವಬ್ದಾರಿಗಳು...

೧. ಪುರುಷ ಪ್ರಧಾನದ ಮೌಲ್ಯಗಳು

೨. ಪುರುಷಪ್ರಧಾನ ಮೌಲ್ಯಗಳನ್ನೊಳಗೊಂಡ ಸಂಸ್ಕೃತಿ ಮತ್ತು ರೂಢಿ ಸಂಪ್ರದಾಯಗಳು

೩. ಮೌಢ್ಯತೆಗಳು ನಿಯತಿಗಳಾಗಿ ಬೆಳೆದು ಬರುತ್ತಿರುವುದನ್ನು ಕಾಣಬಹುದಾಗಿದೆ.

ಈ ಮೇಲಿನ ಸಂಗತಿಗಳನ್ನು ಪೂರಕವಾಗಿಟ್ಟುಕೊಂಡು ಅಧ್ಯಯನದ ನಾಲ್ಕನೆ ಅಧ್ಯಯನ ವನ್ನು ಸಂರಚಿಸಿಕೊಂಡಿದೆ. ಇಲ್ಲಿ ಮುಖ್ಯವಾಗಿ ಕ್ಷೇತ್ರ ಕಾರ್ಯವನ್ನು ವಿಶ್ಲೇಷಿಸಿರುವುದೂ ಕೂಡ ಪುರುಷಾಧಿಕಾರದ ಮೌಢ್ಯತೆಯನ್ನು ಮಹಿಳೆಯರು ತಮ್ಮ ನಿಯಮ ಪಾಲಿಸಿಕೊಂಡು ಬರುತ್ತಿರುವುದನ್ನು ಗುರುತಿಸಿಕೊಳ್ಳಲಾಗಿದೆ.

ಪುರುಷಸಿದ್ದ ಮಾದರಿಗಳ ತಳಹದಿಯಲ್ಲಿ ಯೋಜನೆಗಳ ಪಾಲನೆ

ಶಾಶ್ವತ ಸಂತಾನಹರಣ ಶಸ್ತ್ರ ಚಿಕಿತ್ಸೆ ಎಂಬುದು ಕುಟುಂಬ ಯೋಜನೆಯ ಒಂದು ವಿಧವಾಗಿದ್ದು ಮಹಿಳೆಯರಿಗೆ ಮತ್ತು ಪುರುಷರಿಗೆ ಇಬ್ಬರಿಗೂ ಒಳಗೊಂಡು ಜಾರಿಗೆಗೊಂಡಿವೆ. ಕುಟುಂಬ ಯೋಜನೆಗಳ ತಾತ್ಕಾಲಿಕ ವಿಧಗಳನ್ನು ನೋಡಿದಾಗ ಅಲ್ಲಿ ಮಹಿಳೆಯರನ್ನು ಮತ್ತು ಅವಳ ದೇಹವನ್ನು ಮೂಲ ವ್ಯಕ್ತಿಯಾಗಿ ಗುರುತಿಸಿಕೊಂಡು ಸಂಶೋಧನೆಗಳನ್ನು ಮಾಡಲಾಗಿದೆ. ಮಾಡಲಾಗುತ್ತಿದೆ. ಜಾರಿಗೊಂಡಿವೆ. ಅವುಗಳ ಅಡ್ಡಪರಿಣಾಮಗಳನ್ನು ಅರಿತಿದ್ದರೂ ಕೂಡ ಅವುಗಳ ಬಳಕೆಗೆ ಹೆಚ್ಚು ಒತ್ತುನೀಡುವ ಕಾರ್ಯಕ್ರಮಗಳಾಗಿವೆ. ಆದರೆ ಪುರುಷ, ಪುರುಷ ದೇಹವನ್ನು ಸೂಕ್ಷ್ಮವಾಗಿ ಗುರುತಿಸಿಕೊಂಡ ಯೋಜನೆಗಳಲ್ಲಿ ಇರುವ ಸಾಧನ ಕೇವಲ 'ನಿರೋಧ್' ಅದನ್ನು ಬಿಟ್ಟರೆ ಶಾಶ್ವತ ಸಂತಾನಹರಣ ಶಸ್ತ್ರ ಚಿಕಿತ್ಸೆ. ನಿರೋಧ್ ಬಳಕೆಗೆ ಹೆಚ್ಚು ಒತ್ತು ನೀಡುತ್ತಿದ್ದರೂ ಬಳಕೆ ಸಮರ್ಪಕವಾಗಿ ಅನುಸರಣೆಯಾಗುತ್ತಿಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಇನ್ನೊಂದೆಡೆ ಶಾಶ್ವತ ಸಂತಾನ ಹರಣ ಶಸ್ತ್ರಚಿಕಿತ್ಸೆ ಇದನ್ನು ಇಲ್ಲಿ ಮುಖ್ಯವಾಗಿ ಗುರುತಿಸಿಕೊಳ್ಳಲಾಗಿದೆ. ಈ ಮೂಲಕ ಪುರುಷತ್ವ ಮತ್ತು ಸ್ತ್ರೀತ್ವದ ನೆಲೆಯಲ್ಲಿ

ರೂಪಿತವಾದ ಪುರುಷಪ್ರಧಾನ ಸಂರಚನೆಯ ಲಿಂಗ ಪಾತ್ರಗಳು, ಅವುಗಳ ಹಿಂದಿನ ಪುರುಷ ಮೌಲ್ಯಗಳು. ಎಷ್ಟೇ ದೈಹಿಕ ತೊಂದರೆಗಳಿದ್ದರೂ ಮಹಿಳೆಯರೇ ಅನುಸರಿಸುವ ಪ್ರಮೇಯ. ಪುರುಷರ ಅಧಿಕಾರತ್ವ ಈ ಯೋಜನೆಗಳ ವಿಫಲತೆಗೆ ಕಾರಣ. ಹೆಚ್ಚು ಸ್ತ್ರೀ ಸಂಬಂಧಿತ ಕುರಿತ ಯೋಜನೆಗಳ ವಿಧಗಳು ಜಾರಿಯಲ್ಲಿವೆ. ಭವಿಷ್ಯತ್‌ನಲ್ಲಿ ಇದರಿಂದಾಗಿ ಹಲವಾರು ತೊಂದರೆಗಳನ್ನು ಎದುರಿಸುತ್ತಿರುವುದು ಎಂಬ ಅರಿವಿದ್ದರೂ, ಇಲ್ಲದೆ ಇದ್ದರೂ, ಇಷ್ಟವಿರಲಿ ಇರದೆ ಇರಲಿ ಲಿಂಗ ಕುರುಡುತನದಿಂದ ಒಪ್ಪಿ ಅನುಸರಿಸುವ ವ್ಯವಸ್ಥೆಯು ಉತ್ತಮ ಸಾಕ್ಷಿ ಎಂದು ಏಳಬಹುದು. ಇದನ್ನು ಕ್ಷೇತ್ರಕಾರ್ಯದಯೂ ಕಾಣಬಹುದು.

ಮೌಲ್ಯಮಾಪನಾ ವಿಧಾನ ಮತ್ತು ಮಹಿಳಾ ಅಧ್ಯಯನ

ಮೌಲ್ಯಮಾಪನ ವಿಧಾನಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಯೋಜನೆಗಳನ್ನು ರೂಪಿಸುವುದು ಒಂದು ಗುಂಪಾದರೆ, ಅನುಷ್ಠಾನಗೊಳಿಸುವವರು ಇನ್ನೊಂದು ಗುಂಪು. ಅದನ್ನು ಅಂತಿಮವಾಗಿ ಮೌಲ್ಯಮಾಪನ ಮಾಡಿ ಫಲಿತವನ್ನು ಹೊರತರುವುದು ಇನ್ನೊಂದು ಗುಂಪಾಗಿದೆ. ಮೌಲ್ಯಮಾಪನ ವಿಧಾನವನ್ನು ಅನುಷ್ಠಾನಗೊಂಡ ಅಂಕಿ ಸಂಖ್ಯೆಗಳ ಮೇಲೆಯೇ ಅರಿಯುವುದು ಒಂದೆಡೆಯಾದರೆ, ಪರಿಮಾಣಾತ್ಮಕ ಸಂಗತಿಗಳಿಗೆ ಒತ್ತು ನೀಡಲಾಗುತ್ತಿದೆ. ಅದೇ ನಿಟ್ಟಿನಲ್ಲಿ ಮಾಹಿತಿಗಳನ್ನು ಕಲೆ ಹಾಕಲಾಗುತ್ತಿದೆ. ಇನ್ನೊಂದೆಡೆ ಹೆಚ್ಚು ಭಾಗಿಯಾಗುತ್ತಿರುವ ಸಂಗತಿಗಳನ್ನು ದೊರೆತರೆ ಅಲ್ಲಿ ಅವುಗಳನ್ನು ಹಾಗೆಯೇ ಮುಂದುವರೆಸಿತು.

ಈ ಮೂಲಕ ಅಲ್ಲಿನ ಫಲಾನುಭವಿಗಳಾಗಿ, ಮಹಿಳೆಯರಲ್ಲಿ ಭಾಗವಹಿಸುವಿಕೆಯಲ್ಲಿನ ಸೂಕ್ಷ್ಮತೆಗಳನ್ನು ಅಲ್ಲಿನಗೊಂದಲಗಳನ್ನು ಅವರಿಗೆ ಆಗುವ ನೇರ / ಪರೋಕ್ಷ ತೊಂದರೆಗಳೇನು ಎಂಬುದನ್ನು ಗುರುತಿಸಲಾಗುತ್ತಿಲ್ಲ. ಮಹಿಳಾ ಅಧ್ಯಯನ ಪರಿಕಲ್ಪನೆಗಳನ್ನೊಳಗೊಂಡ ಮೌಲ್ಯ ಮಾಪನ ನಡೆಸಲಾಗುತ್ತಿಲ್ಲ. ಈ ಸಂಗತಿಗಳನ್ನು ಅರಿಯಲು ಪಂಚಾಯಿತ ಮತ್ತು ಅಂಗನವಾಡಿ ಸದಸ್ಯೆಯರುಗಳನ್ನು ಒಳಗೊಂಡು ಅಧ್ಯಯನ ಮಾಡಲಾಗಿದೆ. ಈ ಮೂಲಕ ಅಲ್ಲಿನ ಸಮಸ್ಯೆಗಳು ಅಧ್ಯಯನ ಮಾಡಲು ಸಾಧ್ಯವಾಯಿತು.

ಅಭಿವೃದ್ಧಿ ಸಿದ್ಧಾಂತಗಳಲ್ಲಿ ಯೋಜನಾ ವೈಧಾನಿಕತೆಯಲ್ಲಿ ಸ್ತ್ರೀವಾದಿ ಸಂಶೋಧನಾ ಸಿದ್ಧಾಂತವನ್ನು ಯಶಸ್ವಿಯಾಗಿ ಅನುಸರಿಸಲು ಸಾಧ್ಯವಾಗಿಲ್ಲ. ಈ ಕಾರಣದಿಂದ ಸಮಾಜದಲ್ಲಿ ಮಹಿಳಾ ಅಭಿವೃದ್ಧಿ ಅಂಚಿನ ಮಟ್ಟದಲ್ಲಿದೆ. ಹೆಚ್ಚಿನ ಪುಸ್ತಕಗಳ ಪ್ರಕಾರ ಹಿಂದುಳಿದ ದೇಶಗಳಲ್ಲಿ ಮಹಿಳೆಯರು ಮಹಿಳಾ ಅಭಿವೃದ್ಧಿಯಲ್ಲಿ ಸ್ತ್ರೀವಾದಿ ಸಂಶೋಧನೆ ಮತ್ತು ವೈಧಾನಿಕತೆಯ ಅಳವಡಿಕೆ ಇತ್ತೀಚಿನದು.ಉದಾರವಾದ, ಮಾರ್ಕ್ಸ್‌ವಾದ ಚಿಂತನೆಗಳು ಹಳೆಯದಾದರೂ ಕೂಡ ಸಾಮಾಜಿಕ ಸಂರಚನೆಯಲ್ಲಿ ಸಿದ್ಧಾಂತ, ಸ್ತ್ರೀವಾದ, ಯೋಜನೆಗಳು ಎಲ್ಲವು ಹೊಸತನ ನೆರಳಲ್ಲೆ ಬಂದಿರುವಂತವು

ಎಂಬುದು.ಆದರೆ ಸ್ತ್ರೀವಾದ ಚಿಂತನೆಗಳು ಬೆಳೆದಂತೆ ಪುರುಷ ಚಿಂತನೆಗಳು ಮರೆಯಾಗುತ್ತಿಲ್ಲ ಎಂಬುದು ತಿಳಿಯಬಹುದು.

* ಆರಂಭದಿಂದ ಇಲ್ಲಿಯವರೆಗೆ ಮಹಿಳೆ ಮತ್ತು ಸರ್ಕಾರಿ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಯಾವುದೇ ನಿಖರವಾದಂತಹ ಸಲಹಾತ್ಮಕ, ಸಂಶೋಧನೆಗಳು, ಮೌಲ್ಯಮಾಪನಾತ್ಮಕ ಅಧ್ಯಯನಗಳು ಅನಲೋಕನ, ವಿಶ್ಲೇಷನಾತ್ಮಕ ಅಧ್ಯಯನಗಳು, ಸ್ತ್ರೀವಾದಿ ದೃಷ್ಟಿಕೋನದಿಂದ ಆಡಳಿತಾತ್ಮಕ ನೆಲೆಯಲ್ಲಿ ನಡೆದಿಲ್ಲ. ಉದಾ: ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗದ ನೆಲೆಯಲ್ಲಿ ನಡೆದಿರುವುದು ಅತಿ ವಿರಳ. ಆದರೆ ಸಮಸ್ಯೆಯ ಮೂಲ ತಳಹದಿಯು ಅದು ಎಂಬುದು ತಿಳಿಸಲಾಯಿತು.

* ಸಮೀಕ್ಷಾಧ್ಯಯನ ಮಾಡುವ ಸಂದರ್ಭದಲ್ಲಿ ಸರ್ಕಾರಿ ಅಭಿವೃದ್ಧಿ ಕಾಯ್ರಕ್ರಮಗಳು ಮಹಿಳೆ, ಸಂಬಂಧಿಸಿದಂತೆ ಯೋಜನಾ ವಿಧಾನ, ವೈಧಾನಿಕತೆಗೆ, ಡಾ॥ ಹೇಮಲತ ಎಚ್.ಎಂ ಮತ್ತು ಡಾ॥ ಬಿ.ಆರ್.ಚಂದ್ರಶೇಖರ ಅವರ ವಿವರವಾದ ಅಧ್ಯಯನ ಮಾಡುವ ಅವಶ್ಯಕತೆಯನ್ನು ತಿಳಿಸಿದ್ದಾರೆ.ಈ ಮೂಲಕ ಸರ್ಕಾರ ಅಭಿವೃದ್ಧಿ ವಿಧಾನ, ಯೋಜನೆಗಳು, ಸಾಮಾನ್ಯ ಜನರ ಮೌಲ್ಯಮಾಪನ ಈ ಸಂಗತಿಗಳ ತಳಹದಿಯಲ್ಲಿ ಅಧ್ಯಯನದ ಅವಶ್ಯಕತೆ ಇದೆ ಎಂಬುದನ್ನು ತಿಳಿಯಲಾಯಿತು.

* ಸರ್ಕಾರಿ ಅಭಿವೃದ್ಧಿ ಯೋಜನೆಗಳು, ಮಹಿಳೆಯರಿಗೆ ಸಂಬಂಧಿಸಿದಂತೆ ಯೋಜನೇ ವಿಧಾನ, ವೈಧಾನಿಕತೆ, ಕಾರ್ಯವಿಧಾನ, ಮೌಲ್ಯಮಾಪನ, ಸಾಂಪ್ರದಾಯಿಕ ಮೌಲ್ಯಗಳಡಿಯಲ್ಲಿ ಬೆಳೆದು ಬರುತ್ತಿದೆ.ಸಾಮಾಜೀಕರಣ, ಸಾಂಪ್ರದಾಯಿಕ ಮೌಲ್ಯಗಳು, ಸಾಮಾಜಿಕ ರೂಢಿ ನೀತಿಗಳು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಶಸ್ವಿಯತ್ತ ಕೊಂಡೊಯ್ಯಲು ತಡೆಹಿಡಿಯುತ್ತಿದೆ.

* ಸಂವಿಧಾನಾತ್ಮಕ ಸವಲತ್ತುಗಳು ಮಹಿಳಾ ಅಭಿವೃದ್ಧಿ ಮತ್ತು ಸಾಮಾಜಿಕ ಜೀವನ ವಿಧಾನ ಒಂದು ಹಂತ ಸರ್ಕಾರ ಯೋಜನಾ ವೈಧಾನಿಕತೆ ಯೋಜನೆಗಳನ್ನು ಸಮಾಜದಲ್ಲಿ ಸರ್ಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳ ಕಾರ್ಯ ನಿರ್ವಹಣೆಯಲ್ಲಿ ತುಂಬಾ ಅಂತರವಿದೆ.ಮುಂದುವರೆದು ಮೌಲ್ಯಮಾಪನ ಸಂದರ್ಭದಲ್ಲಿ ಮಹಿಳಾ ಬದುಕಿನ ಅನುಭವ ನಿರೀಕ್ಷೆ, ಯೋಜನೆಗಳ ಮೌಲ್ಯಗಳಲ್ಲಿನ ಅಂತರಗಳೇ ತುಂಬಾ ಇವೆ ಎಂಬುದನ್ನು ತಿಳಿಯಲಾಗಿದೆ.ಪ್ರಾಥಮಿಕವಾಗಿ ಈ ಹಂತದಲ್ಲಿ ಅಧ್ಯಯನಗಳ ಸಂಶೋಧನೆಗಳ ಅತ್ಯವಶ್ಯಕತೆ ಇದೆ.

೧. ಪ್ರಸ್ತುತ ಅಧ್ಯಯನ ಮಹಿಳಾ ಸಂಬಂಧಿತ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ಸೈದ್ಧಾಂತಿಕ ಮತ್ತು ತಾತ್ವಿಕತೆಯಲ್ಲಿ, ಸಾಮಾಜಿಕ, ಸಾಂಸ್ಕೃತಿಕ, ಚಿಂತನೆಗಳು

ಪಿತೃ ಮೌಲ್ಯಗಳು ಯಾವ ತೆರನಾದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಅವುಗಳು ಹೇಗೆ ಮಹಿಳೆಯರಿಗೆ ಅವರ ಅಭಿವೃದ್ಧಿಗೆ ಉಂಟಾಗುತ್ತಿರುವ ತೊಂದರೆಗಳನ್ನು ಅರಿಯಲು ಸಾಧ್ಯವಾಯಿತು.

೨. ಮೌಢ್ಯತೆಗಳು ಮತ್ತು ಸಂಪ್ರದಾಯಿಕ ಸಂಗತಿಗಳು ಹೇಗೆ ಮಹಿಳಾ ಅಭಿವೃದ್ಧಿಗೆ ಅಡೆತಡೆಯುಂಟಾಗುತ್ತವೆ ಎಂಬುದನ್ನು ತಿಳಿಯಲು ವೈದ್ಯರುಗಳನ್ನು ಕೂಡ ಸಂದರ್ಶನಕ್ಕೆ ಒಳಪಡಿಸಲಾಯಿತು.

೩. ಅಭಿವೃದ್ಧಿ ಯೋಜನೆಗಳ ಕಾರ್ಯನಿರ್ವಹಣಾ ವಿಧಾನದಲ್ಲಿ ಇರುವ ಆಡಳಿತಾತ್ಮಕ ತಾತ್ವಿಕ ಹಾಗೂ ಕ್ಷೇತ್ರದಲ್ಲಿ ಮಾಡುವ ಮೌಲ್ಯಮಾಪನಾತ್ಮಕ ಹಂತದಲ್ಲಿ ಉಂಟಾಗುವ ತೊಂದರೆಗಳನ್ನು ಗ್ರಹಿಸುವ ಹಂತ ಒಂದೆಡೆಯಾದರೆ ಇನ್ನೊಂದೆಡೆ ಮಹಿಳೆಯರಿಗೆ ಅಭಿವೃದ್ಧಿ ಯೋಜನೆಗಳಲ್ಲಿ ಭಾಗವಹಿಸುವಲ್ಲಿ ಉಂಟಾಗುವ ತೊಂದರೆಗಳನ್ನು ಗ್ರಹಿಸಲಾಗಿದೆ.

೪. ಪಿತೃಪ್ರಧಾನ ಮೌಲ್ಯಗಳು ಇಂದಿಗೂ ಲಿಂಗ ಪಾತ್ರಗಳನ್ನು ಮುಂದಿಟ್ಟುಕೊಂಡು ಮಹಿಳಾ ಬದುಕನ್ನು ಹತ್ತಿಕ್ಕುತ್ತಿವೆ. ಹಾಗೂ ಇವುಗಳು ಮಹಿಳಾ ಅಭಿವೃದ್ಧಿಯ ಯೋಜನೆಗಳ ಮಾಪನ ಮಾಡುವ ಸಂದರ್ಭದಲ್ಲಿ ಮಹಿಳಾ ಸಮಸ್ಯೆಗಳು ರಥುಗತ ಆಚರಣೆಗಾಗಿ ಕಂಡುಬಂದರೂ ಕೂಡ ಸಮಸ್ಯೆಗಳಾಗಿ ಗ್ರಹಿಸಿ ಮಾಪನ ಮಾಡದೆ ಇರುವ ಸಂಗತಿಗಳನ್ನು ಇಲ್ಲಿ ತಿಳಿಯಲಾಯಿತು. ಈ ಎಲ್ಲಾ ಸಂಗತಿಗಳೂ ಕೂಡ ಅಧ್ಯಯನದ ಪೂರ್ವ ಕಲ್ಪಿತ ಸಾರಲೇಖದಲ್ಲಿ ಚರ್ಚಿಸಲಾಗಿತ್ತು.

ಬರವಣಿಗೆ ಹಂತದಲ್ಲಿ

ಪ್ರಸ್ತುತ ಅಧ್ಯಯನದ ಬರವಣಿಗೆಯ ಹಂತದಲ್ಲಿ ಹಲವಾರು ವಿಷಯಗಳು ಬೆಳಕಿಗೆ ಬಂದವು.ಮಾಹಿತಿ ಸಂಗ್ರಹಣೆಯ ಹಂತದಲ್ಲಿ/ಸಂದರ್ಭದಲ್ಲಿ ಬಂದಂತಹ ಪ್ರಾಥಮಿಕ ಹಾಗೂ ಅನುಷಂಗಿಕ ಮಾಹಿತಿಗಳನ್ನು ಲಿಂಗತ್ವ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಿದ ಸಂದರ್ಭದಲ್ಲಿ ಈ ಕೆಳಕಂಡ ಅಂಶಗಳು ಗೋಚರವಾದವು.

* ಸಮುದಾಯ ಮತ್ತು ಮಹಿಳೆಯರ ಸಮಸ್ಯೆಗಳನ್ನು ಪರಿಗಣಿಸುವುದು ಸರಳವಾದದ್ದಾಗಿದೆ ಆದರೆ ಮಹಿಳೆಯರಿಗೆ ಅವರ ಸಮಸ್ಯೆಗಳ ಬಗ್ಗೆ ಸಂಪೂರ್ಣ ಅರಿವನ್ನು ಅರ್ಥೈಸುವಲ್ಲಿ ಯೋಜನೆಗಳಲ್ಲಿ ತುಂಬಾ ತೊಂದರೆಗಳಾಗುತ್ತಿವೆ.

* ಸಮಸ್ಯೆಗಳು ಎಲ್ಲಿಯೂ ಗೋಚರವೇ ಆಗದಿರುವ ಸಂಗತಿಯಾದ್ದರಿಂದ ಸೈದ್ಧಾಂತಿಕತೆಗೂ, ತಾತ್ವಿಕತೆಗೂ, ಸಾಮಾಜಿಕ–ಅನುಭವಗಳಿಗೂ ತುಂಬಾ ವಿಭಿನ್ನತೆ ಕಂಡು ಬರುತ್ತದೆ ಎಂದರೆ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರ ಸೂಕ್ಷ್ಮ ಸಮಸ್ಯೆಗಳನ್ನು ಗುರ್ತಿಸಲಾಗುತ್ತಿಲ್ಲ.

ಬದಲಾಗಿ ಕೆಲವೇ ಕೆಲವು ಸಮಸ್ಯೆಗಳನ್ನು ಗಮನಿಸಿ ಅದಕ್ಕೆ ಯೋಜನೆಗಳ ಮೂಲಕ ಪರಿಹಾರವನ್ನು ಕಂಡು ಹಿಡಿಯಲಾಗಿದೆ. ಆದರೆ ವಾಸ್ತವವಾಗಿ ಈ ಯೋಜನೆಗಳು ಮಹಿಳೆಯರಿಗೆ ಯಾವುದೇ ರೀತಿಯಿಂದಲೂ ಸಮಸ್ಯೆಗೆ ಪರಿಹಾರವನ್ನು ಸೂಚಿಸಲಾಗುತ್ತಿಲ್ಲ. ಇನ್ನೂ ಮಹಿಳೆಯರ ಸೂಕ್ಷ್ಮ ಸಮಸ್ಯೆಗಳಿಗೆ ಸ್ಪಂದಿಸುವ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ. ಹಾಗಾಗಿ ಪಿತೃಪ್ರಧಾನ ಸಮಾಜದಲ್ಲಿ ಮಹಿಳೆಯರ ಅನುಭವಗಳಿಗೂ, ಸಾಮಾಜಿಕ, ತಾತ್ವಿಕತೆ, ಸೈದ್ಧಾಂತಿಕತೆಗಳಿಗೂ ತುಂಬಾ ವಿಭಿನ್ನತೆ ಕಂಡು ಬರುತ್ತದೆ.

* ಅ ಮುಂದಿನ ಪ್ರಶ್ನೆಗಳು ಹಲವಾರು.ಪ್ರಸ್ತುತ ಅಧ್ಯಯನವನ್ನು ಪ್ರಾರಂಭಿಸಿದಾಗಲಿಂದ ಹಿಡಿದು ಈಗಿನವರೆಗೂ ಹಲವಾರು ಪ್ರಶ್ನೆಗಳು ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳ ಬಗ್ಗೆ ಹುಟ್ಟಿಕೊಂಡವು.

* ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳು ಸತತವಾಗಿ ವೈಫಲ್ಯದ ಹಾದಿಯಲ್ಲಿಯೇ ನಡೆದುಕೊಂಡು ಬಂದಿವೆ. ಈ ವೈಫಲ್ಯಕ್ಕೆ ಹಲವಾರು ಕಾರಣಗಳಿವೆ. ಅದರಲ್ಲಿ ಮುಖ್ಯವಾಗಿ ಎರಡು ಸಮಸ್ಯೆಗಳನ್ನು ಗುರುತಿಸಬಹುದಾಗಿದೆ. ಅವುಗಳೆಂದರೆ

೧. ಪಿತೃ ಮೌಲ್ಯಗಳು : ಭಾರತವು ಕಟ್ಟುನಿಟ್ಟಾಗಿ ಪಿತೃಪ್ರಧಾನ ಮೌಲ್ಯಗಳನ್ನು ಅನುಸರಿಸಿಕೊಂಡು ಬಂದಿದೆ. ಇಂತಹ ದೇಶದಲ್ಲಿ ಪುರುಷನಿಗೆ ಅನುಕೂಲವಾಗುವಂತೆ ಪುರುಷನು ಸಮಾಜವನ್ನು ನಿರ್ಮಿಸಿರುತ್ತಾನೆ. ಇಲ್ಲಿ ಪುರುಷನು ಮೇಲ್ದರ್ಜೆಯವನಾದರೆ ಸ್ತ್ರೀಯು ಕೆಳದರ್ಜೆಯವಳು ಹಾಗಾಗಿ ಇಲ್ಲಿ ಎಲ್ಲಾ ಪ್ರಾಮುಖ್ಯತೆಯು ಪುರುಷನಿಗೆ ಮಾತ್ರ ಸಲ್ಲುತ್ತದೆ.ಸ್ತ್ರೀಯರನ್ನು ಸಮಾಜದ ಅಂಚಿಗೆ ತಳ್ಳಿ ಅವರನ್ನು ಸಮಾಜದ ಎಲ್ಲಾ ಚಟುವಟಿಕೆಗಳಿಂದ ನಿಷ್ಕ್ರಿಯಳನ್ನಾಗಿ ಮಾಡಲಾಗಿದೆ.ಅಂತೆಯೇ ಅಭಿವೃದ್ಧಿ ಯೋಜನೆಯಲ್ಲಿಯೂ ಸಹ ಮಹಿಳೆಯರ ಪಾತ್ರವನ್ನು ಕಡೆಗಣಿಸಿ ಅಭಿವೃದ್ಧಿ ಯೋಜನೆಯಿಂದ ಅವರನ್ನು ಕೈಬಿಡಲಾಗಿದೆ.ಹಾಗಾಗಿ ಅಭಿವೃದ್ಧಿ ಯೋಜನೆಗಳಲ್ಲಿ ಮಹಿಳೆಯರ ಅನುಭವ ಮತ್ತು ಸಕ್ರಿಯ ಭಾಗವಹಿಸುವಿಕೆಯನ್ನು ಪುರುಷ ಪ್ರಧಾನ ಮೌಲ್ಯಗಳು ನಿರಾಕರಿಸಿರುವುದರಿಂದ ಅಭಿವೃದ್ಧಿ ಯೋಜನೆಗಳು ಮಹಿಳೆಯರಿಗೆ ಯಾವ ರೀತಿಯಿಂದಲೂ ಪ್ರಯೋಜನಕಾರಿಯಾಗಿ ಉಳಿದಿಲ್ಲ.

೨. ಪುರುಷ ಕೇಂದ್ರಿತ : ಪುರುಷ ಪ್ರಧಾನ ಸಮಾಜದಲ್ಲಿ ಸಹಜವಾಗಿ ಪುರುಷನೇ ಕೇಂದ್ರ ಬಿಂದುವಾಗಿರುತ್ತಾನೆ. ಸಮಾಜದ ಎಲ್ಲಾ ಆಗು –ಹೋಗುಗಳು ಪುರುಷನ ಸುತ್ತಾ ಸುತ್ತುತ್ತಿರುತ್ತವೆ. ಅಭಿವೃದ್ಧಿ ಯೋಜನೆಗಳೂ ಸಹ ಪುರುಷನಿಗೆ ಅಗತ್ಯವಿರುವ ಸಂಗತಿಗಳ ಸುತ್ತ ಆವರಿಸಿಕೊಂಡಿರುತ್ತವೆ. ಹಾಗಾಗಿ ಪುರುಷನು ತನಗೆ ಹೇಗೆ ಬೇಕೋ ಹಾಗೆ ಯೋಜನೆಗಳನ್ನು ನಿರ್ಮಿಸಿಕೊಂಡಿರುತ್ತಾನೆ. ಆದರೆ ಸ್ತ್ರೀಯರಿಗೆ ಇಲ್ಲಿ ಯಾವುದೇ ರೀತಿಯ ಪ್ರಾಮುಖ್ಯತೆಯನ್ನು ಕೊಡುವುದಿಲ್ಲ. ಹೀಗಾಗಿ

ಯೋಜನೆಗಳು ಮಹಿಳೆಯರ ಅಗತ್ಯಗಳಿಗೆ ಸ್ಪಂದಿಸದೇ ಮಹಿಳೆಯರನ್ನು ಅಭಿವೃದ್ಧಿ ವಂಚಿತರನ್ನಾಗಿ ಮಾಡಿದೆ.

ಈ ಮೇಲ್ಕಂಡ ಕಾರಣದಿಂದಾಗಿ ಸರ್ಕಾರಿ ಮಹಿಳಾ ಅಭಿವರಧ್ಧಿ ಯೋಜನೆಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸದೇ ಸತತವಾಗಿ ವೈಫಲ್ಯತೆಯನ್ನು ಹೊಂದುತ್ತಿವೆ. ಜೊತೆಗೆ ಮಹಿಳೆಯರ ಅಭಿವೃದ್ಧಿಯನ್ನು ಕುಂಠಿತಗೊಳಿಸಿವೆ. ಈ ಅಂಶಗಳೇ ಅಲ್ಲದೇ ಯೋಜನೆಗಳ ಬೆಳವಣಿಗೆಯ ಹಂತಗಳಲ್ಲೂ ಸಹ ಸಮಸ್ಯೆಗಳಿವೆ ಅವುಗಳೆಂದರೆ,

* **ತಾತ್ವಿಕ ಹರವು :** ಮಹಿಳಾ ಯೋಜನೆಗಳ ಸಿದ್ಧಾಂತದಲ್ಲಿ ಮತ್ತು ತಾತ್ವಿಕತೆಯಲ್ಲಿ ಸಮಸ್ಯೆಗಳಿರುವುದರಿಂದ ಮಹಿಳಾ ಯೋಜನೆಗಳು ಯಶಸ್ವಿಯಾಗುತ್ತಿಲ್ಲ ಎಂದರೆ ಮಹಿಳಾ ಯೋಜನೆಗಳನ್ನು ಸ್ತ್ರೀವಾದಿ ಸಂಶೋಧನೆಯನ್ನು ಬಳಸಿ ಅಧ್ಯಯನ ಮಾಡಲಾಗುತ್ತಿಲ್ಲ. ಬದಲಾಗಿ ಸಾಮಾಜಿಕ ಸಂಶೋಧನಾ ವಿಧಾನವನ್ನು ಬಳಸಲಾಗುತ್ತಿದೆ. ಈ ಸಾಮಾಜಿಕ ಸಂಶೋಧನೆಯು ಪಿತೃಪ್ರಧಾನ ಮೌಲ್ಯಗಳಿಂದ ಕೂಡಿದ್ದು ಪುರುಷರಿಗೇ ಹೆಚ್ಚು ಒತ್ತು ಕೊಡುತ್ತದೆ.ಹೀಗಾಗಿ ಮಹಿಳಾ ಸಮಸ್ಯೆಗಳು ಮತ್ತು ಯೋಜನೆಗಳೇ ಬದಿಗೆ ತಳ್ಳಲ್ಪಡುತ್ತದೆ.ಆದ್ದರಿಂದಾಗಿ ಯೋಜನೆಗಳ ಸಿದ್ಧಾಂತಗಳಲ್ಲಿ ಮತ್ತು ತಾತ್ವಿಕತೆಯಲ್ಲಿ ಬದಲಾವಣೆಯನ್ನು ತರಬೇಕಾದ ಅವಶ್ಯಕತೆ ಇದೆ.

* **ಕಾರ್ಯವಿಧಾನ :** ಮಹಿಳಾ ಅಭಿವೃದ್ಧಿ ಯೋಜನೆಗಳ ಕಾರ್ಯವಿಧಾನದಲ್ಲಿಯೂ ಸಹ ಹಲವಾರು ಲೋಪದೋಷಗಳನ್ನು ಕಾಣಬಹುದು. ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಸ್ತ್ರೀ ಪರ ಕಾಳಜಿ ಇಲ್ಲದವರು ಜಾರಿಗೊಳಿಸುತ್ತಾರೆ.ಈ ಯೋಜನೆಗಳು ಪಿತೃಪ್ರಧಾನ ಮೌಲ್ಯಗಳಿಂದ ಕೂಡಿದ್ದು ಪುರುಷರಿಗೆ ಅನುಕೂಲವಾಗುವಂತೆ ಯೋಜನೆಗಳನ್ನು ಬಳಸಲಾಗುತ್ತಿದೆ ಮತ್ತು ಸ್ತ್ರೀಯರ ಸಮಸ್ಯೆಗಳನ್ನು ನಿರ್ಲಕ್ಷಿಸಲಾಗುತ್ತಿದೆ.ಹೀಗಾಗಿ ಅಭಿವೃದ್ಧಿ ಯೋಜನೆಗಳ ಕಾರ್ಯವಿಧಾನದಲ್ಲಿ ಬದಲಾವಣೆಯನ್ನು ತರಬೇಕಾದ ಅವಶ್ಯಕತೆ ಇದೆ.ಇದರಿಂದಾಗಿ ಯೋಜನೆಗಳು ಸಮರ್ತವಾಗಿ ಕಾರ್ಯನಿರ್ವಹಿಸಿ ಮಹಿಳಾ ಸಮಸ್ಯೆಗಳಿಗೆ ಪರಿಹಾರ ನೀಡಬೇಕಿದೆ.

* ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಮರುಮೌಲ್ಯಮಾಪನಗೊಳಿಸಬೇಕಾದ ಅವಶ್ಯಕತೆ ಇದೆ.ಇಲ್ಲಿಯವರೆಗೂ ಜಾರಿಗೊಂಡ ಯೋಜನೆಗಳನ್ನು ವಿಶ್ಲೇಷಿಸಿ ಅದು ಲೋಪ–ದೋಷಗಳನ್ನು ಪರಿಗಣಿಸಿ ಅವುಗಳನ್ನು ಪರಿಹರಿಸಿ ಹೊಸ ರೂಪುರೇಷೆಯೊಂದಿಗೆ ಯೋಜನೆಗಳು ಜಾರಿಗೊಂಡ ಮಹಿಳೆಯರ ಅಭಿವೃದ್ಧಿ ಸಾಧಿಸಬೇಕಾದ ಅವಶ್ಯಕತೆ ಇದೆ.ಆದ್ದರಿಂದಾಗಿಯೇ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಮರುಮೌಲ್ಯಮಾಪನಗೊಳಿಸಬೇಕಿದೆ.

ಇಲ್ಲಿ ಸಮಸ್ಯೆಗಳು–ಸುಳಿಗಳು ಅಧ್ಯಯನದ ಎಲ್ಲಾ ಹಂತದಲ್ಲಿ ಕಂಡು ಬಂದಿರುವುದನ್ನು ನಾವು ಕಾಣಬಹುದಾಗಿದೆ.ಇದಕ್ಕಾಗಿ ಸೂಕ್ತ ಪರಿಹಾರವನ್ನು ಸೂಚಿಸುವ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನ ಮುಂದೆ ಸಾಗುತ್ತಿವೆ. ಈ ಅಧ್ಯಯನವನ್ನು ನಡೆಸಲಾಗುತ್ತಿದೆ.

* ಈ ಅಧ್ಯಯನದಿಂದ ಎಲ್ಲಾ ಸರ್ಕಾರಿ ಮಹಿಳಾ ಪರ ಯೋಜನೆಗಳನ್ನು ಸ್ತ್ರೀವಾದಿ ಸಿದ್ಧಾಂತಗಳನ್ನು ಬಳಸಿ ರೂಪಿಸುವುದರಿಂದ ಸ್ತ್ರೀಯರ ಸಮಸ್ಯೆಗಳಿಗೆ ಈ ಯೋಜನೆಗಳು ಹೆಚ್ಚು ಪ್ರಾಮುಖ್ಯತೆ ನೀಡಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿ ಮಹಿಳೆಯರ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಯಶಸ್ವಿಯಾಗುತ್ತದೆ.ಈ ರೀತಿ ಯಶಸ್ವಿಯಾಗಲು ಸರ್ಕಾರವು ಸೂಕ್ತ ಕ್ರಮಗಳನ್ನು ಜಾರಿಗೊಳಿಸಬೇಕಿದೆ.

* ಮಹಿಳಾ ಯೋಜನೆಗಳು ಯಶಸ್ವಿಯಾದಾಗ ಇಡೀ ಸಮುದಾಯಕ್ಕೆ ಹೊಸ ಸಮಾಜವು ತೆರೆದುಕೊಳ್ಳುತ್ತದೆ.ಇಲ್ಲಿಯವರೆಗೂ ಸಮಾಜದ ಮೇಲ್ವರ್ಗದಲ್ಲಿ ಪುರಷರು ಪ್ರಮುಖರಾಗಿದ್ದರೆ ಆದರೆ ಮಹಿಳಾ ಅಭಿವೃದ್ಧಿಯ ನಂತರ ಮಹಿಳೆಯರು ಪುರುಷರಿಗೆ ಸಮಾನವಾಗಿ ಸಮಾಜದಲ್ಲಿ ನಿಲ್ಲುತ್ತಾರೆ.ಇದರಿಂದಾಗಿ ಸಮಾಜದಲ್ಲಿ ಮಹಿಳೆಯರು ಎದುರಿಸುತ್ತಿರುವ ಅಸಮಾನತೆಯು ಕಳೆದು ಸ್ತ್ರೀಯರು ಸ್ವತಂತ್ರರಾಗುತ್ತಾರೆ.ಈ ರೀತಿಯಾದ ಮಹಿಳಾ ಅಭಿವರದ್ಧಿಯಿಂದಾಗಿ ಸಮಾಜದಲ್ಲಿ ಸ್ತ್ರೀ–ಪುರುಷರ ನಡುವಿನ ಭಿನ್ನಾಭಿಪ್ರಾಯ ಕಡಿಮೆಯಾಗಿ ದೇಶದ ಏಳಿಗೆ ಸ್ತ್ರೀ–ಪುರುಷರಿಬ್ಬರೂ ಸಮಾನ ಸೇವೆ ಸಲ್ಲಿಸುತ್ತಾರೆಂಬುದರಲ್ಲಿ ಸಂಶಯವಿಲ್ಲ.

* ಈ ಅಧ್ಯಯನದಿಂದ ಅವಕಾಶ ವಂಚಿತರಾದ ಎಲ್ಲಾ ಸ್ತ್ರೀಯರಿಗೂ ಪುರುಷರಿಗೆ ಸಮನಾದ ಅವಕಾಶಗಳು ಲಭಿಸುತ್ತವೆ. ಅವರ ಅವಶ್ಯಕತೆಗೆ ಅನುಗುಣವಾಗಿ ಅಭಿವೃದ್ಧಿ ಯೋಜನೆಗಳು ಸ್ಪಂದಿಸಿದಾಗ ಮಹಿಳೆಯರು ಅಭಿವೃದ್ಧಿ ಹೊಂದುತ್ತಾ ಹೋಗುತ್ತಾರೆ.ಹೀಗೆ ಅಭಿವೃದ್ಧಿ ಹೊಂದಿದ ಸ್ತ್ರೀಯರು ಪುರುಷಶಾಹಿಯು ತಮ್ಮ ಮೇಲೆ ನಡೆಸುತ್ತಿರುವ ದಬ್ಬಾಳಿಕೆ, ದೌರ್ಜನ್ಯ, ಹಿಂಸಾಚಾರ, ಅಸಮಾನತೆ ಇನ್ನೂ ಮುಂತಾದ ಸಮಸ್ಯೆಗಳ ವಿರುದ್ಧ ಹೋರಾಡಿ ಸಮಾಜದ ಉನ್ನತ ಸ್ಥಾನದಲ್ಲಿ ತಮ್ಮನ್ನು ತಾವು ಗುರ್ತಿಸಿಕೊಳ್ಳುತ್ತಾರೆ.ಇದರಿಂದಾಗಿ ಅಸಮಾನತೆಯ ಎಳೆಗಳು ಕಳಚಿ ಸ್ತ್ರೀ–ಪುರುಷರಿಬ್ಬರೂ ಸಮಾನರಾಗುತ್ತಾರೆ.ಸ್ತ್ರೀಯರೂ ಸಹ ಸಮಾಜದ ಪ್ರಮುಖ ಅಂಗವಾಗಿ ಗುರ್ತಿಸಿಕೊಳ್ಳುತ್ತಾರೆ.

ಸರ್ಕಾರಿ ಅಭಿವೃದ್ಧಿ ಯೋಜನೆಗಳಲ್ಲಿ ಮಾತ್ರವಲ್ಲದೇ ರಾಜಕೀಯವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಇಂತಹ ಅಧ್ಯಯನಗಳು ನಡೆಯಬೇಕಿದೆ.ಏಕೆಂದರೆ ಮೇಲ್ಕಂಡ ಕ್ಷೇತ್ರಗಳಲ್ಲಿಯೂ ಸಹ ಮಹಿಳೆಯರು ಅವಕಾಶ ವಂಚಿತರಾಗಿ ದಬ್ಬಾಳಿಗೆ ಗುರಿಯಾಗುತ್ತಿದ್ದಾರೆ. ಈ ರೀತಿಯ ದಬ್ಬಾಳಿಕೆಗಳನ್ನು ತಡೆದು ಸ್ತ್ರೀಯರ ಅಭಿವೃದ್ಧಿಯಾಗಬೇಕಾದ ಅವಶ್ಯಕತೆ ಇದೆ. ಹೀಗಾದಾಗ ಮಾತ್ರ ಒಂದು ದೇಶದ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ.

೫.೧. ಫಲಿತಗಳು

* ಸಬಲೀಕರಣ, ಲಿಂಗಸಮಾನತೆ ಪಡೆಯುವುದು ಕೇವಲ ಅಭಿವೃದ್ಧಿಯಲ್ಲ. ಅದು ಕೂಡ ಮಾನವ ಹಕ್ಕಿಗೆ ಸಂಬಂಧಿಸಿರುವಂತಹದು. ಆದಾಗಿಯೂ ಕೂಡ ಅಭಿವೃದ್ಧಿಯನ್ನು ಮುಖ್ಯವಾಹಿನಿಗೆ ತರಲಾಗದಂತಹ ಪರಿಸ್ಥಿತಿಯುನ್ನು ಕಾಣಲಾಗುತ್ತದೆ. ಕಾರಣ ಸಮುದಾಯದಲ್ಲಿರುವ ಸಾಂಪ್ರದಾಯಿಕ ಮನೋಭಾವ ಲಿಂಗ ಅಸಮಾನತೆ, ಮಹಿಳೆಯರಿಗಿರುವ ನಿರ್ಬಂಧಿತ ಅನುಕೂಲಗಳು, ಅವಕಾಶಗಳು ಸಂಕೋಚಿತ ದ್ವಂದ್ವ ನಿರ್ಧಾರಕ ಮನೋಭಾವ ಗಳು, ಅವಕಾಶಗಳ ಕೊರತೆ ಇವೆಲ್ಲವೂಗಳ ಜೊತೆಗೆ ವ್ಯವಸ್ಥಿತವಾಗಿ ರೂಪುಗೊಳ್ಳದಿರುವಂತಹ ಸರ್ಕಾರಿ ಮಹಿಳಾ ಯೋಜನಾ ವಿಧಾನ ಅದರಲ್ಲೂ ಲಿಂಗಸೂಕ್ಷ್ಮತೆಯನ್ನು, ಪ್ರಜ್ಞಾಪೂರ್ವಕ ಕಾಳಜಿಯನ್ನು ಗ್ರಹಿಸದಿರುವ ಸಂಗತಿಗಳನ್ನು ಕಾಣಬಹುದು. ಇವುಗಳಿಂದಾಗಿ ಸಮಾಜದಲ್ಲಿ ಮಹಿಳೆಯರೇ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ. ಪ್ರಜ್ಞಾಪೂರ್ವಕವಾಗದಿಲ್ಲದಿರುವುದು ಸಂವೇದನ ರಹಿತ ಮನೋಭಾವ, ಮಹಿಳಾ ಅಭಿವೃದ್ಧಿಯನ್ನು ನಿರೀಕ್ಷಿತ ಮಟ್ಟದಲ್ಲಿ ಸಾಧಿಸಲಾಗದಿರುವುದು ಕಂಡುಬರುತ್ತದೆ.

* ಮನುಕೂಲದಲ್ಲಿ ಅರ್ಧದಷ್ಟು ಮಹಿಳೆಯರೇ ಇದ್ದರೂ ಕೂಡ ಮಾನವ ಸಂಪನ್ಮೂಲವನ್ನು ಪರಿಗಣಿಸುವಲ್ಲಿ ಮಹಿಳೆಯರನ್ನು ಪ್ರತ್ಯೇಕವಾಗಿ ಗುರುತಿಸುವ, ಸಂರಕ್ಷಿಸುವ ಪ್ರಕ್ರಿಯೆ ಕಂಡುಬಂದಿಲ್ಲ. ಇನ್ನೊಂದೆಡೆ ಮಹಿಳಾ ದಿನನಿತ್ಯದ ಬದುಕಿನ ಅನುಭವ ಅಲ್ಲಿನ ನ್ಯೂನತೆಗಳನ್ನು ಗ್ರಹಿಸದೆ ಮೌನವಾಗಿ ಪಾಲಿಸುವಂತಹ ಪರಿಸ್ಥಿತಿ ಮಹಿಳೆಯರದಾಗಿದೆ. ಯೋಜನಾ ಸಿದ್ಧಾಂತದಲ್ಲಿ ವೈಧಾನಿಕತೆಯಲ್ಲಿ ಕಾರ್ಯನಿರ್ವಹಣ ವ್ಯವಸ್ಥೆಯಲ್ಲಿ ಮೌಲ್ಯಮಾಪನ ಸಂದರ್ಭದಲ್ಲಿ ಈ ಸಂಗತಿಗಳು ಅಗೋಚರವಾಗಿದೆ.

* ಪುರುಷ ಮೌಲ್ಯಗಳಡಿಯಲ್ಲಿ ಮಹಿಳೆ ಅದೃಶ್ಯವಾಗುತ್ತಿರುವ ಸಾಮಾನ್ಯವಾದರೂ ಮುಖ್ಯವಾಗಿ ಅಭಿವ್ಯಕ್ತಿ. ಅಸ್ತಿತ್ವ, ಅನುಭವ, ಅನುಕೂಲತೆಗಳು ಮಹಿಳಾ ಸ್ನೇಹಿಯಾಗಿಲ್ಲ.

* ಮಹಿಳೆಯರು ಸಮಾಜದ ನಾಗರಿಕತೆ ಆದರೂ ಕೂಡ ಸರಕಾರದ ಕಾರ್ಯನೀತಿಗಳಿಗೂ ಮಹಿಳೆಯರಿಗೂ ದೂರದ ನಂಟು. ಹೀಗಾಗಿ ಮಹಿಳೆಯರಿಗೂ ಸರ್ಕಾರಕ್ಕೂ ಕಂದಕದ ಹರವನ್ನು ಕಾಣಬಹುದು. ಕಾರಣ ಸರ್ಕಾರಿ ಮಹಿಳಾ ಯೋಜನೆಗಳಲ್ಲಿ ಮಹಿಳೆಯರನ್ನು ಸಮಭಾಗಿಗಳಾಗಿ ಭಾವಿಸುವುದಕ್ಕಿಂತ ಬಹುತೇಕವಾಗಿ ಫಲನುಭವಿಗಳಾಗಿ ಭಾವಿಸುತ್ತಿದೆ.

* ಯೋಜನಾ ವಿಧಾನ ಮತ್ತು ಮೌಲ್ಯಮಾಪನ ಸಂದರ್ಭದಲ್ಲಿ, ಪುರುಷ ಪ್ರಭಲ್ಯ, ಮಹಿಳಾ ಅಧೀನತೆಯ ವ್ಯವಸ್ಥೆಯನ್ನು ಮುಂದುವರೆಸಿಯೇ ಸಾಗುತ್ತಿರುವುದು.

* ಸಾಂಸ್ಕೃತಿಕ ಧಾರ್ಮಿಕ ಮೌಲ್ಯಗಳಡಿಯಲಿ ಮಹಿಳಾ ಸಬಲೀಕರಣ ಸಿಲುಕಿಕೊಂಡಿದೆ. ವ್ಯಕ್ತಿಗಳ ಮೌಢ್ಯತೆ, ಆಧುನಿಕ ಮನೋಭಾವದತ್ತ ಬದಲಾವಣೆಗೆ ದಾರಿ ಮಾಡುತ್ತಿಲ್ಲ. ಹಾಗಾಗಿ ಸಮಸ್ಯೆಯನ್ನು ಗುರುತಿಸಿದರೂ, ಪರಿಹರಿಸುವ ಗೋಜಿಗಿ ಹೋಗದಿರುವ ದುರಂತ ಕಾಣಿಸಲಾಗುತ್ತದೆ.

* ಕಾನೂನುಗಳೂ ಕೇವಲ ಕಾನೂನುಗಳಿಗೆ ಸೀಮಿತವಾಗಿವೆ. ಸಮಸ್ಯೆಯಲ್ಲಿನ ಮಹಿಳೆಯರಿಗೆ ತಲುಪುವುದು ವಿರಳ. ಇದಕ್ಕೆ, ಪರೋಕ್ಷವಾಗಿ ಮಹಿಳೆ, ಸಮಾಜ ಸಾಂಪ್ರದಾಯಿಕ ಮೌಲ್ಯಗಳೇ ಆಗಿವೆ. ಇದನ್ನು ಗುರುತಿಸದೇ ಇರುವುದು ಕಂಡುಬರುತ್ತದೆ.

* ಮೌಢ್ಯತೆಗಳನ್ನು ನಂಬಿ, ಆಧುನಿಕತೆಯ ಅವಕಾಶಗಳನ್ನು ಅನುಸರಿಸದಿರುವುದು ಪ್ರಬಲವಾದ ಸಮಸ್ಯೆಯಾಗಿದೆ.

* ಮಾಧ್ಯಮ ಮತ್ತು ಇತರೆ ಮೂಲಗಳ ಮೂಲಕ ವ್ಯಾಪಕ ಮಾಹಿತಿಯನ್ನು ಜನೆಗೆ ಮತ್ತು ಮಹಿಳೆಯರಿಗೆ ಜಾಗ್ರತಗೊಳಿಸುತ್ತಿದ್ದರೂ, ಮೋಸ ಹೋಗುವ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ.

* ಸಾಂಪ್ರದಾಯಿಕ ಮೌಲ್ಯಗಳನ್ನು ಮೀರಿ ಮುಂದೆ ಸಾಗುವಂತಹ ಮಹಿಳೆಯರನ್ನು ಸಮಜ ಇಂದಿಗೂ ತಿರಸ್ಕರಿಸುತ್ತಿದೆ.

* ಅಭಿವೃದ್ಧಿ ಯೋಜನೆಗಳಲ್ಲಿ ಪ್ರತ್ಯಕ್ಷವಾಗಿ ಸೂಕ್ಷ್ಮವಾಗಿ ಮಹಿಳಾ ಸಂಗತಿಗಳನ್ನು ಗುರುತಿಸಿದೆ. ಅತಿ ಸಾಮಾನ್ಯೀಕರಿಸಿ ಗುರುತಿಸುವುದನ್ನು ಕಾಣಬಹುದು.

* ಎಷ್ಟು ಮಹಿಳೆಯರಿಗೆ ಅಭಿವೃದ್ಧಿ ಯೋಜನೆಗಳ ಮಾಹಿತಯ ಕೊರತೆ ಇರುವುದನ್ನು ಕಂಡುಬಂದಿತು.

* ಸಮಸ್ಯೆಗಳಿಂದ ಬಳಲುತ್ತಿದ್ದರೂ ಕೂಡ, ಸಮಸ್ಯೆಗಳಿಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳದೆ ಇರುವ ನಿರ್ಧಾರ ತೆಗೆದುಕೊಳ್ಳುವ ಕೊರತೆ ಇದೆ.

ಕ್ಷೇತ್ರಕಾರ್ಯದ ಅಧ್ಯಯನದಲ್ಲಿ ಅಭಿವೃದ್ದಿ ತಾತ್ವಿಕತೆ ಮತ್ತು ಜನಸಾಮನ್ಯರ ಅನುಭವ ವೈಧಾನಿಕತೆಗೆ ಕಾರ್ಯವಿಧನದಲ್ಲಿ, ಮೌಲ್ಯಮಾಪನದಲ್ಲಿ ಉಂಟಾಗುತ್ತಿರುವ ಸಮಸ್ಯೆಗಳೇನು ಎಂಬುದನ್ನು ತಿಳಿಯಲು ಒಂದು ಸಣ್ಣ ಪ್ರಯತ್ನವಾಗಿದೆ. ಈ ಮೂಲಕ 'ಅಭಿವೃದ್ಧಿ' ಪರಿಕಲ್ಪನೆಗೂ ಅವರ ರಚನೆ, ವಿಶ್ಲೇಷಣೆ ಸಿದ್ಧಾಂತಕ್ಕೂ ಜನಸಾಮಾನ್ಯರಲ್ಲಿ ಇರುವ ಅರ್ಥಕ್ಕೂ ವಿಭಿನ್ನತೆ ಇದೆ ಎಂಬುದನ್ನು ತಿಳಿಯಬಹುದು. ಅದೇ ತೆರನಾದಲ್ಲಿ ಪ್ರತಿ ಯೋಜನೆಗಳನ್ನೂ ಅದರದೇ ಸೈದ್ಧಾಂತಿಕತೆ ಮತ್ತು ಕಾರ್ಯ ತಾತ್ಪರತೆ ಇದ್ದೇ ಇರುತ್ತದೆ. ಈ ನಿಟ್ಟಿನಲ್ಲಿ ಪಂಚವಾರ್ಷಿಕ ಯೋಜನೆಗಳಲ್ಲಿ

ಮಹಿಳಾ ಅಭಿವೃದ್ಧಿಯನ್ನು ಕೂಲಂಕುಶವಾಗಿ ವಿಶ್ಲೇಷಿಸಿ ಮೌಲ್ಯಮಾಪನ ಮಾಡಿದಾಗ ಕೇವಲ ವಿಜೇತಗೊಂಡ ಎಷ್ಟೋ ಯೋಜನೆಗಳು ಹಿಂದೆ ಕೊಳೆಯುತ್ತಿವೆ. ಅವುಗಳು ಯಶಸ್ವಿಗೊಂಡಿಲ್ಲ ಎಂದಾದರೆ ಹೊಸ ಚಿಂತನೆಗಳ ನೆಲೆಯಲ್ಲಿ ಯೋಜನೆಗಳು ಮೂಡಿಬಂದಿವೆ. ಜೊತೆಗೆ ಮಹಿಳಾ ಸಮಸ್ಯೆಗಳು ಅದರಲ್ಲೂ ಲಿಂಗ ಅಸಮಾನತೆಯ ಸಮಸ್ಯೆಗಳು ಹೊಸ ಹೊಸ ಮುಖಗಳ ಮೂಲಕ ತಲೆ ಎತ್ತಿವೆ. ಕಾರಣ ಮಹಿಳಾ ಸಮಸ್ಯೆಯ ಮೂಲವನ್ನು ಇಲ್ಲಿ ತಿಳಿಯಲಾಗಿಲ್ಲ. ಅದನ್ನು ಗುರುತಿಸುವಲ್ಲಿ ಸರ್ಕಾರ ವಿಫಲವಾಗುತ್ತದೆ ಎಂಬುದು ತಿಳಿಯಲಾಗುತ್ತದೆ. ಹೆಚ್ಚಿನ ಯೋಜನೆಗಳು ಸಮಾಜ, ಧಾರ್ಮಿಕ ಸಂಗತಿಗಳ ನೆಲೆಗಳಲ್ಲಿಯ ಸಾಂಪ್ರದಾಯಿಕತೆಯಲ್ಲಿಯೂ ಮುಂದುವರೆದು ಮಹಿಳಾ ಬದುಕನ್ನು ಸಂಕುಚಿತಗೊಳಿಸುತ್ತಿದೆ ಎಂಬುದು ತಿಳಿಯಲಾಯಿತು.

ಒಟ್ಟಾರೆ ಫಲಿತಗಳೂ ಎಂದರೆ

* ಅಭಿವೃದ್ಧಿ ತಾತ್ವಿಕತೆಯಲ್ಲಿ ಲಿಂಗ ಅಸಮಾನತೆಯ ಎಳೆಗಳೂ ಇಂದಿಗೂ ಬೆಳೆದು ಬರುತ್ತಿದೆ.
* ಮಹಿಳಾ ಸಬಲೀಕರಣಕ್ಕೆ ಅಭಿವೃದ್ಧಿಗೆ ಕೇವಲ ಯೋಜನೆಗಳು, ಚಿಂತನೆಗಳು ಅಷ್ಟೇ ಮಾತ್ರವಲ್ಲ, ಜಾಗ್ರತಗೊಂಡ ಮಹಿಳಾ ಸಮುದಾಯದ ಭಾಗವಹಿಸುವಿಕೆ ಅತ್ಯವಶ್ಯಕ. ಅದು ಜಾರಿಗೆಗೊಳ್ಳುವ ಹಂತಗಳಲ್ಲಿ ಹೇಗೆ ಸಾಗುತ್ತವೆ ಎಂಬುದು ಕೂಡ ಮುಖ್ಯವಾಗಿರುತ್ತದೆ.
* ಅಭಿವೃದ್ಧಿಯಲ್ಲಿ ಲಿಂಗತ್ವ ಸಮನತೆಯನ್ನು ಮುಖ್ಯವಾಹಿನಿಯಲ್ಲಿ ಬಳಸದೆ ಇರುವುದು.
* ಅಭಿವೃದ್ಧಿಯಲ್ಲಿ ಲಿಂಗತ್ವ ಪಾತ್ರಗಳ ಸಂರಚನೆಯನ್ನು ಬಳಸಿರುವಂತದ್ದು.
* ಕಂದಕದ ಹರವು ಸಮಸ್ಯೆ ಅಭಿವೃದ್ಧಿ ಸಿದ್ಧಾಂತದಲ್ಲಿ ಎದ್ದು ಕಾಣುತ್ತಿರುವುದು.
* ಅತಿ ಕೆಳಮಟ್ಟದ ಅಥವಾ ಲಿಂಗತ್ವ ಅಸೂಕ್ಷ್ಮತೆಯನ್ನು ಒಳಗೊಂಡ ಜಾಗ್ರತಿ ಶಿಬಿರಗಳು, ಕಾರ್ಯಕ್ರಮಗಳು, ಯೋಜನೆಗಳು.
* ಸಲಹಾತ್ಮಕ ಮಂಡಳಿಗಳಲ್ಲಿ ಮಹಿಳಾ ಸಂಘಸಂಸ್ಥೆ, ಮಹಿಳಾ ಚಿಂತಕರ ಸಹಭಾಗಿತ್ವದ ಕೊರತೆ, ಅದಕ್ಕೆ ಪೂರಕವಾದ ಅವಕಾಶಗಳ ಕೊರತೆ.
* ಯೋಜನೆಗಳ ವಿವರಣೆಯಲ್ಲಿ ಮಹಿಳಾ ಸಮಾನತೆಯನ್ನು ಪ್ರತಿಬಿಂಬಿಸುವ ಮಾಹಿತಿಯ ಕೊರತೆ ಹಾಗೂ ಲಿಂಗತ್ವ ಅಸಮಾನತೆಯನ್ನು ತಿಳಿಸಿ ಕೊಡುವಂತಹ ಮಾಹಿತಿಗಳ ಕೊರತೆ.
* ಉತ್ತಮ ಮಾದರಿಯ ಸಂವಹನ ಮಾಧ್ಯಮಗಳಿಗೆ ಜ್ಞಾನದ ಕೊರತೆ(ಮಹಿಳೆಯರಲ್ಲಿ).
* ಸಾಂಸ್ಥಿತ, ಔಪಚಾರಿಕ ವ್ಯವಸ್ಥೆಗಳು, ನಿಯಮಗಳು, ಮಹಿಳೆಯ ಭಾಗವಹಿಸುವಿಕೆಗೆ ಅಡೆತಡೆಯನ್ನುಂಟು ಮಾಡುತ್ತವೆ.

೫.೨. ಅಧ್ಯಯನದ ಸಾಧ್ಯತೆಗಳು

ಯಾವುದೇ ಅಧ್ಯಯನವನ್ನು ಸಂಪೂರ್ಣವಾಗಿ, ವಿವರವಾಗಿ ಅಧ್ಯಯನ ಮಾಡುವುದು ಕಷ್ಟವೇ ಸರಿ. 'ಅಭಿವೃದ್ಧಿ' ಅಭಿವೃದ್ಧಿ ಯೋಜನೆಗಳು ಒಂದು ದೊಡ್ಡ ಸಾಗರವೇ ಸರಿ. ಹಾಗೂ ಪ್ರತಿಹಂತದಲ್ಲಿಯೂ ವಿಭಿನ್ನ ಅನುಭವಗಳನ್ನು ಕಾಣಬಹುದು. ಮಹಿಳಾ ಬದುಕಿಗೆ ನೇರವಾಗಿ ಸಂಬಂಧಿಸಿದ್ದರೂ ಕೂಡ ಸಾಮಾಜಿಕ ಸಮಸ್ಯೆಗಳಲ್ಲಿ ಮುಖ್ಯ ಸಮಸ್ಯೆಯಾಗಿದ್ದರೂ ಕೂಡ ಸಾಗರದಲ್ಲಿ ಧುಮುಕಿ ಸೂಕ್ಷ್ಮ ವಿಷಯಗಳನ್ನು ಹೆಕ್ಕುವುದು ಸಂಶೋಧಕರಿಗೆ ಸವಾಲೇ ಸರಿ. ಮಹಿಳೆ ಮೌನರಾಗಿ ಎನ್ನುವಲ್ಲಿ ಪ್ರಸಿದ್ಧಿ ಹೊಂದಿರುವುದಷ್ಟೆ ಅಲ್ಲ ಅವಳೂ ಹೆಚ್ಚು ಸಾಮಾಜಿಕ ಆರ್ಥಿಕ ಕ್ಷೇತ್ರದಲ್ಲಿ ಪುರುಷರಿಗೆ ಸವಾಲಾಗಿ ಬೆಳೆಯಲೇ ಬಾರದೆಂಬ ಸಂಗತಿ ಇದೆ. ಸರ್ಕಾರ ಹಲವಾರು ಮಹಿಳಾ ಅಭಿವೃದ್ದಿ ಯೋಜನೆಗಳನ್ನು ತರುತ್ತಿದ್ದರೂ ಕೂಡ ಮಹಿಳೆಯ ಅಭಿವೃದ್ಧಿ ನಿರೀಕ್ಷಿತ ಮಟ್ಟವನ್ನು ತಲುಪದಿರುವುದು ಶೋಚನೀಯವೇ ಸರಿ. ವೈರುಧ್ಯವೆಂದರೆ ಮಹಿಳೆಗೆ ಪೂರಕವಾಗಿ ಸರ್ಕಾರ ಸಾವಿರಾರು ಯೋಜನಾ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಆದರೆ ಅವುಗಳನ್ನು ಅನುಭವಿಸದೆ ಇರುವ ಸಂದಿಗ್ಧ ಸಂಗತಿ ಮಹಿಳೆಯರದಾಗಿದೆ. ಅಭಿವೃದ್ದಿ ಎಂಬ ಸಾಗರದಲ್ಲಿ ಮಹಿಳಾ ಸಮಸ್ಯೆಗಳು ಅಷ್ಟೆ ಆಳವಾಗಿಯೇ ಹುದುಗಿ ಹೋಗಿದೆ. ಹಾಗೂ ಅಷ್ಟೇ ಜಡವಾಗಿ ಪುರುಷ ಪ್ರಧಾನ ಮೌಲ್ಯಗಳು ಬೇರೂರಿವೆ. ಇನ್ನೊಂದು ಬಹುಮುಖ್ಯ ಸಂಗತಿ ಎಂದರೆ ಪ್ರತಿಯೊಂದು ಯೋಜನೆಯಲ್ಲಿಯೂ ಲಿಂಗ ಅಸಮಾನತೆಯ ಎಳೆಗಳು, ಸಂಗತಿಗಳು, ಮಹಿಳೆಯರಿಗೆ ವಿಭಿನ್ನ ರೀತಿಯ ಸಮಸ್ಯೆಗಳನ್ನು ತಂದೊಡ್ಡುತ್ತಿವೆ.

* ಸಾಮಾಜಿಕ ಮೌಲ್ಯಗಳು ಸಾಂಸ್ಕೃತಿಕ ಮೌಲ್ಯಗಳು–ಮಹಿಳಾ ಅಭಿವೃದ್ಧಿ ಯೋಜನೆಗಳ ಮೌಲ್ಯಮಾಪನಾ, ವಿಶ್ಲೇಷಣಾ ಅಧ್ಯಯನವನ್ನು ಮಾಡುವ ಸಾಧ್ಯತೆಯಿದೆ.
* ಸರ್ಕಾರವು ನೀಡಿರುವ ಸವಲತ್ತುಗಳನ್ನು ಅಧಿಕಾರದಲ್ಲಿನ ಪುರುಷಶಾಹಿ ಗುಂಪುಗಳು ಯಾವ ನಿಟ್ಟಿನಲ್ಲಿ ದುರುಪಯೋಗ ಪಡೆದುಕೊಳ್ಳುತ್ತಿದ್ದಾವೆ ಎಂಬುದನ್ನು ಅಧ್ಯಯನಿಸ ಬಹುದಾಗಿದೆ.
* ಸರ್ಕಾರೇತರ ಅಭಿವೃದ್ಧಿ ಯೋಜನೆಗಳನ್ನು ಕೂಡ ಕೂಲಂಕುಷವಾಗಿ ವಿಶ್ಲೇಷಿಸಿ ಸರ್ಕಾರಿ ಮಹಿಳಾ ಅಭಿವೃದ್ಧಿ ಯೋಜನೆಗಳನ್ನು ಅಧ್ಯಯನ ಮಾಡಬಹುದಾಗಿದೆ.
* ಸರ್ಕಾರಿ ಅಭಿವೃದ್ಧಿ ಯೋಜನೆಗಳ ಮೂಕ ಮಹಿಳಾ ಸಮುದಾಯದಲ್ಲಿ ಬದಲಾವಣೆಯಾ ದಂತ ಸಂಗತಿಗಳನ್ನು ವಿಶ್ಲೇಷಿಸಿ, ಚಿಂತಿಸಬಹುದು. ಉದಾ: ಉದ್ಯೋಗ– ೨೦೦೧– ೨೦೧೧ವರೆಗಿನ ಉದ್ಯೋಗದ ಯೋಜನೆಗಳು, ಮಹಿಳಾ ಭಾಗವಹಿಸುವಿಕೆ, ಫಲಿತ, ಪರಿಣಾಮ, ಆಗಬೇಕಾದ ಬದಲಾವಣೆ, ಈ ರೀತಿಯಾಗಿ ಶಿಕ್ಷಣಗಳ, ಆರೋಗ್ಯ ಅವುಗಳನ್ನು ಅಧ್ಯಯನ ಮಾಡಬಹುದಾಗಿದೆ.

* ಸರ್ಕಾರಿ ಯೋಜನೆಗಳಿಂದ ಲಿಂಗ ಅಸಮಾನತೆಯ ಅಂಶಗಳಿಂದ ಮಹಿಳಾ ಸಮುದಾಯಕ್ಕೆ ಉಂಟಾದ ಸಂಗತಿಗಳನ್ನು ಪ್ರಖರಣ ಅಧ್ಯಯನಗಳ ಮೂಲಕ ವಿಶ್ಲೇಷಿಸಿ ಅಧ್ಯಯನ ಮಾಡಬಹುದಾಗಿದೆ.

* ಇತ್ತೀಚಿನ ದಿನಗಳಲ್ಲಿ ಮಹಿಳಾ ಅಭಿವೃದ್ಧಿಗೆ ಸಂಬಂಧಿಸಿದಂತೆ ಹತ್ತು ಹಲವು ಬದಲಾವಣೆಗಳು ಜಾಗತಿಕ ನೆಲೆಯಿಂದಲೇ ಕಾಣಲಾಗುತ್ತಿದೆ. ಇವುಗಳ ಬಗೆಗಿನ ಮೌಲ್ಯಮಾಪನ ವಿಶ್ಲೇಷಣಾ ಅಧ್ಯಯನ ಮಾಡಬಹುದಾಗಿದೆ.

